ಕನ್ನಡ ವಾರ್ಷಿಕ
೧೯೯೨



ಸಂ. : ಮಲ್ಲೇಪುರಂ ಜಿ. ವೆಂಕಟೇಶ

ಕನ್ನಡ ವಾರ್ಷಿಕ
೧೯೯೨

ಸಂಪಾದಕ

ಮಲ್ಲೇಪುರಂ ಜಿ. ವೆಂಕಟೇಶ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

Kannada Varshika : 1992 (Kannada Year Book : 1992) Edited by: **Mallepuram G. Venkatesha,** Reader, Kannada University, Published by : **The Director of Prasaranga,** kannada University, Hampi - 583 211, Karnataka. Pages: xii + 326 First impression : 1993

ಮುಖಚಿತ್ರ: ಜಿ. ಜಯಕುಮಾರ್

ಪುಸ್ತಕಗಳು ದೊರೆಯುವ ಸ್ಥಳ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಕನ್ನಡ ವಿಶ್ವವಿದ್ಯಾಲಯ ಕಛೇರಿ
ತಾಂತ್ರಿಕ ಶಿಕ್ಷಣ ಕಟ್ಟಡ
ಅರಮನೆ ರಸ್ತೆ
ಬೆಂಗಳೂರು - ೫೬೦ ೦೦೨

ಬೆಲೆ : ೭೫.೦೦

ಮುದ್ರಕರು
ದಿ ಮಯೂರ್ ಪ್ರಿಂಟ್ ಆ್ಯಡ್ಸ್
ಕಾಟನ್‌ಪೇಟೆ
ಬೆಂಗಳೂರು – ೫೬೦ ೦೫೩
ಫೋನ್ ೬೨೦೨೦೩, ೬೨೦೩೦

ನಿಮ್ಮೊಡನೆ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೇ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ, ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ.ಇಂಥ ವಿನಿಯೋಗಕ್ಕಾಗಿ ಹೊಸಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರವಿಧಾನಗಳ ನಿರ್ಮಾಣ. ಈ ಬಗೆಯ ಶಾಸ್ತ್ರ-ಕಲೆ, ಅಭಿಜಾತ-ಜಾನಪದ, ಮಾರ್ಗ-ದೇಸಿ, ಸ್ವಕೀಯ -ಪರಕೀಯ, ಪೌರ್ವಾತ್ಯ - ಪಾಶ್ಚಾತ್ಯ ಈ ಬಗೆ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿ ಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲದು. ಅನುವಾದ, ಭಾಷಾಂತರ, ವಿವರಣೆ, ಟೀಕೆ, ವಿಮರ್ಶೆ ಇಂಥ ವಿಧಾನಗಳನ್ನು ಅನುಸರಿಸುತ್ತ ತಿಳುವಳಿಕೆಯ ಹೊಸ ಸಾಹಿತ್ಯ ನಿರ್ಮಾಣವಾಗಬೇಕು. ಅಂಥ ಎಲ್ಲ ಬಗೆಯ ಸಂಶೋಧನಕ್ಕೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದೆ, ಅವಕಾಶವೂ ಇದೆ.

ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ವಿದ್ಯೆಯ ಸೃಷ್ಟಿಯಾಗುವುದು ಈ ಪ್ರಸಾರಾಂಗದಲ್ಲಿ.ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನೂ ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಾಡಿನ ಪ್ರಕೃತಿಯಂತೆ ನಾಡಿನ ಸಂಸ್ಕೃತಿ ಕೂಡ ಈ ಪರಿಪ್ರೇಕ್ಷ್ಯವಿಲ್ಲದೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಕಲ್ಲಿನಲ್ಲಿರುವ ಶಾಸನಗಳನ್ನು ಕಣ್ಣೆತ್ತಿ ನೋಡದ ಜನ ಅದೇ ಪುಸ್ತಕದಲ್ಲಿ ಪ್ರಕಟಗೊಂಡರೆ ಓದುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ. ಜನರಾಡುವ ಶಬ್ದಗಳನ್ನೇ ಕೋಶದಲ್ಲಿ ಸಂಗ್ರಹಿಸಿದರೆ ಆ ಶಬ್ದಗಳಿಗೆ ತಿಳುವಳಿಕೆಯ ಬೆಲೆ ಬರುತ್ತದೆ.

ನಮ್ಮ ಪ್ರಸಾರಾಂಗ, ಈಗಾಗಲೇ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಇನ್ನೂ ಮಹತ್ವದ ಪುಸ್ತಕಗಳು ಹೊರಬರಲಿವೆ. ಪ್ರಸಾರಾಂಗ, ತನ್ನ ಪ್ರಕಟಣೆಗಳ ಮೂಲಕ

ಸಾರ್ಥಕವಾಗಬೇಕಾದ ದಾರಿಯನ್ನು ಹುಡುಕಿಕೊಳ್ಳುತ್ತಿದೆ. ಲೋಕದಲ್ಲಿಯ ತಿಳುವಳಿಕೆಯನ್ನು ಸಂಗ್ರಹಿಸಿ, ತಿರುಗಿ ಲೋಕಕ್ಕೆ ದಾನಮಾಡುವ ಪ್ರಕ್ರಿಯೆ ಪ್ರಸಾರಾಂಗದಲ್ಲಿ ನಡೆಯುತ್ತಿದೆ. ಸಂಗ್ರಹವಾದ ತಿಳಿವಳಿಕೆಗೆ ಗ್ರಂಥಗಳ ರೂಪವನ್ನು ಕೊಡುವ ಹೊಣೆಗಾರಿಕೆ ಪ್ರಸಾರಾಂಗದ್ದಾಗಿದೆ. ಈ ರೂಪಾಂತರದ ಪ್ರಕ್ರಿಯೆ ನಮ್ಮ ವಿಶ್ವವಿದ್ಯಾಲಯದ ವೈಶಿಷ್ಟ್ಯವಾಗಿದೆ ಎಂದರೂ ತಪ್ಪಲ್ಲ. ಈ ದೃಷ್ಟಿಯಿಂದ ಕೆಲವು ಮಹತ್ವದ ಪ್ರಕಟಣೆಗಳು ಹೊರಬರಲಿವೆ.

'ಕನ್ನಡ ವಾರ್ಷಿಕ' ಆಯಾ ವರ್ಷದ ಕರ್ನಾಟಕದ ಸಂಸ್ಕೃತಿ-ಸಾಧನೆಗಳನ್ನು ಸೂಕ್ಷ್ಮವಾಗಿ ಗುರುತಿಸುವ ಉದ್ದೇಶ ಹೊಂದಿದೆ. ಈಗಾಗಲೇ ಕನ್ನಡ ವಾರ್ಷಿಕ-91 ವಿದ್ವಾಂಸರ, ಆಸಕ್ತರ ಗಮನವನ್ನು ಸೆಳೆದಿದೆ. ಇದು ಒಂದು ಕಡೆ ಸಂಸ್ಕೃತಿಯ ನೆಲೆಯನ್ನು ಮತ್ತೊಂದು ಕಡೆ ಸಾಹಿತ್ಯಕ ಬೆಳವಣಿಗೆಯನ್ನು ಅಚ್ಚುಕಟ್ಟಾಗಿ ಹಿಡಿದಿಟ್ಟಿದೆ.

ಪ್ರತಿವರ್ಷ ಪ್ರಕಟವಾಗುವ 'ಕನ್ನಡ ವಾರ್ಷಿಕ' ಕೇವಲ ಸಾಧನೆಗಳ ಅಭಿವ್ಯಕ್ತಿಗಳ ಪಟ್ಟಿ ಮಾತ್ರವಾಗದೆ ; ಆಯಾ ಸಾಧನೆಗಳ ಹಿಂದಿರುವ ಸಾಂಸ್ಕೃತಿಕ ಸತ್ವವನ್ನೂ ಅನನ್ಯತೆಯನ್ನೂ ಅರಿಯುವ ಕಾರ್ಯ ಮಾಡುತ್ತಿದೆ. ಈ ದೃಷ್ಟಿಯಿಂದ, 'ಕನ್ನಡ ವಾರ್ಷಿಕ' ಮಹತ್ವದ ಪ್ರಕಟಣೆಯಾಗಿದೆ.

ಪ್ರಸ್ತುತ 'ಕನ್ನಡ ವಾರ್ಷಿಕ: ೯೨' ಇದನ್ನು ನಮ್ಮ ವಿಶ್ವವಿದ್ಯಾಲಯದ ಭಾಷಾನಿಕಾಯದ ಮಲ್ಲೇಪುರಂ ಜಿ. ವೆಂಕಟೇಶ ಅವರು ಸಂಪಾದಿಸಿದ್ದಾರೆ. ಕನ್ನಡ ವಾರ್ಷಿಕದ ಹಿಂದಿರುವ ಉದ್ದೇಶವನ್ನು ಅವರು ಸಮರ್ಥವಾಗಿ ತಿಳಿದು ನಿರ್ವಹಿಸಿದ್ದಾರೆ. ಕರ್ನಾಟಕದ ಒಂದು ವರ್ಷದ ಸಾಧನೆ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಗುರುತಿಸಿ ಅವುಗಳನ್ನು ಬರೆಯಿಸಿ ಸಂಯೋಜಿಸುವ ಕೆಲಸ ಕಡಿಮೆಯದ್ದಲ್ಲ. ಈ ಕಷ್ಟಗಳನ್ನು ನಿಭಾಯಿಸಿ, ಪರಿಶ್ರಮದಿಂದ ಕನ್ನಡ ವಾರ್ಷಿಕ:೯೨ ಕೃತಿಯನ್ನು ಸಂಯೋಜಿಸಿದ್ದಾರೆ. ಲೇಖಕ ವಿದ್ವಾಂಸರೆಲ್ಲರು 'ಕನ್ನಡ ವಾರ್ಷಿಕ -೯೨' ಯಶಸ್ವಿಯಾಗಿ ಹೊರಬರಲು ಕಾರಣರಾಗಿದ್ದಾರೆ. ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಸಂಪಾದಕನ ಮಾತು

ಕನ್ನಡ ವಾರ್ಷಿಕ ೯೧, ಈಗಾಗಲೇ ಪ್ರಕಟವಾಗಿದೆ. ಕನ್ನಡ ವಾರ್ಷಿಕವು ಕಾಲಕಾಲಕ್ಕಾದ ಸಂಸ್ಕೃತಿಯ ಮಾರ್ಗ ಪರಿವರ್ತನೆ ಮತ್ತು ಆಶಯಗಳನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದೆ. ಇಲ್ಲಿ ಅಭಿವ್ಯಕ್ತಗೊಂಡಿರುವ ಸಂಸ್ಕೃತಿ ಮತ್ತು ಸಾಹಿತ್ಯ ಸಮೀಕ್ಷೆಗಳು - ಕನ್ನಡ ಬದುಕು ಇಡುತ್ತಿರುವ ಹೆಜ್ಜೆಯ ಗುರುತನ್ನು ಕಿಂಚಿತ್ತಾದರೂ ಹಿಡಿಯಬಲ್ಲುದೆಂಬ ಆಶಯವಿದೆ. ಒಂದು ವರ್ಷದ ಚೌಕಟ್ಟು ಇಲ್ಲಿ ತಾಂತ್ರಿಕವೆಂಬುದು ನಮಗೆ ಗೊತ್ತು. ಇದು ಕೇವಲ ಒಂದು ಚೌಕಟ್ಟನ್ನು ಹಾಕಿಕೊಳ್ಳುವ ಉದ್ದೇಶವಿರುವಂಥದ್ದು ಮಾತ್ರ. ಹಿಂದಿನಿಂದ ಲಭ್ಯವಾದ ಬಳುವಳಿ, ವರ್ತಮಾನದ ನೆಲೆಯಲ್ಲಿ ಅರ್ಥೈಸಿಕೊಂಡು; ನಾಳೆಗೆ ಸಾಗಬೇಕಾದ 'ಹಾದಿ'ಯನ್ನು ಇದು ಹೊಂದಿದೆ. ಹೀಗಾಗಿ, ಮೂರು ಭಾಗಗಳಲ್ಲಿ ಹಂಚಿಕೊಂಡಿರುವ ಕನ್ನಡವಾರ್ಷಿಕ :೯೨ ಬೇರೆ ಬೇರೆ ಅಭಿವ್ಯಕ್ತಿ, ವಿನ್ಯಾಸಗಳಲ್ಲಿ ತನ್ನ ದೃಷ್ಟಿಗಳನ್ನು ಮೈಚಾಚಲು ಹವಣಿಸಿದೆ. ಇದು ಪರಿಚಯ, ವಿವರಣೆ ಮತ್ತು ವಿಶ್ಲೇಷಣೆಯ ನೆಲೆಗಳಲ್ಲಿ ಸಾಗಿದೆ.

ಕನ್ನಡ ವಾರ್ಷಿಕ:೯೨ರಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ. ಮೊದಲನೆಯ ಭಾಗವು: ಕರ್ನಾಟಕದ ಈಚಿನ ವಿದ್ಯಮಾನಗಳು, ಪ್ರಮುಖ ಘಟನೆಗಳು, ಹಾಗೂ ಸಾಂಸ್ಕೃತಿಕ ಅನುಭವದ ಆಗುಹೋಗುಗಳನ್ನು ಒಳಗೊಂಡಿದೆ. ಎರಡನೆಯ ಭಾಗವು: ಚಿತ್ರಕಲೆ, ಸಂಗೀತ, ರಂಗಭೂಮಿ, ಚಿತ್ರರಂಗ, ಕ್ರೀಡಾಚಟುವಟಿಕೆ ಮತ್ತು ಸಾಹಿತ್ಯ ಪ್ರಕಾರಗಳ ಸಮೀಕ್ಷೆಯನ್ನು ಒಳಗೊಂಡಿದೆ. ಮೂರನೆಯ ಭಾಗವು ಹೊರನಾಡ ಕನ್ನಡ ಚಟುವಟಿಕೆಗಳನ್ನೂ ಅಗಲಿದ ಮಹನೀಯರ ಕಿರುಪರಿಚಯವನ್ನೂ ಹೊಂದಿದೆ.

ನನ್ನನ್ನು ಈ ಕೆಲಸಕ್ಕೆ ತೊಡಗಿಸಿ, ಮಾರ್ಗದರ್ಶನ ಮಾಡಿದ ಮಾನ್ಯ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರಿಗೆ,

ಈ ಕೃತಿಯ ಸಂಯೋಜನೆಗೆ ಹಾಗೂ ಅಂತಿಮವಾಗಿ ಈ ರೂಪು ತಳೆಯುವುದಕ್ಕೆ ಮುಖ್ಯವಾಗಿ ಈ ಗ್ರಂಥದ ಲೇಖಕರೂ ಮತ್ತು ನನ್ನ ಸಹೋದ್ಯೋಗಿಗಳೂ ಕಾರಣರಾಗಿದ್ದಾರೆ. ಅವರಿಗೆ,

ಕನ್ನಡ ವಾರ್ಷಿಕಕ್ಕೆ ಅನೇಕಮೂಲಗಳಿಂದ ಛಾಯಾಚಿತ್ರಗಳನ್ನು ಪಡೆಯಲಾಗಿದೆ. ಪ್ರಮುಖವಾಗಿ ಹೆಚ್ಚಿನ ಸಹಾಯ ಒದಗಿಸಿದ 'ಕನ್ನಡ ಪ್ರಭ'ದ ಸಂಪಾದಕರಿಗೆ,

ಕೆಲವು 'ಛಾಯಾಚಿತ್ರ'ಗಳನ್ನು ಒದಗಿಸಿದ ಧಾರವಾಡದ ಶ್ರೀ ಸದಾನಂದ ಕನವಳ್ಳಿ, ಮೈಸೂರಿನ ಶ್ರೀ ಜಿ.ಪಿ. ಬಸವರಾಜು ಮತ್ತು ಶ್ರೀ ಅರ್ಕೇಶ್ ಅವರಿಗೆ,

ಈ ಕೃತಿಯು ಅಂದವಾಗಿ ಬರಲು ಕಾರಣರಾದ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಿಗೆ,

ಪುಸ್ತಕ ಸಿದ್ಧಗೊಳಿಸುವುದಕ್ಕೆ ನನ್ನೊಡನೆ ಸಹಕರಿಸಿದ ಶ್ರೀ ಗಣೇಶ ಅಮೀನಗಡ, ಶ್ರೀ ಅಮರೇಶ ನುಗಡೋಣಿ ಅವರಿಗೆ,

ವಾರ್ಷಿಕದ ಮುಖಪುಟಕ್ಕೆ ತಮ್ಮದೊಂದು ಕಲಾಕೃತಿಯನ್ನು ಬಳಸಿಕೊಳ್ಳಲು ಅವಕಾಶ ಕೊಟ್ಟ, ನಮ್ಮ ಕಲಾವಿಭಾಗದ ಅಧ್ಯಾಪಕರಾದ ಶ್ರೀ ಜಿ.ಜಯಕುಮಾರ್ ಅವರಿಗೆ,

ಕೃತಿಯನ್ನು ಅಂದವಾಗಿ ಮುದ್ರಿಸಿದ ಮಯೂರ್ ಪ್ರಿಂಟ್ ಆ್ಯಡ್ಸ್‌ನವರಿಗೆ, ನಮಸ್ಕಾರಗಳು.

ಮಲ್ಲೇಪುರಂ ಜಿ. ವೆಂಕಟೇಶ್

ಪರಿವಿಡಿ

ಭಾಗ - ೧ ಅನುಭವದ ಆಗು-ಹೋಗು

ಭಾಗ - ೨ ಅಭಿವ್ಯಕ್ತಿಯ ಹುಡುಕಾಟ

ಭಾಗ -೩ ಸಂಕೀರ್ಣ

ಭಾಗ - ೧

ಅನುಭವದ ಆಗು - ಹೋಗು

* ಕನ್ನಡ ವಿಶ್ವವಿದ್ಯಾಲಯ : ೯೨
* ಪರಿಸರ
* ವಿಜ್ಞಾನ ತಂತ್ರಜ್ಞಾನ
* ರಾಜಕಾರಣ
* ಪ್ರಶಸ್ತಿ ವಿಜೇತರು

ಕನ್ನಡ ವಿಶ್ವವಿದ್ಯಾಲಯ - ೯೨

— *ಎಂ.ಎಂ.ಶಿವಪ್ರಕಾಶ*

ಕನ್ನಡ ವಿಶ್ವವಿದ್ಯಾಲಯದ ಕಲ್ಪನೆ ೧೯೮೫ರ ಮೈಸೂರಿನಲ್ಲಿ ನಡೆದ ಪ್ರಥಮ ವಿಶ್ವಕನ್ನಡ ಸಮ್ಮೇಳನದಲ್ಲಿಅಂಕುರವಾಯಿತು. ಈ ಕನಸು ಕಾರ್ಯಗತವಾಗುವ ನಿಟ್ಟಿನಲ್ಲಿಸರ್ಕಾರವು ೨೩.೧೦.೯೧ ರಂದು ಡಾ. ಚಂದ್ರಶೇಖರ ಕಂಬಾರ ಅವರನ್ನು ವಿಶ್ವವಿದ್ಯಾಲಯದ ವಿಶೇಷ ಅಧಿಕಾರಿಗಳಾಗಿ ನೇಮಿಸಿತು. ಆ ಮೂಲಕ ಕನ್ನಡಿಗರ ಕನಸು ಗರಿಗೆದರುವಂತೆ ಮಾಡಿತು.

ಡಾ. ಚಂದ್ರಶೇಖರ ಕಂಬಾರರು ವಿಶೇಷಾಧಿಕಾರಿಯಾಗಿ ನೇಮಕಗೊಂಡರು. ಅವರು ವಿಶ್ವವಿದ್ಯಾಲಯದ ಸ್ಥಾಪನೆಗೆ ಅಗತ್ಯವಾದ ಭೂಮಿಯನ್ನು ಪಡೆಯಲು ಕಾರ್ಯಪ್ರವೃತ್ತರಾಗಿ ಹೊಸಪೇಟೆ ತಾಲೂಕಿನ ಕಮಲಾಪುರ ಮತ್ತು ಪಾಪಿನಾಯಕನ ಹಳ್ಳಿಯ ಮಧ್ಯದಲ್ಲಿರುವ ೫೬೦.೩೭ ಎಕರೆ ಭೂಮಿಯನ್ನು ಸರ್ಕಾರದ ಸಹಾಯದಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಕಾಯ್ದಿರಿಸಿದರು.

ಕುಲಪತಿಗಳ ನೇಮಕ

೮.೧.೯೨ರಂದು ನಾಲ್ಕೂವರೆ ಕೋಟಿ ಕನ್ನಡಿಗರ ಕನ್ನಡ ವಿಶ್ವವಿದ್ಯಾಲಯದ ಪ್ರಪ್ರಥಮ ಕುಲಪತಿಗಳಾಗಿ ಡಾ. ಚಂದ್ರಶೇಖರ ಕಂಬಾರರನ್ನು ಸರ್ಕಾರವು ನೇಮಿಸಿತು. ಕವಿ, ನಾಟಕಕಾರ, ಜಾನಪದ ತಜ್ಞರಾದ ಡಾ. ಚಂದ್ರಶೇಖರ ಕಂಬಾರರನ್ನು ಕುಲಪತಿಗಳನ್ನಾಗಿ ನೇಮಿಸಿದಾಗ ಕನ್ನಡಿಗರು ಸಂತೋಷಪಟ್ಟರು. ಅವರು, ಹಲವು ಕನಸುಗಳೊಂದಿಗೆ ವಿಶ್ವವಿದ್ಯಾಲಯವನ್ನು ಬೆಳೆಸುವ ಜವಾಬ್ದಾರಿಯನ್ನು ಹೊತ್ತರು. ಅವರು ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದ ವಿದ್ವಾಂಸರುಗಳ ಸಲಹೆ, ಸೂಚನೆಗಳನ್ನು ಬಳಸಿಕೊಳ್ಳಲಾರಂಭಿಸಿದರು. ಕರ್ನಾಟಕ ಸಂಸ್ಕೃತಿಯ ತಲಸ್ಪರ್ಶಿ ಅಧ್ಯಯನ, ಸಂಶೋಧನೆಗಳ ಕೇಂದ್ರಸ್ಥಾನವಾಗಿ ಕನ್ನಡ ವಿಶ್ವವಿದ್ಯಾಲಯ ರೂಪು ತಳೆಯಲಾರಂಭಿಸಿತು.

ವರ್ಷದ ಹೆಜ್ಜೆ ಗುರುತುಗಳು

೮.೦೧.೯೨	ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿ ಡಾ.ಚಂದ್ರಶೇಖರ ಕಂಬಾರ ಅವರ ನೇಮಕ
೧೧.೦೨.೯೨	ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಕಾಮಲಾಪುರ ಗ್ರಾಮಕ್ಕೆ ಸೇರಿದ ೫೬೦.೩೬ ಎಕರೆ ಜಮೀನು ವಶ.
೨೦.೦೨.೯೨	ಹಂಪಿಯ ಎದುರು ಬಸವನ ಮಂಟಪದಲ್ಲಿ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆ ಆರಂಭ
೨೬.೦೬.೯೨	ಶಿಕ್ಷಣ ಸಚಿವ ಶ್ರೀ ಎಂ.ವೀರಪ್ಪ ಮೊಯಿಲಿ ಅವರಿಂದ ಶೈಕ್ಷಣಿಕ ಕಾರ್ಯಕ್ರಮಗಳ ಉದ್ಘಾಟನೆ
೨೬.೦೬.೯೨	ಅರಣ್ಯ ಸಚಿವ ಶ್ರೀ ಈಟಿ. ಶಂಬುನಾಥ ಅವರಿಂದ ಅರಣ್ಯೀಕರಣ ಕಾರ್ಯಕ್ರಮದ ಉದ್ಘಾಟನೆ
೨೯.೦೯.೯೨	ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರಿಂದ ಕಟ್ಟಡಗಳ ಶಿಲಾನ್ಯಾಸ ಕಾರ್ಯಕ್ರಮ
೦೯.೧೦.೯೨ ರಿಂದ ೧೦.೧೧.೯೨	ನುಡಿಹಬ್ಬ

ಆರಂಭ

ಹಂಪಿಯ ಎದುರು ಬಸವನ ಮಂಟಪದಲ್ಲಿ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳು ಆರಂಭವಾದವು. ೨೭.೬.೯೨ ರಂದು ಆಗ ಶಿಕ್ಷಣ ಸಚಿವರಾಗಿದ್ದ ಶ್ರೀ ಎಂ.ವೀರಪ್ಪಮೊಯಿಲಿಯವರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಅಂದಿನಿಂದ ಹಂಪಿಯ ಕಲ್ಲು ಮಂಟಪಗಳಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು ಆರಂಭಗೊಂಡವು. ಇದೇ ದಿನ ಅರಣ್ಯಸಚಿವರಾಗಿದ್ದ ಶ್ರೀ ಈಟಿ ಶಂಭುನಾಥ ಅವರು, ವಿಶ್ವವಿದ್ಯಾಲಯದ ಹೊಸ ಆವರಣ 'ವಿದ್ಯಾರಣ್ಯ'ದಲ್ಲಿ ಅರಣ್ಯೀಕರಣದ ಉದ್ಘಾಟನೆಯನ್ನು ನೆರವೇರಿಸಿದರು. ಇಂದು ವಿದ್ಯಾರಣ್ಯದಲ್ಲಿ ಗಿಡಗಳು ಮರಗಳಾಗಿ ಬೆಳೆಯುತ್ತಿವೆ.

ಕಮ್ಮಟ ಹಾಗೂ ಶಿಬಿರಗಳು

೧೬.೮.೯೨ ರಿಂದ ೨೩.೮.೯೨ ರ ವರೆಗೆ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಕಮ್ಮಟವನ್ನು ಮೊದಲಿಗೆ ಹಮ್ಮಿಕೊಳ್ಳಲಾಯಿತು. ಕಮ್ಮಟವನ್ನು ಷಿಕಾಗೋ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ದಿ. ಡಾ. ಎ.ಕೆ. ರಾಮಾನುಜನ್ ಉದ್ಘಾಟಿಸಿದರು. ಕಮ್ಮಟದಲ್ಲಿ ಡಾ.ಎಂ.ಚಿದಾನಂದಮೂರ್ತಿ, ಡಾ.ಕೃಷ್ಣ ಪರಮೇಶ್ವರ ಭಟ್ಟ, ಡಾ. ಎಚ್.ಎಂ. ಮರುಳಸಿದ್ದಯ್ಯ, ಡಾ. ಕೆ.ವಿ. ನಾರಾಯಣ ಇವರುಗಳು ಬೇರೆ ಬೇರೆ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ಮಾಹಿತಿಗಳನ್ನು ನೀಡಿದರು. ವಿಶೇಷೋಪನ್ಯಾಸಕರಾಗಿ ಡಾ.ಎಸ್.ಎನ್.ಶ್ರೀಧರ, ಡಾ.ಬಿ.ಎ.ವಿವೇಕರೈ, ಡಾ.ಆ.ಸುಂದರ, ಡಾ.ಎನ್.ಎಸ್.ತಾರಾನಾಥ್, ಡಾ.ಸೂರ್ಯನಾಥ್ ಕಾಮತ್, ಡಾ.ಬಿ.ಷೇಕ್ ಅಲಿ ಅವರು ಭಾಗವಹಿಸಿ ಉಪಯುಕ್ತ ಉಪನ್ಯಾಸಗಳನ್ನು ನೀಡಿದರು. ಕಮ್ಮಟವು ಎಂಟು ದಿನಗಳ ಕಾಲ ನಡೆಯಿತು. ಇದು ಸಂಶೋಧನಾತ್ಮಕ ಕೆಲಸಗಳಿಗೆ ಒಂದು ತಳಹದಿಯನ್ನು ನಿರ್ಮಿಸಿಕೊಟ್ಟಿತು.

ಪ್ರೌಢಶಾಲೆಗಳಲ್ಲಿ 'ಕನ್ನಡ ಕಾವ್ಯ ಬೋಧನೆ'ಯು ಹಲವಾರು ಸಮಸ್ಯೆಗಳನ್ನು ಒಡ್ಡುತ್ತಿದೆ. ವಿದ್ಯಾರ್ಥಿಗಳ ಬುದ್ಧಿಮತ್ತೆ ಮತ್ತು ಪ್ರಕ್ರಿಯೆಗಳ ಸಮಸ್ಯೆಯಿಂದ ಹಿಡಿದು ಅಧ್ಯಾಪಕರಿಗೆ ಮಾಹಿತಿಗಳು ಅಲಭ್ಯವಾಗಿರುವ ವರೆಗೆ ಹಲವಾರು ಬಗೆಯ ತೊಡಕುಗಳನ್ನು 'ನಾವು ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಕಾವ್ಯಾಭಿರುಚಿ ಹುಟ್ಟುವಂತೆ ಮಾಡುವುದು ಇಂದಿನ ಶಿಕ್ಷಣ ಎದುರಿಸುತ್ತಿರುವ ಮುಖ್ಯ ಸವಾಲುಗಳಲ್ಲಿ ಒಂದು. ಈ ವಿಷಯವನ್ನು ಕುರಿತು ಪ್ರಾಯೋಗಿಕವಾಗಿ ಕನ್ನಡ ವಿಶ್ವವಿದ್ಯಾಲಯವು ದಿನಾಂಕ ೨೩.೯.೯೨ ರಿಂದ ೨೯.೯.೯೨ರ ವರೆಗೆ ಕನ್ನಡ ಕಾವ್ಯಬೋಧನ ಕಮ್ಮಟವನ್ನು ಹಮ್ಮಿಕೊಂಡಿತು. ಈ ಕಮ್ಮಟವನ್ನು ಕವಿ ಚೆನ್ನವೀರ ಕಣವಿಯವರು ಉದ್ಘಾಟಿಸಿದರು. ಅವರು "ಶಿಕ್ಷಕರಿಗೆ ಕಾವ್ಯ ಬೋಧನೆಯ ಬಗ್ಗೆ ನಡೆಸುತ್ತಿರುವ ಪ್ರಸ್ತುತ ಕಮ್ಮಟವು ಬಹಳ ಅವಶ್ಯವಾದುದು. ಏಕೆಂದರೆ ಇದನ್ನು ನಡೆಸುತ್ತಿರುವುದರಿಂದ ಎರಡು ರೀತಿಯ ಪ್ರಯೋಜನಗಳಿವೆ:

ವಿದ್ಯಾರ್ಥಿಗಳಲ್ಲಿ ಕಾವ್ಯದ ಬಗ್ಗೆ ಆಸಕ್ತಿ, ಕುತೂಹಲ, ಶ್ರದ್ಧೆ ಮೂಡಿಸುವುದು ಒಂದು ಬಗೆಯಾದರೆ; ಶಿಕ್ಷಕರು ತಮ್ಮ ಬೋಧನೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು, ಹೊಸ ಅರಿವಿನಿಂದ ಬೋಧಿಸುವುದು ಮತ್ತೊಂದು. ಆದ್ದರಿಂದ ಕನ್ನಡ ವಿಶ್ವವಿದ್ಯಾಲಯ ಶಿಕ್ಷಕರಿಗಾಗಿ ನಡೆಸತಕ್ಕ ಪ್ರಸ್ತುತ ಕಮ್ಮಟವು ತುಂಬಾ ಉಪಯುಕ್ತವಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗಿಂತ ಕಾವ್ಯ ಬಹಳ ಆಕರ್ಷಕವಾದುದು ಮತ್ತು ಪ್ರಿಯವಾದುದು. ಅದನ್ನು ಅಷ್ಟೇ ಆಕರ್ಷಕವಾಗಿ ಮತ್ತು ಪ್ರಿಯವಾಗಿ ಹೇಳಿಕೊಡಬೇಕು. ಈ ಕಮ್ಮಟ ಅಂಥ ಪ್ರಯತ್ನಗಳಿಗೆ ಶುಭಾರಂಭ ಮಾಡಲಿ" ಎಂದು ಹಾರೈಸಿದರು.

ನಾಡಿನ ಖ್ಯಾತ ಕವಿ ಪ್ರೊ.ಜಿ.ಎಸ್. ಶಿವರುದ್ರಪ್ಪನವರ ನಿರ್ದೇಶನದಲ್ಲಿ ನಡೆದ ಈ ಕಮ್ಮಟದಲ್ಲಿ ಡಾ. ಎಚ್.ಎಸ್. ವೆಂಕಟೇಶಮೂರ್ತಿ ಮತ್ತು ಡಾ. ಕಾಳೇಗೌಡ ನಾಗವಾರ ಇವರು ಸಹನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು. ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ಸಮಾರೋಪ ಭಾಷಣ ಮಾಡಿದರು. ವಿಶೇಷ ಉಪನ್ಯಾಸಕರಾಗಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಎಚ್.ಎಸ್. ರಾಘವೇಂದ್ರರಾವ್, ಪ್ರೊ. ಚಂದ್ರಶೇಖರ ಪಾಟೀಲ, ಡಾ.ರಾಮಚಂದ್ರ ಶರ್ಮ ಶ್ರೀ ಓ.ಎಲ್. ನಾಗಭೂಷಣ ಸ್ವಾಮಿ ಭಾಗವಹಿಸಿದ್ದರು.

ಶಿಲಾನ್ಯಾಸ

೨೯.೯.೯೨ ರಂದು ಕನ್ನಡ ವಿಶ್ವವಿದ್ಯಾಲಯಕ್ಕೆ ಮಹತ್ವದ ದಿನ. ಅಂದು ವಿಶ್ವವಿದ್ಯಾಲಯದ ನೂತನ ಆವರಣ ವಿದ್ಯಾರಣ್ಯದಲ್ಲಿ ಕುಲಾಧಿಪತಿಗಳೂ, ಮುಖ್ಯಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಎಸ್. ಬಂಗಾರಪ್ಪನವರು, ವಿಶ್ವವಿದ್ಯಾಲಯದ ಕಟ್ಟಡಕ್ಕೆ ಶಿಲಾನ್ಯಾಸ ಕಾರ್ಯವನ್ನು ನೆರವೇರಿಸಿದರು. "ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬೆಳವಣಿಗೆಯ ಜವಾಬ್ದಾರಿಯನ್ನು ಕನ್ನಡ ವಿಶ್ವವಿದ್ಯಾಲಯ ಹೊತ್ತಿದೆ. ವಿಶ್ವವಿದ್ಯಾಲಯಕ್ಕೆ ಜನರೇ ಕಾವಲುಗಾರರು" ಎಂದು ಕುಲಾಧಿಪತಿಗಳು ತಮ್ಮ ಆಶಯ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಾ.ಚಂದ್ರಶೇಖರ ಕಂಬಾರರು "ನಮ್ಮ ವಿಶ್ವವಿದ್ಯಾಲಯ ನೇತ್ರವಾಗಲು ಬಯಸುತ್ತದೆಯೇ ಹೊರತು ನೇತಾರನಾಗಲು ಬಯಸುವುದಿಲ್ಲ" ಎಂದು ಹೇಳಿದರು. ರಾಜ್ಯದ ಮಂತ್ರಿಗಳು, ಬಳ್ಳಾರಿ ಜಿಲ್ಲೆಯ ಶಾಸಕರು ಹಾಗೂ ಅನೇಕ ಗಣ್ಯರು ಶಿಲಾನ್ಯಾಸ ಸಮಾರಂಭದಲ್ಲಿ ಭಾಗವಹಿಸಿದ್ದರು.

'ನುಡಿಹಬ್ಬ - ೯೨'

ಕನ್ನಡ ವಿಶ್ವವಿದ್ಯಾಲಯದ ವಾರ್ಷಿಕೋತ್ಸವವನ್ನು 'ನುಡಿಹಬ್ಬ'ವೆಂದು ಆಚರಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಮೊದಲ ನುಡಿಹಬ್ಬ, ನವೆಂಬರ್ ೯ ಮತ್ತು ೧೦. ರಂದು ಆಚರಿಸಲಾಯಿತು. ನಾಡಿನ ಹಿರಿಯ ಸಾಹಿತಿ ಡಾ ಸಿದ್ಧಯ್ಯ ಪುರಾಣಿಕರು 'ನುಡಿಹಬ್ಬ -೯೨'ನ್ನು ಉದ್ಘಾಟಿಸಿ, "ವಿಶ್ವವಿದ್ಯಾಲಯ ಕನ್ನಡ ಕುಲದ ಚಿನ್ನದ ಕನ್ನಡಿ

ಯಂತೆ ಬೆಳೆದು ಕನ್ನಡಿಗರ ಆಶೋತ್ತರಗಳನ್ನು ಈಡೇರಿಸಲಿ" ಎಂದು ಹಾರೈಸಿದರು. ಈ ಸಂದರ್ಭದಲ್ಲಿ ವಿಚಾರಸಂಕಿರಣವು ನಡೆಯಿತು.

'ಸಮಕಾಲೀನ ಕಲೆಯ ಮೇಲಿನ ಒತ್ತಡಗಳು' ಎಂಬ ಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಲೇಖಕರಾದ ಶ್ರೀ ಕೆ.ವಿ.ಸುಬ್ಬಣ್ಣನವರು ವಹಿಸಿದ್ದರು. ಪ್ರೊ.ಕೀರ್ತಿನಾಥ ಕುರ್ತಕೋಟಿ, ಡಾ.ಬಸವರಾಜ ಕಲ್ಗುಡಿ, ಪ್ರೊ. ಎಂ.ಎಚ್.ಕೃಷ್ಣಯ್ಯ ಹಾಗೂ ಪ್ರೊ. ಕಿ.ರಂ.ನಾಗರಾಜ ಇವರು ತಮ್ಮ ವಿಚಾರಗಳನ್ನು ಮಂಡಿಸಿದರು.

ಸಂಜೆ ತಂಕುತಿಟ್ಟಿನ ಸುಪ್ರಸಿದ್ಧ ಮೇಳವಾದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯಕ್ಷಗಾನ ಕಲಾ ಮಂಡಳಿಯ ಕಲಾವಿದರಿಂದ 'ಗದಾಯುದ್ಧ' ಯಕ್ಷಗಾನ ಬಯಲಾಟ ಪ್ರದರ್ಶನವು ನಡೆಯಿತು.

೧೦.೧೧.೯೨ ರಂದು 'ನನ್ನ ಕಲ್ಪನೆಯ ಕರ್ನಾಟಕ' ಎಂಬ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಎಲ್.ಎಸ್.ಶೇಷಗಿರಿರಾವ್ ವಹಿಸಿದ್ದರು. ಶ್ರೀಎಂ.ಪಿ.ಪ್ರಕಾಶ್, ಶ್ರೀ ಕೆ.ವಿ.ಸುಬ್ಬಣ್ಣ, ಡಾ.ಬೆಸಗರಹಳ್ಳಿ ರಾಮಣ್ಣ ಇವರು 'ನನ್ನ ಕಲ್ಪನೆಯ ಕರ್ನಾಟಕ' ಕುರಿತಂತೆ ತಂತಮ್ಮ ವಿಚಾರಗಳನ್ನು ಮಂಡಿಸಿದರು.

ಅಂದು ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ವೈ.ಎನ್.ಕೆ. ಅವರು ವಹಿಸಿದ್ದರು. ಡಾ.ಸಿದ್ಧಲಿಂಗಯ್ಯ, ಶ್ರೀ ಕೆ.ಎಚ್.ಶ್ರೀನಿವಾಸ, ಶ್ರೀ ಅಮೃತ ಸೋಮೇಶ್ವರ, ಶ್ರೀ ಎಚ್.ಎಸ್.ಶಿವಪ್ರಕಾಶ, ಶ್ರೀ ಪುರುಷೋತ್ತಮ ಬಿಳಿಮಲೆ, ಡಾ.ಚಂದ್ರಶೇಖರ ಕಂಬಾರ ಇವರು ತಮ್ಮ ಕವನಗಳನ್ನು ವಾಚಿಸಿದರು.

ಸನ್ಮಾನ

ಕನ್ನಡ ವಿಶ್ವವಿದ್ಯಾಲಯದ ಸ್ವರೂಪ ಮತ್ತು ಕಾರ್ಯವಿಧಾನಗಳ ಬಗೆಗೆ ಕೂಲಂಕಷವಾಗಿ ಅಧ್ಯಯನ ನಡೆಸಿ, ವಿಶ್ವವಿದ್ಯಾಲಯದ ಸ್ವರೂಪ ಮತ್ತು ಕಾರ್ಯವಿಧಾನಗಳನ್ನು ಕುರಿತಂತೆ ವರದಿ ತಯಾರಿಸಿ; ಸರಕಾರಕ್ಕೆ ಒಪ್ಪಿಸಿದ ಏಕ ಸದಸ್ಯ ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಎಸ್.ಎಸ್.ಒಡೆಯರ್ ದಂಪತಿಗಳನ್ನು ನುಡಿಹಬ್ಬ ೯೨ರಲ್ಲಿ ವಿಶ್ವವಿದ್ಯಾಲಯವು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಸುಂದರ ಸಮಾರಂಭವು ೧೦ ನವೆಂಬರ್ ೯೨ ರಂದು ಸಂಜೆ, ಹಂಪಿಯ ಗಜಶಾಲೆಯ ಬಳಿ ನಡೆಯಿತು. ಶ್ರೀ ಎಸ್.ಎಸ್.ಒಡೆಯರ ದಂಪತಿಗಳನ್ನು ಕಂಬಾರ ದಂಪತಿಗಳು ಆತ್ಮೀಯವಾಗಿ ಸನ್ಮಾನಿಸಿದರು. ಸನ್ಮಾನಕ್ಕೆ ಉತ್ತರವಾಗಿ ಶ್ರೀ ಒಡೆಯರ್ ಅವರು, ತಾವು ವರದಿಯಲ್ಲಿ ಸೂಚಿಸಿದ ವಿಷಯಗಳು ಕಾರ್ಯಗತ ಗೊಳ್ಳುತ್ತಿರುವುದರ ಬಗೆಗೆ ಸಂತೋಷ ವ್ಯಕ್ತಪಡಿಸಿದರು. ಮಾಜಿ ಮಂತ್ರಿ ಶ್ರೀ ಎಂ.ಪಿ.ಪ್ರಕಾಶ್ ಅವರು ಅಭಿನಂದನ ಭಾಷಣ ಮಾಡಿದರು.

ಕನ್ನಡದ ಹಿರಿಯ ಸಾಹಿತಿ, ಅಪೂರ್ವ ಜಾನಪದ ತಜ್ಞ, ನಿಯೋಜಿತ ೬೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ದಿ.ಸಿಂಪಿ ಲಿಂಗಣ್ಣನವರನ್ನು

೩೧.೧೨.೯೨ರಂದು ವಿಶ್ವವಿದ್ಯಾಲಯ ಬರಮಾಡಿಕೊಂಡಿತು. ಮಾನ್ಯ ಕುಲಪತಿಗಳಾದ ಡಾ.ಚಂದ್ರಶೇಖರ ಕಂಬಾರರು ಶಾಲು ಹೊದಿಸಿ, ಪ್ರತಿಮೆ ಅರ್ಪಿಸಿ ಆತ್ಮೀಯವಾಗಿ ಸನ್ಮಾನಿಸಿದರು.

ಸನ್ಮಾನಕ್ಕೆ ಉತ್ತರವಾಗಿ ಮಾತನಾಡಿದ ದಿ. ಡಾ. ಸಿಂಪಿ ಲಿಂಗಣ್ಣನವರು "ಹಂಪಿಯ ಕನ್ನಡ ಕುಲಗುರು ವಿದ್ಯಾರಣ್ಯರು ಜೀವಿಸಿದ್ದ ಪವಿತ್ರ ಸ್ಥಳ. ಹಲವಾರು ಕಾರಣಗಳಿಂದ ಈ ಸ್ಥಳ ನನಗೆ ಹತ್ತಿರವಾದದ್ದು. ಇಂತಹ ಸ್ಥಳದಲ್ಲಿ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ಸನ್ಮಾನ ಮಾಡುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ ಬಲಿಷ್ಠ ಕರ್ನಾಟಕವನ್ನು ಕಟ್ಟುವುದಕ್ಕೆ ಕನ್ನಡ ವಿಶ್ವವಿದ್ಯಾಲಯ ಕಂಕಣಬದ್ಧವಾಗಲಿ. ಈ ನಿರೀಕ್ಷೆ ಕೈಗೂಡಲಿ ಎಂದು ನನ್ನ ಅಲನೇ ಇಳಿ ವಯಸ್ಸಿನಲ್ಲಿ ಆಶಿಸುತ್ತೇನೆ " ಎಂದರು.

ಅದೇ ಸಂದರ್ಭದಲ್ಲಿ ಜಾನಪದ ವಿಭಾಗದ ಧ್ವನಿಮುದ್ರಣ ಕಾರ್ಯದ ಉದ್ಘಾಟನೆಯನ್ನು ಡಾ.ಸಿಂಪಿ.ಲಿಂಗಣ್ಣನವರೇ ನೆರವೇರಿಕೊಟ್ಟರು. ಡಾ..ಸಿಂಪಿ.ಲಿಂಗಣ್ಣನವರು ಹೃದಯ ತುಂಬಿ ಹಾರೈಸಿದರು.

ಪ್ರಕಟಣೆಗಳು

ಮಾನ್ಯ ಕುಲಪತಿ ಡಾ.ಚಂದ್ರಶೇಖರ ಕಂಬಾರರು ಹೇಳುವಂತೆ: "ಕನ್ನಡ ವಿಶ್ವವಿದ್ಯಾಲಯದ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೆ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ಹೊಸ ಬಗೆಯ ಶಾಸ್ತ್ರವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಸುತ್ತಿರುವ ಸಂಶೋಧನೆಯ ಗುರಿಯೆಂದರೆ ಶಾಸ್ತ್ರ ವಿಧಾನಗಳ ನಿರ್ಮಾಣ ಈ ಬಗೆಯ ಶಾಸ್ತ್ರ ಸಾಹಿತ್ಯವನ್ನು ಹುಟ್ಟಿಸುವುದು ನಮ್ಮ ವಿಶ್ವವಿದ್ಯಾಲಯದ ಕರ್ತವ್ಯವಾಗಿದೆ. ಶಾಸ್ತ್ರ ಕಲೆ, ಅಭಿಜಾತ - ಜಾನಪದ, ಮಾರ್ಗ-ದೇಸಿ, ಸ್ವಕೀಯ-ಪರಕೀಯ, ಪೌರ್ವಾತ್ಯ-ಪಾಶ್ಚಾತ್ಯ ಈ ಬಗೆಯ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿ ಬರುವ ತಿಳಿವಳಿಕೆಯನ್ನು ಹಿಡಿದುಕೊಂಡು ಕನ್ನಡಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲುದು. ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನು ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಮ್ಮ ಪ್ರಸಾರಾಂಗ ಇದಕ್ಕಿಂತ ವಿಶಾಲವಾದ, ಹೆಚ್ಚು ಪರಿಣಾಮಕಾರಿಯಾದ ಪರಿಪ್ರೇಕ್ಷ್ಯವನ್ನು ಕಟ್ಟುವುದರಲ್ಲಿ ತೊಡಗಿದೆ".

ಈ ಬಗೆಯ ಗುರುತರ ಜವಾಬ್ದಾರಿಯನ್ನು ಹೊತ್ತಿರುವ ಪ್ರಸಾರಾಂಗವು ತನ್ನ ಮೊದಲ ಪ್ರಕಟಣೆಗಳಾಗಿ – 'ಶ್ರೀತತ್ತ್ವನಿಧಿ,' 'ಕನ್ನಡವಾರ್ಷಿಕ-೯೧,' 'ಬಯಲು-ಆಲಯ' 'ಮರೆತು ಹೋಗಿರುವ ಸಾಮ್ರಾಜ್ಯ' ಮತ್ತು 'ಸಂಶೋಧನ ಕರ್ನಾಟಕ' ಗ್ರಂಥಗಳನ್ನು ಹೊರತಂದಿತು. ಇವುಗಳನ್ನು 'ನುಡಿಹಬ್ಬ ೯೨' ರಲ್ಲಿ ಶ್ರೀ ಮುದೇನೂರು ಸಂಗಣ್ಣನವರು ಬಿಡುಗಡೆ ಮಾಡಿದರು.

ಪ್ರಾರಂಭವಾದ ಮುಖ್ಯ ಯೋಜನೆಗಳು

ಕನ್ನಡ ವಿಶ್ವವಿದ್ಯಾಲಯವು ಸಂಶೋಧನೆಯನ್ನೇ ಗುರಿಯನ್ನಾಗಿಸಿಕೊಂಡು ೯೨ರಲ್ಲಿ ಕೆಲವು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಭಾಷಾನಿಕಾಯ ಕೈಗೆತ್ತಿಕೊಂಡಿರುವ 'ಕೃಷಿಪದಕೋಶ' ಯೋಜನೆ ಇವುಗಳಲ್ಲಿ ಮಹತ್ವದ್ದು. ಡಾ.ಕೆ.ವಿ.ನಾರಾಯಣ ಅವರು ಈ ಕೃಷಿ ಯೋಜನೆಯ ನಿರ್ದೇಶಕರು. ಈ ಪದಕೋಶದಲ್ಲಿ ಶಾಸನಗಳು, ಸಾಹಿತ್ಯ ಕೃತಿಗಳು, ನಿಘಂಟುಗಳು, ವ್ಯವಸಾಯ ಕೈಪಿಡಿಗಳು ಮೊದಲಾದ ಲಿಖಿತ ಆಕರಗಳ ಜೊತೆಗೆ ಕ್ಷೇತ್ರ ಕಾರ್ಯದ ಮೂಲಕ ನಾಡಿನಾದ್ಯಂತ ಕೃಷಿಗೆ ಸಂಬಂಧಪಟ್ಟ ಪದಗಳನ್ನು ವಿವರವಾಗಿ ಸಂಗ್ರಹಿಸಿ, ಸಂಕಲಿಸಿ ರಚಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಕರ್ನಾಟಕ ಗ್ರಾಮದೇವತೆಗಳು ಮತ್ತು ಜನಪದ ಕಲೆಗಳ ವಿಶ್ವಕೋಶವನ್ನು ವಿಶ್ವವಿದ್ಯಾಲಯದ ಜಾನಪದ ವಿಭಾಗವು ರೂಪಿಸುತ್ತಿದೆ. ಜಾನಪದ ವಿಭಾಗದ ಮುಖ್ಯಸ್ಥರಾದ ಡಾ.ಪುರುಷೋತ್ತಮ ಬಿಳಿಮಲೆಯವರು ಯೋಜನೆಯ ನಿರ್ದೇಶಕರು. ಇದರ ಜೊತೆಗೆ ಹಂಪಿಯ ಬಗೆಗೆ ಇರುವ ಲಿಖಿತ ದಾಖಲೆಗಳಲ್ಲದೆ, ಜನರ ನೆನಪಿನಲ್ಲಿ, ಮಾತಿನಲ್ಲಿ ಉಳಿದಿರುವ ಮಾಹಿತಿಗಳನ್ನು ಸಂಗ್ರಹಿಸಿ, ಹಂಪಿಯ ಇತಿಹಾಸ ಮತ್ತು ಜಾನಪದದ ಬಗೆಗೆ ಅರಿವನ್ನು ವಿಸ್ತಾರಗೊಳಿಸುವ 'ಹಂಪಿ ಜಾನಪದ' ಯೋಜನೆಯನ್ನೂ ಹಮ್ಮಿಕೊಳ್ಳಲಾಗಿದೆ.

ಹೊಸಪೇಟೆ ತಾಲೂಕಿನ ಸಮಗ್ರಚಿತ್ರ ಲಭಿಸುವಂತೆ 'ಹೊಸಪೇಟೆ ತಾಲೂಕು ದರ್ಶನ' ಯೋಜನೆ ಆರಂಭಗೊಂಡಿತು. ಇದರ ನಿರ್ದೇಶಕರು ಡಾ.ಪುರುಷೋತ್ತಮ ಬಿಳಿಮಲೆ, ಜೆ.ಆರ್. ರಾಮಮೂರ್ತಿ, ಲಕ್ಷ್ಮಣ ತೆಲಗಾವಿ.

ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಹೊರರಾಜ್ಯದ, ಹೊರದೇಶದವರೆಗೆ ಪರಿಚಯಿಸುವ ದೃಷ್ಟಿಯಿಂದ 'ಕರ್ನಾಟಕ ಕೋಶ'ವು ಕರ್ನಾಟಕದ ಬಗೆಗಿನ ವಿಶಿಷ್ಟ ಆಕಾರ ಗ್ರಂಥವಾಗಲಿದೆ. ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಪ್ರಕಟವಾಗುವ ಈ ಕೋಶಕ್ಕೆ ನಾಡಿನ ವಿದ್ವಾಂಸರು ಲೇಖನಗಳನ್ನು ಬರೆಯುತ್ತಿದ್ದಾರೆ. ಇಂಥ ಮಹತ್ವದ ಯೋಜನೆಯ ನಿರ್ದೇಶಕರು ಡಾ. ಎಚ್.ಎಸ್.ರಾಘವೇಂದ್ರ ರಾವ್ ಅವರು.

ಕನ್ನಡದ 'ಓದುಗರಿಗೆ, ಜಗತ್ತಿನ ಪುರಾಣಗಳ ಮಾಹಿತಿ ಒಂದೆಡೆಯಲ್ಲಿ ಲಭ್ಯವಾಗುವಂತೆ ರೂಪಿತವಾಗಿರುವ ಯೋಜನೆ' ಪುರಾಣಕೋಶ. ಇದರಲ್ಲಿ ಮೊದಲಬಾರಿಗೆ ಜೈನ, ಬೌದ್ಧ, ವೀರಶೈವ ಮತ್ತು ವೈದಿಕ ಪುರಾಣಗಳಿಂದ ಆಕರಗಳನ್ನು

ಪಡೆದು ಸಿದ್ಧವಾಗುತ್ತಿದೆ. ಈ ಯೋಜನೆಯ ನಿರ್ದೇಶಕರು ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅವರು.

೧೨ ರಿಂದ ೧೫ ವರ್ಷದ ವಯಸ್ಸಿನ ಮಕ್ಕಳಿಗೆ ಕರ್ನಾಟಕದ ಬಗ್ಗೆ ಖಚಿತವಾದ ತಿಳುವಳಿಕೆ ನೀಡಲು 'ಕಿರಿಯರ ಕರ್ನಾಟಕ' ವಿಶ್ವಕೋಶವನ್ನು ಆರಂಭಿಸಲಾಯಿತು. ಇದರ ಪ್ರಧಾನ ಸಂಪಾದಕರು ಪ್ರೊ:ಎಲ್.ಎಸ್.ಶೇಷಗಿರಿರಾವ್.

ಕರ್ನಾಟಕ ಮತ್ತು ಕನ್ನಡದ ಬಗೆಗೆ ನಾಡಿನ ಮತ್ತು ದೇಶದ ವಿವಿಧ ವಿಶ್ವವಿದ್ಯಾಲಯ ಇದು ವರೆಗೂ ನಡೆದಿರುವ ಸಂಶೋಧನೆಗಳನ್ನು ಕುರಿತು ಸಮಗ್ರ ಮಾಹಿತಿಯನ್ನು 'ಸಂಶೋಧನ ಕರ್ನಾಟಕ' ಯೋಜನೆಯಲ್ಲಿ ದಾಖಲಿಸಲಾಗುತ್ತಿದೆ. ಈ ಯೋಜನೆಯ ನಿರ್ದೇಶಕರು ಡಾ.ಪುರುಷೋತ್ತಮ ಬಿಳಿಮಲೆ, ಡಾ.ಕೆ.ವಿ.ನಾರಾಯಣ, ಜೆ.ಆರ್. ರಾಮಮೂರ್ತಿ.

೧೯೯೨ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಮುಖವಾದ ಕೆಲವು ಯೋಜನೆಗಳನ್ನು ಕೈಗೆತ್ತಿಕೊಂಡು ಹಲವು ಕನಸುಗಳೊಂದಿಗೆ ೧೯೯೩ಕ್ಕೆ ಕಾಲಿರಿಸಿತು.

●

ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ

ಡಾ. ಚಂದ್ರಶೇಖರ ಕಂಬಾರ *ಕುಲಪತಿಗಳು*	ಅಧ್ಯಕ್ಷರು
ಡಾ. ಸಿದ್ಧಲಿಂಗಯ್ಯ, *ಬೆಂಗಳೂರು*	ಸದಸ್ಯರು
ಶ್ರೀ ಬರಗೂರು ರಾಮಚಂದ್ರಪ್ಪ, *ಬೆಂಗಳೂರು*	ಸದಸ್ಯರು
ಶ್ರೀಮತಿ ಸಾರಾ ಅಬೂಬಕ್ಕರ್, *ಮಂಗಳೂರು*	ಸದಸ್ಯರು
ಶ್ರೀ ನಾ.ಡಿ'ಸೋಜ, *ಸಾಗರ*	ಸದಸ್ಯರು
ಶ್ರೀ ಅಮೃತ ಸೋಮೇಶ್ವರ, *ಕೋಟೆಕಾರು*	ಸದಸ್ಯರು
ಶ್ರೀ ಚೆನ್ನವೀರ ಕಣವಿ, *ಧಾರವಾಡ*	*ಸದಸ್ಯರು*
ಪ್ರೊ.ಎಂ.ಎಚ್.ಕೃಷ್ಣಯ್ಯ, *ಬೆಂಗಳೂರು*	ಸದಸ್ಯರು
ಶ್ರೀ ಕಾಗೋಡು ಅಣ್ಣಪ್ಪ, *ಸಾಗರ*	ಸದಸ್ಯರು
ಕಾರ್ಯದರ್ಶಿಗಳು, ಶಿ.ಇ. *ಬೆಂಗಳೂರು*	ಸದಸ್ಯರು
ಕಾರ್ಯದರ್ಶಿಗಳು, ಹ.ಇ. *ಬೆಂಗಳೂರು*	ಸದಸ್ಯರು
ಕಾರ್ಯದರ್ಶಿಗಳು, ಕ.ಸಂ.ಇ *ಬೆಂಗಳೂರು*	ಸದಸ್ಯರು
ಮಹಾನಿರ್ದೇಶಕರು, *ಪುರಾತತ್ವ ಇಲಾಖೆ, ಮೈಸೂರು*	ಸದಸ್ಯರು
ಡಾ. ಪುರುಷೋತ್ತಮ ಬಿಳಿಮಲೆ *ಡೀನ್, ಲಲಿತಕಲೆಗಳು ನಿಕಾಯ*	ಸದಸ್ಯರು
ಪ್ರೊ. ಓ.ಎಲ್.ನಾಗಭೂಷಣ ಸ್ವಾಮಿ *ಡೀನ್, ಭಾಷಾ ನಿಕಾಯ*	ಸದಸ್ಯರು
ಶ್ರೀ ಆರ್.ಕೆ.ಪ್ರಸಾದ್, *ಹಣಕಾಸು ಅಧಿಕಾರಿಗಳು*	ಸದಸ್ಯರು
ಡಾ.ಕೆ.ವಿ. ನಾರಾಯಣ *ಕುಲಸಚಿವರು*	ಪದನಿಮಿತ್ತ ಕಾರ್ಯದರ್ಶಿ

ಆಡಳಿತ ಮಂಡಳಿ

ಡಾ. ಚಂದ್ರಶೇಖರ ಕಂಬಾರ *ಕುಲಪತಿಗಳು*	ಅಧ್ಯಕ್ಷರು
ಡಾ. ಎಚ್. ಗಿರಿಜಮ್ಮ, *ಬೆಂಗಳೂರು*	ಸದಸ್ಯರು
ಶ್ರೀ ಟಿ.ಡಿ.ಕಟ್ಟಿಮನಿ, *ಧಾರವಾಡ*	ಸದಸ್ಯರು
ಶ್ರೀಮತಿ ಗಂಗೂಬಾಯಿ ಹಾನಗಲ್, *ಹುಬ್ಬಳ್ಳಿ*	ಸದಸ್ಯರು
ಶ್ರೀ ಆರ್.ಎಂ. ಹಡಪದ್, *ಬೆಂಗಳೂರು*	ಸದಸ್ಯರು
ಶ್ರೀ ಮುದೇನೂರು ಸಂಗಣ್ಣ, *ಚಿಗಟೇರಿ*	ಸದಸ್ಯರು
ಡಾ. ಬೆಸಗರಹಳ್ಳಿ ರಾಮಣ್ಣ, ಮಂಡ್ಯ	ಸದಸ್ಯರು
ಪ್ರೊ. ಎಲ್.ಎಸ್.ಶೇಷಗಿರಿ ರಾವ್, *ಬೆಂಗಳೂರು*	ಸದಸ್ಯರು
ಶ್ರೀ ಎನ್.ತಿಪ್ಪಣ್ಣ, *ವಿ.ಪ.ಸ ಬಳ್ಳಾರಿ*	ಸದಸ್ಯರು
ಶ್ರೀ ಇದಿನಬ್ಬ. *ಬಿ.ಎಂ. ವಿ.ಸ.ಸ ಉಳ್ಳಾಲ*	ಸದಸ್ಯರು
ಶ್ರೀ ಗೊ.ರು. ಚೆನ್ನಬಸಪ್ಪ, *ಅಧ್ಯಕ್ಷರು* *ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು*	ಸದಸ್ಯರು
ಶ್ರೀ ಬರಗೂರು ರಾಮಚಂದ್ರಪ್ಪ, *ಅಧ್ಯಕ್ಷರು* *ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು*	ಸದಸ್ಯರು
ಶ್ರೀ ಪಿ.ಆರ್. ತಿಪ್ಪೇಸ್ವಾಮಿ, *ಅಧ್ಯಕ್ಷರು* *ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು*	ಸದಸ್ಯರು
ಕಾರ್ಯದರ್ಶಿಗಳು, *ಶಿ.ಇ. ಬೆಂಗಳೂರು*	ಸದಸ್ಯರು
ಕಾರ್ಯದರ್ಶಿಗಳು, *ಹ.ಇ. ಬೆಂಗಳೂರು*	ಸದಸ್ಯರು
ಕಾರ್ಯದರ್ಶಿಗಳು, *ಕ.ಸಂ.ಇ. ಬೆಂಗಳೂರು*	ಸದಸ್ಯರು
ಅಧ್ಯಕ್ಷರು, *ವಿ.ಅ.ಆಯೋಗ ಹೊಸದೆಹಲಿ*	ಸದಸ್ಯರು
ಶ್ರೀ ಗಿರೀಶ್ ಕಾರ್ನಾಡ್, *ಅಧ್ಯಕ್ಷರು* *ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಹೊಸದೆಹಲಿ*	ಸದಸ್ಯರು
ಮಹಾ ನಿರ್ದೇಶಕರು, *ಪುರಾತತ್ತ್ವ ಇಲಾಖೆ, ಹೊಸದೆಹಲಿ*	ಸದಸ್ಯರು
ಶ್ರೀ ಬೊಳುವಾರು ಮಹಮ್ಮದ್ ಕುಂಞಿ *ಹೊಸದೆಹಲಿ*	ಸದಸ್ಯರು

ಕರ್ನಾಟಕ ಪರಿಸರ : ಒಂದು ಚಿತ್ರ

— ಕೆ. ಪುಟ್ಟಸ್ವಾಮಿ

ಪರಿಸರ, ಸಂರಕ್ಷಣೆ, ಬದಲೀ ಇಂಧನ ಮೂಲ, ವಂಶನಾಶ, ಮಾಲಿನ್ಯ, ಇತ್ಯಾದಿ ಪದಪುಂಜಗಳು ಇಂದು ದಿನನಿತ್ಯದ ಸುದ್ದಿಗಳಲ್ಲಿ ಸಾಮಾನ್ಯ ವಿಷಯವಾಗಿವೆ. ಪರಿಸರದ ಪರಿಭಾಷೆ ಶ್ರೀಸಾಮಾನ್ಯನ ಪದಕೋಶದಲ್ಲಿ ಸೇರಿಹೋಗಿವೆ. ಅಷ್ಟೇ ಏಕೆ, ಇಂದಿನ ಜಗತ್ತಿನ ಪ್ರತಿಯೊಂದು ಚಿಂತನೆ, ಹೊಸ ಸಿದ್ಧಾಂತ, ಕೈಗಾರಿಕೆ, ಆರ್ಥಿಕ ನೀತಿ, ಸಾಹಿತ್ಯ, ರಾಜಕೀಯ, ಜೀವನ ವಿಧಾನ, ಶಿಕ್ಷಣ, ಆರೋಗ್ಯ ಇತ್ಯಾದಿ ಮೂಲಭೂತ ಮತ್ತು ಅನ್ವಯಿಕ ಕ್ಷೇತ್ರಗಳ ಹಿನ್ನೆಲೆಯಲ್ಲಿ ಪರಿಸರವಾದ ಪ್ರೇರಕಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಪರಿಸರದ ಹಿನ್ನೆಲೆ

ಈ ಪರಿಸರ ವಿಜ್ಞಾನ ಎಂದರೇನು? ಹಲವಾರು ಬಾರಿ ಪರಿಸರ ಎಂಬುದು ಅರಣ್ಯ ಮತ್ತು ಪರಿಸರ ಸಂರಕ್ಷಣೆ ಎಂದರೆ ಮರಗಿಡಗಳನ್ನು ನೆಟ್ಟು ಅರಣ್ಯ ಬೆಳೆಸುವುದು; ಜಲಾಶಯ ನಿರ್ಮಾಣ ಮತ್ತು ಅಣುಸ್ಥಾವರ ಸ್ಥಾಪನೆ ವಿರೋಧಿಸಿ ಕಾಡನ್ನು ಉಳಿಸಿಕೊಳ್ಳುವುದು ಎಂಬ ಸಂಕುಚಿತಾರ್ಥದಲ್ಲಿ ಬಳಕೆಯಾಗುತ್ತಿದೆ. ಪರಿಸರ ಎಂದರೆ ಇಂಗ್ಲಿಷ್‌ನ 'ಇಕಾಲಜಿ' ಮತ್ತು 'ಎನ್‌ವಿರಾನ್‌ಮೆಂಟ್' ಪಾರಿಭಾಷಿಕ ಶಬ್ದಗಳಿಗೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ಹಲವು ಪಟ್ಟಣದ ಪರಿಸರವಾದಿಗಳು, ಹಳ್ಳಿಗರು ಕಾಡನ್ನು ಕಡಿದು ಪರಿಸರ ಅಸಮತೋಲನಕ್ಕೆ ನಾಂದಿ ಹಾಡಿದ್ದಾರೆಂದು ವಾದಿಸುತ್ತಾರೆ. ಆದುದರಿಂದ ಪರಿಸರ ವಿಜ್ಞಾನ ಮತ್ತು ಪರಿಸರದ ಬಗೆಗೆ ಸ್ವಲ್ಪ ವಿವರವಾಗಿ ತಿಳಿದುಕೊಳ್ಳುವುದು ಅಗತ್ಯವಿದೆ. ಇತರೆ ಶಾಸ್ತ್ರೀಯ ವಿಜ್ಞಾನಗಳಿಗಿಂತ ಎಖ್ರ್ಯಾಝಾಹಿಮಾಶಿಪಿ ಖಿಪಿಶಿಹಿಪಿಹ್ಜುಏ ಆಥವಾ ಶುದ್ಧ ವಿಜ್ಞಾನ ಶಾಖೆಗಳಿಗಿಂತ (Pure Sciences) ಪರಿಸರ ವಿಜ್ಞಾನವು ಹೆಚ್ಚು ಅನ್ವಯಿಕವಾಗಿರುವುದರಿಂದ ಅದನ್ನು ಅರ್ಥಮಾಡಿಕೊಳ್ಳಲು ಕಷ್ಟಸಾಧ್ಯ. ಏಕೆಂದರೆ, ಪರಿಸರ ವಿಜ್ಞಾನ ಪ್ರಾಕೃತಿಕ ವಿಜ್ಞಾನ. ಇದು ಭೌತಿಕವಿಜ್ಞಾನ ಹಾಗೂ ಸಾಮಾಜಿಕವಿಜ್ಞಾನಗಳೆಲ್ಲವನ್ನೂ ಒಳಗೊಂಡಿರು-

ಪುದರಿಂದ ಅದೊಂದು ಸಂಕೀರ್ಣ ಅಧ್ಯಯನವಾಗಿದೆ. ಆದುದರಿಂದ ಮೂಲಭೂತ ಪರಿಕಲ್ಪನೆಗಳನ್ನು ಮನನ ಮಾಡಿಕೊಂಡಾಗ ಮಾತ್ರ ಆ ಶಾಖೆ ಸುಲಭವಾಗಿ ಅರ್ಥವಾಗುತ್ತದೆ.

ಜೀವ ಸರಪಳಿ

ಭೂಮಿಯ ಎಲ್ಲಾ ಪ್ರದೇಶದಲ್ಲಿ ಹರಡಿಕೊಂಡಿರುವ ಜೀವಿಗಳು ಪರಸ್ಪರ ಅವಲಂಬನೆಯಿಂದ ಬಂಧಿತವಾಗಿರುತ್ತವೆ. ಉದಾ: ಸೂರ್ಯನ ಬೆಳಕನ್ನು ಸಂಸ್ಕರಿಸಿ ಇಂಗಾಲದ ಡೈ ಆಕ್ಸೈಡ್ ಮತ್ತು ಭೂ ಖನಿಜಗಳನ್ನು ಬಳಸಿ ಸಸ್ಯಗಳು ಆಹಾರ ತಯಾರಿಸುತ್ತವೆ. ಈ ಸಸ್ಯಗಳನ್ನು ತಿಂದು ಕೆಲವು ಪ್ರಾಣಿಗಳು ಬದುಕುತ್ತವೆ. ಆ ಪ್ರಾಣಿಗಳನ್ನು ತಿಂದು ಇನ್ನು ಹಲವು ಪ್ರಾಣಿಗಳು ಉಳಿಯುತ್ತವೆ. ಮರದ ಕಾಂಡ, ಇಲ್ಲವೇ ಎಲೆ, ಇಲ್ಲವೇ ಹಣ್ಣು - ಹೀಗೆ ವಿವಿಧ ಭಾಗಗಳನ್ನು ಅವಲಂಬಿಸಿರುವ ಪ್ರಾಣಿಗಳು, ಮರದ ಆಶ್ರಯ ಬೇಡುವ ಫರ್ನ್, ಆರ್ಕಿಡ್ ಮುಂತಾದ ಸಸ್ಯಗಳು ಇವೆ. ಹಾಗೆಯೇ ತನ್ನ ಬೀಜಪ್ರಸಾರಕ್ಕೆ ಮರ ಹಲವು ಹಕ್ಕಿಗಳನ್ನು ಆಶ್ರಯಿಸುತ್ತದೆ. ಇವುಗಳನ್ನು ಆಶ್ರಯಿಸಿರುವ ಕ್ರಿಮಿಕೀಟಗಳು, ಸಸ್ಯ, ಪ್ರಾಣಿ ಸತ್ತಾಗ ಅವನ್ನು ತಿಂದು ಜೀರ್ಣಿಸಿ ಗೊಬ್ಬರ ಮಾಡುವ ಜಂತುಗಳು, ಕ್ರಿಮಿ ಕೀಟಗಳು, ಈ ಗೊಬ್ಬರವನ್ನು ಬಳಸಿ ಮತ್ತೆ ಆಹಾರ ಮಾಡುವ ಸಸ್ಯಗಳು; ಹೀಗೆ ಪ್ರಪಂಚದ ಎಲ್ಲಾ ಪ್ರದೇಶಗಳಲ್ಲೂ ಒಂದು ನಿರಂತರವಾದ ಜೈವಿಕ ಕ್ರಿಯೆ ಮತ್ತು ಪುನಃ ಸೃಷ್ಟಿ ನಡೆಯುತ್ತಿರುತ್ತದೆ. ಇದನ್ನು ಜೈವಿಕ ವರ್ತುಲ ಎನ್ನುತ್ತಾರೆ. ಈ ಸಂಬಂಧಗಳು ಆಯಾ ಪ್ರದೇಶದ ವೈವಿಧ್ಯಕ್ಕೆ ತಕ್ಕಂತೆ ಜಟಿಲವಾಗಿರಬಹುದು ಇಲ್ಲವೇ ತೀರಾ ಸರಳವಾಗಿ ರೂಪುಗೊಂಡಿರಬಹುದು.

ಅಲ್ಲಿಗೆ ಈ ಭೂಮಿಯಲ್ಲಿ ಜೀವಿಗಳಿಗೆ ಹೆಚ್ಚು ಪ್ರಾಶಸ್ತ್ಯವಿದೆ ಎಂದಂತಾಯಿತು. ಈ ಜೀವಿಗಳು ಒಂದು ಪ್ರದೇಶಕ್ಕೆ ಸಂಬಂಧಿಸಿದಂತೆ ಮೂರು ಬಗೆಯ ಸಂಬಂಧಗಳನ್ನು ಹೊಂದಿವೆ. ಒಂದು ಪ್ರಭೇದ ತನ್ನದೇ ಬಗೆಯ ಇನ್ನೊಂದು ಜೀವಿಯ ಜೊತೆಗಿನ ಪರಸ್ಪರಿಕ ಸಂಬಂಧ. ಒಂದು ಪ್ರಭೇದ ಒಂದು ಪ್ರದೇಶದಲ್ಲಿ ಬದುಕಿರುವ ಇತರ ಬಗೆಯ ಜೀವಿಗಳ ಜೊತೆಗಿನ ಸಹ ಸಂಬಂಧ. ಒಂದು ಪ್ರದೇಶದ ಎಲ್ಲಾ ಜೀವಿಗಳೂ ಆ ಒಟ್ಟು ಪ್ರದೇಶದ ಜೊತೆಗಿನ ಸಂಬಂಧ. ಈ ಮೂರು ಸಂಬಂಧಗಳು ಕೋಟ್ಯಾನುಕೋಟಿ ವರ್ಷಗಳ ವಿಕಾಸದಲ್ಲಿ ಅನೇಕ ಎಡರುತೊಡರುಗಳನ್ನು ದಾಟಿ, ಜೀವನ್ಮಯ ಕುಣಿಕೆಯಾಗಿ, ಸಹಜವಾದ ಹಾಗೂ ಸಾಮರಸ್ಯವಾದ ಹಂತವನ್ನು ತಲುಪಿರುತ್ತವೆ. ಈ ಬಗೆಯ ಸಂಕೀರ್ಣ ಸಂಬಂಧಜಾಲದ ಅಭ್ಯಾಸವೇ 'ಪರಿಸರ ವಿಜ್ಞಾನ' ಅಂದರೆ 'ಎಕಾಲಜಿ'. ಇಲ್ಲಿ ಪ್ರಾಣಿ ಸಸ್ಯಗಳಂಥ ಜೀವಿಗಳ ಜೊತೆಗೆ ನಿಸರ್ಗದಲ್ಲಿನ ನಿರವಯುವ ವಸ್ತುಗಳು (Inorganic) ಮತ್ತು ಅವು ಜೈವಿಕ ಸ್ವರೂಪದ ಮೇಲೆ ಬೀರುವ ಒಟ್ಟು ಪರಿಣಾಮವೂ ಪರಿಸರ ವಿಜ್ಞಾನದ ತೆಕ್ಕೆಗೆ ಸೇರುತ್ತದೆ. ನಿರ್ದಿಷ್ಟ ಪರಿಸರದಲ್ಲಿ ಈ ವಿವಿಧ ಪರಿಸರಗಳು ಒಂದು ಅಗೋಚರ ಜಾಲದಲ್ಲಿ ಬಂಧಿತವಾಗಿದ್ದು ನಿತ್ಯವ್ಯಾಪಾರವನ್ನು ಅವು ಸಹಜವಾಗಿ ತೋರ್ಪಡಿಸಿಕೊಂಡು

ಹೋಗುತ್ತಿರುತ್ತವೆ. ಆದುದರಿಂದಲೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಯಾವುದೇ ಒಂದು ಜೀವಿಗೆ ಧಕ್ಕೆಯಾದರೆ ಅಥವಾ ಒಂದು ನಿರವಯವ ಮೂಲಕ್ಕೆ ಹಾನಿಯಾದರೆ (ಉದಾ : ಓಜೋನ್ ಪದರ) ಪರಿಸರ ಅಸಮತೋಲನವಾಯಿತು ಎನ್ನುತ್ತೇವೆ.

ಪರಿಸರದ ಕಲ್ಪನೆ

ಪರಿಸರ ಎಂದರೆ, ಒಂದು ನಿರ್ದಿಷ್ಟ ಜೈವಿಕ ಪ್ರದೇಶ (Environment) ಅನುಕೂಲಕ್ಕಾಗಿ ನಾವು ಗಡಿಯನ್ನು ಗುರುತಿಸಿದ ಭೌಗೋಳಿಕ ಪ್ರದೇಶವನ್ನು ಪರಿಸರ ಎನ್ನುತ್ತೇವೆ. ನಿಸರ್ಗದಲ್ಲಿ ಅಂಥ ಸ್ಪಷ್ಟ ಗಡಿಗಳಿಲ್ಲ. ಹಾಗೆ ನೋಡಿದರೆ, ಭೂಮಂಡಲ, ಸೂರ್ಯ ಮತ್ತು ವಾಯುಮಂಡಲಗಳು ಸೇರಿದರೆ ಒಂದು ಪರಿಸರವಾಗುತ್ತದೆ ಎನ್ನಬಹುದು. ಸಮಸ್ಯೆಗಳ ಪ್ರಖರತೆ ಮತ್ತು ನಿರ್ದಿಷ್ಟತೆಯನ್ನು ಅನುಸರಿಸಿ ಒಂದು ಸೀಮಿತ ಪ್ರದೇಶವನ್ನು "ಪರಿಸರ" ಎನ್ನುವುದು ವಾಡಿಕೆಯಾಗಿದೆ. ಯಾವುದೇ ಒಂದು ಸಣ್ಣ ಪ್ರದೇಶದಲ್ಲಿ ಉಂಟಾಗುವ ಒಂದು ಘಟನೆಅಗೋಚರವಾದರೂ ಜಾಗತಿಕವಾಗಿರುತ್ತದೆ. ಅದರ ಪರಿಣಾಮ ಅಲ್ಲಿನ ಪ್ರದೇಶಕ್ಕಷ್ಟೇ ಸೀಮಿತವಾಗಿರದು. ಉದಾ: ನಮ್ಮ ಪಶ್ಚಿಮಘಟ್ಟದ ಶೃಂಗವೊಂದರ ಮೇಲೆ ಅಡ್ಡಾಡುವ ಬೆಳ್ಮುಗಿಲು, ಮಳೆಯ ಮೋಡವಾಗಿ ಮೂರು ಹನಿ ಸುರಿಸಿತೆನ್ನಿ. ಅದರ ಒಂದು ಹನಿ ಶೃಂಗದ ಎಡಕ್ಕೆ ಜಾರಿ ಕಣಿವೆಯಿಂದಿಳಿದು ಅರಬ್ಬೀ ಸಮುದ್ರ ಸೇರಬಹುದು. ಬಲಕ್ಕಿಳಿದು ಜಾರಿ ಹೇಮಾವತಿಯ ಉಪನದಿಗಳನ್ನು ಸೇರಿ ಕಾವೇರಿಯ ಜತೆ ಸಾಗಿ ಚಿದಂಬರಂ ಬಳಿ ಬಂಗ್ಲಾಳಕೊಲ್ಲಿ ಸೇರಬಹುದು. ಇಲ್ಲವೇ ಮತ್ತೊಂದು ಕಡೆಗೆ ವಾಲಿದ ಹನಿ ಭದ್ರಾನದಿಯನ್ನು ಸೇರಿ ಕೃಷ್ಣಾದಲ್ಲಿ ಸಂಗಮಿಸಿ ವಿಜಯವಾಡದ ಬಳಿ ಬಂಗಾಳಕೊಲ್ಲಿಯನ್ನು ಸೇರಬಹುದು. ಈ ರೀತಿ ಸಹ್ಯಾದ್ರಿಯ ತಪ್ಪಲಿನ ಹನಿಯೊಂದು ಸಾಗರಗಳ ಮೇಲೆ ಪರಿಣಾಮ ಬೀರಿ ಅದು ಅಲ್ಲಿಂದ ವಿಶ್ವವ್ಯಾಪಿಯಾಗಬಹುದು. ಸಹ್ಯಾದ್ರಿಯ ಹನಿಯೊಂದು ತಮಿಳುನಾಡಿನ ಚಿದಂಬರಂನಲ್ಲಿ ಅನ್ನದ ಕಾಳಾಗಿ ಕೊಲ್ಲಿ ರಾಷ್ಟ್ರಗಳಿಗೆ ರಫ್ತಾಗಬಹುದು. ಅಲ್ಲಿನ ವಿದೇಶಿವಿನಿಮಯ ನಮ್ಮ ಜನಜೀವನದ ಮೇಲೆ ಪರಿಣಾಮ ಬೀರಬಹುದು. ಆದುದರಿಂದಲೇ ಪರಿಸರದಲ್ಲಿ ನಡೆದ ಘಟನೆ ಸದಾ ಜಾಗತಿಕವಾಗಿರುತ್ತದೆ.

ಕರ್ನಾಟಕ ಪರಿಸರದ ಹಿನ್ನೆಲೆ

ಈ ಹಿನ್ನಲೆಯಲ್ಲಿ ಕರ್ನಾಟಕದ ಪರಿಸರವನ್ನು ಸಮೀಕ್ಷೆ ಮಾಡುವಾಗಲೂ ಅಲ್ಲಿನ ಪರಿವರ್ತನೆಗಳು ವಿಶ್ವವ್ಯಾಪಿಯಾಗಿರುತ್ತವೆಂಬ ಪರಿಕಲ್ಪನೆಯನ್ನು ಮನನ ಮಾಡಿಕೊಂಡಿರಬೇಕು. ಕರ್ನಾಟಕದ ಪರಿಸರ ಕೇವಲ ಭೌತಿಕವಾಗಿ ಕರ್ನಾಟಕಕ್ಕೆ ಸೀಮಿತವಾಗಿದ್ದರೂ ಇಲ್ಲಿನ ಸಾವಯವ - ನಿರವಯವ ಸ್ವರೂಪಗಳ ಮೇಲೆ ಎಲ್ಲಾ ಕಡೆಯಿಂದಲೂ ಪ್ರಭಾವವಿದ್ದೇ ಇರುತ್ತದೆ. ಇಲ್ಲಿ ಜರುಗುವ ಘಟನೆಗಳ ಪರಿಣಾಮ ಪಭಾವವೂ ಎಲ್ಲಾ ಕಡೆಗೂ ವ್ಯಾಪಿಸಿರುತ್ತದೆ. ಆದುದರಿಂದ ಪರಿಸರದ ಸಮೀಕ್ಷೆ ಎಂದರೆ ಅಂಕಿ - ಅಂಶಗಳ ಮಥನದಿಂದ ಆವಿರ್ಭವಿಸುವ ಫಲಿತಾಂಶವಲ್ಲ.

ಅದು ಪ್ರತಿನಿತ್ಯದ ವ್ಯಾಪಾರವೂ ಆಗಿರುವುದರಿಂದ ಒಂದು ನಿರ್ದಿಷ್ಟ ದಿನದ ಮಿತಿಯಲ್ಲಿ ಗುರುತಿಸಿದರೆ, ಅದು ಪ್ರಸ್ತುತವೂ ಆಗುವುದಿಲ್ಲ. ಜೊತೆಗೆ ಪರಿಸರವು ಇಡೀ ರಾಜಕೀಯ, ಸಾಮಾಜಿಕ ಮತ್ತು ನೈಸರ್ಗಿಕ ಹಾಗೂ ಭೌತಿಕ ವಿಜ್ಞಾನಗಳನ್ನು ಒಳಗೊಳ್ಳುವುದರಿಂದ ನಿಖರವಾದ ಮಾಹಿತಿಗಳೂ ದಕ್ಕುವುದಿಲ್ಲ. ಆದುದರಿಂದ ಇಲ್ಲಿ ಕರ್ನಾಟಕದ ಭೌತಿಕ ಪರಿಸರದ ಸ್ಥೂಲನೋಟದ ಜೊತೆಗೆ ಕೆಲವು ಸ್ಪಷ್ಟವಾಗಿ ಗೋಚರಿಸುತ್ತಿರುವ ಪರಿವರ್ತನೆಗಳನ್ನು ದಾಖಲಿಸುವಮಟ್ಟಿಗೆ ಈ ಲೇಖನವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ರಾಜ್ಯದ ಜನಸಂಖ್ಯೆ, ವಿಸ್ತೀರ್ಣ ಮತ್ತು ಇತರ ಭೌಗೋಳಿಕ ವಿವರಗಳ ಹಿನ್ನೆಲೆಯಲ್ಲಿ ಪರಿಸರದ ಒಟ್ಟು ಪರಿಸ್ಥಿತಿಯನ್ನು ವಿವೇಚಿಸುವುದೂ ವಿಶ್ಲೇಷಿಸುವುದೂ ಉತ್ತಮ. ಕರ್ನಾಟಕದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೯೨,೦೦೦ ಚದರ ಕಿಲೋ ಮೀಟರುಗಳು. ಇದು ಒಟ್ಟು ೨೦ ಜಿಲ್ಲೆಗಳಲ್ಲಿ ಹರಡಿಹೋಗಿದೆ. ರಾಜ್ಯದ ೧೭೫ ತಾಲೂಕುಗಳಲ್ಲಿ ಸುಮಾರು ೨೫೦ ನಗರಗಳು, ಪಟ್ಟಣಗಳು ಮತ್ತು ನಗರ ಕೇಂದ್ರಗಳು ಇವೆ. ಜನವಸತಿಯ ೨೭,೦೨೮ ಹಳ್ಳಿಗಳಿವೆ.

ರಾಜ್ಯದ ಜನಸಂಖ್ಯೆ ದಶಕದಿಂದ ದಶಕಕ್ಕೆ ಉರ್ಧ್ವಮುಖವಾಗಿ ಏರುತ್ತಿದೆ. ೧೯೭೧ರ ಜನಗಣತಿಯ ಪ್ರಕಾರ ೨೯೩ ಲಕ್ಷ ಜನರು ರಾಜ್ಯದಲ್ಲಿದ್ದರು. ೧೯೮೧ರ ವೇಳೆಗೆ ಜನಸಂಖ್ಯೆ ೩೭೧ಲಕ್ಷಕ್ಕೇರಿತು. ೧೯೯೧ರ ಜನಗಣತಿಯ ಪ್ರಕಾರ ರಜ್ಯದ ಜನಸಂಖ್ಯೆ ೪೪೮ ಲಕ್ಷ. ಅಂದರೆ ೨೦ ವರ್ಷಗಳ ಅಂತರದಲ್ಲಿ ೧೫೫ ಲಕ್ಷ ಜನಸಂಖ್ಯೆ ಹೆಚ್ಚಿತು. (ಏರಿಕೆ ಶೇ. ೨೧) ಈ ಜನಸಂಖ್ಯೆಯ ಹೆಚ್ಚಳಕ್ಕೆ ಜನನ ಪ್ರಮಾಣದಲ್ಲಿ ಉಂಟಾದ ಏರಿಕೆಗಿಂತ ಮರಣ ಪ್ರಮಾಣದ ಇಳಿಮುಖವೇ ಹೆಚ್ಚು ಕಾರಣ.

ಜನಸಂಖ್ಯಾ ಒತ್ತಡ

ಜನಸಂಖ್ಯೆಯ ಹರಡಿಕೆಯ ವಿನ್ಯಾಸವನ್ನು ಗಮನಿಸಿದರೆ ಗ್ರಾಮೀಣ ಪ್ರದೇಶದಿಂದ ನಗರದೆಡೆಗೆ ಜನರು ಹರಿದುಬರುತ್ತಿರುವ ಪ್ರವೃತ್ತಿ ಕಂಡುಬರುತ್ತದೆ. ೧೯೭೧ ರಲ್ಲಿ ಶೇ. ೭೫ರಷ್ಟು ಜನಸಂಖ್ಯೆ ಹಳ್ಳಿಗಾಡಿನಲ್ಲಿ ಹಂಚಿಹೋಗಿತ್ತು. ೧೯೯೧ರ ವೇಳೆಗೆ ಈ ಪ್ರಮಾಣ ಶೇ. ೬೯ಕ್ಕೆ ಇಳಿದಿದೆ. ಏರುತ್ತಿರುವ ನಿರುದ್ಯೋಗ, ಪಟ್ಟಣಗಳು ಮಾತ್ರವೇ ಉದ್ಯೋಗಕೇಂದ್ರಗಳಾಗಿ, ಆಕರ್ಷಣೆಯ ತಾಣಗಳಾಗಿ ಮಾರ್ಪಾಡಾಗುತ್ತಿರುವುದು ಈ ರೀತಿಯ ಜನಸಂಖ್ಯಾಚಲನೆಗೆ ಕಾರಣ. ಉದ್ಯೋಗಾವಕಾಶಗಳು, ಕೈಗಾರಿಕೆಗಳು ನಗರ ಕೇಂದ್ರೀಕೃತವಾಗುತ್ತಿರುವುದು ಜನರ ವಲಸೆಗೆ ಪ್ರಮುಖ ಕಾರಣಗಳು. ಪರಿಣಾಮವಾಗಿ ನಗರಗಳಲ್ಲಿ ಕೊಳೆಗೇರಿಗಳು, ಹತಾಶೆ ತುಂಬಿದ ಯುವಶಕ್ತಿ, ಸಮಾಜಘಾತುಕ ಚಟುವಟಿಕೆಗಳು, ಸೂಳೆಗಾರಿಕೆ, ಬಾಲಕಾರ್ಮಿಕರ ಸಮಸ್ಯೆ ಹೆಚ್ಚಾಗುತ್ತಿದೆ. ಇದರಿಂದಾಗಿ ಸಾಮಾಜಿಕ ಮಾಲಿನ್ಯ, ಅಸಮಾನತೆ, ಶೋಷಣೆಯ ವಿವಿಧ ರೂಪಗಳು ಸೃಷ್ಟಿಯಾಗುತ್ತಿವೆ.

ಏರುತ್ತಿರುವ ಜನಸಂಖ್ಯೆಯಿಂದ ಭೂಮಿಯ ಮೇಲಿನ ಒತ್ತಡ, ಆಹಾರ ಬೇಡಿಕೆ ಹೆಚ್ಚುತ್ತಿದ್ದು, ಪರಿಸರ ಮಾಲಿನ್ಯಕ್ಕೆ ಇಂಬುಕೊಡುತ್ತಿದೆ. ೧೯೭೧ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಪ್ರತಿ ಚ. ಕಿ. ಮೀ. ಗೆ ಇದ್ದ ಜನಸಾಂದ್ರತೆ ೧೫೩. ಇದು ೧೯೮೧ರಲ್ಲಿ ೧೯೪ಕ್ಕೆ ಏರಿದ್ದು ೧೯೯೧ರ ವೇಳೆಗೆ ೨೩೪ ಮುಟ್ಟಿತು. ಈ ರೀತಿಯ ಜನಸಾಂದ್ರತೆ ಭೂಮಿಯ ಮೇಲೆ ಏರುವ ಒತ್ತಡ ಅಭಿವೃದ್ಧಿಗೆ ಮಾರಕವಾಗುತ್ತದೆ. ಈ ಏರಿಕೆಗೆ ಅನುಗುಣವಾಗಿ, ಶಿಕ್ಷಣ ಕೇಂದ್ರ, ಆರೋಗ್ಯ ಕೇಂದ್ರ, ಉದ್ಯೋಗಗಳ ಸಂಖ್ಯೆ ಏರದಿರುವುದು ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ.

ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ ಹಿಂದೆ ತಿಳಿಸಿದಂತೆ, ೧,೯೦,೦೦೦ ಚ.ಕಿ.ಮೀ.ಗಳು. ಇದರಲ್ಲಿ ಶೇ. ೧೬ರಷ್ಟು ಮಾತ್ರ ಅರಣ್ಯ ಪ್ರದೇಶವಾಗಿ ಉಳಿದುಕೊಂಡಿದೆ. ೧೯೫೦ರ ದಶಕದಲ್ಲಿ ಶೇ. ೩೦ರಷ್ಟಿದ್ದ ಅರಣ್ಯ ಪ್ರದೇಶವು ಇಂದು ಹ್ರಸ್ವಗೊಂಡು, ಅನೇಕ ಪರಿಸರ ಸಮಸ್ಯೆಗಳಿಗೆ ಕಾರಣವಾಗುತ್ತಿದೆ.

ಏರುತ್ತಿರುವ ಜನಸಂಖ್ಯೆ, ಕಾಡನ್ನು ಕಡಿದು ಕೃಷಿಭೂಮಿಯನ್ನಾಗಿಸುವ ಸಾಗುವಳಿ ವಿಧಾನ, ಜಲಾಶಯ ನಿರ್ಮಾಣ, ಜನರ ಮೂಲಭೂತ ಬೇಡಿಕೆ ಮತ್ತು ಕೈಗಾರಿಕೆಗಳಿಂದಾಗಿ ಕಾಡು ತತ್ತರಿಸಿ ನಿಧಾನವಾಗಿ ಬತ್ತಲಾಗುತ್ತಿದೆ. ಸರ್ಕಾರ ಈ ಬಗ್ಗೆ ತೆಗೆದುಕೊಳ್ಳುತ್ತಿರುವ ಕ್ರಮಗಳಾಗಲೀ, ಅರಣ್ಯ ಇಲಾಖೆ ರೂಢಿಸುತ್ತಿರುವ ಸಾಮಾಜಿಕ ಅರಣ್ಯ ಇಲಾಖೆಯಂಥ ಯೋಜನೆಗಳಿಂದಾಗಲೀ ಅರಣ್ಯ ಪುನಃ ಸೃಷ್ಟಿಯಾಗುತ್ತಿಲ್ಲ. ಈ ರೀತಿಯ ವಿಘಟನಯಿಂದ ಅನೇಕ ಪರಿಸರ ಸಮಸ್ಯೆಗಳು ಸೃಷ್ಟಿಯಾಗಿದ್ದು ಅದು ಬಹುಮುಖ ಸಮಸ್ಯೆಯಾಗಿ ವ್ಯಾಪಿಸುತ್ತಿದೆ.

ಸಸ್ಯ ಸಂಪತ್ತು

ಸಸ್ಯಗಳು ಜೀವ ವರ್ತುಲದ ಮಹತ್ವಪೂರ್ಣ ಕುಣಿಕೆ. ಸೂರ್ಯ ಕಿರಣವನ್ನು ಬಳಸಿಕೊಂಡು ನಿರವಯವ ವಸ್ತುಗಳನ್ನು, ಪ್ರಾಣಿಗಳ ಆಹಾರ, ನಾರು, ಮೂಲಿಕೆ, ತರಕಾರಿ, ಕೈಗಾರಿಕಾ ಕಚ್ಚಾವಸ್ತು, ಇತ್ಯಾದಿಗಳನ್ನು ರೂಪಿಸುವ ಅಪೂರ್ವ ಯಂತ್ರಗಳು. ಜೊತೆಗೆ ನೀರಿನ ವರ್ತುಲದಲ್ಲೂ ಅತಿ ಮಹತ್ವದ ಭಾಗವಾಗಿರುವ ಸಸ್ಯಗಳು ಭೂ ಸವಕಳಿ ತಡೆಗಟ್ಟುತ್ತವೆ. ನೀರನ್ನು ಹಿಡಿದಿಡುತ್ತವೆ. ಹವಾಮಾನದಲ್ಲಿ ಸಮತೋಲನವನ್ನು ಕಾಪಾಡುತ್ತವೆ. ಸತ್ತ ನಂತರ ಕೊಳೆತು ನೆಲದ ಫಲವತ್ತತೆಯನ್ನು ವೃದ್ಧಿಸುತ್ತವೆ.

ಭೌಗೋಳಿಕವಾಗಿ ಕರ್ನಾಟಕವನ್ನು ನಾಲ್ಕು ಪ್ರಧಾನ ಭಾಗಗಳಾಗಿ ವಿಂಗಡಿಸಬಹುದು.

(೧) ಪಶ್ಚಿಮದ ಅರಬ್ಬೀ ಸಮುದ್ರ ಮತ್ತು ಪಶ್ಚಿಮಘಟ್ಟಗಳ ನಡುವಣ ಸೆಕೆ ಹಾಗೂ ತೇವಾಂಶಭರಿತ ಸಮುದ್ರತೀರ ಮತ್ತು ಇತರ ಪ್ರದೇಶದ ಕರಾವಳಿ ಕರ್ನಾಟಕ. (೨) ಪಶ್ಚಿಮಘಟ್ಟ ಹಾಗೂ ಅದರ ಪೂರ್ವಭಾಗದ ಸೆರಗಿಗೆ ಹೊಂದಿಕೊಂಡ ನಿಬಿಡ ಅರಣ್ಯ ಮತ್ತು ಹೆಚ್ಚು ಮಳೆ ಬೀಳುವ ಮಲೆನಾಡಿನ ಪ್ರದೇಶ. (೩) ದಕ್ಷಿಣದ ಒಳನಾಡು (೪)ಉತ್ತರದ ಒಳನಾಡು ಎಂದು ವಿಭಜಿಸಬಹುದು.

ಕರ್ನಾಟಕದ ಎಲೆ ಉದುರುವ ಒಳನಾಡಿನ ಪ್ರದೇಶದಲ್ಲಿ ದಕ್ಷಿಣ ಪ್ರಸ್ಥಭೂಮಿಯ ಪಶ್ಚಿಮಭಾಗದಲ್ಲಿ ಬೆಳಗಾವಿಯಿಂದ ನಂಜನಗೂಡಿನವರೆಗೆ ದಿಂಡಿಗ, ತೇಗ, ಮತ್ತಿ, ಕಾರಾಚಿ ಮುಂತಾದ ಎತ್ತರಕ್ಕೆ ಬೆಳೆದು 'ಛಾವಣಿ' (Canopy) ನಿರ್ಮಿಸುವ ಮರಗಳ ಪ್ರಭೇದಗಳಿವೆ. ಇದರ ಜೊತೆಗೆ ಈ ಛಾವಣಿ ಮರಗಳ ಕೆಳಗೆ ಬೆಳೆವ ಮಸೂಲ, ಚಿಗರೆ ಮರಗಳ ಸಮೂಹಗಳಿವೆ. ಇದರಲ್ಲಿ ಅಗಲ ಎಲೆಯ ಹಾಗೂ ಚಿಕ್ಕಮುಳ್ಳಿನ ಗಿಡಗಂಟೆಗಳು, ಜಾಲಿ ಮರಗಳು ಕಾಣಸಿಗುತ್ತವೆ. ಬಳ್ಳಾರಿ-ಚಿತ್ರದುರ್ಗದ ನಡುವಿನ ಅರೆಶುಷ್ಕ ಪ್ರದೇಶವು ಗಡಸು ಎಲೆಗಳ ಮೃದುಕಾಂಡದ ಕಂಟಿಗಳಿಂದ ತುಂಬಿದೆ. ಆದರೆ ಇಂಥ ಕಾಡುಗಳು ಈಗ ಅಪರೂಪವಾಗಿವೆ. ಜಾನುವಾರುಗಳ ಮೇವು ಮತ್ತು ಸೌದೆಗಾಗಿ ಈ ಕಾಡುಗಳು ಈಗ ನಾಮಾವಶೇಷವಾಗತೊಡಗಿವೆ. ಇದರಿಂದ ಕೇವಲ ಹುಲ್ಲು ಮತ್ತು ನಂಜಿನ ಮುಳ್ಳುಗಿಡಗಳಷ್ಟೇ ಉಳಿದಿವೆ.

ನೀರಿನ ಬಳಕೆ ಸಸ್ಯ ಸಂಪತ್ತಿನ ಮೇಲೆ ಪರಿಣಾಮ

ಜಲಾಶಯಗಳು, ಬಾವಿ, ಕೆರೆ, ಕುಂಟೆ ಕೊಳವೆ ಬಾವಿಗಳು ಇತ್ಯಾದಿಗಳಿಂದ ರಾಜ್ಯದ ಸಸ್ಯಾರಣದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಈ ಮೂಲಗಳಿಂದ ಸುಮಾರು ೨೦ ಲ್ಷ ಹೆಕ್ಟೇರು ಭೂಮಿ ನೀರಾವರಿ ಪಡೆಯುತ್ತಿದೆ. ಕಾವೇರಿ ಜಲಾನಯನ ಯೋಜನೆಗಳೆಲ್ಲ ಪೂರ್ತಿಯಾದಾಗ ಸುಮಾರು ೫.೫ ಲಕ್ಷ ಹೆಕ್ಟೇರು ಭೂಮಿ ನೀರಾವರಿಗೆ ಒಳಪಡುತ್ತದೆ. ಉತ್ತರ ಒಳನಾಡಿನ ಕೃಷ್ಣಾ ನದಿಯ ಜಲಾನಯನ ಕ್ಷೇತ್ರದಲ್ಲಿ ೧.೧೩ಲಕ್ಷ ಹೆಕ್ಟೇರು ಪ್ರದೇಶ ನೀರಾವರಿಗೆ ಒಳಪಟ್ಟಿದೆ. ತುಂಗಭದ್ರಾ, ಘಟಪ್ರಭಾ, ಭದ್ರಾ, ಕೃಷ್ಣಾ ಮೇಲ್ದಂಡೆ ಯೋಜನೆಗಳೂ ಸೇರಿದಂತೆ ೧೧ ಬೃಹತ್ ನೀರಾವರಿ ಹಾಗೂ ೨೭ ಮಧ್ಯಮ ನೀರಾವರಿ ಯೋಜನೆಗಳಿಂದಾಗಿ ಕಾಲಕ್ರಮೇಣ ೧೮ ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿಯಾಗಲಿದೆ. ಈ ಯೋಜನೆಗಳಿಂದ ಕಾಲಕ್ರಮೇಣ ಬಂಜರು ಭೂಮಿ ಹಸಿರು ಕಕ್ಕುವ ಗದ್ದೆಗಳಾಗಬಹುದು.

ಆದರೆ ಇದು ಶ್ರೀಮಂತಿಕೆಯ ಪ್ರತೀಕವಾಗಲಾರದು. ಜಲಾಶಯ ನಿರ್ಮಾಣದಿಂದ ಬಹುಸಂಖ್ಯಾತ ಜನರು ವಲಸೆ ಹೋಗಬೇಕಾಗಬಹುದು. ಈ ವಲಸೆ ಪರಿಸರ ಮಾಲಿನ್ಯದ ಪ್ರಾತಿನಿಧಿಕ ಕುರುಹು. ಕರಾಂಜಾಹಳ್ಳದಂಥ ಪುಟ್ಟ ಯೋಜನೆಯಲ್ಲೂ ಏಳು ಹಳಿಗಳ ೬೭೦೦ ಜನರಿಗೆ ಪುನರ್ವಸತಿ ಕಲ್ಪಿಸಬೇಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ತಿಯಾಗುವ ವೇಳೆಗೆ ೭೫,೦೦೦ ಜನಸಂಖ್ಯೆಯ ಬಾಗಲಕೋಟೆ ಪಟ್ಟಣ ಸೇರಿದಂತೆ ಅನೇಕ ಹಳ್ಳಿಗಳು ಮುಳುಗಡೆಯಾಗಲಿವೆ. ಅವರ ಭವಿಷ್ಯದ ಮೇಲೆ ಕತ್ತಿ ತೂಗುತ್ತಿದೆ. ಇವರೆಲ್ಲರಿಗೂ ಯಶಸ್ವಿಯಾಗಿ ಪುನರ್ವಸತಿ ಕಲ್ಪಿಸಿದಾಗ, ಮತ್ತಷ್ಟು ಭೂಮಿ ಬೇಸಾಯಕ್ಕೊಳಪಡುತ್ತದೆ. ನದಿಯ ಮೇಲ್ದಂಡೆಯಲ್ಲಿ ಪುನರ್ವಸತಿ ಕಲ್ಪಿಸಿಕೊಟ್ಟರೆ, ವ್ಯವಸಾಯದಿಂದ ಭೂಸವಕಳಿ ಹೆಚ್ಚಿ, ಜಲಾಶಯದಲ್ಲಿ ಹೂಳು ತುಂಬಬಹುದು. ಇದರಿಂದ ಜಲಾಶಯದ ಅವಧಿ ಹ್ರಸ್ವವಾಗುತ್ತದೆ. ತುಂಗಾಭದ್ರಾ ಜಲಾಶಯ ನಿರ್ಮಾಣವಾದ ೩೦ ವರ್ಷಗಳ

ಅವಧಿಯಲ್ಲಿ ೧೮ ಟಿ.ಎಂ.ಸಿ. ನೀರು ಹಿಡಿಯುವಷ್ಟು ಹೂಳು ತುಂಬಿರುವ ಉದಾಹರಣೆ ಈಗಾಗಲೇ ನಮ್ಮ ಕಣ್ಣು ಮುಂದಿದೆ.

ದಕ್ಷಿಣದಲ್ಲಿ ಮಂಗಳೂರಿನಿಂದ ಉತ್ತರದಲ್ಲಿ ಕಾರವಾರದವರೆಗೆ ಕರಾವಳಿ ಹಬ್ಬಿದೆ. ಇಲ್ಲಿನ ಕಡಲತೀರದಲ್ಲಿ ಎರಡು ಬಗೆಯ ಸಸ್ಯಾವರಣಗಳಿವೆ -ಮರಳುದಿಬ್ಬದ ಮೇಲಿನ ಭೂಸಸ್ಯಗಳು ಮತ್ತು ಅಳಿವಿಗುಂಟ ಕಂಡುಬರುವ ಸಸ್ಯಗಳು. ಇವು ಪರಿಸರ ಸಮತೋಲನದಲ್ಲಿ ಪ್ರಮುಖಪಾತ್ರ ವಹಿಸಿವೆ. ಈ ಉಸುಕಿನ ಕಣಗಳು ಬೇಸಾಯ ಭೂಮಿಗೆ ಹಾರಿಬರದಂತೆ ತಡೆಯೊಡ್ಡುತ್ತವೆ; ಗುಲ್ಮಸಸ್ಯಗಳು ನದಿದಂಡೆಯನ್ನು ಕಾಪಾಡುತ್ತವೆ;ಮೀನು ಮತ್ತಿತರ ಅನೇಕ ಜಲಚರಗಳ ಸಂತಾನವೃದ್ಧಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸುತ್ತವೆ.

ಕಡಲಂಚಿನ ಈಚಿನ ಭೂಮಿಯಲ್ಲಿ ತೇವಾಂಶಭರಿತ ಎಲೆಯುದುರುವ ಸಸ್ಯಗಳು ಬೆಳೆಯುತ್ತವೆ. ನದಿಗಳ ಆಚೀಚಿನ ಭೂಮಿಯನ್ನು ಭತ್ತದ ಬೇಸಾಯಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದ್ದು ಸುತ್ತಲ ಗಿಡಗಳಿಗೆ ಧಕ್ಕೆಯಾಗುತ್ತಿದೆ. ಜೊತೆಗೆ ಸೌದೆ, ಗೊಬ್ಬರಕ್ಕೆ ಇರುವ ಅಷ್ಟಿಷ್ಟು ಮರಗಳು ಬಲಿಯಾಗುತ್ತಿದ್ದು, ಉಳಿದಿದ್ದ ಹಸಿರು ಮಾಯವಾಗುತ್ತಿದೆ. ಒಮ್ಮೆ ದಟ್ಟ ಕಾಡಿದ್ದ ಸ್ಥಳದಲ್ಲಿ ಈಗ ಸೇಡಿಯಂ ಸಂಕುಲದ ನಂಜಿನ ಹಾಲೊಸರುವ ಮರ ಮಾತ್ರ ಉಳಿದಿವೆ. ಈಗ ಹಸಿರನ್ನು ಪುನರ್ ಪ್ರತಿಷ್ಠಾಪಿಸಲು ಬೆಳೆಸುತ್ತಿರುವ ಗೋಡಂಬಿ ಹಾಗೂ ಅಕೇಸಿಯಾ ಮರಗಳು ಹಿಂದೆ ಕಾಣುತ್ತಿದ್ದ ಸಸ್ಯವೈವಿಧ್ಯವನ್ನು ಮತ್ತೆ ತಂದುಕೊಡಲಾರವು. ಕರಾವಳಿ ತಪ್ಪಲಿನಲ್ಲಿ ಅರಣ್ಯಾಧಾರಿತ ಉದ್ದಿಮೆಗಳಿಗಾಗಿ ತೇಗ ಮತ್ತು ಮತ್ತಿ ಮರಗಳ ಪ್ಲಾಂಟೇಷನ್‌ಗಳು ತಲೆ ಎತ್ತಿವೆ. ಈ ಏಕಕೃಷಿ ಭೂಮಿಯ ಫಲವತ್ತತೆ ಮತ್ತು ಜಲಸಂರಕ್ಷಣೆಯ ಮೇಲೆ ಯಾವ ಪರಿಣಾಮ ಬೀರಿದೆ ಎಂಬುದರ ಬಗ್ಗೆ ಅಧ್ಯಯನವಾಗಿಲ್ಲ.

ಘಟ್ಟದ ಕೆಳಭಾಗದ ಕಣಿವೆ ಹಾಗೂ ಇಳಿಜಾರು ಪ್ರದೇಶಗಳಲ್ಲಿ ಉಷ್ಣವಲಯದ ಸದಾಹಸಿರಿನ ಸಸ್ಯಾವರಣವಿದೆ. ಘಟ್ಟದ ಮೇಲೆ ತೇವಾಂಶಭರಿತ ಎಲೆ ಉದುರುವ ಸಸ್ಯಾವರಣ, ಬಿದಿರ ವನಗಳಿವೆ. ಸಹ್ಯಾದ್ರಿ ಪರ್ವತಸಾಲಿನಲ್ಲಿ ಈ ಎಲ್ಲಾ ವೈವಿಧ್ಯದ ಜೊತೆಗೆ, ದಕ್ಷಿಣ ಉಷ್ಣವಲಯದ ಗುಡ್ಡಗಾಡಿನ (ಮಾಂಟಾನ್) ಸಸ್ಯಾವರಣವೂ ಇದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಸುಮಾರು ೨೦,೬೮೮ ಹೆಕ್ಟೇರು ಕ್ಷೇತ್ರದಲ್ಲಿ ಗಣಿಗಳಿವೆ. ಕುದುರೆಮುಖದಲ್ಲಿ ೪,೬೦೫ ಹೆಕ್ಟೇರು ಭೂಮಿ ಕುದುರೆಮುಖ ಐರನ್ ಓರ್ ಕಂಪನಿಗೆ ಒಳಪಟ್ಟಿದೆ. ಈ ಗಣಿ ಚಟುವಟಿಕೆಗಳಿಂದ ಅನೇಕ ಸಸ್ಯಸಂಕುಲಗಳು ನಾಶವಾಗಿವೆ. ಗಣಿಗಳಿಂದ ತೆಗೆವ ನಿರುಪಯುಕ್ತವಸ್ತು ಸಸ್ಯಗಳಿಗೆ ವಿಷವಸ್ತುವಾಗಿದೆ. ಗಣಿ ಹೆಚ್ಚು ಆಳಕ್ಕೆ ಹೋದಂತೆ ಅಂತರ್ಜಲದ ಮಟ್ಟ ಇಳಿಮುಖವಾಗಿದೆ. ಗಣಿ ಕಾರ್ಮಿಕರ ಉರುವಲು ಬೇಡಿಕೆಗೆ ಅರಣ್ಯ ಬರಿದಾಗುತ್ತಿದೆ.

ವನ್ಯಜೀವಿಗಳು

ಕರ್ನಾಟಕ ನಾನಾಬಗೆಯ ವನ್ಯಜೀವಿಗಳಿಗೆ ಆಶ್ರಯ ಕಲ್ಪಿಸಿದೆ. ಆದರೆ ಈಗ ಹ್ರಸ್ವಗೊಳ್ಳುತ್ತಿರುವ ಕಾಡುಗಳಿಂದ ಅವು ದಿಕ್ಕುತಪ್ಪುತ್ತಿವೆ. ಅಪರೂಪ ಸಂತತಿಗಳಾದ ಆನೆ, ಹುಲಿ, ಚಿರತೆ, ಕಾಡೆಮ್ಮೆ, ಕಪ್ಪುಚಿರತೆ, ಸಿಂಗಳೀಕ, ಬಗೆಬಗೆಯ ಉರಗಗಳು ಇಲ್ಲಿ ವಾಸಿಸುತ್ತಿವೆ. ಇತ್ತೀಚಿನ ಹುಲಿಗಣತಿಯ ಪ್ರಕಾರ ರಾಜ್ಯದಲ್ಲಿ ೨೫೦ ಹುಲಿಗಳಿವೆ. ಸುಮಾರು ೪,೦೦೦ ಆನೆಗಳಿವೆ. ಧಾರವಾಡದ ಬಳಿ ರಾಣೆಬೆನ್ನೂರಿನಲ್ಲಿ ನಿರ್ಮಿಸಿದ ೧೧೯ ಚ. ಕಿ.ಮೀ. ನ ಬ್ಲಾಕ್‌ಬಕ್ ಅಭಯಾರಣ್ಯ, ಆ ಅಪರೂಪದ ಸಂತತಿಯನ್ನು ಹಾಗೂ ಗ್ರೇಟ್ ಇಂಡಿಯನ್ ಬಸ್ಟರ್ಡ್ ಸಂತತಿಯನ್ನು ಉಳಿಸಿಕೊಳ್ಳಲು ನೆರವಾಯಿತು. ಹಾಗೆಯೇ ಶರಾವತಿ ಅಭಯಾರಣ್ಯವು ಲಯನ್ ಟೈಲ್ಡ್ ಮೆಕಾಕ್ ಮತ್ತು ಕಪ್ಪುಚಿರತೆಗಳ ಉಳಿವಿಗೆ ಸಹಾಯಕವಾಗಿವೆ. ಭದ್ರಾ ಅಭಯಾರಣ್ಯದಲ್ಲಿ ಮೂರು ವರ್ಷಗಳ ಹಿಂದೆ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಪರಿಮಿತ ಸಂಖ್ಯೆಯಲ್ಲಿ ಬಲಿಯಾದ ಕಾಡೆಮ್ಮೆಗಳ ಸಂತತಿ ಈಗ ನಿಧಾನವಾಗಿ ವೃದ್ಧಿಸುತ್ತಿದೆ. ಬಂಡೀಪುರದಲ್ಲಿನ ಹುಲಿಗಳ ಸಂಖ್ಯೆಯೂ ಈಗ ಏರುತ್ತಿದೆ. ಕಳೆದ ವರ್ಷ ಭದ್ರಾನದಿಯಲ್ಲಿ ವೈರಸ್ ರೋಗಗಳಿಗೆ ತುತ್ತಾದ ಮೀನುಗಳೂ ಈಗ ರೋಗಮುಕ್ತವಾಗಿವೆ.

ಆದರೆ ಬದಲಾಗುತ್ತಿರುವ ಪರಿಸರದ ಹಿನ್ನೆಲೆಯಲ್ಲಿ ವನ್ಯಜೀವಿಗಳ ಸ್ಥಿತಿ ಅತಂತ್ರವಾಗಿಯೇ ಇದೆ. ನೀಲಗಿರಿ ಹಾಗೂ ಅಕೇಸಿಯಾ ಮರಗಳ ಏಕತಾನತೆಯಿಂದ ಅನೇಕ ಪ್ರಾಣಿಗಳು ನೆಲೆ ತಪ್ಪಿವೆ. ಆ ಬಗ್ಗೆಸಮಗ್ರ ಅಧ್ಯಯನ ಇನ್ನೂ ನಡೆದಿಲ್ಲ. ಕಾಡಾನೆಗಳು ಇಂದು ಹಳ್ಳಿಗಳ ಮೇಲೆ, ಬೆಳೆಯ ಮೇಲೆ ದಾಳಿ ಇಡುತ್ತಿರುವ ಸುದ್ದಿ ಆಗಾಗ್ಗೆ ವರದಿಯಾಗುತ್ತಿವೆ. ಮಾನವ -ಪ್ರಾಣಿಗಳ ಸಂಘರ್ಷದಲ್ಲಿ ಪ್ರಾಣ ತೆರಬೇಕಾದ ದೌರ್ಭಾಗ್ಯ ಪ್ರಾಣಿಗಳಿಗೆ ಒದಗಿಬರುತ್ತಿದೆ. ನೆಲೆ ತಪ್ಪಿದ ಜೀವಿಗಳು ಹಳ್ಳಿಗಳ ಕಡೆ ಬರುವುದು ಸಾಮಾನ್ಯ. ಬೇಟೆಗೆ ಬಲಿಯಾಗುತ್ತಿರುವ ಪ್ರಾಣಿಗಳ ಬಗ್ಗೆ ನಿಖರ ಮಾಹಿತಿ ದೊರೆಯುತ್ತಿಲ್ಲ.

ಆರೋಗ್ಯ

ಹಲವಾರು ಸಾಂಕ್ರಾಮಿಕ ರೋಗಗಳು ಜಗತ್ತಿನ ಎಲ್ಲಾ ಕಡೆಯೂ ಆಗಾಗ್ಗೆ ಸ್ಫೋಟಗೊಳ್ಳುತ್ತವೆ. ಕೆಲವು ರೋಗಗಳು ಒಂದು ಪ್ರದೇಶಕ್ಕೆ ಸೀಮಿತವಾಗಿರುತ್ತವೆ. ಅಂಥ ಹಲವು ಸ್ಥಳೀಯ ರೋಗಗಳು ಕರ್ನಾಟಕದಲ್ಲಿಇವೆ.

ಕ್ಯಾಸನೂರು ಕಾಡುರೋಗ(ಕೆ.ಎಫ್.ಡಿ.)ಇಂಥ ಸ್ಥಳೀಯ ರೋಗಗಳಲ್ಲಿ ಒಂದು. ೧೯೫೭ರಲ್ಲಿ ಮೊದಲಬಾರಿಗೆ ಈ ರೋಗ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಕಾಡಿನಲ್ಲಿ ಪತ್ತೆಯಾದ್ದರಿಂದ ಈ ಹೆಸರು ಬಂದಿದೆ. ಕಪ್ಪು ಹಾಗೂ ಕೆಂಪು ಮೂತಿಯ ಬಾನೆಟ್ ಮಂಗಗಳಿಗೆ ವೈರಸ್ ಮೂಲಕ ಹರಡುತ್ತಿದ್ದ ಈ ರೋಗವನ್ನು ಉಣ್ಣೆಗಳು ಕಾಡಿನ ಆಸುಪಾಸಿನಲ್ಲಿದ್ದ ಜನರಿಗೆ ಹತ್ತಿಸಿಬಿಡುತ್ತಿದ್ದವು. ಈವರೆಗೆ ಇದು ಶಿವಮೊಗ್ಗ, ಉತ್ತರಕನ್ನಡ, ಚಿಕ್ಕಮಗಳೂರು ಹಾಗೂ ದಕ್ಷಿಣಕನ್ನಡ ಜಿಲ್ಲೆಗಳ ಆಸುಪಾಸಿನಲ್ಲಿ ಅನೇಕ ಬಾರಿ ಕಾಣಿಸಿಕೊಂಡಿದೆ.

ಶಾಶ್ವತ ಅಂಗವೈಕಲ್ಯವನ್ನುಂಟುಮಾಡುವ ಹಂದಿಗೋಡು ರೋಗವು ಮತ್ತೊಂದು ಸ್ಥಳಜನ್ಯ ರೋಗ. ಸುಮಾರು ೨೦ ವರ್ಷಗಳ ಹಿಂದೆ ಶಿವಮೊಗ್ಗ ಚಿಕ್ಕಮಗಳೂರಿನ ಹಲವೆಡೆ ಇದು ಪತ್ತೆಯಾಯಿತು. ಮೊಟ್ಟಮೊದಲಬಾರಿಗೆ ಹಂದಿಗೋಡು ಗ್ರಾಮದಲ್ಲಿ ಪತ್ತೆಯಾದ್ದರಿಂದ ಇದಕ್ಕೆ ಆ ಹೆಸರು ಬಂದಿದೆ. ಭತ್ತದ ಗದ್ದೆಗಳಲ್ಲಿ ಬಳಸುತ್ತಿದ್ದ ಅಧಿಕ ಕೀಟನಾಶಕಗಳ ಪರಿಣಾಮವೇ ಈ ರೋಗಕ್ಕೆ ಕಾರಣ. ಕೀಟನಾಶಕಗಳು ನೀರಿನಲ್ಲಿ ಕರಗಿದ ನಂತರ ಜಲಚರಗಳ ದೇಹದಲ್ಲಿ ಮಿಳಿತವಾಗಿ, ಏಡಿ-ಮೀನನ್ನು ಹಿಡಿದು ತಿಂದ ಕೂಲಿಕಾರರ ದೇಹವನ್ನು ಹೊಕ್ಕು ಅಂಗವೈಕಲ್ಯವನ್ನುಂಟುಮಾಡಿದೆ ಎಂಬುದು ಒಂದು ಅಭಿಪ್ರಾಯ. ಕೂಲಿಕಾರರಲ್ಲೇ ಈ ರೋಗ ಕಾಣಿಸಿಕೊಂಡಿದ್ದರಿಂದ ಈ ಅಭಿಪ್ರಾಯವನ್ನು ಸಕಾರಣವಾಗಿ ನಂಬಬಹುದು. ಈ ರೋಗಕ್ಕೆ ಯಾವುದೇ ಚಿಕಿತ್ಸೆ ಇಲ್ಲ. ಈ ವರ್ಷದ ಆರಂಭದಲ್ಲಿ ಮೈಸೂರಿನಲ್ಲಿ ಹಾಗೂ ಇತರೆ ಕೆಲವು ಪ್ರದೇಶಗಳಲ್ಲಿ ಕಾಲರಾ ಕಾಣಿಸಿಕೊಂಡು ೫೦ಕ್ಕೂ ಹೆಚ್ಚು ಮಂದಿಯನ್ನು ಬಲಿತೆಗೆದುಕೊಂಡಿದೆ.

ಉದ್ದಿಮೆ ಮಾಲಿನ್ಯ

ಔದ್ಯಮಿಕ ಚಟುವಟಿಕೆಯಿಂದ ಜಲಮಾಲಿನ್ಯ, ವಾಯುಮಾಲಿನ್ಯ ಮತ್ತು ಭೂ ಮಾಲಿನ್ಯ ಉಂಟಾಗುತ್ತದೆ. ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಪರಿಪಾಲಿಸಬೇಕೆಂಬ ನಿಯಮವಿದೆ. ಇದನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಇದೆ. ಈ ನಿಯಮಗಳನ್ನು ಗಾಳಿಗೆ ತೂರಿ ಮನಬಂದಂತೆ ಬಹುತೇಕ ಸಂಸ್ಥೆಗಳು ವರ್ತಿಸುತ್ತಿವೆ ಎಂಬ ಬಗ್ಗೆ ಅನೇಕ ದೂರುಗಳಿವೆ. ಕೇವಲ ಮಾಲಿನ್ಯ ನಿಯಮವನ್ನು ಪಾಲಿಸದೇ ನಿಯಮ ಉಲ್ಲಂಘಿಸಿದ ಅಪರಾಧಕ್ಕಾಗಿ ಇದುವರೆವಿಗೂ ಯಾವೊಂದು ಬೃಹತ್ ಉದ್ದಿಮೆಯೂ ಮುಚ್ಚಿಲ್ಲ ಎಂಬ ಅಂಶ ಸ್ಪಷ್ಟವಾಗಿದೆ. ಪ್ರಮುಖವಾಗಿ ಹರಿಹರದ ಪಾಲಿಫೈಬರ್ಸ್ ಎಂಬ ಖಾಸಗಿ ಸಂಸ್ಥೆಯ ವಿರುದ್ಧ ಸಾಕಷ್ಟು ದೂರುಗಳಿವೆ. ಕರ್ನಾಟಕದ ಬಹುತೇಕ ನದಿಗಳು ಔದ್ಯಮಿಕ ಮಾಲಿನ್ಯದಿಂದ ವಿಷವಾಗುತ್ತಿರುವುದಂತೂ ಸತ್ಯ. ಆದರೆ, ಈ ಬಗ್ಗೆ ಸಮಗ್ರ ಸಂಶೋಧನೆಗಳು ನಡೆಯಬೇಕಿವೆ ; ನಿಖರ ಮಾಹಿತಿಗಳು ದೊರೆಯಬೇಕಿವೆ.

ಏರುತ್ತಿರುವ ಜನಸಂಖ್ಯೆ, ಕ್ಷಯಿಸುತ್ತಿರುವ ಸಂಪನ್ಮೂಲಗಳು, ಇಂಧನ, ವಿದ್ಯುತ್ತಿನ ಕೊರತೆ, ಸಂಕುಚಿತಗೊಳ್ಳುತ್ತಿರುವ ಅರಣ್ಯಗಳು, ವಿಸ್ತೃತವಾಗುತ್ತಿರುವ ನಿರುದ್ಯೋಗ, ಗ್ರಾನೈಟ್ ಮತ್ತು ಉದ್ದಿಮೆಗಳಿಂದ ಸಮತೋಲನ ತಪ್ಪುತ್ತಿರುವ ಪರಿಸರ, ಬದಲಾಗುತ್ತಿರುವ ಪರಿಸರ ಇವುಗಳಿಂದ ಕರ್ನಾಟಕದ ಪರಿಸರ ಹೆಚ್ಚು ಪರಿವರ್ತನೆಗೊಳಗಾಗುತ್ತಿದೆ. ಆದರೆ ಪರಿಸರ ಅಧ್ಯಯನವು ಇನ್ನೂ ಶಾಸ್ತ್ರೀಯವಾಗಿ ಕಾರ್ಯಗತವಾಗುತ್ತಿಲ್ಲವಾದ್ದರಿಂದ ಆ ಬಗ್ಗೆ ನಿಖರವಾದ ಮಾಹಿತಿಗಳ ಕೊರತೆ ಸಾಕಷ್ಟಿದೆ.

ಗ್ರ್ಯಾನೈಟ್ ರಫ್ತು

ಕರ್ನಾಟಕದ ಚಿತ್ರದುರ್ಗ, ಕನಕಪುರ, ರಾಮನಗರ ಹಾಗೂ ಮೈಸೂರಿನ ನಂಜನಗೂಡು ಮತ್ತು ಚಾಮರಾಜನಗರ ತಾಲೂಕುಗಳಲ್ಲಿ ಅಮೂಲ್ಯವಾದ ಗ್ರ್ಯಾನೈಟ್ ಮತ್ತು ಕರಿಕಲ್ಲುಗಳಿಗೆ ವಿದೇಶಗಳಿಂದ ಭಾರೀ ಬೇಡಿಕೆ ಇದೆ. ಕಳೆದ ದಶಕದಿಂದ ಈ ಕಲ್ಲು ಸಾಗಿಸುವ ಕಾರ್ಯ ನಿರಂತರವಾಗಿ ಸಾಗಿದೆ. ಕಲ್ಲುಗಳನ್ನು ಅಗೆದು ಅಥವಾ ಬಂಡೆಗಳನ್ನು ಸಿಡಿಸುವ ಕಾರ್ಯ ಅವ್ಯಾಹತವಾಗಿ ಸಾಗಿಬಂದಿತ್ತು. ಖಾಸಗಿ ಹಾಗೂ ಸರ್ಕಾರಿ ಜಮೀನುಗಳೆರಡರಲ್ಲೂ ಈ ಬಗೆಯ ಕಾರ್ಯದಿಂದಾಗಿ ಪರಿಸರಕ್ಕೆ ಸಾಕಷ್ಟು ಧಕ್ಕೆಯಾಗಿದೆ. ನಿರಂತರ ಲಾರಿಗಳ ಓಡಾಟ, ಕಲ್ಲು ತೆಗೆವ ಕಾರ್ಯದಿಂದ ನಿರ್ನಾಮವಾದ ಸಸ್ಯ, ಪ್ರಾಣಿಗಳ ಸಂಕುಲಗಳ ಬಗ್ಗೆ ನಿಖರ ಮಾಹಿತಿ ಇಲ್ಲ. ಈ ಬಗೆಯ ಚಟುವಟಿಕೆಯಿಂದ ಅರಣ್ಯ ಪರಿಸರದಲ್ಲಿ ಏರುಪೇರು ಉಂಟಾಗುವುದು ಸಹಜ. ಹಾಗೆಯೇ ಮಣ್ಣಿನ ರಚನೆಯ ಮೇಲೂ ಅದು ವ್ಯತಿರಿಕ್ತ ಪರಿಣಾಮ ಬೀರಿದೆ. ಡೈನಮೈಟ್ ಸಿಡಿತದಿಂದ ಜಲಮೂಲ ಬತ್ತಿಹೋಗುವುದೂ ವರದಿಯಾಗಿದೆ. ಆದರೆ ಈ ಬಗ್ಗೆ ಸಮಗ್ರ ಸಂಶೋಧನೆ ಇನ್ನೂ ಕಾರ್ಯಗತವಾಗಿಲ್ಲ. ಇತ್ತೀಚೆಗೆ ಸರ್ಕಾರ ಗ್ರ್ಯಾನೈಟ್ ನೀತಿಯನ್ನು ರೂಪಿಸುವವರೆಗೆ, ಕಲ್ಲು ಸಾಗಾಣಿಕೆ ಬಗ್ಗೆ ನಿಷೇಧ ಹೇರಿರುವುದರಿಂದ ಸದ್ಯಕ್ಕೆ ಈ ಚಟುವಟಿಕೆ ಸ್ತಬ್ಧಗೊಂಡಿದೆ.

ಕರ್ನಾಟಕದ ಒಟ್ಟು ಪರಿಸರವನ್ನು ಕುರಿತೇ ಮಾತನಾಡುತ್ತ ಬಂದಿದ್ದೇನೆ. ಪರಿಸರವನ್ನು ಮನುಷ್ಯ ಉಳಿಸಿಕೊಳ್ಳುವುದು, ಅದನ್ನು ಬಯಸುವುದು ಸದ್ಯದ ಮುಖ್ಯ ಕ್ರಿಯೆಯಾಗಬೇಕು. ನಾವು ಹಿಂದೆಂದಿಗಿಂತಲೂ ಇಂದು 'ಪರಿಸರ ಪ್ರಜ್ಞೆ' ಕುರಿತು ಚಿಂತಿಸುವುದು, ಅದರೊಡನೆ ತೊಡಗಿಸಿಕೊಳ್ಳುವುದು ಅಗತ್ಯದ ಕಾರ್ಯಗಳಲ್ಲಿ ಒಂದು.

•

** *

ನೆರೆಹಾವಳಿ

— ಕೆ. ಜಿ. ವಾಸುಕಿ

ಈ ವರ್ಷ ನವೆಂಬರ್ ತಿಂಗಳು ಕರ್ನಾಟಕ ರಾಜ್ಯದ'ಲವು ಕಡೆಗಳಲ್ಲಿ ಬಿದ್ದ ಜೋರುಮಳೆಯಿಂದಾಗಿ, ಕೆಲವು ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತು. ಮೈಸೂರು, ಬಳ್ಳಾರಿ, ರಾಯಚೂರು, ಧಾರವಾಡ, ಉತ್ತರಕನ್ನಡ, ಹಾಸನ, ಚಿಕ್ಕಮಗಳೂರು ಮತ್ತಿತರ ಜಿಲ್ಲೆಗಳು ಇಂಥ ಅಸ್ತವ್ಯಸ್ತ ಸ್ಥಿತಿಗೆ ಒಳಗಾದವು. ಹಿಂಗಾರು ಬೆಳೆಯನ್ನು ನಂಬಿಕೊಂಡಿರುವ ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಧಾರವಾಡ ಹಾಗೂ ಕಲ್ಬುರ್ಗಿ ಜಿಲ್ಲೆಗಳಲ್ಲಿ ನವಂಬರ್ ೧೬ ರಿಂದ ೨೧ರವರೆಗೆ ಬಿದ್ದ ಸತತ ಮಳೆಯಿಂದಾಗಿ ತೊಗರಿ, ಜೋಳ, ಗೋಧಿ ಹಾಗೂ ಹತ್ತಿ ಬೆಳೆಗಳು ಹೆಚ್ಚಿನ ಹಾನಿಗೆ ಒಳಗಾದವು. ಕೆಲವು ಪ್ರದೇಶಗಳಲ್ಲಿ ಬಿದ್ದ ಮಳೆ ೭೫ ರಿರ ೪೨೫ ಮಿ. ಮೀ.ಗೆ ಏರಿದ್ದು ಒಂದು ದಾಖಲೆಯೇ ಆಯಿತು. ಹಾವೇರಿಯಲ್ಲಿ ಬಿದ್ದ ಮಳೆಯಂತೂ ಕಳೆದ ನೂರು ವರ್ಷಗಳಲ್ಲಿ ಹೊಸ ದಾಖಲೆ.

ಈ ಮಳೆಯಿಂದಾಗಿ ಕಾವೇರಿ, ತುಂಗಭದ್ರಾ, ಇತ ಸಣ್ಣಪುಟ್ಟ ನದಿಗಳು ತುಂಬಿ ಪ್ರವಾಹವಾಗಿ ಹರಿದು ಅನೇಕರನ್ನು ಬಲಿತೆಗೆದುಕೊಂಡುದಲ್ಲದೆ,ಸಾವಿರಾರು ಜನರು ನಿರ್ಗತಿಕರಾಗಲು ಕಾರಣವಾಯಿತು. ಈ ನದಿಗಳ ದಡಗಳಲ್ಲಿನ ಊರುಗಳಲ್ಲಿ ಜನೇವನ ತಲ್ಲಣಗೊಂಡಿತು. ಅನೇಕ ಕಡೆ ಜಾನುವಾರುಗಳು, ಪಂಪುಸೆಟ್ಟುಗಳು ಜಮೀನು ಮತ್ತು ಇತರೆ ಸಾರ್ವಜನಿಕ ಆಸ್ತಿ ಈ ಪ್ರವಾಹದಿಂದ ನಾಶವಾಯಿತು

ಉತ್ತರ ರ್ನಾಟಕದ ಹಲವು ಜಿಲ್ಲೆಗಳಲ್ಲಿ ಇದೊಂದು ಕಲ್ಪಿಸಿಕೊಳ್ಳಲಾಗದ ಅನುಭವ. ಈ ಮಳೆ ಮತ್ತು ಪ್ರವಾಹದ ಅನಂತರ ಅನೇಕ ರೋಗಗಳು ಕಾಣಿಸಿಕೊಂಡವು. ಬಳ್ಳಾರಿ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಾಲರಾ ಮತ್ತು ಆಮಶಂಕೆಯಿಂದಾಗಿ ಜನ ಭಯಗೊಂಡರು. ಈ ಕಾರಣದಿಂದಾಗಿ ಕಾಲುವೆಗಳ ನೀರನ್ನು ಕುಡಿಯಬಾರದೆಂದು ಸರ್ಕಾರ ಘೋಷಿಸಬೇಕಾಯಿತು. ಕಾಯಿಲೆಯಿಂದ ಜನರ ಸವು, ಮೇವಿಲ್ಲದೆ ಜಾನುವಾರುಗಳ ಸಾವು, ಪ್ರವಾಹದಿಂದಾಗಿ ಮನೆಗಳ ಕುಸಿತ, ಜಮೀನು ಬೆಳೆ ನಾಶ ಇವು ಸರ್ಕಾರಕ್ಕೆ ಸವಾಲೂ ಆದವು.

ಚಿಕ್ಕಮಗಳೂರಿಗೆ ನೀರು ಸರಬರಾಜು ಮಾಡುತ್ತಿದ್ದ ಹಿರೇಕಳಲಿ ಕೆರೆಒಡೆದು ಚಿಕ್ಕಮಗಳೂರನ್ನು ಬೇರ್ಪಡಿಸಿದರೆ; ಹಂಪಾಪುರ, ಬೀಕನಹಳ್ಳಿ ಕೆರೆಗಳು ಒಡೆದು ಚಿಕ್ಕಮಗಳೂರು ಜಲಾವೃತವಾಗಿತ್ತು. ಹೇಮಾವತಿ ನದಿ, ಅಯ್ಯನ ಕೆರೆಗಳದೂ ಕೂಡ ಇದೇ ಹಾಡಾಗಿತ್ತು. ಮಲೆಮಹದೇಶ್ವರದ ಬೆಟ್ಟದ ಆಸುಪಾಸಿನಲ್ಲಿ ಬಿದ್ದ ಮಳೆಯಿಂದಾಗಿ ಒಂದು ಅಂದಾಜಿನಂತೆ ಒಂದು ಸಾವಿರ ಜಾನುವಾರುಗಳು, ಅನೇಕ ಎಕರೆ ಅರಿಶಿನ ಮತ್ತು ಮೆಣಸಿನಕಾಯಿ ಬೆಳೆಗಳು ಜಲಾವೃತಗೊಂಡದ್ದಲ್ಲದೆ ಸುಮಾರು ೨೫೦ ಮನೆಗಳು ಕುಸಿದುಬಿದ್ದವು. ಇದೇ ಮಳೆ ಶಿವಮೊಗ್ಗ ಜಿಲ್ಲೆಯಲ್ಲಿ ೭೦೦ ಮನೆಗಳನ್ನು ೩೦೦೦ ಎಕರೆ ಸಾಗುವಳಿ ಮಾಡಿದ ಭೂಮಿಯನ್ನು ನಿರರ್ಥಕಗೇಳಿಸಿತು. ಸರ್ಕಾರ ಈ ಕಾರಣದಿಂದಾಗಿ ೩-೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಯಿತು. ಕೇಂದ್ರ ಮಂತ್ರಿಗಳ ಪರಿಶೀಲನೆ ನಡೆದು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಯಿತು.

ನವಂಬರ್‌ನಲ್ಲಿ ಬಿದ್ದ ಮಳೆ ಕರ್ನಾಟಕದ ಸುಮಾರು ೧೨ ಜಿಲ್ಲೆಗಳ ಸಾಮಾನ್ಯ ಜನರ ಸ್ಥಿತಿಗತಿಯನ್ನು ಅಲ್ಲೋಲಕಲ್ಲೋಲ ಮಾಡಿತು. ಈ ಮಳೆ ಪ್ರವಾಹ — ೪೪,೦೦೦ ಜಾನುವಾರುಗಳು ಸತ್ತು ೬೦,೦೦೦ ಮನೆಗಳು ಕುಸಿದು, ೨.೪೦ ಲಕ್ಷ ಹೆಕ್ಟೇರು ಭೂಮಿಯಲ್ಲಿಯ ಬೆಳೆಯನ್ನು ನಾಶಮಾಡಿತು. ೯೦೦ ಸಣ್ಣ ನೀರಾವರಿ ಕೆರೆಗಳು, 2014 ಸೇತುವೆಗಳು, ೨.೨೬೦ ಕಿ.ಮೀ. ದೂರದ ರಸ್ತೆ ಮೊದಲಾಗಿ ಊನಗೊಂಡುದಲ್ಲದೆ ಸರ್ಕಾರದ ಒಂದು ಅಂದಾಜಿನಂತೆ 230 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿತು.

ಬಳ್ಳಾರಿ ಜಿಲ್ಲೆಯದೂ ಇಂಥದೇ ಸ್ಥಿತಿ. ಹೊಸಪೇಟೆ ತಾಲೂಕಿನಲ್ಲಿ ಮಳೆ ೨೬೯ ಮಿ.ಮೀ.ನಷ್ಟು ಸುರಿಯಿತು. ತುಂಗಭದ್ರ ಡ್ಯಾಂನಿಂದ ಬಿಡಲಾದ ೪ ಲಕ್ಷ ಕ್ಯೂಸೆಕ್ಸ್ ನೀರು ನೆರೆಯ ರಾಜ್ಯವಾದ ಆಂಧ್ರಪ್ರದೇಶದ ಜಿಲ್ಲೆಯೊಂದರ ಮೇಲೂ ದಾಳಿ ನಡೆಸಿತು. ತುಂಗಭದ ನದಿ ಉಕ್ಕಿಹರಿದ ಕಾರಣದಿಂದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕಟ್ಟಡಗಳು ನೀರಿನಲ್ಲಿ ಮುಳುಗಬೇಕಾಯಿತು.

ಈ ಕಲ್ಲು ಮಂಟಪಗಳಲ್ಲಿ ೫- ಅಡಿ ನೀರು ನಿಂತು ಗ್ರಂಥಾಲಯ ಮತ್ತು ಕಛೇರಿಗಳಲ್ಲಿ ಅನೇಕ ಗ್ರಂಥರಾಶಿ, ಕಡತಗಳು, ಕಂಪ್ಯೂಟರ್, ವರ್ಣಚಿತ್ರಗಳು ಇತರೆ ಅನೇಕ ವಸ್ತುಗಳು ಹಾನಿಗೊಳಗಾದವು.

ಕರ್ನಾಟಕದಲ್ಲಿ ಬಿದ್ದ ಮಳೆ ಅನೇಕ ಸ್ಥಿತ್ಯಂತರಗಳಿಗೆ ಕಾರಣವಾಯಿತು.



ಜಲಾವೃತವಾಗಿರುವ ಹಂಪಿಯ ದಾರಿ



ನೀರಿನಿಂದ ಮುಳುಗಿರುವ ಹಂಪಿಯ ಮಂಟಪಗಳು

ವಿಜ್ಞಾನ ತಂತ್ರಜ್ಞಾನ

— ಎಚ್.ಎಸ್. ನಿರಂಜನಾರಾಧ್ಯ

ಬೆಂಗಳೂರು ನಗರ ಹಲವಾರು ಪ್ರಮುಖ ಸಂಶೋಧನಾ ಸಂಸ್ಥೆಗಳನ್ನು ಹೊಂದಿದ್ದು ವಿಜ್ಞಾನ-ತಂತ್ರಜ್ಞಾನ ಚಟುವಟಿಕೆಗಳ ಕೇಂದ್ರಸ್ಥಾನವಾಗಿವೆ. ಇಲ್ಲಿನ ಸಂಸ್ಥೆಗಳ ವಿಜ್ಞಾನಿಗಳು ಮೂಲಭೂತ ಹಾಗೂ ಅನ್ವಯಿಕ ವಿಷಯಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. ಭಾರತದ ಇನ್ನಾವುದೇ ನಗರದಲ್ಲಿ ಇಷ್ಟು ಸಂಶೋಧನಾಲಯಗಳು ಇಲ್ಲದಿರುವುದನ್ನು ಮತ್ತು ಇಲ್ಲಿನ ಜನರ ಅಪಾರ ಮೌಢ್ಯವನ್ನು ಗಮನಿಸಿ ಖ್ಯಾತ ಶಿಕ್ಷಣತಜ್ಞ ಡಾ.ಎಚ್. ನರಸಿಂಹಯ್ಯನವರು "ಬೆಂಗಳೂರಿನ ಬೀದಿ ಬೀದಿಗಳಲ್ಲಿ ವಿಜ್ಞಾನ ತುಂಬಿ ತುಳುಕುತ್ತದೆ. ಆದರೆ ಬೆಂಗಳೂರಿನ ಆಧುನಿಕ ಜನರಲ್ಲಿ ಇನ್ನೂ ಆದಿಮಾನವನ ಚಿಂತನೆ, ಮೌಢ್ಯವು ತುಂಬಿದೆ " ಯೆಂದು ಲೇವಡಿ ಮಾಡುತ್ತಾರೆ.

ಭಾರತೀಯ ವಿಜ್ಞಾನಮಂದಿರ, ರಾಮನ್ ಸಂಶೋಧನಾ ಸಂಸ್ಥೆ, ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಜವಹರಲಾಲ್ ಉನ್ನತ ಸಂಶೋಧನಾ ಕೇಂದ್ರ, ಖಭೌತ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ವೈಮಾನಿಕ ಸಂಸ್ಥೆ ಮುಂತಾದ ಸಂಸ್ಥೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕನ್ನಡಿಗರಿಗಿರುವುದು ಹೆಮ್ಮೆಯ ಸಂಗತಿ. ಆದರೆ ಈ ಸಂಸ್ಥೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಕನ್ನಡಿಗರಿಗೆ ತಿಳಿಸುವ ಪ್ರಯತ್ನ ತುಂಬ ಕಡಿಮೆ. ಮೈಸೂರಿನಲ್ಲಿರುವ ಆಹಾರ ತಂತ್ರಜ್ಞಾನ ಸಂಶೋಧನಾಲಯದಿಂದ ಹೊರಬರುತ್ತಿದ್ದ ಕನ್ನಡ ಪತ್ರಿಕೆ "ಆಹಾರ ವಿಜ್ಞಾನ"ದ ಪ್ರಕಟಣೆ ನಿಂತಿದೆ. ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು ಇಲ್ಲಿನ ವಿಜ್ಞಾನ ಕರಪತ್ರ ಜನಪ್ರಿಯವಾಗಿಲ್ಲ. ಎನ್.ಎ.ಎಲ್.ನ ಕನ್ನಡ ಗೆಳೆಯರು ಪ್ರಕಟಿಸುವ "ಕಣಾದ" ಜನಪ್ರಿಯವಾಗುತ್ತಿರುವುದು ಸಂತೋಷದ ವಿಷಯ. ಮುಂಬಯಿಯ ಅಣುವಿಜ್ಞಾನ ಕೇಂದ್ರದ ಕನ್ನಡಿಗರು ಪ್ರಕಟಿಸುತ್ತಿರುವ 'ಬೆಳಗು'ಪತ್ರಿಕೆಯು ಇನ್ನೂ ಹೆಚ್ಚು ಸಂಸ್ಥೆ ಮತ್ತು ಜನರನ್ನು ತಲುಪುವ ಅಗತ್ಯವಿದೆ.

ಕರ್ನಾಟಕದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು ದುಡಿಯುತ್ತಿರುವ ರಾಜ್ಯಮಟ್ಟದ ಏಕೈಕ ಸಂಸ್ಥೆಯೆಂದರೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು. (ಕರಾವಿ). ಇದರ ಘಟಕಗಳು ರಾಜ್ಯದ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿವೆ. ಅವು ಕನ್ನಡದಲ್ಲಿ ವಿಜ್ಞಾನವನ್ನು ತಿಳಿಸುವ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತವೆ. ೧೯೯೨ರಲ್ಲಿ ಕರಾವಿಪದ ಮುಖ್ಯ ಕಾರ್ಯಕ್ರಮಗಳು ಹೀಗಿದ್ದವು:

ವಿಜ್ಞಾನ ಕ್ಷೇತ್ರದಲ್ಲಿ ಭಾರತಕ್ಕೆ ಮೊದಲ ನೊಬೆಲ್ ಪ್ರಶಸ್ತಿ ದೊರಕಿಸಿಕೊಟ್ಟ ಸರ್.ಸಿ.ವಿ.ರಾಮನ್‌ರವರ ಸಂಶೋಧನೆ ಹೊರ ಜಗತ್ತಿಗೆ ಪರಿಚಯಾಗಿದ್ದು ಫೆಬ್ರವರಿ ೨೮ರಂದು. ಈ ದಿನಾಂಕದಂದು ರಾಷ್ಟ್ರಾದ್ಯಂತ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಅದರಂತೆ ೧೯೯೨ರ ಫೆಬ್ರವರಿಯಲ್ಲಿ ಕರ್ನಾಟಕದ ಎಲ್ಲ ತಾಲ್ಲೂಕುಗಳಲ್ಲಿ ಕರಾವಿಪ ಘಟಕಗಳು ಭಾರತೀಯ ವಿಜ್ಞಾನಿಗಳ ಕೊಡುಗೆ ಮತ್ತಿತರ ವಿಷಯಗಳ ಬಗ್ಗೆ ಪ್ರಚಾರ ಮಾಡುತ್ತಾ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಿದವು.

ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳು ಕಡಿಮೆಯಿರುವಂತೆ ವಿಜ್ಞಾನ ಲೇಖಕರ ಸಂಖ್ಯೆಯೂ ಕಡಿಮೆ.ಬರವಣಿಗೆ ಚೆನ್ನಾಗಿ ಬಲ್ಲವರಿಗೆ ವಿಜ್ಞಾನದ ಮಾಹಿತಿಯು ಹೆಚ್ಚು ಗೊತ್ತಿಲ್ಲ. ಅದೇ ರೀತಿ ವಿಜ್ಞಾನದ ವಿಷಯ ಹೆಚ್ಚು ಬಲ್ಲವರಿಗೆ ಕನ್ನಡ ಭಾಷೆಯಲ್ಲಿ ಬರೆಯುವುದಕ್ಕೆ ಹಿಂಜರಿಕೆ, ಅನುಭವ ಹಾಗೂ ಶೈಲಿಯ ಬಗ್ಗೆ ಅಜ್ಞಾನ. ಈ ಕಂದರವನ್ನು ನಿವಾರಿಸಿ ಕನ್ನಡದಲ್ಲಿ ಹೆಚ್ಚು ವಿಜ್ಞಾನ ಲೇಖಕರನ್ನು ಬೆಳೆಸುವ ದೃಷ್ಟಿಯಿಂದ ಹಾಸನದಲ್ಲಿ ೧೯೯೨ ಮೇ ತಿಂಗಳ ಕೊನೆಯ ವಾರದಲ್ಲಿ ವಿಜ್ಞಾನ ಲೇಖಕರ ಶಿಬಿರವೊಂದನ್ನು ನಡೆಸಲಾಯಿತು. ಹೆಸರಾಂತ ವಿಜ್ಞಾನ ಲೇಖಕರಾದ ಪ್ರೊ.ಜೆ.ಆರ್. ಲಕ್ಷ್ಮಣರಾವ್ ಹಾಗೂ 'ಬಾಲವಿಜ್ಞಾನ' ಪತ್ರಿಕೆಯ ಸಂಪಾದಕರಾದ ಶ್ರೀಅಡ್ಯನಡ್ಕ ಕೃಷ್ಣಭಟ್ಟರ ಮಾರ್ಗದರ್ಶನದಲ್ಲಿ ಈ ಶಿಬಿರ ನಡೆಯಿತು. ಶಿಬಿರಾರ್ಥಿಗಳು ಬರೆದು ಮಂಡಿಸಿದ ಲೇಖನಗಳ ಓರೆಕೋರೆಗಳ ಬಗ್ಗೆ ವಿಮರ್ಶಿಸಲಾಯಿತು.

ಕರ್ನಾಟಕ 'ರ್ಕಾರದ ಜೀವಪರಿಸ್ಥಿತಿ ಶಾಸ್ತ್ರ ಮತು ಪರಿಸರ ಇಲಾಖೆಯ ಸಹಾಯದಿಂದ ಕರಾವಿಪದ ಘಟಕಗಳು ಜೂನ್ ೧೯೯೨ ರಲ್ಲಿ ಜನರಲ್ಲಿ ಪರಿಸರ ಪ್ರಜ್ಞೆ ಮೂಡಿಸುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲಿಯೂ ಪರಿಸರ ಅಧ್ಯಯನ ಶಿಬಿರಗಳನ್ನು ನಡೆಸಿದವು.

ರಿಯೊಡಿಜನ್ಯೆರೋದಲ್ಲಿ ನಡೆಸಲಾದ ಜಾಗತಿಕ ಪರಿಸರ ಸಮಾವೇಶದ ಹಿನ್ನೆಲೆಯಲ್ಲಿ ಕರ್ನಾಟಕದ ಪರಿಸರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಪರಿಸರ ರಕ್ಷಣೆಯಲ್ಲಿ ಜನರ ಪಾತ್ರ ಅರಿಯುವಲ್ಲಿ ಈ ಶಿಬಿರಗಳು ಉಪಯುಕ್ತವಾದವು.

ಈ ಶಿಬಿರಗಳ ಸ್ಫೂರ್ತಿಯಿಂದ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಪರಿಸರ ಜಾಗೃತಿ ಸಮಿತಿಗಳು ರಚನೆಯಾದವು ಮತ್ತು ಒಂದು ಜಿಲ್ಲೆಗೆ ನೂರು ಶಾಲೆ

ಹಾಗೂ ನೂರು ಹಳ್ಳಿಗಳಲ್ಲಿ ಪರಿಸರ ಜಾಗೃತಿ ಚಟುವಟಿಕೆಗಳು ನಡೆದವು. 'ಪರಿಸರ ಪ್ರಜ್ಞೆ'ಉಂಟುಮಾಡುವುದಕ್ಕೆ ವಿವಿಧ ಸಮೂಹಮಾಧ್ಯಮಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ "ನಿಸರ್ಗ"ಎಂಬ ಧ್ವನಿಸುರುಳಿಯೊಂದನ್ನು ಕರಾವಿಪ ೭.೯.೯೨ ರಲ್ಲಿ ಬಿಡುಗಡೆ ಮಾಡಿತು. ಪ್ರೊ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಡಾ:ಎಚ್.ಎಸ್. ವೆಂಕಟೇಶಮೂರ್ತಿ, ಶ್ರೀದೊಡ್ಡರಂಗೇಗೌಡ, ಡಾ:ಸುಮತೀಂದ್ರ ನಾಡಿಗ್ ಮುಂತಾದವರ ಪರಿಸರ ಗೀತೆಗಳಿಗೆ ಹೆಸರಾಂತ ಗಾಯಕ ಶ್ರೀ ಸಿ.ಅಶ್ವತ್ಥ್ ಸಂಗೀತ ನಿರ್ದೇಶಿಸಿದ್ದಾರೆ. ಈ ಧ್ವನಿಸುರುಳಿಯು ಸಾಕಷ್ಟು ಜನಪ್ರಿಯವಾಗಿದೆ.

ಹಳ್ಳಿಗಳಲ್ಲಿ ಯಾವ ರೀತಿ ಪರಿಸರ ಬದಲಾಗುತ್ತಿದೆ? ಅದರ ಪರಿಣಾಮಗಳೇನು? ಮುಂತಾದುವನ್ನು ಅಧ್ಯಯನ ಮಾಡುವ ಉದ್ದೇಶದಿಂದ ಕೋನ್ಪಲ್ಲಿ, ಕೋರಮಂಡಲ ಮತ್ತು ಸೋಮಯಾಜಲಪಲ್ಲಿ ಮಂಡಲಗಳಲ್ಲಿ ಪರಿಸರ ಪರಿಸ್ಥಿತಿಯ ಸರ್ವೇಕ್ಷಣೆಯನ್ನು ಕರಾವಿಪ ಕೈಗೆತ್ತಿಕೊಂಡಿದೆ.

ಕನ್ನಡದಲ್ಲಿ ವಿಜ್ಞಾನವನ್ನು ಮತ್ತಷ್ಟು ಆಕರ್ಷಕವಾಗಿ ಬೋಧಿಸುವ ಉದ್ದೇಶದಿಂದ ವಿಜ್ಞಾನ ಅಧ್ಯಾಪಕರಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಕನ್ನಡಿಗ ಪ್ರೊ.ಸಿ.ಎನ್. ಆರ್.ರಾವ್. ಅಧ್ಯಕ್ಷರಾಗಿರುವ ಜವಾಹರಲಾಲ್ ನೆಹರೂ ಉನ್ನತ ಸಂಶೋಧನಾಲಯದ ಸಹಾಯದಿಂದ ಕರಾವಿಪ ಹಮ್ಮಿಕೊಂಡಿತ್ತು. ತಿಪಟೂರು ಮತ್ತು ಚಿಂತಾಮಣಿಗಳಲ್ಲಿ ಆಯ್ದ ಅಧ್ಯಾಪಕರಿಗೆ ತರಬೇತಿ ನೀಡಲಾಯಿತು. ಅದೇ ರೀತಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಸಹಾಯದಿಂದ ಇತಿಹಾಸ ಪ್ರಸಿದ್ಧ ಬೇಲೂರಿನಲ್ಲಿ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ತರಬೇತಿ ನೀಡಲಾಯಿತು.

'ಬಾಲೋತ್ಸವಗಳು'-ಜನ ಜ್ಞಾನ ವಿಜ್ಞಾನ ಸಂಸ್ಥೆಗಳು ನಡೆಸುವ ವಿಶಿಷ್ಟ ಕಾರ್ಯಕ್ರಮಗಳು. ಒಂದು ಊರಿನ ಮಕ್ಕಳು ಮತ್ತೊಂದು ಊರಿನ ಮಕ್ಕಳ ಮನೆಯಲ್ಲಿ 5-7ದಿನಗಳ ಕಾಲ ಅತಿಥಿಗಳಾಗಿ ವಾಸ ಮಾಡುತ್ತಾರೆ. ಅಷ್ಟೂ ದಿನ ಬೆಳಗಿನ ವೇಳೆ ಮನರಂಜನೆಯ ಮೂಲಕ ಗಣಿತ, ಪರಿಸರ, ಸೃಜನತೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳುತ್ತಾರೆ. ಒಂದು ಜಾತಿಯ ಬಾಲಕ/ಬಾಲಕಿ ಮತ್ತೊಂದು ಜಾತಿಯ ಬಾಲಕನ / ಬಾಲಕಿಯ ಮನೆಯಲ್ಲಿ ವಾಸಿಸುವುದರಿಂದ, ಈ ಐದು ದಿನಗಳ ಕಾಲದಲ್ಲಿ ಅವರು ಜಾತಿ, ವರ್ಗ,ಮತ ಭೇದಗಳನ್ನು ಮರೆತು ಒಂದಾಗುತ್ತಾರೆ. ಹಲವಾರು ಆಟಪಾಠ ಮತ್ತು ಮನರಂಜನೆಯ ಕಾರ್ಯಕ್ರಮಗಳಿಂದ ರಾಷ್ಟ್ರೀಯ ಮೌಲ್ಯಗಳಾದ ರಾಷ್ಟ್ರೀಯ ಭಾವೈಕ್ಯತೆ ಹಾಗೂ ಸಮಗ್ರತಾ ಮನೋಭಾವಗಳನ್ನು ಬೆಳೆಸಿಕೊಳ್ಳಲು ಸೂಕ್ತ ವಾತಾವರಣ ನಿರ್ಮಿಸಲಾಗುತ್ತದೆ. ಇಂತಹ ನಾಲ್ಕು ವಿಭಾಗೀಯ ಮಟ್ಟದ ಬಾಲೋತ್ಸವಗಳನ್ನು ಬಾಗಲಕೋಟೆ, ಶ್ರವಣಬೆಳಗೊಳ, ಹೊಸದುರ್ಗ ಮತ್ತು ಸುಗಟೂರುಗಳಲ್ಲಿ ನಡೆಸಲಾಯಿತು. ಈ ಬಾಲೋತ್ಸವಗಳು ಅತ್ಯಂತ ಉತ್ಸಾಹಭರಿತ ವಾತಾವರಣದಲ್ಲಿ ನಡೆದವು. ರಾಜ್ಯಮಟ್ಟದ ಬಾಲೋತ್ಸವ ಚಿತ್ರದುರ್ಗದಲ್ಲಿ ನಡೆಯಿತು.

ಕರಾವಿಪ ೧೯೯೨ರ ಸಾಲಿನಲ್ಲಿ 'ಕಂಪ್ಯೂಟರ್ ಒಂದು ಮಕ್ಕಳ ಆಟ', 'ವಸುಂಧರೆಯ ವೈಭವ', 'ಡಾ. ಎಚ್. ಎನ್. ಲೇಖನಗಳು' ಮುಂತಾದ ಪುಸ್ತಕಗಳನ್ನು ಪ್ರಕಟಿಸಿತು.

ಭಾರತ ಜನ ಜ್ಞಾನ ವಿಜ್ಞಾನ ಜಾಥಾ- ೧೯೯೨

ವಿಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಎಲ್ಲ ಸಮೂಹಮಾಧ್ಯಮಗಳನ್ನು ಸಮರ್ಪಕವಾಗಿ ಬಳಸುವ ಬೃಹತ್ ಕಾರ್ಯಕ್ರಮವೇ ವಿಜ್ಞಾನ ಜಾಥಾ. ಹಳ್ಳಿಹಳ್ಳಿಗಳಿಗೆ ಕಲಾ ತಂಡವೊಂದು ಭೇಟಿಕೊಡುತ್ತಾ ಹಾಡು, ನಾಟಕ, ನೃತ್ಯದ ಮೂಲಕ ಕಾರ್ಯಕ್ರಮಗಳನ್ನು ನೀಡುತ್ತದೆ. ಇಂತಹ ಕಾರ್ಯಕ್ರಮವನ್ನು ಅಖಿಲ ಭಾರತ ಮಟ್ಟದಲ್ಲಿ 'ಭಾರತ ಜನ ಜ್ಞಾನ ವಿಜ್ಞಾನ ಜಾಥಾ' ಹೆಸರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರಸಿದ್ಧ ವಿಜ್ಞಾನಿ ಪ್ರೊ.ಯಶಪಾಲ್‌ರವರು ಈ ಜಾಥಾದ ರಾಷ್ಟ್ರ ಸಂಘಟನಾ ಸಮಿತಿಯ ಅಧ್ಯಕ್ಷರಾಗಿದ್ದರು. ಕರ್ನಾಟಕದ ರಾಜ್ಯ ಸಂಘಟನಾ ಸಮಿತಿಯ ಅಧ್ಯಕ್ಷರಾಗಿ ಖ್ಯಾತ ಶಿಕ್ಷಣತಜ್ಞ ಡಾ. ಎಚ್. ನರಸಿಂಹಯ್ಯನವರು ಇಡೀ ಕಾರ್ಯಕ್ರಮಕ್ಕೆ ಉತ್ತಮ ಮಾರ್ಗದರ್ಶನ ನೀಡಿದರು.

ರಾಷ್ಟ್ರದ ಪುನರ್‌ನಿರ್ಮಾಣಕ್ಕೆ ಸಾಮೂಹಿಕ ಕಾರ್ಯಾಚರಣೆಯ ಘೋಷಣೆಯಡಿಯಲ್ಲಿ ನಡೆದ ಈ ಜಾಥಾದಲ್ಲಿ ಐದು ಮುಖ್ಯ ವಿಷಯಗಳನ್ನು ಜನರಿಗೆ ತಲುಪಿಸುವ ಪ್ರಯತ್ನ ನಡೆಯಿತು. ಅವು ಯಾವುವೆಂದರೆ :

೧. ಆರೋಗ್ಯ, ಆಹಾರ ಪೋಷಣೆ ಮತ್ತು ನೈರ್ಮಲ್ಯ
೨. ನೀರು ೩. ಪರಿಸರ ೪. ಮೂಢನಂಬಿಕೆಗಳು ಮತ್ತು ವೈಜ್ಞಾನಿಕ ಮನೋಭಾವ
೫. ಜನರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ.

ಜಾಥಾದ ಚಟುವಟಿಕೆಗಳನ್ನು ಮೂರು ಹಂತಗಳಲ್ಲಿ ನಡೆಸಲಾಯಿತು.

ಪೂರ್ವ ಜಾಥಾ ಚಟುವಟಿಕೆಗಳು: ೧೯೯೨ರ ಆಗಸ್ಟ್ ೧೫ ರಿಂದ ಅಕ್ಟೋಬರ್ ಒಂದರ ವರೆಗೆ

ಮುಖ್ಯ ಜಾಥಾ ಚಟುವಟಿಕೆಗಳು: ೧೯೯೨ರ ಅಕ್ಟೋಬರ್ ೨ ರಿಂದ ನವೆಂಬರ್ ೭ರ ವರೆಗೆ

ಜಾಥಾ ನಂತರ ಚಟುವಟಿಕೆಗಳು: ೧೯೯೨ ನವೆಂಬರ್ ೮ ರಿಂದ ೧೯೯೩ರ ಫೆಬ್ರವರಿ ೨೮ರ ವರೆಗೆ

ಕರ್ನಾಟಕದ ರಾಜ್ಯ ಸಮಿತಿಯು ರಾಜ್ಯದ ೨೦ ಜಿಲ್ಲೆಗಳಲ್ಲಿಯೂ ಜಿಲ್ಲಾ ಸಂಘಟನಾ ಸಮಿತಿಗಳನ್ನು ರಚಿಸಿ, ವಿಶಿಷ್ಟ ಕಾರ್ಯಕ್ರಮಗಳನ್ನು ಯೋಜಿಸಿತು.

ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲಿ ಒಂದು ಪ್ರಮುಖ ಕರ್ತವ್ಯವಿದೆ.- "ಜನತೆಯಲ್ಲಿ ವೈಜ್ಞಾನಿಕ ಮನೋಭಾವ, ಮಾನವೀಯತೆ, ಸಂಶೋಧನಾ ಪ್ರವೃತ್ತಿ

ಮತ್ತು ಸುಧಾರಣಾತ್ಮಕ ದೃಷ್ಟಿಯನ್ನು ಬೆಳೆಸುವುದು." ಈ ಮೂಲಭೂತ ಕರ್ತವ್ಯವನ್ನು ಕನ್ನಡಿಗರು ಈಡೇರಿಸಲು ಬೇಕಾದ ಕಾರ್ಯಕ್ರಮಗಳನ್ನು ಜಾಥಾದಲ್ಲಿ ಯೋಜಿಸಲಾಯಿತು. ಇಂದು ನಮ್ಮಲ್ಲಿರುವ ಮೂಢನಂಬಿಕೆಗಳನ್ನು ನಿವಾರಿಸುವ ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಮನದಟ್ಟು ಮಾಡುವಂತಹ ವಿನೂತನವಾದ "ಪವಾಡ ರಹಸ್ಯ ಬಯಲು" ಕಾರ್ಯಕ್ರಮಗಳು ನಡೆದವು. ರಾಜ್ಯದ ೧೭೫ ತಾಲ್ಲೂಕುಗಳಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆಯ್ಕೆಮಾಡಿ ಅವರಿಗೆ ಪವಾಡಗಳ ಹಿಂದೆ ಇರುವ ವೈಜ್ಞಾನಿಕ ಸತ್ಯವನ್ನು ಜನರಿಗೆ ಪ್ರತ್ಯಕ್ಷವಾಗಿ ಪ್ರದರ್ಶಿಸಿ ತೋರಿಸುವ ಕಲೆಯಲ್ಲಿ ತರಬೇತಿ ನೀಡಲಾಯಿತು. ದಕ್ಷಿಣಕನ್ನಡ ಜಿಲ್ಲೆಯ ವಿಚಾರವಾದಿ ಸಂಘದ ಕಾರ್ಯದರ್ಶಿಯಾಗಿರುವ ಶ್ರೀ ನರೇಂದ್ರನಾಯಕ್ ಮತ್ತು ಮಹಾರಾಷ್ಟ್ರದ ಕನ್ನಡಿಗ ಡಾ. ಜಿ.ಎನ್. ಪದಕಿಯವರು ಈ ತರಬೇತಿಯನ್ನು ನೀಡಿದರು. ೧೯೯೨ ಆಗಸ್ಟ್ ೧೫ ರಂದು ಬಹುತೇಕ ತಾಲ್ಲೂಕುಗಳಲ್ಲಿ "ಪವಾಡ ರಹಸ್ಯ ಬಯಲು" ಕಾರ್ಯಕ್ರಮಗಳು ಪ್ರಾರಂಭವಾದವು. ಮನರಂಜನೆಯ ಜೊತೆಜೊತೆಯಲ್ಲಿ ಪ್ರಶ್ನಿಸುವ • ಸ್ವಭಾವವನ್ನು ಬೆಳೆಸಲು ಸೂಕ್ತ ವಾತಾವರಣ ನಿರ್ಮಿಸುವ ಈ ಕಾರ್ಯಕ್ರಮಗಳು ಒಟ್ಟು ೭,೦೦೦ಕ್ಕೂ ಹೆಚ್ಚು ನಡೆದಿವೆ. ಬೆಂಕಿ ನುಂಗುವ, ಮುಳ್ಳು ಹಾಸಿಗೆಯ ಮೇಲೆ ನಿಲ್ಲುವ, ಬೆಂಕಿ ಕೊಂಡ ಹಾಯುವ, ತ್ರಿಶೂಲವನ್ನು ನಾಲಗೆಯಲ್ಲಿ ಚುಚ್ಚುವ, ಕತ್ತರಿಸಿದ ಹಗ್ಗವನ್ನು ಮತ್ತೆ ಸೇರಿಸುವ, ಶೂನ್ಯದಿಂದ ಬೂದಿ, ಹಾರ ಸೃಷ್ಟಿಸುವ ಈ ಪ್ರದರ್ಶನಗಳು ಅತ್ಯಂತ ಆಕರ್ಷಕ ಹಾಗೂ ಯಶಸ್ವಿ ಕಾರ್ಯಕ್ರಮಗಳಾಗಿದ್ದವು. ಈ ಪವಾಡಗಳ ಹಿಂದಿರುವ ಕೈಚಳಕ, ವಿಜ್ಞಾನ ತತ್ವಗಳನ್ನು ವಿವರಿಸಿದಾಗ ಜನರಲ್ಲಿ ಅಶ್ಚರ್ಯವುಂಟಾಗುತ್ತಿತ್ತು ಮತ್ತು ಸಮಾಜವನ್ನು ಇಂತಹ ತಂತ್ರಗಳಿಂದ ಮೋಸ ಮಾಡುತ್ತಿರುವ ಪವಾಡಪುರುಷರನ್ನು ಬಯಲಿಗೆಳೆಯಬೇಕೆಂದು ಆಗ್ರಹ ಮಾಡುತ್ತಿದ್ದರು.

ಉಪನ್ಯಾಸ ಹಾಗೂ ಸ್ಲೈಡ್ಸ್‌ಗಳ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವ, ಪರಿಸರಪ್ರಜ್ಞೆ ಹಾಗೂ ಆರೋಗ್ಯಪ್ರಜ್ಞೆ ಬೆಳೆಸುವ ಪ್ರಯತ್ನಗಳೂ ನಡೆದವು. ನಾವು ಜೀವಿಸುವ ಜಗತ್ತಿನಲ್ಲಿರುವ ಆಶ್ಚರ್ಯಗಳು, ಅವುಗಳನ್ನು ಅರಿಯಲು ಮನುಷ್ಯ ಮಾಡಿದ, ಮಾಡುತ್ತಿರುವ ಪ್ರಯತ್ನ, ಜಗತ್ತಿನ ಜ್ಞಾನ ಭಂಡಾರವನ್ನು ಅರಿಯಬೇಕಾದರೆ, ಅಕ್ಷರಸ್ಥರಾಗಬೇಕಾದ ಅಗತ್ಯ, ಕರ್ನಾಟಕದ ಅರಣ್ಯಗಳ ಮಹತ್ವ, ಅವುಗಳ ನಾಶದಿಂದ ಆಗುತ್ತಿರುವ ದುಷ್ಪರಿಣಾಮಗಳು, ಅರಣ್ಯ ರಕ್ಷಣೆಯಲ್ಲಿ ಜನರ ಸಕ್ರಿಯ ಪಾತ್ರದ ಅಗತ್ಯ, ನಾವು ಸ್ವಾವಲಂಬಿಗಳಾಗಬೇಕಾದ ಅಗತ್ಯ, ನೈರ್ಮಲ್ಯಕ್ಕೂ ಆರೋಗ್ಯಕ್ಕೂ ಇರುವ ಸಂಬಂಧ ಮುಂತಾದ ವಿಷಯಗಳ ಬಗ್ಗೆ ರಾಜ್ಯಮಟ್ಟದ ತರಬೇತಿ ಶಿಬಿರ ಸೆಪ್ಟೆಂಬರ್‌ನಲ್ಲಿ ಚಿತ್ರದುರ್ಗದಲ್ಲಿ ನಡೆಯಿತು. ಪ್ರತಿ ಜಿಲ್ಲೆಯಿಂದ ಐದು ಜನ ಪ್ರತಿನಿಧಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಇವರು ಮತ್ತೆ ತಮ್ಮ ತಮ್ಮ ಜಿಲ್ಲೆಗಳಲ್ಲಿ ತರಬೇತಿ ನೀಡಿ ಸಾವಿರಾರು ಉಪನ್ಯಾಸಗಳ ಮೂಲಕ ಜನರಿಗೆ ಮೇಲಿನ ವಿಷಯವನ್ನು ಮನದಟ್ಟುಮಾಡುವುದಕ್ಕೆ ಪ್ರಯತ್ನಿಸಿದರು.

ನಾಟಕ, ಹಾಡು, ರೂಪಕ ಮುಂತಾದವುಗಳ ಮೂಲಕ ಜಾಥಾದ ಉದ್ದೇಶಗಳನ್ನು ಜನರಿಗೆ ತಲುಪಿಸುವ "ಜಾಥಾ ಕಲಾತಂಡ"ಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ರಚಿಸಲಾಯಿತು. ಮೊದಲಿಗೆ ರಾಜ್ಯಮಟ್ಟ ರಂಗ ತರಪೇತಿ ಶಿಬಿರವನ್ನು ಹಳೇಬೀಡಿನ ಪುಷ್ಪಗಿರಿಯಲ್ಲಿ ನಡೆಸಲಾಯಿತು. ಇಲ್ಲಿ ಭಾಗವಹಿಸಿದ್ದ ಪ್ರತಿ ಜಿಲ್ಲೆಯ ರಂಗ ನಿರ್ದೇಶಕರು ತಮ್ಮ ತಮ್ಮ ಜಿಲ್ಲೆಗಳಲ್ಲಿ ರಂಗತಂಡಗಳನ್ನು ರಚಿಸಿಕೊಂಡರು. ಅಕ್ಟೋಬರ್ ೨ ರಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮುಖ್ಯ ಜಾಥಾದ ಉದ್ಘಾಟನೆಯಾಯಿತು. ಪ್ರತಿ ಜಿಲ್ಲೆಯ ಒಂದು ನೂರು ಹಳ್ಳಿಗಳಿಗೆ ಈ ಕಲಾ ತಂಡಗಳು ಭೇಟಿ ನೀಡಿ ಕಲಾಪ್ರದರ್ಶನ ನೀಡಿದವು. ಶೌಚಕ್ಕಾಗಿ ಬಯಲಿಗೆ ಹೋಗುವುದರಿಂದ ಉಂಟಾಗುವ ರೋಗರುಜಿನಗಳನ್ನು ತಿಳಿಸುವ ಹಾಗೂ ಪ್ರತಿ ಮನೆ ಮತ್ತು ಊರಿಗೆ ಶೌಚಾಲಯದ ಅಗತ್ಯ ತಿಳಿಸುವ 'ವಿಸರ್ಜನೆ' ನಾಟಕ, ಜಾತಿ ಮತ ಭೇದಗಳು ಮನುಷ್ಯನಿರ್ಮಿತ ವಿಕಲ್ಪಗಳು ಮಾನವರೆಲ್ಲ ಒಂದೇ ಎಂದು ತಿಳಿಸುವ 'ರಕ್ತದ ಬಣ್ಣ ಒಂದೇ' ರೂಪಕ, ಸಾಕ್ಷರತೆಯ ಅಗತ್ಯವನ್ನು ಸಾರುವ 'ಪತ್ರ' 'ಜಪ್ತಿ' ನಾಟಕಗಳು, ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವ ಅಗತ್ಯ ತಿಳಿಸುವ 'ಒರೆಗಲ್ಲು' ನಾಟಕ ಎಲ್ಲರನ್ನೂ ತಲುಪುವಲ್ಲಿ ಯಶಸ್ವಿಯಾದವು.

ಒಂದು ದಿನಕ್ಕೆ ಮೂರು ನಾಲ್ಕು ಹಳ್ಳಿಗಳಲ್ಲಿ 'ವಿಜ್ಞಾನ ಕಲಾ ಜಾಥಾ' ಪ್ರದರ್ಶನ ನೀಡುತ್ತಾ, ಹಳ್ಳಿಗರು ನೀಡಿದ ಅನ್ನ ಆಹಾರವನ್ನು ಸ್ವೀಕರಿಸುತ್ತಾ, ಜನರೊಡನೆ ಬೆರೆತು ಆಯಾ ಹಳ್ಳಿಯ ಯುವಕರನ್ನು ಪ್ರೇರೇಪಿಸಿ, ಸಂಘಟನೆಗೆ ಕರೆಕೊಡುತ್ತಾ ಜಾಥಾ ಮುಂದೆ ಸಾಗುತ್ತಿತ್ತು. ಬಹುತೇಕ ಜಿಲ್ಲೆಗಳಲ್ಲಿ ಒಂದೇ ಕಲಾತಂಡ ಜಾಥಾ ನಿರ್ವಹಿಸಿದರೆ, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಬಳ್ಳಾರಿಗಳಲ್ಲಿ ಹಲವಾರು ತಂಡಗಳು ಈ ಕಾರ್ಯಕ್ರಮಗಳನ್ನು ನೀಡಿದವು. ಕಲಾಪ್ರದರ್ಶನದ ನಂತರ ರಾಜ್ಯ ಸಮಿತಿ ಪ್ರಕಟಿಸಿದ್ದ ಪುಸ್ತಕ ಮಾರಾಟ ಹಾಗೂ ಭಿತ್ತಿಪತ್ರಗಳ ಪ್ರದರ್ಶನವೂ ನಡೆಯಿತು.

ಜಾಥಾ ಸಮಯದಲ್ಲಿ ಹೆಸರಾಂತ ಜಾನಪದ ಗಾಯಕ ಶ್ರೀ ಯುವರಾಜ್ ಸಂಗೀತ ನಿರ್ದೇಶಿಸಿರುವ 'ಕಾಲದ ಕೂಗು' ಎಂಬ ಧ್ವನಿಸುರುಳಿಯೊಂದನ್ನು ಹೊರತರಲಾಯಿತು. ಅಲ್ಲದೆ ರಾಜ್ಯ ಸಮಿತಿಯು ಜಾಥಾ ಉದ್ದೇಶಗಳಿಗೆ ಸಂಬಂಧ ಪಟ್ಟ ೮ ಪುಸ್ತಕಗಳನ್ನು ಪ್ರಕಟಿಸಿತು.

೧. ಮೂಢನಂಬಿಕೆಗಳು ಮತ್ತು ವೈಜ್ಞಾನಿಕ ಮನೋಭಾವ	ಡಾ. ಎಚ್. ನರಸಿಂಹಯ್ಯ	೩೫,೦೦೦ ಪ್ರತಿಗಳು
೨. ಪವಾಡ ರಹಸ್ಯ ಬಯಲು	ಶ್ರೀ ನರೇಂದ್ರ ನಾಯಕ್	೩೫,೦೦೦ ಪ್ರತಿಗಳು
೩. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ	ಶ್ರೀಮತಿ ಶಾರದಾ ಗೋಪಾಲ ಶ್ರೀ ಗೋಪಾಲ ದಾಬಡೆ	೧೦,೦೦೦ ಪ್ರತಿಗಳು

೪. ಸಾಕ್ಷರತೆ-ಸ್ವಾವಲಂಬನೆ	ವಿವಿಧ ಲೇಖಕರು	೩,೦೦೦ ಪ್ರತಿಗಳು
೫. ಜಲವೇ ಜೀವನ	ಡಾ. ಅರವಿಂದ ಪಟವರ್ಧನ್ ಅನು:ಶ್ರೀ ಎಂ.ಆರ್. ನಾಗರಾಜ್	೫,೦೦೦ ಪ್ರತಿಗಳು
೬. ನೈರ್ಮಲ್ಯ ಮತ್ತು ಆರೋಗ್ಯ	ಡಾ. ಪ್ರಕಾಶ್ ಸಿ. ರಾವ್	೫,೦೦೦ ಪ್ರತಿಗಳು
೭. ಕಾಲವು ಎಲ್ಲರ ಕರೆಯುತ್ತಿದೆ	ವಿವಿಧ ಲೇಖಕರು	೫,೦೦೦ ಪ್ರತಿಗಳು
೮. ವಿಚಾರಕ್ರಾಂತಿಗೆ ಕುವೆಂಪು ಕರೆ	ಪ್ರೊ. ದೇಜಗೌ	೨೦,೦೦೦ ಪ್ರತಿಗಳು

ಇವುಗಳಲ್ಲಿ ಮೊದಲಿನ ಐದು ಪುಸ್ತಕಗಳನ್ನು ಮುಖ್ಯ ಜಾಥಾ ಚಟುವಟಿಕೆಗಳ ಸಮಯದಲ್ಲಿ ಹೊರತರಲಾಯಿತು. ಕೇವಲ ಮೂರು ತಿಂಗಳಲ್ಲಿ ಡಾ.ಎಚ್.ನರಸಿಂಹಯ್ಯನವರ ಮತ್ತು ಶ್ರೀ ನರೇಂದ್ರನಾಯಕ್‌ರ ಪುಸ್ತಕಗಳ ೩೦,೦೦೦ ಪ್ರತಿಗಳು ಮಾರಾಟವಾಗಿರುವುದು ಬಹುಶಃ ಕನ್ನಡ ಪುಸ್ತಕಗಳ ಮಾರಾಟದ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು. ಸುಲಭ ಬೆಲೆಯ, ಸರಳ ಭಾಷೆಯ ಹಾಗೂ ಆಕರ್ಷಕವಾಗಿ ವಿಷಯ ಮಂಡಿಸುವ ಈ ಪುಸ್ತಕಗಳನ್ನು ಆಬಾಲವೃದ್ಧರಾದಿಯಾಗಿ ಕೊಂಡು ಓದುವುದಕ್ಕೆ ಹಾತೊರೆಯುತ್ತಿದ್ದುದು ಜಾಥಾದ ವಿಶೇಷ ಸಂಗತಿ.

ಈ ಎಲ್ಲ ಸಮೂಹಮಾಧ್ಯಮಗಳನ್ನು ಬಳಸಿಕೊಂಡು, ವಿಜ್ಞಾನ- ತಂತ್ರಜ್ಞಾನದ, ವೈಜ್ಞಾನಿಕ ಮನೋಭಾವದ ವಿಷಯಗಳನ್ನು ರಾಜ್ಯದ 3000ಕ್ಕೂ ಹೆಚ್ಚು ಸಂಖ್ಯೆಯ ಹಳ್ಳಿಗಳಲ್ಲಿ ಪ್ರಚಾರಮಾಡಿದ್ದು ೧೯೯೨ರ ಪ್ರಮುಖ ಘಟನೆ. ಈ ಜಾಥಾದಿಂದ ವಿಜ್ಞಾನವನ್ನು ಅರಿಯುವ ಜನರ ಕುತೂಹಲ ಮತ್ತು ಅವರ ಸಮೀಪ ಹೋದರೆ ಕನ್ನಡದಲ್ಲಿನ ವಿಜ್ಞಾನ ಪುಸ್ತಕಗಳನ್ನು ಕೊಂಡು ಓದುವ ಪ್ರವೃತ್ತಿ ಹೆಚ್ಚಿದೆ ಎಂಬುದು ಜನ ವಿಜ್ಞಾನ ಜಾಥಾದ ಸ್ವಯಂಸೇವಕರಿಗೆ ಅರ್ಥವಾಯಿತು.

ಸಾಕ್ಷರತಾ ಆಂದೋಲನಗಳು

೧೯೯೨ರಲ್ಲಿ ರಾಷ್ಟ್ರೀಯ ಸಾಕ್ಷರತಾ ಆಯೋಗದ ಬೆಂಬಲದಿಂದ ಸಂಪೂರ್ಣ ಸಾಕ್ಷರತಾ ಆಂದೋಲನಗಳು ಮತ್ತೆ ಕೆಲವು ಜಿಲ್ಲೆಗಳಲ್ಲಿ ಪ್ರಾರಂಭವಾದವು. ೧೯೯೩-೯೫ರೊಳಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಸಂಪೂರ್ಣ ಸಾಕ್ಷರತಾ ಆಂದೋಲನಗಳನ್ನು ಜಾರಿಗೆ ತಂದು ಕರ್ನಾಟಕವನ್ನು ಸಂಪೂರ್ಣ ಸಾಕ್ಷರತಾ ರಾಜ್ಯವನ್ನಾಗಿ ಪರಿವರ್ತಿಸುವ ಬಯಕೆಯನ್ನು ಕರ್ನಾಟಕ ಸರ್ಕಾರ ಘೋಷಿಸಿದೆ. ದಕ್ಷಿಣ ಕನ್ನಡ, ಮಂಡ್ಯ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸಾಕ್ಷರೋತ್ತರ ಕಾರ್ಯಕ್ರಮಗಳನ್ನು ವಿವಿಧ ಹಂತಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಶಿವಮೊಗ್ಗ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನ ಪೂರ್ಣ

ಪ್ರಮಾಣದಲ್ಲಿ ನಡೆಯುತ್ತಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯುತ್ತಿರುವ ಈ ಆಂದೋಲನಗಳಲ್ಲಿ ಎಲ್ಲ ಜನ ವಿಭಾಗಗಳೂ ಭಾಗವಹಿಸುತ್ತಿವೆ. ಅನೇಕ ಸ್ವಯಂಸೇವಾ ಸಂಘಟನೆಗಳು ಅತ್ಯಂತ ಸಕ್ರಿಯವಾಗಿ ಈ ಕಾರ್ಯಕ್ರಮಕ್ಕೆ ಬೆಂಬಲ ನೀಡುತ್ತಿವೆ. ಭಾರತ ಜನ ಜ್ಞಾನವಿಜ್ಞಾನ ಸಮಿತಿಯು ಸಾಕ್ಷರತಾ ಆಂದೋಲನದ ಕಾರ್ಯಕರ್ತರಿಗೆ ಯುಕ್ತ ಪ್ರೇರಣೆ ಹಾಗೂ ತರಬೇತಿ ನೀಡುವುದಕ್ಕೆ ದುಡಿಯುತ್ತಿದೆ. ಪ್ರೊ. ಸಿ.ಎನ್.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತ ಜನ ಜ್ಞಾನವಿಜ್ಞಾನ ಸಮಿತಿ,'ಸಾಕ್ಷರತೆ ಏಕೆ?', 'ಸಂಪೂರ್ಣ ಸಾಕ್ಷರತಾ ಆಂದೋಲನದ ಕೈಪಿಡಿ'ಮುಂತಾದ ಪ್ರಕಟಣೆಗಳನ್ನು ಹೊರತಂದಿದೆ. ಪ್ರತಿ ಜಿಲ್ಲೆಯಲ್ಲಿ ಸ್ವಯಂಸೇವಕರನ್ನು ಈ ಆಂದೋಲನಕ್ಕೆ ಅಣಿಗೊಳಿಸುತ್ತಾ ಜನರ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡುತ್ತಿದೆ.

ಡಂಕೆಲ್ ಪ್ರಸ್ತಾವನೆ


೧೯೯೨ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮತ್ತೊಂದು ಪ್ರಮುಖ ಸಂಗತಿ ಎಂದರೆ ಅಮೆರಿಕಾದವರು ಭಾರತದ ಮೇಲೆ ಹೇರಲು ಪ್ರಯತ್ನಿಸುತ್ತಿರುವ 'ಡಂಕೆಲ್ ಪ್ರಸ್ತಾವನೆ'. ಈ ಪ್ರಸ್ತಾವನೆಯಲ್ಲಿ ಭಾರತದ ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಗೆ ಮಾರಕವಾಗುವಂತಹ ಪ್ರಸ್ತಾಪಗಳಿವೆ. ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಪ್ರಮುಖಪಾತ್ರ ನಿರ್ವಹಿಸುತ್ತಿರುವ 'ಭಾರತದ ಪೇಟೆಂಟ್ ಕಾನೂನು'ಗಳನ್ನು ಮಾರ್ಪಾಟು ಮಾಡಬೇಕೆಂಬ ಒತ್ತಾಯವಿದೆ. ಇದರ ಪ್ರಕಾರ ವಿಜ್ಞಾನಿಗಳು ಸಂಶೋಧಿಸುವ ವಸ್ತುವಿನ ವಿಧಾನಕ್ಕಲ್ಲದೆ ವಸ್ತುವಿಗೂ ಪೇಟೆಂಟ್ ನೀಡಬೇಕಾಗುತ್ತದೆ. ನಿಸರ್ಗದಲ್ಲಿ ಲಕ್ಷಾಂತರ ವರ್ಷಗಳ ಕಾಲದಲ್ಲಿ ವಿಕಾಸಗೊಂಡಿರುವ ಜೀವಿಗಳನ್ನು ಮತ್ತು ಆನುವಂಶೀಯ ಘಟಕಗಳಾದ ಜೀನ್‌ಗಳನ್ನು ಪೇಟೆಂಟ್ ಮಾಡಬಹುದೆಂಬ ಪ್ರಸ್ತಾಪವಿದೆ. ಇಂದು ನಮ್ಮ ರೈತರು ಬೆಳೆಯುತ್ತಿರುವ ಬಸುಮತಿ ಅಕ್ಕಿಯನ್ನು ಯಾರಾದರೂ ಪೇಟೆಂಟ್ ಮಾಡಿಸಿದರೆ, ಆಗ ರೈತರು ಬಸುಮತಿ ಬೆಳೆಯಬೇಕಾದರೆ ಸಂಭಾವನೆಯನ್ನು ನೀಡಿ ಅನುಮತಿ ಪಡೆದು ಬೆಳೆಯಬೇಕಾಗುತ್ತದೆ. ಆದ್ದರಿಂದ ಈ ಡಂಕೆಲ್ ಪ್ರಸ್ತಾವನೆಯನ್ನು ಭಾರತದ ಅನೇಕ ವಿಜ್ಞಾನಿಗಳು, ರೈತ ಸಂಘಗಳು ಮತ್ತು ಜನವಿಜ್ಞಾನ ಸಂಘಟನೆಗಳು ವಿರೋಧಿಸುತ್ತಿವೆ. 'ವಿಜ್ಞಾನ ಮತ್ತು ಅಭಿವೃದ್ಧಿಯ ವೇದಿಕೆ' ಎಂಬ ಹೆಸರಿನ ಬೆಂಗಳೂರಿನ ಸಂಘಟನೆಯು ಈ ಡಂಕೆಲ್ ಪ್ರಸ್ತಾವನೆಯನ್ನು ವಿರೋಧಿಸಿತು ಮತ್ತು ಡಂಕೆಲ್ ಪ್ರಸ್ತಾವನೆಯ ಅಪಾಯಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಹಲವಾರು ಉಪನ್ಯಾಸ ಮತ್ತು ವಿಚಾರಸಂಕಿರಣಗಳನ್ನು ನಡೆಸಿತು. ಕರ್ನಾಟಕ ರಾಜ್ಯ ರೈತ ಸಂಘವು ಡಂಕೆಲ್ ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕೆಂಬ ಒತ್ತಾಯವನ್ನು ಸರ್ಕಾರದ ಮುಂದಿಟ್ಟಿದೆ. ಡಂಕೆಲ್ ಪ್ರಸ್ತಾವನೆ ಜಾರಿಯಾದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ದೇಶವನ್ನು ಅಡವಿಟ್ಟಂತಾಗುತ್ತದೆಂಬ ಕೂಗನ್ನು ಎತ್ತಿದೆ. ಅದೇ ರೀತಿ 'ಹೊಸ ಕೈಗಾರಿಕಾ ಮತ್ತು ಆರ್ಥಿಕ ನೀತಿ'ಯ ಮೇಲೆ ಚರ್ಚೆಯನ್ನು ಕರ್ನಾಟಕ ರಾಜ್ಯದ ಶಾಂತಿ

ಮತ್ತು ಸೌಹಾರ್ದತೆಯ ಸಂಘಟನೆ ಮತ್ತು ಭಾರತ ಜನ ಜ್ಞಾನ ವಿಜ್ಞಾನ ಸಮಿತಿಗಳು ನಡೆಸಿದವು.

ಒಟ್ಟಿನಲ್ಲಿ ೧೯೯೨ರಲ್ಲಿ ವಿಜ್ಞಾನ-ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವ, ವೈಜ್ಞಾನಿಕ ಮನೋಭಾವವನ್ನು ಜನತೆಯಲ್ಲಿ ಬೆಳೆಸುವ ಬೃಹತ್ ಪ್ರಯತ್ನವೊಂದು ನಡೆಯಿತು. ವಿಜ್ಞಾನ –ತಂತ್ರಜ್ಞಾನ ನೀತಿ ನಿಯಮಗಳನ್ನು ಚರ್ಚಿಸುವ, ಜನರಿಗೆ ಅಪಾಯಕಾರಿಯಾಗಬಹುದಾದ ಡಂಕೆಲ್ ಪ್ರಸ್ತಾವನೆಯನ್ನು ರೈತರು ವಿರೋಧಿಸುವ ಹಂತಕ್ಕೆ ಕನ್ನಡಿಗರು ಈ ವರ್ಷ ಬೆಳೆದಿದ್ದು ಅತ್ಯಂತ ಸಂತೋಷದ ಸಂಗತಿ.



"ಜ್ಞಾನ ಜ್ಞಾನ" ಜಾಥಾ



ಬೀದಿ ನಾಟಕದ ಒಂದು ದೃಶ್ಯ



ಪವಾಡ ಕುರಿತ ಪ್ರಾತ್ಯಕ್ಷಿಕೆ

ರಾಜಕಾರಣ

ರಾಜಕೀಯ: ಪರಿಕಲ್ಪನೆ ಮತ್ತು ವಾಸ್ತವ

– ಸಿ.ವಿ ರಾಜಗೋಪಾಲ

ಪರಿಕಲ್ಪನೆ

"ರಾಜಕಾರಣ" ಈ ಪದಕ್ಕೆ ಮೂಗು, ಮುಖ ಅನ್ನುವುದೇ ಇಲ್ಲ. ಸರ್ವೋಪಯೋಗದ ಈ ಪದಕ್ಕೆ ನಿಖರವಾದ ಅರ್ಥವಿಲ್ಲವೆಂದೇ ಆ ಪದದ ಬಳಕೆಯಲ್ಲಿ ದುರುಪಯೋಗ ವ್ಯಾಪಕವಾಗಿ ನಡೆದಿದೆ. ಇಂದು ಈ ಪದ ಸಂತೋಷಜನಕವಲ್ಲ. ಆದರೆ 'ರಾಜಕಾರಣ' ಅನ್ನುವುದು ಸಾಕಷ್ಟು ಸಮಯದಿಂದಲೇ ತೆಗಳಿಕೆಗೆ, ಕುಚೋದ್ಯಕ್ಕೆ ಈಡಾಗಿದೆ. ಛೇಂಬರ್ಸ್ ಟ್ವಂಟಿಯತ್ ಸೆಂಚುರಿ ನಿಘಂಟಿನ ಪ್ರಕಾರವೇ "ರಾಜಕಾರಣ"ಎನ್ನುವ ಪದಕ್ಕೆ ಪರಸ್ಪರ ವಿರೋಧವೆಂದು ಕಾಣುವ ಅರ್ಥಗಳಿವೆ. ಸಂವಿಧಾನಾತ್ಮಕವಾದುದು, ಉತ್ತಮ ನೀತಿಗೆ ಅನುಗುಣವಾಗಿ ನಡೆಯುವುದು, ಚತುರತೆಯಿಂದ ಉಪಾಯ ಯೋಜಿಸುವುದು ಅಥವಾ ಒಳಸಂಚು. "ಪಾಲಿಟಿಕ್"ಅನ್ನುವುದಕ್ಕೆ ಇಷ್ಟು ಸಡಿಲವಾದ ವೈವಿಧ್ಯಮಯವಾದ ಅರ್ಥಗಳಿವೆ. ಆದ್ದರಿಂದಲೇ ಯೋಗ್ಯವಾದ, ಅಯೋಗ್ಯವಾದ ಎಷ್ಟೋ ಚಟುವಟಿಕೆಗಳು ಇಂದು ಈ ಪದದ ಆಶ್ರಯದಲ್ಲಿ ನಡೆಯುತ್ತಿವೆ. ಗೌರವವಲ್ಲದ ಕೆಲಸಗಳಿಗೂ "ರಾಜಕಾರಣ"ದ ಗೌರವದ ಮುಸುಕನ್ನು ಹೊದಿಸಲಾಗುತ್ತಿದೆ.

"ರಾಜಕಾರಣ"ವನ್ನು "ಸಾಧ್ಯತೆಯ ಕಲೆ" ಎಂದು ಕೂಡ ವರ್ಣಿಸಲಾಗಿದೆ. ಅಷ್ಟೊಂದು 'ಸಾಧ್ಯ' ಆಗುತ್ತಿದೆ ಎನ್ನುವುದೇ ಹೆಚ್ಚು ಕಡಿಮೆ ಸಾರ್ವತ್ರಿಕವಾದ ಕೋಪಕ್ಕೆ, ಹಾಸ್ಯಕ್ಕೆ, ಹತಾಶೆಗೂ ಕಾರಣವಾಗುತ್ತಿದೆ. ಜನರಲ್ಲಿನ ಈ ವ್ಯಾಪಕ ಭಾವನೆಯನ್ನು ನಿರಾಕರಿಸಲು "ರಾಜಕಾರಣಿಗಳಿಗೆ" ಸಾಧ್ಯವಾಗುತ್ತಿಲ್ಲ. ಆದ್ದರಿಂದಲೇ ಕೆಲವು ರಾಜಕಾರಣಿಗಳಾದರೂ ರಾಜಕಾರಣಗಳಲ್ಲಿ ಜನರ ವಿಶ್ವಾಸ ಕರಗುತ್ತಿದೆ ಎನ್ನುವುದನ್ನು ಒಪ್ಪಿಕೊಳ್ಳಲಾರಂಭಿಸಿದ್ದಾರೆ. ವಸ್ತುಸ್ಥಿತಿ ಮುಖಕ್ಕೆ ರಾಚುತ್ತಿರುವಾಗ ನಿರಾಕರಿಸುವುದು ಸುಲಭವಲ್ಲ.

ಯಾರು ಯಾವಾಗ ಹೇಳಿದರೋ ಗೊತ್ತಿಲ್ಲ. "ರಾಜಕಾರಣ ಠಕ್ಕನ ಕೊನೆಯ ಆಶ್ರಯ" ಅಂತೆ. ಒಮ್ಮೆ ಈ ಲೇಖಕ ಕರ್ನಾಟಕದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರೊಡನೆ ಮಾತನಾಡುತ್ತಿದ್ದಾಗ ಪ್ರಾಸಂಗಿಕವಾಗಿ ಈ ಮಾತು ಪ್ರಸ್ತಾಪಕ್ಕೆ ಬಂತು. ದಿವಂಗತ ಅರಸುರವರು ವ್ಯಂಗ್ಯೋಕ್ತಿಗೆ ಹೆಸರಾಗಿದ್ದವರು. ಅವರು ಥಟ್ಟನೆ ಹೇಳಿದರು. "ಕೊನೆಯ ಆಶ್ರಯವಷ್ಟೇ ಅಲ್ಲಪ್ಪ, ಮೊದಲ ಆಶ್ರಯ ಕೂಡ "ದಿಢೀರನೇ ಪ್ರಾಮುಖ್ಯಕ್ಕೆ ಬಂದಿದ್ದ ಆಗಿನ ಒಬ್ಬ ಯುವ ನಾಯಕನ ವಿಷಯದಲ್ಲಿ ಹೇಳಿದ ಮಾರ್ಮಿಕ ಮಾತಿದು. ಆ ಮಾತಿನಲ್ಲಿ ವ್ಯಂಗ್ಯವೂ ಇತ್ತು, ನೋವೂ ಇತ್ತು. ಹದಿನೈದು ವರ್ಷಗಳ ಹಿಂದೆಯೇ ಸ್ಥಿತಿ ಹೀಗಿತ್ತು! ಆಗಿನಿಂದೀಚೆಗೆ ಭಾರತದ 'ರಾಜಕಾರಣ' ಉತ್ತಮಗೊಂಡಿದೆ ಎಂದು ಹೇಳಬೇಕಾದರೆ ಎಂಟೆದೆ ಬೇಕು.

ಸಾಧನ - ದೂರ

"ರಾಜಕಾರಣ"ವನ್ನು ಸ್ಥೂಲವಾಗಿ ರಾಜ್ಯ ನಿರ್ವಹಣೆಯ ಒಂದು ಸಾಧನ ಅನ್ನಬಹುದು. ಈ ಸಾಧನ ಇಂದು ಕೆಟ್ಟಿರಬಹುದು. ಆದರೆ ರಾಜಕಾರಣ ಅನ್ನುವುದು ಜನತಂತ್ರದಲ್ಲಿಯಂತೂ ಅನಿವಾರ್ಯ. ಕೆಟ್ಟಿರುವುದನ್ನು ಸರಿಪಡಿಸಿಕೊಳ್ಳ-ಬೇಕಾಗುತ್ತದೆ. ಅದನ್ನೇ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಪ್ರತಿಯೊಬ್ಬ ಮನುಷ್ಯನೂ "ರಾಜಕೀಯ ಪ್ರಾಣಿ" ಅಂದ ಮೇಲೆ ರಾಜಕಾರಣವನ್ನು ಕೊಡವಿಕೊಂಡು ದೂರ ಉಳಿಯುವುದು ಹೇಗೆ ?

ಈ ದೇಶದಲ್ಲಿ ಇಂದು ರಾಜಕಾರಣದ ವಿಷಯದಲ್ಲಿ ಸದ್ಭಾವನೆ ಇಲ್ಲದಿರುವುದಕ್ಕೆ ಒಂದು ನಿರ್ದಿಷ್ಟ ಕಾರಣವಿದೆ. ಎರಡು ತರಹದ ರಾಜಕಾರಣಿಗಳು ಸ್ವಾತಂತ್ರ್ಯೋತ್ತರ ಪೀಳಿಗೆಗಳ ಮುಂದೆ ನಿಂತರು. ಇಪ್ಪತ್ತನೇ ಶತಮಾನದ ಪೂರ್ವಾರ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟದ ಕಾಲವಾಯಿತು. ಆ ಹೋರಾಟ ನೂರಕ್ಕೆ ನೂರರಷ್ಟು ರಾಜಕೀಯ ಪ್ರಕ್ರಿಯೆಯಾಗಿತ್ತು. ಮಹಾತ್ಮಗಾಂಧಿಯವರು ಆ ಹೋರಾಟದ ಸಮಯದಲ್ಲಿಯೇ ಪಾನನಿರೋಧ, ಖಾದಿಪ್ರಚಾರ, ಕುಟೀರ ಕೈಗಾರಿಕೆ ಅಭಿವೃದ್ಧಿ, ಹರಿಜನೋದ್ಧಾರ, ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಪ್ರತಿಪಾದಿಸಿದರು. ಅವುಗಳಲ್ಲಿ ತೊಡಗುವಂತೆ ಕಾರ್ಯಕರ್ತರನ್ನು ಪ್ರೇರೇಪಿಸಿದರು. ಆದರೆ ಆಗಿನ ಹೋರಾಟ ಮೂಲಭೂತವಾಗಿ ರಾಜಕೀಯ ಹೋರಾಟವಾಗಿತ್ತು. ರಾಜಕೀಯ ಸ್ವಾತಂತ್ರ್ಯ ಆ ಹೋರಾಟದ ಮುಖ್ಯ ಗುರಿಯಾಗಿತ್ತು. ಆ ಹೋರಾಟದಲ್ಲಿ ಮುಖಂಡತ್ವ ವಹಿಸಿದವರು ರಾಜಕಾರಣಿಗಳಾದರು. ಆಧುನಿಕ ಭಾರತದಲ್ಲಿ ರಾಜಕಾರಣಿಗಳು ಅಂದಾಗ ಈ ನಾಯಕರುಗಳ ಚಿತ್ರವೇ ಜನರ ಮನಸ್ಸಿನಲ್ಲಿ ಪ್ರಧಾನವಾಗಿ ಮೂಡಿಬರುವುದು.

ಆಗಿನ ರಾಜಕಾರಣಿಗಳು ರಾಜಕಾರಣದಿಂದ ಗಳಿಸಿದುದಕ್ಕಿಂತಲೂ (ವೈಯಕ್ತಿಕವಾಗಿ) ಕಳೆದುಕೊಂಡದ್ದೇ ಹೆಚ್ಚು. ಸ್ವಾತಂತ್ರ್ಯಾನಂತರ ಸಹಜವಾಗಿಯೇ ಕ್ರಮೇಣ ಆ ನಾಯಕ ಗಣ ಕ್ಷಯಿಸುತ್ತಾ ಹೋಯಿತು. ಅಂಥ ರಾಜಕಾರಣಿಗಳನ್ನು

ಬಹು ಮಂದಿ ಭಾರತೀಯರು ಐವತ್ತು, ಅರುವತ್ತರ ದಶಕದ ವರೆಗೆ ನೋಡಿದ್ದರು. ಅನಂತರದ ಪೀಳಿಗೆ ಅಂಥವರ ಬಗ್ಗೆ ಕೇಳಿತ್ತು. ರಾಜಕಾರಣಿಗಳ ಹೊಸ ಪೀಳಿಗೆಯೂ ಬಂತು. ಅಧಿಕಾರಕ್ಕಾಗಿ ಕಚ್ಚಾಟ ಆರಂಭವಾಯಿತು. ಜನ ಆಗ ಎರಡೂ ರೀತಿಯ ರಾಜಕಾರಣಿಗಳನ್ನು ಪರಸ್ಪರ ಹೋಲಿಸಿದರು.ರಾಜಕಾರಣದ ಬಗ್ಗೆ, ರಾಜಕಾರಣಿಗಳ ಬಗ್ಗೆ ಭ್ರಮನಿರಸನ ಆರಂಭವಾಯಿತು. ಹೊಸಬರಲ್ಲಿ ರಾಜಕಾರಣದಿಂದ ಗಳಿಸಲು ಹೊರಟಿರುವವರೇ ಹೆಚ್ಚು ಎನ್ನುವ ಭಾವನೆ ಜನರಲ್ಲಿ ಮೂಡಿದಾಗ ಬೇಸರವಾಯಿತು.

ಒಳ್ಳೆಯದಾಗಲೀ, ಕೆಟ್ಟದ್ದಾಗಲೀ ಯಾವುದೇ ಒಂದು ಅಭಿಪ್ರಾಯ ಸಾರ್ವತ್ರಿಕವಾಗಿ ಅನ್ವಯವಾಗುವುದಿಲ್ಲ. ಎಲ್ಲರಿಗೂ ಒಂದೇ ಮಂತ್ರ ಯಾವ ಕಾಲಕ್ಕೂ ಸರಿಯಲ್ಲ. ಹಿಂದೆ ಇದ್ದ ರಾಜಕಾರಣಿಗಳಲ್ಲಿ ನೂರಕ್ಕೆ ನೂರು ಮಂದಿ ದೇವತೆಗಳಾಗಿರಲಿಲ್ಲ. ಆಗಲೂ ಒಳಸಂಚುಗಳು ನಡೆದಿರಲಿಲ್ಲವೆ? ಈಗ ನೂರಕ್ಕೆ ನೂರರಷ್ಟು ರಾಜಕಾರಣಿಗಳು ಪಾಪಿಗಳು ಅಂತಲೂ ಅಲ್ಲ.

ರಾಜಕೀಯ ಸಂಸ್ಕೃತಿ

ಸ್ವಾತಂತ್ರ್ಯಾನಂತರ ಹೆಚ್ಚು ಮಂದಿ ಗಮನಿಸದ ಒಂದು ಅಂಶವಿದೆ. ಹಳೆಯ ಸ್ವಾತಂತ್ರ್ಯಯೋಧರೆಲ್ಲಾ ಸ್ವಾತಂತ್ರ್ಯಾನಂತರದ ಹತ್ತು ವರ್ಷಗಳಲ್ಲಿಯೇ ಹಠಾತ್ತನೇ ಕಣ್ಮರೆಯಾಗಲಿಲ್ಲ.ಬಹುಮಂದಿ ದೃಶ್ಯದಿಂದ ಬದಿಗೆ ಸರಿದರು ಅಷ್ಟೇ. ಹೊಸ ರಾಜಕಾರಣಿಗಳ ಪ್ರವಾಹವನ್ನು ಎದುರಿಸಿ ಉಳಿಯುವ ಸಾಮರ್ಥ್ಯ ಅವರುಗಳಿಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಇರದಿದ್ದ ಒಂದು ರಾಜಕೀಯ ಸಂಸ್ಕೃತಿ ದೇಶವನ್ನೆಲ್ಲಾ ಆವರಿಸಿತು. ಚುನಾವಣೆ, ಅಧಿಕಾರ ಸ್ಥಾನಗಳು, ಹಣದ ಪ್ರಭಾವವೇ ಪ್ರಧಾನವಾಗುತ್ತಿದ್ದಂತೆಯೇ ಬಹುಮಂದಿ ಸ್ವಾತಂತ್ರ್ಯ ಯೋಧರಿಗೆ ಸ್ಥಳವಿಲ್ಲದಂತಾಯಿತು. ಅದು ಭಾರತದ ರಾಜಕಾರಣದ ಒಂದು ದುರಂತ. ಅವರುಗಳು ಸಕ್ರಿಯವಾಗಿದ್ದಿದ್ದರೆ, ರಾಷ್ಟ್ರದ ಆಗುಹೋಗುಗಳ ಮೇಲೆ ಪ್ರಭಾವ ಬೀರಿದ್ದರೆ ಇಂದಿನ ರಾಜಕೀಯ ಸ್ಥಿತಿಯೇ ಬೇರೆ ಇರುತ್ತಿತ್ತು.

ಕೇಂದ್ರದಲ್ಲಿ ಸಾಕಷ್ಟು ಕಾಲ ಹಿರಿಯ ರಾಜಕಾರಣಿಗಳು ದೇಶದ ಹಣೆಯ ಬರಹವನ್ನು ನಿರ್ಧರಿಸುವ ಕಾರ್ಯದಲ್ಲಿ ತೊಡಗಿದ್ದರು. ಅವರೆಲ್ಲಾ ಕೇಂದ್ರಕ್ಕೆ ಹೋದರು ಅಂತಲೇ ರಾಜಕೀಯವಾಗಿ ರಾಜ್ಯಗಳು ಬಡವಾದವು. ಕೇಂದ್ರಕ್ಕೆ ಹೋಗುವುದೆಂದರೆ ರಾಜ್ಯಗಳಲ್ಲಿ ಬಹುಮಟ್ಟಿಗೆ ಜನಸಂಪರ್ಕ ಕಳೆದುಕೊಳ್ಳುವುದು.

ರಾಜಕಾರಣ ಅನ್ನುವುದು ದೇಶದ ನಿರ್ವಹಣೆಯ ಸಾಧನವೋ, ಸೂತ್ರವೋ, ತತ್ವವೋ, ಕಲೆಯೋ, ಆಗುವುದಾದರೆ ಜನರ ದೃಷ್ಟಿಯಲ್ಲಿ ಅದು ಇಷ್ಟು ಕೀಳಾಗಿ ಕಾಣಬೇಕು ಏಕೆ? ರಾಜಕಾರಣವನ್ನು ದೇಶದ, ಸಮಾಜದ, ಸರಕಾರದ ನಿರ್ವಹಣೆಗಾಗಿಯಷ್ಟೇ ಒಂದು ಸಾಧನವನ್ನಾಗಿ ಮಾಡಿಕೊಂಡಿದ್ದರೆ ಈಗಿನಂತೆ ಅದು ಕಂಡಿರುತ್ತಿರಲಿಲ್ಲ. ಅದು ವೈಯಕ್ತಿಕ ಆಸೆ, ಆಕಾಂಕ್ಷೆ, ದುರಾಸೆ ಈಡೇರಿಕೆಯ ಸಾಧನವೂ ಆದಾಗ ರಾಜಕಾರಣದ ಸ್ವರೂಪ ಬದಲಾಯಿತು. ರಾಜಕೀಯ ವ್ಯವಸ್ಥೆಯ

ಅಂಗಗಳನ್ನು ಒಂದೊಂದಾಗಿ ಉರುಳಿಸಿದಾಗ ಇಲ್ಲವೆ ದುರ್ಬಲಗೊಳಿಸಿದಾಗ ರಾಜಕಾರಣ ಅನ್ನುವುದು ಗುರುತಿಸಲಾಗದಷ್ಟು ಬದಲಾಗಿಹೋಯಿತು.

ರಾಜಕಾರಣದ ವ್ಯಾಪ್ತಿಯನ್ನು ಯಾರೂ ಗುರುತಿಸಿ ಇಲ್ಲಿಂದ ಆರಂಭ, ಇಲ್ಲಿಗೆ ಕೊನೆ ಎಂದು ನಿಗದಿ ಮಾಡುವಂತಿಲ್ಲ. ಅದರೊಂದಿಗೆ, ಇದರೊಂದಿಗೆ ರಾಜಕಾರಣವನ್ನು ಬೆರೆಸಬಾರದೆನ್ನುವ ಮನವಿಗಳನ್ನು ರಾಜಕಾರಣಿಗಳೇ ಮಾಡಿಕೊಳ್ಳುತ್ತಾರೆ. ಆದರೆ ಈ ಮನವಿಗಳು ಬಹುಮಟ್ಟಿಗೆ ಅನುಕೂಲಸಿಂಧು. ಭಾರತದಂಥ ದೇಶದಲ್ಲಿ, ಈಗಿನಂಥ ಸ್ಥಿತಿಯಲ್ಲಿ ರಾಜಕೀಯದಿಂದ ದೇಶದ ಮುಂದಿನ ಯಾವುದೇ ಸಮಸ್ಯೆಯನ್ನು ಪ್ರತ್ಯೇಕಗೊಳಿಸುವುದು ಸುಲಭವಲ್ಲ. ನೂರಕ್ಕೆ ನೂರರಷ್ಟು ಖಾಸಗಿ ವಿಷಯವಾಗಬೇಕಾಗಿದ್ದ ಪೂಜೆ ಮತ್ತು ಪ್ರಾರ್ಥನೆಯಲ್ಲಿ ಕೂಡ ರಾಜಕೀಯ ಬೆರೆತು ಹೋಗಿದೆ.

ಇಂದು 'ಮಂದಿರದ' ಪ್ರಶ್ನೆ ಅತಿ ಕ್ಲಿಷ್ಟ ರಾಜಕೀಯ ಸಮಸ್ಯೆಯಾಗಿದೆ. ಈ ಬೆಳವಣಿಗೆ ರಾಜಕಾರಣಿಗಳ ವೈಫಲ್ಯದ ಒಂದು ಸಂಕೇತ. ಈ ಸಮಸ್ಯೆಗೆ ಒಂದು ಗುಂಪಿನ ರಾಜಕಾರಣಿಗಳು ಬೇರೊಂದು ಗುಂಪಿನ ರಾಜಕಾರಣಿಗಳನ್ನು ಹೊಣೆ ಮಾಡಬಹುದು. ಅದು ಬೇರೆ ಮಾತು. ಆದರೆ ಎಂದೆಂದೂ ರಾಜಕೀಯ ವಿಷಯ ಆಗಬಾರದಾಗಿದ್ದ ಒಂದು ವಿಷಯ ರಾಷ್ಟ್ರದ ಏಕತೆ, ಭದ್ರತೆಗೇ ಸವಾಲು ಒಡ್ಡುವಂಥ ಒಂದು ರಾಜಕೀಯ ಬಿಕ್ಕಟ್ಟಾಗಿದೆ. ಇದು ರಾಜಕೀಯ ಆಶೋತ್ತರಗಳು ದೇಶವನ್ನು ಎಲ್ಲಿಗೆ ಕೊಂಡೊಯ್ಯಬಹುದು ಎನ್ನುವುದಕ್ಕೆ ಒಂದು ಉದಾಹರಣೆ.

ದೇಶದ ಹಿತೈಷಿಗಳು ಕೆಲವರು ಆಗಾಗ ಒಂದು ವಿಷಾದ ವ್ಯಕ್ತಪಡಿಸುತ್ತಿರುತ್ತಾರೆ. ರಾಷ್ಟ್ರದ ರಾಜಕಾರಣದಲ್ಲಿ ಬಹುಮಂದಿ, ಅದರಲ್ಲಿಯೂ ಬುದ್ಧಿಜೀವಿಗಳು ಸಕ್ರಿಯವಾಗಿ ಭಾಗವಹಿಸುವುದಿಲ್ಲ ಅನ್ನುವುದು ಅಂಥವರ ಕೊರಗು. ಬುದ್ಧಿಜೀವಿಗಳಿಗೆ ರಾಜಕಾರಣ ಬೇಡ ಅಂತಲ್ಲ. ಆದರೆ ಈಗಿನ ರಾಜಕಾರಣದ "ದಾಂಧಲೆಗೆ" ಅವರು ಹೊಂದಿಕೊಳ್ಳಲಾರರು. ಎಲ್ಲ ಬುದ್ಧಿಜೀವಿಗಳೂ ರಾಜಕಾರಣದಿಂದ ದೂರವಿದ್ದಾರೆ ಅಂತಲೂ ಅಲ್ಲ. ಈಗಲೂ ಅನೇಕರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಆದರೆ ರಾಜಕಾರಣ ಕೆಲವು ಸಂದರ್ಭಗಳಲ್ಲಿ ಮಾಡಿದ "ಹಾವಳಿಯನ್ನು" ತಪ್ಪಿಸುವುದರಲ್ಲಿ ಅವರು ವಿಫಲಗೊಂಡಿದ್ದಾರೆ, ಇಲ್ಲವೇ ಪ್ರಜ್ಞಾಪೂರ್ವಕವಾಗಿ ಅದರಲ್ಲಿ ಭಾಗಿಯಾಗಿದ್ದಾರೆ.

ರಾಜಕಾರಣ ಮತ್ತು ರಾಜಕಾರಣಿಗಳು ಸಂಸದೀಯ ಜನತಂತ್ರಕ್ಕೆ ಅಗತ್ಯ ಅಷ್ಟೇ ಅಲ್ಲ, ಅನಿವಾರ್ಯ. ಇಲ್ಲವಾದರೆ ಗೊಂದಲ. ಆದರೆ "ರಾಜಕೀಕರಣ "ಎಲ್ಲಿ ಮುಗಿಯಬೇಕು ಅನ್ನುವುದೇ ಪ್ರಶ್ನೆ. ರಾಜಕಾರಣವೇ ಒಂದು ಅನಿಷ್ಟ ಅನ್ನುವಂತೆ ಹಳಿಯುವುದರಲ್ಲಿ ಅರ್ಥವಿಲ್ಲ. ರಾಜಕಾರಣಿಗಳನ್ನೆಲ್ಲಾ ಸಾರಾಸಗಟು ಖಂಡಿಸಿ ತಳ್ಳಿ ಹಾಕುವುದು ಅಪಾಯಕಾರಿ.ಆದರೆ ರಾಜಕಾರಣದ ಹೆಸರಿನಲ್ಲಿ ಈಗ ಬೆಳೆದಿರುವ ಪ್ರವೃತ್ತಿಯನ್ನು ರಾಜಕಾರಣ ಎಂದು ಒಪ್ಪಿಕೊಳ್ಳುವುದೂ ಅಪಾಯ.

ಸರಿಯೋ ತಪ್ಪೋ ಜನಸಾಮಾನ್ಯರಲ್ಲಿ ಈಗಿನ ವ್ಯವಸ್ಥೆಯಲ್ಲಿ ಸಂಶಯ ಹರಡುತ್ತಿದೆ. ಎಲ್ಲಿ ರಾಜಕೀಯದ ಸೋಂಕು ಇರಬಾರದೊ ಅಲ್ಲಿ ರಾಜಕೀಯವನ್ನು ಕಾಣಲಾಗುತ್ತಿದೆ. ರಾಷ್ಟ್ರದಲ್ಲಿ ನ್ಯಾಯನಿರ್ವಹಣೆಯ ವ್ಯವಸ್ಥೆಯೂ ಈ ಸಂಶಯದಿಂದ ಮುಕ್ತವಲ್ಲ. ರಾಜಕೀಯ ಸೋಂಕಿನಿಂದಾಗಿ ನ್ಯಾಯನಿರ್ವಹಣೆ ವ್ಯವಸ್ಥೆಯಲ್ಲಿಯೇ ಜನರಿಗೆ ವಿಶ್ವಾಸ ಕರಗುತ್ತಿದೆಯೆಂದರೆ ನೂರಕ್ಕೆ ನೂರರಷ್ಟು ರಾಜಕೀಯ ಕ್ಷೇತ್ರವಾದ ಸಾರ್ವಜನಿಕ ಜೀವನದ ವಿಷಯದಲ್ಲಿ ಜನಾಭಿಪ್ರಾಯ ಏನೆಂಬ ಬಗೆಗೆ ಅನುಮಾನವಿರಲು ಸಾಧ್ಯವಿಲ್ಲ. ಜನ "ಅಸಹಾಯಕರಾಗಿ" ಹತಾಶಗೊಂಡಿದ್ದಾರೆ. ಪ್ರಮುಖ ನ್ಯಾಯಮೂರ್ತಿಯೊಬ್ಬರೇ "ಪವಿತ್ರ ನ್ಯಾಯಾಂಗದ ಆವರಣದಲ್ಲಿಯೇ ಈಗ ಭ್ರಷ್ಟಾಚಾರ ವ್ಯಾಪಕವಾಗಿದೆ" ಎಂದು ದುಃಖಿಪಟ್ಟರೆಂದರೆ ಜನ ನ್ಯಾಯಾಂಗದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದರೆ ಆಶ್ಚರ್ಯವಿಲ್ಲ.

ಇಂದಿನ ಸ್ಥಿತಿಗೆ ಜನರೂ ತಮ್ಮ ಹೊಣೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆಡಳಿತದ ಪವಿತ್ರ ಅಂಗಗಳನ್ನೂ ದುಃಸ್ಥಿತಿಗೆ ತರುತ್ತಿರುವವರನ್ನು ಅಧಿಕಾರಕ್ಕೆ ತರುತ್ತಿರುವವರು ಜನರೇ. ಜನ ತಮ್ಮ ಸುತ್ತ ನಡೆಯುತ್ತಿರುವುದರ ಬಗ್ಗೆ ಹೆಚ್ಚು ಜಾಗೃತರಾಗಿರಬೇಕಾಗಿದೆ.

ರಾಜಕಾರಣಿಗಳು ಮತಗಳಿಕೆಗೆ ಯಾವ ಮಟ್ಟಕ್ಕಿಳಿದಿದ್ದಾರೆ ಎಂದರೆ ಒಬ್ಬ ರಾಜಕಾರಣಿ ತಾನು ಅಧಿಕಾರಕ್ಕೆ ಬಂದರೆ ಅಧಿಕಾರ ವಹಿಸಿಕೊಂಡ ಹದಿನೈದು ನಿಮಿಷಗಳಲ್ಲಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಸಾಮೂಹಿಕವಾಗಿ ಕಾಪಿ ಮಾಡುವುದನ್ನು ತಪ್ಪಿಸಲು ಹಿಂದಿನ ಸರಕಾರ ತಂದಿದ್ದ ಸುಗ್ರೀವಾಜ್ಞೆಯನ್ನು ವಾಪಸ್ ಪಡೆಯುವ ಭರವಸೆ ನೀಡಿದ್ದಾರೆ. ಇಂಥ ಭರವಸೆಯನ್ನು ಆ ರಾಜಕಾರಣಿ ನೀಡುವ ಧೈರ್ಯ ಮಾಡಿದ್ದು ಹೇಗೆ? ಈಗಿನ ವಾತಾವರಣ. ಇಂಥ ಭರವಸೆಯೇ ಆ ನಾಯಕನನ್ನು ತಿರಸ್ಕರಿಸಲು ಕಾರಣ ಆಗಬೇಕು. ರಾಜಕಾರಣ ಅನ್ನುವುದು ಕಲುಷಿತಗೊಂಡಿರದಿದ್ದರೆ. ಇಂಥ ಭರವಸೆ ತನಗೆ ಜನಬೆಂಬಲ ತರುವುದೆನ್ನುವ ಧೈರ್ಯ ಆ ನಾಯಕನಿಗೆ. ಇದು ಇಂದಿನ ಸ್ಥಿತಿಯ ವ್ಯಾಖ್ಯಾನ.

ತಾತ್ವಿಕ ಆಧಾರ

ರಾಜಕಾರಣ ಎಂದರೆ ಅದು ತಾತ್ವಿಕ ಆಧಾರದ ಮೇಲೆ ನಿಲ್ಲಬೇಕು. ಹಾಗೆ ನಿಂತಾಗ ಕೆಲವು ತತ್ವಗಳಿಗೆ, ಶಿಷ್ಟಾಚಾರಗಳಿಗೆ, ಸಾರ್ವತ್ರಿಕ ಕಲ್ಯಾಣದ ಕೆಲವು ಕಾರ್ಯಕ್ರಮಗಳಿಗೆ ಬದ್ಧತೆ ರಾಜಕಾರಣಿಗಳ ಕನಿಷ್ಠ ಅರ್ಹತೆಯಾಗುತ್ತದೆ. ಇಂದು ಆ ಬದ್ಧತೆ ಇಲ್ಲದಿರುವುದರಿಂದಲೇ ರಾಜಕಾರಣಿಗಳು ನಿಸ್ಸಂಕೋಚವಾಗಿ ಬೆಳಗ್ಗೆ ಒಂದು ಬಾರಿ, ಸಂಜೆ ಒಂದು ಬಾರಿ ಪಕ್ಷಾಂತರ ಮಾಡಲು ಸಾಧ್ಯವಾಗಿದೆ. ಇಲ್ಲಿ ಪಕ್ಷಾಂತರಿಗಳಲ್ಲಿಯಷ್ಟೇ ಅಲ್ಲ ತತ್ವನಿಷ್ಠೆಯ ಅಭಾವ ಇರುವುದು ಆ ಪಕ್ಷಾಂತರಿಗಳನ್ನು ಸೇರಿಸಿಕೊಳ್ಳುವುದರಲ್ಲಿಯೂ ಸೈದ್ಧಾಂತಿಕ ಅನೈತಿಕತೆ ಇದೆ. ಪಕ್ಷಾಂತರಿಗಳು ಕೆಲವೇ ಗಂಟೆಗಳ ಹಿಂದೆ ಯಾವ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸಿರುತ್ತಾರೆ. ಆ ಪಕ್ಷವೇ

ಪಕ್ಷಾಂತರಿಗಳನ್ನು ಸೇರಿಸಿಕೊಳ್ಳುತ್ತದೆ. ಪಕ್ಷಾಂತರವನ್ನು ಆಮಿಷಗಳ ಮೂಲಕ ಪ್ರಚೋದಿಸುತ್ತದೆ ಕೂಡ. ಇದು ಪಕ್ಷದ ಸಮಯಸಾಧಕತನವಾದರೆ, ಪಕ್ಷಾಂತರಿಗಳ ವರ್ತನೆ ಮತದಾರರ ವಂಚನೆ. ಮತದಾರರು ಆ ಪಕ್ಷದ ವಿರುದ್ಧ ಮತ ನೀಡಿರುವಾಗ ಆ ಪಕ್ಷವನ್ನು ದಿಢೀರನೆ ಬೆಂಬಲಿಸುವುದು ಗೆದ್ದ ಅಭ್ಯರ್ಥಿಯಿಂದ ಮತದಾರನಿಗೆ ಆಗುವ ದ್ರೋಹ. ಈ ಸಮಯ ಸಾಧಕತನಕ್ಕೆ ರಾಜಕೀಯ ಭದ್ರತೆಯ ನೆಪ.

ಇವೆಲ್ಲ ರಾಜಕಾರಣದ ಹೆಸರಿನಲ್ಲಿ ನಡೆಯುತ್ತವೆ ಎನ್ನುವುದು ರಾಜಕಾರಣದ ದುರಂತ.

ಸ್ವಾತಂತ್ರ್ಯಾನಂತರ ಡಾ. ರಾಮಮನೋಹರಲೋಹಿಯ ಅವರೊಬ್ಬರು ಸಂಘಟನೆ ಮೂಲಕ ನೈಜ ಮತ್ತು ತತ್ವನಿಷ್ಠ ರಾಜಕಾರಣವನ್ನು ಬೆಳೆಸಲು ಶ್ರಮಿಸಿದರು. ದುರದೃಷ್ಟವಶಾತ್ ಆ ಸಂಘಟನೆಗೆ ಜನ ಸಮೂಹದ ಬೆಂಬಲ ಸಿಗಬೇಕಾದಷ್ಟು ಸಿಗಲಿಲ್ಲ. ೧೯೭೭ರ ನಂತರದ ರಾಜಕಾರಣದ ಮೂಸೆಯಲ್ಲಿ ಲೋಹಿಯಾ ವಾದ ಕರಗಿಹೋಯಿತು.

ಲೋಹಿಯಾರವರ ಆಗಿನ ವಾದವನ್ನು ದೇಶ ಪುರಸ್ಕರಿಸಿದ್ದರೆ ಈಗಿನ ಮಂಡಲದ ಅಗತ್ಯವೂ ಇರುತ್ತಿರಲಿಲ್ಲ, ಕೋಮುವಾದಕ್ಕೂ ಈಗಿನಷ್ಟು ಅವಕಾಶವಿರುತ್ತಿರಲಿಲ್ಲ. ಮಹಿಳೆಯರ ಸಾಮಾಜಿಕ ಸ್ಥಿತಿ ಈಗಿನಂತೆ ಎಷ್ಟೋ ಉತ್ತಮವಾಗಿರುತ್ತಿತ್ತು. ತಾತ್ವಿಕವಾಗಿ ಎಡ ರಾಜಕಾರಣ ಹೆಚ್ಚು ರಾಜಿ ಮಾಡಿಕೊಳ್ಳಲಿಲ್ಲ. ಕಮ್ಯುನಿಸ್ಟರು ಪ್ರತಿನಿಧಿಸುವ ಆರ್ಥಿಕ ಮತ್ತು ರಾಜಕೀಯ ಸಿದ್ಧಾಂತ ಹೆಚ್ಚು ವ್ಯಾಪಕವಾಗಿ ಜನಕ್ಕೆ ಒಪ್ಪಿಗೆಯಾಗಿರದಿದ್ದರೆ ಅದಕ್ಕೆ ಐತಿಹಾಸಿಕ ಕಾರಣಗಳಿವೆ.

ಏನೇನೋ ಕಾರಣಗಳಿಂದ ಭಾರತದ ಇಂದಿನ ರಾಜಕಾರಣ ಗೊಂದಲಮಯವಾಗಿ ಹೋಗಿದೆ. ತುಂಬ ಅಹಿತಕರವಾದ ಪ್ರವೃತ್ತಿಗಳು ಕಾಣಿಸಿಕೊಂಡಿವೆ. ಇದರಿಂದ ಬಹುಮಂದಿ ನಿರಾಶೆಗೊಂಡಿರುವುದು ನಿಜ. ಆದರೆ ಈ ಅಸಾಧು ಹಾದಿಯಲ್ಲಿ ಭಾರತದ ರಾಜಕಾರಣ ಹಿಂತಿರುಗಲಾರದಷ್ಟು ದೂರ ಹೋಗಿದೆಯೆಂದು ಹತಾಶರಾಗಿ ಈ ದೇಶದ ಜನ ಕೈಕಟ್ಟಿಕೂಡುವ ಅಗತ್ಯವಿಲ್ಲ. ಸಂತೋಷಜನಕವಲ್ಲ ಎಂದ ಮಾತ್ರಕ್ಕೆ ಸರಿಪಡಿಸಲು ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬರುವುದು ಸಲ್ಲ. ದೇಶದ ಹಿತೈಷಿಗಳಲ್ಲಿ ಆತಂಕವಿದೆ ಎನ್ನುವುದೇ ಇದ್ದದ್ದರಲ್ಲಿ ಸಮಾಧಾನದ ಅಂಶ. ಇಂಥ ಜನ ತಮ್ಮ ಆತಂಕವನ್ನು ಖಾಸಗಿಯಾಗಿ ಕೊರಗುವುದಷ್ಟಕ್ಕೇ ಸೀಮಿತಗೊಳಿಸಿದರೆ ಅಂಥ ಆತಂಕಕ್ಕೆ ಅರ್ಥವಿಲ್ಲ. ಏನಾದರೂ ಮಾಡಲು ವ್ಯವಧಾನ ಇರುವುದರಿಂದ ಏನಾದರೂ ರಚನಾತ್ಮಕವಾದುದನ್ನು ಜನ ನಿರೀಕ್ಷಿಸುತ್ತಾರೆ. ಏನು ಮಾಡಿದರೂ ಒಂದು ರಾಜಕೀಯ ಕ್ರಿಯೆಯಾಗಿಯೇ ಮಾಡಬೇಕಾಗುತ್ತದೆ. ಅದು ಈಗಿನ ರಾಜಕಾರಣವನ್ನು ಬದಲಾಯಿಸಬಹುದು. ಬದಲಾಯಿತೆಂದು ಯಾರೂ ಕಣ್ಣೀರಿಡುವುದಿಲ್ಲ.

ತಮ್ಮ ಅನಿಸಿಕೆಗೆ ಧ್ವನಿಕೊಡುವವರಾದರೂ ಕ್ರಿಯಾಶೀಲರಾಗಬೇಕು ಅಷ್ಟೇ. ಅನಿವಾರ್ಯವಾದ ರಾಜಕಾರಣವನ್ನು ತತ್ವನಿಷ್ಠವನ್ನಾಗಿ ಮಾಡುವುದಷ್ಟೇ ಈಗ ಆಗಬೇಕಾಗಿರುವುದು. ನೆಪೋಲಿಯನ್ ಬೋನಪಾರ್ಟ್ ಹೇಳಿದ "ನಿಮ್ಮ ಅಭಿಪ್ರಾಯವನ್ನು ಒಪ್ಪದಿರುವವರಿಗೆ ನೀವು ಹೆದರಬೇಕಾದ್ದಿಲ್ಲ. ನಿಮ್ಮ ಅಭಿಪ್ರಾಯವನ್ನು ಒಪ್ಪದೆ ಒಪ್ಪುವುದಿಲ್ಲ ಅನ್ನುವುದನ್ನು ನಿಮಗೆ ಹೇಳಲಾರದ ಹೇಡಿಗಳಿಗೆ ಹೆದರಬೇಕು".

ರಾಜಕಾರಣದ ಒಟ್ಟು ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಸಂಸ್ಕೃತಿಯನ್ನು ಕುರಿತು ನೋಡುವುದು ಸಂಗತ ಕೆಲಸ. ೧೯೯೨ - ಕರ್ನಾಟಕ ಭಾರಿ ರಾಜಕೀಯ ತುಮುಲವನ್ನು ಕಂಡ ವರ್ಷ. ಈ ತುಮುಲ ವರ್ಷದ ಕೊನೆಯಲ್ಲಿ ಸರಕಾರದ ಬದಲಾವಣೆಯಲ್ಲಿ ಪರ್ಯವಸನಾನಗೊಂಡಿತು. ಆಡಳಿತ ಪಕ್ಷದಲ್ಲಿನ ಭಿನ್ನಮತ ಸರ್ಕಾರವನ್ನು ಬದಲಾಯಿಸುವುದರಲ್ಲಿ ಯಶಸ್ವಿಯಾಯಿತು.

ಅಂತೂ ೧೯೯೨ರ ನವೆಂಬರ್‌ನಲ್ಲಿ ಬಂಗಾರಪ್ಪನವರಿಗೆ ಅಧಿಕಾರದ ನಷ್ಟವಾಯಿತು. ಮತ್ತೊಬ್ಬ ಹಿಂದುಳಿದ ವರ್ಗದ ನಾಯಕ ಮೂಡಬಿದ್ರೆ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿ ಆದರು.

೧೯೯೨ರ ಡಿಸೆಂಬರ್ ೬ ರಂದು ಆಯೋಧ್ಯೆಯಲ್ಲಿ ಬಾಬ್ರಿ ಮಸೀದಿಯ ನೆಲಸಮದ ನಂತರ ದೇಶದ ನಾನಾ ಭಾಗಗಳಲ್ಲಿ ಆದಂತೆ ಕರ್ನಾಟಕದಲ್ಲಿಯೂ ಅನೇಕ ಕಡೆಗಳಲ್ಲಿ ಪ್ರಕ್ಷುಬ್ಧತೆ ಹರಡಿತ್ತು. ಆದನ್ನು ಬಿಟ್ಟರೆ ೧೯೯೨ ಶಾಂತಿ ಮತ್ತು ಕಾನೂನು ಪಾಲನೆ ದೃಷ್ಟಿಯಿಂದ ಕರ್ನಾಟಕಕ್ಕೆ ನೆಮ್ಮದಿಯ ವರ್ಷವಾಯಿತು. ಅದರ ಹಿಂದಿನ ವರ್ಷ ಕಾವೇರಿ ಜಲಹಂಚಿಕೆ ವಿವಾದ ಬೆಂಗಳೂರು ಮತ್ತಿತರ ಕಡೆಗಳಲ್ಲಿ ಗಲಭೆಗಳಿಗೆ ಕಾರಣವಾಯಿತು. ೧೯೯೨ರಲ್ಲಿ ಕಾವೇರಿ ವಿವಾದವೇನೂ ಬಗೆಹರಿಯಲಿಲ್ಲ. ಆದರೆ ಕಾವೇರಿ ಮತ್ತೆ ಹತ್ತಿ ಉರಿಯಲಿಲ್ಲ.

೧೯೯೨ರಲ್ಲಿ ರಾಜ್ಯದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅವಧಿ ಮುಗಿಯಿತು. ಆದರೆ ನಡೆಯಬೇಕಾಗಿದ್ದ ಚುನಾವಣೆಗಳು ನಡೆಯಲಿಲ್ಲ. ವರ್ಷ ಮುಗಿದಾಗ ಚುನಾವಣೆಗಳು ಎಂದು ನಡೆಯುವುದೆಂಬುದೂ ಖಚಿತವಾಗಿರಲಿಲ್ಲ.

●

* * *

ಕೋಮು ಗಲಭೆಗಳು

— *ಮೀನಾ ಮೈಸೂರು*

"ಓಂ ಸಹನಾऽವವತು, ಸಹನೌ ಭುನಕ್ತು,
ಸಹವೀರ್ಯಂ, ಕರವಾವಹೈ,
ತೇಜಸ್ವಿನಾऽವಧೀತಮಸ್ತು ಮಾ ವಿದ್ವಿಷಾವಹೈ"

ಹೀಗೆಂದು ಶಾಂತಿಮಂತ್ರದ ಗುಟ್ಟನ್ನು ಇಡೀ ಜಗತ್ತಿಗೇ ಸಾರಿದ ಭಾರತವು "ಸರ್ವೇಜನಾಃ ಸುಖಿನೋ ಭವಂತು" ಎನ್ನುತ್ತ ಅನಾದಿಕಾಲದಿಂದಲೂ ಎಲ್ಲ ಧರ್ಮಗಳನ್ನೂ ಸಮಭಾವ, ಸೌಹಾರ್ದಗಳಿಂದ ನಡೆಸಿಕೊಂಡು ಬಂದಿದೆ. ಭಾರತ ಎಂದೂ ಯಾವ ಧರ್ಮವನ್ನೂ ನಿರಾಕರಿಸದೆ ಸ್ವೀಕರಿಸುತ್ತಾ ಬಂದಿರುವುದು ಅದರ ಸಹನಾ ಶೀಲತೆಗೆ ಸಾಕ್ಷಿಯಾಗಿದೆ. ಇಲ್ಲಿ ಜೈನಧರ್ಮ, ಬೌದ್ಧಧರ್ಮ, ವೀರಶೈವಧರ್ಮ, ಸಿಖ್ ಧರ್ಮಗಳು ಹುಟ್ಟಿದವು. ಹೊರಗಿನಿಂದ ಇಸ್ಲಾಂ ಧರ್ಮ, ಕ್ರೈಸ್ತಧರ್ಮಗಳ ಆಗಮನವಾಯ್ತು. ಕೆಲವು ವ್ಯಾಪಕವಾಗಿ ಪ್ರಭಾವ ಬೀರಿ ಕೆಲಕಾಲ ಬದುಕಿದವು. ಇಲ್ಲೇ ಹುಟ್ಟಿದ ಬೌದ್ಧಧರ್ಮ ಹೊರಹೋಗಿ ಇಲ್ಲಿ ಅಸ್ತಿತ್ವವೇ ಇಲ್ಲದಂತಾಯ್ತು. ಜೈನಧರ್ಮ ಕ್ಷೀಣಿಸಿತು. ಮುಸ್ಲಿಂ ರಾಜರುಗಳ ಆಳ್ವಿಕೆಯಿಂದಾಗಿ ಇಸ್ಲಾಂ ಧರ್ಮ ಇಲ್ಲಿ ಪ್ರಭಾವ ಬೀರಿತು. ಇತರ ಧರ್ಮಗಳ ಗಾಢ ಪ್ರಭಾವಕ್ಕೆ ಸಿಕ್ಕಿ ಕೆಲವೊಮ್ಮೆ ಹಿಂದೂ ಧರ್ಮ ಮಂಕಾದಂತೆ ಕಂಡರೂ ಅದು ಬುಡಸಮೇತ ಎಂದೂ ಅಲ್ಲಾಡಲಿಲ್ಲ. ಹೊಸ ಹೊಸ ಧರ್ಮಗಳನ್ನು ಸ್ವೀಕರಿಸಿದರೂ ಆಳಕ್ಕೆ ಬೇರು ಬಿಟ್ಟಿರುವ ಹಿಂದೂಧರ್ಮ ತನ್ನ ಗಟ್ಟಿ ಅಸ್ತಿತ್ವವನ್ನು ಉಳಿಸಿಕೊಂಡೇಬಂದಿದೆ. ಇಲ್ಲಿ ವಚನಕಾರರು, ದಾಸವರೇಣ್ಯರು, ಸೂಫಿ ಸಂತರು, ಮೀರಾಬಾಯಿ, ಕಬೀರ ಎಲ್ಲರೂ ಸರ್ವಧರ್ಮ ಸಮನ್ವಯವನ್ನೇ ಸಾರಿದರು. ಹಿಂದೊಮ್ಮೆ ಧಾರ್ಮಿಕತೆಯ ಪಾವಿತ್ರ್ಯವನ್ನು ಉತ್ತುಂಗಕ್ಕೆ ಕೊಂಡೊಯ್ದಿದ್ದ ಭಾರತಕ್ಕೆ ಮೆಲ್ಲನೆ ಅಧರ್ಮದ ಗರಬಡಿಯಿತು. 'ದಯೆಯೇ ಧರ್ಮದ ಮೂಲ' ವೆಂಬ ಆಶಯ ಮಾಯವಾಗಿ, ಅಸಹನೆ, ಸ್ವಾರ್ಥ, ದ್ವೇಷಗಳನ್ನು ಮೈಗೂಡಿಸಿಕೊಂಡು ಡಾಂಭಿಕ ಆಚರಣೆಯ ಬಾಹ್ಯ ಆಡಂಬರಕ್ಕೆ ಮಾರು ಹೋಗಿ, ಧರ್ಮದ ಹೆಸರಿನಲ್ಲಿ ಅತ್ಯಾಚಾರ, ಅನಾಚಾರ, ವಿಕೃತ ಕಾಮನೆಗಳು ಮನೋವಿಕಾರಗಳು ನಮ್ಮ ಮನೆ-ಮನಸ್ಸುಗಳನ್ನು ಮುರಿಯಲು ಕಾರಣವಾದವು.

ನುಚ್ಚುನೂರು

೧೯೯೨ರ ಆರಂಭದಿಂದಲೂ ಸುದ್ದಿ ಮಾಡುತ್ತಾ ಸಾವಿರಾರು ಕರಸೇವಕರನ್ನು ತನ್ನತ್ತ ಆಕರ್ಷಿಸಿ ರಾಮಶಿಲಾನ್ಯಾಸ, ರಥಯಾತ್ರೆಗಳ ಸೇವೆ ಮಾಡಿಸಿಕೊಳ್ಳುತ್ತಾ ಬಂದಿದ್ದ ಅಯೋಧ್ಯೆ ಕೊನೆಗೂ ೧೯೯೨ ರ ಡಿಸೆಂಬರ್ ೬ ರಂದು ಬಾಬರಿ ಮಸೀದಿಯ ಮೂರು ಗುಮ್ಮಟಗಳನ್ನು ನೆಲಸಮ ಮಾಡುವುದರೊಂದಿಗೆ ಮಂದಿರ ಮಸೀದಿ ಎಂಬ ಬೊಬ್ಬೆ ಕೊನೆಗೊಂಡಿತು. ರಾಜಕೀಯ ಮುಖಂಡರುಗಳ ಹಠಮಾರಿತನಗಳು, ಅಸಹನೆಗಳು ಇಡೀ ದೇಶವನ್ನೇ ಜಾತಿ ದಳ್ಳುರಿಗೆ ತಳ್ಳಿಬಿಟ್ಟು ಭಾರತದ ಜಾತ್ಯಾತೀತತೆಯ ಮೂಲಕಲ್ಪನೆಗೇ ಆಘಾತವನ್ನುಂಟುಮಾಡಿದವು. ನಮ್ಮ ಸಂಸ್ಕೃತಿಗೆ, ಸಂಸ್ಕಾರಕ್ಕೆ ಅವಮಾನ ಮಾಡಿ ದೇಶದ ಐಕ್ಯತೆಯನ್ನು ಹರಾಜು ಹಾಕಿದವು. ಗಾಂಧೀಜಿಯವರ ಕನಸಿನ ರಾಮರಾಜ್ಯದ ಕಲ್ಪನೆ ನುಚ್ಚುನೂರಾಯಿತು.

ಪ್ರಧಾನಿ, ಕೋಮುಶಕ್ತಿಗಳ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದ್ದರೂ ಕೂಡ, ಆಗಬಾರದ ಸಂಗತಿ ಘಟಿಸಿಬಿಟ್ಟಿತ್ತು. ಇದರಲ್ಲಿ ಬೆಂದವರು, ಸತ್ತವರು, ಮನೆ ಮಾರುಗಳನ್ನು ಕಳೆದುಕೊಂಡು ದಿಕ್ಕೆಟ್ಟು ಅನಾಥರಾದವರು ಧಾರ್ಮಿಕ ಮುಖಂಡರಲ್ಲ; ರಾಜಕಾರಣಿಗಳೂ ಅಲ್ಲ. ಇದಕ್ಕೆ ಬಲಿಪಶುವಾದವರು ಎರಡೂ ಕೋಮಿಗೆ ಸೇರಿದ ಬಡವರು, ಕಡುಬಡವರು, ಅಮಾಯಕರು, ಮುಗ್ಧರು ಮಾತ್ರ. ದಿನೇದಿನೇ ಇಂತಹ ಹಿಂಸಾಚಾರಗಳು ಹೆಚ್ಚಾಗುತ್ತಿರುವುದಕ್ಕೆ ಮುಖ್ಯ ಕಾರಣ, ರಾಜಕೀಯ ಒತ್ತಡ ಹಾಗೂ ದುಷ್ಟಶಕ್ತಿಗಳನ್ನು ನಿಗ್ರಹಿಸದೇ ಇರುವುದು.

ಬೆಂಕಿಯ ಕಿಡಿ

ಈ ಹಿನ್ನೆಲೆಯಲ್ಲಿ ನೋಡಿದರೆ ಕರ್ನಾಟಕದಲ್ಲಿ ೧೯೯೨ರ ಆರಂಭ ಕಾವೇರಿ ಗಲಾಟೆಯ ಛಾಯೆಯಿಂದಲೇ ಪ್ರಾರಂಭವಾಯಿತು. ಕುಖ್ಯಾತ ವೀರಪ್ಪನ್ ನಡೆಸಿದ ಹತ್ಯಾಕಾಂಡಗಳು, ಹೆದ್ದಾರಿ ದರೋಡೆಗಳನ್ನು ಅನುಭವಿಸಿ, ಇಡೀ ವರ್ಷ, ಸಣ್ಣಪುಟ್ಟ ಗಲಭೆ, ದೊಂಬಿ, ಗಲಾಟೆಗಳನ್ನು ಕಂಡು ಸಧ್ಯ ಇನ್ನೇನು ವರ್ಷ, ಕಳೆಯಿತಲ್ಲ ಎಂದು ನಿಟ್ಟುಸಿರು ಬಿಡುವ ಹೊತ್ತಿನಲ್ಲಿ ಡಿಸೆಂಬರ್ 6ರಂದು ಕರ್ನಾಟಕದಿಂದ ಬಹುದೂರವಿರುವ ಉತ್ತರಪ್ರದೇಶದ ಅಯೋಧ್ಯೆಯಲ್ಲಿ ನಡೆದ ಘಟನೆಯು ಹೊತ್ತಿಸಿದ ಬೆಂಕಿಯ ಕಿಡಿ ಬೇಡ ಬೇಡವೆಂದರೂ ಕರ್ನಾಟಕಕ್ಕೆ ಸಿಡಿದೇಬಿಟ್ಟಿತು.

೧೯೯೧ರಲ್ಲಿ ಕಾವೇರಿ ಕಾವಿನಿಂದ ಬೆಂದು, ೧೯೯೨ರಲ್ಲಿ ಚಂಡಮಾರುತದ ಅತಿವೃಷ್ಟಿಯಿಂದಾಗಿ ಜನಜಾನುವಾರು ಗುಡಿಸಲುಗಳು ಕುಸಿದು ರೂ. ೨೫೦ ಕೋಟಿ ನಷ್ಟವಾಗಿತ್ತು. ೯೨ ರಲ್ಲಿನ ಕೋಮು ಗಲಭೆಯಲ್ಲಿ ಒಟ್ಟು ೭೮ ಮಂದಿ ಸತ್ತು, ೭ ಕೋಟಿ ರೂ. ಆಸ್ತಿಪಾಸ್ತಿಗಳ ನಷ್ಟಕ್ಕೆ ಕಾರಣವಾಯ್ತು. ೧೫ ದಿನಗಳು ಶಾಲಾಕಾಲೇಜಿಗೆ ರಜಾ ಘೋಷಿಸಬೇಕಾಯಿತು. ಇದು ಕೇವಲ ಮಕ್ಕಳ ಪಾಠ ಪ್ರವಚನ, ಪರೀಕ್ಷೆಗಳ ಮೇಲೆ ಮಾತ್ರ ಪರಿಣಾಮ ಬೀರುವುದಲ್ಲದೆ; ಅವರು ಆತ್ಮೀಯರ ಕೊಲೆ, ಸುಲಿಗೆ, ಮನೆಗಳ ಲೂಟಿ, ಬೆಂಕಿಗಳಿಗೆ, ಕಹಿ ಘಟನೆಗಳಿಗೆ ಮೂಕಸಾಕ್ಷಿ ಆಗುವಂತಾಯಿತು.

ಅರಳಿ ನಗಬೇಕಾದ, ನಳನಳಿಸಬೇಕಾದ ಮನಸ್ಸುಗಳು ಮುದುರಿಕೊಂಡು, ಮುರುಟಿಕೊಂಡು ನರಳುವಂತಾಯಿತು. ಪ್ರಶಾಂತವಾಗಿ ಸಾಗುತ್ತಿದ್ದ ನಮ್ಮ ಜೀವನದ ದಿಕ್ಕು ತಪ್ಪಿದಂತಾಗಿ ಜೀವನ ನೇಯ್ಗೆಯೇ ಹರಿದು ಹೋದಂತಾಯಿತು.

ಕೆಲವು ಘಟನೆಗಳು

ಸಣ್ಣಪುಟ್ಟ ಕ್ಷುಲ್ಲಕ ಕಾರಣಗಳನ್ನು ದೊಡ್ಡದು ಮಾಡಿ, ಗಲಾಟೆ ಮಾಡುವ ಸಮಾಜದ ಶಾಂತಿ ಕದಡುವ, ತಮ್ಮ ಅಸಹನೆಯನ್ನು ವ್ಯಕ್ತಪಡಿಸುವ ಕೆಲವು ಘಟನೆಗಳು:

ಪ್ರಾರ್ಥನಾಮಂದಿರವನ್ನು ಅಪವಿತ್ರಗೊಳಿಸಿದ್ದಕ್ಕೆ ರಾಯಚೂರಿನಲ್ಲಿಗಲಭೆ; ಹುಬ್ಬಳ್ಳಿಯ ಈದ್‌ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಯತ್ನ; ಶಿವಮೊಗ್ಗ, ಹೊಸಪೇಟೆಗಳಲ್ಲಿ ಗಣಪತಿ ಸಂಬಂಧದ ಗಲಾಟೆ; ಹೊನ್ನಾಳಿಯಲ್ಲಿ ಈದ್ ಮೆರವಣಿಗೆಗೆ ಕಲ್ಲು ತೂರಾಟ; ಚಿಕ್ಕಬಳ್ಳಾಪುರದಲ್ಲಿ ದಲಿತರು-ಸವರ್ಣೀಯರ ನಡುವಿನ ಜಗಳ; ಇಡಪನೂರಿನಲ್ಲಿ ಮತಾಂತರಗೊಂಡ ಕ್ರಿಶ್ಚಿಯನ್ ಹರಿಜನರ ಮೇಲೆ ಬೇಡರು, ನಾಯಕರು, ಕುರುಬರು, ಮುಸ್ಲಿಮರು ಒಂದಾಗಿ, ಪುರುಷರು ಮಚ್ಚು, ಕತ್ತಿ, ಬಡಿಗೆಗಳನ್ನು ಹಿಡಿದದ್ದು ಇಂಥ ದುರಂತಗಳು ಘಟಿಸಿದುವು. ಮನುಷ್ಯ ತನ್ನ ಮನುಷ್ಯತ್ವವನ್ನು ಮರೆತು ತನ್ನೊಳಗಿನ ರಾಕ್ಷಸೀತನಗಳನ್ನು ಪಾಶವೀ ಕೃತ್ಯಗಳ ಮೂಲಕ ವ್ಯಕ್ತಪಡಿಸಿ, ಮನುಕುಲದ ನಾಶಕ್ಕೆ ಹೇಗೆ ಕಾರಣಕರ್ತನಾಗುತ್ತಾನೆಂಬುದಕ್ಕೆ ಪ್ರಸ್ತುತ ಹಿನ್ನೆಲೆಯಲ್ಲಿ ಅಯೋಧ್ಯೆ ಘಟನೆ ಸಾಬೀತು ಮಾಡಿತು.

ಸದಾ ಪ್ರಶಾಂತವಾಗಿರುತ್ತಿದ್ದ, ಸುಂದರ ನಗರವೆಂದು ಖ್ಯಾತವಾಗಿದ್ದ ಮೈಸೂರು, ಕೋಮು ದಳ್ಳುರಿಯ ಬೆಂಕಿಗೆ ಸಿಕ್ಕಿ ಧಗ್ಗನೆ ಹತ್ತಿಕೊಂಡು ಉರಿಯಿತು. ಡಿಸೆಂಬರ್ ೮ ರಂದು ಗಾಂಧಿನಗರದಲ್ಲಿ ಹತ್ತಿಕೊಂಡ ಬೆಂಕಿ ನೋಡನೋಡುತ್ತಿದ್ದಂತೆ ಇಡೀ ನಗರವನ್ನು ಆಕ್ರಮಿಸಿತು. ಹತ್ತಾರು ಮಂದಿ ಸಾವು, ನೂರಾರು ಅಂಗಡಿ, ಗುಡಿಸಲುಗಳ ನಾಶವಾಯಿತು. ಕರ್ಫ್ಯೂ ಜಾರಿಯಾಗಿ ಕಂಡಲ್ಲಿ ಗುಂಡು ಆಜ್ಞೆ; ಹಿಂದು-ಮುಸ್ಲಿಂ ಇಬ್ಬರನ್ನೂ ಬಲಿತೆಗೆದುಕೊಂಡಿತು. ಡಿಸೆಂಬರ್ ಮೈಸೂರಿನ ಪಾಲಿಗೆ ಕರಾಳ ತಿಂಗಳಾಗಿ ಪರಿಣಮಿಸಿತು. ಲಕ್ಷಾಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿ ಶಾಂತಿ ಸೌಹಾರ್ದಕ್ಕೆ ಹೆಸರಾಗಿದ್ದ ಮೈಸೂರು ಕೋಮು ಸೌಹಾರ್ದದ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶವೆಂದು ದಾಖಲಾಯಿತು.

ಅಯೋಧ್ಯೆ ಗಲಾಟೆಯ ಬೆಂಕಿಯ ಕುಡಿ ಮೊದಲಿಗೆ ತಗುಲಿದ್ದು ಕಲ್ಬುರ್ಗಿಗೆ. ಪ್ರಕೃತಿಯ ಮುನಿಸಿನ ನಿರಂತರ ಕಣ್ಣುಮುಚ್ಚಾಲೆಯಲ್ಲಿ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದ ಕಲ್ಬುರ್ಗಿ ಹಿಂದೆಂದೂ ಕಂಡು ಕೇಳರಿಯದಂತಹ ಕೋಮು ಘರ್ಷಣೆಗೆ ಸಿಕ್ಕಿಕೊಂಡಿತು. ಬಾಬ್ರಿ ಮಸೀದಿ ಧ್ವಂಸದ ಸಂಗತಿ ತಿಳಿಯುತ್ತಲೇ ಮುಸ್ಲಿಂ ಲೀಗ್ ಶಾಸಕ ಖಮರುಲ್ ಇಸ್ಲಾಂ ಮುಸ್ಲಿಮರನ್ನುದ್ದೇಶಿಸಿ "ಮುಸ್ಲಿಮರಿಗೆ ಈಗ ಕೋಪ ಬಂದಿದೆ. ಇದನ್ನು ವ್ಯಕ್ತಪಡಿಸಲು ತಡೆಯೊಡ್ಡಬಾರದು" ಎಂದು

ಉದ್ರೇಕಕಾರಿ ಭಾಷಣ ಮಾಡಿದ್ದೇ, ಹಿಂದೂ-ಮುಸ್ಲಿಂ ಗಲಾಟೆ ಪ್ರಾರಂಭವಾಗೇ ಬಿಟ್ಟಿತು. ಹತ್ತಾರು ಸಾವು. ಕಟ್ಟಡ, ವಾಹನ, ವಸ್ತುಗಳು ಬೆಂಕಿಗೆ ಈಡಾದುವು.

ಇದೇ ರೀತಿ ಬೆಂಗಳೂರಿನಲ್ಲಿ ಭುಗಿಲೆದ್ದ ದ್ವೇಷಾಗ್ನಿಯಲ್ಲಿ ಅಮಾಯಕರ ಬದುಕು ಸುಟ್ಟು ಬೂದಿಯಾಯಿತು. ಬೂದಿಯಾದ ಗುಡಿಸಲುಗಳ ಮುಂದೆ ನೊಂದು ಜನರ ಕಣ್ಣೀರು ಈ ಅಮಾಯಕ ಜನರಿಗೆ ಮಂದಿರ ಮಸೀದಿಗಳು ಸಮಸ್ಯೆಯಲ್ಲ. ಅವುಗಳನ್ನು ಕಟ್ಟುವುದು, ಕೆಡವುವುದು ಕಟ್ಟಿಕೊಂಡು ಅವರಿಗೇನೂ ಆಗಬೇಕಿಲ್ಲ. ಆದರೂ ಪಾಪ, ತಾವು ಮಾಡದ ತಪ್ಪಿಗೆ, ಸಾವು ನೋವು ಅನುಭವಿಸಿದರು. ಮನೆ-ಗುಡಿಸಲುಗಳನ್ನು ಕಳೆದುಕೊಂಡು ಅನಾಥರಾದವರಲ್ಲಿ ಕೂಲಿಕಾರರು, ತರಕಾರಿ ಮಾರುವವರೇ ಹೆಚ್ಚಾಗಿದ್ದರು.

ಹತ್ತು ವರ್ಷಗಳ ಹಿಂದೆ ನಡೆದ ಗೋಕಾಕ್ ಚಳವಳಿಯ ನಂತರ ಪ್ರಶಾಂತವಾಗಿದ್ದ ಚಿತ್ರದುರ್ಗದಲ್ಲಿ ನಾಲ್ಕು ದಿನ ಸತತವಾಗಿ ಈ ವಿಷಜ್ವಾಲೆ ಬೀಸಿತು. ೩.೭ ಲಕ್ಷ ನಷ್ಟ, ೧೯೮ ಕುಟುಂಬಗಳು, ೮೨ ಮನೆ, ಗುಡಿಸಲುಗಳು, ೮೫ ಅಂಗಡಿಗಳು, ೪೮ ಸೈಕಲ್ಲುಗಳು,, ೨೦ ಆಟೋಗಳು, ೫ ಲಾರಿ ನಷ್ಟ ಸಂಭವಿಸಿದರೆ, ಹಿತಾರುಕ್‌ಪುರದಲ್ಲಿ ೨೬ ಮನೆ, ೧ ಮಸೀದಿ, ೧ಶಾಲೆ, ೧ ಆರೆಬಿಕ್ ಶಾಲೆ ಒಟ್ಟು ೩.೬೮ ಲಕ್ಷ ನಷ್ಟವಾಯ್ತು. ಈ ಗಲಭೆ ಪುಟ್ಟಣ್ಣನೆಂಬ ಅಂಗವಿಕಲನನ್ನೂ ಬಿಡದೆ ಅವನ ಲಕ್ಷಾಂತರ ರೂಪಾಯಿಗಳ ನಷ್ಟಕ್ಕೆ ಹೊಣೆಯಾಯಿತು.

ಬಾಗಲಕೋಟೆಯಲ್ಲಿ ಬಟ್ಟೆ ಅಂಗಡಿಗೆ ಬೆಂಕಿ-3ಲಕ್ಷ ಹಾನಿ, ಶಿರಾದಲ್ಲಿ ಕಂಡಲ್ಲಿ ಗುಂಡು ಆಜ್ಞೆ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ೭ ಪ್ರಾಣಹಾನಿ, ೩೦ ಮನೆಗಳು, ೧೬೬ ಅಂಗಡಿಗಳು ಹಾನಿ, ೨೧ ದ್ವಿಚಕ್ರವಾಹನ ಭಸ್ಮ, ೮೫ ಲಕ್ಷ ನಷ್ಟ. ಸುಳ್ಯದಲ್ಲಿ ಜನ ಪ್ರಕೃತಿಯ ಮೇಲೂ ಮುನಿಯುವಂತಾಗಿ ೫೦,೦೦೦ ಮೌಲ್ಯದ ಮರಗಳನ್ನು ಕಡಿದು ಕೆಳಗುರುಳಿಸುವುದರ ಮೂಲಕ ವ್ಯಕ್ತಪಡಿಸಿದರು. ೫೦ ಜನರ ಬಂಧನ, 25 ಕೇಸುಗಳ ದಾಖಲೆ, ೨ ಲಕ್ಷ ನಷ್ಟದೊಂದಿಗೆ ವಿದ್ಯುತ್, ದೂರವಾಣಿ ತಂತಿಗಳನ್ನು ಹಾಳುಗೆಡವಿದರು. ಮಂಗಳೂರು ಸುತ್ತಲಿನ ಗ್ರಾಮಗಳಲ್ಲೂ ಕರ್ಫ್ಯೂ ಜಾರಿಯಾಗಬೇಕಾಯ್ತು.

ಹಿಂಸೆಯ ಹೊಳೆ

ಇವು ಅಲ್ಲಿ ಇಲ್ಲಿ ನಡೆದ ಕೆಲವು ಘಟನೆಗಳು ಮಾತ್ರ ಇಂತಹ ದುರ್ಘಟನೆಗೆ ವೈಯಕ್ತಿಕ ಕಾರಣಗಳು ಸಾಮಾನ್ಯವಾಗಿ ಇರುವುದಿಲ್ಲ. ಗುಂಪಿನ ಹುಂಬತನಗಳು ಅಥವಾ ಮತೀಯ ಹುಚ್ಚುತನಗಳೇ ಕಾರಣಗಳಾಗಿರುವಂತೆ ತೋರುತ್ತದೆ. ಆದರೆ ಕೆಲವೊಮ್ಮೆ ಕೆಲವು ದುಷ್ಟಶಕ್ತಿಗಳು ವೈಯಕ್ತಿಕ ಕಾರಣಗಳಿಗೂ ಬಳಸಿಕೊಳ್ಳುವುದುಂಟು. ಜಾತಿ ವೈಷಮ್ಯಗಳಷ್ಟೇ ಅಲ್ಲದೆ, ವ್ಯಕ್ತಿಯ ಸ್ವಾರ್ಥವೂ ಕೂಡ ಇಲ್ಲಿ ಪ್ರಮುಖಪಾತ್ರ ವಹಿಸುವುದನ್ನು ಕಾಣಬಹುದಾಗಿದೆ.

ಹೀಗೆ ಕರ್ನಾಟಕದಾದ್ಯಂತ ಅಯೋಧ್ಯೆ ಘಟನೆಯಿಂದಾಗಿ ದುರ್ಘಟನೆಯ, ಹಿಂಸೆಯ ಹೊಳೆಯೇ ಹರಿಯಿತು. ಜೊತೆಗೆ ಬಾಂಬ್ ಇಡುವ ಬೆದರಿಕೆ ಪತ್ರಗಳೂ ಕೂಡ ಬಂದು ಪೊಲೀಸರನ್ನೂ ,ಸಾಮಾನ್ಯರನ್ನೂ ಆತಂಕಕ್ಕೆ ಈಡು ಮಾಡಿತು.

ಈ ಘಟನೆಗಳ ಬಗ್ಗೆ ತೀವ್ರ ಟೀಕೆಗಳು ವ್ಯಕ್ತವಾದುದಲ್ಲದೆ, ಶಾಂತಿಗಾಗಿ ಅನೇಕ ಪ್ರಯತ್ನಗಳು ನಡೆಯುವುದರ ಮೂಲಕ ನೈತಿಕ ಜವಾಬ್ದಾರಿಯುಳ್ಳ ನಾಗರಿಕರು ತಮ್ಮ ಹೊಣೆಗಾರಿಕೆಯನ್ನು ತೋರಿದರು.

ದಾವಣಗೆರೆಯಲ್ಲಿ ಶಾಂತಿ ಸಭೆ ನಡೆಸಿ, ಹಿಂದೂ ಮುಸ್ಲಿಂ ಜನಾಂಗದವರಿಗೆ ಸಹಭೋಜನಕೂಟದ ವ್ಯವಸ್ಥೆ ಮಾಡಿದ್ದ ಡಾ. ಶಿವಮೂರ್ತಿ ಶಿವಾಚಾರ್ಯರು: "ಅಯೋಧ್ಯೆಯಲ್ಲಿ ಬಿದ್ದಿರುವುದು ಮಸೀದಿಯ ಗುಮ್ಮಟವಲ್ಲ, ಹಿಂದೂ ಧರ್ಮದ ಪರಧರ್ಮ ಸಹಿಷ್ಣುತೆಯೆಂಬ ವಿಶ್ವವಿಖ್ಯಾತ ಸಿದ್ಧಾಂತದ ಗುಮ್ಮಟವೇ ಇಂದು ಕಳಚಿ ಬಿದ್ದಂತಾಗಿದೆ, ಇಂದು ಕಟ್ಟಬೇಕಾಗಿರುವುದು, ಕೆಡವಬೇಕಾಗಿರುವುದು ಮಸೀದಿಯನ್ನಾಗಲೀ, ಮಂದಿರವನ್ನಾಗಲೀ ಅಲ್ಲ; ಹಿಂದೂ-ಮುಸ್ಲಿಂ ಮಧ್ಯೆ ಇರುವ ದ್ವೇಷ ವೈಷಮ್ಯಗಳ ಗೋಡೆಯನ್ನು ಕೆಡವಬೇಕಾಗಿದೆ. ಪರಸ್ಪರರ ಹೃದಯದಲ್ಲಿ ಸಾಮರಸ್ಯ ಸೌಹಾರ್ದ ಭಾವನೆಗಳ ಸೇತುವೆಯನ್ನು ಕಟ್ಟಬೇಕಾಗಿದೆ " ಎಂದು ತಿಳಿಯ ಹೇಳಿದರು.

ಹಾವೇರಿಯಲ್ಲಿ ಮಾನವೀಯತೆ ಪ್ರತಿಯೊಬ್ಬರಲ್ಲಿಯೂ ಪ್ರೀತಿಯನ್ನು ಹರಡಲೆಂದು ಕವಿಗೋಷ್ಠಿಗಳ ಮೂಲಕ ಕವಿಗಳು ಆಶಿಸಿದರು. ಚಿತ್ರದುರ್ಗದಲ್ಲಿ ಕ್ರೈಸ್ತ, ಇಸ್ಲಾಂ, ವೀರಶೈವ ಧರ್ಮದ ಧಾರ್ಮಿಕ ಗುರುಗಳು ಮತ್ತು ಸೊರಬ ಕಾಲೇಜಿನ ವಿದ್ಯಾರ್ಥಿಗಳು ಶಾಂತಿಗಾಗಿ ಪಾದಯಾತ್ರೆ ನಡೆಸಿದರು. ಚಿತ್ತರಗಿ ಪೀಠಾಧಿಪತಿ ಇಳಕಲ್ ಮಹಾಂತ ಸ್ವಾಮಿಗಳು ಎಸ್. ನಿಜಲಿಂಗಪ್ಪ, ಏಕಾಂತಯ್ಯ, ಮೂಡಲಗಿರಿಯಪ್ಪ ಮುಂತಾದವರು ಶಾಂತಿಗಾಗಿ ಮನವಿ ಮಾಡಿದರೆ, ಬೆಂಗಳೂರಿನಲ್ಲಿ ಹಲವು ಪ್ರಗತಿಶೀಲ, ಸಂಘಟನೆಗಳ ಪ್ರತಿನಿಧಿಗಳು, ಬರಹಗಾರರು, ಕಲಾವಿದರು, ಪತ್ರಕರ್ತರು, ವಕೀಲರು ಕೋಮುಸೌಹಾರ್ದತೆಗಾಗಿ ನಿರಶನ ಮಾಡಿದರು. ಕಾಲೇಜೊಂದರ ವಿದ್ಯಾರ್ಥಿಗಳು ಮಂದಿರ-ಮಸೀದಿಯನ್ನು ಏಕಕಾಲದಲ್ಲಿ ಸ್ವಚ್ಛಗೊಳಿಸಿದರೆ;ಮಂಗಳೂರಿನ ಭೀಮ ಸಂಘದ ಮಕ್ಕಳು "ಬಾಬರಿ ಮಸೀದಿ ರಾಮಜನ್ಮಭೂಮಿ ಜಾಗವನ್ನು ನಮಗೆ ಕೊಡಿ ನಾವಲ್ಲಿ ಕಾಡು ಬೆಳೆಸುತ್ತೇವೆ"ಎಂದು ಕೋಮು ಸೌಹಾರ್ದದಲ್ಲೂ ತಮ್ಮ ಪರಿಸರ ಪ್ರೇಮ ತೋರಿಸಿದರು. ಈ ಎಲ್ಲಾ ಮನಸ್ಸುಗಳ ಹಿನ್ನೆಲೆಯಲ್ಲಿ ಸಾಮರಸ್ಯದ ಶಾಂತಿ ಸೌಹಾರ್ದದ ಬದುಕು ತಮ್ಮದೆಂಬ ಆಶಯವನ್ನೂ ಕಾಣಬಹುದಾಗಿದೆ.

ಜನಸಾಮಾನ್ಯರು ಆದದ್ದನ್ನು ಮರೆತು, ಹೊಂದಿಕೊಂಡು ಹೋಗುವ, ಪರಸ್ಪರ ಕ್ಷಮಿಸಿ, ಸಹನಶೀಲರಾಗುವ ಮನೋಭಾವವನ್ನು ತೋರಿದರೆ, ಪೀಠಾಧಿಪತಿಗಳಾದ ಉಡುಪಿಯ ಶ್ರೀ ಪೇಜಾವರರು "ಮಸೀದಿ ಕೆಡವಿದ ಬಗ್ಗೆ ನನ್ನ ಮನಸ್ಸಿಗೆ ಖೇದ

ಉಂಟು ಮಾಡಿದೆ. ಆದರೆ ಭಗ್ನಗೊಂಡಿರುವ ಕಟ್ಟಡ ಪ್ರದೇಶದಲ್ಲಿಯೇ ಮಸೀದಿ ಕಟ್ಟುವ ಸಾಹಸಕ್ಕೆ ಸರ್ಕಾರವಾಗಲೀ ಅಥವಾ ಮುಸ್ಲಿಂ ಜನತೆಯಾಗಲೀ ಕೈಹಾಕಿದ್ದೆ ಆದರೆ ಹಿಂದೂ ಸಮಾಜ ಸರ್ವರೀತಿಯಿಂದಲೂ ಪ್ರತಿಭಟಿಸುತ್ತದೆ" ಎಂದು ಎಚ್ಚರಿಕೆ ನೀಡಿದರು. ಅಲ್ಲದೆ, "ರಾಜಕೀಯ ಪಕ್ಷಗಳು ಮತ ಗಳಿಕೆಯ ಏಕೈಕ ಉದ್ದೇಶದಿಂದ ಅಲ್ಪಸಂಖ್ಯಾತರನ್ನು ಅತಿಯಾಗಿ ಸಂತೃಪ್ತಪಡಿಸುತ್ತವೆ" ಎಂದು ಟೀಕಿಸಿದರು. ಅಲ್ಲದೆ 'ಮಸೀದಿ ನಿರ್ಮಾಣಕ್ಕೆ ಹಿಂದೂಗಳು ಮಂದಿರ ನಿರ್ಮಾಣಕ್ಕೆ ಮುಸ್ಲಿಮರು ಸಹಕರಿಸಲಿ, ಅಯೋಧ್ಯೆಯಲ್ಲಿ ಮಸೀದಿ ನಿರ್ಮಾಣಕ್ಕೆ ನನ್ನ ಮಠದ ಪರವಾಗಿ ಹತ್ತು ಸಾವಿರ ದೇಣಿಗೆ ಕೊಡುತ್ತೇನೆ"ಎಂದು ತಮ್ಮ ಔದಾರ್ಯವನ್ನು ಕೂಡ ತೋರಿದರು. ಇವರ ಈ ವರ್ತನೆ ಬಗ್ಗೆ ನಾಡಿನಾದ್ಯಂತ ಚರ್ಚೆ ನಡೆದು ಪೇಜಾವರರ ಆತ್ಮೀಯರು ಕೂಡ ಅವರನ್ನು ವಿರೋಧಿಸಿದಾಗ, "ನಾನು ಹಿಂದೂವಾದಿ, ಗಾಂಧಿವಾದಿ, ಸಮಾಜವಾದಿ, ಪ್ರಜಾಪ್ರಭುತ್ವವಾದಿ. ಇಲ್ಲಿಯವರೆಗೆ ಆಗಿರುವ ಘಟನೆಗಳನ್ನು ಮರೆತು ಹಿಂದೂ ಮುಸ್ಲಿಮರು ಸೌಹಾರ್ದದಿಂದ ಬದುಕಬೇಕು, ಮೈತ್ರಿಯುಗ ಸ್ಥಾಪಿಸಬೇಕು" ಎನ್ನುತ್ತಾ ತಮ್ಮ ವಿರುದ್ಧದ ಮಾತುಗಳಿಗೆ ಉತ್ತರ ನೀಡಿದರು.

ಮನುಷ್ಯರನ್ನು ಮುಕ್ತಿಪಥದತ್ತ ಕೊಂಡೊಯ್ಯಬೇಕಾಗಿರುವ, ಆಧ್ಯಾತ್ಮಿಕ ಜ್ಞಾನವನ್ನು ಹೆಚ್ಚಿಸುವ, ನಮ್ಮ ಪರಂಪರೆಯ ಒಂದು ಅಂಗವಾಗಿ ಬೆಳೆದುಬಂದಿರುವ ಸರ್ವರನ್ನೂ ಸಮಭಾವದಿಂದ ನೋಡುತ್ತಾ, ಅನ್ನದಾಸೋಹ ನಡೆಸುತ್ತಾ, ಜನರ ಜ್ಞಾನತೃಷೆ ಹಿಂಗಿಸುತ್ತಾ ಬಂದಂತಹ ಮಠಾಧಿಪತಿಗಳಲ್ಲಿ ಕೆಲವರು ಹುಲುಮಾನವರಂತೆ ಅಸಹಾಯಕತೆಯನ್ನು ವ್ಯಕ್ತಪಡಿಸಿ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಕವಿವಾಣಿಯನ್ನು ಅಲ್ಲಗೆಳೆದು ಅಲ್ಪತನ ತೋರಿದ್ದು, ಧಾರ್ಮಿಕ ಮಠಗಳ ಔದಾರ್ಯವನ್ನೇ ಮರೆತದ್ದು ಖೇದದ ಸಂಗತಿಗಳೇ.

ರಾಜ್ಯದಲ್ಲಿ ನಡೆದ ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸಲು ರಾಜ್ಯ ಸರ್ಕಾರ ನಿರಾಕರಿಸಿತು. ಮೃತರ ಕುಟುಂಬಕ್ಕೆ ೧ ಲಕ್ಷ ಪರಿಹಾರ, ಮೃತರ ಮಕ್ಕಳಿಗೆ ಅವರು ಪ್ರಾಪ್ತ ವಯಸ್ಸಿಗೆ ಬರುವವರೆಗೂ "ರಾಷ್ಟ್ರೀಯ ಕೋಮು ಸೌಹಾರ್ದತಾ ಪ್ರತಿಷ್ಠಾನ"ಕಾರ್ಯಕ್ರಮದನ್ವಯ ಅವರಿಗೆ ಮಾಸಿಕ ಪರಿಹಾರ ಮತ್ತು ಕೋಮು ಗಲಭೆ ಸಂತ್ರಸ್ತರಿಗೆ ಪುನರ್ವಸತಿಗಾಗಿ ಬ್ಯಾಂಕುಗಳ ಮೂಲಕ ಬಡ್ಡಿರಹಿತ ಸಾಲ ನೀಡುವುದಾಗಿ ಮುಖ್ಯಮಂತ್ರಿ ಶ್ರೀ ಮೊಯ್ಲಿ ಹೇಳಿದರು.

ಈ ಗಲಭೆಯಿಂದಾದ ಅನಾಹುತಗಳು ಸಾಲದೆಂಬಂತೆ ಅನೇಕರು ಕರೆ ನೀಡಿದ ಬಂದ್‌ನಿಂದಾಗಿ ಎಂದಿನ ಚಟುವಟಿಕೆಗಳಿಗೆ ಧಕ್ಕೆ ಬಂತು. ಪರಿಣಾಮ ತೀರಾ ಬಡವರ ಅಂದಂದಿನ ಗಂಜಿಗೆ ಸಂಪಾದಿಸುವವರ ಕುತ್ತಿಗೆ ಕುತ್ತು ಬಂದು, ಕೆಲಸವಿಲ್ಲದ, ಕೂಲಿಯೂ ಇಲ್ಲದೆ ಉಪವಾಸವಿರಬೇಕಾಯಿತು. ಖಾಯಿಲೆ, ಕಸಾಯಿಲೆಯಾದವರ ಪಾಡಂತೂ ಬೇಡ. ಆಸ್ಪತ್ರೆಗೆ ಹೋಗಲು ವಾಹನಗಳಿಲ್ಲ, ತುರ್ತು ಚಿಕಿತ್ಸೆ ದೊರೆಯುವಂತಿಲ್ಲ. ಈ ಕಷ್ಟನಷ್ಟಗಳ ಹೊಣೆ ಹೊರುವವರು ಯಾರು?

ಅಯೋಧ್ಯೆ ಗಲಭೆಯ ಹಿನ್ನೆಲೆಯಲ್ಲಿ ಡಿಸೆಂಬರ್ ೧೪ ರಂದು ಆರ್.ಎಸ್.ಎಸ್. ಕಾರ್ಯಾಲಯವಾದ ಕೇಶವಕೃಪ, ಹಿಂದೂ ಪರಿಷತ್ ಕಾರ್ಯಾಲಯ ಧರ್ಮಶ್ರೀ, ಆರ್ ಎಸ್ ಎಸ್‌ನ ಪ್ರಕಾಶನ ವಿಭಾಗ ರಾಷ್ಟ್ರೋತ್ಥಾನ ಪರಿಷತ್, ಜಮಾತೆ -ಇ-ಇಸ್ಲಾಂ, ಐ.ಎಸ್.ಎಸ್.ಗಳ ಮೇಲೆ ಪೊಲೀಸರು ದಾಳಿ ನಡೆಸಿದರು. ಇದರಿಂದಾಗಿ ಈ ಸಂಸ್ಥೆಗಳು ತಾತ್ಕಾಲಿಕವಾಗಿ ಸ್ತಬ್ಧಗೊಂಡವು.

ಬಿಜೆಪಿಯ ಬಸವರಾಜಪಾಟೀಲ ಮತ್ತು ಕರಂಬಳ್ಳಿ ಸಂಜೀವಶೆಟ್ಟಿಯವರು ಅಯೋಧ್ಯೆ ಘಟನೆಗೆ ಕರಸೇವಕರು ಕಾರಣವಲ್ಲವೆಂದರೆ, ರಾಮಕೃಷ್ಣ ಹೆಗಡೆ "ಇದು ಅಕ್ಷಮ್ಯ ಅಪರಾಧ"ವೆಂದರು. "ಇಂದು ದೇಶ ಅಭದ್ರವಾಗಿದೆ, ಸುಸ್ಥಿತಿಯಲ್ಲಿಲ್ಲ, ಈಗ ಸೌಹಾರ್ದ ಮತ್ತು ಸಾಮರಸ್ಯಕ್ಕಾಗಿ ನಾವೆಲ್ಲ ದೃಢ ಮನಸ್ಸಿನಲ್ಲಿ ಯತ್ನಿಸಬೇಕು"ಎಂದು ಕವಿ ಪುತಿನ ಸಾರಿದರು. "ಧರ್ಮ ಮತ್ತು ರಾಜಕೀಯವನ್ನು ಎಂದೆಂದಿಗೂ ಬೆರಸಬಾರದು. ಎರಡೂ ಬೆರೆತಾಗ ಆಸ್ಫೋಟವಾಗುತ್ತದೆ; ಅನಾಹುತವಾಗುತ್ತದೆ. ಇಂತಹ ಅನಾಹುತವನ್ನು ನಾವು ಪರೋಕ್ಷವಾಗಿ ನೋಡುತ್ತಿದ್ದೇವೆ. ಅದರ ಘೋರ ಪರಿಣಾಮಗಳನ್ನು ಅನುಭವಿಸುತ್ತೇವೆ" ಎಂದು ಹೆಚ್. ನರಸಿಂಹಯ್ಯನವರು ಪ್ರತಿಕ್ರಿಯಿಸಿದರು.

ವಿದೇಶಗಳಲ್ಲಿ ಮಂದಿರ ಧ್ವಂಸ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತಾ ದೇವನೂರ ಮಹಾದೇವ "ದೇವಸ್ಥಾನಗಳನ್ನು ಮುಸ್ಲಿಮರು ಕೆಡವಿದರಂತೆ, ಮಸೀದಿಗಳನ್ನು ಹಿಂದುಗಳು ಕೆಡವಿದರಂತೆ ಎಂದು ಸುದ್ದಿ ಮಾಡಿದರು. ಅವರವರುಗಳಿಗೆ ಇಷ್ಟವಾದುದನ್ನು ಅವರವರುಗಳೇ ಅವರ ಮನಸ್ಸಿನಲ್ಲಿ ಕೆಡವಿಕೊಳ್ಳುತ್ತಿದ್ದದ್ದು, ಅದನ್ನು ಕಣ್ಣಿಗೆ ಕಟ್ಟಿಕೊಂಡು ಹೃದಯಕ್ಕೆ ತುಂಬಿಕೊಂಡು ಅನುಭವಿಸಿ, ಅನುಭವಿಸಿ, ಬಿತ್ತನೆ ಮಾಡಿದರು. ಇದೇನು ಇವರುಗಳ ಸುಪ್ತ ಮನಸ್ಸಿನ ಬಯಕೆಯೇ ಅನ್ನಿಸಿ ದಿಗಿಲಾಗುತ್ತಿದೆ"ಎಂಬ ಭಯವನ್ನು ವ್ಯಕ್ತಪಡಿಸಿದರು. "ಮಂದಿರ ಮಸೀದಿ ವಿಷಯಕ್ಕಿಂತ ರಾಷ್ಟ್ರದಲ್ಲಿ ಉಲ್ಬಣಗೊಳ್ಳುತ್ತಿರುವ ಬಡತನ, ಅನಕ್ಷರತೆ, ನಿರುದ್ಯೋಗದಂತಹ ಸಮಸ್ಯೆಗಳಿಗೆ ಆದ್ಯತೆ ನೀಡಬೇಕು" ಎನ್ನುತ್ತಾ ಕರಸೇವೆಯನ್ನು ವಿರೋಧಿಸಿದವರು ನೀಲಗುಂದದ ಶ್ರೀ ವಿಜಯ ಮಹಾಂತೇಶ್ವರರು.

"ಸಾಮಾಜಿಕ ಬದುಕನ್ನು ಆಧ್ಯಾತ್ಮಿಕಗೊಳಿಸಿದವರು ಗಾಂಧಿ. ಯಾವ ಜೀವಿಯ ಬದುಕನ್ನೂ ನಾಶ ಮಾಡುವ ಹಕ್ಕು ನಮಗಿಲ್ಲ. ಮಂದಿರ-ಮಸೀದಿ ಕಟ್ಟಬೇಕೆನ್ನುವುದು ವಿಕಾರಗಳು. ನಿಜವಾದ ಧರ್ಮದ ಚಿಲುಮೆ ನಮ್ಮಲ್ಲಿ ಹುಟ್ಟಬೇಕು.... ಮತೀಯತೆಯಿಂದ ಸಂಸ್ಕೃತಿಗೆ ಅಪಾಯ, ಆಧ್ಯಾತ್ಮಿಕ ಉನ್ನತಿಗೆ ಭಾರತದಲ್ಲಿ ಎಲ್ಲಾ ಜಾತಿ, ಮತ, ಧರ್ಮೀಯರಿಗೆ ಅವಕಾಶವಿದೆ. ಭಾರತದಲ್ಲಿ ಮುಸ್ಲಿಂ ಧರ್ಮೀಯರಿಗೆ ಹಿಂದುತ್ವದ ಸಂಸ್ಕೃತಿ ಸಂಕೀರ್ಣತೆಯ ಚಿಲುಮೆ ಅನುಸರಿಸಿ ಬದುಕು ಸಾಗಿಸುವ, ಅವಕಾಶವಿದೆ " ಎಂದ ಯು.ಆರ್.ಅನಂತಮೂರ್ತಿ ನಮ್ಮಷ್ಟೇ ಸರಿಸಮವಾದ ಅವಕಾಶ, ಹಕ್ಕು ಮುಸ್ಲಿಮರಿಗೂ ಇದೆ ಎಂಬುದನ್ನು ಸ್ಪಷ್ಟಪಡಿಸಿದರು.

ಹೀಗೆ ಒಬ್ಬಬ್ಬೊರೂ ತಮ್ಮ ಹೇಳಿಕೆಯನ್ನು ನೀಡಿ ಜಾತ್ಯತೀತ ರಾಷ್ಟ್ರದ ಬಗ್ಗೆ ತಮ್ಮ ಕಾಳಜಿ, ಕಳಕಳಿಯನ್ನು ವ್ಯಕ್ತಪಡಿಸಿದರು.

ಮೈತ್ರೀ ಭಾವನೆ

ಹೀಗೆ ಕೋಮು ದಳ್ಳುರಿ, ರಕ್ತದ ಕೋಡಿ, ಸಾವಿನ ದವಡೆಗೆ ಜನರನ್ನು ದಬ್ಬುವ ರಾಜಕೀಯ ಒಂದೆಡೆಯಾದರೆ; ಅದಕ್ಕೆ ವಿರುದ್ಧವಾದ ಪ್ರೀತಿ, ಪ್ರೇಮ ಮಾನವೀಯತೆಗಳು ಹೊರಬಂದವು. ಮುರಿದ ಮನಸ್ಸುಗಳನ್ನು ಒಂದುಗೂಡಿಸುವ, ಸ್ನೇಹ ಸಂಬಂಧವನ್ನು ಅರಳಿಸುವಂತಹ ಹಲವಾರು ಉದಾಹರಣೆಗಳು ಸಂಭವಿಸಿದವು.

ಕಾಶ್ಮೀರದಲ್ಲಿ ಮುಸ್ಲಿಂ ಉಗ್ರಗಾಮಿಗಳ ದಾಳಿಗೆ ಸಿಕ್ಕಿ ಹೆದರಿ ಬೆಂಗಳೂರಿಗೆ ಬಂದ ಕಾಶ್ಮೀರಿ ಪಂಡಿತನೊಬ್ಬ ಎರಡು ವರ್ಷದ ಹಿಂದೆ ಮುಸ್ಲಿಮರೇ ಹೆಚ್ಚಿರುವ ಮುನಿರೆಡ್ಡಿಪಾಳ್ಯದಲ್ಲಿ ವಾಸವಾಗಿದ್ದ. ಈ ಗಲಭೆಯ ಸಮಯದಲ್ಲೇ ಅವ ಸತ್ತ. ಆತನ ಬಯಕೆಯಂತೆ ಅವನ ನೆರೆಹೊರೆಯ ಮುಸ್ಲಿಮರು ಅರ್ಚಕನೊಬ್ಬನಿಂದ ಅಂತ್ಯ ಸಂಸ್ಕಾರ ಮಾಡಿಸಿದರು. ಸ್ನೇಹ ಇಲ್ಲಿ ಜಾತಿಯ ಅಡ್ಡಗೋಡೆಗಳನ್ನು ಕೆಡವಿತ್ತು. ಮಾನವೀಯತೆಯ ನಡುವೆ ಎಲ್ಲಾ ದ್ವೇಷಾಸೂಯೆಗಳು ಮಾಯವಾಗಿಬಿಟ್ಟಿದ್ದವು.

ಇಂದಿಗೂ ಬೆಂಗಳೂರಿನ ಕರಗ ಜಗತ್ಪ್ರಸಿದ್ಧವಾದುದು. ಈ ಕರಗ ಮಸ್ತಾನ್ ಸಾಬರ ದರ್ಗಕ್ಕೆ ಅಂದು ಭೇಟಿ ನೀಡಿ ಪೂಜೆ ಸ್ವೀಕರಿಸುವುದು ತಲತಲಾಂತರಗಳಿಂದ ನಡೆದುಕೊಂಡು ಬಂದಿದೆ.ಹುಬ್ಬಳ್ಳಿಯ ಮೂರುಸಾವಿರ ಮಠ, ಶಿರಹಟ್ಟಿಯ ಸಕೀರ ಸ್ವಾಮಿಯ ಮಠ, ಶಿಶುವಿನಹಾಳದ ಸಂತ ಶರೀಫಸಾಹೇಬರ ಗದ್ದುಗೆಗಳು ಹಿಂದೂ-ಮುಸ್ಲಿಮರ ಸೌಹಾರ್ದಕ್ಕೆ ಮತ್ತೊಂದು ಹೆಸರು.

ಮಂಗಳೂರು ತಾಲೂಕಿನ ಜೋಕಟ್ಟೆ ಗ್ರಾಮದಲ್ಲಿ ಮಸೀದಿಯನ್ನು ಹಾಳುಗೆಡವದಂತೆ ಹಿಂದುಗಳು; ಹಿಂದುಗಳ ಪೂಜಾ ಮಂದಿರವನ್ನು ಮುಸ್ಲಿಮರು ಕಾಯ್ದರು. ಪರಸ್ಪರ ಮತದ ಪೂಜಾಸ್ಥಳಗಳನ್ನು ರಕ್ಷಿಸಿದರು. ಗುಲ್ಬರ್ಗಾದಲ್ಲಿ ಖಾಜಾ ಬಂದೇ ನವಾಜ್‌ಗೆ ಹಿಂದೂ ಭಕ್ತರಿದ್ದಂತೆ, ಶರಣ ಬಸವೇಶ್ವರರಿಗೂ ಮುಸ್ಲಿಂ ಭಕ್ತರಿದ್ದಾರೆಂಬುದು ವಿಚಿತ್ರವಾದರೂ ವಾಸ್ತವ ಸಂಗತಿ. ಮುಂಡಗೋಡದ ಖಾದರ್‌ಲಿಂಗ್ ಗದ್ದುಗೆಯು ಹಿಂದೂ-ಮುಸ್ಲಿಂ ಬದುಕಿನ ಬೆಸುಗೆಯಾಗಿದೆ. ಚಿಕ್ಕಮಗಳೂರಿನ ಬಳಿಯ 'ಗೋರಿಗಂಡಿ' ಎಂಬ ದರ್ಗದ ಉರುಸ್ ಸಮಯದಲ್ಲಿ ಹಿಂದೂ-ಮುಸ್ಲಿಮರೆಲ್ಲರೂ ಒಟ್ಟಾಗಿಯೇ ಸಾಮೂಹಿಕ ಭೋಜನ ಮಾಡುತ್ತಾರೆ. ಇದು ಹಿಂದುಗಳಿಗೆ ಗೌರಿಗಂಡಿಯಾದರೆ ಮುಸ್ಲಿಮರಿಗೆ 'ಗೋರಿಗಂಡಿ'

ಬೆಳಗಾಂ ಜಿಲ್ಲೆಯ ಹುಕ್ಕೇರಿಯ 'ಮಾಮಾಸಾಬಿ'ದೇವಿದರ್ಗಾ ಹಿಂದೂ ಮುಸ್ಲಿಮರಿಗೆ ಆರಾಧ್ಯ ದೈವ. 'ಅಲ್ಲಾ ತುಮ ಹೋ, ಈಶ್ವರ ತುಮಹೋ ತುಮೀ ಹೋ ರಾಮ ರಹೀಮ' ಎಂಬ ಸುಶ್ರಾವ್ಯ ಗೀತೆಯಲ್ಲಿ ಈಶ್ವರ ಅಲ್ಲಾ ಒಂದೇ ಎಂಬ ಸತ್ಯವನ್ನು ಸಾರಿದ್ದಾರೆ.

ನಾಯಕನಹಟ್ಟಿಯ ತಿಪ್ಪೇಸ್ವಾಮಿಯ ವರದಿಂದ ಟಿಪ್ಪು ಹುಟ್ಟಿದನೆಂದೂ ಪ್ರತೀತಿ. ಆ ನೆನಪಿಗೆ ಹೈದರ್ ಕಟ್ಟಿಸಿರುವ ಈ ದೇವಸ್ಥಾನ ಮುಸ್ಲಿಂ ಶಿಲ್ಪಕಲೆಯನ್ನು ಹೊಂದಿದೆ. ಇಷ್ಟೆಲ್ಲಾ ಉದಾಹರಣೆಗಳೇಕೆ? ಸಾಮಾನ್ಯರ ಮನೆಮನೆಯಲ್ಲೂ ಮಂದಿರ-ದರ್ಗಾ ಎಷ್ಟು ಅನಿವಾರ್ಯವಾಗಿದೆ, ನಮ್ಮ ನಿತ್ಯದ ಬದುಕಿನೊಂದಿಗೆ ಅದು ಹೇಗೆ ಬೆಸುಗೆಯಾಗಿ ಹಾಸುಹೊಕ್ಕಿದೆ ಎಂಬುದಕ್ಕೊಂದು ಸಣ್ಣ ಉದಾಹರಣೆಯೆಂದರೆ, ಕಟ್ಟಾ ಸಂಪ್ರದಾಯಸ್ಥರ ಮನೆಯ ಸೊಸೆಯಾಗಿರುವ ನನ್ನ ತಂಗಿ, ನನ್ನ ಪುಟ್ಟ ಮಗಳು ಚಂಡಿ ಹಿಡಿಯಿತೆಂದು ದರ್ಗಕ್ಕೆ ಕರೆದುಕೊಂಡು ಹೋಗಿ ತಾಯ್ತ ಕಟ್ಟಿಸಿಕೊಂಡು ಬಂದಿರುವುದನ್ನು ಅವಳ ಅತ್ತೆ ಸ್ವಾಗತಿಸಿದರೆಂಬುದಕ್ಕೂ ಮಿಗಿಲಾದ ಕೋಮು ಸೌಹಾರ್ದತೆ ಬೇಕೆ?

ಈ ಸಮಯದಲ್ಲಿ ಎಲ್ಲಾ ಸಮೂಹಮಾಧ್ಯಮಗಳು ಜವಾಬ್ದಾರಿಯಿಂದ ವರ್ತಿಸಿದೆ. ಜನರು-ಸಮಾಜ ಶಾಂತಿಯಿಂದ ವರ್ತಿಸುವಂತೆ ನೋಡಿಕೊಂಡಿವೆ. ಅದರಲ್ಲೂ ಬೆಂಗಳೂರು ಆಕಾಶವಾಣಿ ಕೇಂದ್ರ ಕೋಮು ಸೌಹಾರ್ದದ ಮಹತ್ವದ ಬಗ್ಗೆ ಆಗಾಗ್ಗೆ ಕವಿವಾಣಿಗಳನ್ನು ಬಿತ್ತರಿಸುವುದರ ಮೂಲಕ ಜನರ ಕುದಿಯನ್ನು ತಣ್ಣಗಾಗಿಸಿ ಶಾಂತಿ ಮಂತ್ರವನ್ನು ಮನನ ಮಾಡಿಸುವಲ್ಲಿ ಯಶಸ್ವಿಯಾಗಿದೆ.

ಮುಂದೇನು?

ಇಂತಹ ಘಟನೆಗಳು ರಾಷ್ಟ್ರೀಯ ಪ್ರಗತಿಯನ್ನು ಕುಂಠಿತಗೊಳಿಸುತ್ತವೆ. ಗಲಭೆಗಳಾದಾಗ ಮಾತ್ರ ಶಿಸ್ತಿನ ಕ್ರಮ ಅನುಸರಿಸಿ, ಭರವಸೆ ಮಾತುಗಳನ್ನು, ಬರಿದೇ ವಿಷಾದಗಳನ್ನು ವ್ಯಕ್ತಪಡಿಸುವ ಬದಲು ಸಮಸ್ಯೆಗೆ ಶಾಶ್ವತ ಪರಿಹಾರವನ್ನು ತುರ್ತಾಗಿ ಕಂಡುಹಿಡಿಯುವ ಆಗತ್ಯವಿದೆ. 'ಭಯೋತ್ಪಾದಕ ವಿಧ್ವಂಸಕರ ತಡೆ ಮಸೂದೆ', 'ಗೂಂಡಾ ಕಾಯ್ದೆ', 'ಪೊಲೀಸ್ ಕಾಯ್ದೆ'ಗಳು ಇದ್ದರೂ ಕೂಡಾ ಕೇವಲ ಕಾನೂನಿನಿಂದ ಯಾವ ಪರಿವರ್ತನೆಯೂ ಸಾಧ್ಯವಿಲ್ಲವೆಂಬುದು ಸಾಬೀತಾಗಿದೆ. ಗಲಭೆಗಳನ್ನು ಕಾನೂನುಗಳಿಂದ ಮೇಲ್ನೋಟಕ್ಕೆ ಹತ್ತಿಕ್ಕಬಹುದಾದರೂ ಗಲಭೆಯ ಮೂಲ ಬೇರನ್ನು ಕೀಳಲು ಸಾಧ್ಯವಿಲ್ಲ. ನೂರಾರು ವರ್ಷಗಳಿಂದ ಈ ನೆಲದಲ್ಲಿ ವಿವಿಧ ಜಾತಿ, ಧರ್ಮ, ಜನಾಂಗಗಳೊಂದಿಗೆ ಅನೇಕ ಸಂಸ್ಕೃತಿಗಳು ಮೈತಾಳಿವೆ; ಒಂದಕ್ಕೊಂದು ಮಿಳಿತಗೊಂಡಿವೆ. ಹೊಂದಾಣಿಕೆಯ, ಸಹನೆಯ ಸಂಸ್ಕಾರವನ್ನು ಪಡೆದುಕೊಂಡು ವಿವಿಧತೆಯಲ್ಲಿ ಏಕತೆಯನ್ನು ಕಂಡುಕೊಂಡಿದೆ. ಈ ದಿಸೆಯಲ್ಲಿ ನಮ್ಮ ಗ್ರಾಮಗಳು ನಮಗೆ ಆದರ್ಶವಾಗಬೇಕು. ಹಳ್ಳಿಗಳಲ್ಲಿ ಜಾತಿಜಾತಿಗಳ ನಡುವೆ ಘರ್ಷಣೆ, ಗಲಭೆಗಳು ಆದ ಉದಾಹರಣೆಗಳು ತೀರಾ ವಿರಳ. ಬದುಕಿನ ಅವಶ್ಯಕತೆಗೆ ಹೊಂದಾಣಿಕೆ ಎಷ್ಟು ಅಗತ್ಯವೆಂಬ ಸತ್ಯವನ್ನು ಮನನ ಮಾಡಿಕೊಂಡು ಹೊಂದಿ ಬಾಳುವ ಗುಣವನ್ನು ಗ್ರಾಮಸ್ಥರಿಂದ ನಾವು ಕಲಿಯಬೇಕಾಗಿದೆ, ಮನಸ್ಸುಗಳ ಪರಿವರ್ತನೆಯಾಗಬೇಕಾಗಿದೆ, ಸಹನೆಯ ಮಂತ್ರ ನಮ್ಮ 'ಮೌಲ್ಯ'ವಾಗಬೇಕಾಗಿದೆ.

೧೯೯೪ನೇ ಇಸವಿಯಂತು ಕೆಟ್ಟ ಕನಸಿನೋಪಾದಿ ಮುಗಿದಿದೆ. ಮುಂಬರುವ


ದಿನಗಳಲ್ಲಿ ಏನು ಕಾದಿದೆಯೊ ಎಂದು ಬೆಚ್ಚಿಬೀಳುವಂತೆ ಮಾಡಿದೆ, ಆತಂಕ ತಂದಿದೆ. ದುಗುಡ ಹೆಚ್ಚಿಸಿದೆ. ೧೯೯೨ ಹುಟ್ಟುಹಾಕಿದ ಸಮಸ್ಯೆಗಳು 92ಕ್ಕೆ ಮುಗಿಯುತ್ತವೆಯೇ? ಮುಗಿಯುವುದೆಲ್ಲಿಯ ಮಾತು?

"ಅಹಿಂಸೆ ಮತ್ತು ಮೌಲ್ಯಗಳ ಚೌಕಟ್ಟಿನಲ್ಲಿ ಮನುಷ್ಯ ಮತ್ತು ಸಮಾಜ ಬದಲಾವಣೆಯಾಗಬೇಕೆಂದು" ಜೆ.ಪಿ. ಬಯಸಿದ್ದರು, "ಅಲ್ಪಸಂಖ್ಯಾತರನ್ನು ಬಗ್ಗು ಬಡಿದು ಹಿಂದೂ ರಾಷ್ಟ್ರ ಸ್ಥಾಪಿಸುತ್ತೇನೆಂದು ಹೊರಟರೆ ಆಗ ಹಿಂದೂ ಧರ್ಮ ಮತ್ತು ಜನರ ಸರ್ವನಾಶ ಖಂಡಿತ" ಎಂದಿದ್ದ ಗಾಂಧೀಜಿಯ ಎಚ್ಚರಿಕೆಯನ್ನು ನಿರ್ಲಕ್ಷಿಸಿದ್ದರಿಂದ ಅವರ ಮಾತಿನ ಸತ್ಯವನ್ನು ನಾವೀಗ ಮನಗಾಣುತ್ತಿದ್ದೇವೆ. ಕೋಮು ಗಲಭೆಯ ಹಿಂದಿನ ಕರಾಳ ಸತ್ಯವನ್ನು ಮಾತಿಗಿಂತ ಬೇರೆಯಾಗಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ ಅಲ್ಲವೇ ?

●

* * *

ಪ್ರಶಸ್ತಿ ವಿಜೇತರು



ರಾಜಕುಮಾರ್

– ಕೆ.ವಿ. ನಾರಾಯಣ

ಸಮುದಾಯಗಳಿಗೆ ನಾಯಕರು ಬೇಕು. ಈ ನಾಯಕರು ಹೇಗೆ ರೂಪುಗೊಳ್ಳುತ್ತಾರೆಂಬುದು ಸುಲಭ ವ್ಯಾಖ್ಯೆಗೆ ಒಗ್ಗುವ ವಿಷಯವಲ್ಲ. ಜನತಾಂತ್ರಿಕ ವ್ಯವಸ್ಥೆಯಲ್ಲಿ ರಾಜ್ಯಶಕ್ತಿ ಚುನಾವಣೆಗಳ ಮೂಲಕ ನಾಯಕರನ್ನು ಆಯ್ದುಕೊಳ್ಳುತ್ತದೆ. ಆದರೆ ಸಮೂಹ ತನ್ನದೇ ಆದ ಬಗೆಗಳಲ್ಲಿ ತನ್ನ ನಾಯಕರನ್ನು ಗುರುತಿಸಿಕೊಳ್ಳುತ್ತದೆ. ಅಧಿಕಾರ ಕೇಂದ್ರದಿಂದ ಹೊರಗುಳಿದರೂ ಈ ನಾಯಕರು ಹಲವು ವಿಧಗಳಲ್ಲಿ ತಮ್ಮ ಪ್ರಭಾವಲಯವನ್ನು ಕಾಯ್ದಿರಿಸಿಕೊಳ್ಳಲು ಶಕ್ತರಾಗುತ್ತಾರೆ. ಅಥವಾ ಅಧಿಕಾರ ಕೇಂದ್ರೀಕರಣಗೊಳ್ಳುವುದನ್ನು ತಡೆಯಲು ಸಮುದಾಯ ಇಂಥ ಹುನ್ನಾರಗಳನ್ನು ರೂಪಿಸುತ್ತದೋ ಏನೋ! ಹೀಗೆ ನಾಯಕರು ಕಲಾವಲಯಗಳಲ್ಲಿ, ಸಾಹಿತ್ಯಕ್ಷೇತ್ರದಲ್ಲಿ, ಆಟದ ಮೈದಾನದಲ್ಲಿ ಮೈದಳೆಯುತ್ತಿರುತ್ತಾರೆ.

ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಜನಸಮುದಾಯ ಗುರುತಿಸಿಗೊಂಡ ನಾಯಕರಲ್ಲಿ ನಟ ರಾಜಕುಮಾರ್ ಒಬ್ಬರು. ಚಲನಚಿತ್ರಗಳ ನಾಯಕ ಪಾತ್ರಧಾರಿಯಾಗಿ ಸುಮಾರು ನಲವತ್ತು ವರ್ಷಗಳಿಂದ ಜನರಂಜನೆಗಾಗಿ ತಮ್ಮ ವೃತ್ತಿ ಜೀವನವನ್ನು ಸಾಗಿಸಿದ್ದಾರೆ. ಕನ್ನಡ ಚಲನಚಿತ್ರರಂಗದ ಚರಿತ್ರೆಯನ್ನು ರಾಜಕುಮಾರ್ ಅವರ ವೃತ್ತಿ ಜೀವನದ ಚರಿತ್ರೆಯಿಂದ ಬೇರೆಯಾಗಿಸಿ ನೋಡುವುದು ಅಸಾಧ್ಯವೆನಿಸುವಷ್ಟು ಅವೆರಡೂ ಬೆರೆತುಹೋಗಿವೆ.

ಚಲನಚಿತ್ರ ನಿರ್ಮಾಣ ಒಂದು ಗುಂಪು ಹವ್ಯಾಸವಾಗಿದ್ದ ಕಾಲದಿಂದ, ಕೋಟ್ಯಂತರ ರೂಪಾಯಿಗಳ ಬಂಡವಾಳ ಹಾಗೂ ಹಲವು ಸಾವಿರಮಂದಿಯ ಉದ್ಯೋಗವನ್ನು ಒಳಗೊಂಡ ಉದ್ಯಮವಾಗಿ ಬೆಳೆದುಬಂದಿದೆ. ರಾಷ್ಟ್ರಮಟ್ಟದಲ್ಲಿ ಇಂಥ ಉದ್ಯಮ ತತ್ತರಿಸುವುದು ಅನಿವಾರ್ಯ. ಆದರೆ ಸರಕಾರದ ಒತ್ತಾಸೆಯಿಂದ ಈ ಅಪಾಯ ಅಷ್ಟಿಷ್ಟು ಕಡಿಮೆಯಾಗಬಹುದಾದರೂ ಉದ್ಯಮ ಕುಸಿಯದಂತೆ ಹಿಡಿಯುವ ಒಳಬಲವೊಂದು ಅವಶ್ಯ. ಕನ್ನಡ ಚಲನಚಿತ್ರೋದ್ಯಮಕ್ಕೆ ರಾಜಕುಮಾರ್ ಅಂಥ ಒಳಬಲವಾಗಿದ್ದಾರೆ. ಚಲಚಿತ್ರರಂಗಕ್ಕೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನೆಲೆಯಲ್ಲಿ ಗೌರವ ತಂದುಕೊಟ್ಟ ಕೆಲವು ಹೆಸರುಗಳನ್ನು ಹೇಳಬಹುದಾದರೂ ಉದ್ಯಮ ಬಲಗೊಳ್ಳಲು ನೆರವಾದವರಲ್ಲಿ ರಾಜಕುಮಾರ್ ಅವರಿಗೆ ಸಾಟಿಯಾಗಬಲ್ಲವರು ಇಲ್ಲವೆನ್ನಬಹುದು.

ಉದ್ಯಮಕ್ಕೆ ಸಂಬಂಧಿಸಿದ ಕೊಡುಗೆ, ಸಾಧನೆಗಳಷ್ಟೆ ರಾಜಕುಮಾರ್ ಅವರಿಗೆ ಸಮುದಾಯದ ನಾಯಕಸ್ಥಾನವನ್ನು ದೊರಕಿಸಿಕೊಟ್ಟಿರಲಾರವು. ಅವರ ಚಿತ್ರಗಳ ಕಲಾತ್ಮಕತೆ, ಅವರ ನಟನೆಯ ಗುಣಗಳು ಮತ್ತಿತರ ಸಂಗತಿಗಳನ್ನು ಕೇವಲ ಚಲಚಿತ್ರ ಮೀಮಾಂಸೆಯ ನಿಟ್ಟಿನಿಂದಷ್ಟೇ ನೋಡಿದರೆ ಸಾಲದು. ಹಾಗೆ ನೋಡಿದರೆ ಒಂದೋ ಅವರನ್ನು ಯಾವುದೇ ಸಾಮಾನ್ಯನಟನಿಂದ ಬೇರೆಮಾಡಿ ನೋಡಲಾಗುವುದಿಲ್ಲ ಅಥವಾ ಅನಾವಶ್ಯಕ ಗುಣವಾಚಕಗಳಿಂದ ವಾಸ್ತವವನ್ನು ಮರೆಮಾಚಲೂಬಹುದು. ಆದ್ದರಿಂದ ನೋಡುಗರಲ್ಲಿ ರಾಜಕುಮಾರ್ ಬಗೆಗೆ ಇರುವ ನಾಯಕಬಿಂಬ ರೂಪುಗೊಳ್ಳಲು ಇದ್ದ, ಇರುವ ಸನ್ನಿವೇಶವನ್ನು ಅರಿಯಲು ಹೆಚ್ಚು ವ್ಯಾಪಕವಾದ ಸಾಮಾಜಿಕ ವಲಯವನ್ನು ಪರಿಗಣಿಸಬೇಕು.

ರಾಜ್ಯ ಮರುವಿಂಗಡಣೆಗೆ ಮೊದಲು ಹಾಗೂ ಅನಂತರ ಕೂಡ 'ಕರ್ನಾಟಕ'ದ ಎಲ್ಲ ಕಡೆಗೂ ಪ್ರಸಾರ ಪಡೆದಿದ್ದುದು ಕನ್ನಡ ಚಲನಚಿತ್ರ ಮಾತ್ರ. ವೃತ್ತಿನಾಟಕಗಳ ಕಂಪನಿಗಳು ಮೊದಮೊದಲು ಇಂಥ ದೇಶವ್ಯಾಪ್ತಿಯನ್ನು ಪಡೆದಿದ್ದವು. ಆದರೆ ನಿಧಾನವಾಗಿ ಈ ಮಹತ್ತ್ವದ ಜವಾಬ್ದಾರಿಯನ್ನು ಚಲನಚಿತ್ರಗಳು ಪಡೆದುಕೊಂಡವು. ನಗರ, ಹಳ್ಳಿಗಳೆಲ್ಲ ಕಡೆಗೂ ಸಂಪರ್ಕಸಾಧ್ಯತೆಯಿದ್ದ ಚಲನಚಿತ್ರಗಳಿಂದಾಗಿ ಜನಸಮುದಾಯಕ್ಕೆ ಪರಿಚಿತರಾಗುವ ಅವಕಾಶಗಳು ಆ ಚಲನಚಿತ್ರಗಳ ನಾಯಕರಿಗೆ ದೊರಕಿತು. ಏಕಕಾಲಕ್ಕೆ ಲಕ್ಷಾಂತರ ಜನರೊಡನೆ ಹೀಗೆ ಸಂಪರ್ಕಪಡೆಯುವ ಅವಕಾಶ ಈಗ ಕೂಡ, ಕರ್ನಾಟಕದ ಮಟ್ಟಿಗೆ ಚಲನಚಿತ್ರದ ನಟರಿಗೆ ಮಾತ್ರ ಇದೆ ಎಂಬ ಸಂಗತಿಯನ್ನು ಮರೆಯುವಂತಿಲ್ಲ. ಇದರಿಂದಾಗಿ ರಾಜಕುಮಾರ್ ಜನಪರಿಚಯಪಡೆಯುವ ಅವಕಾಶ ಪಡೆದ ಮೊದಲ ಸಮುದಾಯ ನಾಯಕ.


ಕರ್ನಾಟಕ ಸಮಾಜದಲ್ಲಿ ನಡೆದ ಸಾಮಾಜಿಕ ಸಂಚಲನೆಗಳ ಫಲಿತಗಳನ್ನು ರಾಜಕುಮಾರ್ ನಟಿಸುತ್ತ ಬಂದಿರುವ ನಾಯಕ ಪಾತ್ರಗಳು ಒಂದಿಲ್ಲ ಒಂದು ಬಗೆಯಲ್ಲಿ ಪ್ರತಿಬಿಂಬಿಸುತ್ತ ಬಂದಿವೆ. ಸಾಹಸ, ತ್ಯಾಗ, ನಿಷ್ಠೆ, ಸಾಧನೆಗಳಂಥ ಕಾಲದೇಶ ಬದ್ಧವಲ್ಲದ ಮೌಲ್ಯಗಳ ಜತೆಜತೆಗೆ ಸಮಕಾಲೀನ ಆಕೃತಿಗಳು ಅವರ

ಪಾತ್ರಗಳಲ್ಲಿ ಸೇರಿವೆ. ಹಳ್ಳಿಗನೊಬ್ಬನ ಸ್ವಾಭಿಮಾನ, ಕಲಿಕೆಯ ಇಬ್ಬಂದಿತನ, ಬಡವ–ಶ್ರೀಮಂತರ ಮುಖಾಮುಖಿ, ಕುಟುಂಬ ವ್ಯವಸ್ಥೆಯ ವಿಘಟನೆಗಳು ಇವೇ ಮುಂತಾದ ಸಾಮಾಜಿಕ ಸಂಗತಿಗಳ ಈಚಿನ ಸ್ವರೂಪಗಳನ್ನು ಅಳವಡಿಸಿಕೊಂಡ ಹತ್ತಾರು ಪಾತ್ರಗಳನ್ನು ರಾಜಕುಮಾರ್ ನಿರ್ವಹಿಸಿದ್ದಾರೆ. ಈ ಎಲ್ಲ ಸಮಸ್ಯೆಗಳನ್ನು ಸಾಮಾಜಿಕ ಬದಲಾವಣೆಗಳನ್ನು ಅಧ್ಯಯನಮಾಡುವಾತ ಹೇಗೆ ನೋಡುತ್ತಾನೆ ಎಂಬುದು ಮುಖ್ಯವಲ್ಲ. ಬದಲಿಗೆ ಈ ಬದಲಾವಣೆಗಳಿಗೆ ಸಮುದಾಯ ನೀಡಿಕೊಂಡ ಜನಪ್ರಿಯ ವ್ಯಾಖ್ಯೆ ಹಾಗೂ ಪಡೆದ ಬಹುವ್ಯಾಪ್ತಿ ಗ್ರಹಿಕೆಗಳು ಗಮನಾರ್ಹ. ಏಕೆಂದರೆ ರಾಜಕುಮಾರ್ ನಾಯಕರಾಗಿದ್ದು ಇಂಥ ವ್ಯಾಖ್ಯೆ ಮತ್ತು ಗ್ರಹಿಕೆಗಳನ್ನು ಪಡೆದ ಪಾತ್ರಗಳ ಮೂಲಕವೇ. ಆದ್ದರಿಂದ ಸಹಜವಾಗಿಯೇ ಸಮುದಾಯ ತನ್ನ ವ್ಯಕ್ತಿಬಿಂಬವನ್ನಾಗಿ ಅವರನ್ನು ಸ್ವೀಕರಿಸಿತು. ಸಾಮಾಜಿಕ ನೆಲೆಗಳ ಬದಲಾವಣೆ ಸಾಮುದಾಯಿಕ ವ್ಯಾಖ್ಯೆಗಳನ್ನು ಬಿಂಬಿಸುವ ಕಲೆಗಳ ಜನಪ್ರಿಯತೆಯನ್ನು ಬಲ್ಲ ಯಾರಿಗಾದರೂ ರಾಜಕುಮಾರ್ ಏಕೆ ಕರ್ನಾಟಕ ವ್ಯಾಪ್ತಿಯ ಸಮುದಾಯ ನಾಯಕರಾದರು ಎಂಬುದು ಸ್ಪಷ್ಟವಾಗುತ್ತದೆ.

ರಾಜಕುಮಾರ್ ಸಮುದಾಯ ನಾಯಕರಾದುದಕ್ಕೆ ಇರುವ ಸಾಮಾಜಿಕ ಕಾರಣಗಳನ್ನು ಹೇಳಿದ ಮಾತ್ರಕ್ಕೆ ನಟರಾಗಿ ಅವರ ಸಾಮರ್ಥ್ಯಗಳನ್ನು ಅಲ್ಲಗಳೆದಂತಲ್ಲ. ಆಂಗಿಕ ಅಭಿನಯದಲ್ಲಿ ವರ್ಷಕಳೆದಂತೆ ಅವರು ನೆಲೆಗೊಳಿಸಿರುವ ಶೈಲೀಕೃತ ಬಗೆಯೊಂದು ಕಡೆಗೆ ಇದೆ. ವಾಚಿಕದಲ್ಲಿ ಅವರ ಕನ್ನಡ ಉಚ್ಚಾರಣೆ ಹಾಗೂ ಕಾಕುಗಳು ಕೂಡ ಭಾವತೀವ್ರತೆಯೊಡನೆ ಶೈಲೀಕೃತ ವಿಧಾನವನ್ನು ರೂಢಿಸಿವೆ. ಕನ್ನಡದ ಪ್ರಮಾಣೀಕೃತ ಉಚ್ಚಾರಣೆಗೆ ಒಂದು ಮಾದರಿ ಎಂಬಂತೆ ಅವರ ವಾಚಿಕಾಭಿನಯ ಬೆಳೆದು ಬಂದಿದೆ. ಇವೆಲ್ಲದರ ಜತೆಗೆ ಅವರ ಒಟ್ಟು ಚಿತ್ರಗಳ ಆಕಾರ ಮತ್ತು ನಾಯಕನಾಗಿ ಅವರು ಪಡೆದುಕೊಳ್ಳುವ ಮಹತ್ವಗಳ ಬಗ್ಗೆ ಇನ್ನೂ ವಿವರವಾಗಿ ಚರ್ಚಿಸುವ ಆವಶ್ಯಕತೆ ಇದೆ.

ಈ ಸಮುದಾಯ ನಾಯಕನನ್ನು ಚಾಲ್ತಿಯ ಜನತಾಂತ್ರಿಕ ವ್ಯವಸ್ಥೆ ಗುರುತಿಸಿ ಗೌರವಿಸುವುದು ಅನಿವಾರ್ಯ. ಅಂಥ ಹಲವು ಗೌರವಗಳ ಸಾಲಿನಲ್ಲಿ ಈಚಿನ 'ಕರ್ನಾಟಕರತ್ನ' ಪ್ರಶಸ್ತಿ ಸೇರಿದೆ. ಈ ಪ್ರಶಸ್ತಿಯನ್ನು ಪಡೆಯಲು ಅವರು ತಕ್ಕವರು. ವ್ಯಕ್ತಿ, ಸಮುದಾಯ ಹಾಗೂ ರಾಜ್ಯವ್ಯವಸ್ಥೆ ಅನುಭವಿಸುವ ಸಮ್ಮತಿಯ ಗಳಿಗೆಗಳು ಈ ಪ್ರಶಸ್ತಿಗಳು.

* * *



ಕುವೆಂಪು

– *ಲಿಂಗರಾಜು*


ಕುವೆಂಪು ಕನ್ನಡ ಕಾವ್ಯ ಸಂಸ್ಕೃತಿಯ ಉನ್ನತ ಶಿಖರ. ಅವರನ್ನು ಕನ್ನಡ ಸಂಸ್ಕೃತಿಯು ತನ್ನವನನ್ನಾಗಿಸಿಕೊಂಡಿದೆ. ಅವರು ಭಾಷೆ ಮತ್ತು ಸಂಸ್ಕೃತಿಯ ಸಂವರ್ಧನೆಗಾಗಿ ಮಾಡಿದ ಕೆಲಸವನ್ನು ನಾಡು ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತಿದೆ. ಅವರು ಈಗ ವಿಶ್ರಾಂತ ಜೀವನದಲ್ಲಿದ್ದಾರೆ. ಅವರ ಸೃಜನಶೀಲತೆ ತಾನು ಕೊಡಬೇಕಿರುವುದನ್ನೆಲ್ಲ ಕೊಟ್ಟ ನೆಲೆಯಲ್ಲಿ ನಿಂತಿದೆ. ಕುವೆಂಪು ಮತ್ತು ಕುವೆಂಪು ಸಾಹಿತ್ಯ ಕನ್ನಡ ಬದುಕಿನ ಭಾಗವಾಗಿದೆ. ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಪಡೆಯಬಹುದಾದ ಎಲ್ಲ ಗೌರವಗಳನ್ನೂ ಕುವೆಂಪು ಅವರು ಪಡೆದುಕೊಂಡಿದ್ದಾರೆ. ಆದರೂ ಹೊಸ ಪ್ರಶಸ್ತಿಗಳು ಕುವೆಂಪು ಅವರನ್ನೇ ಅರಸುತ್ತವೆ ಎನ್ನುವುದನ್ನು 'ಕರ್ನಾಟಕ ರತ್ನ' ಪ್ರಶಸ್ತಿ ತೋರಿಸಿದೆ. 'ಪಂಪ ಪ್ರಶಸ್ತಿ'ಯ ನೆನಪು ಕನ್ನಡ ಜನತೆಯ ಮನದಲ್ಲಿ ಇನ್ನೂ ಹಸಿರಾಗಿರುವಾಗಲೇ ಸಂದಿರುವ ಈ ಪ್ರಶಸ್ತಿ ಕುವೆಂಪು ಅವರಿಗೆ ಈ ವರೆಗೆ ಸಲ್ಲುತ್ತಾ ಬಂದ ಮುಖ್ಯ ಪ್ರಶಸ್ತಿಗಳ ನೆನಪನ್ನೂ ತರುತ್ತಿದೆ.

ಕುವೆಂಪು ಅವರು ಕನ್ನಡ ಸಂಸ್ಕೃತಿಯಲ್ಲಿ ಪಡೆದುಕೊಳ್ಳುತ್ತಿರುವ ಈ ಘನತೆಗೆ ಅವರ ಸಾಹಿತ್ಯವೇ ಮೂಲನೆಲೆಯಾಗಿದೆ. ಕನ್ನಡ ಸಾಹಿತ್ಯವು ವಸಾಹತುಶಾಹಿ ಅನುಭವದೊಂದಿಗೆ, ಅದು ವರೆಗೂ ಕೆಲವರ ಸ್ವತ್ತಾಗಿದ್ದ ಕಲಿಕೆಯನ್ನು, ಒಟ್ಟು ಜನಾಂಗಕ್ಕೆ ತೆರೆದುಕೊಳ್ಳುತ್ತಿತ್ತು. ಅದು ತನ್ನಲ್ಲಿ ಹೊಸತನ ತಂದುಕೊಳ್ಳಲಾರಂಭಿಸಿತ್ತು. ಕಾವ್ಯದ ಮೈಯನ್ನು ಒಳಗೊಂಡಿದ್ದ ಸಾಹಿತ್ಯ

ಗದ್ಯದತ್ತಲೂ ಹೊರಳತೊಡಗಿತ್ತು. ಕನ್ನಡಸಾಹಿತ್ಯ ಹಲವು ಪ್ರಕಾರಗಳನ್ನು ಸೃಷ್ಟಿಸಿಕೊಳ್ಳುತ್ತಿತ್ತು. ಇಂಥ ಸಂದರ್ಭದಲ್ಲಿ ಕುವೆಂಪು ಪರಂಪರೆಯ ಎಲ್ಲ ಅಂಶಗಳನ್ನು ಜೀರ್ಣಿಸಿಕೊಂಡು ಸಾಹಿತ್ಯದ ಈ ಎಲ್ಲ ಪ್ರಕಾರಗಳನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಂಡರು. ಅವರು ಸಂಸ್ಕೃತಿಯಲ್ಲಿ ಮೇಲುಸ್ತರವನ್ನೇ ಕಾಪಾಡಿಕೊಳ್ಳುತ್ತ ಬರುತ್ತಿದ್ದ ವೈದಿಕ ನೆಲೆಯ ಎದುರಿಗೆ ನಿಲ್ಲುವಂಥ ಆತ್ಮವಿಶ್ವಾಸವನ್ನು ತಮ್ಮ ರಚನೆಗಳಲ್ಲಿ ತೋರಿಸಿದರು. ಕೀಳರಿಮೆಯ ಒಳಕೊರಗಿನಲ್ಲಿದ್ದ ಕೆಳವರ್ಗದ ಜನಾಂಗಕ್ಕೆ ಆಶೋತ್ತರಗಳ ಪ್ರತೀಕವಾಗಿ ನಿಲ್ಲುವಂಥ ವ್ಯಕ್ತಿತ್ವವಾದರು. ಈ ಆಶಯದ ಸಂಕೇತವಾಗಿ 'ಬೆರಳ್‌ಗೆ ಕೊರಳ್' 'ಶೂದ್ರ ತಪಸ್ವಿ'ಗಳಂಥ ನಾಟಕಗಳನ್ನು ಬರೆದರು. ಹೊಸ ಬದುಕಿನ ಆಶೋತ್ತರವಾಗಿ 'ಶ್ಮಶಾನ ಕುರುಕ್ಷೇತ್ರಂ' 'ಜಲಗಾರ ' ನಾಟಕಗಳನ್ನು ಬರೆದರು. 'ಶ್ರೀರಾಮಾಯಣ ದರ್ಶನಂ;ನಂಥ ಕಾವ್ಯ ಸೃಜಿಸುವಲ್ಲಿ 'ನಾನೃಷಿಃ ಕುರುತೇ ಕಾವ್ಯಂ' ಎಂಬ ಉಕ್ತಿಯನ್ನು ದಿಟವಾಗಿಸಿದರು. ಅವರು ವೈದಿಕ ನೆಲೆಗಟ್ಟಿನ ತಾತ್ವಿಕತೆಗಳಲ್ಲಿ ಹೊಸ ಹೊಳಹುಗಳನ್ನು ಮೂಡಿಸಿದರು. ಪುತ್ರಕಾಮೇಷ್ಟಿಯಾಗದಲ್ಲಿ ಬಲಿಯನ್ನು ನಿವಾರಿಸುವ ಯಜ್ಞಕಾರ್ಯವನ್ನು ಕಾವ್ಯಶರೀರದೊಳಗೆ ತಂದರು. ರಾವಣನ ಪಾತ್ರಕ್ಕೆ ಕಾಲಾಂತರದಿಂದಲೂ ಅಂಟುತ್ತ ಬಂದಿದ್ದ ದುಷ್ಟತೆಯನ್ನು ತೊಡೆದು ಹಾಕಿದರು. ಆಕಾಶ ದೇವತೆಗಳ ಒಲುಮೆಗಿಂತಲೂ ನೆಲದ ಬದುಕಿನ ಸಮೃದ್ಧತೆಯನ್ನು ತಮ್ಮ ಎಲ್ಲ ಕೃತಿಗಳ ಪಾತ್ರಗಳ ಒಳತುಡಿತವಾಗಿ ಬಿಂಬಿಸಿದರು. ಅದನ್ನು ಮುಕುಂದಯ್ಯ, ಹೂವಯ್ಯ, ಐತ, ಪೀಂಚಲು, ಗುತ್ತಿ, ಲಿಂಗನಂಥವರಲ್ಲದೆ ಸೀತೆ, ಸುಬ್ಬಮ್ಮ ಅವರಂಥ ಸ್ತ್ರೀಪಾತ್ರಗಳೂ ತೋರಿಸಿದವು. ಸಾಹಿತ್ಯ ಕೃತಿಯೊಂದರಲ್ಲಿ ಮಿಂಚಿ ಮರೆಯಾಗುವ ಗೌಣ ಪಾತ್ರಗಳು ಕುವೆಂಪು ಅವರ ಕೃತಿಗಳಲ್ಲಿ ಸ್ಪಷ್ಟ ಆಕಾರದಲ್ಲಿ ಮೂಡುವ ಗೌರವ ಪಡೆದುಕೊಂಡಿವೆ. 'ತಿಂಗಳ್ ಮಾಮ ಬರತಿದಾನೆ ನೋಡಮ್ಮ' ಎಂಬ ಮುಗ್ಧತೆಯೊಂದಿಗೇ, 'ಎಲ್ಲ ದಾನಗಳು, ಎಲ್ಲ ಧರ್ಮಗಳು ಕಡೆಗಿಲ್ಲಿಗೇ' ಎನ್ನುವ ಕಾಲಭೈರವನ ದನಿಯೂ ಅನುರಣನಗೈಯ್ಯುವಂತೆ ಅಭಿವ್ಯಕ್ತಿಗೊಂಡಿವೆ. 'Poetry is the spontaneous over flow of powerful feelings' ಎಂದಿರುವ ವರ್ಡ್ಸ್‌ವರ್ತ್‌ನ ಮಾತನ್ನು ತಮ್ಮ ಕಾವ್ಯದಲ್ಲಿ ತಮ್ಮ ಕಾಲದ ಎಲ್ಲ ಒತ್ತಡಗಳ ನಡುವೆಯೂ ಹಲವು ಭಾವಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಕುವೆಂಪು ಅವರ ಅಭಿವ್ಯಕ್ತಿಕ್ರಮದ ವಿಶಿಷ್ಟತೆ ಗದ್ಯ ಪದ್ಯಗಳೆರಡರಲ್ಲೂ ಹಾಸುಹೊಕ್ಕಾಗಿದೆ. ಈ ಶತಮಾನದ ಪ್ರಮುಖ ಲೇಖಕರಾಗಿ, ಕುವೆಂಪು ಅವರ ಹಿರಿಮೆ ಬಹಳ ದೊಡ್ಡದು. ಅದನ್ನು 'ಕರ್ನಾಟಕರತ್ನ' ಪ್ರಶಸ್ತಿಯು ಸಾಂಕೇತಿಸುತ್ತದೆ.

* * *



ಸು.ರಂ. ಎಕ್ಕುಂಡಿ

– *ಬಸವರಾಜ ಕಲ್ಗುಡಿ*

ಸು. ರಂ. ಎಕ್ಕುಂಡಿಯವರಿಗೆ ೧೯೯೨ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅವರ 'ಬಕುಲದ ಹೂವುಗಳು' ಕವನಸಂಕಲನಕ್ಕಾಗಿ ದೊರಕಿದೆ. ಸುಮಾರು ನಲವತ್ತು ವರ್ಷಗಳ ಕಾವ್ಯಕೃಷಿಯನ್ನು ಮಾಡಿದ ಸು. ರಂ. ಎಕ್ಕುಂಡಿಯವರು, ಆಧುನಿಕ ಕನ್ನಡ ಕಾವ್ಯ ಪರಂಪರೆಯ ಹಲವು ಘಟ್ಟಗಳನ್ನು ಹಾದು ಬಂದಿದ್ದಾರೆ. ಎಕ್ಕುಂಡಿಯವರ ಕವನಗಳು ಕಾಲಾನುಗತಿಕವಾಗಿ ಆದ ಪ್ರೇರಣೆಗಳನ್ನು ಮೈಗೂಡಿಸಿಕೊಂಡಿದ್ದರೂ ಅವರ ಕಾವ್ಯಕ್ಕೆ ತನ್ನದೇ ಆದ ಧ್ವನಿಯೊಂದಿದೆ. ಈ ಧ್ವನಿಯು, ಬದುಕನ್ನು ಕುರಿತ ಹಾಗೆ ಕೆಲವು ಗಾಢನಂಬಿಕೆಗಳಲ್ಲಿ ಬೇರೂರಿದೆ. ಈ ನಂಬಿಕೆಗಳು ಅವರ ಕಾವ್ಯ ಸೃಷ್ಟಿಯ ಸ್ವರೂಪವನ್ನು ಸ್ಪಷ್ಟವಾಗಿ ನಿರ್ಧರಿಸಿವೆ. ಎಕ್ಕುಂಡಿಯವರ ಕಾವ್ಯವು ಲೌಕಿಕದ ಏಳು ಬೀಳುಗಳನ್ನು, ಸಾಮಾಜಿಕವೆನ್ನಬಹುದಾದ ಆಶಯಗಳನ್ನು ಅಷ್ಟಾಗಿ ತಲೆಗೆ ಹಚ್ಚಿಕೊಂಡಿಲ್ಲ. ಇವರ ಮೊದಲ ಕವನಗಳಲ್ಲಿ ಈ ಬಗ್ಗೆ ಕೆಲ ಆಲೋಚನೆಗಳು ಇದ್ದಿದ್ದರೂ - ಎಕ್ಕುಂಡಿಯವರ ಕವನಗಳ ಪ್ರಧಾನವಾದ ಶ್ರುತಿ ಇದಲ್ಲ. ಯಾವುದು ಶಾಶ್ವತ ಸೌಂದರ್ಯದ ನೆಲೆಯೋ ಅದನ್ನು ಮತ್ತೆ ಮತ್ತೆ ಕಾಣುವ ತವಕ ಎಕ್ಕುಂಡಿಯವರ ಕವನಗಳ ಪ್ರಧಾನವಾದ ಆಶಯವಾಗಿದೆ.

ಎಕ್ಕುಂಡಿಯವರ ಕಾವ್ಯದಲ್ಲಿ ಪ್ರಕೃತಿ ಸೌಂದರ್ಯವನ್ನು ವಿವರಿಸುವ ಶಬ್ದ ಚಿತ್ರಗಳನ್ನು ಪ್ರಧಾನ ಲಕ್ಷಣವೆಂದು ವಿವರಿಸಿರುವ ವಿಮರ್ಶಕರ ಮಾತುಗಳು ಒಂದು ಘಟ್ಟದ ವರೆಗೆ ಸರಿ . ಆದರೆ ಈ ಸೌಂದರ್ಯವರ್ಣನೆ, ಸೌಂದರ್ಯ ಗ್ರಹಿಕೆಯ ನೆಲೆಯದ್ದು

ಮಾತ್ರವಲ್ಲ - ಬದುಕು ಗ್ರಹಿಸಬೇಕಾದ ಅತ್ಯುನ್ನತ ಸಿದ್ಧಿಯ ನೆಲೆ ಅದು. ಪವಿತ್ರವಾದ, ಶುದ್ಧವಾದ ಮತ್ತು ಅಂತಿಮವಾದ-ಸೌಂದರ್ಯದ ನೆಲೆಗಳನ್ನು ಎಕ್ಕುಂಡಿಯವರ ಕಾವ್ಯವು ತೋರಿಸಲು ಯತ್ನಿಸುವುದೇ ಅದರ ಮುಖ್ಯ ವೈಶಿಷ್ಟ್ಯವಾಗಿದೆ. ಯಾವುದು ಪವಿತ್ರ, ಯಾವುದು ಶುದ್ಧ ಮತ್ತು ಯಾವುದು ಸುಂದರ ಎನ್ನುವುದರ ಬಗ್ಗೆ ಎಕ್ಕುಂಡಿಯವರಿಗೆ ಸಂದೇಹಗಳಿಲ್ಲ. ಈಗಾಗಲೇ ಪರಂಪರೆಯಲ್ಲಿ ಅನುಭವಕ್ಕೆ ದಕ್ಕಿದ ಸಾಂಸ್ಕೃತಿಕ ಚೌಕಟ್ಟಿನಲ್ಲೇ ಆ ಬಗ್ಗೆ ಸಾಮಗ್ರಿ ಇದೆ. ಹೀಗಾಗಿ ಹೊಸ ಅನುಭವದ ಅನ್ವೇಷಣೆಗೆ ಎಕ್ಕುಂಡಿಯವರ ಕಾವ್ಯದಲ್ಲಿ ಸ್ಥಾನವಿಲ್ಲ. ಮತ್ತೆ ಮತ್ತೆ ಎಕ್ಕುಂಡಿಯವರ ಕಾವ್ಯ ಪುರಾಣ ಹಾಗೂ ಪ್ರಕೃತಿಗೆ ಹೋಗುವುದು ಇದೇ ಕಾರಣಕ್ಕಾಗಿ.

ಚಾರಿತ್ರಿಕ ಕಾಲದ ಬಗ್ಗೆ ಹೆಚ್ಚು ಉದಾಸೀನವಾಗಿರುವ ಎಕ್ಕುಂಡಿಯವರ ಕಾವ್ಯ ಅದಕ್ಕೆ ಸಂಬಂಧಿಸಿದ ಸಾಮಾಜಿಕತೆಯ ನೆಲೆಗಳನ್ನು ಅಷ್ಟಾಗಿ ಗಮನಿಸುವುದಿಲ್ಲ. ಹೀಗಾಗಿ ಇವರ ಕಾವ್ಯತೋಟದಲ್ಲಿ ಸಾಮಾಜಿಕ ಮನುಷ್ಯ ಹಾಗೂ ಸಂಬಂಧಪಟ್ಟ ಆಕ್ರೋಶ, ವಿಷಾದ, ಪರಿವರ್ತನೆಯ ಆಶಯ-ಮುಂತಾದ ಲಕ್ಷಣಗಳನ್ನು ಹುಡುಕ ಹೊರಟವನಿಗೆ ನಿರಾಶೆ ಕಟ್ಟಿಟ್ಟ ಬುತ್ತಿಯಾಗಿದೆ. ಲೌಕಿಕ-ವಾಸ್ತವಿಕ ಜೀವನ ಚಿತ್ರವನ್ನು ಕೊಡುವ ಎಕ್ಕುಂಡಿಯವರ ಕವನಗಳು ಚಲನೆಯನ್ನು ಸೂಚಿಸುವಂಥವುಗಳಲ್ಲ. ಅಲ್ಲಿ ಬದಲಾವಣೆಯ ಆಶಯಕ್ಕೆ ಪ್ರಾಶಸ್ತ್ಯವಿಲ್ಲ. ಹೀಗಾಗಿ ಸಾಮಾಜಿಕ ಆಶಯವನ್ನು ಬಯಸುವ ಓದುಗ ಹಾಗೂ ವಿಮರ್ಶಕನಿಗೆ-ಅದೊಂದು ಸಹಜಸ್ಥಿತಿಯೆಂಬಂತೆ ಚಿತ್ರಿತವಾಗಿರುವುದನ್ನು ಕಂಡು ಪಿಚ್ಚೆನ್ನಿಸುವುದು ಸಹಜ.

ಕೊಳದ ತಾವರೆಯಂತೆ ಬೆಳಕನೆ ಹಾರೈಸಿ
ಕೊಳಚೆಯ ನೆರೆಯಲ್ಲೂ ಬಾಳಬೇಕು
ಹುಣ್ಣಿಮೆಯ ಇರುಳುಗಳ ಹಾಲು ಮೋಡದ ಹಾಗೆ
ಬದುಕಿನಲಿ ಶಾಂತಿಯನು ತಾಳಬೇಕು.

ಹಕ್ಕಿಗಳ ಹಾಡುಗಳ ಹೊದಿಸಿ ನೆರಳನು ಸುರಿದು
ನಿಂತ ಮರಗಳ ಹಣ್ಣು ತಿನ್ನಬೇಕು
ಜೀವ ಜೋಳಿಗೆ ಹೆಗಲಿಗೇರಿಸಿ ಬಂದದ್ದೆಲ್ಲ
ದೂರ ಪಯಣದ ಬುತ್ತಿ ಅನ್ನಬೇಕು. (ಬುತ್ತಿ)

ಇಲ್ಲಿ ಸಾಲು ಕುಳಿತ ಹೆಣ್ಣು
ಎಲ್ಲೊ ಮುಗಿಲಿನತ್ತ ಕಣ್ಣು
ಕುಳಿತರಿಲ್ಲಿ ಮತ್ಸ್ಯಗಂಧಿ
ಉಟ್ಟುಕೊಂಡು ಹರಕು ಚಿಂದಿ. (ಮೀನುಪೇಟೆ)

ಮೇಲೆ ಉದಾಹರಿಸಿದ ಕವನಗಳ ಭಾಗಗಳು-ಎಕ್ಕುಂಡಿಯವರು ಕಾವ್ಯದಲ್ಲಿ ಲೌಕಿಕ ಜೀವನವನ್ನು ಕುರಿತ ಹಾಗೆ ತಳೆಯುವ ನಿಲುವುಗಳನ್ನು ಸೂಕ್ಷ್ಮವಾಗಿ ವಿವರಿಸುತ್ತವೆ. ವಾಸ್ತವಿಕ ಜೀವನದ ಚಿತ್ರಣ ಹಾಗೂ ಸಾಮಾಜಿಕ ಬದುಕಿನ ಚಿತ್ರಣವನ್ನು ಕೊಡುವ ಕವನಗಳ ಧೋರಣೆಯ ಪ್ರಮುಖವಾಗಿ ಇದೇ ಆಗಿದೆ. ಈ

ಬದುಕು ಹೀಗೆಯೇ ಎನ್ನುವ ನೆಲೆಯಿಂದ ಹೊರಟ ಧೋರಣೆಯಿದು. ಸಾಮಾಜಿಕ ಬದುಕಿನಲ್ಲಿ ಇರುವ ಸ್ಥಿತಿಯು ಬದಲಾಗುವುದು ಸಾಧ್ಯವೇ? ಎನ್ನುವ ತಾತ್ವಿಕ ಪ್ರಶ್ನೆಗೆ ಎಕ್ಕುಂಡಿಯವರ ಕವನಗಳಲ್ಲಿ ಇರುವ ಉತ್ತರ ಬಹಳ ಸ್ಪಷ್ಟ. ಸಾಮಾಜಿಕವೆನ್ನುವ ಸಂಕೋಲೆ ಅದು ಇದ್ದದ್ದೆ. ವ್ಯಕ್ತಿಯು ಯಾವುದು ಬದಲಾಗದ್ದೊ ಅದರ ಕಡೆಗೆ ಮುಖ ಮಾಡಬೇಕು. ಆಗ ವ್ಯಕ್ತಿತ್ವದ ಬದಲಾವಣೆ ಖಚಿತವಾಗಿ ಸಾಧ್ಯ.

ಮನುಷ್ಯನನ್ನು ಚಾರಿತ್ರಿಕ-ಕಾಲಗತಿಯಿಂದ ಎತ್ತಿಟ್ಟು, ಬದಲಾಗದ ಕಾಲಮಾನದ ವಾತಾವರಣದ ಜೊತೆಗೆ ಸಂಬಂಧ ಕಲ್ಪಿಸುವ ಆಶಯ ಎಕ್ಕುಂಡಿಯವರ ಕಾವ್ಯದ ಒಳಇಚ್ಛೆಯಾಗಿದೆ. ಮೀನುಪೇಟೆಯ ಮತ್ಸ್ಯಗಂಧಿಯ ಸ್ಥಿತಿಗೂ, ಮತ್ಸ್ಯಗಂಧಿ 'ಸತ್ಯವತಿ'ಯೋಜನಸುಗಂಧಿಯಾಗಿ ಬಂದ ಪರಿವರ್ತನೆಗೂ ಮುಖ್ಯ ಕಾರಣ ಕವನ ಸ್ವರೂಪಗಳಲ್ಲಿಯೇ ಕಾಣುವಂತೆ ಕಾಲದ ಸ್ಥಿತ್ಯಂತರದಲ್ಲಿಯೇ ಇದೆ. ಚಾರಿತ್ರಿಕ ಕಾಲಮಾನದಿಂದ ಎತ್ತಿಟ್ಟ ವಾತಾವರಣದಲ್ಲಿ ವ್ಯಕ್ತಿತ್ವದ ಬದಲಾವಣೆ, ಆಶಯಗಳ ಸಂಪೂರ್ಣ ಸಿದ್ಧಿ -ಇವುಗಳು ಕ್ರಿಯಾಶೀಲವಾಗಿ ರೂಪುಗೊಳ್ಳುವುದನ್ನು ಅನೇಕ ಕವನಗಳಲ್ಲಿ ಗುರುತಿಸಬಹುದು. 'ದಿವ್ಯಾಗ್ನಿತಂದವರು' 'ಹಸೆಯರಥ', 'ಬುಟ್ಟಿ ಮತ್ತು ಬೀಗದ ಕೈ' 'ಕಡಿದು ಬಿದ್ದವು ಕೋಳ', 'ಅಕ್ಕ ತಂಗಿಯರ ಕಥೆ', 'ಮುದ್ರೆಗಳು' - ಹೀಗೆ ಕವನಗಳ ಹೆಸರುಗಳನ್ನು ಹೇಳುತ್ತಾ ಹೋಗಬಹುದು. ವ್ಯಕ್ತಿಯ ಸಿದ್ಧಿಯನ್ನು ಕ್ರಿಯಾತ್ಮಕವಾಗಿ ವಿವರಿಸಿದ ಈ ಕವನಗಳ ವಾತಾವರಣವೆಲ್ಲ-ಪೌರಾಣಿಕ ನೆಲೆಯದ್ದು, ಕಾಲಜಂಜಡದಿಂದ ಕಿತ್ತಲ್ಪಟ್ಟಿದ್ದು. 'ಹಸೆಯ ರಥ' ಕವನದ ಉದಾಹರಣೆಯನ್ನೇ ವಿವರವಾಗಿ ಗಮನಿಸಬಹುದು. ಕವನದ ಪಾತ್ರ 'ರುಕ್ಮಿಣಿ' ಪೌರಾಣಿಕ ಚೌಕಟ್ಟಿನವಳು;- ಹಂಬಲಗಳನ್ನುಳ್ಳವಳು; ಬದಲಾವಣೆಯನ್ನು ಅಪೇಕ್ಷಿಸುವವಳು.

ಅಂತಃ ಪುರದ ಸುತ್ತ ಸರ್ಪಗಾವಲಿನ
ಪಡೆ. ಪಂಜರದ ಗಿಳಿಯಂಥ ರಾಜ
ಕುವರಿ. ರುಕ್ಮಿಣೆಗೆ ನಿತ್ಯವೂ ದ್ವಾರಕೆ
ಯದೇ ನೆನಪು. ಹಗಲಿರುಳೂ ಕೃಷ್ಣ
ಹಂಬಲದ ಚವರಿ||

ಇಂಥ ಹಂಬಲಕ್ಕೆ ಸಿದ್ಧಿ ಸಾಧ್ಯವೇ ಹೌದು.

ಅಂಜದಿರು, ಅಳುಕದಿರು, ಒರೆ ಹಿರಿದ ಒ
ತ್ತಡಕೆ. ಯಾರು ತಡೆ ಹಿಡಿದಾರು ನಿನ್ನಾಬ
ಯಕೆ ? ಅನುಗಾಲ ಕಾಯ್ವ ನಮ್ಮ ನಿರುದ್ಧ
ನಿರುವಾಗ, ಕೈಗೂಡಲಾರದೆ ನಿನ್ನ ಹರಕೆ?

ಈ ರೀತಿಯ ಭರವಸೆಯ ಸಾಧ್ಯತೆಗಳನ್ನು, ಕ್ರಿಯಾಶೀಲ ವಾತಾವರಣವನ್ನು ನಾವು-ಸಾಮಾಜಿಕ ಜೀವನದ ಹಾರೈಕೆಗಳಾಗಿ ಎಕ್ಕುಂಡಿಯವರ ಕವನಗಳಲ್ಲಿ ಕಾಣಲಾರೆವು. 'ಕೊಳದ ಗೌರಿ' ಕವನದಲ್ಲಿ ಇದು ಇನ್ನೊಂದು ರೀತಿಯಲ್ಲಿ ಚಿತ್ರಣಗೊಳ್ಳುತ್ತದೆ. ಕೊಳದ ಬದಿ ಕುಳಿತ ಹೊಂಗೂದಲಿನ ಚೆಲುವೆಗೆ ಬಳೆಯನ್ನು ತೊಡಿಸಿದ ಬಳೆಗಾರ, ಹಣವನ್ನು ಕೇಳಲು ಅರ್ಚಕನ ಬಳಿ ಬಂದರೆ -ವಿಗ್ರಹದಲ್ಲಿ

ಕೈಬಳೆಗಳನ್ನು ಕಾಣುತ್ತಾನೆ. ಬಳೆಗಾರನಿಗೆ ಅದು ಸಿದ್ಧಿಯ ಕ್ಷಣವಾಗಿದೆ. ಪೌರಾಣಿಕ ಜಗತ್ತಿನ ಸಂಬಂಧವಾಗಲೀ, ದೈವ ಸಂಬಂಧವಾಗಲೀ, ಪ್ರಕೃತಿ ಜೊತೆಗಿನ ಸಂಬಂಧವಾಗಲೀ ಎಕ್ಕುಂಡಿಯವರ ಕಾವ್ಯದಲ್ಲಿ ವ್ಯಕ್ತಿತ್ವದ ಜಿಗಿತಕ್ಕೆ ಗುಣಾತ್ಮಕವಾದ ಸಾಮಾನ್ಯ ಅಂಶಗಳಾಗಿವೆ. ಆದರೆ ಇಂಥ ಸಂಬಂಧದಲ್ಲಿ ಲೌಕಿಕದ, ಸಾಮಾಜಿಕ ಆಶಯದ, ನಂಟು ಬೆಳೆಸುವ ಹಾಗಿಲ್ಲ. ಹೀಗಾಗಿ-ಪೌರಾಣಿಕ ಆಶಯದ ಮಾರ್ಕ್ಸ ಮತ್ತು ಮಧ್ವಮುನಿ ಇವರಿಬ್ಬರಿಗೂ ಭಿನ್ನತೆ, ವ್ಯತ್ಯಾಸವು ಕಾಣಿಸದಿದ್ದರೆ ಆಶ್ಚರ್ಯವೇನೂ ಇಲ್ಲ. ನಿಸರ್ಗದ ಜೊತೆಗಿನ ಮನುಷ್ಯ ಸಂಬಂಧದ ಅರ್ಥಪೂರ್ಣ ನೆಲೆಗಳನ್ನು ವಿವರಿಸುವಾಗ ಮನುಷ್ಯ 'ಅಸಾಮಾಜಿಕ'ನಾಗಿರುವುದನ್ನು ಎಕ್ಕುಂಡಿಯವರ ಕವನಗಳಲ್ಲಿ ಗುರುತಿಸಬಹುದಾಗಿದೆ. ಆನಂದಸಿದ್ಧಿಯ ಕ್ಷಣಗಳು ಪೂರ್ಣವಾಗಿ ವ್ಯಕ್ತಿಯ 'ಅಸಾಮಾಜಿಕ' ನೆಲೆಯಲ್ಲಿ ದಕ್ಕುವಂಥವುಗಳು.


ಎಕ್ಕುಂಡಿಯವರ ಕವನಗಳಲ್ಲಿ ಎದ್ದುಕಾಣುವ ಈ ಕಾಲದಾಚೆಗಿನ ಫಲವನ್ನು ಪಡೆಯುವ ಬಯಕೆಯು ಅವರನ್ನು ಆಧುನಿಕ ಕವಿಗಳಿಗಿಂತ ಭಿನ್ನವಾದ ನೆಲೆಯಲ್ಲಿ ನಿಂತು ಜೀವನವನ್ನು ನೋಡುವವರೆಂಬುದನ್ನು ಸ್ಪಷ್ಟಪಡಿಸುತ್ತದೆ. ಸಾಂಪ್ರದಾಯಿಕ ಭಾರತೀಯ ಮನಃಸ್ಥಿತಿಯೊಂದು ಇಲ್ಲಿ ಕೆಲಸ ಮಾಡಿದೆಯೇನೋ ಎನ್ನುವ ಅನುಮಾನಕ್ಕೆ ಗುರಿಯಾಗುವಂತೆ ಇಲ್ಲಿ ಧೋರಣೆಯ ನೆಲೆ ಇದೆ. ಆದರೆ ಪೂರ್ಣವಾಗಿ ಅಂಥ ಮನಃಸ್ಥಿತಿ ತನ್ನ ಮೇಲುಗೈ ಸಾಧಿಸಿಲ್ಲವೆನ್ನುವುದನ್ನು ನಾವು ಗುರುತಿಸಬಹುದು. ಜಗತ್ತಿನ, ಲೌಕಿಕದ -ಸಂಪೂರ್ಣ ನಿರಾಕರಣೆ ಎಕ್ಕುಂಡಿಯವರ ಕವನಗಳ ಭಿತ್ತಿಯಲ್ಲ. ಕಾಲಚಕ್ರದಲ್ಲಿದ್ದು-ಅದನ್ನು ಮೀರುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರವೆಂಬಂತಿವೆ ಎಕ್ಕುಂಡಿಯವರ ಕವನಗಳು. ಮೀರುವುದು ಬದುಕಿನ ಸಿದ್ಧಿಯೆಂಬಂತೆ ಕವನಗಳ ಭಾಷ್ಯವಿದೆ. ಸ್ವಲ್ಪಮಟ್ಟಿಗೆ ಎಕ್ಕುಂಡಿಯವರ ಕವನಗಳ ಆಶಯ ಭಕ್ತಿಪಂಥದ, ಅನುಭಾವಿಕ ಆಶಯಗಳ ಜೊತೆಗೆ ಹೋಲುವಂಥದ್ದಾಗಿದೆ ಎಂದು ಅನ್ನಿಸುವುದು ಸಹಜ. ಆದರೆ ಸಂಪೂರ್ಣವಾಗಿ ಆ ಹೋಲಿಕೆಯೂ ಸಾಧ್ಯವಿಲ್ಲ. ಏಕೆಂದರೆ ಅನುಭಾವಿಗಳು, ಭಕ್ತರು ಹಾಗೂ ದೈವದ ಜೊತೆಗಿನ ಸಂಬಂಧ ಅಲ್ಲಿನ ಅಭಿವ್ಯಕ್ತಿಗಳಲ್ಲಿ ಸಂಪೂರ್ಣವಾಗಿ ಸಂಘರ್ಷಕ್ಕೆ ಸಂಬಂಧಿಸಿದ್ದು, ಶೋಧನೆಗೆ ಗುರಿಯಾಗುವಂಥದ್ದು. ಹೀಗಾಗಿ ಅಲ್ಲಿ ತೀವ್ರವಾದ ವೈಯುಕ್ತಿಕ ತುಡಿತದ ಜೊತೆಗೆ ಆತಂಕಗಳು ಎದ್ದು ಕಾಣುತ್ತವೆ. ದೈವ-ಭಕ್ತ ಸಂಬಂಧದ ಅನ್ವೇಷಣೆಯು ಅಲ್ಲಿ ಬದುಕಿನ ಹೊಸ ಅಸ್ತಿತ್ವದ ಅನ್ವೇಷಣೆಯಾಗುತ್ತದೆ. ಕೇವಲ ನಂಬಿಕೆಯ ವಸ್ತುವಾಗುವುದಿಲ್ಲ. ಆದರೆ ಎಕ್ಕುಂಡಿಯವರ ಕವನಗಳಲ್ಲಿ ಈ ಸ್ಥಿತ್ಯಂತರದ ಪ್ರಶ್ನೆಯು ಅವರ ಗಾಢ ನಂಬಿಕೆಗೆ ಸೇರಿದ್ದಾಗಿದೆ. ಹೀಗಾಗಿ ಈ ಕವನಗಳಲ್ಲಿ ಅನ್ವೇಷಣೆಗಿಂತ - 'ಹೀಗಿದೆ' -ಎಂದು ತೋರುವುದರ ಕಡೆಗೆ ಪ್ರಧಾನ ಆಶಯವಿದೆ. ಎಕ್ಕುಂಡಿಯವರ ಕವನಗಳಲ್ಲಿ ಆಯಲಾದ ಪೌರಾಣಿಕ ನೆಲೆಯ ಹಾಗೂ ದೈವತ್ವದ ನೆಲೆಯ ವ್ಯಕ್ತಿತ್ವಗಳು-ಕವಿಯ ಮಾತಿನಂತೆ 'ನರನಿಂದ ನಾರಾಯಣರಾದವರು; ಈ ವ್ಯಕ್ತಿತ್ವಗಳಿಗೆ ಜಿಗಿತವು ಸಾಧ್ಯವಾಗಿದ್ದರಿಂದಲೇ, -ಕವನಗಳಲ್ಲಿ ಸಂದೇಹವಿಲ್ಲದ ಗಾಢ ನಂಬಿಕೆಯ ಸ್ವರೂಪ-ತಾನೇ ತಾನಾಗಿ ವ್ಯಕ್ತಗೊಳ್ಳುತ್ತದೆ. ಈ ಕಾರಣದಿಂದಲೇ

ಎಕ್ಕುಂಡಿಯವರ ಕವನಗಳಲ್ಲಿ ಕವಿಯು ನಿರೂಪಕನಂತೆ ತೋರುವುದು ಗಮನಿಸಬೇಕಾದ ಅಂಶವಾಗಿದೆ.

ಇಂಥ ಗಾಢನಂಬಿಕೆಗಳು, ಕವನಗಳ ಅನುಭವ ಸಾಂದ್ರತೆಯನ್ನು ಮತ್ತು ಒಟ್ಟಾರೆ ಅದರ ಸ್ವರೂಪವನ್ನು ಸರಳಗೊಳಿಸುವುದಿಲ್ಲವೆ ಎಂಬ ಪ್ರಶ್ನೆಯು ಉದ್ಭವಿಸುವುದು ಸಹಜ. ಎಕ್ಕುಂಡಿಯವರ ಅನೇಕ ಕವನಗಳಿಗೆ ಈ ಅಪಾಯವು ಉಂಟಾಗಿರುವುದು ನಿಜ. ಆದರೆ ಬಹುಪಾಲು ಕವನಗಳು 'ಕಥನ ಕವನ' ತಂತ್ರದಿಂದ ಈ ಅಪಾಯವನ್ನು ಮೀರಿವೆ. 'ಕಥನ ಕವನ'ಗಳಲ್ಲಿ ಅನುಭವದ ಪುನರ್ನಾಟ್ಯೀಕರಣವು ಮತ್ತೆ ಮತ್ತೆ ಎಕ್ಕುಂಡಿಯವರ ನಂಬಿಕೆಗೆ ಪುರಾವೆ ಒದಗಿಸುವಂತೆ ಬರುತ್ತದೆ. ಈ ನಾಟ್ಯೀಕರಣವು ಕವನ ಸ್ವರೂಪಕ್ಕೆ ಒಂದು ಬಿಗಿಯನ್ನು ಒದಗಿಸುತ್ತದೆ. ಆದರೆ ಇಂಥ ಕವನಗಳ ಧೋರಣೆಯನ್ನೇ ಪ್ರಶ್ನಿಸುವವರಿಗೆ ಅದೊಂದು ನಂಬಿಕೆಯ ಆಶಯವಾಗಿಯೇ ಗೋಚರಿಸುತ್ತದೆ. ಏಕೆಂದರೆ ಸಾಮಾಜಿಕ ಪರಿಭಾಷೆಯಲ್ಲಿ ವ್ಯಕ್ತಿಯ ಜಿಗಿತದ (Shift) ಸಾಧ್ಯಾಸಾಧ್ಯಾತೆಯ ಪ್ರಶ್ನೆಗೆ ಬಹುಶಃ ಉತ್ತರ ಸಿಗುವುದಿಲ್ಲ.

●

* * *



ಸರಸ್ವತಿ ಗಜಾನನ ರಿಸಬೂಡ

– *ಪ್ರತಿಭಾ ನಂದಕುಮಾರ್*

ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಯೊಬ್ಬರು ನಡುವಯಸ್ಸು ದಾಟಿದ ಮೇಲೆ ಇನ್ನೊಂದು ಹೊಸ ಭಾಷೆಯನ್ನು ಕಲಿತು, ತನ್ನ ಭಾಷೆಯ ಶ್ರೇಷ್ಠ ಕೃತಿಗಳನ್ನು ಹೊಸದಾಗಿ ಕಲಿತ ಭಾಷೆಗೆ ಉತ್ತಮವಾಗಿ ಭಾಷಾಂತರಿಸುವುದೇ ಅಲ್ಲದೆ ಭಾಷಾಂತರ ಪ್ರಶಸ್ತಿಯನ್ನು ಪಡೆಯುವುದು ಕೇವಲ ಹವ್ಯಾಸ ಅಥವಾ ಕಾಳಜಿ ಎಂದು ಹೆಸರಿಟ್ಟು ಕರೆದರೆ ಸಾಲದು. ಅನುವಾದ ಅಲ್ಲಿ ಬರಿಯ ಉತ್ಸಾಹ ಮಾತ್ರವಾಗದೆ ಪ್ರೀತಿಯ ಕಾರ್ಯವೂ ಆಗಿರುತ್ತದೆ. ತನ್ನ ಸಂತೋಷವನ್ನು ಇತರರ ಜೊತೆ ಹಂಚಿಕೊಳ್ಳಬೇಕೆಂಬ ತುಡಿತವೂ ಕಂಡು ಬರುತ್ತದೆ. ಶ್ರೀಮತಿ ಸರಸ್ವತಿ ಗಜಾನನ ರಿಸಬೂಡ ಅವರು ಮರಾಠಿ ಭಾಷೆಯಿಂದ ಕನ್ನಡಕ್ಕೆ ಕೆಲವು ಶ್ರೇಷ್ಠ ಕೃತಿಗಳನ್ನು ಅನುವಾದಿಸಿದ ನೆಲೆ ಇಂತಹುದು.

ಮರಾಠಿಯ ಶ್ರೀಪಾದ ರಘುನಾಥ ಭಿಡೆಯವರ 'ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ' ಎನ್ನುವ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಕ್ಕಾಗಿ ಸರಸ್ವತಿ ರಿಸಬೂಡ ಅವರಿಗೆ ೧೯೯೨ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಶ್ರೇಷ್ಠ ಅನುವಾದ ಪ್ರಶಸ್ತಿ ನೀಡಲಾಗಿದೆ. ಇದು ವರೆಗೆ ಅವರು ಅನುವಾದ ಕಾರ್ಯದಲ್ಲಿ ತೋರಿದ ಉತ್ಸಾಹಕ್ಕೆ ಸಂದ ಗೌರವವಾಗಿದೆ.

೧೯೩೧ರಲ್ಲಿ ಧಾರವಾಡದಲ್ಲಿ ಜನಿಸಿದ ಸರಸ್ವತಿ ಅವರು, ಅಂದಿನ ವಾತಾವರಣದಲ್ಲಿ ಸಹಜವಾಗಿದ್ದಂತೆ ಮರಾಠಿ ಶಾಲೆಯಲ್ಲಿ ಕಲಿತರು. ಆರ್ಟ್ಸ್ ಇಂಟರ್ ಮತ್ತು ಹಿಂದಿ ರಾಷ್ಟ್ರಭಾಷಾ ಪರೀಕ್ಷೆಗಳಲ್ಲಿ ತೇರ್ಗಡೆಯಾದರು.

ಮದುವೆಯ ನಂತರ ಮುಂಬಯಿಯಲ್ಲಿ ಬಹಳಷ್ಟು ವರ್ಷವಿದ್ದು ೧೯೭೦ರಲ್ಲಿ ಬೆಂಗಳೂರಿಗೆ ಬಂದು ನೆಲೆಸಿದರು. ಕನ್ನಡದಲ್ಲಿ ಆಸಕ್ತಿ ಹುಟ್ಟಿ ಕನ್ನಡ ಕಲಿತರು. ಮರಾಠಿಯಲ್ಲಿ ಓದಿ ಅಪಾರವಾಗಿ ಮೆಚ್ಚಿಕೊಂಡಿದ್ದ ಡಾ. ಇರಾವತಿಕರ್ವೆ ಅವರ 'ಯುಗಾಂತ' ಕಾದಂಬರಿಗೆ ಕನ್ನಡದಲ್ಲಿ ಅಪಾರ ಜನಪ್ರಿಯತೆ ದೊರಕಿತು. ಇದರಿಂದ ಸ್ಫೂರ್ತಿಗೊಂಡ ಅವರು ನಂತರ ಮರಾಠಿಯಿಂದಲೇ ಗೋದಾವರಿ ಪರುಳೇಕರ ಅವರ "ಮಾನವ ಎಚ್ಚೆತ್ತಾಗ " ಶ್ರೀಪಾದ ಜೋಷಿಯವರ 'ಭಾರತೀಯ ಮುಸಲ್ಮಾನರು' ಗ.ಪ್ರ. ಪ್ರಧಾನ ಅವರ 'ಭಾರತದ ಸ್ವಾತಂತ್ರ್ಯ ಸಂಗ್ರಾಮ' ಎನ್ನುವ ಕೃತಿಗಳನ್ನು ಅನುವಾದಿಸಿದರು. ಕಳೆದ ವರ್ಷದ ತಿರುಮಲಾಂಬಾ ಪ್ರಶಸ್ತಿ ಪಡೆದ ಛಾಯಾದಾತಾರ ಅವರ 'ಸ್ತ್ರೀ ಪುರುಷ' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು. ಇವಲ್ಲದೆ ಪು.ಲ. ದೇಶಪಾಂಡೆ ಅವರ 'ಸುಂದರಿ ನಾನಾಗುವೆ' ಮಧುಕರ ತೋರಡಿಮಲ್ಲ ಅವರ 'ಕಪ್ಪುದ್ವೀಪ ಕೆಂಪು ದೀಪ' ವಸಂತ ಕಾನೇಟಕರ ಅವರ 'ಗಗನಭೇದಿ' ಎನ್ನುವ ನಾಟಕಗಳನ್ನು ಕನ್ನಡಕ್ಕೆ ತಂದರು. ಇವು ರಂಗಪ್ರಯೋಗಗಳಾಗಿವೆಯೇ ಹೊರತು ಇನ್ನೂ ಪ್ರಕಟಗೊಂಡಿಲ್ಲ. ಈಚೆಗೆ ಅವರು ದುರ್ಗಾ ಭಾಗವತ ಅವರ 'ಪೈಸೆ' ಕಾದಂಬರಿಯನ್ನು 'ದಿಗಂತದಾಚೆ' ಎಂದು ಅನುವಾದಿಸುತ್ತಿದ್ದಾರೆ. ಮರಾಠಿಯಿಂದ ಕನ್ನಡಕ್ಕೆ ಮಾತ್ರವಲ್ಲದೆ ಕನ್ನಡದಿಂದ ಮರಾಠಿಗೆ ಅನೇಕ ಕತೆಗಳು ಇತರ ಲೇಖನಗಳನ್ನು ಅನುವಾದಿಸಿದ್ದಾರೆ. ಇದು ಜನಪ್ರಿಯ ಮರಾಠಿ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಅಲ್ಲದೆ ಮರಾಠಿಯ ಜನಪ್ರಿಯ ಪತ್ರಿಕೆಗಳಲ್ಲಿ ಕನ್ನಡ ಹಾಗೂ ಕರ್ನಾಟಕದ ಬಗ್ಗೆ ಅಂಕಣಗಳನ್ನು ಬರೆದಿದ್ದಾರೆ. ಬೆಂಗಳೂರಿಗೆ ಬಂದು ನೆಲೆಸಿದ ಮರಾಠಿ ಜನರಿಗೆ ಕನ್ನಡ ಕಲಿಸುವ ತರಗತಿಗಳನ್ನು ನಡೆಸಿದ್ದಾರೆ. ಆ ಅನುಭವದ ಆಧಾರದ ಮೇಲೆ ಸುಲಭವಾಗಿ ಕನ್ನಡ ಕಲಿಯುವ ವಿಧಾನದಿಂದ 'ಕನ್ನಡ ಭಾಷಾ ದರ್ಪಣ' ಎನ್ನುವ ಕೃತಿಯನ್ನು ರಚಿಸಿದ್ದಾರೆ.

ಸರಸ್ವತಿಯವರು ಸ್ವತಃ ಲೇಖಕಿ. ಮರಾಠಿಯಲ್ಲಿ ಅವರ ಕತೆ ಕವನಗಳು ಪ್ರಕಟವಾಗಿವೆ. ಆದರೆ ಕನ್ನಡದಲ್ಲಿ ಸ್ವಂತ ಬರೆಯಲು ಭಾಷಾ ಸಾಮರ್ಥ್ಯ ತನಗೆ ಇಲ್ಲ ಎನ್ನುವ ವಿನಯವಂತರು. ಇದೇ ಕಾರಣಕ್ಕೆ ಅವರು ಮರಾಠಿಯಿಂದ ಕನ್ನಡಕ್ಕೆ ಕಾವ್ಯವನ್ನು ಅನುವಾದಿಸಿಲ್ಲ. ಅವರು ತೀರಾ ಪ್ರಾಂತೀಯವೆನ್ನಿಸುವ ಕೃತಿಗಳನ್ನು ಇನ್ನೊಂದು ಭಾಷೆಗೆ ಅನುವಾದಿಸುವಾಗ ಎಡರುತೊಡರುಗಳನ್ನು ಅವರು ಸದಾ ಎಚ್ಚರಿಕೆಯಿಂದ ಗಮನಿಸುತ್ತಾರೆ. ಇವರ ಅನುವಾದದ ಭಾಷೆ ಸರಳ, ನೇರ ಹಾಗೂ ಸುಲಲಿತವಾಗಿರುತ್ತದೆ.

ಕನ್ನಡ ಮರಾಠಿ ಬಾಂಧವ್ಯ

ಕನ್ನಡ ಮತ್ತು ಮರಾಠಿ ಭಾಷೆಗಳು ಬಹಳ ಹಿಂದಿನಿಂದ ಪರಸ್ಪರ ಪ್ರಭಾವ ಬೀರಿವೆ. ಕನ್ನಡವು ಮರಾಠಿಗಿಂತ ಪ್ರಾಚೀನ ಭಾಷೆ. ಮರಾಠಿಯ ಮೇಲೆ ಕನ್ನಡದ ಪ್ರಭಾವ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಬೇರೆ ಎಲ್ಲ ಭಾಷೆಗಳಿಗಿಂತ ಹೆಚ್ಚಿನ ಕನ್ನಡ ಪದಗಳನ್ನು ಮರಾಠಿಯು ಎರವಲು ಪಡೆದಿದೆ.

ಪ್ರಾಚೀನ ಕಾಲದಿಂದಲೂ ಸತತವಾಗಿ ಕನ್ನಡ, ಮರಾಠಿ ಕೃತಿಗಳು ಅನುವಾದಗೊಳ್ಳುತ್ತಿವೆ. ನಿಜಗುಣಶಿವಯೋಗಿಗಳ "ವಿವೇಕ ಚಿಂತಾಮಣೀ", "ಕುಮಾರವ್ಯಾಸ ಭಾರತ", ಚಾಮರಸನ "ಪ್ರಭುಲಿಂಗಲೀಲೆ", ಜಗನ್ನಾಥ ದಾಸರ "ಹರಿಕಥಾಮೃತಸಾರ", ಲಕ್ಷ್ಮೀಶನ "ಜೈಮಿನಿ ಭಾರತ" ರತ್ನಾಕರವರ್ಣಿಯ "ಭರತೇಶ ವೈಭವ", ಬಸವಣ್ಣ ಅಕ್ಕಮಹಾದೇವಿಯವರ "ವಚನಗಳು" ಮೊದಲಾದ ಅನೇಕ ಕೃತಿಗಳು ಮರಾಠಿಗೆ ಅನುವಾದ ಮಾಡಲಾಗಿದೆ.

ಆಧುನಿಕ ಕಾಲದಲ್ಲಿ ಗಳಗನಾಥರು ಅನೇಕ ಮರಾಠಿ ಕೃತಿಗಳನ್ನು ಕನ್ನಡಕ್ಕೆ ತಂದರು. ಹ.ನಾ. ಆಪ್ಟೆಯವರ 'ಪಣ ಕೋನ ಲಕ್ಷಾತ ಘೇತೋ' ಎನ್ನುವ ಕೃತಿಯನ್ನು ಶಿವರಾಮ ಕಾರಂತರು 'ಯಾರು ಲಕ್ಷಿಸುವರು? ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ತಂದರು. ಗೊರೂರು ರಾಮಸ್ವಾಮಿ ಅಯ್ಯಂಗಾರರು ಖಾಂಡೇಕರರ "ಕ್ರೌಂಚವಧೆ" ಯನ್ನು ಅನುವಾದಿಸಿದರು. ರಣಜಿತ ದೇಸಾಯಿ ಅವರ 'ಸ್ವಾಮಿ' ಸಾನೆ ಗುರೂಜಿ ಅವರ 'ಶ್ಯಾಮನ ತಾಯಿ' ವಿಜಯ ತೆಂಡೂಲ್ಕರರ 'ಶಾಂತತಾ ಕೋರ್ಟ್ ಚಾಲೂ ಆಹೆ', 'ಸಖಾರಾಮ ಬೈಂಡರ್' ನಾಟಕ ಮೊದಲಾದ ಅನೇಕ ಮರಾಠಿ ಕೃತಿಗಳು ಕನ್ನಡದಲ್ಲಿ ಅತ್ಯಂತ ಜನಪ್ರಿಯವಾದವು.

ಸರಸ್ವತಿ ರಿಸಬೂಡ ಅವರ ಅನುವಾದ ಕಾರ್ಯ ಮರಾಠಿಯ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವ ಸಂಪ್ರದಾಯವನ್ನು ಮುಂದುವರೆಸಿದೆ. ಅವರು ಅನುವಾದಕ್ಕೆ ಆರಿಸಿಕೊಂಡ ಕೃತಿಗಳೆಲ್ಲವೂ ಉನ್ನತ ವೈಚಾರಿಕ ನೆಲೆಯ ಬರಹಗಳಾಗಿವೆ. 'ಯುಗಾಂತ', 'ಸ್ತ್ರೀ ಪುರುಷ', 'ವಾಲ್ಮೀಕಿ ರಾಮಾಯಣ: ಶಾಪ ಮತ್ತು ವರ', 'ಮಾನವ ಎಚ್ಚೆತ್ತಾಗ 'ಮೊದಲಾದ ಕೃತಿಗಳು ಮೂಲದಲ್ಲಿಯೂ ಪ್ರಶಸ್ತಿ ಪಡೆದವುಗಳೇ. ಕೃತಿಯಿಂದ ಕೃತಿಗೆ ಅನುವಾದ ಕಾರ್ಯದಲ್ಲಿ ಪಳಗುತ್ತಾ ಹೋದ ಸಾಧನೆ ಅವರದು.

ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ

ವಾಲ್ಮೀಕಿ ರಾಮಾಯಣ: ಶಾಪ ಮತ್ತು ವರವು ಒಂದು ವಿಶಿಷ್ಟ ಕೃತಿ. ಶ್ರೀ ರ.ಭಿಡೆಯವರು ಮೂಲ ಕೃತಿಯನ್ನು ಅತ್ಯಂತ 'ಮನೋಜ್ಞವಾದ ನಿರೂಪಣೆ' ಎಂದು ವರ್ಣಿಸಿ ಜನರು ಮೆಚ್ಚಿಕೊಂಡರು. ಭಾಷಾಂತರದಲ್ಲಿ ಈ ಸ್ವಾರಸ್ಯ ಕಳೆದು ಹೋಗದ ಹಾಗೆ ಸರಸ್ವತಿ ರಿಸಬೂಡ ಅವರು ಎಚ್ಚರಿಕೆ ವಹಿಸಿದ್ದಾರೆ. ಭಿಡೆಯವರು ಪ್ರಾಸ್ತಾವಿಕದಲ್ಲಿ ಹೇಳಿದಂತೆ ಕನ್ನಡದಲ್ಲಿಯೂ ಮರಾಠಿಯಲ್ಲಿಯೂ "ಶಾಪ ಮತ್ತು ವರ" ಕುರಿತ ಮಾಹಿತಿ ರೂಪದ ಗ್ರಂಥ ಇರಲಿಲ್ಲ. ಕನ್ನಡವನ್ನು ಬಲ್ಲ ಭಿಢೆಯವರೇ ಸರಸ್ವತಿಯವರ ಅನುವಾದವನ್ನು "ಸುರಸ ಸರಸ ಅನುವಾದ " ವೆಂದು ಮೆಚ್ಚಿ ನುಡಿದಿದ್ದಾರೆ.

ವಾಲ್ಮೀಕಿ ರಾಮಾಯಣದ ಎಲ್ಲ ಶಾಪ ಮತ್ತು ವರ ಕೊಟ್ಟ ಸಂದರ್ಭಗಳನ್ನು ಆರಿಸಿ ತೆಗೆದು ಯುಕ್ತ ಸಂದರ್ಭಗಳಲ್ಲಿ ತಮ್ಮದೇ ಆದ ವ್ಯಾಖ್ಯಾನ ಸಹಿತ ಸಿದ್ಧಪಡಿಸಲಾದ ಈ ಕೃತಿ ಸುಲಭ ಪರಾಮರ್ಶೆಗೆ ಕೈ ಹಿಡಿಯುವಂತಿದೆ.

ಅರುವತ್ತೊಂದು ಶಾಪ ಮತ್ತು ಎಂಭತ್ತೆರಡು ವರಗಳ ವಿವರಣೆಗಳು, ಅವುಗಳ ಬಗ್ಗೆ ಸಂಶೋಧಿತ ವಿವರಣೆಗಳನ್ನು ನೀಡಿದ್ದಾರೆ. ವಾಲಿಯ ವಧೆ, ಸೀತಾ ತ್ಯಾಗ ಮೊದಲಾದ ಸಂಗತಿಗಳು ಆಧುನಿಕ ಕಾಲದ ಸಂದರ್ಭಗಳಲ್ಲಿ ಚರ್ಚೆಗೊಳಗಾಗುವ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಶಾಪ ಮತ್ತು ವರಗಳ ವ್ಯಕ್ತಿ ವಿಶೇಷ, ಸ್ಥಳ ವಿಶೇಷ ಹಾಗೂ ಸಂದೇಹಾಸ್ಪದ ವರಗಳ ಬಗ್ಗೆ ಮಾಹಿತಿ ಇದೆ. ಗ್ರಂಥದ ಕೊನೆಯಲ್ಲಿ ಶಾಪ ಮತ್ತು ವರಗಳ ಬಗ್ಗೆ ಶಾಪ, ವರ ಕೊಡುವವರ ಹೆಸರು, ಪಡೆದವರ ಹೆಸರು, ಅವರ ಸ್ಥಾನ, ಅರ್ಹತೆ ಮತ್ತು ಸಂದರ್ಭ, ಕಾರಣಗಳು, ಪರಿಣಾಮಗಳನ್ನು ಮತ್ತು ವಾಲ್ಮೀಕಿ ರಾಮಾಯಣದಲ್ಲಿ ಯಾವ ಕಾಂಡ, ಸರ್ಗದಲ್ಲಿ ಬಂದಿವೆ ಎನ್ನುವುದರ ಸ್ಪಷ್ಟ ಪಟ್ಟಿಯನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ಕೃತಿಯನ್ನು ರಚಿಸುವಾಗ ಭಿಡೆಯವರು 'ಪ್ರಾಚೀನ ಚರಿತ್ರಕೋಶ', "ಭಾರತೀಯ ಸಂಸ್ಕೃತಿ ಕೋಶ" , "ಶ್ರೀರಾಮ ಕೋಶ' ಮೊದಲಾದ ಅನೇಕ ಗ್ರಂಥಗಳನ್ನು ಪರಾಮರ್ಶಿಸಿದ್ದಾರೆ. ಅಲ್ಲದೆ ಶಾಪಾದಪಿ ವರಾದಪಿ ಎನ್ನುವ ದೀರ್ಘ ಪ್ರಸ್ತಾವನೆಯಲ್ಲಿ ಶಾಪ ಮತ್ತು ವರಗಳ ಸಂಬಂಧವಾಗಿ ಅನೇಕ ವಿಷಯಗಳನ್ನು ವಿವರಿಸಲಾಗಿದೆ.


ಸರಸ್ವತಿ ರಿಸಬೂಡ ಅವರ ಅನುವಾದ ಸರಳವೂ, ಮೂಲ ಕೃತಿ ನಿಷ್ಠವೂ ಆಗಿದೆ. ಅಸಹಜ ದೀರ್ಘವಾಕ್ಯಗಳಾಗಲೀ, ಕೃತಕ ಭಾಷೆಯಾಗಲೀ ಇಲ್ಲದೆ ಸುಲಲಿತವಾಗಿ ರಚನೆಯಾಗಿದೆ. ಕೃತಿಯ ಪ್ರಸ್ತಾವನೆಯಲ್ಲಿ ಬರುವ ಒಂದು ಪ್ಯಾರಾವನ್ನು ಉದಾಹರಣೆಯಾಗಿ ನೋಡಬಹುದು.

'ಯಾತು ಎಂದರೆ ಇಂದ್ರಜಾಲ'. ಪ್ರತಿಯೊಂದು ವಸ್ತುವಿನಲ್ಲಿ ಅಡಗಿರುವ ಶಕ್ತಿಗೆ ಯಾತು ಶಕ್ತಿ ಎಂದೆನ್ನುತ್ತಾರೆ. ಅದರ ಜ್ಞಾನವೆಂದರೆ ಯಾತು - ವಿದ್ಯೆ. ಆ ವಿದ್ಯೆಯನ್ನು ಅರಿತವನಿಗೆ 'ಯಾತುಧಾನ ' ಎನ್ನುತ್ತಾರೆ. ರಾಕ್ಷಸರು ಯಾತುಧಾನರು. ಅವರು ಈ ಶಕ್ತಿಯನ್ನು ಅರಿತಿದ್ದರು. ಈ ಶಕ್ತಿಯ ಬಲದಿಂದ ಅವರು ಬೇರೆ ಬೇರೆ ರೂಪಗಳನ್ನು ಧರಿಸಬಹುದಿತ್ತು. ಮಾರೀಚನು ಈ ವಿದ್ಯೆಯನ್ನು ಅರಿತಿದ್ದರಿಂದ ಕಾಂಚನ ಮೃಗದ ರೂಪವನ್ನು ತಳೆದು ಸೀತೆಯನ್ನು ಮರುಳು ಮಾಡಿದನು. ಆನಂತರವೇ ರಾಮಾಯಣ ನಡೆಯಿತೆನ್ನಬಹುದು. ವಿಶ್ವದಲ್ಲಿಯ ಒಂದೊಂದು ವಸ್ತುವಿನಲ್ಲಿ ಹುದುಗಿದ ಶಕ್ತಿ ಇದೆ. ಮಂತ್ರಗಳ ಸರಿಯಾದ ಉಚ್ಚಾರಣೆಯಿಂದ ಈ ಶಕ್ತಿಯನ್ನು ಜಾಗೃತಗೊಳಿಸಬಹುದು. ಅದರಿಂದ ಇಚ್ಛಾಪೂರ್ತಿ ಮಾಡಿಕೊಳ್ಳಬಹುದು. ಇದು ಯಾತು - ಕ್ರಿಯೆಯ ಸರಳ ಲೆಕ್ಕ".

ಶ್ರೀಮತಿ ಸರಸ್ವತಿ ರಿಸಬೂಡ ಅವರು ಉತ್ತಮ ಮರಾಠಿ ಕೃತಿಗಳು "ಆದಷ್ಟು ಬೇಗ ಕನ್ನಡ ಓದುಗರ ಕೈಸೇರಲಿ ಎನ್ನುವ ಆತುರತೆಯಿಂದ" (ಸ್ತ್ರೀಪುರುಷ - ಅನುವಾದಕಿಯ ಮುನ್ನುಡಿ) ಅನುವಾದ ಮಾಡುವ ಉತ್ಸಾಹ ಹೊಂದಿರುವವರು. ಈ ಉತ್ಸಾಹದ ಭರದಲ್ಲಿ ಮೂಲ ಕೃತಿಗೆ ಅಪಚಾರವಾಗದ ಹಾಗೆ ಎಲ್ಲ ಎಚ್ಚರಿಕೆಗಳನ್ನು ಇಟ್ಟುಕೊಳ್ಳುವ ವಿವೇಕವೂ ಇವರಲ್ಲಿದೆ. ಹಾಗೆಯೇ ಹೊಸ ದೃಷ್ಟಿಕೋನದಿಂದ ರಚಿಸಿದ 'ಸ್ತ್ರೀ ಪುರುಷ'ದಂತಹ ಕೃತಿಯನ್ನು ಕನ್ನಡಕ್ಕೆ ತಂದು ಕನ್ನಡದಲ್ಲಿ ಅಂತಹ ಕೃತಿ

ರಚನೆಗೆ ಪ್ರೇರಣೆಯಾಗಬೇಕೆನ್ನುವ ಕಳಕಳಿಯೂ ಇದೆ. ಸರಸ್ವತಿ ರಿಸಬೂಡ ಅವರು ಕನ್ನಡದಲ್ಲಿ ಸ್ವಂತ ಕೃತಿ ರಚಿಸದಿದ್ದರೂ ಕನ್ನಡ ಸಂದರ್ಭದಲ್ಲಿ ಗಮನಿಸಬೇಕಾದ ಹೆಸರಾಗಿರುವುದು ಈ ಅರ್ಥದಲ್ಲಿಯೇ.

* * *



ರಾಮರಾವ ವಿ. ನಾಯಕ

— *ಸದಾನಂದ ಕನವಳ್ಳಿ*

ಶ್ರೀ ರಾಮರಾವ ವಿ. ನಾಯಕ ಕರ್ನಾಟಕದ ಹಿರಿಯ ಹಿಂದುಸ್ತಾನಿ ಗಾಯಕರು. ವರದಾ ನದಿಯ ದಂಡೆಯಲ್ಲಿರುವ ನೀರಲಗಿ (ಸವಣೂರ ತಾಲೂಕು, ಧಾರವಾಡ ಜಿಲ್ಲೆ) ಯಲ್ಲಿ ೧೯೦೯ ರಲ್ಲಿ ಜನಿಸಿದ ರಾಮರಾವ ವಿ. ನಾಯಕ ಬಹಳ ಕಷ್ಟಪಟ್ಟು ಸಂಗೀತ ವಿದ್ಯೆ ಸಂಪಾದಿಸಿದವರು. ಸ್ವಂತ ಪರಿಶ್ರಮದ ಬಲದಿಂದಲೆ ಅವರು ಸಾಧನೆಗೈದವರು.

ರಾಮರಾವರ ತಂದೆ ವೆಂಕಾಜಿರಾವ ಸ್ವಗ್ರಾಮದಿಂದ ತೆರಳಿ ಮೈಸೂರು ಮಹಾರಾಜರ ರಕ್ಷಣಾ ಇಲಾಖೆಯಲ್ಲಿ ನಾಗರಿಕ ಉದ್ಯೋಗವನ್ನು ಸೇರಿದರು. ಅವರು ಹೆಡ್ ಕ್ಲಾರ್ಕ್ ಆಗಿ ಪದೋನ್ನತಿ ಪಡೆದು ಹಾಸನ, ಚಿತ್ರದುರ್ಗ ಮತ್ತು ಬೆಂಗಳೂರು ನಗರಗಳಲ್ಲಿ ಸೇವೆ ಸಲ್ಲಿಸಿದರು. ೧೯೨೦ ರಲ್ಲಿ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದರು. ತಮ್ಮ ಸೇವಾವಧಿಯಲ್ಲಿ ಅವರು ಅರಮನೆಯೊಂದಿಗೆ ಸಂಪರ್ಕ ಹೊಂದಿ ಸಂಗೀತದ ಬಗೆಗೆ ಒಲವು ಮೂಡಿಸಿಕೊಂಡರು. ಪಿಟೀಲು ನುಡಿಸಲು ಕಲಿತರು.

ರಾಮರಾವರನ್ನು ಶಾಲೆಗೆ ಸೇರಿಸಲಾಯಿತು. ಸುಶಿಕ್ಷಿತನಾಗಿ ಮುಂದುವರಿದು ಮಗ ಉನ್ನತ ಹುದ್ದೆ ಸಂಪಾದಿಸುವನೆಂದು ತಂದೆ ಆಶಿಸಿದರು. ಆದರೆ, ದೈವ ಮಗನಿಗೆ ಇನ್ನೇನನ್ನೊ ಕಾದಿರಿಸಿತ್ತು. ಮಗ ನಿಯಮಿತವಾಗಿ ಶಾಲೆಗೆ ಹೋಗುತ್ತಿರುವನೆಂದು ತಂದೆ ಅಂದುಕೊಂಡರು. ಮಗನೊ ಪಾಠ ತಪ್ಪಿಸಿ ನೆರೆಮನೆಗಳಲ್ಲಿ ೭೮ ಆರ್.ಪಿ.ಎಂ. ಶಾಸ್ತ್ರೀಯ ಸಂಗೀತದ ಧ್ವನಿಮುದ್ರಿಕೆಗಳನ್ನು ಆಲಿಸುತ್ತಿದ್ದನು.

ಅದು ಗ್ರಾಮೊಫೋನು ಯುಗ. ಶಾಸ್ತ್ರೀಯ ಸಂಗೀತ ಪ್ರಸಾರ ಮಾಡುವಲ್ಲಿ ಗ್ರಾಮೊಫೋನು ಮಹತ್ವದ ಪಾತ್ರ ನಿರ್ವಹಿಸಿದೆ. ಪ್ರತಿ ಹೋಟೆಲ್‌ನಲ್ಲಿ ಗ್ರಾಮೊಫೋನು ಇತ್ತು. ಫಿಲ್ಮ್ ಸಂಗೀತ ಇನ್ನು ತನ್ನ ದಾಳಿ ಆರಂಭಿಸಿರದಿದ್ದ ಕಾಲ. ಬಾಲಕ ರಾಮರಾವ ಘಂಟೆಗಟ್ಟಲೆ ಹೊಟೆಲುಗಳಲ್ಲಿ ಕುಳಿತುಕೊಂಡು ಅಬ್ದುಲ್ ಕರೀಮಖಾನ, ಫೈಯಾಜ ಖಾನ, ನಾರಾಯಣರಾವ ವ್ಯಾಸ, ಜೋಹರಾಬಾಯಿ, ಇಂದುಬಾಲಾ ಮೊದಲಾದವರ ಧ್ವನಿಮುದ್ರಿಕೆ ಕೇಳುತ್ತಿದ್ದ. ಹಾಗೂ ಅವುಗಳನ್ನು ಅನುಕರಿಸುತ್ತಿದ್ದ. ಗೋವಿಂದರಾವ ಟೇಂಬೆ ಅವರ ಹಾರ್ಮೋನಿಯಮ್ ಧ್ವನಿಮುದ್ರಿಕೆಗಳಿಂದ ಪ್ರೇರಿತನಾಗಿ ಹಾರ್ಮೋನಿಯಮ್ ನುಡಿಸಲು ಕಲಿತ. ಹಾರ್ಮೋನಿಯಂ ವಾದನಕೌಶಲ್ಯ ಮುಂದೆ ಅವರನ್ನು ಆಗ್ರಾ ಘರಾಣೆಯಲ್ಲಿ ತೂರಿಸಿತು.

ಮಗನ ಸಂಗೀತಾಸಕ್ತಿ ಕಂಡ ವೆಂಕಾಜಿರಾವ ಬಿ.ಎಚ್. ಶ್ರೀನಿವಾಸರಾವ ಅವರಲ್ಲಿ ಮಗನ ಸಂಗೀತ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದರು.ಅಂಥ ಸಂಗೀತಗಾರರಾಗಿದ್ದ ಶ್ರೀನಿವಾಸರಾವ 'ಜಯಲಕ್ಷ್ಮಿ ನಾಟಕ ಸಭಾ'ದಲ್ಲಿ ಸಂಗೀತ ನಿರ್ದೇಶಕರಾಗಿದ್ದರು. ಅವರು ರಾಮರಾವರಿಗೆ ಗಾಯನವಲ್ಲದೆ ಹಾರ್ಮೋನಿಯಮ್ ನುಡಿಸುವುದನ್ನೂ ಕಲಿಸಿದರು. ರಾಮರಾವರನ್ನು ರಂಗಮಂಚಕ್ಕೆ ತಂದವರೂ ಅವರೇ. ಧ್ರುವನ ಪಾತ್ರದೊಂದಿಗೆ ಆರಂಭಿಸಿ ರಾಮರಾವ ಚಿಕ್ಕ ಪಾತ್ರಗಳಿಂದ ದೊಡ್ಡ ಪಾತ್ರಗಳಿಗೇರಿದರು. 'ಗುಬ್ಬಿ ಕಂಪನಿ'ಯಲ್ಲೂ ಕೆಲಕಾಲ ಸದಾರಮೆಯಲ್ಲಿ ಕಳ್ಳನ ಪಾತ್ರ ಅಭಿನಯಿಸಿದರು. ಕನ್ನಡ ರಂಗಭೂಮಿಯ ಆಚಾರ್ಯಪುರುಷ ವರದಾಚಾರ್ಯರ ಮೆಚ್ಚುಗೆಯನ್ನು ಗಳಿಸಿದರು. ರಂಗಭೂಮಿ ದಿನಗಳಲ್ಲಿ ರಾಮರಾಯರಿಗೆ ರಂಗದಿಗ್ಗಜರಾದ ಸೀತಪ್ಪ, ಗುರುಮೂರ್ತಪ್ಪ, ರಾಮಚಂದ್ರಶಾಸ್ತ್ರಿ, ಮೊಹಮ್ಮದ ಪೀರ್ ಮತ್ತು ಹಿರಣ್ಣಯ್ಯ ಮೊದಲಾದವರ ಸಹವಾಸ ಲಭಿಸಿತ್ತು. ಗಲ್ಲಾಸಂಗ್ರಹ ನೆಲಕಚ್ಚಿದಾಗ ನಾಟಕದ ಡೇರೆಯನ್ನು ಸಾಲಗಾರರಿಗೇ ಬಿಟ್ಟುಕೊಟ್ಟು ಇತರ ನಟರೊಂದಿಗೆ ಕೋಲಾರದಿಂದ ನಡೆದುಕೊಂಡೇ ಬೆಂಗಳೂರು ಸೇರಿದ ಕಹಿ ಅನುಭವವೂ ರಾಮರಾವರಿಗಾಯಿತು. ಇಷ್ಟೊತ್ತಿಗಾಗಲೆ ರಾಮರಾವ ಹಾರ್ಮೋನಿಯಮ್ ವಾದನದಲ್ಲಿ ನಿಷ್ಣಾತರಾಗಿದ್ದರು ಮತ್ತು ಜನಪ್ರಿಯ ಹರಿಕಥೆಗಾರರಾದ ಕುರ್ತಕೋಟಿ ಕೃಷ್ಣಶಾಸ್ತ್ರಿಗಳಿಗೆ ಹಾರ್ಮೋನಿಯಮ್ ಸಾಥಿ ನೀಡುತ್ತಿದ್ದರು. ಕಷ್ಟ ಪರಿಸ್ಥಿತಿಯಿಂದಾಗಿ ರಾಮರಾವ ಬಿನ್ನಿಮಿಲ್ಲಿನಲ್ಲಿ ದಿನಗೂಲಿ ಕೆಲಸ ಮಾಡಿದ್ದು ಇದೆ.

ಇವೆಲ್ಲ ಕಹಿ ಅನುಭವಗಳು ರಾಮರಾವರ ಮನಸ್ಸನ್ನು ಹುಳಿಗೊಳಿಸದಿದ್ದದ್ದು ಸೋಜಿಗ. ಅವು ಅವರ ಸಂಗೀತವಿದ್ಯೆ ಸಂಪಾದಿಸುವ ಛಲವನ್ನು ತಣ್ಣಗಾಗಿಸಲಿಲ್ಲ. ೧೯೩೯ರಲ್ಲಿ ಗೋವಿಂದ ವಿಠ್ಠಲ ಭಾವೆ ನೂತನವಾಗಿ ಬೆಂಗಳೂರಿನಲ್ಲಿ ಸ್ಥಾಪಿಸಿದ ಸರಸ್ವತಿ ಸಂಗೀತ ವಿದ್ಯಾಲಯ ದಲ್ಲಿ ಅವರಿಂದಲೇ ರಾಮರಾವ ಹಿಂದೂಸ್ತಾನಿ ಸಂಗೀತ ಕಲಿಯಲಾರಂಭಿಸಿದರು. ಸೋದರ ನಾರಾಯಣರಾವ ೧೯೫೩ ರಲ್ಲಿ 'ನವಕರ್ನಾಟಕ

ನಾಟಕ ಸಭಾ' ಆರಂಭಿಸಿದಾಗ ರಾಮರಾವ ಪುನಃ ರಂಗವನ್ನು ಪ್ರವೇಶಿಸಿದರು. ಒಂದೆರಡು ವರ್ಷಾನಂತರ ಕಂಪನಿ ಮುಚ್ಚಿ ರಾಮರಾವ ಮತ್ತೆ ಗೋವಿಂದ ಭಾವೆ ಅವರಲ್ಲಿ ಸಂಗೀತಾಭ್ಯಾಸ ಮುಂದುವರೆಸಿದರು.

ಹೀಗಿರುತ್ತ ಒಂದು ದಿನ ದೈವ ತೆರೆಯಿತು. ೧೯೩೦ರಲ್ಲಿ ಫೈಯಾಜಖಾನರ ಶಿಷ್ಯ ಸ್ವಾಮಿ ವಲ್ಲಭದಾಸ, ಕಚೇರಿ ನೀಡಲೋಸುಗ ಮೈಸೂರಿಗೆ ಬಂದರು. ಅಲ್ಲಿಂದ ಬೆಂಗಳೂರಿಗೆ ಬಂದರು. ವೀಣೆ ವೆಂಕಟರಾಯರ ಮನೆಯಲ್ಲಿ ಅವರ ಕಚೇರಿ ಏರ್ಪಡಿಸಲಾಗಿತ್ತು. ಅವರಿಗೆ ಹಾರ್ಮೋನಿಯಮ್ ಸಾಥಿ ನೀಡಲು ಇತರರಿಗೆ ದುಸ್ಸಾಧ್ಯವಾಯಿತು. ರಾಮರಾವ ಸರಾಗವಾಗಿ ಸಾಥಿ ನೀಡಿದರು. ಆ ಶೈಲಿಯ ಮೀಂಡುಗಳನ್ನು ಮತ್ತು ನೋಂ ತೋಂ ಗಳನ್ನು ಹಾರ್ಮೋನಿಯಮ್‌ನಲ್ಲಿ ಸಲೀಸಾಗಿ ಹೊರಹೊಮ್ಮಿಸಿದರು. ವಲ್ಲಭದಾಸರು ಮೆಚ್ಚುಗೆ ಸೂಸುತ್ತ "ನನ್ನೊಂದಿಗೆ ಇದುವರೆಗೆ ಯಾರೂ ಇಷ್ಟು ಉತ್ಕೃಷ್ಟವಾಗಿ ಹಾರ್ಮೋನಿಯಮ್ ಸಾಥಿ ನೀಡಿದುದಿಲ್ಲ" ಎಂದು ಉದ್ಗರಿಸಿದರು. ಅದು ರಾಮರಾಯರ ಸಂಗೀತಯಾತ್ರೆಗೆ ನಾಂದಿಯಾಯಿತು. ಬೆಂಗಳೂರಿನ ಎಲ್ಲ ಕಚೇರಿಗಳಲ್ಲಿ ತಮ್ಮೊಂದಿಗೆ ಹಾರ್ಮೋನಿಯಮ್ ಸಾಥಿ ನೀಡಲು ವಲ್ಲಭದಾಸರು ರಾಮರಾಯರನ್ನು ಕೇಳಿಕೊಂಡರು. ತಮ್ಮೊಂದಿಗೆ ಬರೋಡಾಕ್ಕೆ ಬರುವಂತೆ ವಲ್ಲಭದಾಸರು ರಾಮರಾವರನ್ನು ಆಹ್ವಾನಿಸಿದರು. ಅವರನ್ನು ಬಿಟ್ಟುಕೊಡಲು ಭಾವೆ ಅವರಿಗೂ ಇಷ್ಟವಿರಲಿಲ್ಲ; ವಲ್ಲಭದಾಸರೂ ಬಿಡಲಿಲ್ಲ. ಬರಲು ಆಗ್ರಹಿಸಿ ಬರೋಡಾದಿಂದ ಪತ್ರ ಬರೆದರು. ರಾಮರಾವರಿಗೊ ಹೇಳಲಾರದ ಬಡತನ. ಸಾಧ್ಯವಿದ್ದ ಪುಡಿಗಾಸುಗಳನ್ನೆಲ್ಲ ಸಂಗ್ರಹಿಸಿ ಬರೋಡಾಕ್ಕೆ ಹೊರಟರು.

ಬರೋಡಾ ಆಗ್ರಾ ಘರಾಣೆಯ ಕೇಂದ್ರವಾಗಿತ್ತು. ಏಕೆಂದರೆ ಅಲ್ಲಿ ಆಗ್ರಾ ಪ್ರಭೃತಿ ಫೈಯಾಜಖಾನ ಆಸ್ಥಾನ ಗಾಯಕರಾಗಿದ್ದರು. ವಲ್ಲಭದಾಸ ಮತ್ತು ಫೈಯಾಜ ಖಾನರ ಷಡ್ಡಕ ಅತಾ ಹುಸೇನ ಖಾನರ ವಾತ್ಸಲ್ಯಮಯ ಶಿಕ್ಷಣದಲ್ಲಿ ರಾಮರಾವರ ಸಂಗೀತ ಪ್ರತಿಭೆ ಅರಳಿತು. ಅತಾ ಹುಸೇನ್ ಖಾನ್ ಅನೇಕ ಸಂಗೀತಗಾರರನ್ನು ತಯಾರಿಸಿದವರು. ಪ್ರಸಿದ್ಧ ಗಾಯಕರಾದ ದಿಲೀಪಚಂದ ವೇದಿ ಮತ್ತು ಎಸ್.ಎನ್. ರತನ್‌ಜನ್‌ಕರ ಅತಾ ಹುಸೇನ ಖಾನರ ಶಿಷ್ಯರು. ರಾಮರಾವ ಅತಾ ಹುಸೇನ ಖಾನರಲ್ಲಿ ೮ ೧೦ ವರ್ಷ ಶಿಕ್ಷಣ ಪಡೆದು ಆಗ್ರಾ ಘರಾಣೆಯ ಗರ್ಭಗುಡಿಯನ್ನೇ ಪ್ರವೇಶಿಸಿದಂತಾಯಿತು. ಆಗ್ರಾ ಘರಾಣೆಯ ಸೂಕ್ಷ್ಮಾಂಶಗಳನ್ನು ಅರಗಿಸಿಕೊಳ್ಳಲು ಅವಕಾಶವಾಯಿತು. ರಾಮರಾವರು ಫೈಯಾಜ ಖಾನರ ಪ್ರೀತಿಗೆ ಎಷ್ಟೊಂದು ಪಾತ್ರರಾದರೆಂದರೆ: ಅವರನ್ನು ಹಾರ್ಮೋನಿಯಮ್ ಇಲ್ಲವೆ ತಂಬೂರಿ ಸಾಥಿಗಾಗಿ ರತ್ಲಮ್, ಸಾನಂದ, ಅಹಮ್ಮದಾಬಾದ ಮುಂತಾದೆಡೆ ಕರೆದೊಯ್ಯುರು. ಫೈಯಾಜಖಾನ, ಅತಾ ಹುಸೇನ ಖಾನ, ವಲ್ಲಭದಾಸ ಮತ್ತು ಇತರ ಆಗ್ರಾ ಘರಾಣೆಯ ಪ್ರಭೃತಿಗಳಿಗೆ ಸಾಥಿ ನೀಡುವುದೇ ಒಂದು ಶ್ರೀಮಂತ ಅನುಭವ ಹಾಗೂ ಶಿಕ್ಷಣವಾಗಿತ್ತು. ಅಲ್ಲದೆ, ಮಹಾಗಾಯಕರಾದ ಭಾಸ್ಕರಬುವಾ ಬಖಲೆ, ಭಯ್ಯಾ

ಗಣಪತರಾವ, ಮೌಜುದ್ದೀನ ಡಾಗರ ಮತ್ತು ರಹೀಮುದ್ದೀನ ಡಾಗರರಂತಹರ ಗಾಯನ ಆಲಿಸುವ ಅವಕಾಶಗಳೂ ಲಭಿಸಿದವು.

೧೯೪೩ ರಲ್ಲಿ ರಾಮರಾವ ಬೆಂಗಳೂರಿಗೆ ಬಂದರು. ಅಂದಿನಿಂದ ಚಾಮರಾಜಪೇಟೆಯಲ್ಲಿರುವ ತಮ್ಮ ಮನೆಯಲ್ಲಿ ಗಂಭೀರವಾಗಿ, ಆದರೆ ಸದ್ದುಗದ್ದಲವಿಲ್ಲದೆ, ಸಂಗೀತ ವಿದ್ಯಾದಾನದಲ್ಲಿ ತೊಡಗಿದ್ದಾರೆ. ಅವರು ಆಡಂಬರವನ್ನರಿಯರು. ಮನೆಯ ಹೊರಗಡೆ ನಾಮಫಲಕ ಕೂಡ ಇಲ್ಲ. ವಿದ್ಯಾದಾನ, ನಾದೋಪಾಸನೆಗಳಿಗೆ ಮುಡಿಪಾದ ಜೀವ ಅವರದು. ದೊಡ್ಡ ಕುಟುಂಬ ನೋಡಿಕೊಳ್ಳುವ ಭಾರವಿದ್ದರೂ ವಿದ್ಯಾರ್ಥಿಗಳಿಂದ ಶುಲ್ಕ ಕೇಳರು. ಅವರೇ ತಿಳಿದು ಕೊಟ್ಟಷ್ಟರಿಂದಲೇ ಸಂತೃಪ್ತರು. ಸಂಗೀತ ಅವರಿಗೆ ಒಂದು ವೃತ್ತಿಯಲ್ಲ, ಉಪಾಸನೆ.

ರಾಮರಾವ, ಮುಂಬಯಿ, ಕಲಕತ್ತಾ, ಅಹಮ್ಮದಾಬಾದ, ಮದ್ರಾಸ ಮುಂತಾದೆಡೆ ಕಚೇರಿ ನೀಡಿದ್ದಾರೆ. ಅವರ ಗಾಯನ ಕೇಳಿ ರಸಿಕರು : "ಖಾನಸಾಹೇಬರ (ಫೈಯಾಜಖಾನ) ನೆನಪು ಮೂಡಿಬಂತು"ಅಂದಿದ್ದಾರೆ. "ಆಗ್ರಾ ಘರಾಣೆಯ ನಿಜವಾದ ಗಾಯನ ಬೆಂಗಳೂರಿನಲ್ಲಿದೆ " ಎಂದು ಅಭಿಮಾನ ವ್ಯಕ್ತಪಡಿಸಿದ್ದಾರೆ. ರಾಮರಾವ ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಎರಡು ಬಾರಿ ಹಾಡಿದ್ದಾರೆ. ೧೯೮೩ರಲ್ಲಿ ಮೈಸೂರಿನ ದಸರಾ ಸಂಗೀತೋತ್ಸವದಲ್ಲಿ ಪ್ರದರ್ಶನ ನೀಡಿದ್ದಾರೆ. ಆದೇ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಹಾಗೂ ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಜಂಟಿಯಾಗಿ ದಿಲ್ಲಿಯಲ್ಲಿ ಏರ್ಪಡಿಸಿದ ಪುರಂದರದಾಸರ ನಾಲ್ಕನೆಯ ಶತಮಾನೋತ್ಸವ ಸಂಗೀತೋತ್ಸವದಲ್ಲಿ ಹಾಡಿದ್ದಾರೆ. ಪ್ರಾರ್ಥನೆ, ಉಪವಾಸ ಮುಂತಾದ ಧಾರ್ಮಿಕ ವ್ರತಗಳನ್ನು ಆಚರಿಸುವ ರಾಮರಾವರು ಅವುಗಳಿಗೆ ಅಡ್ಡಿಯುಂಟಾಗುವುದೆಂದು ಕಚೇರಿಗಳನ್ನು ಅಷ್ಟಾಗಿ ಒಪ್ಪಿಕೊಳ್ಳುವುದಿಲ್ಲ. ಹಾಗೂ ಸಂಪೂರ್ಣ ಪ್ರಸಿದ್ಧಿ ಪರಾಙ್ಮುಖರಾಗಿದ್ದಾರೆ. ರಾಮರಾವ ದಾಸಕೂಟ ಪರಂಪರೆಗೆ ಸೇರಿದವರಾಗಿದ್ದು ಪುರಂದರದಾಸ ಮತ್ತು ಜಗನ್ನಾಥರ ನಿಷ್ಠಾವಂತ ಆರಾಧಕರು.

ಆಗ್ರಾ ಗಾಯನದ ಗಡಸುತನ ಗಾಯಕಿಯರಿಗೆ ಒಗ್ಗುವುದಿಲ್ಲವೆಂಬ ಪ್ರತೀತಿಯಿದೆ. ರಾಮರಾಯರು, ಗೋಹರಜಾನ ಮತ್ತು ಸರಸ್ವತಿ ಫಾತರ್ಪೇಕರ ಉದಾಹರಣೆ ನೀಡಿ ಈ ಪ್ರತೀತಿಯನ್ನು ಸ್ಫೋಟಿಸುತ್ತಾರೆ. ರಾಮರಾಯರ ಶಿಷ್ಯರಲ್ಲೂ ಮಹಿಳೆಯರೆ ಅಧಿಕ. ಅವರಲ್ಲಿ ಲಲಿತಾ ಉಭಯಕರ, ಲಲಿತ ಜೆ. ರಾವ್, ಮೀರಾ ಗೋಳಿಕೇರಿ, ರಾಧಾಬಾಯಿ ಸುಜೀರ, ಮನೋರಮಾ ಗಂಗೂಲಿ, ಸುಮತಿ, ಸುಮಾ ಮತ್ತು ಶಾಂತಾ ಜಯತೀರ್ಥ ಮೊದಲಾದವರು ಇದ್ದಾರೆ. ಇವರಲ್ಲಿ ಶಾಂತಾ ಜಯತೀರ್ಥ ಆಕಾಶವಾಣಿಯಲ್ಲಿ ಸಂಗೀತ ಕಾರ್ಯಕ್ರಮಗಳಿಗೆ ನಿರ್ಮಾಪಕಿಯಾಗಿದ್ದಾರೆ. ಲಲಿತ ಜೆ. ರಾವ್ ರಾಷ್ಟ್ರಮಟ್ಟದ ಗಾಯಕಿಯಾಗಿದ್ದಾರೆ. ರಾಮರಾವರ ಇನ್ನೋರ್ವ ಶಿಷ್ಯ ಎಂ.ಆರ್. ಗೌತಮ, ಭಾರತದ ಏಕಮೇವ ಸಂಗೀತ ವಿಶ್ವವಿದ್ಯಾಲಯ ಖೈರಾಘರದ ಕುಲಪತಿಯಾಗುವ ಗೌರವ ಪಡೆದಿದ್ದರು.

ರಾಮರಾವರು ೮೫ರ ವೃದ್ಧರಾಗಿದ್ದರೂ ಕುಂದದ ಉತ್ಸಾಹದಿಂದ ಸಂಗೀತ ವಿದ್ಯಾದಾನ ಮಾಡುತ್ತಿರುವರು.

ರಾಮರಾವ ನಾಯಕರ ಇನ್ನೊಂದು ಹಿರಿಮೆಯೆಂದರೆ : ಶಂಕರರಾವ ಸೋದೆ ಅವರೊಡಗೂಡಿ ಮೈಸೂರಿನಂತೆಯೇ ಕರ್ನಾಟಕ ಸಂಗೀತದ ಭದ್ರ ಕೋಟೆಯಾಗಿದ್ದ ಬೆಂಗಳೂರಿನಲ್ಲಿ ಹಿಂದೂಸ್ತಾನಿ ಸಂಗೀತ ಹಬ್ಬುವಂತೆ ಮಾಡಿದರು. ಅನೇಕ ಹಿಂದೂಸ್ತಾನಿ ಗಾಯಕರ ಕಚೇರಿ ಏರ್ಪಡಿಸಿದುದಲ್ಲದೆ ಹಿಂದುಸ್ತಾನಿ ಕಲಾಕಾರ ಮಂಡಳಿ ಸ್ಥಾಪಿಸುವ ಕಲ್ಪನೆ ನೀಡಿದವರು ರಾಮರಾವರು. ಇಂದು ಅದು ಬೆಂಗಳೂರಿನ ಪ್ರತಿಷ್ಠಿತ ಸಂಗೀತ ಸಂಸ್ಥೆಯಾಗಿದೆ.

ರಾಮರಾವ ನಾಯಕರ ಸಂಗೀತಸೇವೆ ಮನ್ನಿಸಿ ಹಲವಾರು ಪ್ರಶಸ್ತಿಗಳು ಬಂದಿವೆ: ೧೯೪೯ರಲ್ಲಿ ಗಂಧರ್ವ ಮಹಾವಿದ್ಯಾಲಯದ ಸಂಗೀತ ಕಲಾಭೂಷಣ, ೧೯೭೯ರಲ್ಲಿಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ: ೧೯೭೭ ರಲ್ಲಿ ಶಿವಮೊಗ್ಗೆಯ ಪ್ರತಿಭಾರಂಗದಿಂದ ಪ್ರತಿಭಾರತ್ನ ಪ್ರಶಸ್ತಿ: ೧೯೮೫ ರಲ್ಲಿ ಕರ್ನಾಟಕ ಗಾನ ಕಲಾ ಪರಿಷತ್ತಿನ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ: ೧೯೮೯ ರಲ್ಲಿ ಬೆಂಗಳೂರಿನ ತ್ಯಾಗರಾಜ ಗಾನ ಸಭಾದ ಕಲಾಭೂಷಣ ಪ್ರಶಸ್ತಿ. ೧೯೯೨ ರಲ್ಲಂತೂ ಮೂರು ಪ್ರತಿಷ್ಠಿತ ಪ್ರಶಸ್ತಿಗಳು ಅವರಿಗೆ ಬಂದಿವೆ. ಬೆಂಗಳೂರಿನ ಚೌಡಯ್ಯ ಸ್ಮಾರಕ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಹಾಗೂ ತಾನಸೇನ ಪ್ರಶಸ್ತಿ.

●

* * *

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೯೯೨ನೇ ಸಾಲಿನ ಪ್ರಶಸ್ತಿ ವಿಜೇತ ಕಲಾವಿದರು

೧. ಶ್ರೀ ಪುಟ್ಟಮಾದಯ್ಯ	- ನೀಲಗಾರರು
೨. ಶ್ರೀ ಕುರುಬರ ಹೊನ್ನ	- ಕುರುಬರ ಕೋಲಾಟ
೩. ಶ್ರೀ ಅಗಸರ ಮಾಲಣ್ಣ ಉಃಗಿಡ್ಡಶೆಟ್ಟಿ	- ಕೋಲಾಟ
೪. ಶ್ರೀಮತಿ ನಂಜಮ್ಮ ಕೋಂ ಲೇಃವೆಂಕಟಪ್ಪ	- ಹಾಡುಗಾರಿಕೆ
೫. ಶ್ರೀ ಅಸಾದಿ ಹನುಮಂತಪ್ಪ	- ಅಸಾದಿ ಪದ
೬. ಶ್ರೀಮತಿ ಪುಟ್ಟತಾಯಮ್ಮ	- ಹಾಡುಗಾರಿಕೆ
೭. ಶ್ರೀ ಜೋಗಿ ಬೂದ್ಯಪ್ಪ	- ಕಿನ್ನರಿಜೋಗಿ
೮. ಶ್ರೀ ಅಗರಿ ಶ್ರೀನಿವಾಸ ಭಾಗವತರು	- ಭಾಗವತರು
೯. ಶ್ರೀ ತಳಾರಿ ಗಂಗಪ್ಪ	- ತಮಟೆ
೧೦. ಶ್ರೀ ಕಾಟುಕುಕ್ಕೆ ಕುಂಞರಾಮ	- ಯಕ್ಷಗಾನ
೧೧. ಶ್ರೀಮತಿ ಗೊರ್ಲಕಟ್ಟೆ ಹನುಮಜ್ಜಿ	- ಹಾಡುಗಾರಿಕೆ, ಜನಪದ ಕಥನ ಕವನಗಳು
೧೨. ಶ್ರೀ ಜಿ.ಆರ್. ಚಿಕ್ಕಮುದ್ದಯ್ಯ	- ಬಯಲಾಟ
೧೩. ಶ್ರೀ ವೀರಭದ್ರ ಮಂಜುನಾಥ	- ಯಕ್ಷಗಾನ ಮದ್ದಳೆಗಾರ
೧೪. ಶ್ರೀಮತಿ ನಾಗಮ್ಮ	- ಸೋಬನೆ ಹಾಡುಗಾರಿಕೆ
೧೫. ಶ್ರೀ ಈಶ್ವರಪ್ಪ ಗುರಪ್ಪ ಅಂಗಡಿ	- ಪುರವಂತಿಕೆ
೧೬. ಶ್ರೀ ಗುರಣ್ಣ ತಂದೆ ಮಾರ್ತಂಡಪ್ಪ	- ಜನಪದ ವೈದ್ಯ
೧೭. ಶ್ರೀ ಎ.ಎಂ. ಹಾಲಯ್ಯ	- ದೊಡ್ಡಾಟ ಭಾಗವತ
೧೮. ಶ್ರೀ ಸಿದ್ಧಪ್ಪ ಬೇಲಪ್ಪ ಸವದತ್ತಿ	- ದೊಳ್ಳಿನ ಹಾಡು
೧೯. ಶ್ರೀ ಹನಕುಂಟೆ ಕಿಳ್ಳೇಕ್ಯಾತರ ರಾಮಯ್ಯ	- ತೊಗಲುಗೊಂಬೆಯಾಟ
೨೦. ಶ್ರೀ ಬಸಯ್ಯ ಜಿ. ಸಮಾಳದ	- ದೊಡ್ಡಾಟ

೧೯೯೨ನೇ ಸಾಲಿನ ಜಾನಪದ ತಜ್ಞರು

ಡಾ. ಚಂದ್ರಶೇಖರ ಕಂಬಾರ
ಶ್ರೀ ಮುದೇನೂರ ಸಂಗಣ್ಣ
ಡಾ. ಎಸ್.ಕೆ. ಕರೀಂಖಾನ್

ಕರ್ನಾಟಕ ಸಾಹಿತ್ಯ ಅಕಾಡೆಮಿ : ಬೆಂಗಳೂರು

೧೯೯೨ರ ಸಾಲಿನ ಬಹುಮಾನ ಪಡೆದ ಕೃತಿಗಳು

೧. ಅತ್ಯುತ್ತಮ ಸೃಜನ ಪ್ರಧಾನಕೃತಿ

ಬೊಳುವಾರು ಮಹಮದ್ ಕುಂಞ - *'ಆಕಾಶಕ್ಕೆ ನೀಲಿ ಪರದೆ'*

೨. ಅತ್ಯುತ್ತಮ ಚಿಂತನ ಪ್ರಧಾನ ಕೃತಿ

ಎಚ್.ನರಸಿಂಹಯ್ಯ - *'ತೆರೆದ ಮನ'*

೩. ಪ್ರಕಾರಗಳು

ಕಾವ್ಯ	-	ಅಶೋಕ ಶೆಟ್ಟರ	ವಿಶ್ವವಿದ್ಯಾಲಯದ ವಾಚನಾಲಯದೊಳಗೆ
ಕಾದಂಬರಿ	-	ಕೆ.ಸತ್ಯನಾರಾಯಣ	ಗೌರಿ
ಸಣ್ಣಕತೆ	-	ಮೊಗಳ್ಳಿ ಗಣೇಶ	ಬುಗುರಿ
ನಾಟಕ	-	ಚಂದ್ರಕಾಂತ ಕುಸನೂರ	ದಿಂಡಿ
ಪ್ರವಾಸ ಸಾಹಿತ್ಯ	-	ಶಮಂತ	ಗಿರಿಸ್ನೇಹ
ಸಂಶೋಧನೆ	-	ಎಂ.ಬಿ.ನೇಗಿನಹಾಳ	ಮೈಲಾರಲಿಂಗ - ಖಂಡೋಬ
ಗ್ರಂಥ ಸಂಪಾದನೆ	-	ಬಿ.ವಿ.ಶಿರೂರ	ರತ್ನಕರಂಡಕದ ಕಥೆಗಳು
ಸಾಹಿತ್ಯ ವಿಮರ್ಶೆ	-	ಬಿ.ದಾಮೋದರ ರಾವ್	ಆಯಾಮಗಳು
ವಿಜ್ಞಾನ ಸಾಹಿತ್ಯ	-	ಕೆ.ಸರೋಜ	ತಾಯಿಹಾಲು
ಸಮಾಜ ವಿಜ್ಞಾನ		೧.ನಿರಂಜನ ವಾನಳ್ಳಿ	ಸುದ್ದಿಯಷ್ಟೇ ಅಲ್ಲ
		೨. ಎಸ್.ಚಂದ್ರಶೇಖರ	ಅಂಬೇಡ್ಕರ್ ಮತ್ತು ಗಾಂಧಿ
ವಿನೋದ ಸಾಹಿತ್ಯ	-	ಎಂ.ಎಸ್.ನರಸಿಂಹ ಮೂರ್ತಿ	ವರ್ಗಾವರ್ಗಿ
ಜೀವನ ಚರಿತ್ರೆ	-	ದೇ.ಜವರೇಗೌಡ	ಬಸವೇಶ್ವರ - ಅಂಬೇಡ್ಕರ್
ಮಾನವಿಕ	-	ಕೆ.ಎಸ್.ನಿಸಾರ್ ಅಹಮದ್	ಹಿರಿಯರು ಹರಸಿದ ಹೆದ್ದಾರಿ
ಮಕ್ಕಳ ಸಾಹಿತ್ಯ	-	ವೈದೇಹಿ	ಐದು ಮಕ್ಕಳ ನಾಟಕಗಳು

ಅನುವಾದ ೧	೧. ಎಸ್.ವಿ.ಪರಮೇಶ್ವರ ಭಟ್ಟ	ಭವಭೂತಿ ಮಹಾಸಂಪುಟ
	೨. ಸರಸ್ವತಿ ರಿಸಬೂಡ	ಸ್ತ್ರೀ ಪುರುಷ
ಅನುವಾದ ೨	ಎನ್ ಬಾಲಸುಬ್ರಹ್ಮಣ್ಯ	ಲಾಂಜೈನಸನ ಔನ್ನತ್ಯ ವಿಚಾರ ಚರ್ಚೆ

ತುಳು ಸಾಹಿತ್ಯ ಬಹುಮಾನ

ಬೀರ - ವಾಮನ ನಂದಾವರ

ಕೊಂಕಣಿ

ವಿಧವೆ - ಲ್ಯಾನ್ಸಿ ಪಿಂಟೋ

ಕನ್ನಡದಿಂದ ಇಂಗ್ಲೀಷಿಗೆ

'ಮಸುಮತ್ತಿ ಅಂಡ್ ಅದರ್ ಸ್ಟೋರೀಸ್' - ಕಡಾಂಬಿ ಹಯಗ್ರೀವಾಚಾರ್

ಹೊಸ ಬಹುಮಾನ ***(ಮೊದಲ ಪುಸ್ತಕಕ್ಕೆ)***

ಮಜಲು - ಕೆ.ಆರ್.ವಿದ್ಯಾಧರ

ಸಂಕೀರ್ಣ

ಭೂಗತನ ನೆನಪುಗಳು - ದಯಾನಂದ ಪ್ರಭು

ಕೊಂಕಣಿ ಸಾಹಿತ್ಯ ಬಹುಮಾನ

ವಿಧವ್ - ಲ್ಯಾನ್ಸಿ ಪಿಂಟೊ ನಾಯಕ್

ಗೌರವ ಪ್ರಶಸ್ತಿ - ೧೯೯೨ ವಿಜೇತರು

೧. ಶ್ರೀ ಕುಮಾರ ವೆಂಕಣ್ಣ
೨. ಡಾ. ಗಿರಡ್ಡಿ ಗೋವಿಂದರಾಜ
೩. ಶ್ರೀ ಚಂದ್ರಕಾಂತ ಕುಸನೂರ
೪. ಶ್ರೀಮತಿ ಎಚ್.ಎಸ್. ಪಾರ್ವತಿ
೫. ಪ್ರೊ. ಪಿ.ವಿ. ವಜ್ರಮಟ್ಟಿ

ಭಾಗ - ೨

"ಅಭಿವ್ಯಕ್ತಿಯ ಹುಡುಕಾಟ"

*ಚಿತ್ರಕಲೆ

*ಸಂಗೀತ ಮತ್ತು ನೃತ್ಯ

*ರಂಗಭೂಮಿ

*ಚಿತ್ರರಂಗ

*ಕ್ರೀಡಾ ಚಟುವಟಿಕೆ

*ಸಾಹಿತ್ಯ ಪ್ರಕಾರಗಳು

ಚಿತ್ರಕಲೆ

— ಜಿ. ಜಯಕುಮಾರ್

೧೯೯೨ನೇ ವರ್ಷ ಚಿತ್ರಕಲಾ ರಂಗದಲ್ಲಿ ಎಂದಿನಂತೆ ಕಾರ್ಯಚಟುವಟಿಕೆಗಳು ನಡೆದು ಬಂದರೂ ಈ ವರ್ಷದಲ್ಲಿ ಯುವ ಪೀಳಿಗೆಯನ್ನು ಪ್ರೋತ್ಸಾಹಿಸಿದ್ದು ಮುಖ್ಯ ಅಂಶ. ಬೆಂಗಳೂರನ್ನು ಒಳಗೊಂಡು ಮೈಸೂರು, ದಾವಣಗೆರೆ, ಗುಲ್ಬರ್ಗಾ, ಹುಬ್ಬಳ್ಳಿ ಹಾಗೂ ಇನ್ನಿತರ ಕಲಾಕೇಂದ್ರಗಳಲ್ಲಿ ಚಟುವಟಿಕೆಗಳು ನಡೆದಿವೆ. ಸೂಕ್ಷ್ಮವಾಗಿ ಕಲಾ ಚಟುವಟಿಕೆಯನ್ನು ಅವಲೋಕಿಸಿದರೆ, ಕಳೆದ ದಶಕದ ಚಟುವಟಿಕೆಗಳ ಪ್ರಗತಿಗಿಂತ ಈಚಿನ ವರ್ಷಗಳು ಹೆಚ್ಚಿನ ಚಾಲನೆಯನ್ನು ಹೊಂದುತ್ತಿವೆ ಎಂದು ಹೇಳಬಹುದು. ಯುವ ಪ್ರತಿಭೆಗಳು ತೀವ್ರವಾಗಿ ಕಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈಗ ಬೆಂಗಳೂರು, ನಿಧಾನವಾಗಿಯಾದರೂ, ದೇಶದ ಪ್ರಮುಖ ಕಲಾಕೇಂದ್ರವಾಗಿ ರೂಪಾಂತರಗೊಳ್ಳತೊಡಗಿದೆ. ಇದಕ್ಕೆ ಪೂರಕವಾಗಿ ಹೊರಗಿನ ಕಲಾವಿದರ ಪ್ರದರ್ಶನಗಳು ಸಾಕಷ್ಟು ನಡೆದಿರುವುದು ಗಮನಿಸತಕ್ಕ ಅಂಶ. ಈ ಸಂಪರ್ಕವು ಮುಂದಿನ ವರ್ಷಗಳಲ್ಲಿ ಕಲಾಕ್ಷೇತ್ರದ ಕಾರ್ಯಚಟುವಟಿಕೆಯ ಧೋರಣೆಯಲ್ಲಿ ಬದಲಾವಣೆಗೆ ಹಾದಿಯಾಗಬಹುದೆಂದು ಆಶಿಸಬಹುದು.

ಕಲಾ ಪ್ರದರ್ಶನ

೧೯೯೨ರ ಜನವರಿಯಲ್ಲಿ ನಾಡಿನ ಹೆಸರಾದ ಕಲಾವಿದ ಯೂಸೋಫ್ ಅರಕ್ಕಾಲ್ ಅವರ ಕೋಲಾಜ್ ಚಿತ್ರ ಪ್ರದರ್ಶನ ಬೆಂಗಳೂರಿನ ಕ್ರಿಂಷನ್ ಗ್ಯಾಲರಿಯಲ್ಲಿ ನಡೆಯಿತು. ಯೂಸೋಫ್ ಅವರ ಪ್ರದರ್ಶನಗಳಲ್ಲಿ ಏಕತಾನತೆಯನ್ನು ಮೀರಿದ ಸಂಯೋಜನೆ ಹಾಗೂ ಪ್ರಯೋಗಶೀಲತೆ ಮನಸೆಳೆಯುವಂತೆ ಇದ್ದದ್ದು ಮುಖ್ಯ ಅಂಶಗಳಲ್ಲಿ ಒಂದು.

ಇನ್ನೊಬ್ಬ ಹೆಸರಾಂತ ಕಲಾವಿದ ಎಸ್.ಜಿ. ವಾಸುದೇವ್‌ರವರ ಕಲಾ ಪ್ರದರ್ಶನದಲ್ಲಿ ವೃಕ್ಷವು ಭಿನ್ನ ರೀತಿಯಲ್ಲಿ ಮತ್ತೆ ಮತ್ತೆ ಪ್ರಾಮುಖ್ಯತೆಯನ್ನು

ಪಡೆಯುತ್ತಿರುವುದು ಎದ್ದು ಕಾಣುತ್ತಿತ್ತು. ಇವರ ಕೃತಿಗಳು ರೇಖಾ ಪ್ರಧಾನವಾಗಿರುವಂಥವುಗಳು. ಅವು ಸಂಯೋಜನೆಯಲ್ಲಿ ವೈವಿಧ್ಯತೆಯನ್ನು ಹೊಂದಿದ್ದು, ಪ್ರಭಾವಿಸುವಂತಿವೆ. ಇದೇ ಅಂಶಗಳು ಅವರ ತಾಮ್ರಫಲಕದ ಉಬ್ಬುಶಿಲ್ಪಗಳಿಗೂ ಅನ್ವಯಿಸುತ್ತವೆ. ಕಲಾವಿದ ಜಿಸುರಾಬಲ್‌ರವರ ಚಿತ್ರಕೃತಿಗಳೂ ಟೆಪಸ್ಟ್ರಿ ಕೃತಿಗಳ ಕಲಾಪ್ರದರ್ಶನದಲ್ಲಿ ನೈಜಶೈಲಿಯನ್ನು ತಂತ್ರವಾಗಿ ಬಳಸಿಕೊಂಡಿದ್ದಾರೆ.

ಕಲಾವಿದ ಚಂದ್ರನಾಥ್ ಆಚಾರ್ಯರ ಕಲಾ ಪ್ರದರ್ಶನವು ಇಂದಿನ ಭ್ರಮಾಜೀವನದ ವಿವಿಧ ಮುಖಗಳನ್ನು ಮಾನಸಿಕ ಒತ್ತಡಗಳನ್ನು ಚಿತ್ರಿಸುತ್ತವೆ. ಅವು ಕಲಾವಿದನ ಸಂವೇದನಾಶೀಲತೆ ಹಾಗೂ ತಾಂತ್ರಿಕ ಕೌಶಲ್ಯಗಳು ಪರಿಣಾಮಕಾರಿಯಾಗಿ ನಿರೂಪಿತಗೊಂಡಿವೆ. ಈ ಎಲ್ಲ ಪ್ರದರ್ಶನವೂ ಬೆಂಗಳೂರಿನ ಕ್ರಿಂಷನ್ ಗ್ಯಾಲರಿಯಲ್ಲಿ ನಡೆಯಿತು.

ಬೆಂಗಳೂರಿನ ಸಾಕ್ಷಿ ಗ್ಯಾಲರಿಯಲ್ಲಿ ರಾಜ್ಯದ ಖ್ಯಾತ ಕಲಾವಿದ ಕೆ.ಟಿ.ಶಿವಪ್ರಸಾದ್‌ರವರ ಕಲಾಪ್ರದರ್ಶನ ನಡೆಯಿತು. ವಾಸ್ತವ ಬದುಕನ್ನು ಸರಳೀಕರಿಸಿ ಗ್ರಾಮಪ್ರತಿಮೆಗಳನ್ನು ಶಕ್ತಿಯುತವಾಗಿ ಬಳಸಿಕೊಂಡು ತಮ್ಮ ಕೃತಿಗಳಲ್ಲಿ ಅತ್ಯುತ್ತಮವಾಗಿ ಅಭಿವ್ಯಕ್ತಗೊಳಿಸಿದ್ದರು. ಸೆಪ್ಟೆಂಬರ್‌ನಲ್ಲಿ ನಡೆದ ಹಿರಿಯ ಕಲಾವಿದರಾದ ಬಾಲನ್ ನಂಬಿಯಾರ್‌ರವರ ಕಲಾಪ್ರದರ್ಶನ ಸಹಜ ಪ್ರಯೋಗ ಮನೋಭಾವ ಮತ್ತು ಸೃಜನಶೀಲತೆಯನ್ನು ತಮ್ಮ ಇತ್ತೀಚಿನ ಕೃತಿಗಳಲ್ಲಿ ತೋರಿಸಿದ್ದರೂ, ಲೋಹದ ಹಾಳೆಯ ಮೇಲೆ ಎನಾಮಲ್ ಗ್ಲೇಜಸ್ ಮಿಶ್ರಣಗಳಿಂದ ಕೃತಿಯನ್ನು ಬಿಡಿಸಿ ಅದನ್ನು ಶಾಖಕ್ಕೆ ಅಳವಡಿಸಿದಾಗ ಅದು ರಾಸಾಯನಿಕ ಕ್ರಿಯೆಗೆ ಒಳಪಟ್ಟು ವಿವಿಧ ಬಣ್ಣವಾಗಿ ಮಾರ್ಪಡುತ್ತದೆ. ಬಾಲನ್ ಈ ತಂತ್ರವನ್ನು ಬಳಸಿಕೊಂಡು ತಮ್ಮ ಆಗತ್ಯಗಳಿಗೆ ತಕ್ಕಂತೆ ದುಡಿಸಿಕೊಂಡು ಕೃತಿಗಳಿಗೆ ಹೊಸ ಆಯಾಮ ನೀಡಲು ಪ್ರಯತ್ನಿಸಿದ್ದಾರೆ.

ರಾಘವೇಂದ್ರರಾವ್‌ರವರ ಛಾಯಾಚಿತ್ರಗಳ ಪ್ರದರ್ಶನದಲ್ಲಿ ತೀಕ್ಷ್ಣವರ್ಣ ಸಂಯೋಜನೆಯ ಪ್ರಕೃತಿಚಿತ್ರಗಳು ಆಸಕ್ತಿಯನ್ನು ಮೂಡಿಸಿದ್ದವು. ಇದೇ ವೇಳೆಯಲ್ಲಿ ಕಲಾವಿದ ಜಿ.ಎಸ್. ಶೆಣೈರವರ ಕಲಾಪ್ರದರ್ಶನವೂ ನಡೆಯಿತು. ಮೈವಳಿಕೆಯಲ್ಲಿ ವಿವಿಧ ನಮೂನೆಗಳಿಂದ ಉಂಟುಮಾಡಿದ ಭ್ರಮಾಲೋಕದ ಭೂ ದೃಶ್ಯಗಳೇ ಇವುಗಳ ವಸ್ತುವಾಗಿತ್ತು. ಅವುಗಳಲ್ಲಿ ಚಿಂತನೆಗಿಂತಲೂ ರಂಜನೀಯತೆ ಪ್ರಧಾನವಾಗಿತ್ತು.

ಡಿಸೆಂಬರ್‌ನಲ್ಲಿ ರಾಷ್ಟ್ರದ ಹೆಸರಾಂತ ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್‌ರವರ ಕಲಾ ಪ್ರದರ್ಶನ ಗಮನಾರ್ಹವಾದುದು. ದೇಶದ ಬೆನ್ನೆಲುಬಾದ ಜನಸಾಮಾನ್ಯರ ಜೀವನದ ನೋವು ನಲಿವುಗಳೇ ಕಲಾವಿದರ ಚಿತ್ರಗಳ ವಸ್ತು. ಅವರು ಹಿಂದೆ ಕಾಗೆಗಳ ಕುರಿತಾದ ಕೃತಿಗಳಿಗಿಂತ ಬೇರೆಯಾಗಿತ್ತು. ಸರಳ ನಿರೂಪಣೆಯಿಂದ ನೋಟಕರನ್ನು ರಂಜಿಸಿತು.

ಹೊರರಾಜ್ಯದ ಹೆಸರಾಂತ ಕಲಾವಿದ ಆದಿಮೂಲಂರವರ ಕಲಾಪ್ರದರ್ಶನವು ಇಂಪ್ರೆಷನಿಸಂ ಪಂಗಡಕ್ಕೆ ಸೇರಿದ ಅಮೂರ್ತ ಕೃತಿಗಳಾಗಿವೆ. ಅವು ಉತ್ತಮ ಬಣ್ಣ ಸಂಮಿಳನವನ್ನು ಹೊಂದಿದ್ದು, ರೊಮ್ಯಾಂಟಿಕ್ ಧೋರಣೆ ಹೊಂದಿವೆ. ಯುವ ಕಲಾವಿದ ರವೀಂದ್ರರೆಡ್ಡಿಯವರ ಶಿಲ್ಪಕೃತಿಗಳ ಪ್ರದರ್ಶನದಲ್ಲಿ ಜನಪದೀಯ ಶೈಲಿಯನ್ನು ಸಮಕಾಲೀನ ತಂತ್ರದೊಂದಿಗೆ ಸಂಮಿಳಿತಗೊಳಿಸಿ ಸಮರ್ಥವಾಗಿ ನಿರೂಪಿಸುವುದನ್ನು ಕಾಣಬಹುದಿತ್ತು. ಖ್ಯಾತ ನೆರೆರಾಜ್ಯದ ಕಲಾವಿದ, ವಿಚಾರವಾದಿ, ಕಾಳಿದಾಸ ಪ್ರಶಸ್ತಿ ಪಡೆದ ಪ್ರೊ.ಕೆ.ಜಿ. ಸುಬ್ರಮಣ್ಯಂರವರ ಕಲಾಪ್ರದರ್ಶನವು ಜನಪದ ಪ್ರತಿಮೆಗಳನ್ನು , ಸೌಂದರ್ಯವನ್ನು, ಕಲಾನಿರೂಪಣೆಯ ಮಾಂತ್ರಿಕತೆಯನ್ನು ಕೃತಿಗಳ ಮೂಲಕ ಸಮರ್ಥವಾಗಿ ಅಭಿವ್ಯಕ್ತಿಸಿ ಉತ್ಸಾಹಿ ಕಲಾವಿದರುಗಳಿಗೆ ಸ್ಫೂರ್ತಿದಾಯಕವಾಗಿದ್ದವು.

ರಣಜಿತ್‌ಸಿಂಗ್ ಗಾಯಕ್ವಾಡ್, ಬರೋಡಾದ ರೇಖಾರೋಡ್ ವಿಟಿಯರವರ ಕಲಾಪ್ರದರ್ಶನವು ಸಾಕ್ಷಿ ಗ್ಯಾಲರಿಯಲ್ಲಿ ಏರ್ಪಡಿಸಲಾಗಿತ್ತು. ಕಂಪ್ಯೂಟರ್ ಆರ್ಟ್ ಪ್ರದರ್ಶನ, ವೀಡಿಯೋ ಆರ್ಟ್ ಪ್ರದರ್ಶನಗಳನ್ನು ಸಾಕ್ಷಿ ಗ್ಯಾಲರಿಯಲ್ಲಿ ಏರ್ಪಡಿಸಲಾಗಿತ್ತು.

ಯುವ ಕಲಾವಿದ ಮನೋಹರ ಆಚಾರ್ಯರವರ ಛಾಯಾಚಿತ್ರ ಪ್ರದರ್ಶನ ಈ ವರ್ಷ ನಡೆಯಿತು. ತಾಂತ್ರಿಕ ನೈಪುಣ್ಯ ಮತ್ತು ಪ್ರಯೋಗಶೀಲತೆಯನ್ನು ತಮ್ಮ ಕೃತಿಗಳಲ್ಲಿ ತೋರಿಸಿದರು. ಅವು ಉತ್ತಮ ಪ್ರದರ್ಶನವೆಂಬ ಹೆಗ್ಗಳಿಕೆಯನ್ನು ಪಡೆಯಿತು. ಅಮೆರಿಕಾದ 'ಮಾಡ್ರನಿಸ್ಟ್ ಸ್ಟಿಲ್ ಲೈಫ್ ಫೋಟೋಗ್ರಾಫಿಕ್' ಪ್ರದರ್ಶನ ಕಲಾತ್ಮಕತೆ ಹಾಗೂ ತಾಂತ್ರಿಕತೆಯ ಉತ್ತಮ ಕೃತಿಗಳಾಗಿದ್ದವು. ಇಷ್ಟೆಲ್ಲ ಆರ್ಟ್‌ಗ್ಯಾಲರಿಗಳಿದ್ದರೂ ಈ ವರ್ಷ ಉತ್ಸಾಹದಿಂದ 'ಸ್ಪೆನ್ಸರ್ಸ್ ಗ್ಯಾಲರಿ' ಅಸ್ತಿತ್ವಕ್ಕೆ ಬಂದಿದೆ. ಜೆ.ಎಂ.ಎಸ್. ಮಣಿ ಅವರ ಏಕವ್ಯಕ್ತಿ ಕಲಾಪ್ರದರ್ಶನವೇ ಗ್ಯಾಲರಿಯ ಮೊದಲ ಪ್ರದರ್ಶನ.

ಹಿಮಾಚಲ ಪ್ರದೇಶದ ಕಲೆ, ಸಂಸ್ಕೃತಿ ಮತ್ತು ಭಾಷಾ ಇಲಾಖೆಯ ಹಾಗೂ ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರದ ನೆರವಿನೊಂದಿಗೆ ಸಿಮ್ಲಾದಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿಯು ಮೇ೪ ರಿಂದ ೮ರ ವರೆಗೆ ಕಲಾ ಪ್ರದರ್ಶನವನ್ನು ಏರ್ಪಡಿಸಿತ್ತು. ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಸಾರ್ಕ್ ದೇಶಗಳ ಸಮಕಾಲೀನ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿತ್ತು. ರಾಜ್ಯ ಲಲಿತಕಲಾ ಅಕಾಡೆಮಿಯು ಅಂತಾರಾಷ್ಟ್ರೀಯ ಕಲಾವಿದರೊಡನೆ ಒಂದು ಸೌಹಾರ್ದ ಕೂಟವನ್ನು ಏರ್ಪಡಿಸಿತ್ತು. ಅಲ್ಲಿಯ ಪ್ರದರ್ಶನ ಉತ್ತಮವಾಗಿತ್ತು. ಹಲವು ಖ್ಯಾತ ಕಲಾವಿದರ ಉತ್ತಮ ಕಲಾಕೃತಿಗಳು ಮೆಚ್ಚುಗೆಯನ್ನು ಗಳಿಸಿದವು.

ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಸೆಪ್ಟೆಂಬರ್ ೩ ರಿಂದ ೧೪ರ ವರೆಗೆ ಅಖಿಲ ಭಾರತ ಕಲಾಪ್ರದರ್ಶನ ಏರ್ಪಡಿಸಲಾಗಿತ್ತು.

ಶಿಬಿರ ಮತ್ತು ವಿಚಾರ ಸಂಕಿರಣ

ಲಲಿತಕಲಾ ಅಕಾಡೆಮಿಯು ಮಾರ್ಚ್ ೮ರಂದು ಮಿಥಿಕ್ ಸೊಸೈಟಿಯಲ್ಲಿ 'ಸಮಕಾಲೀನ ಕಲೆ' ಕುರಿತ ವಿಚಾರಸಂಕಿರಣವೊಂದನ್ನು ಏರ್ಪಡಿಸಿತ್ತು. ಈ ಸಂಕಿರಣದಲ್ಲಿ ರಾಜ್ಯ ಹಾಗೂ ಭಾರತದಲ್ಲಿ ಸಮಕಾಲೀನ ಕಲೆ, ಕಲಾ ಗ್ಯಾಲರಿಗಳು, ನವ್ಯೋತ್ತರ ಕಲೆಯಲ್ಲಿನ ಒಲವುಗಳು, ಇನ್‌ಫ್ಲುಯೆನ್ಸ್ ಆಫ್ ಹೆರಿಟೇಜ್ ಆನ್ ದಿ ಕಾಂಟೆಂಪೊರರಿ ಆರ್ಟ್ಸ್, ಭಾರತದಲ್ಲಿ ಕಂಪ್ಯೂಟರ್ ಕಲೆ ಮುಂತಾದ ವಿಷಯದ ಬಗ್ಗೆ ಚರ್ಚೆ ಹಾಗೂ ಉಪನ್ಯಾಸಗಳು ನಡೆದವು. ಇದರಲ್ಲಿ ಕಲಾ ಕ್ಷೇತ್ರದಲ್ಲಿ ಪ್ರಮುಖರಾದ ಆರ್.ಎಂ. ಹಡಪದ್, ಬಿ.ವಿ.ಕೆ. ಶಾಸ್ತ್ರಿ, ಎಸ್.ಎನ್. ಚಂದ್ರಶೇಖರ, ಪ್ರೊ.ಎಂ.ಎಚ್. ಕೃಷ್ಣಯ್ಯ, ಶ್ರೀಮತಿ ಸೀತಾ ಎಂ. ರಾಥೋಡ್, ಚಿ.ಸು. ಕೃಷ್ಣಸೆಟ್ಟಿ, ಶ್ರೀಮತಿ ರಜನಿ ಪ್ರಸನ್ನ ಮೊದಲಾದವರು ಪಾಲ್ಗೊಂಡಿದ್ದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಚಿತ್ರಕಲಾ ಶಿಕ್ಷಕರ ಸಂಘದ ಸಹಯೋಗದೊಂದಿಗೆ ಮಾರ್ಚ್ ತಿಂಗಳ ಎರಡನೆಯ ವಾರದಲ್ಲಿ "ವಸ್ತು ನಿರೂಪಣಾ ದೃಷ್ಟಾಂತ ಚಿತ್ರ ರಚನಾ ಕಾರ್ಯಗಾರ"ವನ್ನು ಚಿತ್ರಕಲಾ ಶಿಕ್ಷಕರಿಗೆ ಬೆಂಗಳೂರಿನ ಸಮೀಪದಲ್ಲಿರುವ ವಿದ್ಯಾನಗರದಲ್ಲಿ ಏರ್ಪಡಿಸಿತ್ತು. ಕಲಾವಿದರುಗಳಾದ ಶ್ರೀ ಸಿ. ಚಂದ್ರಶೇಖರ್, ಶ್ರೀ ಪ.ಸ. ಕುಮಾರ್, ಶ್ರೀ ಅ.ಲ. ನರಸಿಂಹನ್, ಶ್ರೀ ಚಿ.ಸು. ಕೃಷ್ಣಸೆಟ್ಟಿ ಅವರು ಭಾಗವಹಿಸಿದ್ದರು. ಲೇಖಕರಾದ ಇಂದೂಧರ ಹೊನ್ನಾಪುರ, ಮಲ್ಲೇಪುರಂ ಜಿ. ವೆಂಕಟೇಶ ಕೂಡ ಭಾಗವಹಿಸಿದ್ದರು. ಡಾ. ಭಾಸ್ಕರ್, ಶ್ರೀಕಂಠಸ್ವಾಮಿ ಮತ್ತು ಶ್ರೀ ಕಮತದ್ ಅವರು ಶಿಕ್ಷಣದಲ್ಲಿ ಚಿತ್ರಕಲೆಯ ಮಹತ್ವವನ್ನು ಕುರಿತು ಉಪನ್ಯಾಸ ನೀಡಿದರು.

ಗುಲ್ಬರ್ಗಾದ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ ಸಹಯೋಗದೊಂದಿಗೆ ರಾಜ್ಯ ಲಲಿತಕಲಾ ಅಕಾಡೆಮಿಯು ಹೈದರಾಬಾದ್ ಕರ್ನಾಟಕದ ನಾಲ್ಕು ವಿಖ್ಯಾತ ಕಲಾವಿದರಾದ ಎಸ್. ಪಾಟೀಲ್, ಶಂಕರ್‌ರಾವ್ ಆಳಂದಕರ್. ದಿ.ಎಂ.ವಿ. ಬೋಸಲೆ ಮತ್ತು ದಿ. ವಸಂತರಾವ್ ಕಪಟರಾವ್ ಇವರುಗಳ ಬದುಕು ಹಾಗೂ ಕಲಾ ಸಾಧನೆಯನ್ನು ಕುರಿತು ವಿಚಾರಸಂಕಿರಣವನ್ನು ಏರ್ಪಡಿಸಿತ್ತು.

ಲಲಿತಕಲಾ ಅಕಾಡೆಮಿಯು ಬೆಂಗಳೂರಿನಲ್ಲಿ ಜುಲೈ ೨೬ ರಂದು ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ "ಕಲೆ ಮತ್ತು ಸಮೂಹ ಮಾಧ್ಯಮ" ಕುರಿತು ವಿಚಾರಸಂಕಿರಣ ಏರ್ಪಡಿಸಿತ್ತು; ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸಹಯೋಗದೊಂದಿಗೆ, ಕಲೆ, ಸಂಗೀತ, ನೃತ್ಯ ಪ್ರದರ್ಶನವನ್ನು ಏರ್ಪಡಿಸಿತ್ತು. ಈ ಸಪ್ತಾಹದ ಅವಧಿಯಲ್ಲಿ ಪ್ರತಿದಿನ ಸಂಜೆ ಹೆಸರುವಾಸಿ ಕಲಾವಿದರು ಹಾಗೂ ಚಿತ್ರಕಲೆಯ ಬಗ್ಗೆ ವಿಡಿಯೋ ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಸೆಪ್ಟೆಂಬರ್ ೬ರಂದು ಅಕಾಡೆಮಿಯು ಸೊಲ್ಲಾಪುರದ ಶುಭಾರಾಯರನ್ನು ಕುರಿತು ವಿಚಾರಸಂಕಿರಣವನ್ನು ಸೊಲ್ಲಾಪುರದ ಆರ್ಟ್ ಗ್ಯಾಲರಿಯಲ್ಲಿ ಏರ್ಪಡಿಸಲಾಗಿತ್ತು.

ಇದೇ ತಿಂಗಳಲ್ಲಿ ೧೧ರಿಂದ ೩೦ರ ವರೆಗೆ ರಾಜ್ಯ ಚಿತ್ರಕಲಾವಿದರ ಶಿಬಿರವನ್ನು ಬಿಜಾಪುರದಲ್ಲಿ ಏರ್ಪಡಿಸಿತ್ತು.

ಗುಲ್ಬರ್ಗಾದ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯಲ್ಲಿ ಸೆಪ್ಟೆಂಬರ್ ೯ರಂದು 'ಕಲಾಶಿಕ್ಷಣ'ಎಂಬ ವಿಚಾರಸಂಕಿರಣವನ್ನು ನಡೆಸಲಾಯಿತು. ಇದೇ ಸಮಯದಲ್ಲಿ ಶ್ರೀ ಬಸವರಾಜ ಉಪ್ಪಿನ, ಶ್ರೀ ಅನಿರುದ್ಧ, ಶ್ರೀ ಕೆ. ಜೋಷಿ ಮತ್ತು ಶ್ರೀ ಗವೀಶ ಹಿರೇಮಠ್ ಇವರುಗಳನ್ನು ಸನ್ಮಾನಿಸಲಾಯಿತು.

ಲಲಿತಕಲಾ ಅಕಾಡೆಮಿಯು ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಹಂಪಿ, ಆನೆಗೊಂದಿ, ವಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಯಲ್ಲಿರುವ ದೇವಸ್ಥಾನ, ಪ್ರಾಚೀನ ಕಟ್ಟಡಗಳಲ್ಲಿ ಇರುವ ಭಿತ್ತಿಚಿತ್ರಗಳ ವಿಡಿಯೋ ಚಿತ್ರೀಕರಣ ಹಾಗೂ ಸ್ಲೈಡ್ ರೂಪದಲ್ಲಿ ದಾಖಲಾತಿಯನ್ನು ಮಾಡಿತು. ಈ ಯೋಜನೆಯಲ್ಲಿ ರಾಯಚೂರಿನ ಕಾಜಿನಗೌಡರ ಮನೆಯಲ್ಲಿನ ಚಿತ್ರಗಳು, ಕನಕಗಿರಿಯಲ್ಲಿರುವ ಕನಕಾಚಲ ದೇವಾಲಯದ ಭಿತ್ತಿಚಿತ್ರಗಳು, ಆನೆಗೊಂದಿಯ ಹುಚ್ಚಪ್ಪನ ಮಠದ ಚಿತ್ರಗಳು, ವಿಜಾಪುರದ ಪ್ರಾಗೈತಿಹಾಸಿಕ ಚಿತ್ರಗಳು, ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳು, ವಿಜಾಪುರದ ಚರ್ಚ್ ಆಫ್ ಸೌತನ್ ಭಿತ್ತಿಚಿತ್ರಗಳು, ಬಾದಾಮಿ ಗುಹಾ ಚಿತ್ರಗಳು, ಮೈಸೂರಿನ ವೆಂಕಟರಮಣ ಸ್ವಾಮಿ ದೇವಾಲಯ, ಅರಮನೆ ಆವರಣದ ದೇವಾಲಯಗಳು, ಕೊಳ್ಳೆಗಾಲದ ಚಿತ್ರಮಂಟಪ, ಮುಡುಕು ತೊರೆಯ ಮಲ್ಲಿಕಾರ್ಜುನ ದೇವಸ್ಥಾನ, ಚಾಮರಾಜನಗರದ ದೇವಸ್ಥಾನ, ಬೆಟ್ಟದಪುರದ ಜೈನ ಬಸದಿಗಳು, ಹರದನಹಳ್ಳಿ ದೇವಾಲಯ, ಶ್ರೀರಂಗಪಟ್ಟಣದ ದರಿಯಾದೌಲತ್‌ನ ಭಿತ್ತಿಚಿತ್ರಗಳು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಕಾರ್ಕಳ, ಮೂಡಬಿದ್ರೆ, ಬಂಟ್ವಾಳ, ಅಗರಾರ್‌ಗಳಲ್ಲಿ, ಚರ್ಚ್ ಮತ್ತು ಜೈನ ಮಠಗಳಲ್ಲಿನ ಭಿತ್ತಿಚಿತ್ರಗಳನ್ನು ದಾಖಲೆ ಮಾಡಲಾಗಿದೆ.

ಲಲಿತಾಕಲಾ ಅಕಾಡೆಮಿಯ ವತಿಯಿಂದ ನನ್ನ ನೇತೃತ್ವದಲ್ಲಿ ಅಕಾಡೆಮಿಯ ಗ್ರಾಫಿಕ್ ಸ್ಟುಡಿಯೋದಲ್ಲಿ ಪ್ರಥಮ ಬಾರಿಗೆ ರಾಜ್ಯದ ಕಲಾವಿದರಿಗೆ 'ಸೆರಿಗ್ರಾಫಿ' ಶಿಬಿರ ನಡೆಸಿ ಉತ್ತಮ ನಿರ್ದೇಶನದೊಂದಿಗೆ ಶಿಬಿರವು ಸಫಲವಾಯಿತು. ಶಿಬಿರದಲ್ಲಿ ರಚಿಸಿದ ಕಲಾಕೃತಿಗಳ ಪ್ರದರ್ಶನವು ಏರ್ಪಾಡಾಗಿತ್ತು. ಅಕಾಡೆಮಿಯ ೨೨ನೇ ವಾರ್ಷಿಕ ಕಲಾಪ್ರದರ್ಶನವನ್ನು ಅಕ್ಟೋಬರ್ ೩೦ರಂದು ಮಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ನಡೆಸಿತು. ಧರ್ಮಸ್ಥಳದ ಧರ್ಮಾಧಿಕಾರಿಯವರು ಪ್ರದರ್ಶನದ ಉದ್ಘಾಟನೆ ಮಾಡಿದರು. ಕಲಾ ಪ್ರದರ್ಶನದಲ್ಲಿ ಹತ್ತು ಶ್ರೇಷ್ಠ ಕಲಾಕೃತಿಗಳಿಗೆ ಬಹುಮಾನ ನೀಡಲಾಯಿತು.

ಬೆಂಗಳೂರಿನ ಕಲಾಮಂದಿರ ಕಲಾಶಾಲೆಯಲ್ಲಿ ಅ.ನ. ಸುಬ್ಬರಾವ್ ಜನ್ಮ ಶತಮಾನೋತ್ಸವದ ಅಂಗವಾಗಿ ಕಲಾಕೃತಿಗಳ ಪ್ರದರ್ಶನ ಮತ್ತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ


ಹೆಗ್ಗಡೆಯವರು ಉದ್ಘಾಟಿಸಿದರು. ಡಾ. ಸಿದ್ಧಲಿಂಗಯ್ಯ, ಶ್ರೀ ಬರಗೂರು ರಾಮಚಂದ್ರಪ್ಪ, ಶ್ರೀ ಸಿ. ಶ್ರೀನಿವಾಸ್ ಮುಂತಾದವರು ಕಲಾ ಮಹತ್ವ ಮತ್ತು ಸಂಸ್ಕೃತಿಯ ಸಂದರ್ಭದಲ್ಲಿ ಅದರ ಅಗತ್ಯ ಕುರಿತು ಮಾತನಾಡಿದರು.

ಗುಲ್ಬರ್ಗಾದಲ್ಲಿ ಅಂತಾರಾಷ್ಟ್ರೀಯ 'ಶಿಲ್ಪಶಿಬಿರ'ವೊಂದು ನವಂಬರ್‌ನಲ್ಲಿ ಪ್ರಾರಂಭವಾಯಿತು. 'ರೀಜನಲ್ ಸೆಂಟರ್ ಮದರಾಸ್' ಇವರ ಆಶ್ರಯದಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಒಂದು ಅಂತರರಾಜ್ಯ ಕಲಾವಿದರ ಗ್ರಾಫಿಕ್ಸ್ ಶಿಬಿರವನ್ನು ಏರ್ಪಡಿಸಿತ್ತು. ಈ ಶಿಬಿರದಲ್ಲಿ ಕರ್ನಾಟಕದಿಂದ ಮೈಸೂರಿನ 'ಕಾವಾ' ವಿದ್ಯಾಲಯದ ಉಪನ್ಯಾಸಕ ಶ್ರೀ ಬಸವರಾಜ ಮುಸವಳಗಿಯವರು ಭಾಗವಹಿಸಿದ್ದರು. ಏಪ್ರಿಲ್‌ನಲ್ಲಿ ಚಿತ್ರಕಲಾ ಪರಿಷತ್ತಿನಲ್ಲಿ ವಿದ್ಯಾರ್ಥಿಗಳ ಕಲಾಪ್ರದರ್ಶನ ನಡೆಯಿತು. ವಿದ್ಯಾರ್ಥಿಗಳು ತಮ್ಮ ಕೃತಿಗಳಲ್ಲಿ ಅನ್ವೇಷಣಾ ಭಾವ, ತಾಂತ್ರಿಕ ನೈಪುಣ್ಯತೆ ಇವುಗಳ ಅಭಿವ್ಯಕ್ತಿಯ ಪ್ರಯತ್ನಗಳಿಂದ ಪ್ರದರ್ಶನವನ್ನು ಉತ್ತಮಗೊಳಿಸಿದ್ದರು. ಪ್ರಸ್ತುತ ವರ್ಷದ ಕಲಾಪ್ರದರ್ಶನ, ಶಿಬಿರ ಹಾಗೂ ವಿಚಾರಸಂಕಿರಣಗಳು ಕಲೆಯ ಸಂದರ್ಭದಲ್ಲಿ ಏಕತಾನತೆಯನ್ನು ಮುರಿದು ಅದರ ಒಡಲೊಳಗಿಂದ ಬೇರೆ ಬೇರೆ ಆಶಯಗಳನ್ನು ಹೊರಡಿಸುವ ದಿಕ್ಕು ಸ್ಪಷ್ಟವಾಗುತ್ತಿದೆ. ಕಲಾ ಪ್ರದರ್ಶನಗಳು ಮೊದಲಿಗಿಂತ ಸಾಂಸ್ಕೃತಿಕ ಜವಾಬ್ದಾರಿಯನ್ನು ಹೊತ್ತಿವೆ. ಶಿಬಿರಗಳಲ್ಲಿ ಬೇರೆ ಬೇರೆ ಕಲಾಶೈಲಿಗಳ ಸ್ವರೂಪದ ಬಗೆಗೆ ಆಸಕ್ತಿಯನ್ನು ತಾಳಿವೆ. ವಿಚಾರಸಂಕಿರಣಗಳಲ್ಲಿ ರೂಪು ಪಡೆಯುತ್ತಿರುವ ಹೊಸ ಚರ್ಚೆಗಳು ಕಲಾ ಜವಾಬ್ದಾರಿಯ ಹಿರಿಮೆಯನ್ನು ತಿಳಿಸುತ್ತಿವೆ. ೧೯೯೨ರ ವರ್ಷ ಈ ದಿಕ್ಕಿನಲ್ಲಿ ಹೊಸ ಪರಿವೇಷಗಳನ್ನು ತೊಡುತ್ತಿರುವಂತೆ ತೋರುತ್ತಿದೆ.

●



ಕೆ.ಟಿ. ಶಿವಪ್ರಸಾದ್



ಚಂದ್ರನಾಥ ಆಚಾರ್ಯ

೧೯೯೨ನೇ ಸಾಲಿನ ಲಲಿತ ಕಲಾ ಅಕಾಡೆಮಿಯ ವಿಶೇಷ ಪ್ರಶಸ್ತಿ ವಿಜೇತರು

ಶ್ರೀ ಡಿ. ವಾದಿರಾಜ	ಬೆಂಗಳೂರು
ಶ್ರೀ ಜಿ.ವೈ. ಹುಬ್ಳೀಕರ್	ಬೆಂಗಳೂರು
ಶ್ರೀ ಜಿ.ಕೆ. ಹುಬ್ಳಿ	ಬೆಳಗಾಂ
ಶ್ರೀ ಎನ್. ಎಸ್. ಶಿಲ್ಪಿ	ಧಾರವಾಡ
ಶ್ರೀ ಕೆ.ವಿ. ಸೀತಾರಾಮನ್	ಟಿ. ನರಸೀಪುರ

೧೯೯೨ರ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ವಿಜೇತರು

ಶ್ರೀ ಕೆ.ಜಿ. ಅರುಣ	:	ಶಿಲ್ಪ
ಶ್ರೀ ಪೋಪುರಿ ರಾಜಾರಾವ್	:	ರೇಖಾಚಿತ್ರ, ಕ್ರಿಯಾನ್
ಶ್ರೀ ಎನ್.ಎಸ್. ಪ್ರದೀಪ್‌ಕುಮಾರ್	:	ಎಚಿಂಗ್
ಶ್ರೀ ದೇವರಾಜ	:	ಲಿಥೋ
ಶ್ರೀಮತಿ ಭಾನುಮುಸ್ತಾಫ್	:	ಸಾಂಪ್ರದಾಯಿಕ ಜಲವರ್ಣ
ಶ್ರೀ ದೇವದಾಸ್‌ಕಂಬಳೆ	:	ಜಲವರ್ಣ
ಶ್ರೀ ಎಂ. ಬಿ. ಪಾಟೀಲ	:	ತೈಲವರ್ಣ
ಶ್ರೀಮತಿ ಸ್ಮಿತಾಕಾರಿಯಪ್ಪ	:	ಅಕ್ರಲಿಕ್
ಶ್ರೀ ಅಮೃತಾ ಸಾಹು	:	ತೈಲವರ್ಣ
ಶ್ರೀ ಯು. ರಮೇಶ್‌ರಾವ್	:	ತೈಲವರ್ಣ

ಸಂಗೀತ ಮತ್ತು ನೃತ್ಯ

— ಎಂ. ಸೂರ್ಯಪ್ರಸಾದ್

ಕರ್ನಾಟಕ ಕಲೆಗಳ ಬೀಡು. ದೃಶ್ಯ ಹಾಗೂ ಪ್ರದರ್ಶಕ ಕಲೆಗಳು ಇಲ್ಲಿ ಎಲ್ಲ ರೀತಿಯಲ್ಲಿ ಪ್ರೋತ್ಸಾಹವನ್ನು ಪಡೆದು ವಿಕಸಿತಗೊಂಡಿವೆ. ಈಗಲೂ ಸಹ ಇದೇ ರೀತಿಯ ವಿಕಸನ ಕಾರ್ಯವು ನಡೆದಿರುವುದು ಹೆಮ್ಮೆಯ ಸಂಗತಿಯೇ ಸರಿ. ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪ್ರಕಾರಗಳು ಸಮಾನಾಂತರವಾಗಿ ಬೆಳೆಯುತ್ತಿರುವುದು ಪ್ರಾಯಶಃ ಕರ್ನಾಟಕ ರಾಜ್ಯ ಒಂದರಲ್ಲೇ. ಉಭಯ ಸಂಗೀತ ಕಛೇರಿಗಳು, ಅವಕ್ಕಾಗಿ ಮೀಸಲಾಗಿರುವ ಸಭೆ, ಸಂಸ್ಥೆಗಳು ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿವೆ. ನಮ್ಮ ರಾಜ್ಯದಲ್ಲಿ ಪ್ರದರ್ಶಕ ಕಲೆಗಳು ಅಂದರೆ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಶಾಸ್ತ್ರೀಯ ನೃತ್ಯ, ಹರಿಕಥೆ ಇತ್ಯಾದಿ ಪ್ರಕಾರಗಳ ಪ್ರಗತಿ, ಪ್ರಚಾರ, ಪ್ರಸಾರ ಹಾಗೂ ಪ್ರಸ್ತುತ ಪರಿಸ್ಥಿತಿಗಳ ಪಕ್ಷಿನೋಟವನ್ನು ಈಗ ಸ್ಥೂಲವಾಗಿ ಪರೀಕ್ಷಿಸೋಣ.

ಸಂಗೀತ ಚಟುವಟಿಕೆ

ಕರ್ನಾಟಕ ಸಂಗೀತದ ಶಾಸ್ತ್ರ ಹಾಗೂ ಪ್ರಯೋಗಗಳಿಗೆ ಕರ್ನಾಟಕದ ಕೊಡುಗೆ ಅಪಾರ ಹಾಗೂ ವೈವಿಧ್ಯಮಯ. ವಿದ್ಯಾರಣ್ಯರ ಕಾಲದಿಂದ ಆರಂಭವಾದ ಪ್ರಕ್ರಿಯೆ ಇಂದಿಗೂ ಮುಂದುವರೆದಿರುವುದು ಗಮನಾರ್ಹವಾಗಿದೆ. ಅನೇಕ ಶಾಸ್ತ್ರಜ್ಞರು ಹಾಗೂ ಸಂಶೋಧಕರು ಕರ್ನಾಟಕ ಸಂಗೀತದ ಶಾಸ್ತ್ರ - ಪ್ರಯೋಗಗಳ ಬಗೆಗೆ ಹೊಸ-ಹೊಸ ವಿಚಾರಗಳನ್ನು ಮಂಡಿಸಿ; ಹೊಸ ಆಯಾಮವನ್ನು ಗುರುತಿಸುತ್ತಿದ್ದಾರೆ. ಹಿರಿಯ ಕಲಾವಿದರು ಸಂಪ್ರದಾಯ ಹಾಗೂ ಶಾಸ್ತ್ರೀಯ ಸಂಗೀತದ ಚೆಲುವನ್ನು ಉಳಿಸಿ , ಬೆಳೆಸಿಕೊಂಡು ಮುಂದುವರೆಯುತ್ತಿದ್ದರೆ ಈಗಿನ ಯುವ, ಉತ್ಸಾಹಿ ಹಾಗೂ ಕುಶಾಗ್ರಮತಿ ಸಂಗೀತಗಾರರು ಶಾಸ್ತ್ರ ಹಾಗೂ ಸಂಪ್ರದಾಯದ ಚೌಕಟ್ಟಿನಲ್ಲೆ ನವೀನ ಸಾಧ್ಯತೆಗಳ ಮಗ್ಗಲುಗಳನ್ನು ತೆರೆದಿಡುತ್ತಿದ್ದಾರೆ. ತೊಂಬತ್ತು ವರ್ಷಗಳನ್ನು ದಾಟಿರುವ ಹಿರಿಯ ಗಾಯಕ ಆಸ್ಥಾನ ವಿದ್ವಾನ್ ತಿಟ್ಟೆ ಕೃಷ್ಣಯ್ಯಂಗಾರರು ಕರ್ನಾಟಕ ಸಂಗೀತದ ರಾಗ, ತಾನ, ಪಲ್ಲವಿಯ ತತ್ತ್ವ, ಸತ್ತ್ವ, ಮಹತ್ವವನ್ನು ಇಂದಿಗೂ

ಪ್ರತಿಪಾದಿಸುತ್ತಿದ್ದಾರೆ. ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಹಾಗೂ ಅವರ ಕೆಲವು ಶಿಷ್ಯರು ತಮ್ಮ ಶುದ್ಧ ವಿನಿಕೆಯಿಂದ ಇಂದಿಗೂ "ವೀಣೆಯ ಬೆಡಗಿದು ಮೈಸೂರು" ಎಂಬ ಹೇಳಿಕೆಯನ್ನು ಸಾರ್ಥಕಗೊಳಿಸುತ್ತಿದ್ದಾರೆ.ಹಾಗೆಯೇ, ಅವರ ಸಮಕಾಲೀನ ಮತ್ತೆ ಕೆಲವು ವಿದ್ವಾಂಸರು ವೀಣಾವಾದನದ ಸೊಬಗನ್ನು ಪರಿಚಯಿಸುತ್ತಿದ್ದಾರೆ. ಏಳುತಂತಿ ಪಿಟೀಲು ಮಾಂತ್ರಿಕ ಎಂದೇ ಪ್ರಸಿದ್ಧರಾಗಿದ್ದ ಟಿ.ಚೌಡಯ್ಯನವರ ನಂತರ ಕಳೆದ ಐದಾರು ವರ್ಷಗಳಿಂದೀಚೆಗೆ ಯುವ ಪಿಟೀಲುವಾದಕರು ಪ್ರವರ್ಧಮಾನಕ್ಕೆ ಬರುತ್ತಿದ್ದು ಈಗಾಗಲೇ ರಾಜ್ಯದ ಒಳಗೆ ಹಾಗೂ ಹೊರಗೆ ಸಾಕಷ್ಟು ಹೆಸರು ಮಾಡುತ್ತಿರುವುದು ಸಂತೋಷಪಡುವ ವಿಷಯವಾಗಿದೆ. ಈ ದಿಸೆಯಲ್ಲಿ ಮೈಸೂರು ಎಂ. ನಾಗರಾಜ್, ಮೈಸೂರು ಮಂಜುನಾಥ್, ಹೆಚ್.ಕೆ. ವೆಂಕಟರಾಂ ಮುಂತಾದವರ ಹೆಸರುಗಳನ್ನು ಉಲ್ಲೇಖಿಸಬಹುದಾಗಿದೆ.

ತಾಳವಾದ್ಯ ಕ್ಷೇತ್ರದಲ್ಲಂತೂ ಪರಿಸ್ಥಿತಿ ಸಂತೋಷಜನಕವೂ, ಸಂಪದ್ಭರಿತವೂ ಆಗಿದೆ. ಅನೇಕ ಯುವ ಲಯವಾದಕರು ರೂಪುಗೊಂಡು ತಮ್ಮ ವಿದ್ವತ್ಪ್ರತಿಭೆಗಳನ್ನು ತೋರುತ್ತಿದ್ದಾರೆ. ಮೋರ್ಸಿಂಗ್‌ನಂತಹ ಕಷ್ಟಸಾಧ್ಯವಾದ ವಾದ್ಯಗಳನ್ನು ಸಹ ವೇದಿಕೆಗಳ ಮೇಲೆ ಉಪಪಕ್ಕವಾದ್ಯವಾಗಿ ನೋಡಸಿಗುವುದು ಅಭಿನಂದನಾರ್ಹವಾಗಿದೆ. ಲಯವಾದ್ಯಗಳ ತಂಡಗಳೇ ಏರ್ಪಟ್ಟು ಕಾರ್ಯಕ್ರಮಗಳು ನಡೆಯುತ್ತಿರುವುದು ಅವುಗಳ ಜನಪ್ರಿಯತೆಯ ದ್ಯೋತಕವಾಗಿದೆ.

ಕೊಳಲು, ನಾಗಸ್ವರ, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನು ಸೊಗಸಾಗಿ ನುಡಿಯುವ ಕಲಾವಿದರ ಸಂಖ್ಯೆಯು ಈಗ ಹೆಚ್ಚುತ್ತಿದೆ.

ಪ್ರಶಸ್ತಿ - ಸನ್ಮಾನ

ಬೆಂಗಳೂರು ಗಾಯನ ಸಮಾಜದಂಥ ಹಿರಿಯ ಸಭೆ, ಕರ್ನಾಟಕ ಗಾನ ಕಲಾಪರಿಷತ್‌ನಂಥ ಸಂಗೀತ ವಿದ್ವಾಂಸರಿಂದಲೇ ಸಂಚಾಲಿತವಾದ ಸಂಗೀತ ಸಂಸ್ಥೆ, ತಾಳ ಮತ್ತು ಲಯವಾದ್ಯಗಳ ಮಹತ್ವದ ಕಂಪನ್ನು ಪಸರಿಸಲು ಪಣತೊಟ್ಟಿರುವ ಹಾಗೂ ಆ ದಿಸೆಯಲ್ಲಿ ಅತಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ತಾಳವಾದ್ಯ ಕಲಾಕೇಂದ್ರವೂ ಸೇರಿದಂತೆ ಅನೇಕ ಸಭೆ, ಸಂಸ್ಥೆಗಳು ಕರ್ನಾಟಕ ಸಂಗೀತದ ಶ್ರೇಯೋಭಿವೃದ್ಧಿಗೆ ಕೆಲಸಮಾಡುತ್ತಿವೆ. ಇಷ್ಟೇ ಅಲ್ಲದೆ ರಾಜ್ಯಸರ್ಕಾರದ ಪ್ರೋತ್ಸಾಹವು ವಿಶೇಷವಾಗಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ದೇಣಿಗೆ ಈ ಕ್ಷೇತ್ರಕ್ಕೆ ವರಪ್ರದವಾಗಿದೆ. ವಿದ್ಯಾರ್ಥಿಗಳಿಗೆ ಶಿಷ್ಯವೇತನ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಂಗೀತೋತ್ಸವಗಳ ಆಯೋಜನೆ, ಸಂಗೀತ ಹಾಗೂ ನೃತ್ಯಕ್ಕೆ, ಸಂಬಂಧಿಸಿದ ಪುಸ್ತಕಗಳ ಪ್ರಕಟಣೆ ಹೀಗೆ ಅಕಾಡೆಮಿಯ ಕಾರ್ಯ ನಡೆದಿದೆ. ಹಿಂದೂಸ್ತಾನಿ ಸಂಗೀತದ ಪ್ರಗತಿಯು ಅಬಾಧಿತವಾಗಿ ನಡೆದಿದೆ. ಸೂರ್‌ಸಾಗರ್, ಹಿಂದೂಸ್ತಾನಿ ಸಂಗೀತ ಕಲಾಕಾರ ಮಂಡಳಿ ಇತ್ಯಾದಿ ಸಂಸ್ಥೆಗಳು ಸಕ್ರಿಯವಾಗಿ ಹಿಂದೂಸ್ತಾನಿ ಸಂಗೀತದ ಪ್ರಚಾರ ಕಾರ್ಯವನ್ನು ನಡೆಸುತ್ತಿವೆ. ಭಾರತದ ಸಿದ್ಧಪ್ರಸಿದ್ಧ ಹಿಂದೂಸ್ತಾನಿ

ಗಾಯಕರಲ್ಲಿ ಐದು ಮಂದಿ ಕರ್ನಾಟಕದವರೇ ಆಗಿರುವುದು ಹೆಗ್ಗಳಿಕೆಯೇ ಸರಿ. ಕಳೆದ ಬಾರಿಯ ತಾನ್‌ಸೇನ್ ಪ್ರಶಸ್ತಿ ಬೆಂಗಳೂರಿನ ಪಂಡಿತ್ ರಾಮರಾವ್ ವಿ. ನಾಯಕರಿಗೆ ಸಂದಿದೆಯೆಂದರೆ ಕರ್ನಾಟಕದ ಹಿರಿಮೆಯ ವ್ಯಾಪ್ತಿಯೇನೆಂಬುದು ಸ್ಪಷ್ಟವಾಗುತ್ತದೆ. ಇತ್ತೀಚೆಗೆ ಹಿಂದೂಸ್ಥಾನಿ ಗಾಯಕರಷ್ಟೇ ಅಲ್ಲದೆ ವಾದ್ಯಗಾರರೂ ಹೆಸರುಮಾಡುತ್ತಿರುವುದು ಆ ಕ್ಷೇತ್ರದ ವಿಸ್ತಾರಕ್ಕೆ ಎಡೆಮಾಡಿಕೊಟ್ಟಂತಾಗಿದೆ.

ಕರ್ನಾಟಕ ಸಂಗೀತ ಕ್ಷೇತ್ರಕ್ಕಾಗಿ ರಾಜ್ಯ ಸರ್ಕಾರವು ಕನಕ-ಪುರಂದರ ಪ್ರಶಸ್ತಿಯೆಂಬ ಅತಿ ಮಹತ್ವದ ಪ್ರಶಸ್ತಿಯನ್ನು ನೀಡಲು ಪ್ರಾರಂಭಿಸಿದೆ. ಪ್ರಪ್ರಥಮ ಕನಕಪುರಂದರ ಪ್ರಶಸ್ತಿಯನ್ನು ತಿಟ್ಟೆ ಕೃಷ್ಣಯ್ಯಂಗಾರರು ಮೈಸೂರಿನಲ್ಲಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿಯವರಿಂದ ಪಡೆದುಕೊಂಡರು. ಇದು ಕರ್ನಾಟಕ ಸಂಗೀತಕ್ಕೆ ಸಂದ ಮನ್ನಣೆ.

ಅನಾದಿಕಾಲದಿಂದಲೂ ನೃತ್ಯ ಪ್ರಕಾರ ನಮ್ಮಲ್ಲಿ ಬೆಳೆದು ಬಂದಿದೆ. ಹೊಯ್ಸಳ ರಾಣಿ ಶಾಂತಲೆ, ವಿಜಯನಗರ ಸಾಮ್ರಾಜ್ಯದಲ್ಲಿ ಮೆರೆದ ನೃತ್ಯ ಅನಂತರ ಮೈಸೂರಿನ ಒಡೆಯರ್ ವಂಶಜರ ಆಳ್ವಿಕೆಯಲ್ಲಿ ವೈಭವದ ಪರಾಕಾಷ್ಠೆಯನ್ನು ಮುಟ್ಟಿತು. ಅಭಿನಯ ಪ್ರಧಾನವಾಗಿ, ಸಂಸ್ಕೃತ ಶ್ಲೋಕಗಳು, ಪದಗಳು ಹಾಗೂ ಜಾವಳಿಗಳ ನಿರೂಪಣೆಗಾಗಿ ಖ್ಯಾತಿಯನ್ನು ಹೊಂದಿ ಮೈಸೂರು ಶೈಲಿಯ ಭರತ ನಾಟ್ಯವೆಂದೇ ಅಭಿದಾನವನ್ನು ಪಡೆದು ಭರತನಾಟ್ಯ ಕ್ಷೇತ್ರದಲ್ಲಿ ತನ್ನ ಸ್ವಂತಿಕೆಯನ್ನು ಮೆರೆಸಿದೆ. ನಮ್ಮ ಕನ್ನಡನಾಡಿನ ಆಸ್ಥಾನ ವಿದುಷಿಯರಾಗಿದ್ದ ಜೇಜಮ್ಮ, ಜಟ್ಟಿ ತಾಯಮ್ಮ ಮುಂತಾದವರ ದೂರದರ್ಶಿಪ್ರತಿಭೆಯನ್ನು ಇಲ್ಲಿ ಸ್ಮರಿಸಬಹುದು. ಅದೇ ಪರಂಪರೆಯನ್ನು ಮುಂದುವರೆಸಿಕೊಂಡು ದಂತಕಥೆಯಾಗಿರುವ ಹಾಗೂ ಈ ಹೊತ್ತಿಗೂ ಮೈಸೂರು ಶೈಲಿ ಭರತನಾಟ್ಯದ ಪ್ರತಿಪಾದಕಿ - ಪ್ರಚಾರಕಿಯಾಗಿರುವ ಡಾ: ಕೆ. ವೆಂಕಟಲಕ್ಷ್ಮಮ್ಮ ಅವರ ವಿದ್ವತ್ತು ಕಲಾಕುಶಲತೆ ಅನನ್ಯವಾದುದು. ನಮ್ಮ ದೇಶದ ಅತಿ ಶ್ರೇಷ್ಠಪ್ರಶಸ್ತಿಗಳಲ್ಲಿ ಒಂದಾದ "ಪದ್ಮಭೂಷಣ"ದಿಂದ ಅವರನ್ನು ವಿಭೂಷಿತಗೊಳಿಸಿರುವುದು ಆಕೆಯ ವಿಶಿಷ್ಟತೆಯ ನೆಲೆಯನ್ನೂ ಸೂಚಿಸುತ್ತದೆ. ನುರಿತ ನರ್ತಕಿಯರು ಹಾಗೂ ಈಗೀಗ ಯುವ ನರ್ತಕ/ನರ್ತಕಿಯರು ಗುರುಗಳಾಗಿಯೂ ನೃತ್ಯಕಲೆಯ ಪ್ರಚಾರವನ್ನು ಮಾಡುತ್ತಿದ್ದಾರೆ. ಕೇವಲ ಸ್ತ್ರೀಯರಷ್ಟೇ ಅಲ್ಲದೆ ಪುರುಷರೂ ಸಹ ಈ ಕ್ಷೇತ್ರದಲ್ಲಿ ಬೆಳಕಿಗೆ ಬರುತ್ತಿರುವುದು ಆರೋಗ್ಯಕರವೂ, ಆನಂದಪ್ರದವೂ ಆಗಿದೆ. ನೂರಾರು ರಂಗಪ್ರವೇಶ ಕಾರ್ಯಕ್ರಮಗಳು ನಡೆಯುತ್ತಿರುವುದು ನೃತ್ಯದ ಬಗೆಗಿನ ಒಲವು ಹಾಗೂ ಆಸಕ್ತಿಯನ್ನು ತೋರುತ್ತದೆ. ಯುವ ನೃತ್ಯೋತ್ಸವಗಳು ಒಳಗೊಂಡಂತೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ನೃತ್ಯೋತ್ಸವಗಳು ನಿಯಮಿತವಾಗಿ ನಡೆಯುತ್ತಿದ್ದು ನೃತ್ಯಪ್ರೇಮಿಗಳಿಗೆ ರಸದೌತಣವೇ ಏರ್ಪಡುತ್ತಿದೆ.

ಉತ್ತರ ಭಾರತಕ್ಕಷ್ಟೇ ಇದುವರೆಗೂ ಸೀಮಿತವಾಗಿದ್ದ ಕಥಕ್ ನೃತ್ಯಪ್ರಕಾರವು ಇಲ್ಲಿ ಬೇರೂರಿತ್ತಿರುವುದು ಗಮನಿಸಬೇಕಾದ ಸಂಗತಿಗಳಲ್ಲಿ ಒಂದು. ಹಿರಿಯ ನರ್ತಕಿ ಗುರು ಮಾಯಾರಾವ್ ಅವರು ತಮ್ಮ ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕಥಕ್ ಅಂಡ್ ಕೊರಿಯೋಗ್ರಾಫಿ ಸಂಸ್ಥೆಯ ಮುಖಾಂತರ ಕಥಕ್ ನೃತ್ಯ ಸಂಯೋಜನೆ

(ಕೊರಿಯೋಗ್ರಾಫಿ) ಯಲ್ಲಿ ಅನೇಕ ಯುವಕ, ಯುವತಿಯರನ್ನು ತರಬೇತುಗೊಳಿಸುತ್ತಿದ್ದಾರೆ. ಆಗಾಗ್ಗೆ ಬೇರೆ ಬೇರೆ ನೃತ್ಯ ಪ್ರಕಾರಗಳ ಬಗೆಗೆ ಅಧ್ಯಯನ ಶಿಬಿರಗಳನ್ನೂ ನಡೆಸಲಾಗುತ್ತಿದೆ. ಹೀಗೆ ನೃತ್ಯ ಕಲಾಸ್ವಾದನೆ ಹಾಗೂ ಕಲಿಕೆಗೆ ಸುಂದರ ಹಾಗೂ ಸರಸ ವಾತಾವರಣ ನಮ್ಮಲ್ಲಿ ನಿರ್ಮಿತವಾಗಿದೆ.

ಬಹುತೇಕವಾಗಿ ಶಾಸ್ತ್ರೀಯ ಸಂಗೀತದ ನೆರಳಿನಲ್ಲಿ ಮೂಡಿಬಂದರೂ ಲಘು ಶಾಸ್ತ್ರೀಯತೆಯೊಂದಿಗೆ ಕನ್ನಡ ಗೀತೆಗಳನ್ನು ಹಾಡಿ ರಂಜಿಸುವ ಸುಗಮಸಂಗೀತ ಕಾರ್ಯಕ್ರಮಗಳು ಹೇರಳವಾಗಿ ನಡೆಯುತ್ತಿವೆ. ದಿವಂಗತ ಪಿ. ಕಾಳಿಂಗರಾವ್‌ರವರು ಪ್ರಶಸ್ತಗೊಳಿಸಿದ ಮಾರ್ಗದಲ್ಲಿ ಇಂದಿನ ಕಲಾವಿದರು ಇನ್ನೂ ಹೆಚ್ಚಿನ ಸಾಧನೆಗಳನ್ನು ಮಾಡುತ್ತಿರುವುದು ಕರ್ನಾಟಕ ಕಲೆಗಳ ಕಿರೀಟಕ್ಕೆ ಗರಿಗಳು ಮೂಡಿದಂತಾಗುತ್ತಿದೆ. ಈ ಕ್ಷೇತ್ರದಲ್ಲಿ ಹೆಸರು ಮಾಡಿರುವವರ ಹಾಗೂ ಈಗ ಹೆಸರು ಮಾಡುತ್ತಿರುವವರ ದೊಡ್ಡ ಯಾದಿಯೇ ಇರುವಾಗ, ಸುಗಮಸಂಗೀತ ಕ್ಷೇತ್ರವು ಅತ್ಯಂತ ಜನಪ್ರಿಯ-ವಾಗುತ್ತಿದೆಯೆಂಬ ಮಾತನ್ನು ಹೇಳಿದರೆ ಸಾಕೆನಿಸುತ್ತದೆ.

ಹರಿಕಥೆ

ಬಹು ಪ್ರಾಚೀನ ಕಲೆಯೆಂದರೆ ಹರಿಕಥೆ ಅಥವಾ ಕಥಾಕೀರ್ತನೆ. ಸಾಹಿತ್ಯ, ಸಂಗೀತ, ನೃತ್ಯ ಹೀಗೆ ಎಲ್ಲದರ ಸಂಯುಕ್ತ ಕಲೆಯೇ ಹರಿಕಥೆ. ಶಾಸ್ತ್ರೀಯ ಸಂಗೀತವನ್ನು ಆಧಾರವಾಗಿಟ್ಟುಕೊಂಡು, ಶಾಸ್ತ್ರೀಯತೆಯನ್ನು ಕಾಪಾಡಿಕೊಂಡು, ಶಿಷ್ಟ ಹಾಗೂ ಪ್ರೌಢ ಉಪಕಥೆಗಳನ್ನು ಬಳಸಿಕೊಂಡು ಮಾಡುವ ಸಂಪ್ರದಾಯನಿಷ್ಠ ಹರಿಕಥಾ ಕಾರ್ಯಕ್ರಮಗಳು ಶ್ರೋತೃಗಳ ಮನ್ನಣೆಗೆ ಪಾತ್ರವಾಗಿವೆ. ಹಾಗೆಯೇ ಮೇಲೆ ಹೇಳಿದ ಗುಣವಿಶೇಷಗಳಲ್ಲಿ ಏರುಪೇರುಗಳಾಗಿ ಬಹುಶಃ ಜನಾಕರ್ಷಣೆಯನ್ನೇ ಮೂಲ ಉದ್ದೇಶವನ್ನಾಗಿಟ್ಟುಕೊಂಡು ಮಾಡುವಂಥ ಹರಿಕಥಾ ಕಾರ್ಯಕ್ರಮಗಳ ಸಂಖ್ಯೆಯು ಹೆಚ್ಚುತ್ತಿದೆ. ಶಿವಕಥೆ, ಜನಕಥೆ ಹಾಗೂ ಸಮಕಾಲೀನ ಸಾಮಾಜಿಕ ವಿಷಯಗಳ ಸುತ್ತ ಹೆಣೆಯಲಾದ ಪ್ರಸಂಗಗಳ ನಿರೂಪಣೆ ಸಹ ನಡೆಯುತ್ತಿವೆ. ಅಸ್ತಂಗತವಾಗುತ್ತಿರುವ ಈ ಪ್ರಾಚೀನಕಲೆಯ ಪುನರುಜ್ಜೀವನ ಕಾರ್ಯವನ್ನು ಸಂತ ಭದ್ರಗಿರಿ ಅಚ್ಯುತದಾಸರು ಕೈಗೆತ್ತಿಕೊಂಡಿದ್ದಾರೆ. ಕೀರ್ತನ ಕಲಾಪರಿಷತ್ತಿನ ಆಶ್ರಯದಲ್ಲಿ ಹರಿಕಥೆಗೆ ಸಂಬಂಧಿಸಿದ ಅಧ್ಯಯನ ಶಿಬಿರಗಳು, ಗ್ರಂಥ ಪ್ರಕಟಣೆಗಳು ಆಸಕ್ತರಿಗೆ ಈ ಕಲೆಯಲ್ಲಿ ದೀಕ್ಷೆ ಹಾಗೂ ಪ್ರಶಿಕ್ಷಣ ನೀಡುವುದು ಮುಂತಾದ ಕಾರ್ಯಗಳು ಅವಿರತವಾಗಿ ನಡೆಯುತ್ತಿವೆ. ಆಕಾಶವಾಣಿಯಲ್ಲಿ ಕಥಾಕೀರ್ತನಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದರೂ ದೂರದರ್ಶನದಲ್ಲಿ ನಡೆಯದೆ ಇರುವುದು ವಿಷಾದನೀಯ.

ಗಮಕಕಲೆ

ಸಾಹಿತ್ಯ ಮತ್ತು ಸಂಗೀತದ ಸಮ್ಮಿಳನದೊಂದಿಗೆ ನಡೆಯುವ ಕಾವ್ಯವಾಚನ ಅಥವಾ ಗಮಕ ಕಲೆ ಈಗೀಗ ಜನಮನವನ್ನು ಗೆಲ್ಲುತ್ತಿದೆ. ಕರ್ನಾಟಕ ಗಮಕ ಕಲಾ ಪರಿಷತ್ತು, ಮುಂತಾದ ಸಂಸ್ಥೆಗಳು ಗಮಕ ಕಲೆಯ ಪುರೋಭಿವೃದ್ಧಿಗಾಗಿ ಕಾರ್ಯನಿರತವಾಗಿದೆ. ಈ ವರ್ಷದ (೧೯೯೨ರ)ಅತಿ ಮಹತ್ವದ ಬೆಳವಣಿಗೆಯೆಂದರೆ ಗಮಕ ಕಲೆಯನ್ನು ತನ್ನ ಅಂತರ್ಗತವಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು

ಮಾನ್ಯತೆಯನ್ನು ನೀಡಿರುವುದು. ಈ ಕಲೆಯನ್ನು ಪ್ರೋತ್ಸಾಹಿಸಲು ಇತರೆ ಪ್ರಕಾರಗಳಲ್ಲಿ ನೀಡುವಂತೆ ಶಿಷ್ಯವೇತನ, ಪ್ರಶಸ್ತಿ ಇತ್ಯಾದಿಗಳನ್ನು ಈ ಪ್ರಕಾರಕ್ಕೂ ಅನ್ವಯಗೊಳಿಸಿರುವುದು ಅತ್ಯಾವಶ್ಯಕ ಹಾಗೂ ದಿಟ್ಟ ಕಾರ್ಯವೇ ಸರಿ.

ಈ ಎಲ್ಲ ಪ್ರಕಾರಗಳಲ್ಲಿ ಕ್ಯಾಸೆಟ್ಟುಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತಿರುವುದು ಮತ್ತೊಂದು ವಿಶೇಷ ಸಂಗತಿ. ಅಂತಹ ಕ್ಯಾಸೆಟ್‌ಗಳ ನಿರ್ಮಾಣ ಸಂಸ್ಥೆಗಳು ಮತ್ತು ಸುಸಜ್ಜಿತ ಸ್ಟುಡಿಯೋಗಳು ಉಪಲಬ್ಧವಾಗುತ್ತಿರುವುದು ಈ ಕಾರ್ಯಕ್ಕೆ ಕುಮ್ಮಕ್ಕುಕೊಟ್ಟಂತಾಗಿದೆ.

ಧಾರವಾಡದಲ್ಲಿ ನಡೆಯುವ ಸಂಗೀತೋತ್ಸವಗಳು, ಕಾರ್ಯಕ್ರಮಗಳು 'ಉತ್ತರ ಕರ್ನಾಟಕ'ದ ನೆಲೆಯ ಅರಿವನ್ನು ಬೆಳೆಸಿದರೆ, ಸವಾಯಿಗಂಧರ್ವರ ಪುಣ್ಯತಿಥಿಯ ಸಂದರ್ಭದಲ್ಲಿ ನಡೆಯುವ ಸಂಗೀತ ಕಾರ್ಯಕ್ರಮಗಳು ಜನತೆಯ ಶುಚಿ-ರುಚಿಯ ಸಾಧ್ಯತೆಯನ್ನು ಬೆಳೆಸುತ್ತಲಿದೆ. ಮಂಗಳೂರು ಮತ್ತು ಉಡುಪಿ ನೃತ್ಯಕ್ಕೂ, ಸಂಗೀತಕ್ಕೂ ಮುಖ್ಯ ಧಾರೆಯನ್ನು ನೀಡಿವೆ. ಅಲ್ಲಿ ನಡೆಯುವ ಸಂಗೀತ ಹಾಗೂ ನೃತ್ಯದ ಕಾರ್ಯಕ್ರಮಗಳು ವಿಭಿನ್ನ ಬಗೆಯ ಸಾಂಸ್ಕೃತಿಕ ಅರಿವನ್ನು ಮೂಡಿಸುತ್ತಲಿವೆ.


ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

೧೯೯೨ನೇ ಸಾಲಿನ 'ಕರ್ನಾಟಕ ಕಲಾ ತಿಲಕ' ಬಿರುದಿನೊಂದಿಗೆ ಅಕಾಡೆಮಿ ಪ್ರಶಸ್ತಿ ಪಡೆದ ಕಲಾವಿದರು

ಎಸ್.ಬಿ. ಕೇಶವ ಮೂರ್ತಿ	-	ಕರ್ನಾಟಕ ಸಂಗೀತ, ಗಾಯನ
ಎಂ.ಜೆ. ಶ್ರೀನಿವಾಸಯ್ಯಂಗಾರ್	-	ಕರ್ನಾಟಕ ಸಂಗೀತ, ವೀಣೆ
ಎಚ್.ಟಿ. ನಾಗಣ್ಣ	-	ಕರ್ನಾಟಕ ಸಂಗೀತ, ಮೃದಂಗ
ಕೆ. ವೆಂಕಟರಾಂ	-	ಕರ್ನಾಟಕ ಸಂಗೀತ, ಘಟಂ
ರಾ.ಶಂ. ಜಂತಲಿ	-	ಹಿಂದೂಸ್ಥಾನಿ ಸಂಗೀತ, ಗಾಯನ
ಜಿ.ಆರ್. ನಿಂಬರಗಿ	-	ಹಿಂದೂಸ್ಥಾನಿ ಸಂಗೀತ, ಪಿಟೀಲು
ನರಸಿಂಹಲು ವಡವಾಟಿ	-	ಹಿಂದೂಸ್ಥಾನಿ ಸಂಗೀತ, ಕ್ಲಾರಿಯೋನೆಟ್
ಕೆ. ಸಿದ್ದೇಶ್ ಕುಮಾರ್	-	ಹಿಂದೂಸ್ಥಾನಿ ಸಂಗೀತ,ತಬಲ
ರಾಧಾ ಶ್ರೀಧರ್	-	ನೃತ್ಯ
ಮೀನಾಕ್ಷಿ ರಾಧಾಕೃಷ್ಣ	-	ನೃತ್ಯ
ಎಂ.ಆರ್. ರಂಗಸ್ವಾಮಿ	-	ನೃತ್ಯ -ಮೃದಂಗ
ಹೊ.ನಾ. ರಾಘವೇಂದ್ರ	-	ಸುಗಮಸಂಗೀತ
ಸಂತ ಭದ್ರಗಿರಿ ಕೇಶವದಾಸರು	-	ಕಥಾ ಕೀರ್ತನ
ಟಿ. ವೆಂಕಟಪ್ಪ	-	ಗಮಕ
ರಾ. ಸತ್ಯನಾರಾಯಣ	-	ಕಲಾಶಾಸ್ತ್ರ



ಡಾ. ಕೆ. ವೆಂಕಟಲಕ್ಷ್ಮಮ್ಮ



ಶ್ರೀಮತಿ ಗಂಗೂಬಾಯಿ ಹಾನಗಲ್

ರಂಗಭೂಮಿ

— *ಹಾ.ಸಾ.ಕೃ*

ಕನ್ನಡ ರಂಗಭೂಮಿಯ ಚಟುವಟಿಕೆಗಳನ್ನು ಬಿಡಿಬಿಡಿಯಾಗಿ ಗಣನೆಗೆ ತೆಗೆದುಕೊಂಡಾಗ ಅದರ ಅರ್ಥವಂತಿಕೆ ನಮಗೆ ಗೋಚರವಾಗುವುದು ಕಷ್ಟ. ಆದರೆ ಒಂದು ವರ್ಷದಲ್ಲಿ ನಡೆದಿರುವ ಚಟುವಟಿಕೆಗಳನ್ನು ಒಟ್ಟಾರೆ ಗ್ರಹಿಸಿದಾಗ ಕನ್ನಡ ರಂಗಭೂಮಿ ಒಂದು ನಿಟ್ಟಿನಲ್ಲಿ ಸಾಗಿರುವುದು, ಅದಕ್ಕೊಂದು ಅರ್ಥವಂತಿಗೆ ಇರುವುದು ನಮಗೆ ಸ್ಪಷ್ಟವಾಗುತ್ತದೆ. ಅಲ್ಲದೆ ಅದಕ್ಕೊಂದು ಸಾಂಸ್ಕೃತಿಕ ಮಹತ್ವವೂ ಇರುವುದು ಅರಿವಾಗುತ್ತದೆ.

ಕನ್ನಡ ರಂಗಭೂಮಿ ಯಾವತ್ತೂ ತನ್ನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂದರ್ಭಗಳಿಗೆ ಸ್ಪಂದಿಸಿದೆ. ನಮ್ಮ ಸಮಾಜದ ಓರೆಕೋರೆಗಳನ್ನು ಕಾಣಿಸುವುದರ ಜೊತೆಗೆ ಸ್ಥಿತ್ಯಂತರ ಸಮಾಜದ ಸಂಕಷ್ಟಗಳನ್ನು ಚಿತ್ರಿಸಿದೆ, ದಾಖಲಿಸಿದೆ. ಅದರಲ್ಲಿನ ಸಂಘರ್ಷಾತ್ಮಕ ಗುಣಗಳನ್ನು ವಿವೇಚಿಸಿದೆ; ಪರಿಶೀಲಿಸಿದೆ. ಕಾಲಾನುಕಾಲಕ್ಕೆ ಮೂಢನಂಬಿಕೆಗಳ ವಿರುದ್ಧ, ಎಲ್ಲ ಬಗೆಯ ಶೋಷಣೆಗಳ ವಿರುದ್ಧ ತನ್ನ ದನಿಯನ್ನು ಎತ್ತಿದೆ. ರಾಜಕೀಯದ ವಿಷಮ ಸ್ಥಿತಿಗಳಲ್ಲಿ ರಂಗಭೂಮಿ ಬೀದಿಗಿಳಿದು ಬೀದಿ ನಾಟಕಗಳ ಚಳುವಳಿಯನ್ನು ಜಾಥಾಗಳನ್ನು ನಡೆಸಿ, ಸಾಮಾಜಿಕ ಅರಿವ, ಜನಜಾಗೃತಿಯ ಕೆಲಸವನ್ನು ಮಾಡಿದೆ. ಅಲ್ಲದೆ ಅದು ಒಂದು ಕಡೆ ತನ್ನ ಸಾಂಸ್ಕೃತಿಕ ಬೇರುಗಳನ್ನು ಅರಸುತ್ತಲೇ ಆಧುನಿಕ ಸಮಾಜದ ಸಂಕೀರ್ಣತೆಗನ್ನು ಅಭಿವ್ಯಕ್ತಿಸಲು ಶಕ್ತಿಶಾಲಿಯಾದ ರೂಪದ (ಫಾರಂ)ಶೋಧನೆಯಲ್ಲೂ ತೊಡಗಿದೆ. ಈ ನಿಟ್ಟಿನಲ್ಲಿ ನೀನಾಸಂ ರಂಗಶಿಕ್ಷಣ ಸಂಸ್ಥೆಯ 'ತಿರುಗಾಟ' ೯೨ರ ನಾಟಕಗಳನ್ನು ಉದಾಹರಿಸಬಹುದು.

ರಂಗಭೂಮಿ

ಜಾರ್ಜ್ ಬರ್ನಾಡ್ ಷಾ ರ 'ಪಿಗ್‌ಮೆಲಿಯನ್' ನಾಟಕದ ರೂಪಾಂತರ ವಾಗಿರುವ 'ಹೂ ಹುಡುಗಿ' ತಿಪ್ಪೇಕ್ರಾಸಿನ (ಸ್ಲಮ್) ಹುಡುಗಿಯೊಬ್ಬಳು ಭಾಷಾ ಪಂಡಿತನೊಬ್ಬನ ಸಹಾಯದಿಂದ ತನ್ನ ತಿಪ್ಪೇಕ್ರಾಸಿನ ನಡೆನುಡಿಯನ್ನು ಕಳೆದುಕೊಂಡು,

ಮೇಲ್ವರ್ಗದವರ ಭಾಷಾ ಶಿಷ್ಟತೆ, ನಯ ನಾಜೂಕುಗಳನ್ನು ಕಲಿತುಕೊಂಡಮೇಲೆ ಎದುರಿಸುವ ಸಮಸ್ಯೆಗಳನ್ನು ಪರಿಶೀಲಿಸುತ್ತದೆ.

ಶಿಕ್ಷಣ ಮುಗಿದ ನಂತರ ತಿಪ್ಪೇಕ್ರಾಸಿನ ಹುಡುಗಿ 'ಮುಂದೆ ನನ್ನ ದಾರಿ ಏನು?' ಎಂದು ಪಂಡಿತರನ್ನು ಕೇಳುತ್ತಾಳೆ. ಪಂಡಿತರು, 'ಅದು ನನಗೆ ಸಂಬಂಧಪಟ್ಟಿದ್ದಲ್ಲ'ಎನ್ನುತ್ತಾರೆ. ಇದು ನಮ್ಮ ಶಿಕ್ಷಣ ವ್ಯವಸ್ಥೆಯ ಒಟ್ಟಾರೆ ಧೋರಣೆಯೇ ಆಗಿರುವುದರಿಂದ ಶಿಕ್ಷಣ ಪಡೆದ ಮೇಲೆ ನಾಟಕದ ಹೂಹುಡುಗಿಯಂತೆ ಮುಂದೆ ದಾರಿ ಕಾಣದೆ ಅತಂತ್ರರಾಗುವ ಸಾವಿರಾರು ಯುವಕ, ಯುವತಿಯರನ್ನು ನಮ್ಮ ಸಂದರ್ಭದಲ್ಲಿ ಕಾಣಬಹುದಾಗಿದೆ.

ಉತ್ತಮ ನಡೆ, ನುಡಿ, ಸಂಸ್ಕೃತಿಯ ನಿರ್ಮಾಣದಲ್ಲಿರುವವರು ಭಾಷಾ ವರ್ಗ ವೈರುಧ್ಯದ ಹಿಂದೆ ನಮ್ಮ ಸಮಾಜದ ವರ್ಗ ವೈರುಧ್ಯಗಳೇ ಇವೆಯೆಂಬುದನ್ನು 'ಸ'ಮತ್ತು 'ಷ'ಗಳ ನಡುವಿನ ಅಂತರ ಬರಿಯ ಒಂದಿಂಚಲ್ಲ. ತಿಪ್ಪೇಕ್ರಾಸಿನಿಂದ ಭಾಷಾಂಬುಧಿಗಿರುವ ಅಂತರ ಇವುಗಳ ನಡುವೆ ಇದೆಯೆಂಬುದನ್ನು ಅರಿಯಬೇಕಾಗಿದೆ ಎಂದು ನಾಟಕ ಸೂಚ್ಯವಾಗಿ ಹೇಳಿ ನಮ್ಮನ್ನು ಸಾಂಸ್ಕೃತಿಕವಾಗಿ ಎಚ್ಚರಿಸುತ್ತದೆ.

ಹೀಗೆ ಕನ್ನಡ ರಂಗಭೂಮಿ ನೀಡುತ್ತಿರುವ ಸಾಂಸ್ಕೃತಿಕ ಎಚ್ಚರದಲ್ಲಿ ಅದರ ಸಾಧನೆಯಿದೆ-ಎಂದರೆ ಅತಿಶಯೋಕ್ತಿಯಾಗಲಾರದು.

ಕನ್ನಡ ಹವ್ಯಾಸಿ ರಂಗಭೂಮಿ ತನ್ನ ಚಟುವಟಿಕೆಗಳಿಗೆ ಯಾವತ್ತೂ ನಮ್ಮ ಪ್ರಮುಖ ನಾಟಕಕಾರರನ್ನು ಆಶ್ರಯಿಸಿದೆ. ೧೯೯೨ರ ವರ್ಷ ಸಹ ಇದಕ್ಕೆ ಹೊರತಲ್ಲವೆನ್ನಬಹುದು. ಕಳೆದ ವರ್ಷ ಹೆಚ್ಚು ಪ್ರಯೋಗಗೊಂಡ ನಾಟಕವೆಂದರೆ ಗಿರೀಶರ ಇತ್ತೀಚಿನ ನಾಟಕ 'ತಲೆದಂಡ '.

ಬೆಂಗಳೂರಿನ ನಟರಂಗ, (ನಿರ್ದೇಶಕರು: ಸಿ.ಆರ್. ಸಿಂಹ) ರೂಪಾಂತರ (ನಿರ್ದೇಶನ: ಅಮರ್) ಮೈಸೂರಿನ ಸಮತೆಂತೂ (ನಿರ್ದೇಶನ: ಸಿಂಧುವಳ್ಳಿ ಅನಂತಮೂರ್ತಿ) ಗದುಗಿನ ಅಭಿನಯ ರಂಗ (ನಿರ್ದೇಶನ: ಜಯತೀರ್ಥಜೋಶಿ) ಇವೆಲ್ಲ ಈ ನಾಟಕವನ್ನು ಪ್ರಯೋಗಿಸಿವೆ.

ಗದುಗಿನಲ್ಲಿ ಬಹಳ ಕಾಲದಿಂದ ಹಾಳು ಬಿದ್ದಿದ್ದ ಕೊನೇರಿಹೊಂಡ ಈ ಪ್ರಯೋಗದಿಂದಾಗಿ ಬಯಲು ರಂಗಭೂಮಿಯಾಗಿ ಮಾರ್ಪಟ್ಟಿದ್ದು, ಮತ್ತು ಮುಂದಿನ ರಂಗ ಚಟುವಟಿಕೆಗೆ ದಾರಿಯಾಗಿರುವುದು ಈ ಪ್ರಯೋಗದ ಕೊಡುಗೆ.

ತಲೆದಂಡ ಕನ್ನಡದಲ್ಲೇ ಅಲ್ಲದೆ ಹಿಂದಿಗೂ ಅನುವಾದಿತಗೊಂಡಿದೆ. ರಾಷ್ಟ್ರೀಯ ನಾಟಕ ಶಾಲೆ, ನವದೆಹಲಿ, ರೆಪರ್ಟರಿಯವರಿಂದ ದೇಶದ ಹಲವೆಡೆ ಪ್ರದರ್ಶಿತವಾಗಿರುವುದಲ್ಲದೆ ಬೆಂಗಳೂರಿನಲ್ಲಿ ಸಹ ಪ್ರದರ್ಶಿತವಾಯಿತು. (ನಿರ್ದೇಶನ: ಇಬ್ರಾಹಿಂ ಅಲ್ಕಾಜಿ).

ತಿರುಗಾಟ

ನೀನಾಸಂ ತಿರುಗಾಟ ೯೨ ಸಿದ್ಧಪಡಿಸಿರುವ ಮೂರು ನಾಟಕಗಳಲ್ಲಿ ಸಹ ತಲೆದಂಡ ಸೇರಿದೆ. ಹೀಗೆ ತಲೆದಂಡ ಪ್ರೊಸೀನಿಯಂ ರಂಗಭೂಮಿ, ಬಯಲು ರಂಗಭೂಮಿಯಲ್ಲೂ ಪ್ರದರ್ಶಿತವಾಗಿರುವುದಲ್ಲದೆ ಹಲವಾರು ನಿರ್ದೇಶಕರು ವಿವಿಧ ದೃಷ್ಟಿಕೋನದಿಂದ ಒಂದೇ ನಾಟಕವನ್ನು ನಿರ್ದೇಶಿಸಿರುವುದು ಒಂದು ನಾಟಕದ ಹಲವು ಹೊಳಹುಗಳಿಗೆ, ವ್ಯಾಖ್ಯೆಗಳಿಗೆ ಅನುವು ಮಾಡಿಕೊಟ್ಟಿರುವುದು ಕನ್ನಡ ರಂಗಭೂಮಿ ೯೨ ರಲ್ಲಿ ಕಂಡ ಅತ್ಯಂತ ಆರೋಗ್ಯಪೂರಕ ಬೆಳವಣಿಗೆ ಎನ್ನಬಹುದು. ಇದೇ ವರ್ಷದಲ್ಲಿ ಗಿರೀಶರ ಮತ್ತೊಂದು ನಾಟಕ 'ನಾಗಮಂಡಲ'ದ ಪಂಜಾಬಿ ಭಾಷೆಯ ಅವತರಣಿಕೆ ನೀಲಂ ಮಾನ್‌ಸಿಂಗ್ ಅವರಿಂದ ನಿರ್ದೇಶಿಸಲ್ಪಟ್ಟು ಕರ್ನಾಟಕದಲ್ಲಿ ಹಲವೆಡೆ ಪ್ರದರ್ಶಿತವಾಗಿರುವುದು, ಕನ್ನಡ ರಂಗಭೂಮಿ ಸಾಧಿಸಿರುವ ಮೇಲ್ಮೆಯನ್ನು ಪ್ರಕಾಶಿಸುತ್ತದೆ.

ಬಹಳ ವರ್ಷದಿಂದ ನಾಟಕ ರಚನೆಗೆ ತೊಡಗದಿದ್ದ ಲಂಕೇಶ್, ಈ ವರ್ಷ ಹೊಸ ನಾಟಕವೊಂದನ್ನು ರಚಿಸಿ ರಂಗಭೂಮಿಯ ಚೈತನ್ಯವನ್ನು ಹೆಚ್ಚಿಸಿದ್ದಾರೆ. ಅವರ 'ಗುಣಮುಖ'ವನ್ನು ಈಗಾಗಲೇ ನಟರಂಗ, ರೂಪಾಂತರ ತಂಡಗಳು ಪ್ರಯೋಗಿಸಿವೆ. ನಾದಿರ್‌ಷಾ ಭಾರತದ ಮೇಲೆ ದಂಡೆತ್ತಿ ಬಂದಾಗ, ದೆಹಲಿಯ ಮುಘಲ್ ದೊರೆಯ ಆಳ್ವಿಕೆಯ ಮೇಲೆ ಆದ ಪರಿಣಾಮವನ್ನು ಕುರಿತು ಈ ನಾಟಕ ಹೇಳುತ್ತಲೇ ನಮ್ಮ ವ್ಯವಸ್ಥೆ ಮತ್ತು ರಾಜಕೀಯ ಸಂದರ್ಭವನ್ನು ತೀಕ್ಷ್ಣವಾಗಿ ವ್ಯಂಜಿಸುತ್ತದೆ.

ಈಗಾಗಲೇ ಹಲವಾರು ಯಶಸ್ವೀ ನಾಟಕಗಳನ್ನು ನೀಡಿರುವ ಹೆಚ್.ಎಸ್. ಶಿವಪ್ರಕಾಶ್ ೯೨ ರಲ್ಲಿ ಕೊಟ್ಟಿರುವ ಹೊಸ ನಾಟಕ 'ಮಧುರೈ ಕಾಂಡ' ತಮಿಳಿನ ಪ್ರಸಿದ್ಧ ಕಾವ್ಯ ಶಿಲಪ್ಪದಿಕಾರಂನಲ್ಲಿ ಬರುವ ರಾಣಿ ಕನ್ನಗಿ ಕಥೆಯನ್ನು ಕಥಾವಸ್ತುವನ್ನಾಗಿ ಮಾಡಿಕೊಂಡಿರುವ ಈ ನಾಟಕದಲ್ಲಿ ಲೇಖಕರು ಕನ್ನಗಿಯ ಬಗ್ಗೆ ಪ್ರಚಲಿತವಿರುವ 'ಮಿಥ್'ನ್ನು ಮುರಿದು ಬೇರೊಂದು ಮಿಥ್‌ನ್ನು ಸೃಷ್ಟಿಸಿ ಆಧುನಿಕ ಸಂವೇದನೆಗೆ ಹತ್ತಿರ ತಂದಿದ್ದಾರೆ. 'ಸಮುದಾಯ'ದ ಈ ಪ್ರಯೋಗದಲ್ಲಿ ನಿರ್ದೇಶಕ ಸುರೇಶ್ ಆನಗಳ್ಳಿ ನಾಟಕದಲ್ಲಿ ಬರುವ ಕಲ್ಲುಕುಟಿಕರನ್ನೇ ಕಥಾನಕರನ್ನಾಗಿ ಮಾಡಿ ಅವರನ್ನು ಶಾಸ್ತ್ರೀಯ ಸಂಗೀತದ ಲಯ, ಶಾಸ್ತ್ರೀಯ ನೃತ್ಯದ ಗತಿಗೆ ಹೊಂದಿಸುವ ಪ್ರಯತ್ನ ಮಾಡಿರುವುದು ಈ ನಾಟಕ ಪ್ರಯೋಗದ ವೈಶಿಷ್ಟ್ಯವಾಗಿದೆ. ಶಿವಪ್ರಕಾಶರ 'ಮಾದಾರಿ ಮಾದಯ್ಯ', 'ಮಂಟೇಸ್ವಾಮಿ ಕಥಾ ಪ್ರಸಂಗ'ದ ಪುನರ್ ಪ್ರದರ್ಶನಗಳು ನಡೆಯುತ್ತಲೇ ಇವೆ. 'ಪ್ರಯೋಗರಂಗ" ತಂಡದ 'ಮಂಟೇಸ್ವಾಮಿ' ಇನ್ನೇನು ನೂರನೇ ಪ್ರದರ್ಶನ ಮುಟ್ಟಲಿದೆ.

ಮನುಷ್ಯನಿಗೆ, ಮರಕ್ಕೆ, ಕಟ್ಟಡಕ್ಕೆ ವಯಸ್ಸಾಗುವುದು ಸಹಜವಾದರೂ ಅದರ ನೆಪದಲ್ಲಿ ರಂಗ ಚಟುವಟಿಕೆ ಹೆಚ್ಚಿಸಬಹುದಾದರೆ ಏಕೆ ಬೇಡ ಎನ್ನುವಂತೆ ನಗರದ ರವೀಂದ್ರ ಕಲಾಕ್ಷೇತ್ರಕ್ಕೆ ೩೦ ತುಂಬಿದ ಸಂದರ್ಭದಲ್ಲಿ ಜಿ.ಕೆ. ಕಲಾಕ್ಷೇತ್ರ ೩೦

ಉತ್ಸವವನ್ನು ನಡೆಸಿದ್ದು ರಂಗ ಚಟುವಟಿಕೆಗೆ ದಾರಿಯಾಯಿತು. ಈ ಉತ್ಸವ ಅನು ವಾದ, ರೂಪಾಂತರ, ರಂಗರೂಪಗಳನ್ನು ಒಳಗೊಂಡಿದ್ದರು ಹತ್ತಾರು ಹೊಸ ನಾಟಕಗಳು ಕಾಣಿಸಿಕೊಂಡವು.

'ಅಂಕೆ ತಪ್ಪಿದ ಶಂಕರ್‌ಲಾಲ್': ನಿ:ಸಿ.ಜಿ.ಕೆ., ತಂಡ:ಸಂಜಯ ಮೂಲ:ಬ್ರೆಕ್ಟ್ ಅನು: ಕೆ.ವಿ. ನಾರಾಯಣ. 'ಸ್ವರ್ಗಸ್ಥ' ಲೇ: ನಿಸರ್ಗಪ್ರಿಯ:ತಂಡ: ಅಭಿನಯ ತಿಪಟೂರ್ ನಿರ್ದೇಶನ : ಬೈರ್ನಳ್ಳಿ ಶಿವರಾಂ, ' ಮಾಳವಿಕ ' ಲೇ : ಹೆಚ್.ಎಸ್. ಶಿವಪ್ರಕಾಶ್, ನಿರ್ದೇಶನ:ಶಾರದಾರುದ್ರ. 'ಭರತನಗರಿ' ಲೇ:ಬರಗೂರ್, ರಂಗರೂಪ ಎ.ಎಸ್.ಮೂರ್ತಿ ತಂಡ:ಅಭಿನಯ ರಂಗ .'ಹೆಡ್ಡಾಯಣ' ಲೇ:ಬಿ.ವಿ.ಕಾರಂತ ತಂಡ:ಸ್ಫೂರ್ತಿ, ನಿ:ರಾಮಕೃಷ್ಣ ಬಾಬು. 'ಮಹಾದಾನಿ ಬಲಿ' ಲೇ:ಶಿವಲಿಂಗಪ್ಪ, ತಂಡ:ವೀರಾಂಜನೇಯ ಕಲಾವೃಂದ ನಿ:ಕೆ.ವೆಂಕಟೇಶ್. 'ಹುಚ್ಚೇರಿಯ ಕಥಾ ಪ್ರಸಂಗ' ಮೂಲ: ಕಾ.ತ.ಚಿಕ್ಕಣ್ಣ, ತಂಡ:ಪ್ರಯೋಗ ರಂಗ, ರಂಗರೂಪ ನಿರ್ದೇಶನ :ಎಸ್. ಸಂಧ್ಯಾ.'ಹ್ಯಾಮ್ಲೆಟ್' ಅನು: ರಾಮಚಂದ್ರದೇವ:ತಂಡ:ಕೊಡವ ರಂಗ ನಿರ್ದೇಶನ : ಎ.ಸಿ.ಕಾರಿಯಪ್ಪ. 'ಮೈಮನಗಳನಡುವೆ' ಮೂಲ: ಡಾ.ಡಾಕ್‌ಂಡರ್, ಅನು:ರಾಜೇಂದ್ರ ಕಾರಂತ. ತಂಡ: ಜಾನಪದ. ನಿ: ಬಿ.ವಿ. ರಾಜಾರಾಂ. 'ಆಲಿವರ್ ಟ್ವಿಸ್ಟ್' ಮೂಲ:ಚಾರ್ಲ್‌ಡಿಕನ್ಸ್ ರಂಗರೂಪ ನಿ:ಎಸ್.ಕೆ.ಮಾಧವರಾವ್. 'ಶೋಧ:ಮೂಲ ಸ್ಟ್ರಿಂಡ್‌ಬರ್ಗ್:ಅನು:ನಾಗೇಶ್‌ರಾವ್, ತಂಡ:ಬೆನಕ ,ನಿ:ಎನ್.ಎ. ಸೂರಿ.'ಮಿಡ್ ಸಮರ್ ನೈಟ್ಸ್ ಡ್ರೀಮ್' ಅನು: ಕೆ.ಎಸ್. ನಿಸಾರ್ ಅಹಮದ್ ತಂಡ: ನಟರಂಗ ನಿ:ಸಿ.ಆರ್.ಸಿಂಹ. 'ಕದೀಮನ ಡೈರಿ'ರಚನೆ:ನಿರ್ದೇಶನ:ಶ್ರೀನಿವಾಸ ಪ್ರಭು, ತಂಡ : ಅಂತರಂಗ.

ಈ ವರ್ಷ 'ಸಂಕೇತ್' ತಂಡ ಮತ್ತೆ ಕ್ರಿಯಾಶೀಲನಾಗಿ ಬ್ರೆಕ್ಟ್‌ನ ಮುಖ್ಯ ನಾಟಕವಾದ 'ಮದರ್ ಕರೇಜ್' ಅಳವಡಿಕೆ 'ಹುಲುಗವ್ವ' ನಾಟಕವನ್ನು ಪ್ರಯೋಗಿಸಿತು. ಅಳವಡಿಕೆ ನಿರ್ದೇಶನ: ಸುರೇಂದ್ರನಾಥ್, ಹಾಗೆ ಈ ತಂಡ 'ಹಸಿರೆಲೆ ಹಣ್ಣೆಲೆ' ಎನ್ನುವ ನಾಟಕವನ್ನು ಪ್ರಯೋಗಿಸಿದೆ. ರಚನೆ:ಗೋಪಾಲ ವಾಜಪೇಯಿ, ನಿ:ಅರುಂಧತಿ ನಾಗ್ ಮತ್ತು ಸುರೇಂದ್ರನಾಥ್.

ಮೈಸೂರಿನ ಕದಂಬ ವೇದಿಕೆಯಡಿ ಎರಡು ನೂತನ ಪ್ರಯೋಗಗಳಾದವು. ಜಡಭರತರ 'ಪರಿಮಳದವರು' ನಿರ್ದೇಶನ: ಹೆಚ್.ಎಸ್. ಉಮೇಶ್, ಶ್ರೀ ಉಮೇಶ್ ರಂಗ ಚಾಲ್ತಿಯಲ್ಲಿರುವ ಪ್ರಯೋಗದ ವೇಗವನ್ನು ಬಿಟ್ಟುಕೊಟ್ಟು ಗತಿಯಲ್ಲಿ ನಿಧಾನದ ನಡೆಯನ್ನು ಅನುಸರಿಸಿದ್ದರು. ಮೈಸೂರಿನ ಹಿರಿಯ ರಂಗಕರ್ಮಿ ಹೆಚ್.ಕೆ. ಯೋಗಾನರಸಿಂಹ ನಿರ್ದೇಶನದ ನಾಟಕ 'ರಣಧೀರ'. ಮೈಸೂರಿನ ಇನ್ನೊಂದು ತಂಡ: 'ವಿಷ್ಕಂಭ' 'ಜುಮ್ಮೇಳ ಧೂಳಿನ ಪ್ರಸಂಗ'ಎಂಬ ಹೊಸ ನಾಟಕವನ್ನು ಪ್ರಯೋಗಿಸಿದೆ. 'ಕಾವ್ಯಪ್ರಿಯರು ಬರೆದಿರುವ ಈ ನಾಟಕ ಕೃತಿಗೆ ಉಡುಪಿಯ 'ರಂಗಭೂಮಿ' ನಡೆಸಿದ

ನಾಟಕ ರಚನಾ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಸಿಕ್ಕಿದೆ. 'ರಂಗಭೂಮಿ' ನಾಟಕ ಪ್ರಯೋಗಗಳನ್ನಲ್ಲದೆ ನಾಟಕ ರಚನಾ ಸ್ಪರ್ಧೆಯನ್ನು ಅವಿರತವಾಗಿ ಪ್ರತಿ ವರ್ಷವೂ ನಡೆಸಿಕೊಂಡು ಬರುತ್ತಿದೆ.

ಸಮತೆಂತೋ

ಈ ವರ್ಷದಲ್ಲಿ ಮೈಸೂರಿನ ಸಮತೆಂತೋ ಸಹ ತನ್ನ ಬೆಳ್ಳಿಹಬ್ಬವನ್ನು ಆಚರಿಸಿದೆ. ಇದರ ಅಂಗವಾಗಿ ಹಮ್ಮಿಕೊಂಡಿದ್ದ ನಾಟಕ ರಚನಾ ಸ್ಪರ್ಧೆಯಲ್ಲಿ ಈ ಕೆಳಗಿನ ಕೃತಿಗಳಿಗೆ ಬಹುಮಾನ ಸಿಕ್ಕಿದೆ.

ಬೊಂಬೆಯಾಟ : ರಚನೆ : **ಕೆ.ಟಿ. ಗಟ್ಟಿ**
ಹಳಿಯ ಮೇಲಿನ ಸದ್ದು: ರಚನೆ : **ಟಿ. ಶ್ರೀನಿವಾಸ ರಾಜು**
ಸಿಸೆರೋ: ರಚನೆ : **ಎಂ.ಎಸ್.ಕೆ. ಪ್ರಭು.**

ಬೀದಿ ನಾಟಕಗಳ ಪ್ರಕಾರದಲ್ಲಿ ಬೆಂಗಳೂರು ನಗರದ 'ಬಿಂಬ'ಹಾಗೂ 'ಹೆಜ್ಜೆಗೆಜ್ಜೆ'ತಂಡ ಕ್ರಿಯಾಶೀಲವಾಗಿದೆ. 'ಹೆಜ್ಜೆಗೆಜ್ಜೆ'ತಂಡದವರಂತೂ ಹಳ್ಳಿ ಹಳ್ಳಿಯನ್ನೂ ಸುತ್ತಿ ವೃತ್ತಿಪರರಾಗಿ ಕೆಲಸ ಮಾಡುತ್ತಿದ್ದಾರೆ. ಪರಿಸರ ಕಾಳಜಿಯನ್ನು ವಸ್ತುವನ್ನಾಗಿ ಇಟ್ಟುಕೊಂಡಿರುವ ಎ.ಎಸ್. ಮೂರ್ತಿಯವರ 'ಓ ನನ್ನ ಮರವೇ' ಮಕ್ಕಳ ನಾಟಕ ಹಲವು ಪ್ರದರ್ಶನಗಳನ್ನು ಕಂಡಿದೆ.

ರೆಪರ್ಟರಿಗಳ ಚಟುವಟಿಕೆಗಳು

ಕೊಡಗಿನ ಸೃಷ್ಟಿ ಹೆಚ್ಚಾಗಿ ಕೊಡಗು ಜಿಲ್ಲೆಯಲ್ಲಿ ತನ್ನ ನಾಟಕಗಳ ಪ್ರದರ್ಶನವನ್ನು ನೀಡುತ್ತಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ತುಮರಿಯ 'ಕಿನ್ನರ ಮೇಳ'ಮಕ್ಕಳ ರಂಗಭೂಮಿಯ ವಿಭಾಗದಲ್ಲಿ ಕೆಲಸ ಮಾಡುತ್ತ ಶಾಲಾ ಕಾಲೇಜುಗಳಲ್ಲಿ ಪ್ರದರ್ಶನವನ್ನು ನೀಡಿ ರಂಗಾಸಕ್ತಿಯನ್ನು ಹುಟ್ಟಿಸುವಂಥ ಕೆಲಸ ಮಾಡುತ್ತಿದೆ. ಕಿನ್ನರ ಮೇಳ ಈ ವರ್ಷ ಸಿದ್ಧಪಡಿಸಿದ್ದ ನಾಟಕಗಳು; 'ಝೂಂ ಝೂಂ ಆನೆ', ರಚನೆ : ವೈದೇಹಿ ಹಾಗೂ'ಹಯವದನ' ಎರಡು ನಾಟಕಗಳ ನಿರ್ದೇಶಕರು: ಕೆ.ಜಿ.ಕೃಷ್ಣಮೂರ್ತಿ.

ನೀನಾಸಂ ರೆಪರ್ಟರಿ (ತಿರುಗಾಟ ೯೨) ಎಂದಿನಂತೆ ಈ ವರ್ಷವೂ ಮೂರು ನಾಟಕಗಳನ್ನು ಸಿದ್ಧಪಡಿಸಿಕೊಂಡು ನಾಡಿನಾದ್ಯಂತ ಪ್ರದರ್ಶನಗಳನ್ನು ನೀಡಿ ಯಶಸ್ವಿಯಾಗಿದೆ. ನಾಟಕ ರಚನೆ ಮತ್ತು ಪ್ರಯೋಗದ ಗುಣಾತ್ಮಕ ಅಂಶಗಳು ಮೇಲ್ಮಟ್ಟದಲ್ಲಿದ್ದು ನಾಡಿನ ಎಲ್ಲ ಕಡೆ ಹಾಗೂ ಹೊರಗೆ ಪ್ರೇಕ್ಷಕರಿಂದ ಪ್ರಶಂಸೆಗೆ ಪಾತ್ರವಾಗಿದೆ.

ತಿರುಗಾಟದ ೯೨ರ ನಾಟಕಗಳು

'ಹೂ ಹುಡುಗಿ' ಮೂಲ: ಜಾರ್ಜ್ ಬರ್ನಾಡ್ ಷಾ ರ 'ಪಿಗ್‌ಮೆಲಿಯನ್'

ರೂಪಾಂತರ : ಜಯಂತ್ ಕಾಯ್ಕಿಣಿ ನಿರ್ದೇಶನ:ಅತುಲ್ ತಿವಾರಿ.

'ತಲೆದಂಡ' ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ:ಚಿದಂಬರರಾವ್ ಜಂಬೆ

'ಸಂಗ್ಯಾಬಾಳ್ಯಾ' ರಚನೆ: ಪತ್ತಾರ ಮಾಸ್ತರ, ನಿರ್ದೇಶನ: ಅಕ್ಷರ ಕೆ.ವಿ.

ರಂಗಾಯಣ

ಮೈಸೂರಿನಲ್ಲಿ ಬಿ.ವಿ. ಕಾರಂತರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿರುವ 'ರಂಗಾಯಣ'ತನ್ನ ಪ್ರಯೋಗವೊಂದಕ್ಕೆ ಬಂದಿದ್ದ ಆಹ್ವಾನದ ಮೇಲೆ ಅಮೇರಿಕಾಕ್ಕೆ ಹೋಗಿ ಅಲ್ಲಿನ ನ್ಯೂಯಾರ್ಕ್ ನಗರದ 'ಲಾಮಾಮ' ರಂಗಮಂದಿರದಲ್ಲಿ ೧೩ ಯಶಸ್ವೀ ಪ್ರದರ್ಶನಗಳನ್ನು ನೀಡಿತು. ಭಾರತ ಮತ್ತು ಗ್ರೀಕ್, ಎರಡು ಸಂಸ್ಕೃತಿಗಳ ವಿನಿಮಯದ ಫಲವಾಗಿ ಮೂಡಿ ಬಂದಿರುವ ಈ 'ಹಿಪ್ಪೊಲಿಟಸ್' ಪ್ರಯೋಗ (ಮೂಲ: ಯೂರಿಪಿಡೀಸ್ ಅನುವಾದ: ರಘುನಂದನ್) ಅಮೇರಿಕಾದಲ್ಲಿ ಪ್ರದರ್ಶಿತವಾಗುವುದಕ್ಕೆ ಮುಂಚೆ ರಂಗಾಯಣದ 'ವನ ರಂಗ'ದಲ್ಲಿ ಹತ್ತಾರು ಯಶಸ್ವೀ ಪ್ರದರ್ಶನಗಳನ್ನು ಕಂಡಿತ್ತು. ನಿರ್ದೇಶನ: ವಸೀಲಿಯಸ್ ಕೊಲಾಟ್ಸಸ್ ಸಂಗೀತ: ಬಿ.ವಿ. ಕಾರಂತ ಮತ್ತು ಫಿಲಿಪ್ ಡಿ. ಕೊವಾಂಟಿಜ್.

ದೇವನೂರ ಮಹಾದೇವರ ಕಿರು ಕಾದಂಬರಿ 'ಕುಸುಮ ಬಾಲೆ 'ಯು ರಂಗಾಯಣ ಬಯಲು ರಂಗಮಂದಿರದಲ್ಲಿ ಪ್ರಯೋಗಗೊಂಡಿತು. ಕಾದಂಬರಿಯೊಂದನ್ನು ಎಳ್ಳಷ್ಟು ಬಿಡದೆ ಯಥಾವತ್ತಾಗಿ ರಂಗದ ಮೇಲೆ ತಂದು, ಪ್ರಭಾವಶಾಲಿಯಾಗಿ ಮೂಡಿಸಿದ ಪ್ರಯೋಗ. ಯಶಸ್ವಿಯಾಗಿ ಹತ್ತಾರು ಪ್ರದರ್ಶನಗಳನ್ನು ಕಂಡಿರುವ ಈ ಪ್ರಯೋಗದ ನಿರ್ದೇಶಕರು ಸಿ. ಬಸವಲಿಂಗಯ.


ಮಾಸ್ತಿಯವರ 'ಮೂಕನ ಮಕ್ಕಳು' ಕಥನ ಕಾವ್ಯವನ್ನು ರಂಗಾಯಣ ಮಕ್ಕಳ ಮತ್ತು ದೊಡ್ಡವರ ನಾಟಕವನ್ನಾಗಿ ಪ್ರಯೋಗಿಸಿತು. ಬೇಂದ್ರೆಯವರ ಕಾವ್ಯವನ್ನು ಬಳಸಿ ರೂಪಿಸಿದ್ದ ಪ್ರಯೋಗಕ್ಕೆ ಕಾರಂತರು ಸಂಗೀತ ನೀಡಿ ನಿರ್ದೇಶಿಸಿದ್ದರು. ರಚನೆ:ವೈದೇಹಿ.

ರಂಗಾಯಣದ ಇತರ ಪ್ರಯೋಗಗಳೆಂದರೆ ಚೆಕಾಫ್‌ನ 'ಚೆರ್ರಿತೋಟ' (ಅನುವಾದ: ಹೆಚ್.ಎಚ್ ಶಿವಪ್ರಕಾಶ್ ನಿರ್ದೇಶನ :ಫ್ರಿಟ್ ಬೆನೆವಿಟ್ಸ್) ಮತ್ತು 'ಮಗ್ಗದವರು' ಮೂಲ:ಜರ್ಹಾರ್ಟ್ ಹಾಪ್ಟ್‌ಮನ್: ಕನ್ನಡಕ್ಕೆ: ರಾಮಚಂದ್ರದೇವ ನಿರ್ದೇಶನ: ಉವೆ ಜೆನ್ಸ್ ಜೆನ್ಸನ್.

ನಾಡಿನ ರಂಗ ಚಟುವಟಿಕೆ ಪೂರಕವಾಗುವಂತೆ ಕರ್ನಾಟಕ ನಾಟಕ ಅಕಾಡೆಮಿ ೯೨ರಲ್ಲಿ ಅಪೂರ್ವ ವೃತ್ತಿ ರಂಗಭೂಮಿ ನಾಟಕೋತ್ಸವವನ್ನು ಏರ್ಪಡಿಸಿದ್ದಲ್ಲದೆ ವಸಂತ ರಂಗೋತ್ಸವವೆಂಬ ನಾಟಕೋತ್ಸವವನ್ನು ಏರ್ಪಡಿಸಿತ್ತು. ವಸಂತ ರಂಗೋತ್ಸವದಡಿ ವಿಭಾಗೀಯ ನಾಟಕೋತ್ಸವಗಳು ನಡೆದು ಅಲ್ಲಿ ಆಯ್ಕೆಗೊಂಡ

ನಾಟಕಗಳನ್ನು ಬೆಂಗಳೂರಿನ ನಾಟಕೋತ್ಸವದಲ್ಲಿ ಪ್ರದರ್ಶಿಸಲಾಯಿತು. ಒಟ್ಟು ರಂಗೋತ್ಸವದಲ್ಲಿ ಉತ್ತಮವೆಂದು ಕಂಡು ಬಂದ ನಾಟಕಗಳನ್ನು ದೆಹಲಿಯಲ್ಲಿ ಪ್ರದರ್ಶಿಸಲಾಯಿತು. 'ತಿರುಗುಪ್ಪ', ಬದಾಪುರದ ಕಲಾ ಮಾಧ್ಯಮ ನಹೆಂಬಕರು, ಧ್ರುವರಾಜ ದೇಶಪಾಂಡೆ ಹಾಗೂ 'ನಾಗಮಂಡಲ' ತಂಡ:ಆತುರ ಕಲಾ ಸಂಘ, ಮೈಸೂರು, ನಿರ್ದೇಶಕರು: ಕೆ.ಎಸ್.ಶರತ್ ಇವು ದೆಹಲಿಯಲ್ಲಿ ಪ್ರದರ್ಶಿತವಾದ ಪ್ರಯೋಗಗಳು.

ಒಟ್ಟಿನಲ್ಲಿ ೧೯೯೨ ಕನ್ನಡ ರಂಗಭೂಮಿಗೆ ಆಶಾದಾಯಕ ವರ್ಷವೆನಿಸಿತು.



ರಂಗಾಯಣದ 'ಭೂಮಿಗೀತ' ಪ್ರಯೋಗ



'ಮಾದಾರಿ ಮಾದಯ್ಯ' ದ ಒಂದು ದೃಶ್ಯ



, ತಿರುಗಾಟ : ೯೨ 'ಸಂಗ್ಯಾ ಬಾಳ್ಯಾ' ದ ಒಂದು ದೃಶ್ಯ

ಚಿತ್ರರಂಗ

— *ಟಿ. ಸೀತಾರಾಂ*

ಮೇಲ್ನೋಟಕ್ಕೆ ೧೯೯೨ರ ಕನ್ನಡ ಚಿತ್ರರಂಗ ನಿರಾಶಾದಾಯಕವಾಗಿ ಕಾಣಬಹುದು. ನಿಜ, ಸಂಖ್ಯೆಯ ದೃಷ್ಟಿಯಿಂದ ಈ ವರ್ಷದ ೯೧ ಚಿತ್ರಗಳು ಉದ್ಯಮದ ಅರುವತ್ತೆರಡು ವರ್ಷಗಳ ಇತಿಹಾಸದಲ್ಲೆ ದಾಖಲೆ. ಆದರೆ, ಅವುಗಳಲ್ಲಿ ಹೆಚ್ಚಿನವು ಅನ್ಯಭಾಷಾ ಚಿತ್ರಗಳ ರೀಮೇಕ್. ಗುಣಮಟ್ಟದ ವಿಷಯದಲ್ಲಿ ಬಹುತೇಕ ಚಿತ್ರಗಳು ಬೋರ್ಡಿಗೂ ಬರುವಂತಿರಲಿಲ್ಲ. ಗಲ್ಲಾಪೆಟ್ಟಿಯಲ್ಲಂತೂ ನೂರಕ್ಕೆ ತೊಂಬತ್ತು ಚಿತ್ರಗಳು ನೆಲ ಕಚ್ಚಿದವು.

ಆದರೆ ಗಮನಿಸಬೇಕಾದ ವಿಷಯವೆಂದರೆ ಈ ಕಳಪೆ ಚಿತ್ರಗಳಲ್ಲಿನ ಸಿಂಹಪಾಲು ಕೇವಲ ವ್ಯಾಪಾರಿ ಮನೋಭಾವದ ಉದ್ಯಮಿಗಳ ಒತ್ತಡದಿಂದ ತಯಾರಾದವು. ಅವು ನಮ್ಮ ತಂತ್ರಜ್ಞಾನ, ಕಲಾವಿದರ ಸೃಜನಶೀಲತೆಗೆ ಮಾಪಕವಾಗಲಾರವು. ಹೊಸತೇನಾದರೂ ಕೊಡಬೇಕೆಂಬ ಹಂಬಲದಿಂದ ತಯಾರಾದ ಚಿತ್ರಗಳು ನಮ್ಮಲ್ಲಿ ಸೃಜನಶೀಲತೆಯ ಸೆಲೆ ಬತ್ತಿಹೋಗಿಲ್ಲ ಎಂಬುದನ್ನಂತೂ ಸ್ಪಷ್ಟಪಡಿಸಿವೆ.

ಯಾವುದೇ ಉದ್ಯಮದ ಉದ್ಯೋಗಿಗಳು ವರ್ಷವೆಲ್ಲ ಬಿಡುವಿಲ್ಲದ ದುಡಿಮೆಯಲ್ಲಿದ್ದರೆಂದರೆ ಆ ಉದ್ಯಮ ಸುಭದ್ರ ಸ್ಥಿತಿಯಲ್ಲಿದ್ದು ಬೆಳೆಯುತ್ತಿದೆ ಎಂತಲೇ ಅರ್ಥ. ಆ ಮಟ್ಟಿಗೂ ೧೯೯೨ರ ಕನ್ನಡ ಚಿತ್ರೋದ್ಯಮ ಪರಿಸ್ಥಿತಿ ಸಮಾಧಾನಕರವೇ.

ವರ್ಷದ ಸ್ವತಂತ್ರ ಚಿತ್ರಗಳ ಸರಣಿಯಲ್ಲಿ ಗಮನಿಸಬಹುದಾದ ಮೊದಲ ಚಿತ್ರವೆಂದರೆ ಕೆ.ವಿ. ಜಯರಾಂ ಅವರ 'ಹೊಸರಾಗ' ಹಿಂದಿ ಚಿತ್ರರಂಗದ ಪ್ರತಿಷ್ಠಿತ ಖಳನಟ ಪ್ರಾಣ್ ಅವರನ್ನು ಕನ್ನಡಕ್ಕೆ ತಂದುದು ಈ ಚಿತ್ರದ ಒಂದು ಹೆಚ್ಚಳವಾಗಿತ್ತು. ಆದರೆ ಅವರ ಪ್ರತಿಭೆಗೆ ಒಪ್ಪುವಂತಹ ಪಾತ್ರ ಚಿತ್ರದಲ್ಲಿರಲಿಲ್ಲ. ಆದರೂ ಒಟ್ಟಾರೆ

ಅಭಿರುಚಿಯ ದೃಷ್ಟಿಯಿಂದ ಚಿತ್ರ ಸಮಾಧಾನಕರವಾಗಿತ್ತು. 'ಯೋಗ ಮಾಡಿ ರೋಗ ತಡೆಯಬೇಕು' ಹಾಡಿನ ರಿದಂ ಗುಂಗು ಹಿಡಿಸುವಂತಿತ್ತು. ಆದರೂ ಚಿತ್ರ ವ್ಯಾಪಾರಿ ದೃಷ್ಟಿಯಿಂದ ಯಶಸ್ವಿಯಾಗಲಿಲ್ಲ.

ಇದು ಉತ್ತಮ ಚಿತ್ರಗಳ ನಿರ್ಮಾಣ ಪ್ರಯತ್ನವನ್ನೇ ಕುಂಠಿತಗೊಳಿಸುವುದೇನೋ ಎಂಬ ಶಂಕೆ ಮೂಡಿದ್ದಾಗ ಬಂದದ್ದು ಎಸ್. ನಾರಾಯಣ್ ಅವರ 'ಚೈತ್ರದ ಪ್ರೇಮಾಂಜಲಿ' ಕೇವಲ ಪ್ರೇಮಕತೆಯೇ ಆದರೂ ನಿರ್ದೇಶನದಲ್ಲಿನ ಹೊಸತನ, ಹಾಡುಗಳು, ಛಾಯಾಗ್ರಹಣ ಮುಂತಾದ ಹಲವು ದೃಷ್ಟಿಗಳಿಂದ ಜನರ ಮೆಚ್ಚುಗೆಯನ್ನು ಈ ಚಿತ್ರ ಗಳಿಸಿತು. ಚಿತ್ರದ ಪ್ರಧಾನ ಕಲಾವಿದರಾದ ರಘುವೀರ್, ಶ್ವೇತಾ ಸಹ ಹೊಸಬರೇ ಆಗಿದ್ದು ಭರವಸೆ ಮೂಡಿಸಿದರು. ಆಮೇಲೆ ಬಂದ ಎಂ.ಎಸ್. ರಾಜಶೇಖರ್ ಅವರ 'ಮಿಡಿದ ಶೃತಿ' ಸಾಯಿಸುತೆ ಅವರ ಕಾದಂಬರಿ ಆಧರಿಸಿದುದು ಎಂಬ ಕಾರಣದಿಂದ ಗಮನಾರ್ಹ. ಚಿತ್ರವೂ ಯಶಸ್ಸು ಗಳಿಸಿತು.

ಬಹುಶಃ ಆನಂತರ ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಮುಖ್ಯ ಚಿತ್ರ ಎಂದರೆ ಪ್ರತಿಷ್ಠಿತ ಬರಹಗಾರ ನಾಗತಿಹಳ್ಳಿ ಚಂದ್ರಶೇಖರ ಅವರು ತಮ್ಮದೇ ಕತೆಯ ಆಧಾರದ ಮೇಲೆ ನಿರ್ದೇಶಿಸಿದ 'ಉಂಡೂ ಹೋದ ಕೊಂಡೂ ಹೋದ' ಅನಂತ್‌ನಾಗ್ ಅಭಿನಯದ ಈ ಗ್ರಾಮೀಣ ಹಿನ್ನೆಲೆ ಚಿತ್ರದಲ್ಲಿ ನಿರ್ದೇಶಕರು ಪ್ರಸ್ತುತ ಸಾಮಾಜಿಕ ಪರಿಸ್ಥಿತಿಯನ್ನು ಬಿಂಬಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ಆದರೆ ಇದೇ ಮೊದಲ ಚಿತ್ರವಾಗಿದ್ದು ಮಾಧ್ಯಮದ ಮೇಲೆ ಪೂರ್ಣ ಹಿಡಿತವಿಲ್ಲದೆ ಸೋಲನುಭವಿಸಿದರು. ಚಿತ್ರ ಇನ್ನು ಸ್ವಲ್ಪ ಹೆಚ್ಚಿನ ಮಟ್ಟಿಗಾದರೂ ಪ್ರಬುದ್ಧ ಪ್ರೇಕ್ಷಕರ ಗಮನ ಸೆಳೆಯಬೇಕಿತ್ತು. ಸಿಂಗೀತಂ ಶ್ರೀನಿವಾಸ್‌ರಾವ್ ಅವರ 'ಕ್ಷೀರಸಾಗರ' ವಿಭಿನ್ನ ಕತೆಯಿಂದ ನಾಯಕನಟ ಕುಮಾರ್ ಬಂಗಾರಪ್ಪನವರಿಗೆ ಸ್ವಲ್ಪ ಹೆಸರು ತಂದಿತು. ದಾಖಲೆ ದೃಷ್ಟಿಯಿಂದ ಇದು ಅವರ ಪ್ರಥಮ ಚಿತ್ರವೂ ಹೌದು.

ನಾಗಾಭರಣರ 'ಮೈಸೂರು ಮಲ್ಲಿಗೆ' ಹಲವು ದೃಷ್ಟಿಗಳಿಂದ ವರ್ಷದ ಹೆಮ್ಮೆಯ ಚಿತ್ರಗಳಲ್ಲೊಂದು. ಕನ್ನಡ ಸಾಹಿತ್ಯಲೋಕದ ಈ ಶತಮಾನದ ಶ್ರೇಷ್ಠರಲ್ಲೊಬ್ಬರಾದ ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಯನ್ನಾಧರಿಸಿ ಕತೆ ಕಟ್ಟಿ ತಯಾರಾದ ಚಿತ್ರ ಇದು. ಬಹುಶಃ ವಿಶ್ವಚಿತ್ರರಂಗದಲ್ಲೆ ಇಂತಹ ಪ್ರಯತ್ನ ಇನ್ನೊಂದು ನಡೆದಿರಲಾರದು. ಇನ್ನೂ ಮೆಚ್ಚುಗೆಯ ವಿಷಯ ಎಂದರೆ ಇದು ಹದಿನಾರಣೆ ಕನ್ನಡ ಚಿತ್ರ ಎಂಬುದು. ಸ್ವಾತಂತ್ರ್ಯ ಸಮರದ ಹಿನ್ನೆಲೆಯ ಈ ಚಿತ್ರ ರೂಪಾಯಿ ಆಣೆ ಪೈಸೆ ಕಾಲದ ಹಳೆಯ ಮೈಸೂರು ಸಂಸ್ಕೃತಿಯನ್ನು ನಿಚ್ಚಳವಾಗಿ ಬಿಂಬಿಸಿತು. ವೆಂಕಟೇಶ್ ಅಭಿನಯದಲ್ಲಿ 'ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು' ಗೀತೆಯ ಚಿತ್ರಣ ಒಂದು ಮಿನಿಕಲಾಕೃತಿಯಾಗಿತ್ತು. ಅಶ್ವತ್ಥ ಅವರ ಸಂಗೀತ ನಾವು ಅತ್ಯಂತ ತೀವ್ರವಾಗಿ ಕಳೆದುಕೊಳ್ಳುತ್ತಿರುವ ಒಂದು ರಮ್ಯಲೋಕಕ್ಕೆ ನಮ್ಮನ್ನು ಮತ್ತೆ ಕರೆದೊಯ್ಯುವಂಥದಾಗಿತ್ತು. ಅಲ್ಲದೆ ಸ್ವಾತಂತ್ರ್ಯ ಸಂಗ್ರಾಮದ ದೃಶ್ಯಗಳು

ವಸ್ತುನಿಷ್ಠವಾಗಿದ್ದವು. ಆನಂದ್, ಸುಧಾರಾಣಿ ಸಂಪ್ರದಾಯಬದ್ಧ ಸಮಾಜದ ಎಳೆಯ ಪ್ರೇಮಿಗಳ ಮುಗ್ಧತೆಯನ್ನು ಸಮರ್ಥವಾಗಿ ಬಿಂಬಿಸಿದರು.

'ಗಣೇಶನ ಮದುವೆ', 'ಗೌರಿ ಗಣೇಶ' ಚಿತ್ರಗಳ ಮೂಲಕ ಕಾಮಿಡಿ ಪ್ರಪಂಚದಲ್ಲಿ ತಮ್ಮ ವಿಶಿಷ್ಟ ಮುದ್ರೆ ಒತ್ತಿದ ಫಣಿ ರಾಮಚಂದ್ರ ಅದೇ ಜಾಡಿನಲ್ಲಿ ಮುಂದುವರಿದು ಈ ವರ್ಷ ನೀಡಿದ ಚಿತ್ರ 'ಗಣೇಶ ಸುಬ್ರಹ್ಮಣ್ಯ' ಆದರೆ ಆ ಚಿತ್ರಗಳ ಯಶಸ್ಸು ಇದಕ್ಕೆ ಲಭಿಸಲಿಲ್ಲ. ಹಾಗೆಯೇ'ಚೈತ್ರದ ಪ್ರೇಮಾಂಜಲಿ'ಯ ನಾರಾಯಣ್ ಇದೇ ವರ್ಷ ನೀಡಿದ ಎರಡನೆಯ ಚಿತ್ರ 'ನಂಜುಂಡ' ಹಳ್ಳಿಯ ಮುಗ್ಧ ಹುಡುಗ ಪ್ರಬುದ್ಧನಾಗುವ ಕ್ಲೀಷೆಯ ವಸ್ತುವಿಗೆ ಜೋತುಬಿದ್ದು ವೈಫಲ್ಯ ಅನುಭವಿಸಿದರು. ವಿನೋದ್‌ರಾಜ್ ಅಭಿನಯವೊಂದೇ ಈ ಚಿತ್ರದಲ್ಲಿ ಗುರುತಿಸಬಹುದಾದ ಅಂಶ.

ಫಣಿ ರಾಮಚಂದ್ರ ಈ ವರ್ಷ ನೀಡಿದ ಎರಡನೆಯ ಚಿತ್ರ 'ಒಂದು ಸಿನಿಮಾ ಕಥೆ' ಪತ್ರಕರ್ತ ಹಾಗೂ ಚಿತ್ರಗೀತಕಾರ ಶ್ಯಾಮಸುಂದರ ಕುಲಕರ್ಣಿಯವರಿಂದ ಭಿನ್ನ ರೀತಿಯ ಕಥೆ ಹೊಂದಿತ್ತು. ಸಾಹಿತಿಯೊಬ್ಬ ಜೀವನ ದರ್ಶನ ಪಡೆದು ಕಥೆ ರಚಿಸುವ ಪ್ರಯತ್ನದಲ್ಲಿ ಸ್ವತಃ ಹಲವು ಸಿಕ್ಕುಗಳಿಗೆ ಸಿಕ್ಕಿಕೊಂಡು ಪರಪಾಟಲು ಪಡುವುದು ಚಿತ್ರದ ವಸ್ತು. ಹೊರನೋಟಕ್ಕೆ ಕಾಮಿಡಿಯಂತೆ ಕಂಡರೂ ತೀವ್ರ ಸಾಮಾಜಿಕ ತುಡಿತವಿದ್ದ ಈ ಚಿತ್ರವೂ ಜನಪ್ರಿಯತೆ ಗಳಿಸುವುದರಲ್ಲಿ ಮಾತ್ರ ವಿಫಲವಾಯಿತು.

'೯೨ರ ಕನ್ನಡ ಚಿತ್ರರಂಗದ ಅತ್ಯಂತ ಪ್ರಮುಖ ಚಿತ್ರ-ಘಟನೆ ಎಂದರೆ ಮೂರು ವರ್ಷಗಳ ನಿವೃತ್ತಿನಂತರ ರಾಜ್‌ಕುಮಾರ್ ಅವರು ಚಿತ್ರಪ್ರೇಮಿಗಳ ಒತ್ತಾಯದ ಮೇಲೆ ಮತ್ತೆ ಬಣ್ಣದ ಬದುಕಿಗೆ ಹಿಂತಿರುಗಿದ್ದು. ದೊರೆ-ಭಗವಾನ್ ನಿರ್ದೇಶನದ ಅವರ ಚಿತ್ರ 'ಜೀವನ ಚೈತ್ರ'ನಾಯಕನ ಪಾತ್ರನಿರೂಪಣೆ ದೃಷ್ಟಿಯಿಂದ ಅವರದೇ ಹಿಂದಿನ ಚಿತ್ರಗಳಾದ ಕಸ್ತೂರಿ ನಿವಾಸ, ಬಂಗಾರದ ಮನುಷ್ಯ, ದೇವತಾ ಮನುಷ್ಯ ಮುಂತಾದವುಗಳಂತೆ ತ್ಯಾಗದ ಹಿನ್ನೆಲೆಯನ್ನೆ ಹೊಂದಿದ್ದರೂ, ರಾಜ್‌ಕುಮಾರ್ ಅಭಿನಯ ಇನ್ನೂ ಪಕ್ವವಾಗಿದೆಯೆನಿಸಿತು. ಅದರಲ್ಲೂ'ನಾದಮಯ, ಈ ಲೋಕವೆಲ್ಲ ನಾದಮಯ' ಗೀತೆಗೆ ರಂಗರಾವ್ ಅವರ ಸಂಗೀತ ಹಾಗೂ ಆ ಸನ್ನಿವೇಶದ ಚಿತ್ರಣ ಮತ್ತು ಅದರಲ್ಲಿ ರಾಜ್ ಅಭಿನಯ ಅವಿಸ್ಮರಣೀಯ. ತಾಯಿಯಾಗಿ ಈ ಚಿತ್ರದಲ್ಲಿ ಪಂಢರಿಬಾಯಿ ಅಭಿನಯ ನೆನಪಿನಲ್ಲಿ ಉಳಿಯುವಂಥದಾಗಿತ್ತು. ಇಪ್ಪತ್ತೈದು ಕೇಂದ್ರಗಳಲ್ಲಿ ಶತದಿನೋತ್ಸವ ದಾಖಲೆ ಸ್ಥಾಪಿಸಿದ ಚಿತ್ರ ಇದು.

ಅಲ್ಲದೆ ಕಥಾವಸ್ತುವಿನಲ್ಲಿ ರಾಜ್‌ಕುಮಾರ್ ವೈಯಕ್ತಿಕ ಜೀವನದೊಂದಿಗೆ ಪ್ರೇಕ್ಷಕರು ಕಾಕತಾಳೀಯವಾಗಿ ಕಂಡುಕೊಂಡ ಸಾಮ್ಯ ಈ ಚಿತ್ರದ ಬಗ್ಗೆ ವಿಶೇಷ ಕುತೂಹಲ ಹುಟ್ಟಿಸಿತು. ರಾಜ್ಯಸರ್ಕಾರಕ್ಕೆ ಸಮಾನಾಂತರ ಅಧಿಕಾರದ ನೆಲೆ ಎಂಬಷ್ಟು ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದ ಅರಕ್ ಉದ್ಯಮದ ವಿರುದ್ಧ ರಾಜ್‌ಕುಮಾರ್ ರಣಕಹಳೆ ನಿಜಜೀವನದಲ್ಲೂ ಒಂದೆರಡೆಡೆ ಸಾಮಾನ್ಯ ಜನರಿಂದ ಅಂತಹದೇ

ಪ್ರತಿಕ್ರಿಯೆ ಹುಟ್ಟಿಸಿತು. ಈ ಚಿತ್ರದ ಪ್ರಭಾವ ರಾಜ್ ಅಭಿಮಾನಿಗಳ ಮೇಲೆ ಎಷ್ಟರ ಮಟ್ಟಿಗೆ ಆಯಿತೆಂದರೆ ಚಿತ್ರ ಬಿಡುಗಡೆಯಾದ ಹೊಸದರಲ್ಲೆ ತಮ್ಮ ಬಂಧುವೊಬ್ಬರ ಡಿಸ್ಟಿಲರಿಯೊಂದರ ಉದ್ಘಾಟನೆಗೆ ರಾಜ್ ಅವರು ಒಪ್ಪಿಕೊಂಡಿದ್ದಾಗ ಅವರ ಅಭಿಮಾನಿಗಳು ಅವರು ಅಲ್ಲಿಗೆ ಹೋಗದಂತೆ ಮನವೊಲಿಸಿ ತಡೆದರು. ಅಂದಹಾಗೆ 'ಜೀವನ ಚೈತ್ರ' ದೊರೆ-ಭಗವಾನ್ ಜೋಡಿಯ ಕೊನೆಯ ಚಿತ್ರವಾಯಿತು.

ಹೊಸ ನಿರ್ದೇಶಕನ ಪ್ರಥಮ ಪ್ರಯತ್ನ ಎಂಬ ಕಾರಣದಿಂದ ಮಹೇಂದರ್ ಅವರ 'ಪ್ರಣಯದ ಪಕ್ಷಿಗಳು' ಗಮನಾರ್ಹ ನಂತರ ಬಿಡುಗಡೆಯಾದ 'ಕುಬಿ ಮತ್ತು ಇಯಾಲ' ಈ ವರ್ಷದ ಲೆಕ್ಕಕ್ಕೆ ಸೇರಿದರೂ 'ಮೈಸೂರು ಮಲ್ಲಿಗೆ' ಯಂತೆಯೇ ಸಾಕಷ್ಟು ಮುಂಚೆಯೇ ತಯಾರಾಗಿದ್ದ ಚಿತ್ರ. ಸಾಮಾಜಿಕ ಪ್ರಸ್ತುತತೆ, ಜೀವನಕ್ಕೆ ಬಹು ಹತ್ತಿರವಾದ ನಿರೂಪಣೆ, ಅಭಿನಯ ಇವೆಲ್ಲ ದೃಷ್ಟಿಗಳಿಂದ ಇದು ವರ್ಷದ ಶ್ರೇಷ್ಠ ಚಿತ್ರಗಳ ಸಾಲಿನಲ್ಲಿ ನಿಲ್ಲಬಹುದಾದ್ದು. ಮೂಢನಂಬಿಕೆಗಳ ವಿರುದ್ಧ ಹೋರಾಡುವ ವೈದ್ಯನೊಬ್ಬ ತನಗರಿವಿಲ್ಲದಂತೆಯೇ ಆ ಹಳ್ಳಿಯಲ್ಲಿ ತಾನೇ ಮೂಢನಂಬಿಕೆಯೊಂದರ ಕೇಂದ್ರವಾಗುವ ಚಿತ್ರದ ಕಥಾವಸ್ತು ತೀಕ್ಷ್ಣ ವಿಡಂಬನೆ.

ಸಿದ್ಧಲಿಂಗಯ್ಯನವರ 'ಬಾ ನನ್ನ ಪ್ರೀತಿಸು' ಸ್ವಲ್ಪ ಮಟ್ಟಿಗೆ ಕುಟುಂಬಯೋಜನೆ ಪ್ರಚಾರದ ಚಿತ್ರದಂತಿತ್ತು. ಆದರೆ ಹಳ್ಳಿಯ ಜನಜೀವನವನ್ನು ಚಿತ್ರಿಸುವುದರಲ್ಲಿ ಅವರು ಸಿದ್ಧಹಸ್ತರೆಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿತು. ಇತರ ಚಿತ್ರಗಳಲ್ಲಿ ಅಶ್ಲೀಲ ಎನ್ನಬಹುದಾಗಿದ್ದ ಸಂಭಾಷಣೆ ಈ ಚಿತ್ರದ ಚೌಕಟ್ಟಿನಲ್ಲಿ ತೀರ ಸಹಜವಾಗಿ ಮೂಡಿಬಂದಿದ್ದು ಇನ್ನೊಂದು ಸ್ವಾರಸ್ಯಕರ ಅಂಶ.

ಅಲ್ಪವೆಚ್ಚದಲ್ಲಿ ತಯಾರಾಗಿದ್ದರೂ ನಿರೀಕ್ಷೆಯ ಪ್ರಮಾಣಕ್ಕೆ ಹೋಲಿಸಿದಂತೆ ಭಾರಿ ನಿರಾಶೆಯುಂಟು ಮಾಡಿದ ಚಿತ್ರವೆಂದರೆ ರವೀಯವರ 'ಹರಿಕೆಯ ಕುರಿ' ಡಾ.ಚಂದ್ರಶೇಖರ ಕಂಬಾರರ ಜನಪ್ರಿಯ ನಾಟಕವನ್ನಾಧರಿಸಿದ ಈ ಚಿತ್ರ ಸಹ ನಮ್ಮ ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ವಿಡಂಬನೆಯಾಗಿದ್ದರೂ ನಾಯಕನಟ ವಿಷ್ಣುವರ್ಧನರ ಪಾತ್ರನಿರೂಪಣೆಯಲ್ಲಿ ರವೀಯವರಿಗೆ ವ್ಯಾಪಾರಿ ಚಿತ್ರಗಳ ಹ್ಯಾಂಗೋವರ್‌ನಿಂದ ಹೊರಬರಲಾಗದಿದ್ದುದು ಹಾಗೂ ಸಂಭಾಷಣೆಯೇ ಪ್ರಧಾನವಾಗಿದ್ದ ದುರ್ಬಲ ಚಿತ್ರನಾಟಕ, ಕಲೆ ಜನಪ್ರಿಯತೆ ಎರಡು ದೃಷ್ಟಿಗಳಿಂದಲೂ ಚಿತ್ರದ ವೈಫಲ್ಯಕ್ಕೆ ಕಾರಣವಾಯಿತು.

ಉತ್ತರ ಕರ್ನಾಟಕದ ಜನಪದ ಕಥೆಯನ್ನಾದರಿಸಿದ ಸುಂದರಕೃಷ್ಣ ಅರಸ್ ನಿರ್ದೇಶನದ 'ಸಂಗ್ಯಾಬಾಳ್ಯ' ಗೆಳೆತನ ಪ್ರಣಯ ಮತ್ತು ಸೇಡಿನ ಕಥೆಯನ್ನು ಮಾತ್ರ ಹೊಂದಿದ್ದರೂ ಆ ಪ್ರದೇಶದ ವಿಶಿಷ್ಟ ಸೊಗಡಿನಿಂದ ಹಾಗೂ ಪ್ರಭಾವಶಾಲಿ ನಿರೂಪಣೆಯಿಂದ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು. ಪುಟ್ಟಣ್ಣ ಕಣಗಾಲರ ಗರಡಿಯಲ್ಲಿ ತಯಾರಾದ ಸುಂದರಕೃಷ್ಣ ಅರಸರು ಈ ಚಿತ್ರವನ್ನು ಅವರಿಗೆ ತಮ್ಮ ಗುರುದಕ್ಷಿಣೆ ಎಂದು ಕರೆದುದನ್ನು ಸಾರ್ಥಕಗೊಳಿಸುವಂತೆ ಹಲವು ದೃಶ್ಯಗಳ

ಸಂಯೋಜನೆ ಪುಟ್ಟಣ್ಣನವರದೇ ನೆನಪು ಬರುವಂತೆ ಇತ್ತು. ನಾಯಕನ ಮನೆಯ ಗೌರವ ಕೆಳಗೆ ಬಿದ್ದುದನ್ನು ಉಪ್ಪರಿಗೆಯಿಂದ ನೆಲ ಅಂತಸ್ತಿಗೆ ದಿಢೀರನೆ ಕ್ಯಾಮೆರಾ ಕೋನ ಬದಲಾವಣೆಯಲ್ಲಿ ಸಾಂಕೇತಿಕವಾಗಿ ತೋರಿದುದು ಅಂತಹ ಒಂದು ದೃಶ್ಯ 'ಮೈಸೂರು ಮಲ್ಲಿಗೆ' ಯಂತೆಯೇ ಈ ಚಿತ್ರ ಸಹ ಭಾರತದ ಅಂತಾರಾಷ್ಟ್ರೀಯ ಚಿತ್ರೋತ್ಸವದ ಪನೋರಮ ವಿಭಾಗಕ್ಕೆ ಆಯ್ಕೆಯಾದುದು ಅತ್ಯಂತ ಸೂಕ್ತವಾಗಿತ್ತು. ಕರ್ನಾಟಕವಲ್ಲದೆ ಇನ್ನೆಲ್ಲೂ ತಯಾರಾಗಲು ಸಾಧ್ಯವಿಲ್ಲದಷ್ಟು ಪ್ರಾತಿನಿಧಿಕ ಚಿತ್ರಗಳು ಇವು.

ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಪಾತ್ರವಹಿಸಿದ್ದ ಚಿತ್ರ ಎಂಬ ಒಂದೇ ಕಾರಣದಿಂದ ಕರ್ನಾಟಕ ಮಾತ್ರವೇ ಅಲ್ಲದೆ ದೇಶಾದ್ಯಂತ ಅಬ್ಬರದ ಪ್ರಚಾರ ಗಳಿಸಿದ ರಾಜಕೀಯ ಮುಖವಾಡದ ಚಿತ್ರ, ಬಿ. ರಾಮಮೂರ್ತಿಯವರ 'ಮರಣ ಮೃದಂಗ' ವರ್ಷದ ಭಾರಿ ವೈಫಲ್ಯಗಳಲ್ಲಿ ಒಂದು.

ಇನ್ನು ಬೀ.ಮ. ನಾಗರಾಜ್, ವಿಜಯಲಕ್ಷ್ಮಿ ವಿಶುಕುಮಾರರ 'ಪ್ರಜೆಗಳು ಪ್ರಭುಗಳು' ವಸ್ತುವಿನ ದೃಷ್ಟಿಯಿಂದ ನಮ್ಮ ರಾಜಕೀಯ ಚಿತ್ರಗಳಿಗೆ ಹೆಚ್ಚು ಭಿನ್ನವಲ್ಲದಿದ್ದರೂ ನಿರೂಪಣೆ ಪ್ರಬುದ್ಧವಾಗಿತ್ತು. ಮುಖ್ಯ ಪಾತ್ರದಲ್ಲಿ ದೇವರಾಜ್ ಅಭಿನಯ ವಿಶೇಷ ಗಮನ ಸೆಳೆಯಿತು. ಮೈಸೂರು ಲೋಕೇಶ್‌ಗೆ ಶ್ರೇಷ್ಠ ಪೋಷಕನಟ ಪ್ರಶಸ್ತಿ ತಂದುಕೊಟ್ಟ ಚಿತ್ರ ಇದು.

ಏಳು ಬೀಳು

ಉಳಿದಂತೆ ಚಿತ್ರಗಳಿಗಿಂತ ಮುಖ್ಯವಾಗಿ ಪ್ರಮುಖ ಕಲಾವಿದರುಗಳ ಏಳು ಬೀಳು ಹೆಚ್ಚು ಗಮನಾರ್ಹ ಎನಿಸುತ್ತದೆ. ಇಂತಹದರಲ್ಲಿ ತುಂಬಾ ಭಾರಿಯಾದುದೆಂದರೆ ಕನ್ನಡ ಚಿತತ್ರರಂಗದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಇಡೀ ಚಿತ್ರರಂಗವನ್ನೆ ತನ್ನ ತಾಳಕ್ಕೆ ತಕ್ಕಂತೆ ಕುಣಿಯುವಷ್ಟು ಪ್ರಭಾವಶಾಲಿಯಾಗಿ ಬೆಳೆದ ಮಾಲಾಶ್ರೀ ಈ ವರ್ಷ ಬಿಡುಗಡೆಯಾದ ೧೯ ಚಿತ್ರಗಳಲ್ಲೂ ಗಲ್ಲಾಪೆಟ್ಟಿದೃಷ್ಟಿಯಿಂದ ಅಷ್ಟಕ್ಕಷ್ಟೆ ಎನಿಸಿ ಕೊಂಡದ್ದು. ಆಕೆ ಅಭಿನಯಿಸಿದ ಚಿತ್ರಗಳು ಬೆಳ್ಳಿ ಕಾಲುಂಗುರ, ಹಠಮಾರಿ ಹೆಣ್ಣು ಕಿಲಾಡಿ ಗಂಡು, ಶಿವನಾಗ, ಬೆಳ್ಳಿಮೋಡಗಳು, ಸಿಂಧೂರ ತಿಲಕ, ವಜ್ರಾಯುಧ, ಮಾಲಾಶ್ರೀ ಮಾಮಾಶ್ರೀ, ಸೋಲಿಲ್ಲದ ಸರದಾರ, ನಗರದಲ್ಲಿ ನಾಯಕರು, ಕನಸಿನ ರಾಣಿ, ಸಾಹಸಿ, ಪ್ರೇಮ ಸಂಗಮ, ಮೇಘ ಮಂದಾರ, ಗೃಹಲಕ್ಷ್ಮಿ, ಹಳ್ಳಿ ಕೃಷ್ಣ ಡೆಲ್ಲಿ ರಾಧ, ಮನಮೆಚ್ಚಿದ ಸೊಸೆ, ಸ್ನೇಹದ ಕಡಲಲ್ಲಿ, ಮರಣ ಮೃದಂಗ, ಕಲಿಯುಗ ಸೀತೆ ಇವುಗಳಲ್ಲಿ 'ಮನ ಮೆಚ್ಚಿದ ಸೊಸೆ' ಯೊಂದೇ ಇದ್ದುದರಲ್ಲಿ ಪರವಾಗಿಲ್ಲ ಎನಿಸಿಕೊಂಡಿತು.

ಇದಕ್ಕೆ ವ್ಯತಿರಿಕ್ತವಾದ ಬೆಳವಣಿಗೆ ಜಗ್ಗೇಶ್‌ದು. ಕಪ್ಪು ಬಣ್ಣದ, ಸಾಧಾರಣ ರೂಪಿನ ಈ ನಟ ಹಲವು ವರ್ಷಗಳು ಸಾಧಾರಣ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು ಈ ವರ್ಷ 'ತರ್ಲೆ ನನ್ಮಗ' ಚಿತ್ರದ ನಾಯಕ ಪಾತ್ರಕ್ಕೆ ಆಯ್ಕೆಯಾದರು. ಆದರೆ ಅದಕ್ಕೆ

ಮೊದಲೇ ಬಿಡಿಗಡೆಯಾದದ್ದು 'ಭಂಡ ನನ್ನ ಗಂಡ' ಸಾಂಪ್ರದಾಯಿಕವಲ್ಲದ ಹೆಸರಿನ ಈ ಚಿತ್ರಗಳ ಜತೆಗೆ'ಸೂಪರ್ ನನ್ನ ಮಗ' 'ಅಲ್ಲಿ ರಾಮಾಚಾರಿ ಇಲ್ಲಿ ಬ್ರಹ್ಮಚಾರಿ' ಚಿತ್ರಗಳೂ ಪ್ರಚಂಡ ಯಶಸ್ಸು ಗಳಿಸಿ '೯೨ರಲ್ಲಿ ಮಾಲಾಶ್ರೀ ಪಡೆದಿದ್ದ ಅಗ್ರಸ್ಥಾನವನ್ನು'೯೩ರಲ್ಲಿ ಜಗ್ಗೇಶ್ ಗಳಿಸಬಹುದೇನೋ ಎಂಬ ನಿರೀಕ್ಷೆ ಮೂಡಿಸಿತು.

ಇನ್ನು ಹಿರಿಯ ನಾಯಕರಲ್ಲಿ ವಿಷ್ಣುವರ್ಧನ್ ನಟಿಸಿದ ರಾಜಾಧಿರಾಜ, ರವಿವರ್ಮ, ಹರಕೆಯ ಕುರಿ, ನನ್ನ ಶತ್ರು ಈ ನಾಲ್ಕು ಚಿತ್ರಗಳೂ ನೆಲ ಕಚ್ಚಿದವು. ಅಂಬರೀಶ್‌ರ ಎಂಟೆದೆ ಭಂಟ, ಮೈಸೂರು ಜಾಣ, ಸೋಲಿಲ್ಲದ ಸರದಾರ, ಸಪ್ತಪದಿ, ಪ್ರೇಮಸಂಗಮ, ಮೇಘ ಮಂದಾರ, ಮಣ್ಣಿನ ದೋಣಿ, ಮಲ್ಲಿಗೆ ಹೂವೆ ಚಿತ್ರಗಳಲ್ಲಿ ಮಣ್ಣಿನ ದೋಣಿ ಯಶಸ್ವಿಯೆನಿಸಿದರೆ, ರೀಮೇಕ್ ಚಿತ್ರ 'ಮಲ್ಲಿಗೆ ಹೂವೆ' ಸಾಧಾರಣ ಎನಿಸಿಕೊಂಡಿತು. ಬಿಚ್ಚೋಲೆ ಗೌರಮ್ಮ ಎನಿಸಿಕೊಂಡಿದ್ದ ಸುಧಾರಾಣಿ 'ಬಿಚ್ಚು' ಪಾತ್ರದಲ್ಲಿ ಕಾಣಿಸಿಕೊಂಡಿದ್ದುದೊಂದೇ 'ಮಣ್ಣಿನ ದೋಣಿ'ಯ ವೈಶಿಷ್ಟ್ಯವಾಯಿತು. ಅನಂತ್‌ನಾಗ್‌ರ 'ಉಂಡೂ ಹೋದ ಕೊಂಡೂ ಹೋದ', 'ಗಣೇಶ ಸುಬ್ರಹ್ಮಣ್ಯ', 'ಒಂದು ಸಿನಿಮಾ ಕತೆ'ಯಲ್ಲಿ ಮೂರೂ ನಿರಾಶಾದಾಯಕವೆನಿಸಿದವು. ಅಂತೆಯೇ ಪ್ರಭಾಕರರ 'ಸಮರ ಸಿಂಹ', 'ಪುಟ್ಟ ಹೆಂಡ್ತಿ' ಎರಡು ಚಿತ್ರಗಳೂ ಸೋತವು.

ರಾಜ್‌ಕುಮಾರ್ 'ಜೀವನ ಚೈತ್ರ'ದಲ್ಲಿ ಪ್ರಚಂಡ ಯಶಸ್ಸುಗಳಿಸಿದರೆ ಅವರ ಪುತ್ರರಲ್ಲಿ ಶಿವರಾಜ್‌ಕುಮಾರ್ 'ಮಿಡಿದ ಶೃತಿ'ಯ ಗೆಲುವಿನ ನಂತರ ಪುರುಷೋತ್ತಮ, ಮಾವನಿಗೆ ತಕ್ಕ ಅಳಿಯ ಎರಡು ಚಿತ್ರಗಳಲ್ಲೂ ಸೋಲುಂಡರು. ರಾಘವೇಂದ್ರ ರಾಜ್‌ಕುಮಾರರ ಸಾಹಸ ಪ್ರಧಾನ ಚಿತ್ರ 'ಭರ್ಜರಿಗಂಡು' ಸಹ ವಿಫಲವೆನಿಸಿಕೊಂಡಿತು. ರಾಜ್‌ಕುಮಾರ್‌ರ ಪುತ್ರರೆಂಬ ಹೆಸರು ಇವರಿಗೆ ನಿರಂತರ ರಕ್ಷಾಕವಚ ಆಗಲಾರದು ಎಂಬುದನ್ನು ಈ ಚಿತ್ರಗಳು ಸಾಬೀತು ಪಡಿಸಿದವು.

ಕುಮಾರ್ ಬಂಗಾರಪ್ಪನವರ 'ಕ್ಷೀರ ಸಾಗರ' ಖಾಲಿ ಚಿತ್ರಮಂದಿರದಲ್ಲಿ ಶತದಿನೋತ್ಸವ ಕಂಡ ಚಿತ್ರವೆಂಬ ಹೆಗ್ಗಳಿಕೆ ಪಡೆಯಿತು. 'ಬೆಳ್ಳಿಯಪ್ಪ ಬಂಗಾರಪ್ಪ' ಅಭಿನಯದ ದೃಷ್ಟಿಯಿಂದ ಸ್ವಲ್ಪ ಮೇಲೆನಿಸಿತು. ಅವರೇ ಅಭಿನಯಿಸಿದ ಅಮರ ಪ್ರೇಮ, ಝೇಂಕಾರ ಹೇಳಹೆಸರಿಲ್ಲವಾದವು.

ಶಶಿಕುಮಾರರ ಹೊಸ ರಾಗ, ಹೆಂಡ್ತೀರೇ ಹುಷಾರ್, ಎದುರು ಮನೆ ಗಂಡ ಪಕ್ಕದ್ಮನೆ ಹೆಂಡ್ತಿ, ಕನಸಿನ ರಾಣಿ, ಹೊಸ ಕಳ್ಳ ಹಳೇ ಕುಳ್ಳ, ಆತ್ಮಬಂಧನ, ಗಂಧರ್ವ, ಬಾ ನನ್ನ ಪ್ರೀತಿಸು, ಸೂರಿ ನಿರ್ದೇಶನದ ಚಿತ್ರಗಳಲ್ಲಿ ಆತ್ಮಬಂಧನ, ಬಾ ನನ್ನ ಪ್ರೀತಿಸು ಯಶಸ್ವಿಯಾದವು. ರಾಮನಾಥ್ ನಿರ್ದೇಶನದ 'ಗಂಧರ್ವ' ಬಹುಶಃ ಅತಿ ಕೆಟ್ಟ ಚಿತ್ರ 'ಹೊಸ ಕಳ್ಳ ಹಳೇ ಕುಳ್ಳ' ಅಲ್ಪ ವಿರಾಮದ ನಂತರ ದ್ವಾರಕೀಶ್‌ರನ್ನು ಮತ್ತೆ ಕುಳ್ಳ ಸರಣಿಗೆ ಕರೆತಂದಿತೆಂಬ ದೃಷ್ಟಿಯಿಂದ ಮಾತ್ರ ಆಸಕ್ತಿ ಕೆರಳಿಸಿತು.

ರವಿಚಂದ್ರನ್ 'ಹಳ್ಳಿ ಮೇಷ್ಟ್ರು' ರೀಮೇಕ್ ಚಿತ್ರದಲ್ಲಿ ಗಲ್ಲಾಪೆಟ್ಟಿ ಜಯಗಳಿಸಿದರು. 'ಗುರುಬ್ರಹ್ಮ' ದಲ್ಲಿನ ದ್ವಿಪಾತ್ರದಲ್ಲಿ ನಟನಾಗಿ ಗಮನಸೆಳೆದರು.

ಚಿತ್ರೋತ್ಸವ

೧೯೮೦ರ ನಂತರ ಮತ್ತೆ ಬೆಂಗಳೂರಿನಲ್ಲಿ ಭಾರತದ ಅಂತರರಾಷ್ಟ್ರೀಯ ಚಿತ್ರೋತ್ಸವ ನಡೆದದ್ದು ೧೯೯೨ರಲ್ಲೆ. ಆದರೆ ಹಿಂದಿನ ಚಿತ್ರೋತ್ಸವದ ಉತ್ಸಾಹ ಸಂಭ್ರಮ ಈ ಚಿತ್ರೋತ್ಸವದಲ್ಲಿ ಇರಲಿಲ್ಲ. ಕಾವೇರಿ ವಿವಾದದ ಕರಾಳ ನೆರಳು ಉತ್ಸವದ ಮೇಲೆ ಹರಡಿತ್ತು. ಉತ್ಸವ ನಡೆಯಲೇ ಕೂಡದು ಎಂಬ ಒಂದು ಗುಂಪಿನ ಧ್ವನಿ ಪ್ರಬಲವಾಗಿದ್ದು, ಅದೇ ಕಾರಣದ ಮೇಲೆಯೇ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ರಾಜೇಂದ್ರಸಿಂಗ್ ಬಾಬು ಅಧಿಕಾರ ತ್ಯಜಿಸಿದರು. ಚಿತ್ರೋತ್ಸವವನ್ನು ಉದ್ಘಾಟಿಸುವಂತೆ ತಮ್ಮ ಸಮೀಪ ಬಂಧು, ಮುಖ್ಯಮಂತ್ರಿ ಬಂಗಾರಪ್ಪನವರಿಂದಲೇ ಒತ್ತಡ ಬಂದರೂ ರಾಜ್‌ಕುಮಾರ್ ನಿರಾಕರಿಸಿದರು. ಕಂಠೀರವ ಸ್ಟೇಡಿಯಂನಲ್ಲಿ ಬಿಗಿಯಾದ ಪೊಲೀಸ್ ಉಸ್ತುವಾರಿಯಲ್ಲೆ ಉದ್ಘಾಟನೆ ಸಮಾರಂಭ ನಡೆದರೂ ಚಿತ್ರನಿರ್ಮಾಪಕ ಕೋಡಳ್ಳಿ ಶಿವರಾಂ ಎಲ್ಲರ ಕಣ್ಣು ತಪ್ಪಿಸಿ ವೇದಿಕೆಯ ಮೇಲೆ ಬಂದು ಚಿತ್ರೋತ್ಸವದ ವಿರುದ್ಧ ಘೋಷಣೆಗಳನ್ನು ಕೂಗಿ ಬಂಧಿತರಾದರು.

ಕಲಾವಿದರ ಸಂಘದ ಬಹಿಷ್ಕಾರವಿದ್ದರೂ ಚಿತ್ರನಿರ್ಮಾಪಕನಾಗಿ ಚಿತ್ರೋತ್ಸವದಲ್ಲಿ ಪಾಲ್ಗೊಂಡ ನಟ ಜೈಜಗದೀಶ್ ತಮ್ಮ ಛಾಯಾಚಿತ್ರವನ್ನು ಅನುಮತಿ ಇಲ್ಲದೆ ತೆಗೆದನೆಂಬ ಕಾರಣದ ಮೇಲೆ ಸಂತೋಷ್-ನರ್ತಕಿ ಚಿತ್ರಮಂದಿರಗಳ ಮುಂದೆ ಪತ್ರಿಕಾ ಛಾಯಾಗ್ರಾಹಕ ಕೆ.ಎನ್. ನಾಗೇಶ್‌ಕುಮಾರ್ ಮೇಲೆ ಹಲ್ಲೆ ಮಾಡಿದ್ದು ಕರ್ನಾಟಕದ ಪತ್ರಕರ್ತರಿಂದ ತೀವ್ರ ಪ್ರತಿಭಟನೆಗೆ ಕಾರಣವಾಗಿ ರಾಷ್ಟ್ರೀಯ ಪತ್ರಿಕೆಗಳಲ್ಲಿ ಸುದ್ದಿ ಮೂಡಿತು. ಅನಂತರ ಕನ್ನಡ ಮತ್ತು ಸಂಸ್ಕೃತಿ ಸಚಿವ ಎಸ್. ರಮೇಶ್ ಅವರ ಮಧ್ಯಸ್ಥಿಕೆಯಲ್ಲಿ ಜೈಜಗದೀಶ್ ನಾಗೇಶ್‌ಕುಮಾರರ ಕ್ಷಮೆ ಯಾಚಿಸಿದರು.

ಚಿತ್ರೋತ್ಸವ ನಡೆದ ಚಿತ್ರಮಂದಿರಗಳಲ್ಲಿನ ಅವ್ಯವಸ್ಥೆ, ತಾಂತ್ರಿಕ ದೋಷಗಳು ಅಂತಾರಾಷ್ಟ್ರೀಯ ಚಿತ್ರೋತ್ಸವಗಳ ಕೇಂದ್ರದಿಂದ ಖಂಡನೆಗೆ ಗುರಿಯಾಯಿತು. '೮೦ ಚಿತ್ರೋತ್ಸವ ಸಮಯದಲ್ಲಿ ಬೆಂಗಳೂರಿನ ಚಿತ್ರಮಂದಿರಗಳು ವಿಶ್ವದಲ್ಲೆ ಶ್ರೇಷ್ಠ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದುದನ್ನು ನೆನೆದರೆ ಇದೊಂದು ವಿಪರ್ಯಾಸ.

ವೀರಣ್ಣ ಸ್ಮಾರಕ

ಕನ್ನಡ ಚಿತ್ರೋದ್ಯಮದ ಪ್ರವರ್ತಕರಲ್ಲೊಬ್ಬರಾದ ಗುಬ್ಬಿ ವೀರಣ್ಣನವರ ಹೆಸರಿನಲ್ಲಿನ ರಂಗಮಂದಿರ ಗಾಂಧೀನಗರದಲ್ಲಿ ಮುಂಚೆ ಗುಬ್ಬಿ ಥಿಯೇಟರ್ ಇದ್ದ ಸ್ಥಳದಲ್ಲೆ ಬೆಂಗಳೂರು ನಗರಸಭೆಯಿಂದ ನಿರ್ಮಿತವಾಯಿತು. ಗುಬ್ಬಿ ಥಿಯೇಟರ್‌ನಲ್ಲಿ ಸಾಮಾನ್ಯ ನಟನಾಗಿ ಬಣ್ಣದ ಬದುಕು ಆರಂಭಿಸಿದ ರಾಜ್‌ಕುಮಾರ್ ಉದ್ಘಾಟನೆ ಸಮಾರಂಭದ ಪ್ರಮುಖ ಆಕರ್ಷಣೆಯಾಗಿದ್ದರು.

ಕರ್ನಾಟಕ ರತ್ನ

ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡ ನಾಡಿನ ಶ್ರೇಷ್ಠರನ್ನು ಗೌರವಿಸುವ ರಾಜ್ಯ ಸರ್ಕಾರದ ಎಂದಿನ ಸಂಪ್ರದಾಯದ ಜತೆಗೆ ಪ್ರಸ್ತುತ ವರ್ಷ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವ ನಿರ್ಧಾರವನ್ನು ಮುಖ್ಯಮಂತ್ರಿ ಬಂಗಾರಪ್ಪನವರು ಪ್ರಕಟಿಸಿದರು. ಕವಿ ಕುವೆಂಪು ಅವರಿಗೂ ಈ ಪ್ರಶಸ್ತಿ ಸಂದಿತು. ಈ ಪ್ರಶಸ್ತಿಯನ್ನು ವಿಧಾನ ಸೌಧದೆದುರು ನಡೆದ ಭವ್ಯ ಸಮಾರಂಭದಲ್ಲಿ ರಾಜ್‌ಕುಮಾರ್ ಅವರಿಗೆ ನೀಡಲಾಯಿತು.

ಇದೇ ವರ್ಷ ಕಲ್ಯಾಣ್ ಕುಮಾರ್, ವಿಜಯನಾರಸಿಂಹ, ರಾಮಕೃಷ್ಣ, ಶಿವರಾಂ ಅವರುಗಳಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಯಿತು.

ನಟ ಕೆ.ಎಸ್. ಅಶ್ವತ್ಥರನ್ನು ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ ಆದ್ದೂರಿಯಾಗಿ ಸನ್ಮಾನಿಸಿತು.

ವಿಡಿಯೋ ಪಿಡುಗು

ಕೇಬಲ್ ಟೀವಿ ಹಾಗೂ ವಿಡಿಯೋ ಕಳ್ಳವ್ಯವಹಾರ ಇಡೀ ವರ್ಷ ಚಿತ್ರರಂಗದ ಮೇಲೆ ದುಷ್ಪರಿಣಾಮ ಬೀರಿತು. ವಿಡಿಯೋ ಪಿಡುಗನ್ನು ನಿವಾರಿಸುವ ಏಕ ಅಂಶ ಕಾರ್ಯಕ್ರಮದ ಮೇಲೆ ಮಾಜಿ ಸಚಿವ - ನಿರ್ಮಾಪಕ ಎಸ್.ರಮೇಶ್ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ನಿಂತು ಗೆದ್ದರು. ರಮೇಶ್ ಅವರ ಪರವಾಗಿ ಅಂಬರೀಷ್, ಶಿವರಾಜ್ ಕುಮಾರ್ ಮುಂತಾದ ನಟರು ಬಹಿರಂಗ ಪ್ರಚಾರ ನಡೆಸಿದ್ದು ಚೇಂಬರ್ ಚುನಾವಣೆ ಪರಂಪರೆಗೆ ಹೊಸ ಆಯಾಮ ನೀಡಿತು. ಮಂಡಲಿಯ ಕಾರ್ಯಸಮಿತಿಗೆ ನಟಿ - ನಿರ್ಮಾಪಕಿ ಜಯಮಾಲಾ ಆಯ್ಕೆಯಾಗಿದ್ದು ಒಂದು ದಾಖಲೆಯಾಯಿತು.

ಪತ್ರಕರ್ತರ ಸಂಘಟನೆ

ಸುಮಾರು ಒಂದೂವರೆ ದಶಕದಿಂದ ರಾಜ್ಯ ಚಲನಚಿತ್ರ ಪತ್ರಕರ್ತರ ಏಕಮಾತ್ರ ಪ್ರಾತಿನಿಧಿಕ ಸಂಘಟನೆಯಾಗಿದ್ದ ಕರ್ನಾಟಕ ಚಲನಚಿತ್ರ ಪತ್ರಕರ್ತರ ಪರಿಷತ್ತಿಗೆ ಸಮಾನಾಂತರವಾಗಿ ಈ ವರ್ಷ ಕರ್ನಾಟಕ ಚಲನಚಿತ್ರ ಪತ್ರಕರ್ತರ ವೇದಿಕೆ ಜನ್ಮತಾಳಿ ತನ್ನ ಪ್ರಥಮ ಚಟುವಟಿಕೆಯಾಗಿ ಚಿತ್ರೋದ್ಯಮದ ಬಗ್ಗೆ ವಿಚಾರ ಸಂಕಿರಣ ಏರ್ಪಡಿಸಿತು. ಶ್ಯಾಂ ಬೆನೆಗಲ್, ಸಿ.ಎಚ್. ಆತ್ಮಾ ಮುಂತಾದವರು ಭಾಗವಹಿಸಿದರು. ಪತ್ರಕರ್ತರ ಎರಡು ಸಂಘಟನೆಗಳ ಬೇರುಗಳೂ ಒಂದೇ ಆಗಿದ್ದು ಅಗತ್ಯವಾದಾಗ ಎರಡು ಸಂಘಟನೆಗಳೂ ಒಟ್ಟಿಗೇ ಕಾರ್ಯಪ್ರವೃತ್ತವಾಗುವುದೆಂದು ವೇದಿಕೆಯ ಅಧ್ಯಕ್ಷ ವಿ.ಎನ್. ಸುಬ್ಬರಾವ್ ಉದ್ಘಾಟನೆ ಸಮಾರಂಭದಲ್ಲಿ ಸ್ಪಷ್ಟಪಡಿಸಿದರು.

ಅಗಲಿಕೆ

ಕನ್ನಡ ಚಿತ್ರರಂಗಕ್ಕೆ ಕುಲಗೌರವ, ನಾಗರಹಾವು ಮುಂತಾದ ಭವ್ಯ ಚಿತ್ರಗಳನ್ನು ನೀಡಿದ ಹಾಗೂ ಗಾಂಧೀನಗರದ ಪ್ರತಿಷ್ಠಿತ ಉದ್ಯಮಿಗಳಲ್ಲಿ ಒಬ್ಬರಾಗಿದ್ದ ಈಶ್ವರಿ ಸಂಸ್ಥೆಯ ಎನ್. ವೀರಾಸ್ವಾಮಿಯವರು ಸ್ವಲ್ಪ ಕಾಲದ ಅಸ್ವಾಸ್ಥ್ಯದ ನಂತರ ನಿಧನರಾದರು.

ಇನ್ನೂ ಉದಯೋನ್ಮುಖರಾಗಿದ್ದ ಪ್ರತಿಭಾವಂತ ನಟ ಮೈಸೂರು ಲೋಕೇಶ್ ಪ್ರೇಮಪ್ರಕರಣವೊಂದರಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದು ಈ ವರ್ಷ ಚಿತ್ರರಂಗವನ್ನು ಬರಸಿಡಿಲಿನಂತೆ ಅಪ್ಪಳಿಸಿದ ದುರ್ಘಟನೆ. ಅವರೊಂದಿಗೆ ವಿಷಪ್ರಾಶನ ಮಾಡಿದ ಡಬ್ಬಿಂಗ್ ಕಲಾವಿದೆ ಸರ್ವಮಂಗಳಾ ನಂತರ ವೈದ್ಯಕೀಯ ಚಿಕಿತ್ಸೆಯಿಂದ ಚೇತರಿಸಿಕೊಂಡು ಮತ್ತೆ ಚಿತ್ರರಂಗಕ್ಕೆ ಮರಳಿದರು.



ಜೀವನ ಚೈತ್ರದಲ್ಲಿ ರಾಜಕುಮಾರ್ ಮತ್ತು ಮಾಧವಿ



ಅಂತರಾಷ್ಟ್ರೀಯ ಚಿತ್ರೋತ್ಸವದ ಪನೋರಮ ವಿಭಾಗಕೆ ಆಯ್ಕೆಯಾದ 'ಸಂಗ್ಯಾ ಬಾಳ್ಯ' ಚಿತ್ರದಲ್ಲಿ ರಾಮಕೃಷ್ಣ ಮತ್ತು ಉಮಾಶ್ರೀ

ಕ್ರೀಡಾ ಚಟುವಟಿಕೆ

— ಕೆ.ಎಂ. ಶ್ರೀನಿವಾಸಗೌಡ

ಈ ವರ್ಷದಲ್ಲಿ ಕರ್ನಾಟಕದ ಕ್ರೀಡಾಪಟುಗಳು ಸಾಧಿಸಿದ್ದರ ಬಗ್ಗೆ ಬರೆಯುವುದರ ಜತೆಗೆ, ಕ್ರೀಡೆಯ ಬಗ್ಗೆ ಈ ಲೇಖನ ಬಹುಶಃ ಮೊದಲನೆಯದಾಗಿರುವ ಸಾಧ್ಯತೆ ಇರುವುದರಿಂದ ಕರ್ನಾಟಕದ ಇದುವರೆಗಿನ ಸಾಧನೆಗಳು ಮತ್ತು ಇದಕ್ಕಿಂತ ಹೆಚ್ಚಾಗಿ ಕ್ರೀಡಾರಂಗದಲ್ಲಿ ಕರ್ನಾಟಕದವರು ಯಾವರೀತಿಯ ಅಡಿಪಾಯವನ್ನು ಹಾಕಿದ್ದಾರೆ, ಮುಂದೆ ಕ್ರೀಡೆಗಳು ನಮ್ಮಲ್ಲಿ ಹೇಗೆ ಬೆಳೆಯಬಹುದು, ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಾವು ಇದುವರೆಗೂ ಏನನ್ನು ಸಾಧಿಸಿದ್ದೇವೆ, ಏನನ್ನು ಸಾಧಿಸಬಹುದು, ಮುಂದಿನ ಪೀಳಿಗೆಗಳಿಗೆ ಆಟದಲ್ಲಿ ಮುಂದೆ ಬರುವಂತಹ ವಾತಾವರಣವನ್ನಾಗಲೀ, ಸೌಲಭ್ಯಗಳನ್ನಾಗಲೀ ನಿರ್ಮಿಸಿದ್ದೇವೆಯೇ ? ಈ ಕೆಲವು ಅಂಶಗಳ ಬಗ್ಗೆ ನನಗೆ ಅನ್ನಿಸಿದ್ದನ್ನು ಹೇಳಬೇಕು ಎಂದು ಕೊಂಡಿದ್ದೇನೆ.

ಕರ್ನಾಟಕದಲ್ಲಿನ ಕ್ರೀಡಾರಂಗದ ದೃಶ್ಯ ಭಾರತದಲ್ಲಿನ ಬೇರೆ ರಾಜ್ಯಗಳಲ್ಲಿನ ದೃಶ್ಯಕ್ಕಿಂತ ಕಣ್ಣು ಕುಕ್ಕುವ ರೀತಿಯಲ್ಲಿ ಬೇರೆಯಾಗಿರಲು ಸಾಧ್ಯವೇ ಇಲ್ಲ. ನಮ್ಮ ಈ ನತದೃಷ್ಟ ದೇಶದಲ್ಲಿ ಬಹುಪಾಲು ಜನಕ್ಕೆ ತಿನ್ನಲು ಅನ್ನವಿಲ್ಲದಿರುವಾಗ ಇನ್ನು ಆಟ ಆಡಲು ಸಾಧ್ಯವೇ? ಇತ್ತೀಚೆಗಂತೂ ನೀವು ಸೂಕ್ಷ್ಮವಾಗಿ ನೋಡಿದರೆ ವಿದ್ಯಾಭ್ಯಾಸದಂತೆ ಆಟದ ಮೈದಾನಗಳು ಸಹ ಸಾಹುಕಾರರ ಪಾಲಾಗುತ್ತಿವೆ. ನಾನು ಹೇಳುವುದನ್ನು ನಂಬದಿದ್ದರೆ ನಿಮ್ಮ ಹುಡುಗರನ್ನು ಟೆನ್ನಿಸ್ ಅಥವಾ ಬ್ಯಾಡ್ಮಿಂಟನ್ ಆಟಗಳಿಗೆ ಸೇರಿಸಲು ಪ್ರಯತ್ನಿಸಿ ನೋಡಿ. ಬೀದಿಗಳಲ್ಲಿ, ಗಲ್ಲಿಗಳಲ್ಲಿ ಕ್ರಿಕೆಟ್ ಆಡಿದರೆ ಸರಿ, ಈಗ ಕ್ರಿಕೆಟ್ ತಂಡವೊಂದನ್ನು ಸೇರಬೇಕಾದರೂ ಸಹ ಸುಮಾರು ಹಣ ಖರ್ಚಾಗುತ್ತದೆ. ಇದಕ್ಕೆಲ್ಲ ಕೆಲವು ಸಾಮಾಜಿಕ ಕಾರಣಗಳೂ ಇವೆ. ಇರಲಿ, ಮೊದಲು ಕೆಲವು ಕ್ರೀಡಾಪಟುಗಳ ಬಗ್ಗೆ ಹೇಳಿ ನಂತರ ಈ ವಿಷಯಕ್ಕೆ ಮತ್ತೆ ಬರೋಣ.

ಹೋದ ವರ್ಷದ ಲೆಕ್ಕ ಹಾಕಿದರೆ ಕರ್ನಾಟಕದ ಕ್ರೀಡಾಪಟುಗಳು ಕೆಲವೇ ಕೆಲವು ಕ್ರೀಡೆಗಳಲ್ಲಿ ಕೊಂಚ ಮಹತ್ತರವಾದದ್ದನ್ನು ಸಾಧಿಸಿದರೆನ್ನಬಹುದು.

ಮೊಟ್ಟಮೊದಲು ನಾಲಗೆಯ ತುದಿಗೆ ಬರುವ ಹೆಸರುಗಳೆಂದರೆ ಕ್ರಿಕೆಟ್‌ನ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್. ಈ ಇಬ್ಬರು ಆಟಗಾರರು ಭಾರತದ ಕ್ರಿಕೆಟ್ ತಂಡದ ಅವಿಭಾಜ್ಯ ಅಂಗಗಳಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಇತ್ತೀಚೆಗೆ ನಡೆದ ಟೆಸ್ಟ್ ಮತ್ತು ಒಂದು ದಿವಸದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಟೆಸ್ಟ್ ತಂಡದಿಂದ ಶ್ರೀನಾಥ್‌ನನ್ನು ಕೈಬಿಟ್ಟಿದ್ದದ್ದು ನಿಜ. ಅದೇಕೆಂದರೆ ಭಾರತದಲ್ಲಿ ಪಿಚ್‌ಗಳನ್ನು ಸ್ಪಿನ್ನರ್‌ಗಳಿಗೆ ಸಹಾಯ ಮಾಡುವಂತೆ ತಯಾರು ಮಾಡಲಾಗಿತ್ತು. ಇದರಿಂದಾಗಿ ಮೂರು ಜನ ಸ್ಪಿನ್ನರ್‌ಗಳನ್ನು ಆಡಿಸಬೇಕಾಗುತ್ತು.ಈ ಮೂರು ಸ್ಪಿನ್ನರ್‌ಗಳ ಜತೆ (ರಾಜೇಶ್ ಚೌಹಾಣ್, ರಾಜು, ಕುಂಬ್ಳೆ) ಮೂರು ಜನ ವೇಗದ ಬೌಲರ್‌ಗಳನ್ನು ಆಡಿಸಿದ್ದರೆ (ಕಪಿಲ್, ಪ್ರಭಾಕರ್ ಮತ್ತು ಶ್ರೀನಾಥ್) ಇವರೇ ಆರು ಜನಗಳಾಗಿ, ಒಬ್ಬ ವಿಕೇಟ್‌ಕೀಪರ್ ಕೂಡ ಸೇರಿಸಿದರೆ ಬರೀ ನಾಲ್ಕು ಸ್ಪೆಶಲಿಸ್ಟ್ ಬ್ಯಾಟ್ಸಮನ್‌ಗಳಿಗೆ ಅವಕಾಶ ಸಿಗುತ್ತಿತ್ತು. ಹೀಗಾಗಿ, ಶ್ರೀನಾಥ್‌ನನ್ನು ಟೆಸ್ಟ್‌ಗಳಲ್ಲಿ ಆಡಿಸಲಿಲ್ಲ. ಕುಂಬ್ಳೆ ಇಡೀ ಸರಣಿಯಲ್ಲಿ ಅತ್ಯುತ್ತಮವಾಗಿ ಬೌಲ್ ಮಾಡಿ ಭಾರತದ ಗೆಲುವಿಗೆ ಕಾರಣನಾದರೆ, ಒಂದು ದಿವಸದ ಪಂದ್ಯಗಳಲ್ಲಿ ಅತಿವೇಗವಾಗಿ ಬೌಲ್ ಮಾಡಿ ಎಲ್ಲರ ಮನಸೆಳೆದಿದ್ದಾನೆ. ಬೆಂಗಳೂರಿನ ಪಂದ್ಯದಲ್ಲಂತೂ ಶ್ರೀನಾಥ್ ಭಯೋತ್ಪಾದಕ ವೇಗದಲ್ಲಿ ಬೌಲ್ ಮಾಡಿದ. ಕಪಿಲ್, ಪ್ರಭಾಕರರ ನಂತರ ಮೂರನೆ ವೇಗದ ಬೌಲರ್ ಆಗಿ ಇಷ್ಟು ದಿನ ಉಪಯೋಗಿಸಿಕೊಳ್ಳಲ್ಪಡುತ್ತಿದ್ದರೂ, ಈಗ ಕ್ರಿಕೆಟ್‌ನ ಅನೇಕ ಪ್ರಭಾವೀ ವಲಯಗಳಲ್ಲಿ ಹೊಸ ಬಾಲನ್ನು ಶ್ರೀನಾಥ್‌ಗೇ ಕೊಡಬೇಕು ಎಂಬ ಸಲಹೆ ಬರಲು ಪ್ರಾರಂಭವಾಗಿದೆ. ಕಪಿಲ್ ಅಥವಾ ಮನೋಜ್ ತಾವಾಗಿಯೇ ಈ ಮುಂದೆ ಬರುವ ಶ್ರೀಲಂಕ ವಿರುದ್ಧದ ಸರಣಿಯಲ್ಲಿ ಹೊಸ ಚೆಂಡನ್ನು ಶ್ರೀನಾಥ್‌ಗೆ ಎಸೆದರೆ ಇಡೀ ದೇಶ ಚಪ್ಪಾಳೆ ಹೊಡೆಯುವುದರಲ್ಲಿ ಸಂದೇಹವಿಲ್ಲ. ಕಣ್ಣೀರು ಸುರಿಸಿದರೂ ಆಶ್ಚರ್ಯವಿರುವುದಿಲ್ಲ.

ಅದಿರಲಿ, ನಮ್ಮಲ್ಲಿರುವ ಕ್ರಿಕೆಟ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಹೇಳಬೇಕು. ಏಕೆಂದರೆ : ಕರ್ನಾಟಕ ಇನ್ನೂ ಈ ರೀತಿಯ ಆಟಗಾರರನ್ನು ರೂಪಿಸಲು ಸಾಧ್ಯವೇ ಎಂಬ ಪ್ರಶ್ನೆ ಸಾಮಾಜಿಕ ಪ್ರಶ್ನೆ ; ಉತ್ತರಿಸಬೇಕಾದ ಪ್ರಶ್ನೆ.

ಬೇರೆ ಆಟಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಕ್ರಿಕೆಟ್‌ಗೆ ಸೌಲಭ್ಯಗಳು ಕೊಂಚ ಮೇಲು ಎಂದು ಹೇಳಬಹುದು. ರಾಜ್ಯ ಕ್ರಿಕೆಟ್ ಸಂಸ್ಥೆ ಅನೇಕ ಟೂರ್ನ್‌ಮೆಂಟ್‌ಗಳನ್ನು ನಡೆಸುತ್ತದೆ.ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಈ ಟೂರ್ನ್‌ಮೆಂಟ್‌ಗಳು ಕೆಲವು ಉತ್ತಮ ಆಟಗಾರರನ್ನು ಮೇಲಕ್ಕೆ ಎಸೆಯುತ್ತವೆ. ಆದರೆ ನಿಜ ಹೇಳಬೇಕಾದರೆ ಬೆಂಗಳೂರಿನ ಆಟಗಾರರೇ ಅವಕಾಶಗಳಲ್ಲಿನ ಸಿಂಹಪಾಲನ್ನು ದಕ್ಕಿಸಿಕೊಳ್ಳುತ್ತಿದ್ದಾರೆ.

ಈ ವ್ಯವಸ್ಥೆಯಲ್ಲಿ ಏರುಪೇರುಗಳಿವೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ನನಗೆ ತಿಳಿದಿದ್ದಂತೆ ಡಾ. ಕೃಷ್ಣಮೂರ್ತಿ (ಈಗ ಇವರು ರಾಜ್ಯ ಕ್ರಿಕೆಟ್ ಸಂಸ್ಥೆಯ ಉಪ ಕಾರ್ಯದರ್ಶಿ - ಪಿ. ನಾಗರಾಜ್‌ರ ಸಹಾಯಕ) ನಾಯಕತ್ವದಲ್ಲಿ

ನಮ್ಮ ವಿಶ್ವವಿದ್ಯಾಲಯದ ಕ್ರಿಕೆಟ್ ತಂಡ ಅಖಿಲ ಭಾರತದ ರೋಹಿನ್‌ಟನ್ ಬೆರಿಯ ಪಾರಿತೋಷಕ ಗೆದ್ದಿತ್ತು. ಮತ್ತೆ ಅದಾದ ನಂತರ ನಮ್ಮ ವಿಶ್ವವಿದ್ಯಾಲಯಗಳ ತಂಡಗಳು ಈ 'ಟೋರ್ನ್‌ಮೆಂಟ್' ಗೆಲ್ಲುವ ಸ್ಥಿತಿಗೆ ಬಂದೇ ಇಲ್ಲ. ಆಗ ವಿಶ್ವವಿದ್ಯಾಲಯದ ಮಟ್ಟದಲ್ಲಿ ಆಡುತ್ತಿದ್ದ ಪ್ರಸನ್ನ, ಚಂದ್ರಶೇಖರ್, ಮುಂತಾದವರು ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ್ದನ್ನು ಯಾರಿಗೂ ನೆನಪು ಮಾಡಿಕೊಡಬೇಕಾಗಿಲ್ಲ. ರಣಜಿ ಟ್ರೋಫಿಯ ವಿಷಯ ಹೇಳಬೇಕಾದರೆ, ನಮ್ಮ ತಂಡದ ಮೊದಲ ಉತ್ತಮ ಕ್ಯಾಪ್ಟನ್ ಮತ್ತು ರಾಷ್ಟ್ರೀಯ ಮಟ್ಟದ ಆಟಗಾರನೆಂದರೆ ವಿ. ಸುಬ್ರಮಣ್ಯಂ. (ಇದಕ್ಕೆ ಮುಂಚೆ ಬಾಲಾಜಿ ಶ್ರೀನಿವಾಸನ್ ಭಾರತವನ್ನು ಪ್ರತಿನಿಧಿಸಿದ್ದರು, ನಂತರ ಎ.ಎಸ್. ಕೃಷ್ಣಸ್ವಾಮಿ, ಕಸ್ತೂರಿ ರಂಗನ್, ಎಲ್. ಟಿ. ಆದಿಶೇಷ್ ಮುಂತಾದ ಉತ್ತಮ ಆಟಗಾರರನ್ನು ಮೈಸೂರು ರೂಪಿಸಿತ್ತು. ಆದರೆ ಆಗಿನ ಮೌಲ್ಯಗಳು ಹೇಗಿದ್ದವೆಂದರೆ ಒಂದು ಟೆಸ್ಟ್ ಆಡಿದ ನಂತರ ಬಾಲಾಜಿ ಉನ್ನತ ವಿದ್ಯಾಭ್ಯಾಸ ಮುಖ್ಯವೆಂದು ಕ್ರಿಕೆಟ್ ತ್ಯಜಿಸಿ ಇಂಗ್ಲೆಂಡ್‌ಗೆ ಹೋದರು. ಕಸ್ತೂರಿ ಮತ್ತು ಆದಿಶೇಷ್ ಎಷ್ಟರಮಟ್ಟಿನ ಸ್ನೇಹಿತರಾಗಿದ್ದರೆಂದರೆ, ಆದಿಶೇಷ್ ಆಯ್ಕೆಯಾಗಲಿಲ್ಲವೆಂದು ಕಸ್ತೂರಿರಂಗನ್ ಭಾರತದ ತಂಡದ ಜತೆ ಪ್ರವಾಸ ಮಾಡಲು ನಿರಾಕರಿಸಿದರೆಂಬ ನಂಬಿಕೆ ಇದೆ) ಸುಬ್ರಹ್ಮಣ್ಯಂ (ಇವನನ್ನು ಕುಂಜುಮಣಿ ಎಂದೂ ಕರೆಯುತ್ತಿದ್ದರು.) ನ ಗರಡಿಯಲ್ಲಿ ಪಳಗಿದ ಪ್ರಸನ್ನ ನಾಯಕನಾದಾಗ ಕರ್ನಾಟಕ ಇಡೀ ದೇಶದಲ್ಲೇ ಅತ್ಯುತ್ತಮ ತಂಡವಾಯಿತು. ಪ್ರಸನ್ನನ ನಾಯಕತ್ವದಲ್ಲಿ ಎರಡು ಬಾರಿ ರಣಜಿ ಟ್ರೋಫಿ ಗೆದ್ದೆವು. ಈ ದಾಖಲೆಯನ್ನು ಮುರಿಯುವುದಿರಲಿ ಮತ್ತೆ ಫೈನಲ್ ಹಂತ ತಲುಪುವುದೂ ಕಷ್ಟವಾಗಿ ಕಾಣುತ್ತಿದೆ. ಆ ಸಮಯದಲ್ಲಿ ಭಾರತ ತಂಡದಲ್ಲಿ ಕರ್ನಾಟಕದ ಅನೇಕ ಆಟಗಾರರಿದ್ದರು. ಜಿ.ಆರ್. ವಿಶ್ವನಾಥ್, ಪ್ರಸನ್ನ, ಚಂದ್ರಶೇಖರ್, ಕಿರ್ಮಾನಿ, ರೋಜರ್ ಭಿನ್ನಿ, ಬ್ರಿಜೇಶ್ ಪಟೇಲ್, ಕೆ.ಎಸ್.ಸಿ.ಎ. ಅಧ್ಯಕ್ಷ ಎಂ. ಚಿನ್ನಸ್ವಾಮಿ, ಭಾರತದ ಕ್ರಿಕೆಟ್ ಕಂಟ್ರೋಲ್ ಬೋರ್ಡಿನ ಅಧ್ಯಕ್ಷರೂ ಆಗಿದ್ದರು. ಕರ್ನಾಟಕದಲ್ಲಿ ಕ್ರಿಕೆಟ್‌ಗುಣಮಟ್ಟ ಉತ್ತುಂಗ ಶಿಖರಕ್ಕೇರುತ್ತಿದ್ದ ಕಾಲದಲ್ಲೇ ಬೆಂಗಳೂರಿನಲ್ಲೆ 'ಚಿನ್ನಸ್ವಾಮಿ ಸ್ಟೇಡಿಯಂ' ನಿರ್ಮಾಣ ಪ್ರಾರಂಭವಾಯಿತು. ಹೆಚ್ಚು ಕಡಿಮೆ ಮುಗಿಯಿತು, ಕೂಡ. ಈಗ ಮತ್ತೆ ಕೆ.ಎಸ್.ಸಿ.ಎ. ಕೊಂಚ ನಿದ್ರಾವಸ್ಥೆಯಲ್ಲಿರುವಂತೆ ತೋರುತ್ತಿದೆ. ಮೊನ್ನೆ ಇವರು ಬೆಂಗಳೂರಿನಲ್ಲಿ ನಡೆಸಿದ ಒಂದು ದಿವಸದ ಕ್ರಿಕೆಟ್ ಪಂದ್ಯದಲ್ಲಿ ಜನಕ್ಕಾದ ತೊಂದರೆ ನೋಡಿದರೆ ಈ ಸಂಸ್ಥೆ ಜನಸಾಮಾನ್ಯರ ಬಗ್ಗೆ ಅಸಡ್ಡೆ ತೋರಿಸುತ್ತಿದೆ ಎನ್ನಿಸುತ್ತದೆ.

ಈ ಕ್ರಿಕೆಟ್ ಪಟುಗಳನ್ನು ಬಿಟ್ಟರೆ ಕರ್ನಾಟಕ ರೂಪಿಸಿದ ಅತ್ಯುತ್ತಮ ಕ್ರೀಡಾಪಟು 'ಪ್ರಕಾಶ್ ಪಡುಕೋಣೆ' ವೈಯಕ್ತಿಕ ಆಸಕ್ತಿ, ಛಲ, ಶ್ರೇಷ್ಠತೆ ಸಾಧಿಸಬೇಕೆಂಬ ಹಂಬಲ ಇದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಪ್ರಕಾಶ್ ಉದಾಹರಣೆ. ಈ ಹುಡುಗ ಮುಂದೆ ಬರುತ್ತಿದ್ದಾಗ ಬೆಂಗಳೂರಿನಲ್ಲಿ ಅವನಿಗೆ ಆಡಲು ಸರಿಯಾದ ಕೋರ್ಟ್‌ಗಳೇ ಇರಲಿಲ್ಲ; ಎದುರಾಳಿಗಳೂ ಇರಲಿಲ್ಲ. ಈ ಹುಡುಗ ಆವಾಗ ಎಲ್ಲಿ ಜಾಗ, ಅವಕಾಶ ಸಿಕ್ಕಿದರೆ ಅಲ್ಲಿ ಆಡುತ್ತಿದ್ದ - ಮಲ್ಲೇಶ್ವರಂನಲ್ಲಿ, ಬೌರಿಂಗ್

ಇನ್‌ಸ್ಟಿಟ್ಯೂಟ್‌ನಲ್ಲಿ, ಬೆಂಗಳೂರು ಮೆಡಿಕಲ್ ಕಾಲೇಜಿನ ಸಿಮೆಂಟ್ ನೆಲದ ಕೋರ್ಟ್‌ನಲ್ಲಿ. ಈ ರೀತಿ ಭಾರತದ ರಾಷ್ಟ್ರೀಯ ಛಾಂಪಿಯನ್ ಆದ ಪ್ರಕಾಶ್, ಮುಂದೆ ವಿಶ್ವ ಛಾಂಪಿಯನ್ ಆಗಲು ಬೇರೆ ದೇಶಕ್ಕೇ ಹೋಗಿ ಅಭ್ಯಾಸ ಮಾಡಬೇಕಾಯಿತು. ಈಗ ಈ ಆಟಕ್ಕೂ ಸಹ ಬೆಂಗಳೂರಿನಲ್ಲಿ ಅನೇಕ ಕೋರ್ಟ್‌ಗಳಿವೆ. ಪ್ರಕಾಶ್ ಹೆಸರಿನಲ್ಲೇ ಕೆಲ ಕೋರ್ಟ್‌ಗಳನ್ನು ಕಟ್ಟಿದ್ದಾರೆ. ಆದರೆ ಇವು ಸಾಲವು. ಬೆಂಗಳೂರಿನಲ್ಲೇ ಇನ್ನು ಐವತ್ತು ಕೋರ್ಟ್‌ಗಳಾದರೂ ಅವುಗಳಲ್ಲಿ ಆಡಲು ಹುಡುಗರು, ಜನ ಇದ್ದಾರೆ. ಇದರ ಜತೆ ಎಲ್ಲ ಜಿಲ್ಲೆಗಳಲ್ಲೂ ಸಹ ಒಳ್ಳೆಯ ಕೋರ್ಟ್‌ಗಳಾಗಬೇಕು.

ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರು ಮಾಡಿದ ಅತ್ಯುತ್ತಮವಾದ ಕೆಲಸವೆಂದರೆ ಪ್ರಕಾಶ್ ಪಡುಕೋಣೆಯನ್ನು ಕರ್ನಾಟಕ ರಾಜ್ಯ ಸ್ಪೋರ್ಟ್ಸ್ ಕೌನ್ಸಿಲ್‌ನ ಛೇರ್ಮನ್ ಆಗಿ ನೇಮಿಸಿದ್ದು.ಒಂದು ಒಳ್ಳೆಯ ಒಳಾಂಗಣ ಸ್ಟೇಡಿಯಂಗೆ ಅಸ್ತಿಭಾರ ಶಿಲೆಯನ್ನು ಹಾಕಿದ್ದಾರೆ. ಪ್ರಕಾಶ್ ಮತ್ತು ಮೊಯ್ಲಿ ಸೇರಿ ಈ ಕಟ್ಟಡ ಬರುವಂತೆ ನೋಡಿಕೊಂಡರೆ ಅದು ಒಂದು ಮಹಾನ್ ಸಾಧನೆ.

ಟೇಬಲ್ ಟೆನ್ನಿಸ್‌ನಲ್ಲಿ ಕೂಡ ನಮ್ಮ ಕೆಲವು ಉತ್ತಮ ಆಟಗಾರರನ್ನು ರೂಪಿಸಿದೆ. ಹಿಂದೆ ಕೆ. ನಾಗರಾಜ್‌ನಂತರ ಬಿ. ಸಾಯಿಕುಮಾರ್ ಮತ್ತು ಕಬಡ ಜಯಂತ್, ಇತ್ತೀಚೆಗೆ ಚೇತನ್ ಬಾಬೂರ್ ಈಗ ಏಷ್ಯಾದಲ್ಲಿ ಆರನೇ ಸ್ಥಾನ ಪಡೆದಿದ್ದಾನೆ. ಈ ಹುಡುಗ ಇನ್ನೂ ಮುಂದೆ ಬರುವ ಸಾಧ್ಯತೆ ಇದೆ. ಆದರೆ ಈ ಆಟಕ್ಕೆ ಕೂಡ ನಮ್ಮಲ್ಲಿ ಅಭ್ಯಾಸ ಮಾಡಲು ಬೇಕಾದ ಆಧುನಿಕ ಸೌಲಭ್ಯಗಳು ಕರ್ನಾಟಕದಲ್ಲಿಲ್ಲ ರಾಜ್ಯ ಟೇಬಲ್ ಟೆನ್ನಿಸ್ ಸಂಸ್ಥೆ ಅಂತಹ ಚಟುವಟಿಕೆ ತೋರಿಸುತ್ತಿಲ್ಲ.

ಒಳಾಂಗಣದಲ್ಲಿ ಆಡುವ ಆಟಗಳ ಸಂಸ್ಥಾಗಳೆಲ್ಲ ಒಂದುಗೂಡಿ ತಾವೇ ಒಂದಷ್ಟು ಹಣ ಸಂಗ್ರಹಿಸಿ, ನಂತರ ಸರ್ಕಾರಿ ಸಹಾಯ ಪಡೆದು ಒಂದು ಅತ್ಯುತ್ತಮ ಇಂಡೋರ್ ಸ್ಟೇಡಿಯಂ ಕಟ್ಟಬೇಕು.

ಈ ಒಳಾಂಗಣದ ಆಟಗಳ ಬಗ್ಗೆ ಬರೆಯುವಾಗ ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಘದ ಬಗ್ಗೆ ಬರೆಯಲೇಬೇಕು. ಇತ್ತೀಚಿನ ವರ್ಷಗಳಲ್ಲಿ ಈ ಸಂಸ್ಥೆ ಸಾಧಿಸಿರುವಷ್ಟು ಬೆಳವಣಿಗೆ ಬೇರಾರು ಸಾಧಿಸಿಲ್ಲ. ಟಿ.ಎ. ಸೆಲ್ವರಾಜ್ ಹಿಂದಿನ ಕಾಲದಲ್ಲಿ ಮೈಸೂರು ರೂಪಿಸಿದ ಅತ್ಯುತ್ತಮ ಆಟಗಾರ. ಆಗ ಈ ಆಟದಲ್ಲಿ ನಮ್ಮಲ್ಲಿನ ಕೆಲವು ಇಎಲ್‌ಐಟಿಇ ಕ್ಲಬ್‌ಗಳಿಗೆ ಮತ್ತು ಬ್ರಿಗೇಡ್ ರೋಡ್‌ನ ಬಿಲಿಯರ್ಡ್ಸ್ ಪಾರ್ಲರ್‌ಗಳಿಗೆ ಸೀಮಿತವಾಗಿತ್ತು. ಈ ಸಂಸ್ಥೆ ಕೂಡ ಅಲ್ಲೇ ಇತ್ತು. ನಂತರ ನಮ್ಮಿಂದ (ಕರ್ನಾಟಕದಿಂದ) ಅರವಿಂದ್ ಸವೂರ್, ಎಂ.ಜಿ. ಜಯರಾಂ, ಬಿ.ವಿ. ಶ್ರೀನಿವಾಸಮೂರ್ತಿ ಎಲ್ಲ ಬಂದರು. ರಾಷ್ಟ್ರೀಯ ಛಾಂಪಿಯನ್‌ಗಳಾದರು. ಆದರೆ ಯಾವುದೇ ರಾಜ್ಯದ ಅಸೋಸಿಯೇಷನ್‌ಗೆ ಹೋಲಿಸಿದರೂ ನಿಜವಾದ ಛಾಂಪಿಯನ್ ಆಗಿ ಬೆಳೆದಿದ್ದು ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಘ. ಈಗ ಅತ್ಯಾಧುನಿಕ ಕ್ಲಬ್

ಕಟ್ಟಿದ್ದಾರೆ. ದಿನ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಆಡಲು ಬೇಕಾದಷ್ಟು ಟೇಬಲ್‌ಗಳಿವೆ. ಈಗ ವರ್ಷಕ್ಕೊಂದಾದರೂ ರಾಷ್ಟ್ರಮಟ್ಟದ ಅಥವಾ ಅಂತರರಾಷ್ಟ್ರೀಯ ಟೂರ್ನ್‌ಮೆಂಟನ್ನು ಈ ಸಂಘ ನಡೆಸಿಕೊಡುತ್ತದೆ. ಈ ಸಂಘಕ್ಕೆ ವಿಜಯ ಮಲ್ಯರ ಮ್ಯೆಕ್‌ಡೊವೆಲ್, ಮತ್ತು ಐ.ಟಿ.ಸಿ. ಕಂಪೆ ಎರಡೂ ಕೂಡ ಸುಮಾರು ಧನಸಹಾಯ ಮಾಡಿವೆ.

ಈಜು ಕೊಳದಲ್ಲಿ ಕೂಡ ನಮ್ಮ ಕರ್ನಾಟಕದವರು, ಅದರಲ್ಲೂ ಹುಡುಗಿಯರದು ಮೇಲುಗೈ. ಇತ್ತೀಚಿನ ವರ್ಷಗಳಲ್ಲಿ ಲೊರೇನ್ ವರ್ಘೀಸ್ ಮತ್ತು ಸಂಗೀತ ಶೆಟ್ಟಿ ಮುಂತಾದವರ ಸಾಧನೆ ಅತ್ಯುನ್ನತ ಮಟ್ಟದ್ದು. ಆದರೆ ಈ ಕ್ರೀಡೆ ಸಹ ಹಣ ಸಹಾಯವಿಲ್ಲದೆ ನರಳುತ್ತಿದೆ.

ಈ ಮೇಲ್ಕಂಡ ವಿವರಗಳು ಕರ್ನಾಟಕದ ಕ್ರೀಡಾಪಟುಗಳು ಏನನ್ನಾದರೂ ಸಾಧಿಸಿರುವುದರ ಬಗ್ಗೆ ಮತ್ತು ಆಯಾ ಸಂಘಸಂಸ್ಥೆಗಳು ಕೊಂಚ ಕಷ್ಟಪಟ್ಟು ಕೆಲಸ ಮಾಡಿರುವುದರ ಬಗ್ಗೆ ಆದರೆ, ಈ ಮುಂದೆ ಬರುವ ವಿವರಗಳು ನಾವು ಹಿಂದೆ ಬಿದ್ದಿರುವ ವಲಯಗಳಿಂದ ಕೂಡಿದೆ ಅನ್ನುವುದನ್ನು ಸೂಚಿಸುತ್ತಿವೆ.

ನಮ್ಮಲ್ಲಿ 'ಹಾಕಿ' ಒಂದಾನೊಂದು ಕಾಲದಲ್ಲಿ ಜನಪ್ರಿಯವಾಗಿದ್ದುದ್ದು ನಿಜ. ಆಗ ಹೆಚ್.ಎ.ಎಲ್., ಐ.ಟಿ.ಐ ಮತ್ತು ಇಂಡಿಯನ್ ವಾಂಡರರ್ಸ್ ಮುಂತಾದ ತಂಡಗಳು ಹಾಕಿಗೆ ಪ್ರೋತ್ಸಾಹ ಕೊಡುತ್ತಿದ್ದವು. ಕೊಂಚಮಟ್ಟಿಗೆ ಆಂಗ್ಲೋಇಂಡಿಯನ್ ಹುಡುಗರಿಗೆ ಇಷ್ಟವಾಗಿದ್ದ ಈ ಆಟವನ್ನು ಆಡುತ್ತಿದ್ದ ಮತ್ತೊಂದು ಗುಂಪೆಂದರೆ ಕೂರ್ಗಿಗಳು. ಒಂದು ಕಾಲದಲ್ಲಿ ಮ್ಯಾಕ್‌ಬ್ರೈಡ್, ದೇಶ ಮತ್ತು ಮುಂತಾದವರನ್ನು ಹೆಚ್.ಎ.ಎಲ್. ತಂಡ ರೂಪಿಸಿತ್ತು. ಆದರೆ ಈಗ? ನಮ್ಮ ದೇಶ ವಿಶ್ವ ಹಾಕಿ ಪ್ರಶಸ್ತಿಯನ್ನು ಸೋಲಲು ಪ್ರಾರಂಭ ಮಾಡಿಕೊಳ್ಳುವುದಕ್ಕೆ ಮೊದಲೇ ರಾಜ್ಯಗಳಲ್ಲಿ ಹಾಕಿಯ ಅವನತಿ ಪ್ರಾರಂಭವಾಗಿತ್ತು. ಇದಕ್ಕೆ ಕ್ರಿಕೆಟ್‌ನ ಜನಪ್ರಿಯತೆ ಒಂದು ಕಡೆ ಕಾರಣವಾದರೆ ಹಾಕಿ ಆಟಗಾರರಿಗೆ ಯಾವ ವಿಧವಾದ ಸವಲತ್ತುಗಳು, ಗೌರವಗಳಿಲ್ಲದ್ದೂ ಮತ್ತೊಂದು ಕಾರಣ. ನಮ್ಮ ದೇಶ ಪದೇ ಪದೇ ಒಲಂಪಿಕ್ಸ್‌ಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದು ಬರುತ್ತಿದ್ದರೂ ಸಹ ಈ ಆಟಗಾರರಿಗೆ ಅಂತಹ ಪ್ರಶಂಸೆ, ಮರ್ಯಾದೆಗಳು ಅಥವಾ ಹಣ ಸಹಾಯ ಇಲ್ಲದಿದ್ದದ್ದೂ ಕಾರಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಖಾಸಗಿ ತಂಡಗಳೂ ಇಲ್ಲವಾದವು. ಹಾಕಿ ಅಸೋಸಿಯೇಶನ್ ಸಹ ಚೇತನ ಕಳೆದುಕೊಂಡಿತ್ತು. ಆದರೆ ಹೋದ ವರ್ಷ ಯುವ ಆರ್ಕಿಟೆಕ್ಟ್ -ಇಂಜಿನಿಯರ್, ಕೂರ್ಗಿ ತಿಮ್ಮಯ್ಯ ಈ ಸಂಸ್ಥೆಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಈ ಸಂಸ್ಥೆ ಮುಂದಕ್ಕೆ ಉತ್ತಮ ದಿನಗಳನ್ನು ಕಾಣಲು ಸಾಧ್ಯವಾಗಬಹುದಾಗಿದೆ. ಈ ಸಂಸ್ಥೆಯ ತೊಂದರೆ ಕೂಡ ಹಣ. ಇವರಿಗೊಂದು ಮೈದಾನ ಇದೆ, ಆದರೆ ಆ ಮೈದಾನದ ಉಸ್ತುವ ನೋಡಿಕೊಳ್ಳಲೂ ಇವರಿಗೆ ಕಷ್ಟವಾಗಿದೆ. ಹೀಗಿದ್ದರೂ ಆಗೊಬ್ಬ, ಈಗೊಬ್ಬ ಕರ್ನಾಟಕದ ಆಟಗಾರ ರಾಷ್ಟ್ರೀಯ ಮಟ್ಟವನ್ನು ತಲುಪುತ್ತಿದ್ದಾನೆ ಎಂಬುದೇ ಸಮಾಧಾನದ ವಿಚಾರ.

ಇನ್ನು ಫುಟ್‌ಬಾಲ್. ಇದರಂತಹ ದುರಂತದ ಕಥೆ ಮತ್ತೊಂದಿಲ್ಲ. ಒಂದು ಕಾಲಕ್ಕೆ ಅತ್ಯಂತ ಜನಪ್ರಿಯ ಆಟವಾಗಿದ್ದದ್ದು ಫುಟ್‌ಬಾಲ್. ಸಾವಿರಾರು ಬೆಂಗಳೂರಿಗರು ಸಾಯಂಕಾಲ ತಮ್ಮ ಆಫೀಸ್, ಬ್ಯಾಂಕ್ ಅಥವಾ ಫ್ಯಾಕ್ಟರಿಗಳನ್ನು ಮುಗಿಸಿಕೊಂಡು ಫುಟ್‌ಬಾಲ್ ಪಂದ್ಯ ನೋಡಿಕೊಂಡು ಮನೆಗೆ ಹೋಗುತ್ತಿದ್ದುದು ರೂಢಿ. ಬೆಂಗಳೂರು ಬ್ಲೂಸ್ ಮುಂತಾದ ತಂಡಗಳಿಗೆ ಆಡುತ್ತಿದ್ದ ರಾಮಣ್ಣ, ವೇಣುಗೋಪಾಲ್ ಮುಂತಾದವರು ಲೋಕಲ್ ಹೀರೋಗಳಾಗಿದ್ದರು. ಇದು ಸುಮಾರು ೫೦ ವರ್ಷಗಳ ಹಿಂದಿನ ಮಾತು. ಈ ನಮ್ಮ ಕರ್ನಾಟಕ ಫುಟ್‌ಬಾಲ್ ಅಸೋಸಿಯೇಷನ್ ಸ್ಟೇಡಿಯಂ ಕಟ್ಟಲು ಹೊರಟ ದಿನದಿಂದ ಈ ಆಟದ ಮೇಲ್ವಿಚಾರಣೆ ಹಾಳಾಗುತ್ತ ಬಂತು. ಪ್ರಾರಂಭ ಮಾಡಿ ಇಪ್ಪತ್ತು ವರ್ಷಗಳಾದರೂ ಸ್ಟೇಡಿಯಂ ಮುಗಿದಿಲ್ಲ. ಇದನ್ನು ಮುಗಿಸಲು ಹಣ ಸಹಾಯ ಬರಲೆಂದು, ಸ್ಟೇಡಿಯಂ ಸುತ್ತಣ ಜಾಗವನ್ನು ಖಾಸಗಿಯವರಿಗೆ ಕೊಟ್ಟರು. ಈಗ ಅವರ ಕಟ್ಟಡಗಳೆಲ್ಲ ಬಂದರೂ ಸ್ಟೇಡಿಯಂ ಬಂದಿಲ್ಲ. ಉಲಗನಾಥನ್, ಕೃಷ್ಣ ಜೆಟ್ಟಿ ಮುಂತಾದ ಕೆಲವು ಆಟಗಾರರು ಹೆಸರು ಮಾಡಿದ್ದಾರೆ ನಿಜ. ಆದರೆ ನಮ್ಮ ತಂಡಗಳು ಈಗ ಬಹು ಹಿಂದೆ ಬಿದ್ದಿವೆ. ಐ.ಟಿ.ಐ. ತಂಡವೊಂದು ಮಾತ್ರ ಈಗ ಸುಮಾರಾಗಿದೆ. ಬೇರೆ ತಂಡಗಳು ಹಾಳಾಗಿವೆ.

ಅಥ್ಲೆಟಿಕ್ಸ್‌ನಲ್ಲಿ ಹಿಂದೆ ಡೆಕ್ಕನ ಹೆರಾಲ್ಡ್ - ಪ್ರಜಾವಾಣಿಯ ಕೆ. ನೆಟ್ಟಕಲ್ಲಪ್ಪ ಮತ್ತು ಅವರ ಶಿಷ್ಯ ಎ.ಆರ್. ಚಿಕ್ಕಪಾಪಯ್ಯ ಇದ್ದಾಗ ನಮ್ಮ ಹುಡುಗ ಹುಡುಗಿಯರಿಗೆ ಒಳ್ಳೆಯ ಪ್ರೋತ್ಸಾಹವಿತ್ತು. ಈ ಮೇಲ್ಕಂಡ ಇಬ್ಬರು ವ್ಯಕ್ತಿಗಳಿಗೆ ಆಟಗಳು, ಆಟಗಾರವೆಂದರೆ ನಿಜವಾದ ಪ್ರೀತಿ ಇತ್ತು. ಆಗ ಮೈಸೂರಿನ ಸಿ.ಎಂ. ಮುತ್ತಯ್ಯ ರಾಷ್ಟ್ರೀಯ ಡಿಕಾಥ್ಲನ ಛಾಂಪಿಯನ್ ಆಗಿದ್ದರು. ಹೆಂಗಸರಲ್ಲಿ ಮಾರಿ ಬ್ರೌನ್, ಡಿಯಾನ್ ಸ್ಕೈಮ್ಸ್, ನಿರ್ಮಲ ಮುಂತಾದವರು ಛಾಂಪಿಯನ್‌ಗಳು. ಮುಂದೆ ಕೂಡ ನಮ್ಮ ಕೆನೆತ್ ಪೊವೆಲ್ ರಾಮಸ್ವಾಮಿ ಮುಂತಾದವರು ರಾಷ್ಟ್ರೀಯ ದಾಖಲೆಗಳನ್ನು ಸ್ಥಾಪಿಸಿದರು. ಅಶ್ವಿನಿ ನಾಚಪ್ಪ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಈ ನಿಟ್ಟಿನಲ್ಲಿ ಹಿಂದೆ ಛಾಂಪಿಯನ್ ಅಥ್ಲೆಟ್‌ಗಳಾಗಿದ್ದ ಸುನಿಲ್ ಅಬ್ರಹಾಂ ಮತ್ತು ಪತ್ನಿ ರೀತ್ ಅಬ್ರಹಾಂ SURE ATHLETIC MOVEMENT ಎಂಬ ಸಂಸ್ಥೆ ಕಟ್ಟಿ ಅತ್ಯುತ್ತಮವಾದ ಕೆಲಸ ಮಾಡುತ್ತಿದ್ದಾರೆ.

ಬ್ಯಾಸ್ಕೆಟ್‌ಬಾಲ್‌ನಲ್ಲಿ ಕರ್ನಾಟಕ ಮುಂಚೆ ಛಾಂಪಿಯನ್ ನರಸಿಂಹರಾಜನ್, ರಾಜಗೋಪಾಲ್, ಜಯರಾಂ ಮುಂತಾದವರು ಆಡುತ್ತಿದ್ದರು. ಈಗ ನಾವು ಹಿಂದೆ ಬಿದ್ದಿದ್ದೇವೆ. ಆದರೆ ಈಗಲೂ ಸಿದ್ದಾಪುರದ ಅಪ್ಪಯ್ಯರಂಥವರು ಈ ಆಟದ ಬಗ್ಗೆ ಇಟ್ಟಿರುವ ಕಾಳಜಿ, ಸಣ್ಣ ಹುಡುಗರಿಗೆ ಇವರು ಬ್ಯಾಸ್ಕೇಟ್‌ಬಾಲ್ ಹೇಳಿಕೊಡುವ ರೀತಿ ನೋಡಿದರೆ ಮತ್ತೆ ನಮ್ಮ ರಾಜ್ಯ ಮುಂದೆ ಬರಬಹುದು ಎನ್ನಿಸುತ್ತದೆ.

ಒಂದು ಆಟದಲ್ಲಿ ಮಾತ್ರ ನಾವು ಎಂದಿನಿಂದ ಇಂದಿಗೂ ರಾಷ್ಟ್ರೀಯ ಛಾಂಪಿಯನ್‌ಗಳಾಗಿ ಗೆದ್ದುಕೊಳ್ಳುತ್ತಲೇ ಬಂದಿದ್ದೇವೆ. ಅದು ಮಹಿಳೆಯರ ಬಾಲ್ ಬ್ಯಾಡ್ಮಿಂಟನ್. ಹಾಗೇ ಮಹಿಳೆಯ ಕ್ರಿಕೆಟ್‌ನಲ್ಲಿ ಸಹ ಶಾಂತ ರಂಗಸ್ವಾಮಿಯ ಸಹಾಯದಿಂದ ನಮ್ಮ ತಂಡ ಒಂದು ಕಾಲಕ್ಕೆ ಅತ್ಯುನ್ನತ ತಂಡವಾಗಿತ್ತು.

ಇಷ್ಟೆಲ್ಲ ಹೇಳಿದ ಮೇಲೆ ಒಂದು ಪ್ರಶ್ನೆ : ನಮ್ಮ ಯುವಕ ಯುವತಿಯರು ಏಕೆ ಆಟಗಳಲ್ಲಿ ಮುಂದೆ ಬರುತ್ತಿಲ್ಲ? ನನ್ನ ಪ್ರಕಾರ ಕೆಲವು ಮೂಲಭೂತ ಕಾರಣಗಳಿವೆ. ಒಂದು ನಮ್ಮ ಇಡೀ ದೇಶದ ಆರ್ಥಿಕ ಪರಿಸ್ಥಿತಿ. ತಿನ್ನಲು ಸರಿಯಾದ ಊಟವೇ ಇಲ್ಲದಿರುವಾಗ ಇನ್ನು ಆಟ ಆಡುವುದು ಹೇಗೆ? ಈ ಸ್ಥಿತಿ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಗಳಲ್ಲಿ ಎಂದಿಗಿಂತ ಭೀಕರವಾಗಿದೆ. ಹಳ್ಳಿಗಳಲ್ಲಿ ಹುಡುಗರು ಏನನ್ನಾದರೂ ಅಥವಾ ಯಾವುದಾದರೊಂದು SENSIBLE GAME ಆಡುವುದನ್ನು ನೋಡಿದ್ದೀರಾ ? ಇಲ್ಲ. ಇವರನ್ನೆಲ್ಲಾ ತೆಗೆದರೆ ಭಾರತದ ಶೇಕಡ 80ಜನ ಹೋದಂತಾಯಿತು. ಇನ್ನು ನಗರಗಳಲ್ಲಿ, ಪಟ್ಟಣಗಳಲ್ಲಿ ಇರುವವರ ಕಥೆಯೇ ಬೇರೆ. ಈಗ ಟೆಲಿವಿಷನ್ ಬಂದ ಮೇಲೆ, ಬೇರೆ ದೇಶಗಳ ವೃತ್ತಿನಿರತ ಆಟಗಾರರು ಆಡುವುದನ್ನು, ಹಣ ಸಂಪಾದಿಸಿ ಬದುಕುವುದನ್ನು ನೋಡಿ ನಮ್ಮ ಪಟ್ಟಣದ ಹುಡುಗರೂ ಅವರನ್ನು ಅನುಕರಿಸಲು ಪ್ರಯತ್ನಿಸುತ್ತಾರೆ. ಆದರೆ ಟೆನ್ನಿಸ್, ಸ್ಕ್ವಾಶ್, ಬ್ಯಾಂಡ್ಮಿಂಟನ್ ಮುಂತಾದ ಆಟಗಳಿಗೆ ಬೇಕಾದಷ್ಟು ಕೋರ್ಟುಗಳಿಲ್ಲ. ಬಡವರು ಯಾರೂ ಸಹ ಈ ಕ್ಲಬ್‌ಗಳ ಸದಸ್ಯರಾಗುವುದು ಸಾಧ್ಯವಿಲ್ಲ. ಸರ್ಕಾರ ಹಣ ಖರ್ಚು ಮಾಡಿ ಸಾರ್ವಜನಿಕ ಕೋರ್ಟುಗಳನ್ನು, ಆಟದ ಮೈದಾನಗಳನ್ನು ಸೃಷ್ಟಿಸಿ ಕೊಡಬೇಕು. ಸಾಹುಕಾರರ ಮಕ್ಕಳು ಈ ಆಟಗಳನ್ನು ಆಡಲು ಹೋಗುತ್ತಾರೆ. ನಿಜ. ಆದರೆ ಅವರಲ್ಲಿ ಬಹಳ ಕಡಿಮೆ ಜನಕ್ಕೆ ನಿಜವಾದ ಆಸಕ್ತಿ ಅಥವಾ ಪ್ರತಿಭೆ ಇರಬಹುದು. ಪ್ರತಿಭೆ ಕಡಿಮೆ ಇದ್ದಾಗ ಎಷ್ಟು ಕ್ಲಬ್ ಮಾಡಿದರೂ ಅಷ್ಟೆ. ಆಸಕ್ತಿ ಪ್ರತಿಭೆ, ಹಠ ಇದ್ದರೆ, ದುಡ್ಡಿಲ್ಲದವನೂ ವಿಶ್ವ ಛಾಂಪಿಯನ್ ಆಗಬಹುದು ಎಂಬುದನ್ನು ಪ್ರಕಾಶ್ ಪಡುಕೋಣೆ, ಇತ್ತೀಚೆಗೆ ವಿಶ್ವನಾಥನ್ ಆನಂದ್ ಮುಂತಾದವರು ತೋರಿಸಿಕೊಟ್ಟಿದ್ದಾರೆ.

ಎರಡನೆಯದಾಗಿ ಪ್ರಾಥಮಿಕ ಶಾಲೆಯಿಂದ ಹಿಡಿದು ಎಲ್ಲ ಶಾಲಾ ಕಾಲೇಜುಗಳಲ್ಲಿ ಮಕ್ಕಳು ಆಟ ಆಡಲು ಪ್ರೋತ್ಸಾಹಿಸಬೇಕು. ನಾನು ಶಾಲೆಗಳಲ್ಲಿ ಓದುತ್ತಿದ್ದಾಗ, ನಾನು ಓದಿದ್ದು ಸರ್ಕಾರಿ ಶಾಲೆಗಳಾದರೂ ಅವಕ್ಕೆ ಮೈದಾನ ಇತ್ತು. ನಮ್ಮ ಇಷ್ಟ ಬಂದ ಹಾಗೆ ಆಡುವ ಅವಕಾಶ ಇತ್ತು. ಆದರೆ ಈಗ ನೋಡಿ - ನಾವು ಆಡುತ್ತಿದ್ದ ಯುನೈಟೆಡ್ ಮಿಶನ್ ಹೈಸ್ಕೂಲ್‌ನ ಮುಂದಿನ ದೊಡ್ಡ ಮೈದಾನದಲ್ಲಿಂದು ಯುನಿಟ್ ಬಿಲ್ಡಿಂಗ್. ನಾವು ದಿನವೂ ಆಡುತ್ತಿದ್ದ ಕೋರ್ಟ್ ಮೈದಾನಗಳಲ್ಲಿ ಈಗ ಎಲ್ಲೆಲ್ಲೂ ಕಟ್ಟಡಗಳು. ಹೊಸ ಹೊಸ ಕ್ರೀಡಾ ಸೌಲಭ್ಯಗಳನ್ನು ಸೃಷ್ಟಿಸುವ ಜತೆ ಇರುವ ಸೌಲಭ್ಯಗಳನ್ನು ರಕ್ಷಿಸಬೇಕು. (ಇತ್ತೀಚೆಗೆ ಜಯನಗರದಲ್ಲಿ ಹುಡುಗರು ಆಡುತ್ತಿದ್ದ ದೊಡ್ಡ ಭಾಗವೊಂದನ್ನು ಕರ್ನಾಟಕ ಚಲನಚಿತ್ರ ಕಲಾವಿದರ ಸಂಘಕ್ಕೆ ಕೊಟ್ಟಿದ್ದಾರೆ.)

ಹಿಂದಿನ ಕಾಲದಲ್ಲಿ ನಮ್ಮ ದೊಡ್ಡವರು ನಾವುಗಳು ಆಟಕ್ಕೆ ಹೋದರೆ ಬೈಯುತ್ತಿದ್ದರು. ನೀವು ಓದಬೇಕು, ಆಟ ಆಡಿದರೆ ಹಾಳಾಗುತ್ತೀರಿ ಎನ್ನುತ್ತಿದ್ದರು. ಸ್ಥಿತಿ ಈಗಲೂ ಹಾಗೇ ಇದ್ದರೂ ಸಹ ಕೆಲ ತಂದೆ ತಾಯಿಗಳಂತೂ ಬದಲಾಗಿದ್ದಾರೆ. ಅತ್ಯುತ್ತಮ ಆಟಗಾರನಾದರೂ ಸೀಟುಗಳು, ಕೆಲಸಗಳು ಸಿಗುತ್ತವೆ, ವಿಶ್ವಮಟ್ಟದ

ಆಟಗಾರನಾದರೆ, ಯಥೇಚ್ಛವಾಗಿ ಹಣ ಮಾಡಬಹುದು ಎಂಬುದೂ ಕೆಲವರಿಗೆ ಗೊತ್ತಿದೆ. ಆದರೆ ಅದೇ ಗುರಿಯನ್ನಾಗಿಟ್ಟುಕೊಂಡು ಆಟ ಕಲಿಯಲು ಹೊರಟರೆ ಸಾಧನೆ ಕಷ್ಟವಾಗಬಹುದು.

ನಮ್ಮ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಹೇಳುವುದಾದರೆ : ನಮ್ಮ ಸರ್ಕಾರಗಳು ಕ್ರೀಡಾ ಸಂಘ ಸಂಸ್ಥೆಗಳು ಆಟದ ಮೈದಾನಗಳನ್ನು, ಕೋರ್ಟ್‌ಗಳನ್ನು ದೇಶದ ಎಲ್ಲ ಕಡೆ ಮಾಡಿಕೊಡುವುದಲ್ಲದೆ ಅವುಗಳನ್ನು ನೋಡಿಕೊಂಡರೆ ಸಾಕು. ಅತ್ಯುತ್ತಮ ಆಟಗಾರರು, ಆಟಗಾರ್ತಿಯರು ಅವರಾಗವರೇ ಹುಟ್ಟಿಕೊಳ್ಳುತ್ತಾರೆ, ರೂಪುಗೊಳ್ಳುತ್ತಾರೆ. ಅವರು ಒಂದು ಮಟ್ಟಕ್ಕೆ ಬಂದಮೇಲೆ, ಈಗ ಬಿ.ಎ.ಟಿ , ಅಕಾಡೆಮಿ SURE ATHLETIC MOVEMENT ನವರು ಮಾಡುತ್ತಿರುವಂತೆ ಕೈಗಾರಿಕೋದ್ಯಮಗಳಿಂದ ಸಾಹುಕಾರರಿಂದ ಧನವನ್ನು ದಾನ ಪಡೆದು, ಈ ಪ್ರತಿಭಾವಂತ ಹುಡುಗ ಹುಡುಗಿಯರಿಗೆ ಆಟದ ಸಾಮಾನು, ಊಟ, ಪುಸ್ತಕ, ಬಟ್ಟೆ, ಶೂಗಳು ಮುಂತಾದವನ್ನು ತೆಗೆದುಕೊಡಲು ಉಪಯೋಗಿಸಬೇಕು. ಇವೆಲ್ಲ ಮಾಡಿದರೆ ಕೊಂಚ ಕೋಚಿಂಗ್ ಕಡಿಮೆಯಾದರೂ ಪರವಾಗಿಲ್ಲ.

●

* * *

ಕಾವ್ಯ

— ಕಿ.ರಂ. ನಾಗರಾಜ

೧೯೯೨ರಲ್ಲಿ ಪ್ರಕಟವಾದ ಕವನ ಸಂಕಲನಗಳ ಸಂಖ್ಯೆ ಸುಮಾರು ಮೂವತ್ತೈದಕ್ಕೂ ಹೆಚ್ಚು. ಈಗಾಗಲೇ ಕಾವ್ಯ ಪ್ರಯೋಗದಲ್ಲಿ ತೊಡಗಿಸಿಕೊಂಡ ಹಿರಿಯ ಕವಿಗಳೊಂದಿಗೆ ಇದೇ ತಾನೆ ತಮ್ಮ ಮೊದಲ ಸಂಕಲನವನ್ನು ಪ್ರಕಟಿಸುತ್ತಿರುವ ತರುಣ ಕವಿಗಳು ಹಾಗೂ ಕವಯತ್ರಿಯರು ಈ ಸಾಲಿನಲ್ಲಿದ್ದಾರೆ. ವಿ.ಜಿ. ಭಟ್ಟರ ಎರಡು ಕವನ ಸಂಕಲನಗಳು ಮರಣೋತ್ತರ ಪ್ರಕಟನೆಗಳಾಗಿ ಹೊರಬಂದಿವೆ. ಜಿ.ಎಸ್. ಶಿವರುದ್ರಪ್ಪ, ಅಮ್ಮೆಂಬಳ ಶಂಕರನಾರಾಯಣ ಭಟ್ಟ, ಯು.ಆರ್. ಅನಂತಮೂರ್ತಿ, ಕೈಯಾರ ಕಿಞ್ಞಣ್ಣ ರೈ, ವೀಚಿ, ಎಚ್.ಎಸ್. ವೆಂಕಟೇಶ ಮೂರ್ತಿ ಇವರುಗಳ ಸಂಕಲನಗಳು ಈ ಅವಧಿಯಲ್ಲಿ ಪ್ರಕಟವಾಗಿವೆ. ಬೇರೆ ಬೇರೆ ಕಾವ್ಯ ಪಂಥಗಳಿಗೆ ಸೇರಿದ ಕವಿಗಳ ಪ್ರಯೋಗಶೀಲತೆ ಅನೇಕ ದೃಷ್ಟಿಗಳಿಂದ ಕುತೂಹಲ ಹುಟ್ಟಿಸುತ್ತದೆ. ಯುವ ಕವಿಗಳ ಕಾವ್ಯಪ್ರಯೋಗಗಳು ಹೊಸ ಭರವಸೆಯನ್ನು ಹುಟ್ಟಿಸುವಷ್ಟು ಆಶಾದಾಯಕವಾಗಿದೆ ಕೂಡಾ.

ಯು.ಆರ್. ಅನಂತಮೂರ್ತಿಯವರ ನಾಲ್ಕನೆಯ ಕವನ ಸಂಕಲನವಾದ 'ಮಿಥುನ'ಈ ವರ್ಷದ ಮಹತ್ವದ ಕೃತಿ. ಅನಂತಮೂರ್ತಿಯವರ ಸಂವೇದನೆ, ಈ ಹೊತ್ತಿನ ನಮ್ಮ ಸಾಹಿತ್ಯ ಪರಿಸರದಲ್ಲಿ ತುಂಬಾ ದಟ್ಟವಾದ ಪ್ರಭಾವವನ್ನು ಮೂಡಿಸಿದೆ. ಅವರ ಯಾವುದೇ ಬರವಣಿಗೆಯ ಹಿಂದೆ ಗಂಭೀರವಾದ ಚಿಂತನೆ, ಸಂಸ್ಕೃತಿಯ ಬಗೆಗೆ ಗಾಢವಾದ ಕಾಳಜಿ ಪ್ರಧಾನವಾದದ್ದಾಗಿರುತ್ತದೆ. ಈ ಹಿಂದೆ ಪ್ರಕಟವಾದ 'ಬಾವಲಿ' , 'ಹದಿನೈದು ಪದ್ಯಗಳು' ('ಬಾವಲಿ' ಸಂಕಲನವೂ ಸೇರಿದಂತೆ) ಸಂಕಲನದ ಅನೇಕ ಕವಿತೆಗಳು ಹಾಗೂ 'ಅಜ್ಜನ ಹೆಗಲ ಸುಕ್ಕುಗಳು' ಕಾವ್ಯಾಸಕ್ತರ ಗಮನವನ್ನು ಸೆಳೆದಿವೆ. ಪ್ರಸ್ತುತ 'ಮಿಥುನ' ಸಂಕಲನ ಅನಂತಮೂರ್ತಿಯವರ ಚಿಂತನೆ, ಸಂಸ್ಕೃತಿಗೆ ಎದುರಾಗುವ ಅನೇಕ ಸಂಬಂಧಗಳ ಗ್ರಹಿಕೆಯ ದೃಷ್ಟಿಯಿಂದ ಮುಖ್ಯವಾದದ್ದಾಗಿದೆ.

ಅನಂತಮೂರ್ತಿಯವರು ತಮ್ಮ ಅನುಭವ, ಚಿಂತನೆಗಳನ್ನು ಮಂಡಿಸಲು ಒಂದು ಸಾಹಿತ್ಯ ರೂಪವನ್ನು ಆಯ್ದುಕೊಳ್ಳುತ್ತಾರಾದರೂ ಅದರ ಸಾಂಪ್ರದಾಯಕ ಚೌಕಟ್ಟುಗಳನ್ನು ಮುರಿಯುತ್ತಾರೆ. ಹಾಗೆ ಮುರಿಯುವುದರ ಮೂಲಕ ಹೊಸ ಆವಿಷ್ಕಾರಕ್ಕೆ ಕೈ ಹಚ್ಚುತ್ತಾರೆ. ಇದರಿಂದಾಗಿಯೇ ಅವರ ಯಾವುದೇ ಬರಹವನ್ನು ಓದುಗ ಗಂಭೀರವಾಗಿ ಪರಿಗಣಿಸುತ್ತಾನೆ. ಹೀಗಾಗಿ 'ಮಿಥುನ' ಕವನ ಸಂಕಲನವು ಕಾವ್ಯದ ಬಗೆಗೆ ನಮಗಿರುವ ಕಲ್ಪನೆಗಳ ಮೇರೆಯನ್ನು ಪಲ್ಲಟಗೊಳಿಸುತ್ತದೆ.

'ಮಿಥುನ' ಕವನ ಸಂಕಲನದ ಕವಿತೆಗಳು ಒಂದಕ್ಕೊಂದು ಪೂರಕ ಸಂಬಂಧವನ್ನು ಕಟ್ಟಿಕೊಡುವ ಸ್ವರೂಪವನ್ನು ಪಡೆದಿವೆ. ಅನಂತಮೂರ್ತಿಯವರು ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ನಿರಂತರವಾಗಿ ಬೆಳೆಸುತ್ತಿರುವ ವೈಚಾರಿಕ ವಾಗ್ವಾದಕ್ಕೆ ಒಂದು ಭಿತ್ತಿಯನ್ನು ಕಟ್ಟಿಕೊಡುವ ಸ್ವರೂಪವನ್ನು ಇದು ಹೊಂದಿದೆ. ಆಪ್ತವಾದ ನಿವೇದನೆಯ ಧಾಟಿ ಇಲ್ಲಿನ ಎಲ್ಲ ಕವನಗಳ ಹಿಂದೆ ಕ್ರಿಯಾಶೀಲವಾಗಿದೆ. 'ಕವಿತೆಯೆಂದು ನಾನು ತಿಳಿದಿರುವ ಈ ರಚನೆ' ಎಂದು ತಮ್ಮ ಮೊದಲ ಮಾತಿನಲ್ಲಿಯೇ ಅವರು ಹೇಳಿಕೊಂಡಿದ್ದಾರೆ.

ಒಂದು ನಿರ್ದಿಷ್ಟ ಚಿಂತನೆಗೆ ಕಾವ್ಯರೂಪವನ್ನು ಪ್ರದಾನ ಮಾಡುವುದಕ್ಕೂ, ತನ್ನ ಅನುಭವ ಲೋಕದಿಂದ ಪ್ರಕಟಗೊಳ್ಳುವ ಚಿಂತನಶೀಲತೆಗೂ ಸಾಕಷ್ಟು ಅಂತರವಿದೆ. ಅನಂತಮೂರ್ತಿಯವರು ಎರಡನೆಯ ಕ್ರಮಕ್ಕೆ ವಿಶೇಷವಾಗಿ ಒಲಿದವರು. ಗಾಂಧಿವಾದ, ಮಾರ್ಕ್ಸ್‌ವಾದ, ಲೋಹಿಯಾ ಚಿಂತನೆಗಳು, ಭಕ್ತಿ, ಅನುಭಾವ, ಕಾಮ, ಪ್ರೇಮ, ಜಾತಿ, ಧರ್ಮ, ಚರಿತ್ರೆ, ಸಂಸ್ಕೃತಿಯ ಒಳಗಿನ ನಂಬಿಕೆ-ಅಪನಂಬಿಕೆಗಳು- ಇವು ಅನಂತಮೂರ್ತಿಯವರ ಪ್ರಧಾನ ಶೋಧನಾವಲಯ. ಈ ಶೋಧನೆಯ ವಿಭಿನ್ನ ಪ್ರಕ್ರಿಯೆ ಇಲ್ಲಿ ಕಾವ್ಯವಾಗುತ್ತಿದೆ.

ನಮ್ಮ ಸಮಕಾಲೀನ ಸಾಹಿತ್ಯದ ಸಂದರ್ಭ ಎದುರಿಸುತ್ತಿರುವ ಮುಖ್ಯ ಬಿಕ್ಕಟ್ಟುಗಳು ಹಾಗೂ ಸವಾಲುಗಳು ಇಲ್ಲಿನ ಅನೇಕ ಕವಿತೆಗಳಲ್ಲಿ ಚಿಂತನೆಗೆ ಗುರಿಯಾಗಿವೆ. ಇವಕ್ಕೆ 'ಈಚಿನ ನಮ್ಮ ಕವಿತೆ' ಎಂಬ ಕವಿತೆಯನ್ನೇ ನೋಡಬಹುದು. ನಮ್ಮ ಕಾವ್ಯ ಕೆಲವೊಮ್ಮೆ ಪಡೆಯುವ ಎಚ್ಚರ, ಮತ್ತೆ ಅದು ಕಳೆದುಕೊಳ್ಳುತ್ತಿರುವ ಸೂಕ್ಷ್ಮತೆ ಇವುಗಳ ಬಗೆಗೆ ಈ ಕವಿತೆ ಹೇಳುತ್ತದೆ. ಕಾವ್ಯ ಪ್ರಪಂಚದಲ್ಲಿ ಮೊಳಗುವ ಘೋಷಣೆಗಳಿಗೂ, ಅಭಿವ್ಯಕ್ತಿಗೂ ಇರುವ ಅಂತರ ತುಂಬ ಗಂಭೀರವಾದದ್ದು. ಅಂಥ ಸಮಸ್ಯೆಯನ್ನು ಈ ಚಿಕ್ಕ ಕವನ ವಿವೇಚನೆಗೆ ಒಳಗುಮಾಡಿದೆ. ಇಲ್ಲಿನ ಬಹುತೇಕ ಕವಿತೆಗಳಿಗೆ ಹಾಗೆ ನೋಡಿದರೆ ಒಂದು ಮುಕ್ತಾಯವೆಂಬುದಿಲ್ಲ. ಒಂದು ಕವಿತೆ ಮತ್ತೊಂದು ಕವಿತೆಯಲ್ಲಿ ಬೆಳೆಯುತ್ತ ಮುಂದುವರೆಯುವಂಥದ್ದು. ಎರಡು ಸಂಗತಿಗಳ ಮಧ್ಯೆ, ವಿಭಿನ್ನ ಅನುಭವಗಳ ಮಧ್ಯೆ ಗೋಚರಗೊಳ್ಳುವ ವಿಶಿಷ್ಟ ಹೊಳವುಗಳ ಮೂಲಕ ಕವಿತೆ ಸಾಕ್ಷಾತ್ಕಾರಗೊಳ್ಳುವ ಕ್ರಮ ಈ ಕವನಗಳ ವಿಶಿಷ್ಟತೆಯಾಗಿದೆ. 'ಡಯಲೆಕ್ಟಿಕ್ಸ್‌ನ ಹೆಗಲ್ ಮತ್ತು ನಿತ್ಯಭಿಕ್ಷೆಯ ಪುರಂದರ', 'ರಿಲ್ಕೆ ಕಂಡ (ಕಾಣದ) ಬೆಕ್ಕು' , 'ಕುಮಾರ ಗಂಧರ್ವ', 'ಸೋವಿಯತ್ ರಷ್ಯಾ' ಇಂಥ ಕವಿತೆಗಳಲ್ಲಿ ಮೇಲೆ ಹೇಳಿದ ಅಂಶಗಳನ್ನು ಕಾಣಬಹುದಾಗಿದೆ.

ಇಲ್ಲಿನ ಬಹುತೇಕ ಕವಿತೆಗಳು ರಾಜಕಾರಣದ ನೆಲೆಗಳನ್ನು ವಿಮರ್ಶೆಗೆ, ವಿಶ್ಲೇಷಣೆಗೆ ಗುರಿಪಡಿಸುತ್ತವೆ. ವಸಾಹತುಶಾಹಿ ಅನುಭವಗಳಿಗೆ ಪ್ರತಿಕ್ರಿಯೆ ತೋರುವ ದೃಷ್ಟಿಕೋನ, ಭಾರತೀಯ-ಪಾಶ್ಚಾತ್ಯ ಅನುಭವಗಳ ಮಧ್ಯೆ ಹುಟ್ಟುವ ಅನೇಕ ತುಡಿತಗಳು. ಮನುಷ್ಯ ದೈನಿಕಗಳು ಮತ್ತು ಶಕ್ತಿರಾಜಕಾರಣ ಇವುಗಳ ದ್ವಂದ್ವ ಹೀಗೆ ರಾಜಕಾರಣದ ಒಳಸುಳಿಗಳನ್ನು ಶೋಧಿಸುವ ಬಗೆ ಈ ಸಂಕಲನದ ವಿಶಿಷ್ಟ ಧ್ವನಿಯಾಗಿದೆ.

ಇಲ್ಲಿನ ಮಹತ್ವದ ಕವಿತೆಗಳೊಂದಿಗೆ ಕೇವಲ ನಿರೂಪಣೆಯ ಹಂತದಲ್ಲೇ ನಿಂತುಬಿಡುವ ಅನೇಕ ಪದ್ಯಗಳೂ ಇವೆ. ಸಂಗತಿಯನ್ನು ನಿರೂಪಿಸುವ ಹಂತಕಷ್ಟೇ ನಿಂತು ಹೆಚ್ಚಿನ ಕ್ರಿಯಾಶೀಲತೆಯನ್ನು ಪಡೆಯದೇ ಹೋಗುವುದನ್ನು ಇಂಥ ರಚನೆಗಳಲ್ಲಿ ಕಾಣುತ್ತೇವೆ. 'ದೇವಾನಾಂಪ್ರಿಯ', 'ರಾಮಾನುಜನ್ ಕವಿತೆ ಓದಿ' ಇಂಥ ಕವಿತೆಗಳನ್ನು ಈ ಗುಂಪಿಗೆ ಸೇರಿಸಬಹುದು.

ಕವಿತೆಯ ಮೈಯಲ್ಲೇ ವಿಚಾರ, ಚಿಂತನೆ ಒಡಮೂಡಿದಾಗ ಸಫಲವಾಗುವ ರಚನೆಗಳು ಸಾಕಷ್ಟು ಪ್ರಮಾಣದಲ್ಲಿ ಈ ಸಂಕಲನದಲ್ಲಿವೆ. ವಿಚಾರವೊಂದಕ್ಕೆ ಕವನದ ರೂಪವನ್ನು ತೊಡಿಸಿದಾಗ ಅದು ಜಾಣ್ಮೆ ಮಾತ್ರವಾಗಿ ಉಳಿದುಬಿಡುತ್ತದೆ. ಈ ಎರಡು ತುದಿಗಳ ನಡುವೆ 'ಮಿಥುನ' ಸಂಕಲನದ ಮಹತ್ವವಿದೆ. ಇವೆಲ್ಲದರ ಮಧ್ಯೆಯೂ ಹೇಳಬೇಕಾದ ಮಾತೆಂದರೆ - ಸಮಕಾಲೀನ ಜರೂರು ಈ ಎಲ್ಲ ಕವನಗಳ ಹಿಂದೆ ದಟ್ಟವಾಗಿ ಹಬ್ಬಿಕೊಂಡಿದೆ .

ಈ ಅವಧಿಯಲ್ಲಿ ಪ್ರಕಟವಾಗಿರುವ ಅಬ್ದುಲ್ ರಶೀದ್ ಅವರ 'ನನ್ನ ಪಾಡಿಗೆ ನಾನು'ಕವನ ಸಂಕಲನ ಕವಿತೆಯ ಮಾಧ್ಯಮವನ್ನು ಗಂಭೀರವಾಗಿ ಪರಿಗಣಿಸಿರುವ ಕೃತಿಯಾಗಿದೆ. ತಮ್ಮ ಮುಂದೆ ಇರುವ ಮಹತ್ವದ ಕಾವ್ಯಸೃಷ್ಟಿಯ ಬಗೆಗೆ ವಿಶೇಷ ತಿಳುವಳಿಕೆಯನ್ನು ಇಟ್ಟುಕೊಂಡು ಇವರು ಕಾವ್ಯಪ್ರಯೋಗದಲ್ಲಿ ತೊಡಗಿದ್ದಾರೆ.

ಈ ಸಂಕಲನದಲ್ಲಿ ೧೯ ಕವಿತೆಗಳಿವೆ. ಈ ಸಂಕಲನ ಒಂದೇ ಅನುಭವದ ಬೇರೆ ಬೇರೆ ಸ್ತರಗಳನ್ನು ಅನ್ವೇಷಿಸುವ ಸ್ವರೂಪದ್ದು. ಈ ಸಂಕಲನದ ಕವಿತೆಗಳಲ್ಲಿ ಮೇಲಿಂದ ಮೇಲೆ ಮುಗ್ಧ ಹುಡುಗನೊಬ್ಬ ಕಾಣಿಸಿಕೊಳ್ಳುತ್ತಾನೆ. ಆ ಹುಡುಗ ಇಲ್ಲಿನ ಕವಿತೆಗಳ ಕೇಂದ್ರ. ಅವನು ಒಳಗೊಳ್ಳುವ ಅನೇಕ ಸಂಬಂಧಗಳು ಈ ಕವಿತೆಗಳ ಮುಖ್ಯ ಆವರಣ. ಈ ಆವರಣದಲ್ಲಿ ಹುಡುಗ ಅತ್ಯಂತ ಸಾಚಾ ಆದ ತನ್ನ ಆಲೋಚನೆಗಳಿಗೆ, ಅನುಭವಗಳಿಗೆ ಎದುರಾಗುತ್ತಾನೆ. ಮುಗ್ಧತೆ ಅನುಭವಗಳನ್ನು, ಅದರ ಸೂಕ್ಷ್ಮತೆಗಳನ್ನು ಗಾಢವಾಗಿ ಒಳಗೊಳ್ಳಲು ತಕ್ಕ ಒಂದು ಅವಸ್ಥೆ ಎಂಬುದು ಆ ಹುಡುಗನ ಮೂಲಕ ತಿಳಿಯುತ್ತದೆ. ಇಂಥ ಮುಗ್ಧತೆಯ ಒಳಗೆ ಹುದುಗಿ ಹೋಗಬೇಕೆಂಬ ತೀವ್ರತೆ ಹುಡುಗನದಾಗಿದೆ. ಗಾಢವಾದ ಆತ್ಮೀಯತೆ, ಆತ್ಮೀಯತೆಯಲ್ಲಿ ಹುಟ್ಟುವ ವಿಷಾದ, ಸಂಬಂಧಗಳ ವೈಚಿತ್ರ್ಯದ ಬಗೆಗೆ ತೋರುವ ಕುತೂಹಲ - ಇವೆಲ್ಲ ಇಲ್ಲಿ ಚಿಂತನೆಗೆ ಗುರಿಯಾಗುತ್ತವೆ.

ರಶೀದ್ ತಾರುಣ್ಯದ ನವುರು ಭಾವನೆಯ ವಲಯದಲ್ಲಿಯೇ ಅಡಗಿರುವ ಹಲವು ಹನ್ನೊಂದು ಅನುಭವಗಳಿಗೆ ಆಕಾರ ಕೊಡಲು ಹೊರಟಿರುವ ಕವಿ. ಇಂಥ ಅನುಭವ ವಲಯವನ್ನು ಶೋಧಿಸುವ ಕಾವ್ಯಕ್ಕೆ ತನ್ನದೇ ಆದ ಪರಿಮಿತಿ ಇದೆ. ಆದರೆ ಅಂಥ ಪರಿಮಿತಿ ಇರುವ ಸಾಧ್ಯತೆಗಳನ್ನು ಸೂರೆಗೊಳ್ಳಲು ಈ ಪುಟ್ಟ ಕವನ ಸಂಕಲನ ಹವಣಿಸಿದೆ. ತನ್ನ ಅನುಭವ-ಅನುಭೂತಿ ಪ್ರಪಂಚವನ್ನಷ್ಟೇ ನೆಮ್ಮಿ ಇವರು ಕವಿತೆಗಳನ್ನು ಬರೆಯುತ್ತಾರೆ. ಕವಿತೆಯನ್ನು ಬರೆಯಲೆಂದೇ ವಸ್ತು-ವಿಷಯಗಳನ್ನು ಹೆಕ್ಕಿ ಕವಿತೆಯನ್ನು ನೀರಸ ಹೇಳಿಕೆಗಳ ಮೊತ್ತವನ್ನಾಗಿಸುವುದನ್ನು ನಾವಿಲ್ಲಿ ಕಾಣುವುದಿಲ್ಲ. ಈ ದೃಷ್ಟಿಯಿಂದ ಇಲ್ಲಿನ ಕವಿತೆಗಳು ತನ್ನ ಪರಿಮಿತಿಯಲ್ಲೇ ಅಪ್ಪಟ ಕವಿತೆಗಳು, ಅಚ್ಚುಕಟ್ಟಾದ ಕವಿತೆಗಳು.

ಸೋನೆ ಮಳೆಯ ಸಂಜೆ (ಜಿ.ಎನ್. ಮೋಹನ್) ಸಂಕಲನದಲ್ಲಿ ಗಂಭೀರ ಚಿಂತನೆಗೆ ಹಚ್ಚುವ ಅನೇಕ ಕವಿತೆಗಳಿವೆ. ಚಿತ್ರಕ ಸಾಮರ್ಥ್ಯದಿಂದ ಕೂಡಿದ ಈ ಕವಿಯ ಮೊದಲ ಸಂಕಲನ ಕಾವ್ಯ ಮಾಧ್ಯಮದ ಬಗೆಗೆ ಕವಿಗೆ ಇರುವ ಶ್ರದ್ಧೆ-ಎಚ್ಚರಗಳನ್ನು ಪರಿಚಯಿಸುತ್ತದೆ. ಸಂಕಲನಕ್ಕೆ ಹಿರಿಯ ಕವಿ ಸು.ರಂ. ಎಕ್ಕುಂಡಿಯವರ ಮುನ್ನುಡಿ ಇದೆ. ಕತೆಗಾರ ಜಿ.ಎಸ್. ಸದಾಶಿವ ಸಂಕಲನದ ಮುಖ್ಯ ಆಶಯಗಳನ್ನು ಕುರಿತು ಬರೆದಿದ್ದಾರೆ.

ಜಿ.ಎಸ್. ಸದಾಶಿವ ಹೇಳುವ ಹಾಗೆ ನೆನಪು-ಈ ಸಂಕಲನದ ಸ್ಥಾಯಿಭಾವ. ನೆನಪುಗಳ ಮೂಲಕ ವರ್ತಮಾನವನ್ನು, ಅದರ ಬಹುಮುಖತೆಯನ್ನು ಅನಾವರಣಗೊಳಿಸುವುದನ್ನು ಇಲ್ಲಿನ ಅನೇಕ ಕವಿತೆಗಳಲ್ಲಿ ಕಾಣುತ್ತೇವೆ. ವರ್ತಮಾನದ ಜಗತ್ತಿನ ವಿಹ್ವಲತೆ, ಆತಂಕಗಳು ಇಲ್ಲಿನ ಅನೇಕ ಕವಿತೆಗಳ ಮುಖ್ಯ ಕೇಂದ್ರ. 'ಕೇರಳ ೯೧', 'ಗುಲ್ಬರ್ಗಾ' 'ಹಲವಾರು ಲೆಬನಾನ್', 'ಪಂಪ ಬಿಕ್ಕುತಾನೆ...' ಇಂಥ ಕವಿತೆಗಳಲ್ಲಿ ತೀರ ವರ್ತಮಾನಕ್ಕೆ ಸ್ಪಂದಿಸಿರುವ ಬಗೆ ಗಮನೀಯವಾದದ್ದಾಗಿದೆ.

ಅಲ್ಲಿ ಹಾಡಿಗಳಲ್ಲಿ ಕಣ್ಣೀರ ಕೋಡಿಗಳು
ಒಂದಿನಿತು ನಕ್ಕಾಗ ಅಕ್ಷರದ ಹೊಳಪು

* * *

ವಾರೆ ನೋಟಗಳಲ್ಲಿ, ಕಾನನಕ್ಕೆ ಮುಡಿಸಿದ್ದು
ಅಕ್ಷರದ ಹೂವು

(ಕೇರಳ -೯೧)

ಪರಿಸರ, ಮನುಷ್ಯ, ದುಃಖ, ಪ್ರೀತಿ, ಮೌನ ಇವುಗಳ ಮಧ್ಯೆ ಕೇರಳದಲ್ಲಿ ಸಾಕ್ಷರತೆ ಮೂಡಿದ್ದನ್ನು ಕುರಿತು ಈ ಕವಿತೆ ಹೇಳಿದರೆ 'ಪಂಪ ಬಿಕ್ಕುತಾನೆ.....' ಕವಿತೆಯಲ್ಲಿ ಪ್ರೀತಿ, ಜೀವನೋತ್ಸಾಹಗಳ ಮಧ್ಯೆ ಎರಗುವ ಕ್ರೌರ್ಯ, ಅಂಥ ಕ್ರೌರ್ಯದ ಪರಮಾವಧಿ ಸ್ಥಿತಿಯಾದ ಯುದ್ಧದ ಮಧ್ಯೆ ಮರೆಯಾಗುವ ಕಾವ್ಯ - ಇವುಗಳನ್ನು ಕುರಿತ ಚಿಂತನೆ ಇದೆ. ಸಮಕಾಲೀನ ವಸ್ತು, ಕಾವ್ಯಕ್ಕೆ ದ್ರವ್ಯವಾಗುವುದು ಅಷ್ಟು ದೊಡ್ಡ

ವಿಚಾರವೇನಲ್ಲ. ಅದನ್ನು ಸೂಕ್ಷ್ಮವಾಗಿ ನಿರ್ವಹಿಸುವುದು ಮುಖ್ಯ ಸವಾಲು. ಅಂಥ ಸವಾಲನ್ನು ಎದುರಿಸುವ ಸತ್ತ್ವ ಈ ಸಂಕಲನದಲ್ಲಿದೆ.

'ಅಭಿನಯದ ಬಯಲು' ವೀಚಿಯವರ ಐದನೆಯ ಕವನ ಸಂಕಲನ. ಕನ್ನಡ ಕಾವ್ಯ ಪರಂಪರೆಯಲ್ಲಿ ಎಂದಿನಿಂದಲೂ ಪ್ರಮುಖ ಧಾರೆಯಾಗಿರುವ ವಿಲಕ್ಷಣ ಸಂರಚನೆಯನ್ನು ಮತ್ತೆ ಹೊಸ ಉಪಕ್ರಮದಲ್ಲಿ ಮಂಡಿಸುವ ವೀಚಿಯವರ ರೀತಿ ಪ್ರಸ್ತುತ ಸಂಕಲನದಲ್ಲಿ ಹೆಚ್ಚು ಸಾಂದ್ರವಾಗಿ ಮೈಪಡೆದಿದೆ. ಮೇಲುಸ್ತರದಲ್ಲಿ ಒಂದು ರೀತಿಯ ಬೆಡಗಿನ ಕ್ರಮ ಪ್ರಧಾನವಾಗಿರುವಂತೆ ತೋರಿದರೂ ವಾಸ್ತವವಾಗಿ ಅದು ಹಾಗಲ್ಲ. ಕನ್ನಡ ಕಾವ್ಯದ ಒಳಸುಳಿಗಳನ್ನು ಚೆನ್ನಾಗಿ ಬಲ್ಲ ವೀಚಿ ಜಗತ್ತಿನ ಬೇರೆ ಬೇರೆ ಕಾವ್ಯಮಾದರಿಗಳಿಂದ ಪ್ರಭಾವಿತರಾಗದೆ ತಮ್ಮ ವಿಶಿಷ್ಟತೆಯನ್ನು ತೋರುವ ಕವಿ. ದೇಸಿ ಸಂವೇದನೆಯ ಸೂಕ್ಷ್ಮತೆಯನ್ನು ಅವರ ಯಾವುದೇ ಕವಿತೆಯ ಮೂಲಕ ಸ್ಪಷ್ಟವಾಗಿ ಗುರುತಿಸಬಹುದು.

'ಅಭಿನಯದ ಬಯಲು' ಕವಿತೆ, ವೀಚಿಯವರ ಕಾವ್ಯ ಎದುರಿಸುತ್ತಿರುವ ಎಲ್ಲ ತಳಮಳಗಳ ಒಟ್ಟಾರೆ ಅಭಿವ್ಯಕ್ತಿಯಾಗಿದೆ. ಕಾವ್ಯ ಮತ್ತು ವ್ಯಕ್ತಿತ್ವ, ಪರಿಸರ-ಹೆಣ್ಣು, ಪ್ರತಿಭೆ-ಮೌನ ಹೀಗೆ ಹಲವು ಒತ್ತಡಗಳ ಮಧ್ಯೆ ನಿಂತ ನಾಯಕನ ಜೀವನ ವೃತ್ತಾಂತವನ್ನು ಈ ಕವಿತೆ ಬಯಲುಗೊಳಿಸುತ್ತಿದೆ. ಗ್ರಾಮೀಣ ಪರಿಸರದ ದಟ್ಟ ವಿವರಗಳನ್ನು ಬಳಸಿ ಆ ಮೂಲಕ ಸಮಕಾಲೀನ ಸಂದರ್ಭದ ವೈರುಧ್ಯಗಳನ್ನು ಕಾವ್ಯವಾಗಿಸುವ ಸ್ವರೂಪವನ್ನು ಇಲ್ಲಿ ಕಾಣುತ್ತೇವೆ. ಜಿ. ರಾಜಶೇಖರ್ ತಮ್ಮ ಮುನ್ನುಡಿಯಲ್ಲಿ- 'ವಿಜ್ಞಾನ, ಪ್ರಗತಿ ಮುಂತಾದ ನಾಗರಿಕ ಸಮಾಜದ ಕಣ್ಕಟ್ಟುಗಳನ್ನು ತಿರಸ್ಕರಿಸುವ ಒಂದು ನಮೂನೆ' ಎಂದು ವೀಚಿಯವರ ಕವಿತೆಗಳನ್ನು ವಿವರಿಸಿದ್ದಾರೆ. ಅಲ್ಲದೆ 'ವೀಚಿಯವರು ಸುಕುಮಾರ ಮನೋಧರ್ಮದ ಕವಿಯಷ್ಟೇ ಅಲ್ಲ; ನಮ್ಮ ಮನಸ್ಸುಗಳನ್ನು ಆಳುವ ವಿಚಾರಗಳ ಬಗ್ಗೆ ಅರ್ಥಪೂರ್ಣ ಭಿನ್ನಮತವನ್ನು ಹೊಂದಿರುವ ಚಿಂತಕನೂ ಹೌದು' ಎಂದಿದ್ದಾರೆ.

ಜಿ.ಎಸ್. ಶಿವರುದ್ರಪ್ಪನವರ ಹನ್ನೆರಡನೆಯ ಕವನ ಸಂಕಲನ 'ಚಕ್ರಗತಿ' ಮುವ್ವತ್ತೇಳು ಸ್ವಂತ ಕವಿತೆಗಳು ಹಾಗೂ ಹತ್ತು ಅನುವಾದಿತ ಕವನಗಳಿಂದ ಕೂಡಿದೆ. ಜಿ.ಎಸ್.ಎಸ್. ಅವರ ಹಿಂದಿನ ಕವನ ಸಂಕಲನಗಳ ಧಾಟಿ-ಧೋರಣೆಗಳೆ ಇಲ್ಲಿಯೂ ಪ್ರಧಾನ. ಬಹುತೇಕ ಕವಿತೆಗಳು ಕೇವಲ ಹೇಳಿಕೆ ಮಟ್ಟದಲ್ಲಿಯೇ ನಿಂತುಬಿಡುವ ಸೀಮಿತ ಉದ್ದೇಶದ ರಚನೆಗಳಾಗಿವೆ. 'ನೀವೇ ಹೇಳಿ', 'ಕೆಲವು ಪ್ರಶ್ನೆಗಳು' ಸುಲಭ ಹಾಗೂ ಸಾಮಾನ್ಯ ತರ್ಕದ ಮೇಲೆ ನಿಂತಿವೆ. ಓದುಗನನ್ನು ಉದ್ದೇಶಿಸಿ ಬರೆದಂತೆ ತೋರುವ 'ಕೆಲವು ಪ್ರಶ್ನೆಗಳು' ಕವಿತೆಯ ಮೊದಲ ಭಾಗವನ್ನು ಇಲ್ಲಿ ಉದಹರಿಸಬಹುದು:

> ಸೊಂಪಾದ ಹಸಿರು ಹುಲ್ಲಿನ ಮೇಲೆ ಹಾರಾಡುವ
> ಹಳದಿ ಚಿಟ್ಟೆಗಳನ್ನು ನೋಡಿದ್ದೀಯಾ?
> ನೋಡಿಲ್ಲವೆ? ಬಹುಶಃ ನಿನಗೆ ಸಂತೋಷವೆಂದರೇನೆಂದು
> ಗೊತ್ತೇ ಇಲ್ಲ

ಸೌಂದರ್ಯವೆಂದರೇನೆಂಬುದೂ ಗೊತ್ತೇ ಇಲ್ಲ
ಈ ಎರಡರ ನಡುವೆ
ಕಣ್ಣೀರಿರಬಹುದೆಂಬುದೂ ಗೊತ್ತೇ ಇಲ್ಲ.

ಹೀಗೆ ಕೆಚ್ಚಲುಗುಮ್ಮಿ ಹಾಲ್ಕುಡಿಯುವ ಕರು, ಆಕಾಶದಿಂದ ಧಾರಾಕಾರವಾಗಿ ಸುರಿಯುವ ಮಳೆ, ನಿರಭ್ರವಾದ ನೀಲಿಯ ಮಹಾಗಗನ ಇವುಗಳೆಲ್ಲಕ್ಕೂ 'ನೋಡಿಲ್ಲವೆ?' ಎಂಬ ಪ್ರಶ್ನೆ ಬಿದ್ದು ಪಕ್ಕದಲ್ಲೇ ಚೈತನ್ಯ, ಪ್ರೀತಿ, ವಾತ್ಸಲ್ಯವೆಂಬ ಸರಳ ಉತ್ತರವನ್ನು ಕವನ ಕೊಡುತ್ತದೆ. ಇದು ಒಂದು ರೀತಿಯ ಲೆಖ್ಖಾಚಾರದ ಪದ್ಯರಚನೆ. ಕಾವ್ಯವನ್ನು ತೀರಾ ಸರಳಗೊಳಿಸಿಕೊಂಡದ್ದರ ಪರಿಣಾಮ. 'ಸಂಬಂಧ' 'ಪ್ರಸ್ತುತ' 'ಗಾಳ' 'ಕಾವ್ಯೋದಯ'ಇಂಥ ಕವಿತೆಗಳು ಕೂಡ ಸಾಮಾನ್ಯ ತರ್ಕದ ಪರಿಧಿಯನ್ನು ದಾಟುವುದೇ ಇಲ್ಲ. ಮಾತುಗಾರಿಕೆಗೆ ಮನಸೋತ ಕವಿಯ ಗೀಳಿನ ರಚನೆಗಳಾಗಿ ಮಾತ್ರ ತೋರುತ್ತವೆ.

ಇಷ್ಟೆಲ್ಲ ಸೀಮಿತ ಉದ್ದೇಶದ ರಚನೆಗಳನ್ನು ಬರೆದ ಕವಿಯೇ 'ಪುರಿ ಜಗನ್ನಾಥನ ದೇಗುಲದಲ್ಲಿ' 'ಅಸ್ತಮಾನ' ದಂಥ ಕವಿತೆಗಳು ನಿಜಕ್ಕೂ ದಟ್ಟವಾದ ಅನುಭವಕ್ಕೆ ಒಡ್ಡಿದ ಪ್ರತೀಕಗಳಾಗಿವೆ. 'ಅಸ್ತಮಾನ' ಲೋಕದ ನಿತ್ಯ ಸಂಗತಿಗಳ ಮಧ್ಯೆ ಕೃಷ್ಣನ ಅವಸಾನದ ದುರಂತ ಗೂಡೊಂದನ್ನು ಕಟ್ಟಿಕೊಡುತ್ತದೆ. ಪರಿಸರದ ವಿವರಣೆಗಳು, ಆ ವಿವರಣೆಗಳ ಮೂಲಕವೇ ನಿರ್ಮಾಣಗೊಳ್ಳುವ ಕೃಷ್ಣನ ವ್ಯಕ್ತಿತ್ವ, ಅಂಥ ವ್ಯಕ್ತಿತ್ವವನ್ನು ಆವರಿಸುವ ವ್ಯಾಧ, ಕೃಷ್ಣನ ಸಾವು ಹೀಗೆ ವಿಭಿನ್ನ ಅನುಭೂತಿಗಳನ್ನೇ ಕಟ್ಟಿಕೊಡುವ ಒಂದು ಸಾಂದ್ರ -ಗಂಭೀರ ರೂಪಕ ನಿರ್ಮಾಣವಾಗುತ್ತದೆ. ಇದನ್ನೆಲ್ಲಾ ಸಾಕ್ಷಿ ಪ್ರಜ್ಞೆಯೆಂಬಂತೆ ನಿಂತು ನೋಡಿ ಬೆರಗಾಗುವ ರೈತ ತನ್ನ ನಿತ್ಯದಲ್ಲಿ ನಿರ್ಲಿಪ್ತನಾಗಿ ತೊಡಗುವ ಬಗೆ ಇಡೀ ಕವಿತೆಯನ್ನು ಒಂದು ಗಂಭೀರ ಕಲ್ಪನೆಯನ್ನಾಗಿಸಿದೆ. 'ಪುರಿ ಜಗನ್ನಾಥನ ದೇಗುಲದಲ್ಲಿ' - ಜಗನ್ನಾಥನ ಕಣ್ಣುಗಳನ್ನೇ ಕೇಂದ್ರವಾಗಿಸಿಕೊಂಡ ಧ್ಯಾನ. ಸಂಸ್ಕೃತಿಯ ಅವಸ್ಥಾಂತರಗಳನ್ನು, ಸೃಜನಶೀಲತೆ, ಶ್ರಮಜೀವನ, ಯುದ್ಧದ ನೆನಪುಗಳು, ಶಾಂತಿ-ನಿಶ್ಶಬ್ದ, ಗಿರಿಜನರ ಸ್ಮೃತಿ ಇವೆಲ್ಲದರ ಕಲಾಂತರಗಳ ಸರಣಿಯ ಚಿಂತನೆಯನ್ನೇ ಪ್ರತಿಮಿಸುತ್ತದೆ.

ಎರಡನೆಯ ಭಾಗದಲ್ಲಿ ಚೀನಾ, ಜಪಾನ್, ಜೆಕ್, ಥಾಯ್, ಹಿಬ್ರೂ ಹಾಗೂ ವಿಯತ್ನಾಂ ದೇಶದ ಕವಿತೆಗಳಿವೆ. ಇವು ಅನುವಾದಿತ ಕವಿತೆಗಳಾಗಿದ್ದರೂ ಕನ್ನಡದ ಓದುಗನಿಗೆ ಒಂದು ಮಟ್ಟದಲ್ಲಿ ಸ್ವತಂತ್ರ ಕವಿತೆಗಳಿಂದ ಆಗುವ ಅನುಭವವನ್ನೇ ಕಟ್ಟಿಕೊಡುತ್ತವೆ. ಈ ದೃಷ್ಟಿಯಿಂದ ಈ ಹತ್ತೂ ಕವಿತೆಗಳು ಒಳ್ಳೆಯ ಅನುವಾದಗಳೆಂದು ಹೇಳಬಹುದು. ಮೂಲ ಕವಿತೆಯ ಪರಿಚಯವಿಲ್ಲದೆಯೂ ಈ ಕವಿತೆಗಳನ್ನು ಗ್ರಹಿಸಲು ಸಾಧ್ಯವಿದೆ.

ಮಮತಾ ಜಿ. ಸಾಗರ ತಮ್ಮ ಮೊದಲ ಸಂಕಲನ 'ಕಾಡ ನವಿಲಿನ ಹೆಜ್ಜೆ' ಯಲ್ಲಿ ಬೋಧನಾತ್ಮಕ ಆಶಯವನ್ನು ಪ್ರಧಾನವಾಗಿಸಿಕೊಂಡಿದ್ದಾರೆ. ಕವಿತೆಯೆಂದರೆ

ಅನುಭವದ ಮಂಡನೆ ಮಾತ್ರವಲ್ಲ ಅದೊಂದು 'ಶೋಧ' ಎಂದು ಇವರು ತಿಳಿದಿದ್ದಾರೆ. ವ್ಯಕ್ತ-ಅವ್ಯಕ್ತಗಳನ್ನು ಹೊಂದಿಕೆಗೆ ತರುವ ಮತ್ತು ಬೇರ್ಪಡಿಸುವ ವಿಧಾನದಲ್ಲಿಯೇ ಶೋಧನೆಯ ನೆಲೆಗಳಿವೆ ಎಂದು ಇವರು ತಿಳಿದಿದ್ದಾರೆ. ಶೋಧನೆಯೇ ಮುಖ್ಯ ಆಸಕ್ತಿಯಾದ ಕವಿಗಳ ದಾರಿಯಲ್ಲಿ ನಡೆದು ತಮ್ಮ ದನಿಯನ್ನು ನಿಚ್ಚಳವಾಗಿ ಗುರುತಿಸಿಕೊಳ್ಳುವ ಅಗತ್ಯವಂತೂ ಇದ್ದೇ ಇದೆ.

ಬಾಲ್ಯದ ನೆನಪುಗಳು, ತಾರುಣ್ಯದ ಬಹುಮುಖಿ ಅನುಭೂತಿಗಳು, ತಾಯ್ತನದ ಸಂಭ್ರಮ, ಅನುಭವಗಳ ಸ್ವೀಕೃತಿಯ ಪ್ರಪಂಚದ ನಡುವೆ ಇಲ್ಲಿನ ಅನೇಕ ಕವಿತೆಗಳು ಮೈ ಪಡೆದಿವೆ. ಈ ಕವಿತೆಗಳು ಒಂದು ನಿಶ್ಚಿತ ಧಾಟಿಯಲ್ಲೇ ಸಾಗುವುದರಿಂದ ಒಂದು ಬಗೆಯ ಏಕತಾನತೆ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. ನಮ್ಮ ಕವಯತ್ರಿಯರ ಮುಖ್ಯ ಕಾವ್ಯಾಸಕ್ತಿಯಾದ ಹೆಣ್ಣು-ಗಂಡು, ನೆನಪು-ವರ್ತಮಾನ, ಉತ್ಸಾಹ-ವಿಷಾದ ಇವುಗಳ ಶೋಧ ಇವರ ಕಾವ್ಯಕ್ಕೂ ಮುಖ್ಯ ಭಿತ್ತಿ.

ಎಚ್.ಎಲ್. ಪುಷ್ಪ ಅವರ 'ಅಮೃತಮತಿ ಸ್ವಗತ' ಕವನ ಸಂಕಲನ ಕವಯತ್ರಿ ಪ್ರಕಟಿಸುತ್ತಿರುವ ಮೊದಲ ಕವನ ಸಂಕಲನ. ಈ ಸಂಕಲನದ ಬಹುತೇಕ ಕವಿತೆಗಳು ಹೆಣ್ಣು-ಗಂಡುಗಳ ಸಂಬಂಧದ ಸ್ವರೂಪವನ್ನು ಕೇಂದ್ರವನ್ನಾಗಿಸಿಕೊಂಡಿವೆ. ಹೆಣ್ಣಿನ ದನಿ ಇಂದಿನ ಕನ್ನಡ ಕಾವ್ಯದಲ್ಲಿ ಹೆಚ್ಚು ತೀವ್ರವೂ ಖಚಿತವೂ ಆಗುತ್ತಲಿದೆ. ಈ ದಿಶೆಯಲ್ಲಿ ಪುಷ್ಪ ಖಚಿತವಾಗಿ ಹೆಜ್ಜೆ ಇಟ್ಟಿದ್ದಾರೆ. ಈ ಎಲ್ಲ ಕವಿತೆಗಳಲ್ಲಿ ಹರಿಯುವ 'ಸ್ವಗತ'ದ ನೆಲೆ ಈ ಸಂಕಲನದ ನಾಯಕಿಯ ಅಂತರಂಗದ ದನಿ ಮಾತ್ರ ಆಗದೆ ಹೆಣ್ಣಿನ ಸಂವೇದನೆಯ ಒಟ್ಟು ಸಂದರ್ಭವನ್ನೇ ಅಭಿವ್ಯಕ್ತಿಸುತ್ತದೆ. ಸಂಕಲನಕ್ಕೆ ಕವಿ ಎಚ್.ಎಸ್. ಶಿವಪ್ರಕಾಶ್ ಮುನ್ನುಡಿ ಬರೆದಿದ್ದಾರೆ. ಅದರಲ್ಲಿ ಕವಯತ್ರಿಯರ ಕಾವ್ಯದ ಅಭಿವ್ಯಕ್ತಿಯ ಬಗೆಗೆ ಮೌಲಿಕವಾದ ವಿವೇಚನೆ ನಡೆಸಿದ್ದಾರೆ.

ಪುಷ್ಪ ಅವರ ಕವಿತೆಗಳ ಎಲ್ಲ ಕವಿತೆಗಳಲ್ಲಿ ಹರಿಯುತ್ತಿರುವ ಕಾವ್ಯ ದ್ರವ್ಯ ಒಂದೇ. ಪ್ರೇಮ, ಮೌನ, ಆಸೆ - ಆಕಾಂಕ್ಷೆ, ಭಗ್ನತೆಯ ಮಧ್ಯೆಯೂ ಹುಟ್ಟುವ ಆಶಾವಾದ, ನೆನಪುಗಳು ಮತ್ತೆ ಮತ್ತೆ ಆವರ್ತನಗೊಳ್ಳುತ್ತವೆ. ಭಾಷೆಯ ಬಳಕೆಯಲ್ಲಿ ಹೆಚ್ಚಿನ ಜವಾಬ್ದಾರಿ ಬೇಕೆನಿಸುತ್ತದೆ. 'ಮಾಧವಿಯ ಸ್ವಗತ', 'ಮದರಂಗಿ ವೃತ್ತಾಂತ' 'ಆಕೆ, ಅವನು ಮತ್ತು ನದಿ' 'ಹಣತೆಗಳ ಹಾಡು' ಕವಯತ್ರಿ ಬರೆದಿರುವ ಉತ್ತಮ ಕವಿತೆಗಳು.

ಅಶೋಕ ಶೆಟ್ಟರ ಅವರ ಮೊದಲನೆಯ ಸಂಕಲನ 'ವಿಶ್ವವಿದ್ಯಾಲಯದ ವಾಚನಾಲಯದೊಳಗೆ' ಹೊಸ ಕವಿಯ ಎಲ್ಲ ಹುರುಪು, ಉತ್ಸಾಹದ ರಚನೆಗಳಿಂದ ಕೂಡಿದೆ. ಸಮಾಜ, ಮನುಷ್ಯ ಸಂಬಂಧಗಳ ಶೋಧ, ವ್ಯಕ್ತಿ ಮತ್ತು ಜಗತ್ತಿನ ಸಂಬಂಧಗಳ ಮಧ್ಯೆ ಪ್ರಕಟಗೊಳ್ಳುವ ತತ್ತ್ವಚಿಂತನೆ ಇವುಗಳು ಈ ಎಲ್ಲ ಕವಿತೆಗಳ ಮುಖ್ಯ ದ್ರವ್ಯ. ಕಾವ್ಯವನ್ನು ಕುರಿತು ಈ ಸಂಕಲನದಲ್ಲಿ ಅನೇಕ ಕವಿತೆಗಳಿವೆ. ತನ್ನ ಸೃಜನಶೀಲ ಕ್ರಿಯೆಯ ಬಗೆಗೆ ನಡೆಸಿರುವ ಚಿಂತನೆ ('ಕವಿತೆ', 'ಯಾರ ಕವಿತೆಗಳಿವು?')

ಗಳು ಗಮನಾರ್ಹವಾದ ರಚನೆಗಳಾಗಿವೆ. ಜಿ.ಎಸ್. ಆಮೂರ ಅವರು ಈ ಸಂಕಲನಕ್ಕೆ ಮುನ್ನುಡಿ ಬರೆದಿದ್ದಾರೆ. 'ಒಳ ಹೊರಗುಗಳೆರಡರ ಬಿಡಿಸಲಾರದ ಸಂಬಂಧದ ಅರಿವು' ಕವಿಯ ಮುಖ್ಯ ನೆಲೆಯೆಂಬುದನ್ನು ಅವರು ಗುರುತಿಸಿದ್ದಾರೆ. ಅಲ್ಲದೆ 'ತಾತ್ತ್ವಿಕ ತಿಳಿವಿನ ಶೋಧನೆ ' ಯನ್ನು ಕುರಿತು ಹೇಳಿದ್ದಾರೆ.ಈ ಸಂಕಲನದ ಕವಿ ವಿಚಾರವನ್ನು, ವೈಚಾರಿಕ ಪ್ರಶ್ನೆಗಳನ್ನು ಎದುರಿಸುವ ರೀತಿ ಅನೇಕ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ಗಂಭೀರ ಪ್ರಶ್ನೆಗಳಿಗೆ ಎದುರಾಗದೆ ಕವಿತೆಯನ್ನು ಕಟ್ಟುವ ಗೀಳಿಗೆ ಬಿದ್ದ ಅಸಂಖ್ಯ ಕವಿಗಣದ ಮಧ್ಯೆ ಶೆಟ್ಟರ್ ಅವರ ಕವಿತೆಗಳು ನಿಜಕ್ಕೂ ಅರ್ಥಪೂರ್ಣ ಸಾಧನೆ ಎಂದು ಹೇಳಲು ಸಂತೋಷವಾಗುತ್ತದೆ. 'ಕವಿ ವ್ಹಿಟ್‌ಮನ್‌ಗೊಂದು ಪದ್ಯ' 'ಸಾವು ಒಂದು ಕಲ್ಪನೆ' - ಇಂಥ ಕವಿತೆಗಳಲ್ಲಿ ವಿಭಿನ್ನ ಭಾವಗಳ ವಲಯವನ್ನು ಒಂದು ಸಂಕೀರ್ಣ ರೂಪಕವಾಗಿಸುವ ಪ್ರಯತ್ನವಿದೆ.

'ದಿಲ್ಲಿ ಮತ್ತು ಪಾರಿವಾಳ'- ರವಿ ಉಪಾಧ್ಯ ಅವರ ಐದನೆಯ ಸಂಕಲನ. ಇದರಲ್ಲಿ ಐವತ್ತು ಕವನಗಳಿವೆ. ಕವಿಯ ಬಹುಮುಖಿ ಆಸಕ್ತಿಯ ವಲಯವನ್ನು ಇಲ್ಲಿನ ಕವಿತೆಗಳಲ್ಲಿ ಕಾಣಬಹುದು. ಅತಿಯಾದ ಮಾತುಗಾರಿಕೆಯ ಚಪಲ ಇಲ್ಲಿನ ಕವಿತೆಗಳನ್ನು ಆವರಿಸಿದೆ. ಹತ್ತು ಮಾತಿಗಿಂತ ಒಂದು ರೂಪಕದ ಬಳಕೆ ಕವಿತೆಯನ್ನು ತೀವ್ರವಾಗಿಸಬಲ್ಲದು. ಪದ್ಯ ಬರೆಯುವುದನ್ನು ಸಲೀಸಾಗಿಸಿಕೊಂಡಿರುವುದರಿಂದ ಈ ಕವಿತೆಗಳು ಓದುಗನಲ್ಲಿ ವಿಭಿನ್ನ ಸಾಧ್ಯತೆಗಳನ್ನು ಕಟ್ಟಿಕೊಡುವುದರಲ್ಲಿ ವಿಫಲವಾಗಿವೆ. ದೇಶದ ಸಮಕಾಲೀನ ಪರಿಸ್ಥಿತಿಯ ಬಗೆಗೆ ವಿಶೇಷವಾಗಿ ಪ್ರತಿಕ್ರಿಯಿಸುವ ಆಶಯ ಈ ಸಂಕಲನದ ಮುಖ್ಯ ಆಸಕ್ತಿಯಾಗಿದೆ. ವ್ಯಂಗ್ಯ, ಆಕ್ರೋಶ, ಸಿಟ್ಟು ಮೇಲಿಂದ ಮೇಲೆ ಕಾಣಿಸಿಕೊಂಡರೂ ಅದರ ಹಿನ್ನೆಲೆಗೆ ಗಂಭೀರ ಕಾಳಜಿಗಳಿವೆ. ಸರಜೂ ಕಾಟ್ಕರ್ ಈ ಸಂಕಲನಕ್ಕೆ ಮುನ್ನುಡಿ ಬರೆದಿದ್ದಾರೆ.

ಪರಶುರಾಮ ಕಲಾಲ್ 'ಬೇಲಿಯಾಚೆಯ ಹೂವುಗಳು' ಅವರ ಮೊದಲನೆಯ ಸಂಕಲನ. ಇಲ್ಲಿನ ಬಹುತೇಕ ಕವಿತೆಗಳು ಸಾಮಾಜಿಕ ಹೋರಾಟದ ಮಧ್ಯೆ ಹುಟ್ಟಿದ ಕವಿತೆಗಳಾಗಿವೆ. ಸಾಮಾಜಿಕ ಕ್ರೌರ್ಯ, ಅಮಾನವೀಯತೆ, ದುಗುಡ, ಮನುಷ್ಯರ ದುಃಖ-ದುಮ್ಮಾನ ಈ ಎಲ್ಲ ಕವಿತೆಗಳಲ್ಲಿ ವಿಶಿಷ್ಟ ಚಿಂತನೆಗೆ ಗುರಿಯಾಗಿವೆ. ಕವಿತೆ ಕೇವಲ ಹೇಳಿಕೆಗಳ ಮೊತ್ತವಲ್ಲ ಎಂಬುದನ್ನು ಈ ಕವಿ ಅರಿತಿದ್ದಾರೆ.

ಸಾವಿಲ್ಲ ಅವಳಿಗೆ
ಜನತೆಯ ಜೀವ ಅವಳು

ಕಣ್ಣು ರೆಪ್ಪೆ ನೂತು
ಭವಿಷ್ಯದ ಕಂಬಳಿ ನೇಯುತ್ತಿದ್ದಾಳೆ.

ಹಸಿದ ಮಕ್ಕಳಿಗೆ
ನಿರೀಕ್ಷೆಯ ರೊಟ್ಟಿ ಸುಡುತ್ತಿದ್ದಾಳೆ.

('ದುಗುಡ ಮನುಷ್ಯರ ಲೋಕದಲ್ಲಿ')

ಇಂಥ ಅನೇಕ ಚಿತ್ರಗಳು ಈ ಸಂಕಲನದ ತುಂಬ ಇವೆ. ಜಗತ್ತಿನ ವಿಖ್ಯಾತ ಕವಿ ನೆರೂಡನನ್ನು ಕಲಾಲ್ ತುಂಬ ಪ್ರೀತಿ - ಶ್ರದ್ಧೆಗಳಿಂದ ಓದಿಕೊಂಡಿದ್ದಾರೆ. ಸಮಾಜದ ಕ್ರೌರ್ಯಕ್ಕೆ ಎದುರಾಗುವ ಅಂತರಂಗದ ಆಪ್ತತೆಯನ್ನು, ಅದರ ಸೂಕ್ಷ್ಮಗಳನ್ನು ಇವರು ಕಳೆದುಕೊಂಡಿಲ್ಲ. ಇವರು ಏನೇ ಬರೆದರು ಅದರ ಹಿಂದೆ ಅಂತರಂಗದ ಧ್ವನಿಯೊಂದು ಯಾವಾಗಲು ಜಾಗೃತವಾಗಿರುತ್ತದೆ. ಇದರಿಂದಾಗಿ ಪ್ರತಿಭಟನೆಯ ಧ್ವನಿಗೆ ವಿಶಿಷ್ಟತೆ ಒದಗಿ ಬಂದಿದೆ.

ದಿನನಿತ್ಯ ಎದುರಾಗುವ ಸಂಗತಿಗಳನ್ನು, ಹಾಗೂ ಸಮಕಾಲೀನ ಒತ್ತಡಗಳನ್ನು, ಅದರ ವಿಷಾದ ಮುಖವನ್ನು ಹೊರಪಡಿಸುವ 'ಕಾವ್ಯ ಬದುಕು', 'ಕಾವ್ಯದಲ್ಲಿ ರಕ್ತ', 'ಲೌಕಿಕ ಪ್ರೇಮದ ತುಣುಕುಗಳು', 'ರಕ್ತದ ಕಲೆಯ ಮನುಷ್ಯ' 'ಸೂರ್ಯ ಸ್ನಾನ' ದಂಥ ಕವಿತೆಗಳು ಕವಿಯ ಮುಂದಿನ ಕಾವ್ಯಸೃಷ್ಟಿಯ ಬಗೆಗೆ ಭರವಸೆಯನ್ನುಂಟುಮಾಡುತ್ತವೆ. ಸಂಕಲನಕ್ಕೆ ವಿಸ್ತಾರವಾದ ಮುನ್ನುಡಿಯನ್ನು ಬರೆದಿರುವ ಬರಗೂರು ರಾಮಚಂದ್ರಪ್ಪನವರು ಕಾವ್ಯ ಮತ್ತು ಸಮಕಾಲೀನತೆಯ ಮುಖ್ಯ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸಿದ್ದಾರೆ.

'ಭೂಮಧ್ಯರೇಖೆ'-ಚಿಂತಾಮಣಿ ಕೊಡ್ಲೆಕೆರೆ ಅವರ ಎರಡನೆಯ ಕವನ ಸಂಕಲನ. ಈ ಸಂಕಲನದ 'ನನಗೀಗ ಅನ್ನಿಸುತ್ತದೆ' ಎಂಬ ಕವನ ನೆನಪುಗಳನ್ನು ಕೇಂದ್ರವನ್ನಾಗಿಸಿಕೊಂಡು ತನ್ನ ಲೋಕವನ್ನು ಕಟ್ಟಿಕೊಳ್ಳುವ ಸ್ವರೂಪವನ್ನು ಕುರಿತದ್ದಾಗಿದೆ. ಹೀಗೆ ನೆನಪುಗಳ ಮೂಲಕ ವರ್ತಮಾನವನ್ನು ಸಂಯೋಜಿಸಿಕೊಳ್ಳುವ ದೃಷ್ಟಿ ಇಲ್ಲಿನ ಅನೇಕ ಕವಿತೆಗಳ ಮುಖ್ಯ ಧ್ವನಿ.

ಈ ಸಂಕಲನದಲ್ಲಿ ಕವಿಯ ಅನೇಕ ಆಸಕ್ತಿಗಳು ಪ್ರತಿಬಿಂಬಿತವಾಗಿವೆ. ಕೆಲವು ಗಂಭೀರ ಕವಿತೆಗಳಾದರೆ ಮತ್ತೆ ಕೆಲವು ಲಘುವಾದ ಆಶಯವನ್ನು ಹೊಂದಿದವುಗಳು. ಅವೆರಡರ ಉದ್ದೇಶಗಳೇ ಬೇರೆ ಎನ್ನಲು ಸಾಧ್ಯವಿದ್ದರೂ ಒಬ್ಬನೇ ಕವಿ ಬರೆಯುತ್ತಿರುವುದರಿಂದ ಒಟ್ಟು ಧೋರಣೆಗಳೊಂದಿಗೆ ಒಂದು ಸತತ ಸಂಬಂಧವಿರಬೇಕಾದದ್ದು ಅನಿವಾರ್ಯ ಎನ್ನಿಸುತ್ತದೆ. ಇಲ್ಲಿನ ಅನೇಕ ಕವಿತೆಗಳ ಸಂದರ್ಭದಲ್ಲಿ ಈ ಅನಿವಾರ್ಯತೆ ತೋರುವುದಿಲ್ಲ. ಪುಟದ ಕಡೆಯಲ್ಲಿ ಅಚ್ಚುಮಾಡಿರುವ ಚುಟುಕಗಳು ಕೇವಲ ಪ್ರಾಸಗಳ ಆಟಕ್ಕಷ್ಟೇ ಸೀಮಿತವಾಗಿ ಕವಿಯ ಪದ್ಯ ರಚನೆಯ ಸಾಮರ್ಥ್ಯದ ಮೇಲೆ ಒಂದಿಷ್ಟು ಬೆಳಕು ಚೆಲ್ಲುತ್ತದೆ. ಇಂಥ ರಚನೆಗಳ ಬಗೆಗೆ ಯಾವ ತಕರಾರು ಇಲ್ಲ. ಆದರೆ ಕವಿಯ ಗಂಭೀರ ಉದ್ದೇಶಗಳನ್ನೇ ಇಂಥ ರಚನೆಗಳು ಮರೆಮಾಡಿಬಿಡುತ್ತವೆ. ಸಂಕಲನಕ್ಕೆ ಬೆನ್ನುಡಿ ಬರೆದಿರುವ ಜಯಂತ ಕಾಯ್ಕಿಣಿಯವರ ಮಾತು ಹೀಗಿದೆ : "ಸಂಧಿಕಾಲದ ಪ್ರಶ್ನೆಗಳ ಹಿಂದೆ ಹಲುಬುವ ನಿನ್ನ ಕವಿತೆಗಳಲ್ಲಿ ಒಮ್ಮೆ ಸಮುದ್ರದ ನೆಗಸಾದರೆ ಒಮ್ಮೆ ನದಿಯ ತಂಪು. ಮಗದೊಮ್ಮೆ ಬರೀ ದಂಡೆಯ ಮಾತು."

ಪುರಾಣ ಪ್ರತೀಕಗಳನ್ನು ಬಳಸಿಕೊಳ್ಳುವುದರಲ್ಲಿ ತೋರುವ ಚಮತ್ಕಾರ-

ಜಾಣ್ಮೆ, ಕಾಲ, ಭೂಮಿ, ನೋವು, ನಿಸರ್ಗ ಇವುಗಳ ಮೂಲಕ ನಡೆಸುವ ಚಿಂತನೆ ಕವಿಯ ಗಂಭೀರ ಕಾಳಜಿಗಳನ್ನು ಪರಿಚಯಿಸುತ್ತವೆ.

'ಶೋಧ' ಚೇತನ ಸೋಮೇಶ್ವರ ಅವರ ಮೊದಲನೆಯ ಸಂಕಲನ. ಕವಿತೆಯನ್ನು ಬರೆಯುವ ಉತ್ಸಾಹವಿದ್ದರೂ ಅದಕ್ಕೆ ಬೇಕಾದ ವ್ಯುತ್ಪತ್ತಿಯನ್ನು ಅವರಿನ್ನೂ ಪಡೆಯಬೇಕಾಗಿದೆ. ಮೊದಲಿನಿಂದ ಕಡೆಯ ತನಕ ಏಕತಾನತೆಯಿಂದ ಕೂಡಿರುವ ಈ ರಚನೆಗಳಲ್ಲಿ ಲಯ ವೈವಿಧ್ಯವಾಗಲೀ, ಭಾಷಿಕ ನಾವೀನ್ಯತೆಯಾಗಲೀ ಕಂಡುಬರುವುದಿಲ್ಲ. ಭಾಷಣದ ಶೈಲಿ, ಹೇಳಿಕೆಗಳ ಹೆಚ್ಚಳದಿಂದಾಗಿ ಇಲ್ಲಿನ ಬಹುತೇಕ ರಚನೆಗಳು ತೀರಾ ಪ್ರಾಥಮಿಕ ಹಂತದ ರಚನೆಗಳಾಗಿವೆ.

ಕನ್ನಡ ಕಾವ್ಯದ ಸಂದರ್ಭದಲ್ಲಿ ಮಹತ್ವದ ವ್ಯಕ್ತಿಗಳ ಸುತ್ತ ಬರೆದ ಕವಿತೆಗಳ ಒಂದು ದೊಡ್ಡ ವಲಯವೇ ಇದೆ. ಸಾಂಸ್ಕೃತಿಕವಾಗಿ ಇಂಥ ಕವಿತೆಗಳಿಗೆ ವಿಶೇಷ ಮಹತ್ವವಿದೆ. ಒಂದು ಸಂಸ್ಕೃತಿಯಲ್ಲಿ ವ್ಯಕ್ತಿಯೊಬ್ಬ ಹೇಗೆ ಸ್ವೀಕಾರವಾಗುತ್ತಾನೆ ? ಅವನ ಧ್ಯೇಯ-ಧೋರಣೆಗಳು ಸಂಸ್ಕೃತಿಯಲ್ಲಿ ನಿರ್ವಹಿಸುವ ಪಾತ್ರ ಎಂಥದು ? ಹೀಗೆ ಅನೇಕ ಮಟ್ಟದ ಚಿಂತನೆ, ಜಿಜ್ಞಾಸೆಗಳನ್ನು ಈ ಮೂಲಕ ಕಟ್ಟಿಕೊಡುವುದು ಇಂಥ ರಚನೆಗಳ ಮುಖ್ಯ ಉದ್ದೇಶ. ಭಾರತೀಯ ಸಂದರ್ಭದ ಮುಖ್ಯ ಚಿಂತಕ, ರಾಜಕಾರಣಿ, ಅಂಬೇಡ್ಕರ್ ಅವರ ದಲಿತ ಸಂಸ್ಕೃತಿಯ ವ್ಯಕ್ತಿತ್ವಕ್ಕೆ ಕನ್ನಡ ಕವಿಗಳು ಕವಿತೆಗಳ ಮೂಲಕ ತೋರಿದ ಪ್ರತಿಕ್ರಿಯೆಯನ್ನು ಎಲ್. ಹನುಮಂತಯ್ಯನವರು ಒಂದು ಕಡೆಗೆ ಸಂಕಲಿಸಿಕೊಟ್ಟಿದ್ದಾರೆ. ಇದೊಂದು ಗಮನಾರ್ಹ ಪ್ರಯತ್ನ. ನಮ್ಮ ಸಂಸ್ಕೃತಿಯ ಗ್ರಹಿಕೆಗೆ ಈ ಸಂಕಲನ ಮಹತ್ವದ ಸಾಮಗ್ರಿ ಆಗಬಲ್ಲದು.

ಎಲ್ಲ ಪೀಳಿಗೆಯ ಕವಿಗಳು ಡಾ. ಅಂಬೇಡ್ಕರ್ ಅವರನ್ನು ಕುರಿತು ಬರೆದಿರುವುದರಿಂದ, ಬೇರೆ ಬೇರೆ ದೃಷ್ಟಿಕೋನಗಳು ಇಲ್ಲಿ ಪ್ರತಿಬಿಂಬಿತವಾಗಿವೆ. ನಮ್ಮ ಸಮಕಾಲೀನ ಸಂಸ್ಕೃತಿಯ, ಚರಿತ್ರೆಯ ವಿಪರ್ಯಾಸಗಳನ್ನು ಇಲ್ಲಿನ ಬಹುತೇಕ ಕವಿತೆಗಳು ಶೋಧನೆಗೆ ಗುರಿಪಡಿಸಿವೆ. ಅಂಬೇಡ್ಕರ್ ಅವರ ಮೂಲಕ ವರ್ತಮಾನದ ಸ್ಥಿತಿಯನ್ನು ಶೋಧಿಸುವುದು ಇಲ್ಲಿನ ಕವಿತೆಗಳನ್ನು ಇಲ್ಲಿ ಕಾಣಬಹುದು.

ಗೋಪಾಲಕೃಷ್ಣ ಅಡಿಗ, ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ, ಸಿದ್ಧಲಿಂಗಯ್ಯ, ಜಿ.ಎಸ್. ಸಿದ್ಧಲಿಂಗಯ್ಯ, ಸುಮತೀಂದ್ರ ನಾಡಿಗ ಇವರನ್ನು ಒಳಗೊಂಡಂತೆ ಅನೇಕ ಯುವ ಕವಿಗಳ ಕವಿತೆಗಳನ್ನು ಇಲ್ಲಿ ಕಾಣಬಹುದು.

ಇಂಥ ಒಂದು ಸಂಕಲನವನ್ನು ಪ್ರಕಟಿಸಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಎಲ್ಲರ ಅಭಿನಂದನೆಗೆ ಪಾತ್ರವಾಗಿದೆ. ಸಂಪಾದಕರಾದ ಎಲ್. ಹನುಮಂತಯ್ಯನವರ ಗಂಭೀರವಾದ ವಿಶ್ಲೇಷಣೆಯ ಪ್ರಸ್ತಾವನೆ ಪುಸ್ತಕದ ಮೌಲಿಕತೆಯನ್ನು ಹೆಚ್ಚಿಸಿದೆ.

ಹಾಸ್ಯ ಹಾಗೂ ವಿಡಂಬನೆ ಪ್ರಧಾನವಾಗಿರುವ ಡುಂಡಿರಾಜರ 'ನನ್ನ ಕವಿತೆ ನನ್ನಹಾಗೆ' ಸಂಕಲನ ಲವಲವಿಕೆಯಿಂದ ಕೂಡಿದೆ. ಹಲವು ಹನ್ನೊಂದು ಸಂಗತಿಗಳನ್ನು

ಅವಲೋಕಿಸುತ್ತ ಅದರಲ್ಲಿನ ಅನೇಕ ಸೂಕ್ಷ್ಮಗಳನ್ನು ಆಸ್ಫೋಟಿಸುವ ವಿಶಿಷ್ಟ ಗುಣ ಈ ಸಂಕಲನದಲ್ಲಿದೆ. ವಸ್ತುವೊಂದರ ಮೇಲ್ಮೈಯನ್ನು ವಿವರಗಳಲ್ಲಿ ಬಿಡಿಸುವ ಇವರ ಕ್ರಮ ಆಕರ್ಷಕವಾದದ್ದು. ಅಷ್ಟೇ ಈ ರಚನೆಗಳ ಗುರಿ ಎನ್ನುವುದಾದರೆ, ಹೆಚ್ಚಿನ ಚರ್ಚೆ ಅಗತ್ಯವಿರುತ್ತಿರಲಿಲ್ಲ. ಆದರೆ ಈ ಮೇಲುಮಟ್ಟದ ಗ್ರಹಿಕೆ ಹೆಚ್ಚು ಗಂಭೀರವೂ, ನಿರ್ದಿಷ್ಟವೂ ಆದ ಉದ್ದೇಶಗಳತ್ತ ಚಲಿಸಿದರೆ ಹೆಚ್ಚು ಸತ್ವಶಾಲಿ ರಚನೆಗಳಿಗೆ ದಾರಿ ಮಾಡಿಕೊಟ್ಟೀತು.

ಡುಂಡಿರಾಜರ ಈ ಹಿಂದಿನ ಕಾವ್ಯರಚನೆಯನ್ನು ಗಮನಕ್ಕೆ ತಂದುಕೊಂಡು ಈ ಸಂಕಲನವನ್ನು ಓದಿದಾಗ ಹೆಚ್ಚು ಮಹತ್ವದ್ದನ್ನು ಅವರು ಸೃಷ್ಟಿಸುತ್ತಿದ್ದಾರೆಂದು ಅನ್ನಿಸುವುದಿಲ್ಲ. ಕಾವ್ಯ ಪ್ರಪಂಚದಲ್ಲಿ ಇಂಥ ಮೇಲ್ಮೈ ರಚನೆಗಳಿಗೆ ತನ್ನದೇ ಆದ ಸ್ಥಾನವಿರುವುದಾದರೂ ಕವಿಯ ಬೆಳವಣಿಗೆಯ ದೃಷ್ಟಿಯಿಂದ ಬೇರೆ ಬೇರೆ ಉದ್ದೇಶಗಳತ್ತ ಮಾಧ್ಯಮವನ್ನು ವಿಸ್ತರಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂಬುದನ್ನು ಇಲ್ಲಿ ಸೂಚಿಸಬಹುದು.

ಎಂ. ಆರ್. ಕಮಲ ಅಂತರಂಗದ ಆಪ್ತತೆಯನ್ನು ಪ್ರಧಾನ ಮಾಡಿಕೊಂಡು ತಮ್ಮ ಕವಿತೆಗಳನ್ನು ಬರೆಯುತ್ತ ಬಂದಿದ್ದಾರೆ. 'ಜಾಣೆ' ಸಂಕಲನದಲ್ಲಿ, ದಿನನಿತ್ಯದ ವಿವರಗಳು ಇವರ ಕವಿತೆಯಲ್ಲಿ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಂಡು ಒಂದು ಆವರಣವನ್ನು ನಿರ್ಮಿಸಿದೆ. ಪ್ರೀತಿ, ಪ್ರೇಮ, ತಾಯ್ತನ, ಮುಗ್ಧತೆ-ಇವುಗಳ ಒಳಹೊರಗುಗಳನ್ನು ಶೋಧಿಸುವ ಇವರ ಕವಿತೆಯ ನಿರ್ಮಿತಿ ತಾಜಾತನದಿಂದ ಕೂಡಿದೆ.

ಕವಿತೆಯಲ್ಲಿ ಇದ್ದೇ ಇರಬೇಕಾದ ಎರಡು ವಿರುದ್ಧಗಳ ಮುಖಾಮುಖಿ ಅನೇಕ ಕವಿತೆಗಳಲ್ಲಿ ಗೈರುಹಾಜರಾಗುತ್ತದೆ. ಇದರಿಂದಾಗಿ ಕವಿತೆಗಳು ಚಾಕಚಕ್ಯತೆಯಿಂದ ಕೂಡಿದ ಮಾತಿಗಷ್ಟೇ ಪರಿಮಿತಗೊಳ್ಳುತ್ತವೆ. ಸಂಕಲನದ 'ಕಣ್ಣಿಗಿಯ ಸ್ವಗತ' 'ಮಾಧವಿಯ ರಂಗ ಪ್ರವೇಶ' 'ಅವನು ನಾನು' ಈ ಕವಿತೆಗಳಲ್ಲಿ ಕವಯತ್ರಿ ಸಾಧಿಸಿರುವ ಸಫಲತೆ ಗಮನಾರ್ಹವಾದುದಾಗಿದೆ.

ಹದಿನೈದು ಕವಿತೆಗಳಿರುವ ರಾಧಾಕೃಷ್ಣ ಅವರ ಈ ಮೊದಲ ಸಂಕಲನ 'ನೆರೆ ಬಂದ ನದಿ'. ಎಚ್.ಎಸ್. ಶಿವಪ್ರಕಾಶ್ ಹೇಳುವಂತೆ "ಶ್ರೀಮಂತವಾದ, ಸಾಹಿತ್ಯಕವಾದ ಸ್ಮೃತಿಕೋಶಗಳನ್ನು ಒಳಗೊಂಡಿದ್ದು ಪ್ರಚಲಿತಕಾವ್ಯದ ಹಿನ್ನೆಲೆಯಲ್ಲಿ ಅಪರೂಪವಾಗಿ ಕಾಣುತ್ತದೆ". ಇಲ್ಲಿನ ಬಹುತೇಕ ಕವಿತೆಗಳು ಪುರಾಣ ಪ್ರತೀಕಗಳನ್ನು ಕೇಂದ್ರವಾಗಿಸಿಕೊಂಡು ರಚಿತವಾದುವುಗಳಾಗಿವೆ. ವೈಯಕ್ತಿಕವಾದ ನೆನಪು ಹಾಗೂ ಅನುಭವದ ವಿವರಗಳು ಈ ಎಲ್ಲ ಕವಿತೆಗಳ ಒಳಗೆ ಅವಕಾಶವನ್ನು ಕಲ್ಪಿಸಿಕೊಂಡಿವೆ. ಕವಿತೆಯ ಕಟ್ಟುವಿಕೆಯ ಕೌಶಲ್ಯ ಇವರಿಗೆ ಸಹಜವಾಗಿ ಸಿದ್ಧಿಸಿದೆ. ಒಂದು ರೀತಿಯ ಸಿದ್ಧಶೈಲಿಯ ಉಪಕ್ರಮದಲ್ಲಿ ಇವರ ರಚನೆಗಳು ಸಾಗಿವೆ. ಇವರು ಸಾಹಿತ್ಯದ ಸಮರ್ಥ ಓದುಗರಾಗಿರುವುದರಿಂದ ಕಾವ್ಯದ ನಿರ್ಮಿತಿಯಲ್ಲಿ ಈಗಾಗಲೇ ಪರಿಚಿತವಾಗಿರುವ ಜಾಡನ್ನು ಹಿಡಿದಿದ್ದಾರೆ ಎನ್ನಿಸುತ್ತದೆ.

ಈ ಹೊತ್ತು ತನ್ನ ಧ್ವನಿಯನ್ನು ನಿಚ್ಚಳವಾಗಿಸಿಕೊಳ್ಳುವ ಕವಿಗೆ ಅನೇಕ ಮಟ್ಟದ ರಿಸ್ಕ್ ತೀರ ಅಗತ್ಯ. ಆದರೆ ರಾಧಾಕೃಷ್ಣ ಅವರ ಕವಿತೆ ಯಾವ ಹೊಸ ಸವಾಲುಗಳನ್ನು ಎದುರಿಸದೆ ಹೋಗುವುದು ಆಶ್ಚರ್ಯ ಹುಟ್ಟಿಸುತ್ತದೆ. ಏಕೆಂದರೆ ತನ್ನ ಆಲೋಚನೆ, ವಿಚಾರ ಅನುಭೂತಿಗಳನ್ನು ಈಗಾಗಲೇ ಸಿದ್ಧಗೊಂಡಿರುವ ಕಾವ್ಯ ಮಾದರಿಯಲ್ಲಿ ಎರಕ ಹೊಯ್ಯುವುದು ಕಾವ್ಯವನ್ನು ಸುಲಭಗೊಳಿಸಿಕೊಳ್ಳುವ ಒಂದು ಹವ್ಯಾಸವಾಗಿ ಪರ್ಯವಸಾನವಾಗಿ ಬಿಡಬಹುದು. ಈ ಅಪಾಯದಿಂದ ಅವರು ಪಾರಾಗಬೇಕು. ಇಷ್ಟಾಗಿಯೂ ಇಲ್ಲಿನ ಕವಿತೆಗಳಲ್ಲಿ ಪ್ರಬುದ್ಧತೆ ಹಾಗೂ ಗಾಂಭೀರ್ಯಕ್ಕೆ ಯಾವ ಕೊರತೆಯೂ ಇಲ್ಲ. 'ಧರ್ಮ ಮತ್ತು ಪಾಂಚಾಲಿ', 'ಬುದ್ಧ', 'ಅಕ್ಕ ಕೇಳಕ್ಕ', 'ನೆನಪು' - ಈ ಕವಿತೆಗಳು ಕವಿಯ ಕಾವ್ಯರಚನೆಯ ಸಾಮರ್ಥ್ಯವನ್ನು ಖಚಿತಪಡಿಸಿರುವ ಪುರಾವೆಗಳಾಗಿವೆ.

ಎನ್.ಎಲ್. ಮುಕುಂದರಾಜರ 'ದೇಶ ಕೋಶ ದಾಸವಾಳ ' ಸಂಕಲನ, ಈ ಹೊತ್ತಿನ ಕವಿಯೊಬ್ಬನ ಪ್ರಾಮಾಣಿಕ ಹುಡುಕಾಟದ ಸ್ವರೂಪವನ್ನು ತಿಳಿಯಲು ಸಹಕಾರಿ. ಕವಿತೆ ಬರೆಯುವುದನ್ನು ತುಂಬಾ ಗಂಭೀರವಾದ ಕ್ರಿಯೆಯೆಂದು ಭಾವಿಸುವ ಮನಸ್ಸು ಎದುರಿಸುವ ಅನೇಕ ಸಮಸ್ಯೆ ಸವಾಲುಗಳನ್ನು ಇಲ್ಲಿನ ಅನೇಕ ಕವಿತೆಗಳಲ್ಲಿ ಕಾಣುತ್ತೇವೆ. ಸಮಕಾಲೀನ ಸಂದರ್ಭದಲ್ಲಿ ನಿರ್ಮಾಣವಾಗುತ್ತಿರುವ ಕಾವ್ಯದ ಮಧ್ಯೆ ತನ್ನ ಧ್ವನಿಯನ್ನು ಸ್ಥಾಪಿಸಲು ನಡೆಸುವ ಪ್ರಯತ್ನ ಇಲ್ಲಿದೆ. ಕವಿ ರೂಪಕಗಳಲ್ಲಿ ಮಾತನಾಡಲು ಬಲ್ಲವರಾಗಿದ್ದಾರೆ; ಹಾಗೇ ಮಾತನಾಡುತ್ತಲೇ ವಾಚಾಳಿಯೂ ಆಗುತ್ತಾರೆ. ಅನೇಕ ಮಟ್ಟದ ಚಿಂತನೆಗಳಿಗೆ ಆಕಾರ ಕೊಡಲು ಇವರು ನಡೆಸುವ ಪ್ರಯತ್ನದಲ್ಲಿ ಸೋಲು-ಗೆಲುವುಗಳೆರಡೂ ಸಮಾನವಾಗಿ ಸ್ಥಾನ ಪಡೆದಿವೆ. ಕನ್ನಡ ಕಾವ್ಯ ಪರಂಪರೆಯ ಮಹತ್ವದ ಕೃತಿಗಳ ಪರಿಚಯವನ್ನು ಹೊಂದಿರುವ ಇವರಿಗೆ ಕಾವ್ಯದಲ್ಲಿ ನಿಗೂಢವಾದುದನ್ನು ಅಂತಸ್ಸರದಲ್ಲಿ ಹುದುಗಿರುವ ಭಾವ-ಭಾವನೆಗಳನ್ನು ಆಕೃತಿಗೊಳಿಸುವ ಹಠವಿದೆ. ಆದರೆ ಅತಿಮಾತಿನಲ್ಲಿ ಸಂತೋಷಿಸುವ ಹವ್ಯಾಸವೂ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತದೆ. 'ನಿದ್ದೆ ತೂಗುವ ತಕ್ಕಡಿ', 'ಸಾವು' ಇಂಥ ಕವಿತೆಗಳು ಇದಕ್ಕೆ ಉದಾಹರಣೆ.

ಬದುಕಿನ ಬಗೆಗೆ ತೀವ್ರವಾದ ಅನುರಕ್ತಿಯನ್ನು ಹೊಂದಿರುವ ಇವರ ಕವಿತೆಗಳು ವಿಲಕ್ಷಣವಾದ ಪ್ರತಿಮಾ ಸಂಯೋಜನೆಯನ್ನು ರೂಪಿಸಿಕೊಂಡು ಬೆಳೆಯುತ್ತವೆ. ಗಂಭೀರವಾದ ಕಾವ್ಯಪ್ರಜ್ಞೆ, ಸಂಕೇತವಿಧಾನ, ಸಂಕೀರ್ಣವಾದ ಚಿತ್ರ ಸಂಯೋಜನೆ, ವಿಭಿನ್ನ ಲಯಸಾಧ್ಯತೆಗಳ ಆವಿಷ್ಕಾರದತ್ತ ಚಲಿಸುವ ಇವರ ಕಾವ್ಯಪ್ರಯೋಗವು ಅನೇಕ ಮಟ್ಟದ ಕುತೂಹಲಗಳನ್ನು ಹುಟ್ಟಿಸುತ್ತದೆ.

'ಅಗ್ನಿಸೂಕ್ತ' ಟಿ.ಎಸ್. ರಾಮಸ್ವಾಮಿಯವರ ಮೊದಲನೆಯ ಕವನ ಸಂಕಲನ. ಇಲ್ಲಿನ ಕವನಗಳು ಈ ಹಿಂದೆ ಎಲ್ಲೂ ಪ್ರಕಟವಾಗದೆ ಮೊಟ್ಟಮೊದಲ ಬಾರಿಗೆ ಇಲ್ಲಿ ಸಂಕಲನಗೊಂಡಿವೆ. ನಮ್ಮ ಸುತ್ತಣ ಪರಿಸರದ ತಲ್ಲಣಗಳನ್ನು, ಅದರ ವಿಷಾದಗಳನ್ನು ಸೇಂದ್ರಿಯವಾಗಿ ಕಟ್ಟಿಕೊಡುವ ಈ ಕವಿತೆಗಳು ಒಂದು ರೀತಿಯ ಅಧಿಭೌತಿಕ

ಪಾತಳಿಯನ್ನು ಕೇಂದ್ರವನ್ನಾಗಿಸಿಕೊಂಡಿದೆ. ಮುಗ್ಧತೆಯ ಮಧ್ಯೆ ಹುಟ್ಟುವ ಇಲ್ಲಿನ ಅನುಭೂತಿ ಪ್ರಪಂಚ ಒಂದು ವಿಷಾದಮಯ ಸಂಗೀತದಂತೆ ಮತ್ತೆ ಮತ್ತೆ ಅನುರಣನಗೊಳ್ಳುತ್ತ ವಿಲಕ್ಷಣವು ಭಯಾನಕವು ಆದ ಅನುಭವದತ್ತ ಓದುಗನನ್ನು ಒಯ್ಯುತ್ತದೆ. ಇಂಥ ಪ್ರಕ್ರಿಯೆಯ ಹಿಂದಿನ ಮನಸ್ಸನ್ನು ತಿಳಿಯುವ ಕುತೂಹಲವು ಅನೇಕ ರೂಪಗಳನ್ನು ಧರಿಸುತ್ತದೆ. ನೆನಪು-ವಾಸ್ತವ, ಕನಸು-ಕಾಣ್ಕೆ, ಹಸಿವು-ಕಾಮ, ಸಂಬಂಧಗಳ ಒಳಸುಳಿಗಳು, ಹಿಂಸೆ-ಪ್ರೀತಿ ಇಂಥ ಅಸಂಖ್ಯ ಭಾವನೆಗಳು ಬೇರೆ ಬೇರೆ ಪಾತ್ರಗಳಲ್ಲಿ ಹರಿದು ಓದುಗನನ್ನು ಆವರಿಸುವ ಇಲ್ಲಿನ ಕವನಗಳು, ಈ ಹೊತ್ತಿನ ಕವಿತೆ ಅನ್ವೇಷಿಸಬೇಕಿರುವ ಗಂಭೀರ ವಲಯಗಳ ಸ್ವರೂಪವನ್ನು ಮನಗಾಣಿಸುತ್ತದೆ.

ಕವಿಗೆ ತಾನು ಹೇಳಬೇಕಾದ್ದನ್ನೆಲ್ಲ ರೂಪಕದಲ್ಲಿ ಹೇಳಬೇಕೆಂಬ ಅಚಲ ನಂಬಿಕೆಯೋ, ಪ್ರೀತಿಯೋ ಇರುವುದರಿಂದ ಇಲ್ಲಿನ ಕವನಗಳು ಬಿಡಿ ಬಿಡಿಯಾಗಿದ್ದರೂ ಇಡೀ ಸಂಕಲನ ಒಂದು ಸಮಗ್ರ ರೂಪಕ ಗತಿಯ ಖಂಡಕಾವ್ಯದ ಆಕೃತಿಯನ್ನು ಪಡೆದಿದೆ. ಒಂದು ಕವಿತೆಯಲ್ಲಿ ಆರಂಭಗೊಂಡ ನೆಲೆ ಮತ್ತೊಂದು ಕವಿತೆಯಲ್ಲಿ ಹೊಸ ವಿಸ್ತಾರವನ್ನು ಪಡೆದುಕೊಂಡು ಮುಂದುವರೆದಿದೆ.

ಕನ್ನಡ ಕಾವ್ಯಗಳ ಓದಿನಿಂದ ತಣಿದ ಮನಸ್ಸು ಇಲ್ಲಿನ ರಚನೆಗಳ ಮೇಲೆ ದಟ್ಟ ಪ್ರಭಾವವನ್ನು ಮೂಡಿಸಿದೆಯಾದರೂ ನಿರ್ದಿಷ್ಟ ಕವಿಯೊಬ್ಬನ ಪ್ರಭಾವಕ್ಕೆ ಸಿಲುಕದೆ ತನ್ನದೇ ಆದ ಕಾವ್ಯಭಾಷೆಯನ್ನು ಕವಿ ಕಟ್ಟಿಕೊಳ್ಳುತ್ತಿದ್ದಾನೆ. ಸಂಭ್ರಮ-ವಿಷಾದ ತನ್ಮಯತೆಗಳು ಕೆಲವೊಮ್ಮೆ 'ಕಾಕು' ವಿನ ನಿರ್ಮಿತಿಯಲ್ಲಿ ಹದ ತಪ್ಪಿವೆ. ಕಾವ್ಯರಚನೆಯ ಬಗೆಗೆ ಇರುವ ಗಾಂಭೀರ್ಯ ಹಾಗೂ ಜರೂರಿನಿಂದಾಗಿ, ಇಂಥ ಪರಿಮಿತಿಗಳು ತುಂಬ ದೊಡ್ಡ ಪ್ರಮಾದ ಎನಿಸವು.

ಈ ಎಲ್ಲ ಕವನಗಳ ಕೇಂದ್ರಪ್ರಜ್ಞೆಯು 'ದಿಟ್ಟಿಯಲಿ ಕಣ್ಣು ಕರಗಿತ್ತು', 'ತಾಂಡವ ತಾಯಿ' ಹಾಗೂ 'ಒಂದು ಗುಡಿಯ ಸುತ್ತ' ಈ ಕವನಗಳಲ್ಲಿ ನೆಲೆಗೊಂಡಿದೆ. 'ನನ್ನ ತಂಗಿಗೆ', 'ಅಜ್ಜಿ', 'ಉದ್ಭವ ಮೂರ್ತಿ' ಈ ಕವನಗಳು ಕವಿಯ ಕಾವ್ಯ ನಿರ್ವಹಣೆಯ ಸಾಧ್ಯತೆ ಹಾಗೂ ಕಾವ್ಯ ಸಾಮಗ್ರಿಯನ್ನು ಸಮತೋಲನದಿಂದ ಅಭಿವ್ಯಕ್ತಿಸುವ ವಿಧಾನಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ.

●

***

ಸಣ್ಣಕಥೆ

— ಕರೀಗೌಡ ಬೀಚನಹಳ್ಳಿ

೧೯೯೨ರಲ್ಲಿ ವಾಚಕರು ಗಮನಿಸಬೇಕಾದ ಸಣ್ಣಕಥೆಗಳ ಸಂಕಲನಗಳು ಪ್ರಕಟವಾಗಿವೆ. ಚದುರಂಗ, ವ್ಯಾಸರಾಯ ಬಲ್ಲಾಳರಂತಹ ಹಿರಿಯ ಲೇಖಕರಿಂದ ಹಿಡಿದು, ವಿವೇಕ ಶಾನಭಾಗ, ಮೊಗಳ್ಳಿ ಗಣೇಶ್‌ರಂತಹ ಕಿರಿಯ ಲೇಖಕರ ವರೆಗೆ ಕಥಾಸಂಕಲನಗಳು ಹೊರಬಂದಿವೆ. ಇದರ ಜೊತೆಗೆ ಪಿ. ಲಂಕೇಶ್ ಹಾಗೂ ದೇವನೂರ ಮಹಾದೇವರ ಸಮಗ್ರ ಕಥಾಸಂಕಲನಗಳೂ ಹೊರಬಂದಿವೆ. ಇಲ್ಲಿನ ಬಹುಪಾಲು ಕಥೆಗಳು, ಕನ್ನಡ ಕಥಾಪರಂಪರೆಯನ್ನು ಬಲಿಷ್ಠಗೊಳಿಸಿರುವುದಕ್ಕೆ ಸಾಕ್ಷಿಯಾಗಿವೆ. ಪ್ರಗತಿಶೀಲ, ನವ್ಯ, ದಲಿತ -ಬಂಡಾಯ ಈ ಮನೋಧರ್ಮವನ್ನು ಪ್ರಕಟಿಸುವ ಕಥೆಗಳೂ ಇಲ್ಲಿನ ಸಂಕಲನಗಳಲ್ಲಿವೆ.

ನಮ್ಮ ಹಿರಿಯ ಹಾಗೂ ಪ್ರಗತಿಶೀಲ ಚಳುವಳಿ ಕಾಲದ ಪ್ರಮುಖ ಲೇಖಕರಲ್ಲಿ ಚದುರಂಗರೂ ಒಬ್ಬರು. ಇವರ 'ಕ್ವಾಟೆ' ಕಥಾಸಂಕಲನದ ಮುನ್ನುಡಿಯಲ್ಲಿ ಕೆ. ನರಸಿಂಹಮೂರ್ತಿ ಅವರು ಹೇಳುವಂತೆ, "ಪ್ರಗತಿಶೀಲರ ನಡುವೆ ಪ್ರಗತಿಶೀಲರಾಗಿ, ನವ್ಯರಲ್ಲಿ ನವ್ಯರಾಗಿ, ಬಂಡಾಯ ಸಾಹಿತಿಗಳ ಮಧ್ಯೆ ಬಂಡಾಯ ಸಾಹಿತಿಯೂ ಆಗಿ ತಮ್ಮ ಜೀವನ ದೃಷ್ಟಿಯಲ್ಲಿಯೂ, ತಮ್ಮ ಕಲಾಸೃಷ್ಟಿಯಲ್ಲಿಯೂ ಹೆಚ್ಚು ಹೆಚ್ಚಿನ ಸಂಕೀರ್ಣತೆಯನ್ನು ಸಾಧಿಸಿಕೊಳ್ಳುತ್ತಲೇ ಇರುವ ಸಾಹಿತಿ ಸಾಹಸಿ ಚದುರಂಗರು". ಇವರ ಕಥನ ಕಲೆಯ ಪರಿಣತಿಗೆ 'ಕ್ವಾಟೆ' ಕಥಾಸಂಕಲನದ ಕಥೆಗಳು ಸಾಕ್ಷಿಯಾಗಿವೆ. ಇಲ್ಲಿನ 'ಕ್ವಾಟೆ', 'ತಿರುವು', 'ಗಫೂರ ಹೇಳಿದ ಕಥೆ'ಗಮನಾರ್ಹವಾದ ಕಥೆಗಳಾಗಿವೆ. ಹೆಣ್ಣಿನ ಮಾನಸಿಕ ಹಾಗೂ ಲೈಂಗಿಕ ಶೋಷಣೆಯ ಶೋಧನೆಯನ್ನು 'ಕ್ವಾಟೆ' ಕಥೆ ಚಿತ್ರಿಸುತ್ತದೆ. ಇಲ್ಲಿ ಅವಿವಾಹಿತ ಹೆಣ್ಣೊಬ್ಬಳು ಬಸುರಿಯಾದಾಗ ಆ ಬಗ್ಗೆ ಅವಳ ರಕ್ತಸಂಬಂಧಿಗಳು ತಾಳುವ ನಿಲುವು, ಮಧ್ಯಮ ವರ್ಗದ ಸಮಾಜದ ಹುಸಿ ಸಭ್ಯತೆಗೆ ಸಾಕ್ಷಿಯಾಗಿದೆ. ಹಿಂದೂಮುಸ್ಲಿಂ ಕೋಮು ಗಲಭೆಯಲ್ಲಿ ಹಿಂದೂ ತರುಣನೊಬ್ಬ ಅಮಾಯಾಕವಾಗಿ ಸಾವಿಗೆ ಬಲಿಯಾಗುವುದರ ದುರಂತಮಯವಾದ ಸನ್ನಿವೇಶ 'ತಿರುವು' ಕಥೆಯಲ್ಲಿ ಕರುಣಾಜನಕವಾಗಿ ಮೂಡಿಬಂದಿದೆ. ಇಲ್ಲಿನ ಸಾಣೆಸಾಬುವಿನ

ಪಾತ್ರ ಮಾಗಿದ ವ್ಯಕ್ತಿತ್ವಕ್ಕೆ, ಸಿಟ್ಟು-ಸಿಡುಕು ಹಾಗೂ ಅಸಹಾಯಕತೆಗೆ ದ್ಯೋತಕವಾಗಿದೆ. 'ಗಫೂರ ಹೇಳಿದ ಕಥೆ' ಯ ಗಫೂರ, ನಿರೂಪಕನ ಆಪ್ತಸ್ನೇಹಿತ, ಸಹಪಾಠಿ. ಅವನ ಅಲೌಕಿಕತೆಯ ವ್ಯಕ್ತಿತ್ವ ಹಾಗೂ ಅವನು ಕಥೆ ಹೇಳುವ ಕೌಶಲಕ್ಕೆ ನಿರೂಪಕ ತುಂಬಾ ಆಕರ್ಷಿತನಾದವನು. ಗಫೂರ ಹೇಳುವ ವಿಷಾದದ ಸಂಗತಿಯನ್ನು ನಿರೂಪಕ ಕಥೆಗೆ ವಸ್ತು ಮಾಡಿಕೊಂಡು ಕಥೆಯನ್ನು ಕಟ್ಟುವ ಕೌಶಲ ಇಲ್ಲಿ ಚೆಲುವಾಗಿದೆ. ಪ್ರತಿಮೆ, ಮಾತೃತ್ವ, ಲೈಂಗಿಕತೆ ಇವುಗಳ ಶೋಧನೆ 'ಕ್ವಾಟೆ' ಯಲ್ಲಿದ್ದರೆ, ಕಥಾನಕಗುಣ, ಅನುಕಂಪದ ನೆಲೆ'ತಿರುವು' ಕಥೆಯಲ್ಲಿ ಸಹಜವಾಗಿ ಬಂದಿದೆ.

ಪ್ರಗತಿಶೀಲ ಸಾಹಿತ್ಯ ಚಳುವಳಿಯ ಕಾಲದಿಂದ ಈತನಕ ಕಥೆಗಳನ್ನು ಬರೆಯುತ್ತಾ ಬಂದವರಲ್ಲಿ ವ್ಯಾಸರಾಯ ಬಲ್ಲಾಳರೂ ಒಬ್ಬರು. ಇವರ 'ತ್ರಿಕಾಲ' ಕಥಾಸಂಕಲನ ಈ ವರ್ಷದ ಗಮನಾರ್ಹ ಕಥಾಸಂಕಲನಗಳಲ್ಲಿ ಒಂದು. ಮುಂಬೈ ನಗರದ ಮಧ್ಯಮವರ್ಗದ ಜನಜೀವನದ ಸುಖದುಃಖಗಳನ್ನು ಮತ್ತು ಆಧುನಿಕ ನಾಗರಿಕತೆಯ ಸಂದರ್ಭದಲ್ಲಿ ಸಾಂಪ್ರಾದಾಯಕ ನಂಬಿಕೆಗಳು ಎದುರಿಸುವ ಬಿಕ್ಕಟ್ಟುಗಳನ್ನು ಇವರ ಬಹುಪಾಲು ಕಥೆಗಳು ವಸ್ತುವಾಗಿ ಸ್ವೀಕರಿಸಿವೆ. ಪ್ರಸ್ತುತ ಸಂಕಲನದಲ್ಲಿರುವ 'ಗೋಡೆ' ಮತ್ತು 'ತ್ರಿಕಾಲ' ಗಮನಾರ್ಹವಾದ ಕಥೆಗಳಾಗಿವೆ. ಸದಾಶಿವ ಮತ್ತು ಮೀನಾರ ದಾಂಪತ್ಯದಲ್ಲಿ ಹುಟ್ಟಿಕೊಳ್ಳುವ ಅನುಮಾನ, ಸಂಶಯದ ಪರಿಶೀಲನೆ 'ಗೋಡೆ' ಕಥೆಯ ವಸ್ತುವಾಗಿದೆ.

ಇವರ ಸಂಸಾರದಲ್ಲಿ ಗಂಡಬಿಟ್ಟ ಸಿಂಧಿ ಹುಡುಗಿ ಮೀನಾಳಿಗೆ ತನ್ನ ಗಂಡನ ಶೀಲದ ಬಗ್ಗೆ ಅನುಮಾನ ಬರಿಸುತ್ತಾಳೆ. ಆದರಿಂದ ಮೀನಾ ಮಾನಸಿಕವಾಗಿ ಅಸ್ವಸ್ಥಳಾಗುತ್ತಾಳೆ. ಈ ಗಂಡು ಹೆಣ್ಣಿನ ಸಂಬಂಧಗಳ ನಿಗೂಢತೆಯನ್ನು ಮುಖಾಮುಖಿಯನ್ನಾಗಿಸಿದಾಗ ಹೊರಹೊಮ್ಮುವ ಸತ್ಯದ ಸಾಕ್ಷಾತ್ಕಾರದ ಹುಡುಕಾಟ ಈ ಕಥೆಯಲ್ಲಿ ಗಟ್ಟಿಯಾಗಿ ಅಭಿವ್ಯಕ್ತಿ ಪಡೆದಿದೆ. ಕಾಲದ ನಿರಂತರ ಬದಲಾವಣೆಯ ಗತಿಯಲ್ಲಿ ಮನುಷ್ಯನ ನಂಬಿಕೆ, ಆಚಾರ, ವಿಚಾರ, ಸಂಪ್ರದಾಯ, ಸಂಬಂಧಗಳನ್ನು ಒರೆಗೆ ಹಚ್ಚಿ ಶೋಧಿಸುವ ಪ್ರಯತ್ನ 'ತ್ರಿಕಾಲ' ಕಥೆಯಲ್ಲಿ ನಡೆದಿದೆ. ಸಂಪ್ರದಾಯಬದ್ಧ ಮನೆಯ ವಿದ್ಯಾವಂತ ಯುವಕ, ವ್ಯಕ್ತಿಸ್ವಾತಂತ್ರ್ಯವನ್ನು ಬಯಸಿ ಬೇರೆ ಜಾತಿಯ ಹುಡುಗಿಯೊಬ್ಬಳನ್ನು ಅಸಾಂಪ್ರದಾಯಕವಾಗಿ ಮದುವೆ ಮಾಡಿಕೊಂಡು ಮನೆಗೆ ಬಂದಾಗ ತನ್ನ ಅಜ್ಜಿ, ಅಪ್ಪ, ಅವ್ವ ಗೊಂದಲಕ್ಕೆ ಒಳಗಾಗುತ್ತಾರೆ. ಮೊದಮೊದಲು ಅವರು ಪ್ರತಿಭಟಿಸಿದರೂ ಇಳಿಗಾಲದ ಹಂತದಲ್ಲಿರುವ ಅಪ್ಪ, ಅವ್ವರಿಗೆ ಮಗ ಅನಿವಾರ್ಯ. ಆದರೆ ಅಜ್ಜಿ ತನ್ನ ಮಡಿವಂತಿಕೆ ಬಿಡಲಾರದೆ, ಒಂದೇ ಮನೆಯಲ್ಲಿ ಪ್ರತ್ಯೇಕವಾಗಿದ್ದು ಜೀವಿಸಿ ಸಾಯುತ್ತಾಳೆ. ಕೊನೆಗೆ ಅಪ್ಪ, ಅವ್ವ ಕಾಲದಗತಿಗೆ ಹೊಂದಿಕೊಳ್ಳುತ್ತಾರೆ. ಕಂಪ್ಯೂಟರ್ ಯುಗದ ಸೊಸೆಯ ಸಂಗೀತದ ಪ್ರಭಾವ ಇಡೀ ಮನೆಯನ್ನು ಕಾಲದ ಗತಿಗೆ ಒಗ್ಗಿಸಿಬಿಡುತ್ತದೆ. ಆಧುನಿಕ ನಾಗರೀಕತೆಯ ಸಂದರ್ಭದಲ್ಲಿ ಮೂರು ತಲೆಮಾರುಗಳ ವೈರುಧ್ಯವನ್ನು ಈ ಕಥೆ ಸೆರೆಹಿಡಿದಿದೆ. ಮನೆಯ ವಿಸ್ತಾರವನ್ನು ಕಾಲದ ವಿಸ್ತಾರಕ್ಕೆ ಹೊಂದಿಸುವ ಪ್ರಯತ್ನ ಈ ಕಥೆಯಲ್ಲಿ ಚೆನ್ನಾಗಿ ಮೂಡಿಬಂದಿದೆ.

ಮುಸ್ಲಿಂ ಸಮುದಾಯದ ಬದುಕಿನ ಒಳ ವಿವರಗಳನ್ನು ಸಾಹಿತ್ಯಲೋಕಕ್ಕೆ ತಂದು ಅವುಗಳಿಗೆ ಒಂದು ಅಧಿಕೃತತೆ ಹಾಗೂ ಕಲಾತ್ಮಕತೆಯನ್ನು ತಂದುಕೊಟ್ಟವರಲ್ಲಿಬೊಳುವಾರು ಮಹಮದ್ ಕುಂಞಒಬ್ಬರು. ಇವರ 'ಆಕಾಶಕ್ಕೆ ನೀಲಿ ಪರದೆ' ಕಥಾಸಂಕಲನ ಈ ವಿಶಿಷ್ಟ ಕಾರಣದಿಂದ ಕುತೂಹಲವನ್ನು ಹುಟ್ಟಿಸುತ್ತದೆ. ಇಲ್ಲಿನ ಕಥೆಗಳ ಕೇಂದ್ರ "ಮುತ್ತುಪ್ಪಾಡಿ" ಎಂಬ ಊರು.ಆ ಊರಿನಲ್ಲಿರುವ ಮುಸ್ಲಿಂ ಜನರ ಬದುಕಿನಲ್ಲಿ ನಡೆಯುವ ಪ್ರೀತಿ, ಮದುವೆ, ಮುಂಜಿ, ಸಾವು, ಸಂಕಟ, ಅನುಕಂಪ, ವಿಚ್ಛೇದನ, ಧರ್ಮ ಹೀಗೆ ಹಲವು ವಿಷಯಗಳು ಇಲ್ಲಿನ ಕಥೆಗಳಿಗೆ ವಸ್ತುವಾಗಿವೆ. ಬೊಳುವಾರರ ಮಹತ್ವದ ಗುಣ ಎಂದರೆ ಕಥೆಯನ್ನು ಓದುಗನಿಗೆ ಹೇಗೆ ಮುಟ್ಟಿಸಬೇಕು, ಹೇಗೆ ಮುಗಿಸಬೇಕು, ಎಷ್ಟು ಜನಪ್ರಿಯತೆ ಇರಬೇಕು, ಎಷ್ಟು ಸೂಕ್ಷ್ಮತೆ ಇರಬೇಕು ಎಂಬ ಲಯಗಳನ್ನು ಅರ್ಥ ಮಾಡಿಕೊಂಡಿರುವುದು. ಈ ಕುತೂಹಲವನ್ನು ಇವರು ತೀವ್ರವಾಗಿ ರೂಢಿಸಿಕೊಂಡಿರುವುದರಿಂದ ಇವರ ಕಥೆಗಳಲ್ಲಿ ಮುಗ್ಧತೆಯ ಗಾಢತೆ ಕಡಿಮೆ. ಕಲಾತ್ಮಕವಾಗಿ ಕಥೆ ಹೇಳುವ ಸಂಯಮ ಮಾತ್ರ ಬೆರಗು ಹುಟ್ಟಿಸುತ್ತದೆ. ಈ ಸಂಕಲನದಲ್ಲಿ 'ಅಖಿರತ್' 'ಇದ್ದತ್' ಮತ್ತು 'ಆಕಾಶಕ್ಕೆ ನೀಲಿ ಪರದೆ' ಇವು ಗಮನಾರ್ಹವಾದ ಕಥೆಗಳಾಗಿವೆ. ದುರಂತದ ಅಂಚಿನಲ್ಲಿರುವ ಮುಸ್ಲಿಂ ಸಂಸಾರವೊಂದನ್ನು ಮಾನವೀಯತೆಯ ಔದಾರ್ಯದಿಂದ ಹಿಂದು ಹೆಣ್ಣೊಬ್ಬಳು ಮತ್ತೆ ಬೆಸೆಯುವ ಒಂದು ಯತ್ನ'ಅಖಿರತ್' ಕತೆಯಲ್ಲಿದೆ. ಹಿಂದು ಮಹಿಳೆ ಗಿರಿಜ, ಮುಸ್ಲಿಂ ಬಂಧು ಅದ್ದುವಿನ ಕೈಹಿಡಿದು; ಅವನು ಅವನ ಹೆಂಡತಿಯನ್ನು ಬಿಟ್ಟು ಮತ್ತೆ ಎಲ್ಲಿಯೂ ಹೋಗದಂತೆ ಸಂತೈಸುವ ಚಿತ್ರ ಅಪೂರ್ವವಾಗಿ ಮೂಡಿಬಂದಿದೆ. 'ಇದ್ದತ್' ನಾಯಕಿ ಮೆಹರುನ್ನೀಸಾ ತನ್ನ ಹದಿವಯಸ್ಸಿನ ಗಂಡ ತೀರಿಕೊಂಡ ಮೇಲೆ ತನ್ನ ಧರ್ಮದ ಬಂಧನದ ಅವಧಿ ಮುಗಿಯುವುದನ್ನೇ ಕಾಯುತ್ತಿರುತ್ತಾಳೆ. ಮನುಷ್ಯ ಸಹಜವಾದ ತನ್ನ ಆಸೆ ಆಕಾಂಕ್ಷೆಗಳನ್ನು ಅದುಮಿಟ್ಟುಕೊಂಡು ನಿಷ್ಠೆಯಿಂದ ತನ್ನ ಬಾಳನ್ನು ತುಂಬಿಸಿದ ಆಕೆಗೆ ತನ್ನ ಬದುಕಿನಲ್ಲಿ ಎಲ್ಲೋ ಒಂದು ಆಸೆ ಮೂಡುತ್ತದೆ. ಆದರೆ ಆ ಆಸೆ ಇನ್ನೇನು ಕೈಗೆ ಸಿಕ್ಕಿತು ಅನ್ನುವಷ್ಟರಲ್ಲಿ ಅದು ವಿಚಿತ್ರವಾದ ತಿರುವು ಪಡೆಯುತ್ತದೆ. ಆದರೆ ಆಕೆ ಅದರಿಂದ ತನ್ನ ಸಂಯಮ, ಪ್ರಜ್ಞೆ ಕಳೆದುಕೊಳ್ಳಲಾರದ ಗಟ್ಟಿ ಮಹಿಳೆಯಾಗಿ ಉಳಿದು ಓದುಗರ ಕರುಣೆಗೆ ಪಾತ್ರಳಾಗುತ್ತಾಳೆ. ಬೊಳುವಾರರ 'ಆಕಾಶಕ್ಕೆ ನೀಲಿ ಪರದೆ' ಕಥೆ ಶುರುವಾಗುವುದು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಮಲಗಿರುವ ಸ್ನೇಹಿತನನ್ನು ನಿರೂಪಕ ನೋಡಲು ಹೊರಟಲ್ಲಿಂದ. ಅಲ್ಲಿ ಆಕಸ್ಮಿಕವಾಗಿ ಅವನಿಗೆ ಭೇಟಿಯಾಗುವ ನರ್ಸು, ಆತನಿಗೆ ಪರಿಚಯವಾಗಿ, ಭೂತಕಾಲದಲ್ಲಿ, ಮುತ್ತುಪ್ಪಾಡಿಯಲ್ಲಿ ನಡೆದ ಕಥೆಯೊಂದನ್ನು ನಿರೂಪಿಸುತ್ತಾಳೆ. ಬದುಕಿನ ಬಗೆಗಿನ ಗೊಂದಲಗಳು, ಕುತೂಹಲಗಳು ಇಲ್ಲಿ ಸಹಜವಾಗಿ ಮೂಡಿವೆ. ದಿನಚರಿಯ ಮಾದರಿಯಲ್ಲಿ ಕಥೆ ಬೆಳೆಯುತ್ತದೆ. ಹಿಂದು ಹಾಗೂ ಮುಸ್ಲಿಂ ಜಾತಿಯ ಪ್ರೇಮದ ವಸ್ತು ಈ ಕಥೆಯನ್ನು ಆಶಾದಾಯಕವಾಗಿ ಕಟ್ಟಿದೆ. ಅಂತರ್‌ಜಾತಿಯ ಸಂಬಂಧದ ನೆಲೆಯಲ್ಲಿ ಮಾನವೀಯತೆಯ ಸೂಕ್ಷ್ಮತೆಗಳನ್ನು ಈ ಕತೆಯು ಗುಣಾತ್ಮಕವಾಗಿ ಶೋಧಿಸುತ್ತದೆ. ದಾಂಪತ್ಯದಲ್ಲಿ ಎದುರಾಗುವ ಅನುಮಾನ, ಸಿಟ್ಟು, ಪ್ರೀತಿ ಇವುಗಳ ನಡುವೆ ವಿಜೃಂಭಿಸುವ ಮಾನವೀಯತೆ ಈ ಕಥೆಯನ್ನು ಯಶಸ್ವಿಗೊಳಿಸಿದೆ.

ವ್ಯಕ್ತಿಕೇಂದ್ರಿತ ನೆಲೆ ಹಾಗೂ ಮಧ್ಯಮ ವರ್ಗದ ಶಿಕ್ಷಿತ ಪಾತ್ರಗಳ ಸೃಷ್ಟಿಗಳು ಇನ್ನೂ ಬೇರೆ ಬೇರೆ ಸಂದರ್ಭಗಳಲ್ಲಿ, ವಿವಿಧ ಪ್ರತಿಮೆ, ಸಂಕೇತಗಳ ಮೂಲಕ ಕಾಣಿಸಿಕೊಳ್ಳುತ್ತಿರುವುದಕ್ಕೆ ವಿವೇಕ ಶಾನಭಾಗರ 'ಲಂಗುರು', ಮೊಗಳ್ಳಿ ಗಣೇಶರ 'ಬುಗುರಿ' ಯಂತಹ ಕಥಾಸಂಕಲನಗಳನ್ನು ನೋಡಬಹುದು. ಶಾನಭಾಗರ 'ಲಂಗರು' ಕಥಾ ಸಂಕಲನದಲ್ಲಿನ ಬಹುಪಾಲು ಕಥೆಗಳ ವಸ್ತು ಮಧ್ಯಮ ವರ್ಗದ ಅಕ್ಷರಸ್ಥ ಜನರ ಪ್ರೇಮ, ಆಸ್ತಿ, ತೊಳಲಾಟ, ಗೊಂದಲ, ಅನಿಶ್ಚಿತತೆ. ಜೊತೆಗೆ ವ್ಯಕ್ತಿಕೇಂದ್ರಿತ ಪಾತ್ರಗಳ ಸೃಷ್ಟಿಯಿಂದ ಸಮಷ್ಟಿಯ ಕಡೆಗೆ ಬಿಡಿಸಿಕೊಳ್ಳುವ ಯತ್ನ, ಇಲ್ಲಿನ 'ಲಂಗರು' ಮತ್ತು 'ಗುರುತು' ಕಥೆಗಳಲ್ಲಿ ಗಮನಾರ್ಹವಾಗಿದೆ. ಆಸ್ತಿಯ ಸಂಕೀರ್ಣ ಸ್ವರೂಪವನ್ನು 'ಗುರುತು'ಕಥೆಯಲ್ಲಿ ಆನಂದು ಪಾತ್ರದ ಮೂಲಕ ಅರ್ಥೈಸುವ ಯತ್ನವಿದೆ. 'ಲಂಗುರು' ಕಥೆಯ ನಾಯಕ ರಘುವೀರ ತಪ್ತನಾಯಕ. ತನ್ನ ಬದುಕಿನ ಗೊಂದಲದಿಂದ ಸಂಬಂಧ ಕಡಿದುಕೊಂಡು ದೂರಹೋಗಿ ಸ್ವಾತಂತ್ರ್ಯ, ಸಂತೋಷ, ಶಾಂತಿಯನ್ನು ತಂದುಕೊಳ್ಳಬೇಕೆಂದು ನಿಶ್ಚಯಿಸಿ ಹೊರಟವನು. ಆದರೆ ಅದು ಸಾಧ್ಯವಾಗದೆ ಹಿಂತಿರುಗುತ್ತಾನೆ. ವ್ಯಕ್ತಿ ವ್ಯಕ್ತಿಗಳ ವಿವಿಧ ಸಂಬಂಧಗಳನ್ನು ಅನುಕಂಪ ಹಾಗೂ ಮಾರ್ದವತೆಯಿಂದ ವಿಶ್ಲೇಷಿಸುವ ಮನೋಧರ್ಮ ಇವರ ಕಥೆಗಳಲ್ಲಿದೆ. ಶಾನಭಾಗರ ಆಪ್ತವಾದ, ಸರಳವಾದ, ಸಂಯಮಶೀಲವಾದ ಬರವಣಿಗೆ ಓದುಗರನ್ನು ಬಹಳವಾಗಿ ತಟ್ಟುತ್ತದೆ.

ಇತ್ತೀಚಿನ ಕಥೆಗಾರರಲ್ಲಿ, ಬಹಳಷ್ಟು ಗಮನ ಸೆಳೆದಿರುವ ಮೊಗಳ್ಳಿ ಗಣೇಶರ 'ಬುಗುರಿ'ಕಥಾಸಂಕಲನ ಈ ವರ್ಷದ ಒಂದು ಮಹತ್ವದ ಕೃತಿಯಾಗಿದೆ. ಈ ಸಂಕಲನದ ಕಥೆಗಳ ಪಾತ್ರಗಳು, ಘಟನೆಗಳು-ಹಳ್ಳಿಗಳು ಸ್ಥಿತ್ಯಂತರವನ್ನು ಕಾಣುತ್ತಿರುವುದರ ಗತಿಯನ್ನು ಹಿಡಿಯುತ್ತವೆ. ಬಡತನ, ಅಜ್ಞಾನ, ದಟ್ಟವಿಷಾದ ಹಾಗೂ ಬದುಕಿನ ವಿವಿಧ ಲಯಗಳು ಇಲ್ಲಿ ಜೀವಂತವಾಗಿವೆ. ಈ ಸಂಕಲನದ ಮುಖ್ಯ ಕಥೆಗಳೆಂದರೆ, 'ಬುಗುರಿ', 'ಬತ್ತ' ಮತ್ತು 'ನನ್ನಜ್ಜನಿಗೊಂದಾಸೆಯಿತ್ತು'. ಜನಪದ ನಂಬಿಕೆಯೊಂದು ಒಂದು ವಿಶಿಷ್ಟವಾದ ವಸ್ತುವಾಗಿ ಪರಿಣಮಿಸಿರುವುದನ್ನು 'ನನ್ನಜ್ಜನಿಗೊಂದಾಸೆಯಿತ್ತು' ಕಥೆಯಲ್ಲಿ ಕಾಣಬಹುದು. ಹುಡುಗ ಮತ್ತು ಮುದುಕನ ನಡುವೆ ಇರುವ ನಂಬಿಕೆ, ಆಸೆ, ವಿರೋಧಗಳು-ಅವರಿಬ್ಬರ ವಯಸ್ಸಿನ, ಅನುಭವದ ಅಂತರದಲ್ಲಿ -ಈ ಕಥೆಯಲ್ಲಿ ಬಿಚ್ಚಿಕೊಳ್ಳುತ್ತವೆ. ಮುದುಕ, ತನ್ನ ಮೊಮ್ಮಗ ಅಂಬೇಡ್ಕರರ ಥರ ಆಗಬೇಕೆಂದು ಕಾಣುವ ಕನಸು, ತನ್ನ ನಂಬಿಕೆಗೆ ಕಾರಣವಾಗಿರುವ ತಣಿಗೆ, ಗೌಡರ ಮನೆಯಲ್ಲಿರುವುದರಿಂದ ಅದನ್ನು ತಾನು ಸಾಯುವುದರೊಳಗಾಗಿ ಒಮ್ಮೆಯಾದರೂ ಮುಟ್ಟಬೇಕು ಎಂಬ ಬಯಕೆ ಕುತೂಹಲಕಾರಿಯಾಗಿವೆ. ಮೊಗಳ್ಳಿ ಅವರ ಕಥೆಗಳಲ್ಲಿ ಅಪ್ಪ ಕುಡುಕ, ದುಷ್ಟ;ತಾತ ಮಾಗಿದ ಜೀವ; ಅತ್ತೆಯರು ಮದುವೆ ಆಗದೆ ನಿಂತವರು; ದೇವರು, ದೆವ್ವಗಳು ಮೌಢ್ಯಕ್ಕೆ, ಶೋಷಣೆಗೆ ಸಂಕೇತ. ಮಕ್ಕಳು ಮಹಿಳೆಯರು ದೌರ್ಜನ್ಯಕ್ಕೆ, ಮಾನಸಿಕ ಹಿಂಸೆಗೆ ಒಳಗಾಗಿದ್ದಾರೆ. 'ಬುಗುರಿ' ಒಂದು ಸಾಂಕೇತಿಕ ಪ್ರಧಾನವಾದ ಕಥೆ. ಇಲ್ಲಿನ ಜನರ ಬದುಕನ್ನು ಕಕ್ಕಸ್ಸು ಗುಂಡಿಯ ಮೂಲಕ ಮುಟ್ಟಿಸುವ ಚಿತ್ರ ಅದ್ಭುತವಾಗಿದೆ. ಇಲ್ಲಿಯ ತಂದೆ, ಮಗನ ಸಂಬಂಧ ಅತ್ಯಂತ

ಕ್ರೌರ್ಯದಿಂದ ಕೂಡಿದೆ. ಕಕ್ಕಸ್ಸು ಗುಂಡಿಯಲ್ಲಿ ಹಂದಿ ಮತ್ತು ಬುಗುರಿ ಬೀಳುವ ಚಿತ್ರಗಳು ಮರೆಯಲಾರದ ಸಂಗತಿಗಳು. ಅವ್ವ, ಮಗ ಇಬ್ಬರೂ ಬೆಚ್ಚಿ ಕತ್ತಲಲ್ಲಿ ಕೂರುವ ಚಿತ್ರ, ಚೆಲುವನ ಅಪ್ಪ ಅವನ ಅವ್ವನಿಗೆ ಹೊಡೆಯುವ ದೃಶ್ಯ, ಪೊಲೀಸಿನವರ ಪ್ರವೇಶ -ಇವೆಲ್ಲಾ ಮೊಗಳ್ಳಿ ಅವರ ವಿಶಿಷ್ಟ ಪರಿಸರ ಹಾಗೂ ಭಾಷೆಯ ಸಮೃದ್ಧತೆಯಿಂದ ಹೊಸತನವನ್ನು ಪ್ರಕಟಿಸುತ್ತವೆ. ಚೆಲುವ ಕೊನೆಗೆ ಪ್ರಸ್ತುತದ ರಣಬದುಕನ್ನು ಕಂಡು ಬೆಚ್ಚಿ ತನ್ನವ್ವನಿಗೆ, "ಅವ್ವೋ ನನ್ನ ನಿನೊಟ್ಟೆವೊಳಕ್ಕೆ ಸೇರಿಸ್ಕಬುಡವಾ" ಎಂದು ಹೇಳುತ್ತ ತಲ್ಲಣ ಸ್ಥಿತಿಗೆ ಒಳಗಾಗಿ ಕೂರುತ್ತಾನೆ. ಇಲ್ಲಿ ವೈಯಕ್ತಿಕ ಸಂಸಾರದ ಸಮಸ್ಯೆ ಕೊನೆಗೆ ಸಾಮಾಜಿಕವಾದ ಛಿದ್ರತೆಗೆ ಕಾರಣವಾಗುತ್ತದೆ. ಜನ ಕಟ್ಟಿದ ತಮ್ಮ ಕನಸು ನುಚ್ಚುನೂರಾಗುವುದರ ಚಿತ್ರ 'ಬತ್ತ' ಕಥೆಯಲ್ಲಿ ಅದ್ಭುತವಾಗಿ ಮೂಡಿಬಂದಿದೆ. ಬುಗುರಿ, ಬತ್ತ, ಇವೆಲ್ಲವನ್ನೂ ನವ್ಯ ಕಥೆಗಾರರ ರೀತಿಯಲ್ಲಿಯೇ ಮೊಗಳ್ಳಿ ಅವರು ಸಾಂಕೇತಿಕವಾಗಿ ಬಳಸಿದರೂ, ಅವುಗಳಿಗೆ ಸಮೃದ್ಧವಾದ ಅರ್ಥವನ್ನು ತಂದುಕೊಟ್ಟಿದ್ದಾರೆ. ಊರಿನ ಗೌಡರ ಆರ್ಭಟ, ಬಡವರ ಅಸಹಾಯಕತೆ, ಪೊಲೀಸಿನವರ ದೌರ್ಜನ್ಯ, ಮಾಯಮ್ಮನ ಮೊಮ್ಮಗ ಹಸಿವು ತಾಳಲಾರದೆ ಬತ್ತ ತಿನ್ನುವ ಚಿತ್ರ ಇವೆಲ್ಲಾ 'ಬತ್ತ' ಕಥೆಯಲ್ಲಿ ಮರೆಯಲಾರದ ಘಟನೆಗಳು. ಕೆರೆಯ ಒತ್ತುವರಿ ಜಾಗದಲ್ಲಿ ಬೆಳೆದ ಬತ್ತವನ್ನು ಕೊನೆಗೆ ಕುಯ್ಯುವುದು ಜನರಿಗೆ ಕನಸಾಗಿಯೇ ಉಳಿಯುತ್ತದೆ. ಅಧಿಕಾರಶಾಹಿ ಮುಗ್ಧಜನರನ್ನು ಸಂಕಟಕ್ಕೆ, ಅವಮಾನಕ್ಕೆ, ತೊಂದರೆಗೆ ಗುರಿಮಾಡುತ್ತದೆ. ವಿದ್ಯಾವಂತ ಹುಡುಗರೂ ಸಹ ಇಲ್ಲಿ ಅಸಹಾಯಕರು. ಇಲ್ಲಿನ ತೋಪಮ್ಮನಂತಹ ಸೂಲಗಿತ್ತಿ ಮಾಯವಾಗುವುದು ನಿಗೂಢ. ಆದರೆ ಮೊಗಳ್ಳಿ ಅವರ 'ನಾದದ ನದಿಯೊಂದು ನಡಿದಾಂಗ' ಕಥೆಯಲ್ಲಿ ಕಾಮದ ವೈಭವೀಕರಣ ಹಾಗೂ ನವ್ಯದ ಕೆಲವು ಕಥೆಗಾರರ ಪ್ರಭಾವ ಎದ್ದುಕಾಣುತ್ತದೆ. ಆದರೆ ಗಟ್ಟಿಯಾದ ಅನುಭವ ಹಾಗೂ ತಾಜಾತನದಿಂದ 'ನನ್ನಜ್ಜನಿಗೊಂದಾಸೆಯಿತ್ತು' ಕಥೆ ಚೇತೋಹಾರಿಯಾಗಿದೆ.

ಹೀಗೆಯೇ ಈ ವರ್ಷ ಸಾರಾ ಅಬೂಬಕರ್‌ರ 'ಪಯಣ', ನೇಮಿಚಂದ್ರರ 'ಮತ್ತೆ ಬರೆದ ಕಥೆಗಳು', ಚಂದ್ರಕಾಂತ ವಡ್ಡು ಅವರ 'ನಾರಿಹಳ್ಳದ ದಂಡೆಯಲ್ಲಿ' ಕಥಾಸಂಕಲನಗಳು ಪ್ರಕಟವಾಗಿವೆ. ಮನುಷ್ಯರ ಘನತೆ ಹಾಗೂ ಔದಾರ್ಯವನ್ನು ವಡ್ಡು ಅವರು ಆತ್ಮೀಯತೆಯ ಧಾಟಿಯಲ್ಲಿ ತಮ್ಮ ಕಥೆಗಳಲ್ಲಿ ಸೆರೆ ಹಿಡಿದಿದ್ದಾರೆ. ಸಣ್ಣ ಸಣ್ಣ ಘಟನೆಗಳೇ ಇವರ ಕಥೆಗಳಿಗೆ ವಸ್ತುವಾಗಿವೆ. ಗಡ್ಡ ಬೋಳಿಸಿದರೆ ಮದುವೆ ಆಗುತ್ತೀನಿ ಎನ್ನುವ ಹೆಣ್ಣಿನ ಸಣ್ಣ ಪ್ರಸಂಗವೊಂದು ಕೊನೆಗೆ ಮದುವೆಯನ್ನೇ ಹೇಗೆ ತಪ್ಪಿಸುವುದು ಎಂಬುದರ ಚಿತ್ರ'ನಾರಿಹಳ್ಳದ ದಂಡೆಯಲ್ಲಿ' ಸೊಗಸಾಗಿ ಮೂಡಿಬಂದಿದೆ. 'ಗಲಭೆ' ಕಥೆಯಲ್ಲಿ ಕೊಲೆ, ಹಿಂಸೆ ಸಮಾಜದ ಸ್ಥಿತ್ಯಂತರ ಸ್ಥಿತಿಗೆ ಸಾಕ್ಷಿಯಾಗಿದೆ. ನಾರಿಹಳ್ಳದ ಪರಿಸರದಲ್ಲಿ ಮೈದಾಳುವ ಇಲ್ಲಿನ ಕಥೆಗಳಲ್ಲಿ ಮುಖ್ಯವಾಗಿ ಸಾಮಾಜಿಕತೆ ಅಂತರ್ಗತವಾಗಿದೆ. ಇಲ್ಲಿನ ಅತ್ಯಂತ ಶಕ್ತಿಶಾಲಿ ಕಥೆಯೆಂದರೆ 'ನೇಪಥ್ಯದ ನೋವು'. ಈ ಕಥೆಯ ದಲಿತ ಮಹಿಳೆ ಅಳ್ಳಕ್ಕನನ್ನು, ಅವಳ ಗಂಡನಿಂದ ಹಿಡಿದು ಊರಿನ ಗೌಡ, ಶೆಟ್ಟಿಯ ತನಕ ನಿರ್ದಯವಾಗಿ ಶೋಷಿಸುವ ಚಿತ್ರ ಹೃದಯ ವಿದ್ರಾವಕವಾಗಿದೆ. ಆಕೆಯ

ಗಂಡ ಕುಡುಕ. ಅವಳು ಕೂಲಿ ಮಾಡಿ ತಂದಿದ್ದನ್ನೆಲ್ಲಾ ಕುಡಿದು ತೀರಿಸುತ್ತಾನೆ. ಅವಳ ಮನೆಯ ಸಾಮಾನುಗಳನ್ನೆಲ್ಲಾ ಅದಕ್ಕಾಗಿ ಖಾಲಿ ಮಾಡಿದ್ದಾನೆ.ಗೌಡ ಸಹ ಆಕೆಯ ದುಡಿಮೆಗೆ ತಕ್ಕ ಕೂಲಿಯನ್ನು ಕೊಡುತ್ತಿಲ್ಲ. ಅಂಗಡಿಯಲ್ಲಿ ಶೆಟ್ಟಿಯ ಸಾಲ ಬೇರೆ ಬೆಳೆದಿದೆ. ಇಂತಹ ಸ್ಥಿತಿಯಲ್ಲಿ ಆ ಹೆಂಗಸಿನ ಅಸಹಾಯಕತೆಯನ್ನು ವಡ್ಡು ಅವರ ನಿರುದ್ವಿಗ್ನವಾದ ಶೈಲಿ ಸದ್ದಿಲ್ಲದೆ ಹಿಡಿದಿಟ್ಟಿದೆ. ಮನುಷ್ಯರ ಮನಸ್ಸನ್ನು ಪದರು ಪದರುಗಳಾಗಿ ಬಿಡಿಸಿ ವಿಶ್ಲೇಷಿಸುವಲ್ಲಿ ವಡ್ಡು ಅವರ ಬರವಣಿಗೆಯ ವೈಶಿಷ್ಟ್ಯವಿದೆ.

ಮುಸ್ಲಿಂ ಜನಾಂಗದಲ್ಲಿ ಮುಖ್ಯ ಸಮಸ್ಯೆಯಾಗಿರುವ ತಲಾಖ್ ಪದ್ಧತಿಯು ಸಾರಾ ಅಬೂಬಕ್ಕರ್ ಅವರ ಬಹುಪಾಲು ಕಥೆಗಳ ಮೂಲದ್ರವ್ಯ. ಮದುವೆಯಾದ ತಕ್ಷಣ ಗಂಡು ದುಬೈ, ಮುಂಬೈ, ಅರಬ್‌ರಾಷ್ಟ್ರಗಳಿಗೆ ಹೋಗುವುದು; ಇತ್ತ ಹೆಂಡತಿ ಅತ್ತೆ, ಮಾವರ ಕಿರುಕುಳಕ್ಕೆ ಸಿಕ್ಕಿ ಯಾತನೆ ಅನುಭವಿಸುವುದು ; ಆಕೆ ಮಕ್ಕಳು ಹೆತ್ತು ಇಕ್ಕಟ್ಟಿಗೆ ಸಿಕ್ಕಿಕೊಳ್ಳುವುದು;ಆನಂತರ ವರದಕ್ಷಿಣೆ ತರಲಿಲ್ಲ ಎಂಬ ಆಪಾದನೆಗೆ ಗುರಿಯಾಗಿ ಸಂಕಟಕ್ಕೆ ಸಿಕ್ಕಿಹಾಕಿಕೊಳ್ಳುವುದು-ಮುಂತಾದ ವಸ್ತುಗಳನ್ನು ಸಾರಾ ಅವರು ತಮ್ಮ ಕಥೆಗಳಲ್ಲಿ ನಿಭಾಯಿಸಿದ್ದಾರೆ. 'ಪಯಣ' ಸಂಕಲನದ ಬಹುಪಾಲು ಕಥೆಗಳು ಈ ಸಮಸ್ಯೆಗಳನ್ನು ನಿರ್ವಹಿಸುತ್ತವೆ. ಈ ಕಥೆಗಳಲ್ಲಿ ಹೆಣ್ಣಿನ ದಯನೀಯ ಸ್ಥಿತಿಯು ಹೃದಯ ಹಿಂಡುವಂತೆ ಚಿತ್ರಿತವಾಗಿದೆ. ಧರ್ಮದ ಕಟ್ಟುಪಾಡುಗಳಿಗೆ ಸಿಕ್ಕಿ ಹೆಣ್ಣುಮಕ್ಕಳು ಅನುಭವಿಸುವ ಅಸಹಾಯಕತೆಯು ಅಮಾನವೀಯವಾಗಿದೆ. 'ಉರಿಬಿಸಿಲು'ಕಥೆಯಲ್ಲಿ ಬರುವ ಹೆಣ್ಣು ಇಂತಹ ಕ್ಷುದ್ರ ಧಾರ್ಮಿಕವಾದ, ಸಾಮಾಜಿಕವಾದ ಪದ್ಧತಿಗಳನ್ನು ಪ್ರತಿಭಟಿಸಬೇಕೆಂದುಕೊಂಡರೂ ಅದು ನಿಜದಲ್ಲಿ ಸಾಧ್ಯವಾಗುವುದಿಲ್ಲ. ಗಂಡಸಿನ ಮೋಸಕ್ಕೆ, ಲೈಂಗಿಕ ಶೋಷಣೆಗೆ ಇಲ್ಲಿ ಹೆಣ್ಣು ಸಿಕ್ಕಿ ತನ್ನ ವ್ಯಕ್ತಿತ್ವ, ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾಳೆ. ಸಾರಾ ಅವರು ಈ ಸಮಸ್ಯೆಗಳನ್ನು ಚಿತ್ರಿಸುವಲ್ಲಿ ಕಥೆಯ ಬಂಧದಲ್ಲಿ ಇನ್ನಷ್ಟು ಬಿಗಿಯನ್ನು ವಹಿಸಬೇಕಿತ್ತು ಅನ್ನಿಸುತ್ತದೆ. ಆದರೆ ವಿಶಿಷ್ಟವಾದ ಜನಾಂಗವೊಂದರ ಸಮಸ್ಯೆಗಳನ್ನು ಸಾಹಿತ್ಯಾತ್ಮಕವಾಗಿ ದಾಖಲು ಮಾಡಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಇಂದು ಸ್ತ್ರೀ ಸಂವೇದನೆಗೆ, ಹೊಸ ಅರ್ಥ ತಂದುಕೊಡುತ್ತಿರುವ ಕೆಲವೇ ಕೆಲವು ಲೇಖಕಿಯರ ಸಾಲಿನಲ್ಲಿ ನೇಮಿಚಂದ್ರರು ಮುಖ್ಯರಾಗಿದ್ದಾರೆ. ಅವರು 'ಮತ್ತೆ ಬರೆದ ಕಥೆಗಳು' ಎಂಬ ಸಂಕಲನದ ಕಥೆಗಳು ಗಂಡು ಹೆಣ್ಣಿನ ನಡುವಿನ ಸಂಬಂಧವನ್ನು ಮಾನವೀಯ ದೃಷ್ಟಿಕೋನಗಳಿಂದ ಶೋಧಿಸುವುದನ್ನು ಕಾಣಬಹುದು. ಮಧ್ಯಮವರ್ಗದ ಕುಟುಂಬಗಳಲ್ಲಿ ಉಂಟಾಗುವ ಸಾಂಪ್ರದಾಯಿಕ ಹಾಗೂ ಸಾಮಾಜಿಕವಾದ ಏರುಪೇರುಗಳನ್ನು ಇವರ ಕಥೆಗಳು ವಸ್ತುವಾಗಿ ಸ್ವೀಕರಿಸಿವೆ. ಇವರು ತಮ್ಮ ನಾಟಕೀಯವಾದ ಶೈಲಿಯಿಂದ ಮನುಷ್ಯರ ಮಾನಸಿಕ ಸ್ಥಿತಿಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ.

ಅಂತರಜಾತಿ ವಿವಾಹದಿಂದ ಮಡಿವಂತ ಕುಟುಂಬದಲ್ಲಿ ಘಟಿಸುವ ಪ್ರಸಂಗ 'ನೀವು ಕಾಣದ ನಾಳೆಗಳಲ್ಲಿ' ಕಥೆಯಲ್ಲಿ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ. ಮಡಿವಂತ

ತಂದೆತಾಯಿಯರು ಮಗನ ವಿಚ್ಛೇದನಕ್ಕೆ ಪ್ರೇರೇಪಿಸುವ ಕ್ರೌರ್ಯ ಕುತೂಹಲಕಾರಿಯಾಗಿವೆ. ಮಗ, ಇಲ್ಲಿ ಸ್ವಾತಂತ್ರ್ಯ ಬಯಸಿದವನಾದರೆ, ಅಪ್ಪ ಹಳೆಯ ಪದ್ಧತಿಗೇ ಜೋತುಬಿದ್ದವನು. ಹಾಗೆಯೇ'ಹೊಸಹುಟ್ಟು' ಈ ಸಂಕಲನದ ಉತ್ತಮ ಕಥೆಯಾಗಿದೆ. ಮಗುವನ್ನು ಹಡೆಯಬೇಕು ಎಂದು ಹಂಬಲಿಸುವ ಹೆಣ್ಣೊಬ್ಬಳ ಪಾತ್ರ ಇದರಲ್ಲಿ ಅಪೂರ್ವವಾಗಿ ಚಿತ್ರಿತವಾಗಿದೆ. ಬದುಕಿಗೆ ಬೇಸತ್ತು ಸಾವಿನತ್ತ ಮನಸ್ಸು ಮಾಡಿ ಮತ್ತೆ ಬದುಕಿಗೆ ಹಿಂತಿರುಗುವ ಜೀವದಾಯಕವಾದ ಒಂದು ಯತ್ನ, 'ಸಾವಿನತ್ತ ಒಂದು ಹೆಜ್ಜೆ' ಕಥೆಯಲ್ಲಿ ಸೊಗಸಾಗಿ ಮೂಡಿಬಂದಿದೆ. ನೇಮಿಚಂದ್ರರ ಕಥೆಗಳಲ್ಲಿ ಮೆಚ್ಚುಗೆಯ ಗುಣವೆಂದರೆ ಮಾನವೀಯತೆ ಪ್ರಧಾನವಾಗಿರುವುದು. ಬದುಕಿನ ವೈವಿಧ್ಯತೆಯನ್ನು ವಾಸ್ತವದ ನೆಲೆಯಿಂದ ಪರಿಭಾವಿಸುವುದು.

ಈ ವರ್ಷದಲ್ಲಿ ಸಂಪಾದಿತ ಕೃತಿಗಳಾಗಿ ಡಾ. ಬೆಸಗರಹಳ್ಳಿ ರಾಮಣ್ಣನವರು ಸಂಪಾದಿಸಿರುವ 'ಸಣ್ಣಕಥೆ-೧೯೯೦' ಹಾಗೂ ಮಾವಿನಕೆರೆ ರಂಗನಾಥನ್ ಸಂಪಾದಿಸಿರುವ 'ಕಥಾಗುಚ್ಛ'ಸಂಕಲನಗಳು ಪ್ರಕಟವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು, ಆಯಾಯಾ ವರ್ಷ ಬೇರೆ ಬೇರೆ ಪತ್ರಿಕೆಗಳಲ್ಲಿ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಉತ್ತಮ ಕಥೆಗಳನ್ನು ಖ್ಯಾತ ಲೇಖಕರಿಂದ ಸಂಪಾದಿಸಿ ಪ್ರಕಟಿಸುವ ಸಂಪ್ರದಾಯವನ್ನು ಇಟ್ಟುಕೊಂಡು ಬಂದಿದೆ. ಈ ಯೋಜನೆಯಲ್ಲಿ ೧೯೯೦ರಲ್ಲಿ ಪ್ರಕಟವಾದ ಕಥೆಗಳನ್ನು ಖ್ಯಾತ ಕಥೆಗಾರ ಬೆಸಗರಹಳ್ಳಿ ರಾಮಣ್ಣ ಅವರು ಸಂಪಾದಿಸಿರುವ ಹದಿನಾಲ್ಕು ಕಥೆಗಳು 'ಸಣ್ಣಕಥೆ-೧೯೯೦ರಲ್ಲಿವೆ. ಚದುರಂಗ, ಸುಧಾಕರ, ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಕೇಶವರೆಡ್ಡಿ ಹಂದ್ರಾಳ, ಕುಂ. ವೀರಭದ್ರಪ್ಪ, ಚಂದ್ರಕಾಂತ ವಡ್ಡು, ಕೇಶವ ಮಳಗಿ, ಬೊಳುವಾರು, ಕರೀಗೌಡ ಬೀಚನಹಳ್ಳಿ ಅವರ ಕಥೆಗಳು ಈ ಸಂಕಲನದಲ್ಲಿವೆ. ಈಗಾಗಲೇ ಈ ಕಥೆಗಳು ಈ ಲೇಖಕರ ಕೆಲವು ಕಥಾಸಂಕಲನಗಳಲ್ಲಿ ಸೇರಿವೆ. ಕನ್ನಡ ಕಥಾ-ಸಾಹಿತ್ಯದ ವೈವಿಧ್ಯತೆ ಹಾಗೂ ಬೆಳವಣಿಗೆಯನ್ನು ಅರಿಯಲು ಇವು ಉತ್ತಮ ಕಥೆಗಳಾಗಿವೆ. ವರ್ಷದಲ್ಲಿ ಪ್ರಕಟವಾಗುವ ನೂರಾರು ಕಥೆಗಳಲ್ಲಿ ಉತ್ತಮವಾದದ್ದನ್ನು ಆಯ್ದುಕೊಡುವ ಕೆಲಸ ಕಷ್ಟಕರವಾದದ್ದು. ಅದನ್ನು ರಾಮಣ್ಣನವರು ಸಮರ್ಥವಾಗಿ ನಿರ್ವಹಿಸಿದ್ದಾರೆ. ಮಾಸ್ತಿ ಅವರ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಕಥಾಸ್ಪರ್ಧೆಯನ್ನು ಏರ್ಪಡಿಸಿ ಆ ಸ್ಪರ್ಧೆಯಲ್ಲಿ ಬಹುಮಾನಕ್ಕೆ ಅರ್ಹವಾದ ಹದಿನಾರು ಸಣ್ಣಕಥೆಗಳನ್ನು ಮಾವಿನಕೆರೆ ರಂಗನಾಥನ್ ಅವರು ತಮ್ಮ 'ಕಥಾಗುಚ್ಛ' ಸಂಲನದಲ್ಲಿಸಂಕಲಿಸಿ ಪ್ರಕಟಿಸಿದ್ದಾರೆ. ಈ ಸ್ಪರ್ಧೆಗೆ ಬಂದ ಸುಮಾರು ಮೂರುನೂರ ಎಪ್ಪತ್ತೈದು ಕಥೆಗಳಲ್ಲಿ ಹದಿನಾಲ್ಕು ಉತ್ತಮ ಕಥೆಗಳನ್ನು ತೀರ್ಪುಗಾರರು ಆಯ್ಕೆ ಮಾಡಿರುವುದು ನಿಜಕ್ಕೂ ಸಾಹಸ. ರವಿ ಬೆಳಗೆರೆ, ಎಂ.ಎಸ್. ವೇದಾ, ಕೆ.ಆರ್. ವಿದ್ಯಾಧರ, ಎಚ್. ನಾಗವೇಣಿ, ಕೇಶವರೆಡ್ಡಿ ಹಂದ್ರಾಳ, ಅಮರೇಶ ನುಗಡೋಣಿ ಇವರ ಕಥೆಗಳು ಈ ಸಂಕಲನದ ಮಹತ್ವವನ್ನು ಹೆಚ್ಚಿಸಿವೆ. ದಲಿತರ ಬದುಕು, ಸ್ತ್ರೀಪರ ಧೋರಣೆ, ಗ್ರಾಮೀಣ ಪರಿಸರದ ದಟ್ಟ ಚಿತ್ರಣ, ಶೋಷಣೆಯ ವಿರುದ್ಧ ಪ್ರತಿಭಟನೆ ಹೀಗೆ ವಸ್ತು ವೈವಿಧ್ಯತೆ ಇಲ್ಲಿನ ಕಥೆಗಳಲ್ಲಿ ಎದ್ದು ಕಾಣುತ್ತದೆ.

ದೇವನೂರ ಮಹಾದೇವ ಅವರ ಸಮಗ್ರಕಥೆ, ಕಾದಂಬರಿಗಳನ್ನು ಒಳಗೊಂಡ ಕೃತಿ ಮತ್ತು ಪಿ. ಲಂಕೇಶರ 'ಸಮಗ್ರ ಕಥೆಗಳು'ಈ ವರ್ಷದ ಮಹತ್ವದ ಕೃತಿಗಳಾಗಿವೆ. ಕನ್ನಡ ಕಥಾಕ್ಷೇತ್ರದಲ್ಲಿ ಈ ಇಬ್ಬರು ಕಥೆಗಾರರ ಬೆಳವಣಿಗೆ ವಿಶಿಷ್ಟವಾದದ್ದು. ಇವರ ಕಥೆಗಳನ್ನು ಕುರಿತು ಇದುವರೆಗೆ ಸಾಕಷ್ಟು ಚರ್ಚೆ ನಡೆದಿದೆ. ನವ್ಯದ ಬಂಧದಿಂದ ಕಥೆಗಳನ್ನು ಬರೆಯಲು ಆರಂಭಿಸಿದ ಮಹಾದೇವ ನಂತರ ವಸ್ತು, ಬಂಧಗಳೆರಡರಲ್ಲೂ ಬದಲಾವಣೆಯನ್ನು ತಂದುಕೊಂಡವರು. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದಲಿತರ ಬದುಕಿನ ಆಳ-ಅಗಲಗಳನ್ನು, ವೈರುಧ್ಯಗಳನ್ನು ಶೋಧಿಸುವುದನ್ನು ಮಹಾದೇವರ ಕಥಾಸಾಹಿತ್ಯದಲ್ಲಿ ಕಾಣಬಹುದು. ದಲಿತರ ಅಸಹಾಯಕತೆ, ಶೋಷಣೆ, ಹಸಿವು, ಬಡತನ ಇವು ಇವರ ಕಥಾಸಾಹಿತ್ಯದ ಮೂಲದ್ರವ್ಯ. ಇವರ 'ಮಾರಿಕೊಂಡವರು', 'ಗ್ರಸ್ತರು', 'ಡಾಂಬರು ಬಂದದು','ಅಮಾಸ','ಮೂಡಲಸೀಮೇಲಿ ಕೊಲೆ ಗಿಲೆ ಮುಂತಾಗಿ' ಈ ಕಥೆಗಳು ಮತ್ತು'ಒಡಲಾಳ', 'ಕುಸುಮಬಾಲೆ' ಕಾದಂಬರಿಗಳು ಕನ್ನಡ ಕಥಾಸಾಹಿತ್ಯದಲ್ಲಿ ಅಪೂರ್ವ ಮಾದರಿಗಳಾಗಿವೆ. ಹಸಿವು ಮತ್ತು ಶೋಷಣೆ 'ಒಡಲಾಳ'ದಲ್ಲಿ ಅಂತರ್ಗತವಾಗಿದ್ದರೆ, ಜನಪದ, ಇತಿಹಾಸ, ಪುರಾಣ, ಸಮಕಾಲೀನತೆ 'ಕುಸುಮಬಾಲೆ' ಯಲ್ಲಿ ವ್ಯಕ್ತವಾಗಿದೆ. ಮನುಷ್ಯ ಮನುಷ್ಯ ಸಂಬಂಧದ ಅನನ್ಯತೆಯನ್ನು ಎತ್ತಿ ಹಿಡಿಯುವಲ್ಲಿ ಈ ಕಥೆಗಳು ಕಲಾತ್ಮಕವಾಗಿ ವಿಶಿಷ್ಟ ಕೆಲಸವನ್ನು ಮಾಡಿವೆ. ಇವರ ಸಾಹಿತ್ಯದಲ್ಲಿ ಬದುಕಿನ ಬಗ್ಗೆ, ಹಿರಿಯ ಪಾತ್ರಗಳಲ್ಲಿ ವ್ಯಕ್ತವಾಗುವ ಗಾಢ ವಿಷಾದ, ಕಿರಿಯ ಪಾತ್ರಗಳಲ್ಲಿ ಉಕ್ಕುವ ಅದಮ್ಯ ಜೀವನೋತ್ಸಾಹ ಮಹಾದೇವರ ವಿಶಿಷ್ಟ ಗ್ರಹಿಕೆಯಾಗಿದೆ.

ನಮ್ಮ ಹಿರಿಯ ನವ್ಯಲೇಖಕರಲ್ಲಿ ಪಿ. ಲಂಕೇಶರು ಅಗ್ರಗಣ್ಯರು. ಗದ್ಯಕ್ಕೆ ಕಾವ್ಯಾತ್ಮಕವಾದ ಗುಣವನ್ನು ತಂದುಕೊಟ್ಟ ಶ್ರೇಯಸ್ಸು ಲಂಕೇಶರಿಗೆ ಸಲ್ಲುತ್ತದೆ. ಐವತ್ತರ ದಶಕದ ಅಂತ್ಯದಿಂದ ಬರೆದ ಸುಮಾರು ಮೂವತ್ತೇಳು ಕಥೆಗಳು ಈ ಸಮಗ್ರ ಕೃತಿಯಲ್ಲಿ ಸೇರಿವೆ. ಈ ಕಥೆಗಳೆಲ್ಲಾ ಈಗಾಗಲೇ ಸಾಕಷ್ಟು ವಿಮರ್ಶಕರ ಚರ್ಚೆಗೆ ಪಾತ್ರವಾಗಿವೆ. ಕನ್ನಡ ಕಥಾ ಸಾಹಿತ್ಯದ ವೈವಿಧ್ಯತೆ ಹಾಗೂ ಹೊಸತನಕ್ಕೆ ಕಾರಣವಾಗಿವೆ. ಲಂಕೇಶರು ಸಣ್ಣ ಸಣ್ಣ ವಾಕ್ಯಗಳಲ್ಲಿ ಸರಳವಾಗಿ ಕಥೆಯನ್ನು ಕಟ್ಟುವ ಕಲೆಯನ್ನು ಹುಟ್ಟುಗುಣವಾಗಿ ಪಡೆದಿದ್ದಾರೆ. ಇವರ ಕಥೆಗಳ ಬಹುಮುಖ್ಯ ಗುಣ ಎಂದರೆ ಮುಕ್ತತೆ. ಆಶಯ ಮತ್ತು ಅಭಿವ್ಯಕ್ತಿಗಳೆರಡನ್ನೂ ಕಥೆಯಲ್ಲಿ ಸಂಕ್ಷಿಪ್ತವಾಗಿ, ಸೂಕ್ಷ್ಮವಾಗಿ ದುಡಿಸಿಕೊಳ್ಳುವ ಸಂಯಮ, ಮನುಷ್ಯನ ಮೂಲ ಪ್ರವೃತ್ತಿಗಳನ್ನು ಶೋಧಿಸುವಲ್ಲಿ ಇವರ ಕಥೆಗಳು ಪ್ರವೃತ್ತವಾಗಿವೆ. ಈ ಕಥೆಗಳ ವಸ್ತು ಹಳ್ಳಿಯಿಂದ ಹಿಡಿದು ನಗರದವರೆಗೆ ವ್ಯಾಪಿಸಿದೆ. ಮನುಷ್ಯರ ಸಣ್ಣತನ, ಅವಮಾನ, ದಿಗ್ಭ್ರಮೆ, ಅಸಹಾಯಕತೆ, ಮಾನವೀಯತೆ ಇವುಗಳನ್ನು ಇವರ ಕಥೆಗಳು ಅಂತಸ್ಥವಾಗಿ ಒಳಗೊಂಡಿವೆ. ಆರಂಭದ ಹಂತದ ಕಥೆಗಳಲ್ಲಿ ಲಂಕೇಶರು ಕಥೆಗಳನ್ನು ಅತ್ಯಂತ ಸಂಕ್ಷಿಪ್ತವಾಗಿ, ಕಾವ್ಯದ ಮಟ್ಟದಲ್ಲಿ ಬರೆಯುತ್ತಿದ್ದರು. 'ಒಬ್ಬಂಟಿ', 'ಕೊನೆ', 'ನಿವೃತ್ತರು', 'ವಾಮನ', 'ನಾನಲ್ಲ', 'ರೊಟ್ಟಿ', ಈ ಕಥೆಗಳ ಸಂಕ್ಷಿಪ್ತಗುಣ

ಗಮನಾರ್ಹವಾದುದು. ಅನಂತರ 'ಜೊತೆಗಾರ', 'ಮಾರಲಾಗದ ನೆಲ', 'ಉಮಾಪತಿಯ ಸ್ಕಾಲರ್‌ಶಿಪ್‌ಯಾತ್ರೆ' ಈ ಕಥೆಗಳಲ್ಲಿ ಕಥಾನಕ, ಘಟನೆ, ವೃತ್ತಾಂತವಾಗಿ ಬೆಳೆಸಿಕೊಂಡಿದ್ದಾರೆ. ಆಮೇಲೆ 'ಸಹಪಾಠಿ', 'ಮುಟ್ಟಿಸಿಕೊಂಡವನು', 'ಕಲ್ಲುಕರಗುವ ಸಮಯ' ಈ ಕಥೆಗಳಲ್ಲಿ ಸಮಾಜದ ವೈರುಧ್ಯ, ಕ್ರೌರ್ಯ, ಕೆಡಕುಗಳನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಲಂಕೇಶರ ಬಹುಪಾಲು ಕಥೆಗಳು ಗಟ್ಟಿಯಾದ ನವ್ಯಪರಂಪರೆಯನ್ನು ನಿರ್ಮಾಣ ಮಾಡುವಲ್ಲಿ ಶಕ್ತಿಶಾಲಿಯಾದ ಕೊಡುಗೆಗಳಾಗಿವೆ.ಇವರ ಕಥೆಗಳು ಒಂದು ಕಡೆ ಹೀಗೆ ಇಡಿಯಾಗಿ ಪ್ರಕಟವಾಗಿರುವುದು ಓದುಗರಿಗೆ, ಅಧ್ಯಯನಾಸಕ್ತರಿಗೆ ತುಂಬಾ ಉಪಯುಕ್ತವಾಗಿದೆ. ದೇವನೂರ ಮಹಾದೇವ ಮತ್ತು ಲಂಕೇಶರ ಕಥೆಗಳು ಇನ್ನೂ ಹೆಚ್ಚಿನ ಕುತೂಹಲಕಾರಿಯಾದ ಅಧ್ಯಯನವನ್ನು ಅಪೇಕ್ಷಿಸುತ್ತವೆ. ಅವು ಇನ್ನೂ ಹತ್ತಾರು ಚಿಂತನೆಗಳಿಗೆ ಹಚ್ಚುತ್ತವೆ. ಇದು ಅವುಗಳ ಮಹತ್ವದ ಗುಣ. ಒಟ್ಟಾರೆ ೧೯೯೨ನೇ ವರ್ಷದ ಕಥಾಸಾಹಿತ್ಯ ಹೀಗೆ ಹಳಬರ, ಹೊಸಬರ, ಮಿಶ್ರಿತದಿಂದಾಗಿ ಆಶಾದಾಯಕವಾಗಿದೆ.

●

* * *

ಕಾದಂಬರಿ

— ಟಿ.ಪಿ. ಅಶೋಕ

ಸಂಖ್ಯೆ, ಗುಣಮಟ್ಟ, ಪ್ರಯೋಗಶೀಲತೆ, - ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ೧೯೯೨ರ ಕಾದಂಬರಿ ಲೋಕ ತುಂಬಾ ನಿರಾಶೆ ಹುಟ್ಟಿಸುತ್ತದೆ. ಕೆ. ಸತ್ಯನಾರಾಯಣ, ವೈದೇಹಿ, ದು.ನಿಂ. ಬೆಳಗಲಿ, ಚೆನ್ನಣ್ಣ ವಾಲೀಕಾರ, ಸುಂದರನಾಡಕರ್ಣಿ, ಕೆ.ಟಿ. ಗಟ್ಟಿ ಅವರಂಥ ಕೆಲವೇ ಕೆಲವು ಪ್ರಸಿದ್ಧರ ಸೀಮಿತ ಯಶಸ್ಸಿನ ಕೆಲವು ರಚನೆಗಳನ್ನು ಬಿಟ್ಟರೇ ಉಳಿದಂತೆ ಬರೇ ಬರಡು. ಲಘು ಮನರಂಜನೆಯ ದೃಷ್ಟಿಯಿಂದ ಕೂಡ ಉಳಿದ ಬಹಳಷ್ಟು ರಚನೆಗಳು ಸಾರ್ಥಕವೆನಿಸುವುದಿಲ್ಲ.

ನಿಸ್ಸಂದೇಹವಾಗಿ, ಕೆ. ಸತ್ಯನಾರಾಯಣರವರ "ಗೌರಿ" ಈ ವರ್ಷದ ಅತ್ಯುತ್ತಮ ಕಾದಂಬರಿ. ನವ್ಯೋತ್ತರ ಕಾದಂಬರಿಕಾರರಲ್ಲಿ ಕೆ. ಸತ್ಯನಾರಾಯಣ ಅವರ ಪ್ರಯೋಗಗಳಿಗೆ ತನ್ನದೇ ಆದ ಒಂದು ವಿಶಿಷ್ಟಸ್ಥಾನ ಇದೆ. "ಒಂದು ಕಥಾನಕದ ಮೂಲಕ"ಎಂಬ ತಮ್ಮ ಮೊದಲ ಕಾದಂಬರಿಯಲ್ಲಿ ಸತ್ಯನಾರಾಯಣ ಬರವಣಿಗೆಯ ಸಿದ್ಧಮಾರ್ಗಗಳನ್ನು ತೊರೆದು ತಮ್ಮದೇ ಆದ ಒಂದು ದಾರಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದರು. ಸಾಂಪ್ರದಾಯಕ ವಾಸ್ತವವಾದೀ ಕಾದಂಬರಿ ಮತ್ತು ನವ್ಯ ಕಾದಂಬರಿಗಳಿಗಿಂತ ಭಿನ್ನವಾದ ಆಕೃತಿಯೊಂದನ್ನು ಕಂಡುಕೊಳ್ಳಲು ಬಯಸಿದ್ದರು. ಎರಡನೆಯ ಕಾದಂಬರಿ "ರಾಜಧಾನಿಯಲ್ಲಿ ಶ್ರೀಮತಿಯರು" ಪದ್ಯರೂಪದಲ್ಲಿ ಬರೆದದ್ದು. ವಾಸ್ತವೇತರ ಎನ್ನುವಂಥ ಪರಿಕರಗಳನ್ನೂ ಸತ್ಯನಾರಾಯಣ ಅಲ್ಲಿ ಯಾವುದೇ ಮುಜುಗರ ಸಂಕೋಚಗಳಿಲ್ಲದೇ ಬಳಸಿಕೊಂಡಿದ್ದರು. ಅಂದರೆ ಕಥನದ ಹಲವು ಸಾಧ್ಯತೆಗಳನ್ನು ಸೃಜನಶೀಲ ಪ್ರಯೋಗಗಳಿಗೆ ಒಡ್ಡುವುದು ಶ್ರೀಯುತರ ಬರಹಗಳ ಒಂದು ಮುಖ್ಯ ಲಕ್ಷಣವಾಗಿದೆ. ಇದು ಕೇವಲ ಪ್ರಯೋಗಶೀಲತೆಯ ಚಪಲದಿಂದ ಹುಟ್ಟಿದ್ದಲ್ಲ. ಏಕೆಂದರೆ ಈ ಲೇಖಕರಿಗೆ ಪ್ರಯೋಗಶೀಲತೆ ಎಂಬುದು ಸೃಜನಶೀಲವಾಗುವ ಪ್ರಮುಖ ಮಾರ್ಗವಾಗಿದೆ. ಹಾಗಾಗಿ ಅಂತಿಮ ಸಾಧನೆಗಿಂತ

ಲೇಖಕರ ಸೃಷ್ಟಿಶೀಲ ಚಡಪಡಿಕೆಗಳೇ ನಮ್ಮ ಹೃದಯವನ್ನು ತಟ್ಟಿಬಿಡುತ್ತವೆ. "ಗೌರಿ" ಸತ್ಯನಾರಾಯಣರ ಮೂರನೆಯ ಕಾದಂಬರಿ. ಇಲ್ಲಿ ಲೇಖಕರು ತಮ್ಮ ಮೊದಲೆರಡು ಕಾದಂಬರಿಗಳಿಗಿಂತ ತುಸು ಭಿನ್ನವೆನಿಸುವ ತಂತ್ರವನ್ನು ಬಳಸಿದ್ದಾರೆ. ಪಾತ್ರವೊಂದರ ಆತ್ಮವೃತ್ತಾಂತ ಇಲ್ಲಿ ಕಾದಂಬರಿಯನ್ನು ಕಟ್ಟುತ್ತದೆ. ಈ ಆತ್ಮ ವೃತ್ತಾಂತವಾದರೂ ಸರಳರೇಖಾತ್ಮಕ ಲಯವನ್ನು ಹಿಡಿಯದೆ ವರ್ತಮಾನದ ವಿಶ್ಲೇಷಣೆ, ಭೂತದ ನೆನಪು, ಭವಿಷ್ಯದ ಕಲ್ಪನೆಗಳ ತುಸು ಸ್ವಚ್ಛಂದ ಎಂದು ಹೇಳಬಹುದಾದ ಲಹರಿಯಲ್ಲಿ ಹರಡಿಕೊಳ್ಳುತ್ತದೆ. ಹಾಗಾಗಿ ಏನನ್ನೋ ಸ್ಥಾಪಿಸುವ ತವಕಕ್ಕಿಂತ ತನ್ನ ಮನಸ್ಸನ್ನು ಬಿಚ್ಚಿಟ್ಟುಕೊಳ್ಳುವ ಆ ಮೂಲಕ ಸ್ವಚ್ಛವಾಗುವ, ಸ್ಪಷ್ಟವಾಗುವ ಹಂಬಲ ಕಾಣುತ್ತದೆ. ಈ ಸ್ವಗತದಲ್ಲಿ ಲೋಲುಪತೆ ಇಲ್ಲ. ಮೈ ಪರಚಿಕೊಳ್ಳುವ ಗುಣವೂ ಇಲ್ಲ. ಬದುಕಿನಲ್ಲಿ ಒಡ್ಡಿಕೊಳ್ಳುವ, ತೊಡಗಿಕೊಳ್ಳುವ ಹೆಣ್ಣೊಬ್ಬಳ ನೀಳವಾದ ನಿಟ್ಟುಸಿರಿನಂತಿರುವ ಈ ಸ್ವಗತ ತನ್ನ ಪಿಸುದನಿಯಲ್ಲೇ ಜೀವಂತವಾಗಿದೆ.

ಸತ್ಯನಾರಾಯಣ ಅವರ ಕಾದಂಬರಿಗಳ ಕೇಂದ್ರ ಹೆಣ್ಣು ; ಈ ಹೆಣ್ಣು ತ್ರಿವೇಣಿ ಕಾದಂಬರಿಗಳ ಸ್ತ್ರೀ ಪಾತ್ರಗಳನ್ನು ಹೋಲುವುದಿಲ್ಲ. ಮಹಿಳಾ ವಿಮೋಚನಾ ಚಳುವಳಿಯನ್ನು ನೇರವಾಗಿ ಪ್ರತಿನಿಧಿಸುವ ಹೆಣ್ಣು ಅಲ್ಲ, ಈಕೆ. ಕನಿಷ್ಠ ಸುಖ ನೆಮ್ಮದಿಗಳಿಂದ ಇವಳು ತೃಪ್ತಳಾಗಬಲ್ಲಳು. ಆದರೆ ನಮ್ಮ ಸಮಾಜದಲ್ಲಿ ಲಿಂಗ ಅಸಮಾನತೆ ಎಷ್ಟು ಆಳವಾಗಿ ಬೇರೂರಿದೆ ಎಂದರೆ ಸುಖೀದಾಂಪತ್ಯ ಎಂದು ಮೇಲುನೋಟಕ್ಕೆ ಕಾಣುವಲ್ಲೂ ಸುಪ್ತ ಜ್ವಾಲಾಮುಖಿಗಳೇ ಇರುತ್ತವೆ. "ಗೌರಿ" ಹೆಣ್ಣಿನ ಸ್ಥಿತಿ ಸಾಧ್ಯತೆಗಳನ್ನು ಕೆಳಮಧ್ಯಮ ವರ್ಗದ ದೈನಂದಿನ ಜೀವನದ ಸಾಫಲ್ಯದ ಚೌಕಟ್ಟಿನಲ್ಲಿ ಧ್ಯಾನಿಸಬಯಸುವ ಕಾದಂಬರಿ. ಆದರೆ ಸ್ತ್ರೀ ಶೋಷಣೆ ಇಲ್ಲಿ ವ್ಯಸನವಾಗದೆ ಆ ಮೂಲಕ ಒಂದು ದಾಂಪತ್ಯ ಕ್ರಮದ ವಿನ್ಯಾಸವೇ ಸೂಚಿತವಾಗುವಂತಿದೆ. ಸ್ವಲ್ಪ ಸೂಕ್ಷ್ಮವಾಗಿ ನೋಡಿದರೆ "ಗೌರಿ" ಯ ಗಂಡನ ಪಾಡೂ ಸಮಾಧಾನಕರವಾಗಿಲ್ಲ. ಅವನೂ ಜೀವನದ ಇಕ್ಕಟ್ಟುಗಳಲ್ಲಿ ಸಿಕ್ಕಿಕೊಂಡಿದ್ದಾನೆ. ತನ್ನ ಪರಂಪರೆಯಿಂದ ದತ್ತವಾದ ಪುರುಷ ಅಹಂಕಾರವನ್ನು ಗಂಡಿನ ಸಹಜ ಗುಣವೆಂಬಂತೆ ಚಲಾಯಿಸುವ ಇವನಿಗೆ ಆ ಬಗ್ಗೆ ಗೌರಿಗಿರುವಷ್ಟು ಸೂಕ್ಷ್ಮ ಸಂವೇದನೆ ಇಲ್ಲ. ಆದ್ದರಿಂದ ಅವನಿಗೆ ಬಿಡುಗಡೆಯ ಸಾಧ್ಯತೆಗಳೂ ಕಡಿಮೆ. ಗೌರಿ ಆತನಿಂದ ಬಯಸುವ ಕನಿಷ್ಠ ಮೃದುತ್ವ, ಸ್ಪಂದನಗಳನ್ನು ಅವನು ಕೊಡಲಾರ. ಗೌರಿಯಲ್ಲಿ ಆತ ಪುಳಕ ಹುಟ್ಟಿಸಲಾರ. ಗೌರಿ ಒಂದು ಯಂತ್ರವಂತೆ ಅವನ ಬಯಕೆಗಳನ್ನು ಪೂರೈಸಲಾರಳು. ಕೆಳಮಧ್ಯಮವರ್ಗದ ಆರ್ಥಿಕ ತೊಂದರೆ ತಾಪತ್ರಯಗಳೂ ಇವರ ಸಂಸಾರವನ್ನು ಬಾಧಿಸುತ್ತವೆ. ಆದರೆ ಸಾಮರಸ್ಯ ಸಾಧ್ಯವಿಲ್ಲದಿರುವುದರಿಂದ "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು" ಎಂದು ಈ ದಂಪತಿಗಳು ಹಾಡಲಾರರು. ದಾಂಪತ್ಯದ ಒಳಗೆ ತನ್ನ ಜೀವನದ ಸಾಫಲ್ಯವನ್ನು ಕಾಣದ ಗೌರಿ ಅದರಾಚೆಗೆ ವಿಶಾಲವಾದ ಜೀವನದ ಬೇರೆ ಸಂದರ್ಭಗಳಲ್ಲಿ ಕಾಣಹೊರಡುವ ಸೂಚನೆ ನೋವಿನಿಂದ ಕೂಡಿದ್ದರೂ ಇತ್ಯಾತ್ಮಕವಾಗಿದೆ.

ಸಣ್ಣ ಕತೆಯ ಪ್ರಕಾರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ವೈದೇಹಿಯವರ "ಅಸ್ಪೃಶ್ಯರು"ಕಾದಂಬರಿ ಈ ವರ್ಷ ಪ್ರಕಟವಾಗಿದೆ. ೧೯೮೭ರ "ಸುಧಾ" ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ ವಿಶೇಷ ಬಹುಮಾನವನ್ನು ಈ ಕೃತಿ ಪಡೆದಿತ್ತು. ವೈದೇಹಿಯವರ ಸಣ್ಣ ಕತೆಗಳ ಬಿಸುಪು, ತಾಜಾತನಗಳು ಈ ರಚನೆಯಲ್ಲಿ ಅಷ್ಟಾಗಿ ಅನುಭವಕ್ಕೆ ಬರುವುದಿಲ್ಲ. ಆದರೆ ಲೇಖಕಿ ಇಲ್ಲಿ ತುಸು ಹೆಚ್ಚಿನ ಮಹಾತ್ವಾಕಾಂಕ್ಷೆಯನ್ನು ತೋರಿದ್ದಾರೆ. ಇದು ಅಸ್ಪೃಶ್ಯರ ಬಗ್ಗೆಯೇ ಮಾನವಶಾಸ್ತ್ರೀಯ ದೃಷ್ಟಿಯಿಂದ ಬರೆದ ಸಾಂಪ್ರದಾಯಕ ಕಥಾನಕವಲ್ಲ. ಬದಲಾಗಿ, ತಮಗೆ ಪರಿಚಿತವಾದ ಬ್ರಾಹ್ಮಣ ಜಗತ್ತಿನ ಮಾನವೀಯ ನಡಾವಳಿಗಳಿಗೇ ಲೇಖಕಿ ಹೆಚ್ಚಿನ ಒತ್ತು ಕೊಟ್ಟಿದ್ದಾರೆ. ಈ ನಡಾವಳಿಗಳನ್ನು ಕಾಣಿಸುವ ಕ್ರಮದಲ್ಲಿನ ತಿಳಿಹಾಸ್ಯ ವ್ಯಂಗ್ಯಗಳು ಅಸ್ಪೃಶ್ಯತೆಯ ಬಗ್ಗೆ ಬೇರೊಂದು ಪರಿಕಲ್ಪನೆಯನ್ನೇ ಸೂಚಿಸುವ ಬಗೆ ಇಲ್ಲಿ ವ್ಯಕ್ತವಾಗುತ್ತದೆ. ಹಳತು ಹೊಸತುಗಳ ಮೌಲ್ಯ ತಿಕ್ಕಾಟ, ಪೀಳಿಗೆಗಳ ಸಂಘರ್ಷ ಕಾದಂಬರಿಯನ್ನು ಕಟ್ಟುತ್ತವೆ. ವೈದೇಹಿಯವರು ಬಳಸುವ ಸ್ಥಳೀಯ ಜೀವಂತ ಭಾಷೆ ಕಾದಂಬರಿಗೆ ಒಂದು ಮಟ್ಟದ ಪ್ರಾದೇಶಿಕ ಸೊಗಡನ್ನು ತಂದುಕೊಟ್ಟಿದೆ. ಲೇಖಕಿ ಇಲ್ಲಿ"ಸ್ಥಿತಿಯನ್ನು-ಕೇವಲ ಮಂಡಿಸುತ್ತಿಲ್ಲ ಅದನ್ನು ದಾಟುವ ಉತ್ಸಾಹೀ ಹೆಜ್ಜೆಗಳನ್ನು ಇತ್ಯಾತ್ಮಕವಾಗಿ ಗಮನಿಸಿದ್ದಾರೆ. ವೈದೇಹಿಯವರು ತಮ್ಮ ಬರವಣಿಗೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತಿರುವ ಸೂಚನೆಗಳು ಇಲ್ಲಿ ಕಾಣುತ್ತವೆ ".

ದು.ನಿಂ. ಬೆಳಗಲಿಯವರ "ಮೌನಕ್ರಾಂತಿ"ಯೂ ಗ್ರಾಮೀಣ ಪರಿಸರದಲ್ಲಿ ಆದರ್ಶ ವಾಸ್ತವಗಳ ಸಂಘರ್ಷವನ್ನು ಮಂಡಿಸುವ ಪ್ರಯತ್ನ ಮಾಡುತ್ತದೆ. ಲೇಖಕರ ಪ್ರಗತಿಪರ ದೃಷ್ಟಿ ಮಾನವೀಯ ದೃಷ್ಟಿಕೋನ ಸ್ಪಷ್ಟವಾಗಿಯೇ ಇಲ್ಲಿ ಮೂಡಿವೆ. ಈ ಕಾದಂಬರಿಯ ಪಾತ್ರ ವೈವಿಧ್ಯ ಮತ್ತು ಗ್ರಾಮಜೀವನದ ವಿವರಗಳು ಆಸಕ್ತಿ ಹುಟ್ಟಿಸುವಂತಿವೆ ನುರಿತ ಬರಹಗಾರರ ಕೈಯಲ್ಲಿ ಸಿಕ್ಕ ಕತೆಯೊಂದು ಆರಾಮವಾಗಿ ಓದಿಸಿಕೊಂಡೂ ಹೋಗುತ್ತದೆ. ಆದರೆ 'ಮ್ಮ ಒಟ್ಟಾರೆ ಅನುಭವಕ್ಕೆ ಅಥವಾ ಕಾಣ್ಕೆಗೆ ಹೊಸ ಆಯಾಮಗಳು ಕೂಡಿಕೊಂಡವು ಅನ್ನಿಸುವುದಿಲ್ಲ. ಇಂತಹ ಕಾದಂಬರಿಗಳು ಕನ್ನಡಕ್ಕೆ ಹೊಸದಲ್ಲ. ಸ್ವತಃ ಬೆಳಗಲಿಯವರೇ ಈ ರೀತಿಯ ಕತೆ ಕಾದಂಬರಿಗಳನ್ನು ಈಗಾಗಲೇ ಸಮೃದ್ಧವಾಗಿವೆ ರಚಿಸಿರುವರಷ್ಟೆ.

ಚೆನ್ನಣ್ಣ ವಾಲೀಕಾರರ "ಗ್ರಾಮ ಭಾರತ" ಕಾದಂಬರಿಯ ಬಗ್ಗೆಯೂ ಇದೇ ಮಾತನ್ನು ಹೇಳಬಹುದಾಗಿದೆ. ಲೇಖಕರಲ್ಲಿ ಅನುಭವ ಸಮೃದ್ಧಿಯಿದೆ: ಪ್ರಗತಿಪರ ಜೀವನ ದೃಷ್ಟಿಯಿದೆ:ಪ್ರಾದೇಶಿಕ ಭಾಷೆಯ ಕಸುವಿದೆ. ಆದರೆ ಹೊಸ ಕೃತಿಯೊಂದನ್ನು ಓದಿದ ಅನುಭವವಾಗುವುದಿಲ್ಲ. ಲೇಖಕರು ಆರಾಮವಾಗಿ ಕತೆ ಹೇಳಿಕೊಂಡು ಹೋಗುತ್ತಾರೆ. ಆದರೆ ಮಹತ್ವದ ಸೃಜನಶೀಲ ಪ್ರಶ್ನೆಗಳನ್ನು ಮೈಮೇಲೆ ಹಾಕಿಕೊಂಡಿದ್ದಾರೆ ಅನ್ನಿಸುವುದಿಲ್ಲ.

ಸುಂದರನಾಡಕರ್ಣಿಯವರ "ಕೈ ಕೊಟ್ಟವರು" ಇನ್ನೂ ಹೆಚ್ಚಿನ ಅತೃಪ್ತಿ ಮೂಡಿಸುತ್ತದೆ. ಒಂದು ಕಾಲದಲ್ಲಿ ಅಪಾರ ಭರವಸೆ ಮೂಡಿಸಿದ್ದ ಈ ಲೇಖಕ ಈಗ

ತೀರಾ ಸಾಧಾರಣವಾದ ಕಾದಂಬರಿಯೊಂದನ್ನು ನಮಗೆ ಕೊಟ್ಟಿದ್ದಾರೆ. ಕಷ್ಟಕಾರ್ಪಣ್ಯಗಳ ಜೀವನದ ಮಧ್ಯದಲ್ಲೇ ಮಾನವೀಯ ಘನತೆಯನ್ನು ಉಳಿಸಿಕೊಂಡ ಒಂದು ಹೆಣ್ಣಿನ ಚಿತ್ರವನ್ನು ಕೊಡುವುದು ಇಲ್ಲಿ ಲೇಖಕರ ಉದ್ದೇಶವಾಗಿದೆ. ಆದರೆ ಆತ್ಮವಿಕಾಸದ ಸೂಕ್ಷ್ಮ ನಿರೀಕ್ಷಣೆಗಿಂತ ಹೆಚ್ಚಾಗಿ ಸಾಧಾರಣವೆನಿಸುವ ಘಟನೆಗಳ ಸಾಮಾನ್ಯ ನಿರೂಪಣೆಗೆ ಲೇಖಕರು ಅಲ್ಪತೃಪ್ತಿಯನ್ನು ಹೊಂದಿಬಿಟ್ಟಿದ್ದಾರೆ. ಹೀಗಾಗಿ ವಸ್ತು, ನಿರೂಪಣೆ, ತಾತ್ವಿಕತೆ, ಮುಂತಾಗಿ ಯಾವ ರೀತಿಯಲ್ಲೂ ಕಾದಂಬರಿ ಓದುಗನ ಮೇಲೆ ದಟ್ಟವಾದ ಪರಿಣಾಮವನ್ನು ಉಂಟು ಮಾಡುವುದಿಲ್ಲ.

ಕೆ.ಟಿ. ಗಟ್ಟಿಯವರ "ಯುದ್ಧ" ತನ್ನ ಶೀರ್ಷಿಕೆಯಿಂದ ಗಮನ ಸೆಳೆಯುವದಾದರೂ ಒಮ್ಮೆ ಕಾದಂಬರಿಯನ್ನು ಓದಲು ಪ್ರಾರಂಭಿಸುತ್ತಿದ್ದಂತೆ ಇದೂ ಹಳೆಯ ಸರಕು ಎನಿಸಿಬಿಡುತ್ತದೆ. ತನ್ನನ್ನು ಕಾಡುವ ಪಾಪ ಪ್ರಜ್ಞೆಯಿಂದ ಬಿಡುಗಡೆ ಹೊಂದಬಯಸುವ ವ್ಯಕ್ತಿಯೊಬ್ಬನ ಬದುಕಿನ ವೈವಿಧ್ಯಮಯ ಪ್ರಸಂಗಗಳನ್ನು ಬಿಡಿಸುವುದು ಇಲ್ಲಿ ಲೇಖಕರ ಉದ್ದೇಶವಾಗಿದೆ. ಭದ್ರವಾದ ವಾಸ್ತವಿಕತೆಯ ನೆಲೆಗಟ್ಟಿಲ್ಲದ ಇಂಥ ಹಲವು ಪ್ರಸಂಗಗಳು ಕಾದಂಬರಿಗೆ ಶೋಭೆ ತರುವ ಹಾಗೆ ಇಲ್ಲ. ಕೃತಕ ಸನ್ನಿವೇಶಗಳು,ಹುಸಿ ಬೌದ್ಧಿಕತೆ ಮತ್ತು ಜನಪ್ರಿಯ ಧಾಟಿಯ ನಿರೂಪಣೆಗಳಿಂದಾಗಿ "ಯುದ್ಧ" ಕಳೆಕಟ್ಟುವುದಿಲ್ಲ.

ಕಾದಂಬರಿ ರಚನೆಯಲ್ಲಿ ಸಾಕಷ್ಟು ಪಳಗಿದ ಅನುಭವೀ ಬರಹಗಾರರ ಕೃತಿಗಳೇ ಹೀಗೆಂದ ಮೇಲೆ ಇನ್ನುಳಿದಂಥ ಸಗಟು ಸೃಷ್ಟಿಯ ಬಗ್ಗೆ ವಿಶೇಷವಾಗಿ ಹೇಳಬಹುದಾದದ್ದು ಏನೂ ಇಲ್ಲ. ೯೨ರ ಕಾದಂಬರಿ ಪಟ್ಟಿಯಲ್ಲಿ ಡಾ.ಹೆಚ್. ಗಿರಿಜಮ್ಮರವರ "ಸ್ಪಂದನ" "ಗಾಜಿನ ಮನೆ" ಮಲ್ಲಿಕಾರವರ "ಪದ್ಮಾಲಯ" ವಿ.ಆರ್. ಜನಾದ್ರಿಯವರ 'ನನ್ನಿಷ್ಟಪಡದವರು' ಹೆಚ್. ಶಿವರಾಮರವರ 'ಕರ್ಮಕಾಂಡ' ಮುಂತಾದ ರಚನೆಗಳೂ ಸೇರಿವೆ ಎಂದಷ್ಟೇ ದಾಖಲಿಸಬಹುದು.

●

* * *

ವಿಮರ್ಶೆ ೧

— *ಎಚ್.ಎಸ್. ರಾಘವೇಂದ್ರರಾವ್*

೧೯೯೨ರ ಸಾಹಿತ್ಯ ವಿಮರ್ಶೆಯ ಪ್ರಮುಖ ಒಲವುಗಳು ಹಾಗೂ ವಾಗ್ವಾದಗಳು ೧೯೯೧ರ ನೆಲೆಗಿಂತ ಭಿನ್ನವಾಗಿರಲಿಲ್ಲ. ಆದ್ದರಿಂದ ಬೇರೊಂದು ಸಂದರ್ಭದಲ್ಲಿ ೧೯೯೧ರ ವಿಮರ್ಶೆಗೆಂದು ನಾನು ನೀಡಿದ ತಾತ್ವಿಕ ಪೀಠಿಕೆಯು ಈ ಲೇಖನಕ್ಕೂ ಅನ್ವಯವಾಗುತ್ತದೆ. (ಕನ್ನಡ ಸಾಹಿತ್ಯ ಸಮೀಕ್ಷೆ : ೧೯೯೧ ; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು) ಸಂಗ್ರಹವಾಗಿ ಹೇಳುವುದಾದರೆ, ಬಂಡಾಯ ಸಾಹಿತ್ಯ ವಿಮರ್ಶೆಯ ತಾತ್ವಿಕ ನೆಲೆಗಟ್ಟಿನ ರೂಪಣ ಕ್ರಿಯೆ, ಸ್ತ್ರೀವಾದೀ ವಿಮರ್ಶೆಯ ಮೊದಲ ಹೆಜ್ಜೆಗಳು, ಜಾನಪದ ಸಾಹಿತ್ಯದ ನೆಲೆಗಟ್ಟಿನಿಂದ ಸಾಹಿತ್ಯವನ್ನು ಪರಿಶೀಲಿಸುವ ಪ್ರಯತ್ನ ಹಾಗೂ ಕೆಲವು ಮುಖ್ಯ ನವ್ಯ ವಿಮರ್ಶಕರ ಪರಿಷ್ಕರಣವಾದೀ ಧೋರಣೆಯನ್ನು ಈ ವರ್ಷದ ಪ್ರಮುಖ ಲಕ್ಷಣಗಳೆಂದು ಗುರುತಿಸಬಹುದು. ಹಾಗೆಯೇ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪುಸ್ತಕ ಪ್ರಕಟಣೆಯ ಕ್ಷೇತ್ರದಲ್ಲಿ ತನ್ನ ಒಳ್ಳೆಯ ಕೆಲಸವನ್ನು ಮುಂದುವರಿಸಿದೆ. ಕೆಲವು ತರುಣರು ಪುಸ್ತಕಗಳನ್ನು ಹೊರತರದಿದ್ದರೂ ಬಿಡಿಲೇಖನಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ಎಂದಿನಂತೆ ಸೃಜನಶೀಲ ಲೇಖಕರೂ ತಮ್ಮದೇ ಆದ ವಿಮರ್ಶಾತ್ಮಕ ಬರವಣಿಗೆಯಲ್ಲಿ ತೊಡಗಿಸಿಕೊಂಡು, ಸಂವಾದಗಳನ್ನು ಸೃಷ್ಟಿಸಿದ್ದಾರೆ. ಹೊಸ ಪ್ರಮುಖ ವಾಗ್ವಾದಗಳು ಯಾವುವೂ ಈ ವರ್ಷ ಮೈದೋರಿಲ್ಲ. ಮಾಸ್ತಿ, ಎಕ್ಕುಂಡಿ, ಗೋಕಾಕ್ ಮುಂತಾದ ಲೇಖಕರು ಸಾಹಿತ್ಯೇತರ ಕಾರಣಗಳಿಗಾಗಿ ಈ ವರ್ಷ ಸಾಕಷ್ಟು ವಿಮರ್ಶೆಯನ್ನು ಪಡೆದುಕೊಂಡಿದ್ದಾರೆ. ವಿಮರ್ಶೆಯ ತಾತ್ವಿಕತೆ ಅಥವಾ ಕಾವ್ಯಮೀಮಾಂಸೆಗೆ ವಿಶಿಷ್ಟ ಕಾಣಿಕೆ ಕೊಡುವ ಯಾವುದೇ ಕೃತಿ ಈ ವರ್ಷ ಪ್ರಕಟವಾಗಿಲ್ಲ.

ಜಿ.ಎಸ್. ಆಮೂರ. ಗಿರಡ್ಡಿ ಗೊವಿಂದರಾಜ, ಬಿ. ದಾಮೋದರರಾವ್, ಕೀರ್ತಿನಾಥ ಕುರ್ತಕೋಟಿ ಮುಂತಾದ ಪ್ರಸಿದ್ಧ 'ನವ್ಯ' ವಿಮರ್ಶಕರು, ತಮ್ಮ ಬರವಣಿಗೆಯಲ್ಲಿ ಪ್ರಯತ್ನಪೂರ್ವಕವಾಗಿ ಹೊಸ ನೆಲೆಗಳನ್ನು ಮೂಡಿಸಿಕೊಳ್ಳಲು

ಪ್ರಯತ್ನಿಸಿರುವುದು ಈ ವರ್ಷದ ಗಮನೀಯ ಸಂಗತಿ. ಸಾಹಿತ್ಯದಲ್ಲಿ ಸಾತತ್ಯ ಮತ್ತು ದೇಶೀಯತೆಗಳ ಪರಿಕಲ್ಪನೆಯಿರಬಹುದು. ತುಳು ಪಾಡ್ದನಗಳ ಅಧ್ಯಯನವಿರಬಹುದು ಈ ರೀತಿಯ ಪ್ರಯತ್ನಗಳಲ್ಲಿ ಕೃತಿನಿಷ್ಠ ವಿಮರ್ಶೆಯ 'ಸೀಮಿತ'ಗಳಿಂದ ಹೊರ ಬರುವ ಪ್ರಯತ್ನಗಳಿವೆ. ಸಮಸ್ಯೆಯೆಂದರೆ ತಮ್ಮಷ್ಟಕ್ಕೆ ತಾವೇ ಮೌಲಿಕವೆನಿಸುವ ಈ ರೀತಿಯ ನೂರಾರು ಲೇಖನಗಳನ್ನು ಸಮಗ್ರವಾಗಿ ಗಮನಿಸಿ, ಅವುಗಳ ನಡುವಿನ ಅನನ್ಯತೆ ಹಾಗೂ ವಾಗ್ವಾದಗಳನ್ನು ಗುರುತಿಸಿರುವ ಸಂಯೋಜಕ ಇಲ್ಲವೆನ್ನುವಷ್ಟು ಕಡಿಮೆ. ಸ್ನಾತಕೋತ್ತರ ಪಠ್ಯಕ್ರಮ ಇಂಥ ಪ್ರಯತ್ನಗಳು ಪ್ರಯತ್ನಗಳಲ್ಲಿ ತೊಡಗುವುದಿಲ್ಲ. ಹೀಗಾಗಿ ವಿಮರ್ಶೆಯ ಶಿಲ್ಪಗಳ ಬದಲು ಗುಡ್ಡೆಗಳು ಕಾಣಿಸಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ೧೯೯೨ರ ಪ್ರಮುಖ ವಿಮರ್ಶಾ ಕೃತಿಗಳನ್ನು ಬಿಡಿಬಿಡಿಯಾಗಿ ಅಥವಾ ಒಟ್ಟಂದದಲ್ಲಿ ಇನ್ನು ಮುಂದೆ ಪರಿಶೀಲಿಸಲಾಗಿದೆ.

ಬಯಲು ಮತ್ತು ಆಲಯ : *ಶ್ರೀ ಕೀರ್ತಿನಾಥ ಕುರ್ತಕೋಟಿ*

ಇತಿಹಾಸ ಮತ್ತು ಸಮಕಾಲೀನತೆಗಳೆಂಬ ಜೋಡಿ ಆಯಾಮಗಳನ್ನು ಪಡೆದುಕೊಂಡ ಸಂಸ್ಕೃತಿಕೇಂದ್ರಿತ ಚಿಂತನೆಯನ್ನು ನಡೆಸುತ್ತಲೇ, ಸಾಹಿತ್ಯಕೃತಿ ಮತ್ತು ವಿಧಾನಗಳನ್ನು ಕುರಿತ ಅನನ್ಯವಾದ ಒಳನೋಟಗಳನ್ನು ನೀಡುವುದು ಕೀರ್ತಿನಾಥ ಕುರ್ತಕೋಟಿಯವರ ಬರವಣಿಗೆಯ ಪ್ರಮುಖ ಲಕ್ಷಣ. ಈ ಎರಡು ನೆಲೆಗಳ ಅನ್ಯೋನ್ಯ ಹಾಗೂ ಪರಸ್ಪರ ಪುಷ್ಟಿ ಪಡೆದ ಸಂಬಂಧವು ಅವರ ಬರವಣಿಗೆಯನ್ನು ಶ್ರೀಮಂತವಾಗಿಸುತ್ತದೆ. ಅಷ್ಟೇ ಅಲ್ಲದೆ ಸಾಹಿತ್ಯ ತತ್ವಗಳ ರೂಪಣ ಮತ್ತು ಅನ್ವಯಿಕ ವಿಮರ್ಶೆಗಳ ನಡುವೆ ಯಾವುದೇ ಖಚಿತವಾದ ಸೀಮಾರೇಖೆಗಳನ್ನು ಇಟ್ಟುಕೊಳ್ಳದಿರುವುದರಿಂದ ಅವರು ನೀಡುವ ಮಹತ್ವದ ಕೊಡುಗೆಗಳು ಗಮನಕ್ಕೆ ಬರದೆ ಉಳಿಯುತ್ತಿವೆ.

ಸುಮಾರು ೧೨೫ ಪುಟಗಳಲ್ಲಿ, ನವೋದಯ ಮಾರ್ಗದ ಹಿರಿಯರಾದ ಮಾಸ್ತಿ, ಬಿ.ಎಂ.ಶ್ರೀ., ಪು.ತಿ.ನ., ವಿ.ಸೀ, ಜಡಭರತ ಮತ್ತು ಕುವೆಂಪುರವರ ಸ್ಥೂಲ ಹಿನ್ನೆಲೆಯಲ್ಲಿ ರಚಿತವಾಗಿರುವ ಐದು ಸಾಹಿತ್ಯಕ ಪ್ರಬಂಧಗಳ ಸಂಕಲನವಾದ 'ಬಯಲು ಮತ್ತು ಆಲಯ' ಈ ಸೀಮಿತ ಉದ್ದೇಶವನ್ನು ಮೀರಿ ಹತ್ತು ಹಲವು ಕಡೆ ಬೆಳಕು ಚೆಲ್ಲುತ್ತದೆ. ನಿಜವಾದ ಸಾಹಿತ್ಯ ಚರಿತ್ರೆಯ ರಚನೆಗೆ ಅಗತ್ಯವಾದ ತಾತ್ವಿಕತೆಯನ್ನು ಕಟ್ಟಿಕೊಡುವುದು ಹಾಗೂ ಬಿಡಿ ಬಿಡಿ ಲೇಖಕರ ಪರಿಶೀಲನೆಗೆ ಅಗತ್ಯವಾದ, ಸನ್ನಿವೇಶಾತ್ಮಕವಾದ ಪರಿಪ್ರೇಕ್ಷ್ಯವನ್ನು ರೂಪಿಸುವುದು ಎಂಬ ಎರಡು ಕೆಲಸಗಳು ಇಲ್ಲಿ ಸಮರ್ಥವಾಗಿ ನಡೆಯುತ್ತವೆ.

ಲೇಖಕರೇ ಹೇಳುವಂತೆ, ಅವರ ಅಧ್ಯಯನದ ಗುರಿಯು "ಸಾಹಿತ್ಯದ ವಿಮರ್ಶೆಯಾಗಲೀ, ಮೌಲ್ಯಮಾಪನವಾಗಲೀ" ಅಲ್ಲದಿರುವುದರಿಂದ, ನಮ್ಮ ಗಮನವನ್ನು ಅಂಥ ವಿಮರ್ಶೆಯ ವಿಮರ್ಶೆಯಿಂದ ಆಚೆಗೆ ಹರಿಸುವುದು ಅನಿವಾರ್ಯ. ಬಿ.ಎಂ.ಶ್ರೀ, ಮಾಸ್ತಿ, ಪು.ತಿ.ನ, ವಿ.ಸೀ. ಯವರ ಬರವಣಿಗೆಯ ಬಗ್ಗೆ ಇಲ್ಲಿ ಕೆಲವು

ಮಹತ್ವಪೂರ್ಣವಾದ, ಸವಿಮರ್ಶಕವಾದ ಒಳನೋಟಗಳನ್ನು ನೀಡಲಾಗಿದೆಯೆಂಬ ಸಂಗತಿಯನ್ನು ಒಪ್ಪಿಕೊಂಡು, ನಾವು ಬೇರೆ ದಿಕ್ಕಿಗೆ ಹೊರಳಬೇಕಾಗಿದೆ.

ಇಲ್ಲಿನ ಲೇಖನಗಳಲ್ಲಿ ಮತ್ತೆ ಮತ್ತೆ ಧ್ವನಿತವಾಗುವ ಒಂದು ಸಂಗತಿಯೆಂದರೆ: ಎರಡು ಸಂಸ್ಕೃತಿಗಳ ನಡುವಿನ ಮುಖಾಮುಖಿ ಮತ್ತು ಕರ್ಷಣಗಳ ಪರಿಣಾಮವಾಗಿ ಸೃಜನಶೀಲ ಕಲಾವಿದರು ಅನುಭವಿಸುವ ಬಿಕ್ಕಟ್ಟುಗಳು ಮತ್ತು ಕಂಡುಕೊಳ್ಳುವ ಹೊರದಾರಿಗಳು. ಒಂದು ಇನ್ನೊಂದನ್ನು ನೋಡುವ, ತಿಳಿಯುವ, ಬೆಲೆಕಟ್ಟುವ ಪ್ರತಿಕ್ರಿಯೆಯಲ್ಲಿಯೇ, ಅವೆರಡೂ ಬೇರೆ ರೂಪ ತಳೆಯುವ ಸೋಜಿಗ ಕುರ್ತಕೋಟಿಯವರನ್ನು ಕಾಡಿದೆ. ಭಾರತೀಯ ಸಂದರ್ಭಕ್ಕೆ ವಿಶಿಷ್ಟವಾದ ಆತ್ಮವಿಶ್ವಾಸ ಹಾಗೂ ಕೀಳರಿಮೆಗಳ ಘರ್ಷಣೆಯ ಫಲವಾಗಿಯೂ ಸಾಹಿತ್ಯ ಕೃತಿಯ ಸತ್ವವು ರೂಪಿತವಾಗಿರುವ ಬಗೆ ಅವರಿಗೆ ಗೊತ್ತಿದೆ. ಮಾಸ್ತಿಯವರನ್ನು ಹೊರತುಪಡಿಸಿದರೆ ತಾವು ಇಲ್ಲಿ ಪರಿಶೀಲಿಸುತ್ತಿರುವ ಸಾಹಿತಿಗಳು ನವೋದಯದ ಸಂದರ್ಭದ ಶ್ರೇಷ್ಠ ಬರೆಹಗಾರರಲ್ಲವೆಂಬುದು ಕುರ್ತಕೋಟಿಯವರಿಗೂ ಗೊತ್ತು. ಆದ್ದರಿಂದಲೇ ನವೋದಯದ ಸಾಹಿತ್ಯದ ಮಹತ್ವದ ಪರವಾದ ವಾದವೊಂದನ್ನು ಈ ಪುಸ್ತಕದ ಪರಿಮಿತಿಗಳಲ್ಲಿ ಮಂಡಿಸಲು ಅವರು ಹೊರಡುವುದಿಲ್ಲ

ಈ ಸಾಂಸ್ಕೃತಿಕ ಮುಖಾಮುಖಿಯ ಸೂಕ್ಷ್ಮಗಳನ್ನು ಗುರುತಿಸಲು ಕುರ್ತಕೋಟಿಯವರು ಭಾಷಾಂತರ, ಪುನರ್ಲೇಖನ ಮತ್ತು ಕಥಾಂತರಗಳೆಂಬ ಮೂರು ಪ್ರಕ್ರಿಯೆಗಳನ್ನು ಆರಿಸಿಕೊಂಡು ಅವುಗಳಿಗೆ ಹೆಚ್ಚು ವ್ಯಾಪಕವಾದ ಅರ್ಥವನ್ನು ನೀಡುತ್ತಾರೆ. ಏಕೆಂದರೆ ಇಂಗ್ಲಿಷ್ ಅಥವಾ ಸಂಸ್ಕೃತದಿಂದ ಬರುತ್ತಿರುವ ಕೃತಿಗಳು ಮಾತ್ರವಲ್ಲದೆ, ಆಧುನಿಕ ಸಂದರ್ಭದಲ್ಲಿ ಪುನಾರಚಿತವಾಗುತ್ತಿರುವ ಪ್ರಾಚೀನ ಕನ್ನಡ ಕಾವ್ಯಗಳೂ ಈ ಪ್ರಕ್ರಿಯೆಗಳ ವ್ಯಾಪ್ತಿಯಲ್ಲಿ ಸೇರುತ್ತವೆ. ಅಷ್ಟೇ ಅಲ್ಲ, ಕಾವ್ಯ, ರುದ್ರನಾಟಕ, ಭಾವಗೀತೆ, ಸಣ್ಣಕಥೆಗಳಲ್ಲಿ ಒಂದೇ ಬಗೆಯ ಅನುಭವ ದ್ರವ್ಯವು ಪಡೆಯುವ ಮರು ಹುಟ್ಟುಗಳೂ ಅವರಿಂದ ಪರಿಶೀಲಿಸುತವಾಗುವೆ. ಇಂಥ ಕಡೆ ಭಾಷಾಂತರವನ್ನು ಅದರ ಯಾಂತ್ರಿಕವಾದ ನೆಲೆಯಿಂದ ಮೇಲೆತ್ತಿ, ಸಾಂಸ್ಕೃತಿಕವಾದ ನೆಲೆಗಟ್ಟಿನಲ್ಲಿ ಪರಿಶೀಲಿಸಿರುವುದು ಈ ಸಂಗ್ರಹದ ವಿಶಿಷ್ಟತೆ. ಉದ್ದಕ್ಕೂ ವಸಾಹತುಶಾಹಿಯ ಸಂದರ್ಭದಲ್ಲಿ ಕುರ್ತಕೋಟಿಯವರು ಬಳಸುವುದು ಸಾಂಸ್ಕೃತಿಕ ಪರಿಭಾಷೆಯನ್ನೇ ವಿನಾ, ರಾಜಕೀಯ -ಸಾಮಾಜಿಕ ಪರಿಭಾಷೆಯನ್ನು ಅಲ್ಲ.

ಎಲ್ಲ ಲೇಖನಗಳ ಸಮಗ್ರ ಪರಿಶೀಲನೆಯಿಂದ ಮೂಡಿ ಬರುವ ಸತ್ಯವೆಂದರೆ ಕನ್ನಡ ಕಾವ್ಯ ಪರಂಪರೆಯ ಸತ್ವದಲ್ಲಿ ಕುರ್ತಕೋಟಿಯವರಿಗಿರುವ ಸದೃಢವಾದ ವಿಶ್ವಾಸ. ರನ್ನ, ಪಂಪರ ಕಾವ್ಯಬಂಧದಿಂದ ಹಿಡಿದು ಲಕ್ಷ್ಮೀಶನ ಉಪಮೆ, ಮುದ್ದಣನ 'ಗದ್ಯಕಾವ್ಯ' ಗಳವರೆಗೆ ಈ ನಂಬಿಕೆಯ ಹರಹು ಇದೆ. ಆಧುನಿಕ ಸಂದರ್ಭದಲ್ಲೂ ಅವರು ಇಷ್ಟಪಡುವುದು ಈ ಪರಂಪರೆಯೊಂದಿಗೆ ಸಾತತ್ಯದ ನೆಲೆಗಳನ್ನು ಉಳಿಸಿಕೊಂಡು ಬಂದಿರುವ ಕೃತಿಗಳನ್ನೇ ಹೊರತು ಅದರಿಂದ ಸಿಡಿದು ನಿಲ್ಲುವ ಬರವಣಿಗೆಯನ್ನಲ್ಲ. 'ಬಯಲು ಆಲಯ' ದಲ್ಲಿ ಪರಿಶೀಲಿತರಾಗಿರುವ ಲೇಖಕರಿಗಿಂತ

ಕನಿಷ್ಠ ಮೂವತ್ತು ವರ್ಷ ಕಿರಿಯರಾದ ಕುರ್ತಕೋಟಿಯವರಿಗೆ, ಅವರೆಲ್ಲರಿಗಿಂತ ಹೆಚ್ಚು ವ್ಯಾಪಕವಾದ ಸಂಪ್ರದಾಯದ ತಿಳುವಳಿಕೆ ಮತ್ತು ಶ್ರದ್ಧೆಗಳಿವೆ. ಆಧುನಿಕತೆಯ ಅಗತ್ಯ ಮತ್ತು ಮಾರ್ಗಗಳನ್ನು ಅವರು ಬಹಳ ಚೆನ್ನಾಗಿ ಗುರುತಿಸುವರೆಂದು ಹೇಳಿದ ಮೇಲೆಯೂ ಈ ಮಾತು ನಿಜ. ಇದು ಸಾಹಿತ್ಯ ವಿಮರ್ಶಕನು ಸೃಜನಶೀಲ ಕೃತಿಗಳ ಪರಸ್ಪರ ಸಂಬಂಧದ ನೆಲೆಗಳನ್ನು ಗುರುತಿಸಿ, ಒಟ್ಟು ಪರಂಪರೆಯನ್ನು ಅದರ ಓರೆಕೋರೆಗಳೊಂದಿಗೆ ಕಟ್ಟಿಕೊಡುವ ಕೆಲಸ.

ಕುರ್ತಕೋಟಿಯವರ ಒಟ್ಟು ಬರಹದ ಹಾಗೆಯೇ 'ಬಯಲು - ಆಲಯ' ಕೂಡ ಒಂದು ವಿಶಿಷ್ಟ ರೀತಿಯ ಓದನ್ನು ಅಪೇಕ್ಷಿಸುತ್ತದೆ. ಅವರಿಗೆ ಪ್ರಿಯ ಕವಿಗಳಾದ ಬೇಂದ್ರೆ, ಕುಮಾರವ್ಯಾಸರಂತೆ, ಕುರ್ತಕೋಟಿವರದೂ ವಿಮರ್ಶೆಯಲ್ಲಿ ದೇಸಿಯ ರೀತಿ. ಓದುಗನು ಅವರ ಜೊತೆಯಲ್ಲಿ ವಿಹಾರಯಾತ್ರೆ ಹೊರಟವನಂತೆ ವ್ಯವಹರಿಸುತ್ತಾ, ಅವರು ತೋರಿಸುವ ಗಹನ ಸತ್ಯಗಳನ್ನು ದಾಖಲೆ ಮಾಡಿಕೊಳ್ಳುತ್ತಾ ಮುಂದುವರಿಯಬೇಕಾಗುತ್ತದೆ. ಆಮೇಲೆ ಅವೆಲ್ಲದರ ನಡುವಿನ ಸಂಬಂಧಗಳನ್ನು ಗುರುತಿಸಿ, 'ಆಲಯ' ವನ್ನು ಕಟ್ಟಿಕೊಳ್ಳುವ ಹೊಣೆಗಾರಿಕೆ ಓದುಗನದೇ ಆಗಿರುತ್ತದೆ. ಉದಾಹರಣೆಗೆ, ಬೇಂದ್ರೆಯವರ ಬಗ್ಗೆ ಕುರ್ತಕೋಟಿಯವರು ಏನು ಹೇಳಿದ್ದಾರೆ ಎಂಬುದನ್ನು ಹತ್ತು ಪುಟಗಳಲ್ಲಿ ಸಂಗ್ರಹಿಸಹೊರಟಾಗ ನನ್ನ ಮಾತಿನ ಸತ್ಯ ಮನದಟ್ಟಾಗುತ್ತದೆ. ಆ ದೃಷ್ಟಿಯಿಂದ ಅವರ ಕೃತಿಗಳು ವಿಮರ್ಶಕರಿಗೆ ಆಕರ ಗ್ರಂಥಗಳಿದ್ದ ಹಾಗೆ.

ಈ ಪುಸ್ತಕದ ತುಂಬಾ ಹರಡಿಕೊಂಡಿರುವ ಹಲವು ಒಳನೋಟಗಳು ಸೈದ್ಧಾಂತಿಕವಾದ ಹಾಗೆಯೇ ಅನ್ವಯಿಕವಾದ ಚರ್ಚೆಗಳನ್ನು ಹುಟ್ಟುಹಾಕುವ ಸಾಮರ್ಥ್ಯವನ್ನು ಪಡೆದಿವೆ. ಕೃತಿ ಮತ್ತು ಇತಿಹಾಸಗಳ ನಡುವಿನ ಪಾರಸ್ಪರಿಕ ಪ್ರಕ್ರಿಯೆಗಳು, ಆಸ್ತಿಕತೆ ಮತ್ತು ಧರ್ಮಸೂಕ್ಷ್ಮಗಳ ಸಾರ್ವಜನಿಕ ಅಭಿವ್ಯಕ್ತಿ, ವಿಸ್ಮೃತಿ-ಸ್ಮೃತಿಗಳ ಸಂಬಂಧ, ಸೌಂದರ್ಯ-ಪಾವಿತ್ರ್ಯಗಳ ಪ್ರತ್ಯೇಕತೆ ಮುಂತಾದ ಕೆಲವನ್ನು ಇಲ್ಲಿ ಹೆಸರಿಸಬಹುದು. ಹಾಗೆಯೇ ಚಂದ್ರಹಾಸನಿಗೆ ಸಂವಾದಿಯಾಗುವ ಕೋಗಿಲೆಯ ಪ್ರತಿಮೆ, ಮಾಸ್ತಿಯವರ 'ಸೋರಲೀ ಪ್ರಸಂಗ ', ವಿ. ಸೀ ಯವರ 'ಪಂಪಾಯಾತ್ರೆ' ಮುಂತಾದ ಪ್ರಾಯೋಗಿಕ ವಿಮರ್ಶೆಯ ನಿದರ್ಶನಗಳು ಸಿಗುತ್ತವೆ. 'ಜಡಭರತನ ಕನಸುಗಳು' ಕೃತಿಯನ್ನು ಕುರಿತ ಲೇಖನ ಮಾತ್ರ ಒಟ್ಟು ಪುಸ್ತಕದ ಚೌಕಟ್ಟಿನಿಂದ ಹೊರ ನಿಲ್ಲುತ್ತದೆ.

ಕೊನೆಯದಾಗಿ ಒಂದು ಒಡಕು ಮಾತಿನೊಂದಿಗೆ ಈ ಪರಿಶೀಲನೆಯನ್ನು ಮುಗಿಸಬಹುದು. ವಿ.ಸೀ. ಯವರ ಗದ್ಯ ಪ್ರಬಂಧಗಳ ಬಗ್ಗೆ ಬರೆಯುವಾಗ, ಕುರ್ತಕೋಟಿಯವರು ಈ ಮಾತುಗಳನ್ನು ಹೇಳುತ್ತಾರೆ. "ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಯೌವನದ ಸಮಕಾಲೀನತೆಯೇ ನಿಜವಾದ ಸಮಕಾಲೀನತೆಯೆಂದು ತೋರುತ್ತದೆ. ಕಾಲ ಸರಿದಂತೆಲ್ಲ, ಈ ಸಮಕಾಲೀನತೆ ಬದಲಾದಾಗ ಅದನ್ನು ಒಪ್ಪಿಕೊಳ್ಳಲು ಮನಸ್ಸು ಬರುವುದಿಲ್ಲ. '(ಪುಟ ೮೯-೯೦) ನಿಜವಾದ ಮಾತು. ಆದರೆ ಇದೇ ಮಾತನ್ನು ಸ್ವತಃ

ಕುರ್ತಕೋಟಿಯವರಿಗೆ ಅನ್ವಯಿಸಿದಾಗ, ಇಂದು ಹೊರಬರುತ್ತಿರುವ 'ಸಮಕಾಲೀನ'ಸೃಜನಶೀಲ ಬರವಣಿಗೆ ಹಾಗೂ ವಿಮರ್ಶೆಯ ಬಗೆಗಿನ ಅವರ ಮೌನವನ್ನು. ಅರ್ಥಮಾಡಿಕೊಳ್ಳಬಹುದೆಂದು ತೋರುತ್ತದೆ. ತನ್ನೆಲ್ಲ ಉತ್ತಮ ಅಂಶಗಳೊಂದಿಗೆ'ಬಯಲು-ಆಲಯ' ಕೂಡ ಈ ಮಾತಿಗೆ ಅಪವಾದವಲ್ಲ. ಹೀಗೆ ಸಮಕಾಲೀನವಾದುದರ ಬಗ್ಗೆ ನಿರ್ಲಕ್ಷ್ಯ ತೋರಿಸುವ ವಿಮರ್ಶೆಯನ್ನು, ಸಮಕಾಲೀನ ಪರಿಸರ ಕೂಡ ನಿರ್ಲಕ್ಷಿಸುತ್ತದೆ. ಇದರಿಂದ ಇಬ್ಬರಿಗೂ ನಷ್ಟವಾಗುತ್ತದೆ.

ವ್ಯವಸಾಯ : *ಜಿ.ಎಸ್. ಆಮೂರ*

ತಮ್ಮ ನಿವೃತ್ತಿಯ ನಂತರದ ದಿನಗಳನ್ನು ಕನ್ನಡ ಸಾಹಿತ್ಯ ವಿಮರ್ಶೆಯ ಕೆಲಸಕ್ಕೆ ಮೀಸಲಿಟ್ಟವರ ಹಾಗೆ, ಸತತವಾಗಿ ಬೆಲೆ ಬಾಳುವ ಕೆಲಸ ಮಾಡುತ್ತಾ ಬಂದಿರುವ ಜಿ.ಎಸ್. ಆಮೂರರ ವ್ಯವಸಾಯ, ಇಪ್ಪತ್ತಾರು ಲೇಖನಗಳ, ಇನ್ನೂರ ಅರುವತ್ತು ಪುಟಗಳ ಸಂಕಲನ. ನಿಯತಕಾಲಿಕ ಹಾಗೂ ವೃತ್ತಪತ್ರಿಕೆಗಳಲ್ಲಿ ಹೊರಬಂದಿರುವ ಪುಸ್ತಕ ವಿಮರ್ಶೆ, ಸೆಮಿನಾರ್ ಲೇಖನಗಳು ಹಾಗೂ ಮುನ್ನುಡಿಗಳು ಈ ಕೃತಿಯ ಪ್ರಧಾನ ಆಕರಗಳು. ಆಮೂರರು ಮೇಲೆ ಹೇಳಿದ ಯಾವುದೇ ಕೆಲಸವನ್ನು ಲಘುವಾಗಿ ತೆಗೆದುಕೊಳ್ಳದೆ, ಗಂಭೀರವಾಗಿಯೇ ಬರೆಯುವವರಾದ್ದರಿಂದ, ಇಲ್ಲಿ ಹಲವು ಒಳ-ನೋಟಗಳನ್ನು ಗುರುತಿಸಬಹುದು. ಸಾಮಯಿಕತೆ, ಸಮಕಾಲಿಕತೆಗಳು ಈ ಲೇಖನಗಳ ತಾಜಾತನ ಹಾಗೂ ಪರಿಮಿತಿಗಳನ್ನು ತೀರ್ಮಾನಿಸುತ್ತವೆ.

ಸಣ್ಣಕಥೆ, ಕವಿತೆ, ಕಾದಂಬರಿ ಹಾಗೂ ವಿಮರ್ಶಾ ಸಂಕಲನಗಳ ಬಗ್ಗೆ ಬರೆಯುವಾಗ ತಮ್ಮ ಗಮನವನ್ನು ಕೃತಿಯ ಮೇಲೆ ಕೇಂದ್ರೀಕರಿಸುತ್ತಲೇ, ಆಯಾ ಲೇಖಕರ ಸಮಗ್ರ ಸೃಷ್ಟಿ ಹಾಗೂ ಆಯಾ ಪ್ರಕಾರದ ತತ್ಕಾಲೀನ ಸಂದರ್ಭಗಳೆರಡನ್ನೂ ಗಮನದಲ್ಲಿಟ್ಟುಕೊಳ್ಳುವುದು ಆಮೂರರ ವಿಧಾನ. ಇದರ ಫಲವಾಗಿ ಸೈದ್ಧಾಂತಿಕವಾಗಿಯೂ ಮಹತ್ವಪೂರ್ಣವಾದುದನ್ನು ಹೇಳಲು ಅವರಿಗೆ ಸಾಧ್ಯವಾಗುತ್ತದೆ. 'ಅಜ್ಜನ ಹೆಗಲ ಸುಕ್ಕುಗಳು', 'ಬೆಳ್ಳಿ ಮೀನು' 'ಚಿದಂಬರ. ರಹಸ್ಯ','ಕಲ್ಲು ಕರಗುವ ಸಮಯ', 'ಶಕ್ತಿ ಶಾರದೆಯ ಮೇಳ' ಮುಂತಾದ ಕೃತಿಗಳ ವಿಮರ್ಶೆಯಲ್ಲಿ ಇದು ಸ್ಪಷ್ಟವಾಗುತ್ತದೆ. ಹಾಗೆಯೇ ವಿ.ಸೀ., ಶಿವರುದ್ರಪ್ಪ, ಕಣವಿ, ಗೋಕಾಕ್ ಮುಂತಾದವರ ಬಗ್ಗೆ ಬರೆಯುವಾಗ ಬರೆಹವು ವರ್ಣನಾತ್ಮಕವಾಗಿ ಬಿಡುವುದರಿಂದ, ಮುಖ್ಯ ಮಾತುಗಳನ್ನು ಹೇಳಿಯೂ ತುಲನಾತ್ಮಕ ಮೌಲ್ಯಮಾಪನದ ಸವಾಲುಗಳನ್ನು ತಪ್ಪಿಸಿಕೊಳ್ಳುವುದು ಅವರಿಗೆ ಸಾಧ್ಯವಾಗುತ್ತದೆ. ಗೌರೀಶ ಕಾಯ್ಕಿಣಿ, ವಿ.ಜಿ. ಭಟ್ಟ, ಹೇಮಂತ ಕುಲಕರ್ಣಿ, ದೊಡ್ಡರಂಗೇಗೌಡ ಮುಂತಾದ ಹಲವು ಲೇಖಕರ ಬಗ್ಗೆ ಬರೆಯುವಾಗ, ಕಟು ವಿಮರ್ಶನ ಪ್ರಜ್ಞೆಯು ಹಿನ್ನೆಲೆಗೆ ಸರಿದು, ಗುಣವಾಚಕಗಳ ದುಂದುಗಾರಿಕೆ ನಡೆಯ ತೊಡಗುತ್ತದೆ. ಯಾವುದರ ವಿಮರ್ಶೆ ಮಾಡಬೇಕೆಂಬ ಆಯ್ಕೆಯ ಸ್ವಾತಂತ್ರ್ಯವನ್ನು ಕಳೆದುಕೊಂಡ ವಿಮರ್ಶಕನು ಕೈಕಟ್ಟಿಕೊಳ್ಳಬೇಕಾಗಿ ಬರುವ ರೀತಿಗೆ ಇಂಥ ಕಡೆ ಸಾಕ್ಷಿಗಳು ದೊರಕುತ್ತವೆ.

ಆದರೆ ಪುಸ್ತಕ ವಿಮರ್ಶೆಯ ಪರಿಧಿಯಿಂದ ಆಚೆಗಿರುವ ಬೇರೆ ಲೇಖನಗಳು ಆಯಾ ಲೇಖಕರಿಗೆ ಸಂಬಂಧಿಸಿದ ಚರ್ಚೆಗೆ ಹೊಸ ಆಯಾಮಗಳನ್ನು ಜೋಡಿಸುವ ಕೆಲವು ಮುಖ್ಯ ಮಾತುಗಳನ್ನಾಡುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗುರುತಿಸಬಹುದು.

೧. "ಮಾಸ್ತಿಯವರ ಸಾಂಸ್ಕೃತಿಕ ಆಸ್ಥೆಗಳನ್ನು ಗುರುತಿಸುವುದರಲ್ಲಿ ಕಂಡುಬರುವ ತಿಳುವಳಿಕೆ ಆ ಆಸ್ಥೆಗಳ ಸ್ವರೂಪದ ಬಗ್ಗೆ ಕಂಡು ಬರುವುದಿಲ್ಲ. ಉದಾಹರಣೆಗೆ ಮಾಸ್ತಿಯವರು ಸಾಂಪ್ರದಾಯಿಕ ವೈದಿಕ ಸಂಸ್ಕೃತಿಯಲ್ಲಿ ವಿಶ್ವಾಸವಿಟ್ಟವರು ಎನ್ನುವ ಮಾತು. ಈ ಮಾತಿನಲ್ಲಿ ತಥ್ಯದ ಅಂಶವಿದೆ. ಆದರೆ ಮಾಸ್ತಿಯವರು ಇಷ್ಟು ಸಂಸ್ಕೃತಿಯ ಸಾಂಪ್ರದಾಯಿಕ ಮೌಲ್ಯಗಳಿಗೆ ಮಾತ್ರ ಬದ್ಧರಾಗಿರಲಿಲ್ಲ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಕಾಕನಕೋಟೆಯಂಥ ಕೃತಿಗಳಲ್ಲಿ ಅವರು ಬುಡಕಟ್ಟಿನ ಸಮಾಜಗಳ ಸಾಂಸ್ಕೃತಿಕ ಮೌಲ್ಯಗಳನ್ನು ಪುರಸ್ಕರಿಸುತ್ತಾರೆ. ತಾವು ನಂಬಿದ ಮೌಲ್ಯಗಳನ್ನು ಶಿಷ್ಟ, ಪರಿಶಿಷ್ಟ, ನಾಗರಿಕ, ಗ್ರಾಮ್ಯ ಮತ್ತು ಪರಕೀಯ ಸಾಂಸ್ಕೃತಿಕ ಸಂದರ್ಭಗಳಲ್ಲಿಟ್ಟು ಪರೀಕ್ಷೆಗೆ ಒಳಪಡಿಸುವುದರ ಮೂಲಕ ಅವುಗಳಲ್ಲಿ ಚೈತನ್ಯ ತುಂಬುವುದು ಮಾಸ್ತಿಯವರ ವಿಧಾನವಾಗಿದೆ" (ಪುಟ ೧೭೭)

೨. "ದೇವನೂರರ ಸಾಂಸ್ಕೃತಿಕ ಗ್ರಹಿಕೆ ತಾರ್ಕಿಕ ಪಾತಳಿಯ ಮೇಲೆ ಮಾತ್ರ ಉಳಿಯದೆ, ಸಮುದಾಯದ ನಂಬಿಕೆಗಳ ಮಟ್ಟದಲ್ಲಿಯೂ ಕೆಲಸ ಮಾಡುವುದರಿಂದ, ಭೌತಿಕ ವಿವರಗಳಂತೆ ಅಧಿಭೌತಿಕ ಅಂಶಗಳೂ ಅವರಿಗೆ ಪ್ರಸ್ತುತವೆನಿಸುವುದರಿಂದ ಅರಿವಿನ ಮಟ್ಟದಲ್ಲೂ ಅವರಿಗೆ ಸಮಗ್ರತೆ ಬರುತ್ತದೆ. ಕನ್ನಡ ಕಾದಂಬರಿಯ ಪ್ರಾರಂಭದಿಂದಲೂ ಪಾಶ್ಚಾತ್ಯ ಸಾಹಿತ್ಯ ರೂಪಗಳಿಗೂ ದೇಶೀಯ ಅನುಭವಕ್ಕೂ ನಡುವೆ ಹುಟ್ಟಿದ ಬಿಕ್ಕಟ್ಟನ್ನು ನಿವಾರಿಸುವಲ್ಲಿ ಕುಸುಮಬಾಲೆ ಗಮನಾರ್ಹ ಯಶಸ್ಸನ್ನು ದೊರಕಿಸುವುದರಿಂದ ಈ ದೃಷ್ಟಿಯಿಂದಲೂ ಅದು ಕನ್ನಡ ಕಾದಂಬರಿಯ ಬೆಳವಣಿಗೆ ಮೇಲೆ ಪ್ರಭಾವ ಬೀರಬಲ್ಲದು" (ಪುಟ ೧೩೭)

೩. "ಅನಂತಮೂರ್ತಿಯವರಿಗೆ ದ್ವಂದ್ವಾತೀತ ಅವಸ್ಥೆಯನ್ನು ತಲುಪುವುದಾಗಲೀ, ದುರಂತದ ಅನುಭವದಲ್ಲಿ ದ್ವಂದ್ವವನ್ನು ಭೇದಿಸುವುದಾಗಲೀ ಮಹತ್ವದ್ದೆನಿಸುವುದಿಲ್ಲ. ವಸ್ತುನಿಷ್ಠವಾಗಿ ದ್ವಂದ್ವವನ್ನು ಗುರುತಿಸುವುದರಲ್ಲಿ ಒಪ್ಪಿಕೊಳ್ಳುವುದರಲ್ಲಿ ಅವರ ತಾತ್ವಿಕತೆ ದುಡಿಯುತ್ತದೆ. ಕಾವ್ಯದಲ್ಲಿ ಮಾತ್ರ ಇಂಥ ವಸ್ತುನಿಷ್ಠತೆ ಸಾಧ್ಯ ಎಂದು ಅವರು ನಂಬಿರುವಂತೆ ತೋರುತ್ತದೆ. ಏಕೆಂದರೆ ಅವರ ಕಥೆ ಕಾದಂಬರಿಗಳಲ್ಲಿ ಇಂಥ ವಸ್ತುನಿಷ್ಠತೆಯನ್ನು ಅವರು ಸಾಧಿಸುವುದಿಲ್ಲ. ಸಂಸ್ಕಾರದಂಥ ಕೃತಿಗಳಲ್ಲಿ ಉದ್ದೇಶಪೂರ್ವಕವಾಗಿಯೇ ಕೆಲವು ಮೌಲ್ಯಗಳನ್ನು ಪ್ರತಿಷ್ಠಾಪಿಸುವ ಪ್ರಯತ್ನವಿದೆ." (ಪುಟ ೯೯)

ಇಂಥ ಬರವಣಿಗೆಯನ್ನು ಓದಿದಾಗ, ಆಮೂರರು ಪತ್ರಿಕಾ ವಿಮರ್ಶೆ,

ಅನುವಾದಗಳಂಥ ಇತರರು ಮಾಡಬಹುದಾದ ಕೆಲಸಗಳನ್ನು ಬಿಟ್ಟು, ತಾವೇ ಮಾಡಬಹುದಾದ ಸಾರ್ಥಕ ಶೋಧನೆಗಳಲ್ಲಿ ತೊಡಗಬಾರದೇ ಎನ್ನಿಸುತ್ತದೆ. ಟಿ.ಎಸ್. ಎಲಿಯಟ್, ಮರಾಠೀ ಕಾದಂಬರಿಕಾರರು, ಆಂಗ್ಲ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ ಮುಂತಾದ ಉಪಯುಕ್ತ ಲೇಖನಗಳನ್ನು ಗಮನಿಸಿದರೂ ಈ ಮಾತು ನಿಲ್ಲುತ್ತದೆ.

ಕೃತಿಕೇಂದ್ರಿತ ಅಥವಾ ಸಮಗ್ರ ಕೃತಿ ಕೇಂದ್ರಿತ ವಿಮರ್ಶೆಯ ಮಾದರಿಯನ್ನು ಸಾಕಷ್ಟು ನಿಷ್ಠುರವಾಗಿ ಅನುಸರಿಸುವ ಆಮೂರರು, ಕೃತಿ ವಿಮರ್ಶೆಗೆಂದು ನಿರ್ದಿಷ್ಟ ಪರಿಕರ ಅಥವಾ ವಿಧಾನಗಳನ್ನು ಹೊಂದಿರುವ ಬದಲು, ತಮ್ಮದೇ ಆದ ಮನೋಧರ್ಮವನ್ನು ಹೊಂದಿರುವ ಬದಲು, ವಿಮರ್ಶಿತ ಲೇಖಕನಿಗೆ ತಮ್ಮನ್ನು ತೆತ್ತುಕೊಂಡು ಬರೆಯುತ್ತಾರೆ. ಅವರ ದೋಷಗಳನ್ನು ತೋರಿಸಿಕೊಡುವಾಗಲೂ ಅಷ್ಟೆ. ಹೀಗೆ ಮಾಡುವುದರಿಂದ, ಕೃತಿ ವಿಶ್ಲೇಷಣೆಗೆ ನೆರವಾಗುತ್ತದೆ. ಆದರೆ ವಿಮರ್ಶಕನ ಅನನ್ಯತೆಯನ್ನು ಗುರುತಿಸುವುದು ಕಷ್ಟವಾಗುತ್ತದೆ.

ಹೀಗೆ ತನ್ನ ಉದ್ದೇಶದ ಇತಿಮಿತಿಗಳೊಳಗೆ 'ವ್ಯವಸಾಯ' ಈ ವರ್ಷದ ಪ್ರಮುಖ ವಿಮರ್ಶಾ ಕೃತಿಗಳಲ್ಲಿ ಒಂದಾಗಿದೆ.

ಆಯಾಮಗಳು : *ಬಿ. ದಾಮೋದರ ರಾವ್*

ಸುಮಾರು ಮೂವತ್ತು ವರ್ಷಗಳ ಅವಧಿಯಲ್ಲಿ ಬಿ. ದಾಮೋದರ ರಾವ್ ಅವರು ಬರೆದಿರುವ ಹತ್ತೊಂಬತ್ತು ಲೇಖನಗಳ ಸಂಕಲನವಾದ 'ಆಯಾಮಗಳು' ಅವರ ಓದುಗರು ಹಲವು ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಕೃತಿ. ಇಲ್ಲಿನ ಬರಹಗಳಲ್ಲಿ ಕನ್ನಡ ಸಾಹಿತ್ಯವನ್ನು ನೇರವಾಗಿ ಕುರಿಯುವ ಒಂಬತ್ತು ಲೇಖನಗಳಿದ್ದರೆ, ಉಳಿದವು ಕನ್ನಡದ ಸಂದರ್ಭಕ್ಕೆ ಮಹತ್ವಪೂರ್ಣವಾದರೂ, ಪ್ರತ್ಯಕ್ಷವಾಗಿ ಇತರ ಬರಹಗಾರರನ್ನು ಕುರಿತವು. ಅರ್ಧಕ್ಕಿಂತ ಹೆಚ್ಚು ಲೇಖನಗಳು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿತವಾಗಿವೆ.

ಕನ್ನಡದಲ್ಲಿ ಬರೆಯುತ್ತಿರುವ ಇಂಗ್ಲಿಷ್ ಅಧ್ಯಾಪಕರ ಉಜ್ವಲ ಪರಂಪರೆಯು ನಮಗೆ ಸುಪರಿಚಿತ. ದಾಮೋದರರಾಯರ ವಿಶಿಷ್ಟತೆಯಿರುವುದು, ಪಾಶ್ಚಾತ್ಯ ವಿಮರ್ಶೆಯ ಯಾವುದೋ ಒಂದು ಹಂತದ ಒಲವುಗಳಿಗೆ, ಪಾಂಡಿತ್ಯಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ಅರಿಸ್ಟಾಟಲ್‌ನಿಂದ, ಅಚುಬೆ ಅರವಿಂದರ ವರೆಗೆ, ಕ್ಲಾಸಿಕಲ್ ವಿಮರ್ಶೆಯಿಂದ ವಿರಚನಾವಾದದ ವರೆಗೆ, ಪಾಶ್ಚಾತ್ಯ ವಿಮರ್ಶೆಯ ಸಮಗ್ರ ಅಧ್ಯಯನದಿಂದ ದತ್ತವಾದ ಪರಿಪ್ರೇಕ್ಷ್ಯವೊಂದನ್ನು ಸದಾ ಗಮನದಲ್ಲಿಟ್ಟುಕೊಂಡಿರುವುದರಲ್ಲಿ. ಅಷ್ಟೇ ಆಗಿದ್ದರೆ ಅವರು ಕೇವಲ ಅಕಡೆಮಿಕ್ ವಿಮರ್ಶಕರಾಗುತ್ತಿದ್ದರು. ಆದರೆ ಅವರು ತಮ್ಮ ಈ ಹಿನ್ನೆಲೆಯೊಂದಿಗೆ ತುಳು ಪಾಡ್ದನಗಳ ಜಗತ್ತನ್ನು, ಬಿ.ಎಂ. ಶ್ರೀ., ಬಿ.ಜಿ.ಎಲ್. ಸ್ವಾಮಿ, ಆನಂದಕುಮಾರ ಸ್ವಾಮಿಯವರ ಜಗತ್ತನ್ನು ಪ್ರವೇಶಿಸುವುದರಿಂದ ಪ್ರೌಢವಾದರೂ ಪಕ್ಷಪಾತವಿಲ್ಲದ ಬರೆವಣಿಗೆಯನ್ನು ಕೊಡುವುದು ಅವರಿಗೆ ಸಾಧ್ಯವಾಗಿದೆ.

ಈ ಪುಸ್ತಕದ ಬರಹಗಳಲ್ಲಿ ಎರಡು ಹಂತಗಳನ್ನು ಗುರುತಿಸಬಹುದೆಂದು ತೋರುತ್ತದೆ. ಮೊದಲನೆಯದು ನವ್ಯ ಸಾಹಿತ್ಯದ ಉತ್ಕರ್ಷದ ದಿನಗಳಲ್ಲಿ ಅದರ ಸಹ-ಪ್ರವಾಸಿಗರಾಗಿ ಬರೆದ 'ಭೂಮಿಗೀತೆ', 'ಸರಸಮ್ಮನ ಸಮಾಧಿ' ,'ಅನುಭಾವ ಕಾವ್ಯ', 'ಸ್ವಾತಂತ್ರ್ಯೋತ್ತರ ಕನ್ನಡ ವಿಮರ್ಶೆ'ಮುಂತಾದ ಬರಹಗಳ ಹಂತ. ಈಗಲೂ ಅವರು ಆ ಸಂದರ್ಭದಲ್ಲಿ ರೂಪಿಸಿಕೊಂಡ ಮಾನದಂಡಗಳನ್ನು, ಧೋರಣೆಗಳನ್ನು ಸಂಪೂರ್ಣವಾಗಿ ಕೈಬಿಟ್ಟಿಲ್ಲ. ಗಂಗಾಧರಚಿತ್ತಾಲ, ಎಕ್ಕುಂಡಿ ಮುಂತಾದವರನ್ನು ಕುರಿತ ಲೇಖನಗಳಲ್ಲಿ ಇದು ಸ್ಪಷ್ಟವಾಗುತ್ತದೆ. ಎರಡನೆಯ ಹಂತದಲ್ಲಿ ಪ್ರಾಯಶಃ ಅವರ ಅಧ್ಯಾಪನದ ಅಂಗವಾಗಿ ಕಲಿತ ಆಫ್ರಿಕನ್ ಸಾಹಿತ್ಯ ಮತ್ತು ಇಂಡಿಯನ್ ಇಂಗ್ಲಿಷ್ ಸಾಹಿತ್ಯಗಳು, ಅವರ ಸಂಸ್ಕೃತಿ ಚಿಂತನೆಯ ನೆಲೆಗಳನ್ನು ವಿಸ್ತರಿಸಿವೆ. ಪರಿಣಾಮವಾಗಿ ಅವರು ತಮಗೆ ಸಹಜವಾದ ತುಳು ಸಂಸ್ಕೃತಿಯ ಕಡೆಗೆ, ಹಾಗೆಯೇ ವಸಾಹತುಶಾಹಿಯ ಪರಿಣಾಮವಾದ ಸಾಂಸ್ಕೃತಿಕ ಸನ್ನಿವೇಶದ ಕಡೆಗೆ ಚಲಿಸುತ್ತಾರೆ. ಆದರೆ ಎಲ್ಲ ಸಂದರ್ಭಗಳಲ್ಲೂ ಅವರದು ಪ್ರೌಢವಾದ, ವಿಚಾರ ನಿಬಿಡವಾದ ಶೈಲಿ.

ದಾಮೋದರರಾಯರದು ವಿಮರ್ಶೆಯನ್ನು ಆಕರ್ಷಕವಾಗಿಸಲು ಯಾವುದೇ ವಿಧವಾದ ಪ್ರಜ್ಞಾಪೂರ್ವಕ ತಂತ್ರಗಳನ್ನು ಬಳಸದ ಗಂಭೀರಶೈಲಿ. ಸೇಂದ್ರಿಯ ಜಗತ್ತಿನಿಂದ ಆಯ್ದು ತೆಗೆದ ಜಗಜಗಿಸುವ ರೂಪಕ, ಉಪಮೆಗಳನ್ನು ಅವರು ಬಳಸುವುದಿಲ್ಲ. ಹಾಗೆಯೇ ಇರುವ ಒಂದೋ ಎರಡೋ ಅಂಶವನ್ನು ಅಳ್ಳಕವಾಗಿ, ವಿವರಣಾತ್ಮಕವಾಗಿ ಹಿಂಜುತ್ತಾ ಹೋಗುವ ಧಾಟಿಯೂ ಅವರದಲ್ಲ. ಖಚಿತವಾದ ಶಿಲ್ಪದಲ್ಲಿ, ಶಾಸ್ತ್ರೀಯವಾದ ಪರಿಭಾಷೆಯಲ್ಲಿ, ಸಾಂದ್ರವಾಗಿ ಆದರೆ ನಿರಾಡಂಬರವಾಗಿ ಬರೆಯುವುದು ಅವರ ರೀತಿ. ಅದು ಆತುರದ ಓದಿಗೆ ಖಂಡಿತವಾಗಿಯೂ ದಕ್ಕುವುದಿಲ್ಲ.

ಪ್ರಸ್ತುತ ಸಂಕಲನವು ಲೇಖಕರ ಪ್ರತಿಭೆಯ ಸ್ಯಾಂಪಲ್‌ಗಳನ್ನು ಕೊಡುತ್ತದೆಯೇ ವಿನಾ ಪೂರ್ಣ ಪ್ರಮಾಣದ ಸಿದ್ಧಿಯನ್ನಲ್ಲ. ಬೇರೆ ಬೇರೆ ಕಾರಣಗಳಿಂದ ಎಂ.ಜಿ.ಕೆ., ರಾಜೀವ್ ತಾರಾನಾಥ್ ಅವರುಗಳ ಬರವಣಿಗೆಯ ಗಾತ್ರ ಸೀಮಿತವಾದ ಹಾಗೆ, ದಾಮೋದರರಾಯರು ಕೂಡ ಬರೆಯದೆ ಉಳಿದರು. ಆದ್ದರಿಂದಲೇ ಅರವತ್ತರ ಅಂಚಿನಲ್ಲಿ ಪ್ರಕಟವಾಗುತ್ತಿರುವ ಈ ಸಂಕಲನವು ಅವರು ಬರೆದಿರುವುದನ್ನೆಲ್ಲ ಸಂಗ್ರಹಿಸಿ, ಏಕಕಾಲದಲ್ಲಿ ಸಂತೋಷ ಮತ್ತು ಅತೃಪ್ತಿಗಳನ್ನು ಉಂಟು ಮಾಡುತ್ತದೆ.

ಕಳೆದ ಇಪ್ಪತ್ತು ವರ್ಷಗಳಲ್ಲಿ ನಡೆದಿರುವ ಮರು ಚಿಂತನೆಗಳು ಈ ಲೇಖನಗಳಲ್ಲಿ ಕೆಲವನ್ನು ಸ್ವಲ್ಪಮಟ್ಟಿಗೆ 'ಡೇಟೆಡ್' ಆಗಿಸುತ್ತವೆ. 'ಭೂಮಿಗೀತ' 'ವಚನ ಸಾಹಿತ್ಯ', 'ಗಂಗವ್ವ ಮತ್ತು ಗಂಗಾಮಾಯಿ' ಮುಂತಾದ ಲೇಖನಗಳು ಈ ಗುಂಪಿಗೆ ಸೇರಿದರೆ, 'ಸರಸಮ್ಮನ ಸಮಾಧಿ' ಮತ್ತು'ಅನುಭಾವ ಕಾವ್ಯ' ಗಳನ್ನು ಕುರಿತು ಹೆಚ್ಚಿನ ಚರ್ಚೆ ನಡೆದಿಲ್ಲದಿರುವುದರಿಂದ ಅಲ್ಲಿನ ವಿಚಾರಗಳು ಇನ್ನೂ ಮೌಲಿಕವಾಗಿವೆ. ಗೀತಾಂಜಲಿಯನ್ನು ಕುರಿತ ಮಾತುಗಳಂತೂ ಕನ್ನಡ ಅನುಭಾವಕಾವ್ಯದ ಚರ್ಚೆಗೆ ಇಂದಿಗೂ ಅಗತ್ಯವಾದ ತಳಹದಿಯನ್ನು ಹಾಕಿ ಕೊಡುವಷ್ಟು ಸಮರ್ಥವಾಗಿವೆ.

ಹಾಗೆಯೇ ಸು.ರಂ. ಎಕ್ಕುಂಡಿ ಮತ್ತು ಗಂಗಾಧರ ಚಿತ್ತಾಲರ ಕಾವ್ಯದ ಬಗ್ಗೆ ಮಹತ್ವದ ಭಿನ್ನಾಭಿಪ್ರಾಯಗಳನ್ನು ಮಂಡಿಸುತ್ತಾರೆ.

ಕನ್ನಡ ಕಾದಂಬರಿಗಳ ಮೊದಲ ಹಂತದ ಬಗ್ಗೆ ಬರೆಯುವಾಗ, ದಕ್ಷಿಣ ಕನ್ನಡದಲ್ಲಿ ರಚಿತವಾದ ಕಾದಂಬರಿಗಳ ಪ್ರಾದೇಶಿಕ ಗುಣಗಳಿಗೂ (ಬಹುಭಾಷಿಕತೆ, ಯಕ್ಷಗಾನದ ಪ್ರಭಾವ ಇತ್ಯಾದಿ) ಆಫ್ರಿಕನ್ ಕಾದಂಬರಿಗಳಲ್ಲಿ ಭೂತಾರಾಧನ ಮುಂತಾದವನ್ನು ಬಳಸಿಕೊಳ್ಳುವ ರೀತಿಗೂ ಅವರು ತಳುಕು ಹಾಕುವುದು ಕುತೂಹಲಕಾರಿಯಾಗಿದೆ. ಇದರ ಜೊತೆಗೆ ಇಂದಿನ ಲ್ಯಾಟಿನ್ ಅಮೆರಿಕನ್ ಕಾದಂಬರಿಗಳ 'ಮ್ಯಾಜಿಕ್‌ರಿಯಲಿಸಂ' ಅನ್ನು ಸೇರಿಸಿದರೆ ಕನ್ನಡ ಕಾದಂಬರಿಗಳ ಇನ್ನೊಂದು ಧಾರೆ ರೂಪಿತವಾಗಬಹುದು ಆದರೆ ಸ್ವತಃ ದಾಮೋದರರಾಯರು, 'ಮಾಡಿದ್ದುಣ್ಣೋ ಮಹಾರಾಯ ' ಕಾದಂಬರಿಯ 'ಸಂಪ್ರದಾಯವಾದೀ ಧೋರಣೆ' ಯನ್ನು ಕಾದಂಬರಿಕಾರರ ಧೋರಣೆಯೊಂದಿಗೆ ಸಮೀಕರಿಸುವುದರ ಮೂಲಕ ಆ ಕೃತಿಯ ಇತರ ಸಾಧ್ಯತೆಗಳನ್ನು ಅಲ್ಲಿ ಗಮನಿಸದೆ ಹೋಗುತ್ತಾರೆ.

ಈ ಕೃತಿಯಲ್ಲಿ ವಿಶೇಷ ಗಮನವನ್ನು ಬಯಸುವ ಎರಡು ಲೇಖನಗಳೆಂದರೆ ತುಳು ಪಾಡ್ದನಗಳನ್ನು ಕುರಿತವು. ಇಂದು ಮಹತ್ವ ಪಡೆಯುತ್ತಿರುವ, ಕರ್ನಾಟಕದ ಉಪಸಂಸ್ಕೃತಿಗಳ ಅಧ್ಯಯನಕ್ಕೆ ಬಹು ಸಮರ್ಥವಾದ ಮಾದರಿಯೊಂದು ಇಲ್ಲಿ ದೊರೆಯುತ್ತದೆ. ಮೌಖಿಕ ಸಂಪ್ರದಾಯದ ಕೃತಿಗಳ ಕಾಲಸ್ಥ ಅಧ್ಯಯನ ಸಾಧ್ಯವಿಲ್ಲದಿರುವುದರಿಂದ ದೇಶಸ್ಥ ಅಧ್ಯಯನದ ಸಾಧ್ಯತೆಗಳನ್ನು ಶೋಧಿಸಬೇಕೆಂದು ಅವರು ಸೂಚಿಸುತ್ತಾರೆ. ಅಷ್ಟೇ ಅಲ್ಲ; ಸಿರಿ ಪಾಡ್ದನ, ಕಲ್ಕುಡ ಪಾಡ್ದನ ಮುಂತಾದ ಕೆಲವು ಆಯ್ದ ನಿದರ್ಶನಗಳಲ್ಲಿ ಆ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಅವು ಮುಂದಿನ ಜಾನಪದ ಅಧ್ಯಯನಗಳಿಗೆ ದಿಕ್ಸೂಚಿಯಾಗುವಂತಿದೆ.

ಅರಿಸ್ಟಾಟಲ್, ಲಾಂಗಿನಸ್, ಐ.ಎ. ರಿಚರ್ಡ್ಸ್ ಮುಂತಾದವರನ್ನು ಕುರಿತ ಲೇಖನಗಳು ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯ ಸಂದರ್ಭದಲ್ಲಿ ಮೌಲಿಕವೆನಿಸಿದರೂ, ಕನ್ನಡದ ಮಟ್ಟಿಗೆ ದ್ವೀಪಗಳಾಗಿ ಬಿಡುತ್ತವೆ. ಈ ಬಗೆಯ ಕೆಲಸವನ್ನು ಇನ್ನಷ್ಟು ಸಮಗ್ರವಾಗಿ ಸಂಯೋಜಿತವಾಗಿ ಮಾಡಲು ದಾಮೋದರರಾಯರು ಸಮರ್ಥರೆನ್ನುವುದು ಈ ಪುಸ್ತಕದಿಂದಲೇ ರುಜುವಾತಾಗುತ್ತದೆ.

ಸಾತತ್ಯ : *ಗಿರಡ್ಡಿ ಗೋವಿಂದರಾಜ*

ಅರವತ್ತರ ದಶಕದಲ್ಲಿ ವಿಮರ್ಶೆಯಲ್ಲಿ ತೊಡಗಿಸಿಕೊಂಡು, ಇಂದಿನವರೆಗೆ ಬರೆಯುತ್ತ ಬಂದಿರುವ ಹಲವು ಲೇಖಕರಿಗೆ, ತಮ್ಮ ಮನೋಧರ್ಮ ಮತ್ತು ಲೇಖನ ವಿಧಾನಗಳಲ್ಲಿ, ಮರು ಹೊಂದಾಣಿಕೆಯನ್ನು ಮಾಡಿಕೊಳ್ಳುವ ಸಮಸ್ಯೆಯು ಕಾಡುತ್ತಿದೆ. ಈ ಅವಧಿಯಲ್ಲಿ ಉಂಟಾದ ಸಾಮಾಜಿಕ-ಸಾಂಸ್ಕೃತಿಕ ಸ್ಥಿತ್ಯಂತರಗಳು ಉಂಟುಮಾಡಿದ ಒತ್ತಡಗಳ ಫಲವಾದ ಈ ಸಮಸ್ಯೆಯನ್ನು ನೇರವಾಗಿ, ಆರೋಗ್ಯಕರವಾಗಿ ಎದುರಿಸಿರುವ ವಿಮರ್ಶಕರಲ್ಲಿ ಗಿರಡ್ಡಿ ಗೋವಿಂದರಾಜ ಅವರೂ ಒಬ್ಬರು. ನವ್ಯ ಸಂದರ್ಭದಿಂದ

ದತ್ತವಾದ ಸಿದ್ಧಾಂತಗಳ ಮರಳಿನಲ್ಲಿ ಉಷ್ಟ್ರಪಕ್ಷಿಯಂತೆ ತಲೆ ಮರೆಸಿಕೊಳ್ಳದೆ, ಹಾಗೆಂದು ರಾತ್ರಿ ಕಳೆದು ಹಗಲಾಗುವುದರೊಳಗೆ ಬದಲಾದ ಸಂದರ್ಭದ ಪ್ರವಾದಿಯಂತೆ ಕಾಣಿಸಿಕೊಳ್ಳದೆ ಒಂದು ಬಗೆಯ ನಿರ್ಲಿಪ್ತತೆ: ಸಮತೋಲನವನ್ನು ಉಳಿಸಿಕೊಂಡು ಬಂದಿರುವ ಗಿರಡ್ಡಿಯವರ ಬರವಣಿಗೆಯು, ಆಕರ್ಷಕತೆಯನ್ನು ತ್ಯಾಗಮಾಡಿ, 'ಅಚ್ಚುಕಟ್ಟು, ಸ್ಪಷ್ಟತೆ, ನಿರ್ದುಷ್ಟತೆ'ಗಳನ್ನು ಉಳಿಸಿಕೊಂಡಿದೆ. ಕನ್ನಡ ವಿಮರ್ಶೆಯ ಇತಿಹಾಸದ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡೇ ಬರೆಯುವ ಗಿರಡ್ಡಿಯವರದು ನೆಲದ ಮೇಲಿನ ಸಮತೂಕದ ನಡಿಗೆ.

'ಸಾತತ್ಯ' ಸಂಕಲನದ ಹದಿನಾಲ್ಕು ಲೇಖನಗಳಲ್ಲಿ ಒಂಬತ್ತು ವಿವಿಧ ವಿಚಾರಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳಾದರೆ, ಉಳಿದ ಐದು ಮುನ್ನುಡಿ, ಪ್ರಸ್ತಾವನೆ ಹಾಗೂ ಬಿಡಿ ಲೇಖನಗಳಾಗಿವೆ. ಟಿ.ಎಸ್. ಎಲಿಯಟ್, ಷೇಕ್ಸ್‌ಪಿಯರ್‌ನಿಂದ ಹಿಡಿದು ಉತ್ತರ ಕರ್ನಾಟಕದ ಕವಿಗಳು, ಮಾಸ್ತಿ, ಬಾಗಲೋಡಿಯವರ ಮೂಲಕ ಚಿತ್ರಕಲೆಯವರೆಗೆ ಹತ್ತು ಹಲವು ಪ್ರತ್ಯೇಕವೆನಿಸಿಕೊಳ್ಳುವ ವಿಷಯಗಳನ್ನು ಕುರಿತ ಈ ಲೇಖನಗಳ ಹಿಂದೆ ಕೆಲವು ಸಮಾನ ಕಾಳಜಿಗಳಿವೆಯೆನ್ನುವುದು ಸ್ಪಷ್ಟವಾಗಿದೆ. ವಸಾಹತುಶಾಹಿ ಅನುಭವದ ಪರಿಣಾಮಗಳನ್ನು ಅರಗಿಸಿಕೊಂಡು, ಆಧುನಿಕತೆಯ ಗುಣಾಂಶಗಳನ್ನು ಕಳೆದುಕೊಳ್ಳದೆ, ನಮ್ಮ ದೇಸೀ ಸಾಹಿತ್ಯಪರಂಪರೆಯ ಸಾತತ್ಯವನ್ನು ಉಳಿಸಿಕೊಳ್ಳಬೇಕೆಂಬ ಹಂಬಲವು ಈ ಬರಹಗಳ ಹಿಂದಿನ ಪ್ರೇರಕ ಶಕ್ತಿಯಾಗಿದೆ. ಈ ಸಮತೋಲನವನ್ನು ಸಾಧಿಸಬೇಕಾದ್ದು ಒಟ್ಟು ಕನ್ನಡದ ಸೃಜನಶೀಲತೆಯೇ ಹೊರತು ಒಬ್ಬ ವಿಮರ್ಶಕನಲ್ಲ ಎಂಬ ಅರಿವು ಗಿರಡ್ಡಿಯವರಿಗೂ ಇದೆ. ಸಮೀಕ್ಷಾ ಸ್ವರೂಪದ ಲೇಖನಗಳಲ್ಲಿ ನೀಡುವ ಸಂಕ್ಷಿಪ್ತ ಅನಿಸಿಕೆಗಳನ್ನು ಬಿಟ್ಟರೆ, ಈ ಸಂಕಲನದ ಬಹುಪಾಲು ಲೇಖನಗಳು ನವೋದಯ ಹಾಗೂ ನವ್ಯ ಸಂದರ್ಭದ ಲೇಖಕರಿಂದ ಈಚೆಗೆ ಬರುವುದಿಲ್ಲವಾದರಿಂದ ಪ್ರಸ್ತುತ ಸಂದರ್ಭದ ವಿಶ್ಲೇಷಣೆ ಸಿಗುವುದಿಲ್ಲ. ೧೯೯೦ರ ಕಥಾಸಾಹಿತ್ಯವನ್ನು ಕುರಿತ ಲೇಖನದಲ್ಲಿ ಮಾತ್ರ 'ಕಲ್ಲು ಕರಗುವ ಸಮಯ', 'ಪುರುಷೋತ್ತಮ'ಗಳೂ ಸೇರಿದಂತೆ ಹಲವು ಮುಖ್ಯ ಕೃತಿಗಳ ವಿಮರ್ಶೆಯಿದೆ.

'ಸಾಹಿತ್ಯದಲ್ಲಿ ದೇಶೀಯತೆ' ಎನ್ನುವುದು ಈ ಸಂಕಲನದ ಮುಖ್ಯ ಲೇಖನ. ಸೃಜನಶೀಲ ಬರವಣಿಗೆ ಮತ್ತು ವಿಮರ್ಶೆಗಳನ್ನು ಬೇರ್ಪಡಿಸಿ, ಇವುಗಳಲ್ಲಿ ಮೊದಲನೆಯದು ಸತತವಾದ ದೇಶೀ ನೆಲೆಗಳನ್ನು ಉಳಿಸಿಕೊಂಡಿತೆಂದೂ, ವೈಚಾರಿಕ ಸ್ತರದಲ್ಲಿ ಅದರಲ್ಲೂ ಸಾಹಿತ್ಯ ವಿಮರ್ಶೆಯಲ್ಲಿ ಪಶ್ಚಿಮದ ಪ್ರಭಾವವು ಅತಿಯಾಯಿತೆಂದು ಗಿರಡ್ಡಿಯವರು ಹೇಳುತ್ತಾರೆ. ಸ್ವವಿಮರ್ಶೆಯ ಪ್ರಮಾಣವು ಜಾಸ್ತಿಯಾದ ವಿಮರ್ಶಕನ ಹಿಂಜರಿಕೆಯು ಈ ಅನಿಸಿಕೆಗೆ ಕಾರಣವಾಗಿದೆ. ಏಕೆಂದರೆ ನಮ್ಮಲ್ಲಿ ದೇಶೀಯತೆಯ ಬೆಂಕಿಯನ್ನು ಜೀವಂತವಾಗಿಟ್ಟುಕೊಂಡಿರುವ ಬೇಂದ್ರೆ, ಕುರ್ತಕೋಟಿ-ಮುಂತಾದ ವಿಮರ್ಶಕರಿರುವಂತೆಯೇ ಪಾಶ್ಚಾತ್ಯ ಪ್ರಭಾವಗಳಿಗೆ ತಮ್ಮನ್ನೇ ತೆತ್ತುಕೊಂಡ ಸೃಜನಶೀಲ ಲೇಖಕರೂ ಇದ್ದಾರೆ. ಏಕೆಂದರೆ ಎಲ್ಲ

ಸೃಜನಶೀಲ ಸಾಹಿತ್ಯವೂ ಗಿರಡ್ಡಿಯವರು ಹೇಳುವ, "ನಮಗೆ ಗೊತ್ತಿಲ್ಲದ ಹಾಗೆ, ನಮ್ಮ ಸುಪ್ತಪ್ರಜ್ಞೆ, ಸಾಮೂಹಿಕ ಅಜಾಗ್ರತ ಚಿತ್ತ, ಜಾನಾಂಗಿಕ ಅನುಭವಗಳೊಂದಿಗೆ ಸಂಕೀರ್ಣವೂ ಗಾಢವೂ ಆದ ಸಂಬಂಧಗಳನ್ನು ಹೊಂದಿರುವುದರಿಂದ ನಾವು ಎಷ್ಟೇ ಪ್ರಜ್ಞಾಪೂರ್ವಕವಾಗಿ ನಮ್ಮ ಸಂಸ್ಕೃತಿ ಪರಂಪರೆಗೆ ಪರಕೀಯವಾಗಬೇಕೆಂದು ಪ್ರಯತ್ನಿಸಿದರೂ ಹಾಗಾಗಲು ಬಿಡುವುದಿಲ್ಲ. 'ನಮ್ಮ ಸೃಜನಶೀಲ ` ಸಾಹಿತ್ಯದ ಒಳನೆಯ್ಗೆಯಲ್ಲಿ ಇನ್ನೂ ನಮ್ಮತನದ ಅಂಶಗಳು ತಲೆಮರೆಸಿಕೊಂಡು, ರೂಪ ಬದಲಾಯಿಸಿಕೊಂಡು ಹುದುಗಿರುತ್ತವೆ'' ಎಂಬ ಮಾತಿಗೆ ಸಮರ್ಥನೆಯಾಗಿರುವುದಿಲ್ಲ.

ಆದರೆ ಲೇಖನವು ಅಲ್ಲಿಗೆ ಮುಗಿಯದೆ, ವಸ್ತುನಿಷ್ಠವಾಗಿ ಸನ್ನಿವೇಶದ ಹಲವು ಮುಖಗಳನ್ನು ಮಂಡಿಸುತ್ತದೆ. ಪಾಶ್ಚಾತ್ಯ ಪ್ರಭಾವಗಳನ್ನು ಅರಗಿಸಿಕೊಳ್ಳುವ ಬಗೆಗಳು, ಆತಂಕಗಳನ್ನು ಪಟ್ಟಿ ಮಾಡುತ್ತಾ, ಕೊನೆಗೆ ದೇಶೀವಾದ ಎಂಬ ಚಳುವಳಿಯೇ ಪ್ರಾರಂಭವಾಗುವ ಸಾಧ್ಯತೆಯಿದೆಯನ್ನುವಾಗ ಮಹತ್ವದ ಭಿನ್ನಾಭಿಪ್ರಾಯವನ್ನು ಮಂಡಿಸುತ್ತಾರೆ. ದೇಶೀವಾದವನ್ನು ಕುರಿತಾದ ಹಂಬಲವು ಸಾಹಿತ್ಯಕ ಆಕಾಂಕ್ಷೆಯಾಗಿ ಮಾತ್ರವೇ ಕಾಣಿಸಿಕೊಳ್ಳುತ್ತಿದ್ದು, ಸಾಮಾಜಿಕ ಜೀವನದಲ್ಲಿ ಅದಕ್ಕೆ ಸಂವಾದಿಯಾದ ತುಡಿತಗಳು ಇಲ್ಲವಾದ್ದರಿಂದ ಆ ಬಗೆಯ ಕೃತಿಗಳು ಬರಲಾರವೇನೋ ಎನ್ನುವುದು ಇಲ್ಲಿನ ಆತಂಕ. ಆದರೆ ಸಾಹಿತ್ಯದ ದೇಶೀ ಗುಣವೆನ್ನುವುದು ಜಡವಾದ ಪರಿಕಲ್ಪನೆಯಾಗಿರದೆ ಆಧುನಿಕತೆಯ ಹಲವು ಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆಯಬಲ್ಲುದೆನ್ನುವುದನ್ನು ಕುಸುಮಬಾಲೆ, ಮಾದಾರಿ ಮಾದಯ್ಯ, ಸಮಗಾರ ಭೀಮವ್ವಗಳಂಥ ಕೃತಿಗಳು ತೋರಿಸಿಕೊಟ್ಟಿವೆ. ಇಂಥದೊಂದು ಸಾಧ್ಯತೆಯ ಅರಿವೂ, ಗಿರಡ್ಡಿಯವರಿಗೆ ಇರುವುದರಿಂದ ಅವರ ಲೇಖನವು ವಾದದ ಹಲವು ನೆಲೆಗಳನ್ನು ಮಂಡಿಸಿ ತಾನು ತಟಸ್ಥವಾಗಿ ಉಳಿಯುವಂತೆ ಭಾಸವಾಗುತ್ತದೆ. ಭಾರತೀಯ ಕಾವ್ಯಮೀಮಾಂಸೆಯ ರಸ-ಧ್ವನಿ-ಸಿದ್ಧಾಂತಗಳನ್ನು, ಅಂಡ್ರ್ಯೂ ಮಾರ್ವೆಲ್‌ನ್ ಇಂಗ್ಲಿಷ್ ಕವನವೊಂದರ ಪ್ರಾಯೋಗಿಕ ವಿಮರ್ಶೆಯಲ್ಲಿ ಬಳಸಿ ಹೊಸ ಒಳನೋಟಗಳನ್ನು ನೀಡಲೆತ್ನಿಸುವ ಕುತೂಹಲಕಾರೀ ಪ್ರಯೋಗವು, ಕನ್ನಡ ಕೃತಿಗಳ ವಿಮರ್ಶೆಯ ಸಂದರ್ಭದಲ್ಲಿ ಇನ್ನಷ್ಟು ಮೌಲಿಕವಾಗುತ್ತಿತ್ತು. ಅದೂ ಅಲ್ಲದೆ ಕಾವ್ಯಮೀಮಾಂಸೆಯ ಪರಿಕರಗಳನ್ನು ಇತರ ವಿಮರ್ಶಾತತ್ವಗಳ ಸಾಹಚರ್ಯದಲ್ಲಿ ಬಳಸುವುದು, ಕೇವಲ ಅವುಗಳನ್ನೇ ಬಳಸುವುದಕ್ಕಿಂತ ಹೆಚ್ಚು ಉಪಯುಕ್ತವಾಗಬಹುದು.

ದೇಶೀ ಸಾಹಿತ್ಯ ಪರಂಪರೆಯನ್ನು ಕುರಿತ ಗಿರಡ್ಡಿಯವರ ಕಾಳಜಿಯು, ಮಾಸ್ತಿಯವರ ಕಥಾ ಸಾಹಿತ್ಯವನ್ನುಕುರಿತ ಎರಡು ಲೇಖನಗಳಲ್ಲಿ, ಹಾಗೆಯೇ ಉತ್ತರ ಕರ್ನಾಟಕದ ಆಧುನಿಕ ಕಾವ್ಯದ ವಿಶಿಷ್ಟತೆಗಳನ್ನು ಅರಸುವ ಬರವಣಿಗೆಯಲ್ಲಿ ಇನ್ನಷ್ಟು ಸಮರ್ಥವಾಗಿ ಮೈದಳೆದಿವೆ. ಅಲ್ಲಿ ಅವರು ಮಹತ್ವದ ಒಳನೋಟಗಳನ್ನು ನೀಡಿದ್ದಾರೆ.

'ಕನ್ನಡ ಕಥಾ ಸಂಕಲನ' ಮತ್ತು 'ಕನ್ನಡ ಕಥಾ ಸಾಹಿತ್ಯ' ಎಂಬ ಲೇಖನಗಳು ಪರಸ್ಪರ ಪೂರಕವಾಗಿ ಗಿರಡ್ಡಿಯವರ ವಿಮರ್ಶಾ ವಿಧಾನದ ಮೇಲೆ ಬೆಳಕು ಚೆಲ್ಲುತ್ತವೆ.

ಕನ್ನಡ ಸಣ್ಣ ಕಥೆಯ ಸಮಗ್ರ ಇತಿಹಾಸದ ಸ್ಥೂಲ ಸಮೀಕ್ಷೆ ಹಾಗೂ ೧೯೯೦ ರಲ್ಲಿ ಪ್ರಕಟವಾದ ಕಥೆ ಕಾದಂಬರಿಗಳ ಸಮೀಕ್ಷೆ ನಡೆಸುವ ಈ ಬರೆಹಗಳು ಹಲವು ಸಂಗತಿಗಳನ್ನು ಕುರಿತು, ಸರಿಯಾದರೂ, ಸಮರ್ಥನ ರಹಿತವಾದ ತೀರ್ಮಾನಗಳನ್ನು ಕೊಡುತ್ತವೆ. ಅದು ಇಂಥ ಬರವಣಿಗೆಯ ಮಿತಿಯೂ ಹೌದು. ಹಾಗೆಯೇ ಎಲಿಯೆಟ್, ಷೇಕ್ಸ್‌ಪಿಯರ್, ರಾಜಕೀಯ ಪ್ರಶ್ನೆ ಮುಂತಾದ ವಿಷಯಗಳನ್ನು ಕುರಿತ ಲೇಖನಗಳು ಅಪಾರವಾದ ಶ್ರಮವನ್ನು ಬಯಸಿಯೂ ಆ ಶ್ರಮಕ್ಕೆ ಸಮತೂಕವಾದ ಪ್ರತಿಫಲವನ್ನು ನೀಡದೆ ಹೋಗುತ್ತವೆ. ಗಿರಡ್ಡಿಯವರಂಥ ಸಮರ್ಥ ಲೇಖಕರು ಪ್ರಾಸಂಗಿಕವಾದ ಲೇಖನಗಳಲ್ಲಿ ಮಗ್ನರಾಗುವ ಪ್ರಲೋಭನೆಯನ್ನು ಅಥವಾ ಅವರಿವರ ಭಿಡೆಗೆ ಮಣಿಯುವ ನಮನಶೀಲತೆಯನ್ನು ತೊರೆದು, ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸುವ ಸ್ವಂತ ಆಯ್ಕೆಯ ಬರವಣಿಗೆಯಲ್ಲಿ ತೊಡಗಿಕೊಳ್ಳುವುದರಿಂದ ಸ್ವತಃ ಅವರ ಪ್ರತಿಭೆಗೆ ನ್ಯಾಯ ಬಗೆದಂತೆ ಆಗುತ್ತದೆ. ಸಾಹಿತ್ಯ ಚರಿತ್ರೆಯ ಅಧ್ಯಾಯಗಳನ್ನು ಕಟ್ಟಿಕೊಡುವ ವಸ್ತುನಿಷ್ಠತೆ, ಬಹುಶ್ರುತತೆ ಹಾಗೂ ಪ್ರತಿಭೆಗಳು ಅವರಿಗಿವೆ. ಆದರೆ ವಿಮರ್ಶಾ ಕೃತಿಯೊಳಗೇ ಕಂಡುಕೊಳ್ಳುವ ಸಾತತ್ಯ ಹಾಗೂ ಅದಕ್ಕೆ ಅಗತ್ಯವಾದ ಪರಿಕರಗಳನ್ನು ಪಡೆದುಕೊಂಡಾಗ ಆ ಕೆಲಸಕ್ಕೆ ಪರಿಪೂರ್ಣತೆ ಒದಗುತ್ತದೆ.

ಶಿಷ್ಟ-ಪರಿಶಿಷ್ಟ : *ಪುರುಷೋತ್ತಮ ಬಿಳಿಮಲೆ*

ಕಿರಿಯ ತಲೆಮಾರಿನ ಜಾನಪದ ವಿದ್ವಾಂಸರಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿರುವ ಪುರುಷೋತ್ತಮ ಬಿಳಿಮಲೆಯವರು, "ಜಾನಪದ, ಯಕ್ಷಗಾನ, ನಾಟಕ, ಸಂಘಟನೆ, ಸಾಕ್ಷರತಾ ಆಂದೋಲನ ಹೀಗೆ ಹತ್ತು ಹಲವು ಕಡೆ ತೊಡಗಿಸಿಕೊಂಡಿರುವ" ವವರು. ಆದ್ದರಿಂದಲೇ ಸಾಹಿತ್ಯ ವಿಮರ್ಶೆಯನ್ನು 'ಸಾಕಷ್ಟು ಗಂಭೀರವಾಗಿ' ತೆಗೆದುಕೊಳ್ಳಲಾಗಿಲ್ಲವೆಂದು ಹೇಳಿಕೊಂಡಿರುವವರು. ಆದರೆ ಈ ವಿವಿಧ ಆಸಕ್ತಿಗಳೇ ಅವರ ವಿಮರ್ಶೆಯ ಸ್ವರೂಪವನ್ನು ನಿರ್ಧರಿಸುವ, ನಿಯಂತ್ರಿಸುವ ಕೆಲಸವನ್ನೂ ಮಾಡಿವೆ. ಸೃಜನಶೀಲ ಸಾಹಿತ್ಯವನ್ನು, ಹಾಗೆಯೇ ಇತರರ ವಿಮರ್ಶೆಯನ್ನು ತಮಗಿರುವ ಜಾನಪದ ಅಧ್ಯಯನದ ಹಿನ್ನೆಲೆಯಿಂದಲೇ ಪ್ರವೇಶಿಸುವುದರಿಂದ ಹೊಸ ಸಂಗತಿಗಳನ್ನು ಹೇಳಲು ಅವರಿಗೆ ಸಾಧ್ಯವಾಗಿದೆ. ಅವರ ವಿಮರ್ಶೆಯ ಮತ್ತೊಂದು ನಿಯಂತ್ರಕವೆಂದರೆ ಬಂಡಾಯ-ದಲಿತ ಚಳುವಳಿಯ ಬಗೆಗಿನ ತೀವ್ರವಾದ ಬದ್ಧತೆ. ತಾತ್ವಿಕತೆ, ವಿಧಾನ, ಪರಿಕರ ಮುಂತಾದ ಎಲ್ಲ ನೆಲೆಗಳಲ್ಲೂ ಬಿಳಿಮಲೆಯವರ ಆಯ್ಕೆಗಳಿಗೆ ಕಾರಣವಾಗುವುದು ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳೇ ಆಗಿರುತ್ತವೆ. ಆ ಮಾತುಗಳ ಸ್ಥೂಲ ಅರ್ಥದಲ್ಲಿ ಜನಪರವೂ, ಎಡಪಂಥೀಯವೂ ಆದ ಅವರ ನಿಲುವುಗಳು ಪಾಂಡಿತ್ಯದ ಹೊರೆಯಾಗಿ ಈ ಕೃತಿಯನ್ನು ಕವಿದುಕೊಂಡಿಲ್ಲ. ಒಟ್ಟು ಬಂಡಾಯದ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದರೂ, ಅದರೊಳಗಿನ ಒಳ ನೆಲೆಗಳ ಬಗ್ಗೆ ಖಚಿತವಾದ ಸ್ವ-ವಿಮರ್ಶಕ ನೆಲೆಗಳನ್ನು ತಳೆಯುವುದು ಅವರಿಗೆ ಸಾಧ್ಯವಾಗಿದೆ.

೧೯೮೭ ರಿಂದ ೯೧ರ ವರೆಗಿನ ಐದು ವರ್ಷಗಳ ಅವಧಿಯಲ್ಲಿ ಬರೆದ ಹದಿನಾಲ್ಕು ಲೇಖನಗಳ ಈ ಸಂಕಲನದಲ್ಲಿ ನಾಲ್ಕು ದಲಿತ-ಬಂಡಾಯ

ಬರವಣಿಗೆಯನ್ನು ಕೇಂದ್ರದಲ್ಲಿ ಪಡೆದಿದ್ದರೆ, ಉಳಿದವು ಆ ನೆಲೆಯಿಂದ ಇತರ ಸಾಹಿತ್ಯಕ ಸನ್ನಿವೇಶ, ಲೇಖಕ ಮತ್ತು ಕೃತಿಗಳನ್ನು ಪರಿಶೀಲಿಸುವ ಪ್ರಯತ್ನಗಳು. ಬಹುಮಟ್ಟಿಗೆ ಇಲ್ಲಿನ ಆಯ್ಕೆಗಳನ್ನು ವಿಚಾರಸಂಕಿರಣಗಳು ನಿರ್ಧರಿಸಿದೆ. ಸ್ವತಃ ಇಲ್ಲಿರುವ ಲೇಖನಗಳಿಗಾಗಿ ಮಾತ್ರವಲ್ಲ. ಸಮಕಾಲೀನ ವಿಮರ್ಶಾ ಸನ್ನಿವೇಶದಲ್ಲಿ ಪ್ರಚಲಿತವಾಗಿರುವ ಕೆಲವು ವಿಚಾರ ಘಟಕಗಳ ಪರಿಶೀಲನೆಗಾಗಿ ಕೂಡ ಈ ಕೃತಿಯನ್ನು ಸ್ವಲ್ಪ ವಿವರವಾಗಿ ಪರಿಶೀಲಿಸುವ ಅಗತ್ಯವಿದೆ.

೧. ತಮಗಿರುವ ಜಾನಪದ ಅಧ್ಯಯನಗಳ ತಿಳಿವಳಿಕೆಯನ್ನು ಬಳಸುವಾಗಲೆಲ್ಲ, ಲೇಖಕರು ಯಾವುದೇ ಭಾವನಾತ್ಮಕತೆಗೆ ವಶರಾಗದೆ, ನಿರ್ಲಿಪ್ತರಾಗಿ ಬರೆಯುತ್ತಾರೆ. ಮಾಸ್ತಿಯವರ ಕತೆಗಳಲ್ಲಿ ಜನಪದ ಪ್ರಜ್ಞೆಯನ್ನು ಹುಡುಕುವಾಗ, ಅವರ ಸಂವೇದನೆ ಮತ್ತು ಕಥನ ವಿಧಾನಗಳೆರಡರಲ್ಲೂ ಅಂಥ ಪ್ರಜ್ಞೆಯನ್ನು ಬಿಳಿಮಲೆಯವರು ಗುರುತಿಸುತ್ತಾರೆ. "ಜಾನಪದ ಲೋಕವೊಂದು ಅದರ ಮೂಲಸ್ಥಿತಿಗೆ ತುಂಬಾ ಹತ್ತಿರವಾಗಿ ಗೋಚರವಾಗುತ್ತದೆ" (ಪುಟ 26) ಹಲವು ಸಮಕಾಲೀನ ವಿಮರ್ಶಕರಿಗಿಂತ ಮಾಸ್ತಿಯವರ ಬಗ್ಗೆ ಹೆಚ್ಚು ಉದಾರವಾಗಿರುವ ಈ ನಿಲುವುಗಳು ನವೋದಯದ ಬಗ್ಗೆಯೋ, ನವ್ಯದ ಬಗ್ಗೆಯೋ ಬರೆಯುವಾಗ, ಒಂದು ಸಮರ್ಥನೆ-ಖಂಡನೆಗಳ ನೆಲೆಯನ್ನು ಸ್ಥಾಪಿಸಿಕೊಂಡು ಬೀಸುಮಾತುಗಳಲ್ಲಿ ತೊಡಗುವುದನ್ನು ಗಮನಿಸಬಹುದು. ನಿರ್ದಿಷ್ಟ ಕೃತಿ ಅಥವಾ ಲೇಖಕರನ್ನು ಕುರಿತು ಬರೆಯುವಾಗ ತೋರಿರುವ ತಾಳ್ಮೆ ಹಾಗೂ ವಿವೇಚನೆಗಳನ್ನು, ಸನ್ನಿವೇಶಗಳ, ಚಳುವಳಿಗಳ ಬಗ್ಗೆ ಬರೆಯುವಾಗ ಬಿಳಿಮಲೆಯವರು ತೋರಿಸುವುದಿಲ್ಲ. ಆದ್ದರಿಂದಲೇ ಮಿತ್ಯನಾರಾಯಣನ ಕಥೆ, ಅರವಿಂದ ನಾಡಕರ್ಣಿ, ಮುಳಿಯ ತಿಮ್ಮಪ್ಪಯ್ಯ, ಅರವಿಂದ ಮಾಲಗತ್ತಿ, ಮುದ್ದಣ ಮುಂತಾದವರ ಕೃತಿಗಳ ಬಗ್ಗೆ ಬರೆಯುವಾಗ ಬಿಳಿಮಲೆಯವರೊಡನೆ ಸಹಮತ ಹಾಗೂ ವಾಗ್ವಾದಗಳೆರಡೂ ಸಾಧ್ಯವಾಗುತ್ತದೆ. ಅಂಥ ಕಡೆ ಕೃತಿಗಳ ಆಕೃತಿಯನ್ನು ಗಮನಿಸುವುದು, ಅದನ್ನು ಸಾಂಸ್ಕೃತಿಕ ಸಂದರ್ಭದೊಡನೆ ಸಂಯೋಜಿಸುವುದು, ಶೈಲಿಯಿಂದ ರಚನೆಯವರೆಗೆ ಹತ್ತು ಹಲವು ಸಂಗತಿಗಳನ್ನು ಗುರುತಿಸುವುದು ಅವರಿಗೆ ಸಾಧ್ಯವಾಗುತ್ತದೆ.

೨. ಆದರೆ ನವ್ಯ ಸಾಹಿತ್ಯದ ಬಗ್ಗೆ ಬರೆಯುವಾಗ ಮಾತ್ರ ಬಿಳಿಮಲೆಯವರು ಕೆಂಪು ಬಟ್ಟೆಯನ್ನು ಕಂಡ ಗೂಳಿಯಂತೆ ಭಾವೋದ್ರಿಕ್ತರಾಗಿ ಬಿಡುತ್ತಾರೆ. 'ರೂಪ-ನಿಷ್ಠ ವಿಮರ್ಶೆ'ಹಾಗೂ 'ನವ್ಯ ಬರವಣಿಗೆ' ಗಳನ್ನು ಮಾರಕ ಶಕ್ತಿಗಳು ಎಂಬಂತೆ ಟೀಕಿಸುತ್ತಾರೆ. ನವ್ಯ ಸಾಹಿತ್ಯವೆಂದರೆ ನವ್ಯಕಾವ್ಯ, ಹಾಗೆಂದರೆ ಅಡಿಗರ ಕಾವ್ಯ ಎಂಬ ಸರಳವಾದ ನೆಲೆಯಿಂದ ಬರೆಯತೊಡಗುತ್ತಾರೆ. ನವ್ಯ ಸಾಹಿತ್ಯವು ಒಳಗೊಳ್ಳುವ ಸಾಮಾಜಿಕತೆಯ ಸ್ವರೂಪದ ಬಗ್ಗೆ ಕಿರಿಯಾಳದ ತೀರ್ಮಾನಗಳಿಗೆ ಬರುತ್ತಾರೆ. ಅನೇಕ ಬಂಡಾಯ ಸಾಹಿತಿಗಳ ಸಾಹಿತ್ಯಕ ಆಕೃತಿಗಳು ಕೂಡ ನವ್ಯದ ಸಾಧನೆಗಳಿಗೆ ಋಣಿಯಾಗಿರುವುದನ್ನು ಮರೆಯುತ್ತಾರೆ. ತುಘಲಕ್, ಮುಸ್ಸಂಜೆಯ ಕಥಾ ಪ್ರಸಂಗ,

ಶಿಕಾರಿ, ಬೀಜ, ಚಿದಂಬರ ರಹಸ್ಯಗಳಂಥ ಕೃತಿಗಳು ವೈಯಕ್ತಿಕತೆಗೆ ತೆತ್ತುಕೊಂಡು ಸಾಮಾಜಿಕತೆಗೆ ಎರವಾಗಿದೆಯೆಂದೋ, ನವ್ಯ ಸಾಹಿತ್ಯವು ಅಂತರಂಗದ ಪಾವಿತ್ರ್ಯದ ಹೆಸರಿನಲ್ಲಿ ಸಮೂಹದ ಪಾವಿತ್ರ್ಯವನ್ನು ತಿರಸ್ಕರಿಸಿದ ದುರಂತ ಕಥಾನಕವೆಂದೋ ಹೇಳುವುದು ಅತಿ ಸರಳೀಕರಣದ ಅಪಾಯಕ್ಕೆ ದಾರಿಯಾಗುತ್ತದೆ.

೩. ಚೆನ್ನವೀರ ಕಣವಿ ಮತ್ತು ಚಂದ್ರಶೇಖರ ಕಂಬಾರರ ಬಗ್ಗೆ ಬರೆದಿರುವ ಲೇಖನಗಳನ್ನು ಒಟ್ಟಿಗೆ ಪರಿಶೀಲಿಸುವುದರಿಂದ ಕೆಲವು ಪ್ರಯೋಜನಗಳಿವೆ. ಜಾನಪದವು ಭೂತಕಾಲದಲ್ಲಿ ಹುದುಗಿ ಹೋಗಿರುವ ಪುರಾತನ ಸಾಮಗ್ರಿಯಲ್ಲವೆಂದೂ, ಅದು ಪ್ರತಿ ಆಧುನಿಕ ಕ್ಷಣದಲ್ಲೂ ಆರೋಗ್ಯಕರವಾದ ಮರುಹುಟ್ಟನ್ನು ಪಡೆಯುತ್ತಿರುವುದೆಂದೂ ಬಿಳಿಮಲೆಯವರು ವಾದಿಸುತ್ತಾರೆ. ಸರಿ, ಹಾಗಾದರೆ ಅನಿವಾರ್ಯವಾದ ನಾಗರಿಕ ಹಾಗೂ ತಂತ್ರಜ್ಞಾನಗಳಿಂದ ಪ್ರಭಾವಿತವಾಗಿ ಆಧುನಿಕವಾಗಿರುವ ಮನಸ್ಸು ಜಾನಪದವನ್ನು ತನ್ನದಾಗಿಸಿಕೊಳ್ಳುವ ಹಾಗೆಯೇ, ಅದರಿಂದ ದೂರ ನಿಂತು ತನ್ನ ಸನ್ನಿವೇಶದಲ್ಲಿ ಅದರ ಬೆಲೆ ಕಟ್ಟುವ ತಲ್ಲಣಗಳನ್ನು ಅವರೇಕೆ ಒಪ್ಪಿಕೊಳ್ಳುವುದಿಲ್ಲ? ಅವರು ಹೇಳುವ ಜನಪದ ಕತೆಗಳ ತಂತ್ರಗಾರಿಕೆ, ಬಯಲಾಟದ ತಂತ್ರಗಾರಿಕೆ ಅಥವಾ ಪಾಡ್ದನಗಳ ತಂತ್ರಗಾರಿಕೆಗಳು ಲಿಖಿತ ಪರಂಪರೆಗೆ ಸೇರಿಯೋ ಸೇರದೆಯೋ ತಮ್ಮ ಪರಿಶುದ್ಧ ಸ್ವರೂಪವನ್ನು ಇಂದಿಗೂ ಉಳಿಸಿಕೊಂಡು ಬಂದಿವೆಯೇ ? ಒಬ್ಬ ಕವಿ, ನಾಟಕಕಾರನು ತನ್ನ ಅನುಭವದ ಜಗತ್ತಿನ ಹಲವು ವಿವರಗಳನ್ನು ಆಧುನಿಕವಾದ ನೆಲೆಗಳಿಂದ ನೋಡುವುದರಲ್ಲಿ ದೋಷವೇನಾದರೂ ಇದೆಯೇ ಎಂಬಂಥ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ.

ಇದೇ ರೀತಿ ಕಣವಿಯವರ ಬಗ್ಗೆ ಬರೆಯುವಾಗ "ವರ್ತಮಾನ ಉಲ್ಲೇಖದೊಂದಿಗೆ ಭೂತಕ್ಕೆ ಮುಖ ಮಾಡುವ ಹಂಬಲ. ರಚನೀಕರಣಕ್ಕೆ ಒಳಗಾದ ಕನ್ನಡ ಮನಸ್ಸೊಂದರ ಭಯಭೀತ ಸ್ಥಿತಿಯ ದಾಖಲಾತಿಯಲ್ಲಿ, ವರ್ತಮಾನಕ್ಕೆ ಬೆನ್ನು ಹಾಕಿದ ಮನಸ್ಸೊಂದು ಸಾಂಪ್ರದಾಯಿಕ ಶಿಷ್ಟವನ್ನು ಉಳಿಸಿಕೊಂಡು ಬರಲು ಮಾಡಿದ ಹತಾಶ ಯತ್ನವದು "(ಪುಟ ೭೫) ಕಣವಿಯವರ ಸಾಧನೆ ಇರುವುದೇ ಹೊಸತನದ ನಿರಾಕರಣೆಯ ಪ್ರತಿಗಾಮಿ ಮನಸ್ಸೊಂದು ಭಾವಗಳನ್ನು ದಾಖಲಿಸಿದ ರೀತಿಯಲ್ಲಿ" (ಪುಟ ೫೩) ಮುಂತಾದ ತೀರ್ಮಾನಗಳಿಗೆ ಬಿಳಿಮಲೆಯವರು ಬರುತ್ತಾರೆ.

ಇಂಥ ಕಡೆಗಳಲ್ಲಿ, 'ವಾಸ್ತವ ಮಾರ್ಗಕ್ಕಿಂತ' ಭಿನ್ನವಾದ ವಿಧಾನದಲ್ಲಿ ರಚಿತವಾದ ಯಾವುದೇ ಪ್ರಕಾರದ ಸಾಹಿತ್ಯ ಕೃತಿಯ ಸಮಗ್ರ ಗ್ರಹಿಕೆಗೆ ಅಗತ್ಯವಾದ ಆಸಕ್ತಿ ಮತ್ತು ಪರಿಕರಗಳನ್ನು ವಿಮರ್ಶಕರು ಇನ್ನೂ ರೂಪಿಸಿಕೊಂಡಿಲ್ಲವೆಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯವಾಗುತ್ತದೆ. ಇದು ಸಾಮರ್ಥ್ಯದ ಪ್ರಶ್ನೆಯಲ್ಲ. ಆಯ್ಕೆಯ ಪ್ರಶ್ನೆ.

೪. ಬಂಡಾಯ-ದಲಿತ ಸಾಹಿತ್ಯದ ಬಗ್ಗೆ ಸಹಾನುಭೂತಿ ಮತ್ತು ದೂರಗಳೆರಡನ್ನೂ ಇಟ್ಟುಕೊಳ್ಳುವುದರ ಜೊತೆಗೆ, ಚಳುವಳಿಯಲ್ಲಿಯೂ ತೊಡಗಿಸಿಕೊಂಡು ಬರೆಯುತ್ತಿರುವವರ ಪೈಕಿ ಬಿಳಿಮಲೆಯವರು ಅತ್ಯುತ್ತಮ

ವಿಮರ್ಶಕರು. ಆ ಬರವಣಿಗೆಯ ಹಿಂದಿರುವ ಐತಿಹಾಸಿಕ, ಸಾಮಾಜಿಕ ಒತ್ತಡಗಳ ಅರಿವು, ಅದರ ಹಂತಗಳು, ಮಿತಿಗಳು ಮತ್ತು ಸಾಧನೆಗಳ ಬಗೆಗಿನ ಸ್ಪಷ್ಟವಾದ ತಿಳಿವಳಿಕೆಯು ಅವರನ್ನು ಬಂಡಾಯದ ಸಮರ್ಥ ಪ್ರತಿಪಾದಕರನ್ನಾಗಿ ಮಾಡಿರುವುದರ ಜೊತೆಗೆ, ಬಂಡಾಯದಾಚೆಗಿನ ಸನ್ನಿವೇಶದಲ್ಲೂ ಗಂಭೀರವಾಗಿ ಪರಿಗಣಿತರಾಗುವಂತೆ ಮಾಡಿದೆ.

ಇದೆಲ್ಲದರ ಜೊತೆಗೆ, ವಿಮರ್ಶಕನಿಗೆ ಅಗತ್ಯವಾದ ತಾತ್ವಿಕ ಗಟ್ಟಿತನ, ಅಭಿವ್ಯಕ್ತಿಯ ಖಚಿತತೆ ಹಾಗೂ ನಿರ್ಮಮತೆ, ನಿರ್ಭೀತಿಗಳಿಗೆ ಈ ಕೃತಿಯಲ್ಲಿ ವಿಪುಲವಾದ ನಿದರ್ಶನಗಳು ಸಿಗುತ್ತವೆ.

ಕ್ರಿಯೆ - ಪ್ರತಿಕ್ರಿಯೆ : *ಕೇಶವಶರ್ಮ*

ಈ ವರ್ಷ ಪ್ರಕಟವಾಗಿರುವ, ಕೇಶವಶರ್ಮರ ಎರಡು ಕೃತಿಗಳಲ್ಲಿ 'ಸ್ತ್ರೀವಾದೀ ವಿಮರ್ಶೆ' ಎನ್ನುವುದು, 'ಕ್ರಿಯೆ-ಪ್ರತಿಕ್ರಿಯೆ'ಯೊಳಗೆ, ಸಂಪೂರ್ಣವಾಗಿ ಮರುಮುದ್ರಿತವಾಗಿರುವುದರಿಂದ ಪ್ರತ್ಯೇಕ ವಿಮರ್ಶೆಯನ್ನು ಬೇಡುವುದಿಲ್ಲ.

ಕಳೆದ ಕೆಲ ವರ್ಷಗಳಲ್ಲಿ ಕೇಶವಶರ್ಮರು ಬಂಡಾಯ ಚಳುವಳಿಯ ಉದ್ದೇಶಗಳಿಗೆ ತಮ್ಮನ್ನು ಬದ್ಧರಾಗಿಸಿಕೊಂಡ ವಿಮರ್ಶಕರಾಗಿ ರೂಪುಗೊಳ್ಳುತ್ತಿದ್ದಾರೆ. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಬಗ್ಗೆ ಆಕರ್ಷಣೆ-ವಿಕರ್ಷಣೆಗಳ ದ್ವಂದ್ವವನ್ನು ಹೊಂದಿರುವ, ಸಹಜವಾದ ಸಾಮಾಜಿಕ :ಸಾಂಸ್ಕೃತಿಕ ಕಾರಣಗಳಿಂದ ಇಂಗ್ಲಿಷ್ ಬರವಣಿಗೆಯ ಗಾಢ ಪರಿಚಯವನ್ನು ಪಡೆಯದೆ ಹೋಗಿರುವ ಆ ಸಂದರ್ಭದಲ್ಲಿ ಶರ್ಮರ ಬರವಣಿಗೆಯು ಭಿನ್ನವಾಗಿಯೂ ಆಕರ್ಷಕವಾಗಿಯೂ ತೋರಬಹುದು ಆದರೆ ಅದರ ನಿಜವಾದ ಮೌಲ್ಯಮಾಪನ ನಡೆಯಬೇಕಾದ್ದು ಕನ್ನಡ ವಿಮರ್ಶೆಯ ಒಟ್ಟು ಸಂದರ್ಭದಲ್ಲಿ.

ಈ ಪುಸ್ತಕದ ಮೊದಲ ಭಾಗದ ಲೇಖನಗಳು ವಿಮರ್ಶೆಯ ತತ್ವಗಳ ಬಗ್ಗೆ ಮಾತನಾಡುವ ಉಮೇದಿನಿಂದ ಹೊರಡುತ್ತವೆ. 'ಸಾಂಸ್ಕೃತಿಕ ಅನನ್ಯತೆ'ಯ ಬಗ್ಗೆ ಯೋಚಿಸಬೇಕೆಂದು ಹೇಳುತ್ತಲೇ 'ನಿರಾಕರಣೆ', 'ಭಂಜನ', 'ಪುನರ್ ರೂಪೀಕರಣ' ಮೊದಲಾದ 'ಪಶ್ಚಿಮದ ಲಿಟರರಿ ಥಿಯರಿ' ನೀಡಿರುವ "ಪರಿಭಾಷೆ"ಗಳನ್ನು ಬಳಸಿ ಕೊಳ್ಳಬೇಕೆನ್ನುವುದು ಇವರ ವಾದದ ನೆಲೆ.ಆದರೆ ಎಲ್ಲ ಲೇಖನಗಳೂ ನಿರ್ದಿಷ್ಟ ಕೃತಿ, ಲೇಖಕ ಅಥವಾ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಳ್ಳದೆ, ಚಲಿಸುವ ಗಾಳಿಯಲ್ಲಿ ಊದಿದ ಹೊಗೆಯ ಸುರುಳಿಗಳಂತೆ ನಿರಾಕಾರವೂ, ಅಸ್ಪಷ್ಟವೂ ಆಗಿ ಪರಿಣಮಿಸುತ್ತವೆ. ಬರವಣಿಗೆಯೆಂಬ ಕೆಲಸದಲ್ಲಿ ಇರಬೇಕಾದ ತಾರ್ಕಿಕ ಬೆಳವಣಿಗೆಯ ಅಭಾವ ಇಲ್ಲಿನ ಬಹುದೊಡ್ಡ ಕೊರತೆ. ಬಿಡಿಬಿಡಿಯಾದ ವಾಕ್ಯಗಳೂ ಹೀಗೆಯೇ ಏನನ್ನೋ ಹೇಳುವಂತೆ ತೋರಿಯೂ ಏನನ್ನೂ ಹೇಳದೆ ಉಳಿಯುತ್ತವೆ. ಕನ್ನಡ ವಿಮರ್ಶೆಯೊಂದಿಗೆ ಅರ್ಥಪೂರ್ಣ ಸಂಬಂಧವನ್ನು ಕಟ್ಟಿಕೊಳ್ಳದೆ ಹೋಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳಬೇಕಾದರೆ ಶರ್ಮರು 'ಸಾಮಾನ್ಯೀಕರಣ' (ಜನರಲೈಸೇಷನ್)ದ ಬದಲು

ನಿರ್ದಿಷ್ಟತೆಯ ಕಡೆಗೆ ಚಲಿಸಬೇಕಾಗುತ್ತದೆ. ಆಗ ಅವರ ತಿಳುವಳಿಕೆ, ಸ್ಮೃತಿಕೆಗಳು ಇನ್ನಷ್ಟು ಹೊಳಪುಗೂಡಿ ಖಚಿತವಾಗಿ ಮೈದಳೆಯಬಹುದು. ಇಷ್ಟೆಲ್ಲ ಹೇಳಿಯೂ ಕ್ರಿಯೆ-ಪ್ರತಿಕ್ರಿಯೆಯಲ್ಲಿ ಗಂಭೀರವಾದ ಸಾಂಸ್ಕೃತಿಕ ಹುಡುಕಾಟದ ನೆಲೆಗಳು ಕಾಣಿಸಿಕೊಂಡಿವೆ.

ಹಾಗೆ ನೋಡಿದರೆ ಕೃತಿಯ ಎರಡನೆಯ ಭಾಗವಾದ ಸ್ತ್ರೀವಾದೀ ವಿಮರ್ಶೆಯಲ್ಲಿ ಕೇಶವಶರ್ಮರಿಗೆ, ಕನ್ನಡದ ಸಂದರ್ಭದಲ್ಲಿ ಹೊಸದಾದ ವಿಷಯವೊಂದನ್ನು ತೆಗೆದುಕೊಂಡು ಉಪಯುಕ್ತವಾದ ಪರಿಚಯ ಗ್ರಂಥವೊಂದನ್ನು ಬರೆಯುವ ಅವಕಾಶ ಸಿಕ್ಕಿತ್ತು. ಆಗ ಅಧ್ಯಾಯಗಳ ರೂಪಣ ಮತ್ತು ವಿಂಗಡಣೆಗಳು ತರ್ಕಬದ್ಧವೂ, ವಿಕಸನಾತ್ಮಕವೂ ಆಗುತ್ತಿದ್ದವು. ಆದರೆ ಇಲ್ಲಿರುವುದು 'ಸ್ತ್ರೀವಾದ' ವನ್ನು ಕೇಂದ್ರದಲ್ಲಿಟ್ಟುಕೊಂಡು ಕೆಲವು ಬಿಡಿಬರೆಹಗಳ ಸಂಕಲನ. ಅದರ ಫಲವಾಗಿ ಪುನರುಕ್ತಿ, ಪರಸ್ಪರ ವಿರೋಧಗಳು ಅಲ್ಲಲ್ಲಿ ಕಾಣುತ್ತವೆ. ಇಂದಿನ ಆಲೋಚನೆಯ ಜಗತ್ತಿನ ಪ್ರಮುಖ ಧಾರೆಗಳಲ್ಲಿ ಒಂದಾದ ಸ್ತ್ರೀವಾದೀ ಚಿಂತನೆಯ ಬಗ್ಗೆ ಬರೆಯಬೇಕೋ ಅಥವಾ ಅದರ ಸಹಜ ಫಲಿತವಾದ ಸ್ತ್ರೀವಾದೀ ಸಾಹಿತ್ಯ ವಿಮರ್ಶೆಯ ಕೆಲವು ಕವಲುಗಳನ್ನು ಕುರಿತು ಬರೆಯಬೇಕೋ ಅಥವಾ 'ಕನ್ನಡ ಸಾಹಿತ್ಯ' ವನ್ನು ಸ್ತ್ರೀವಾದೀ ವಿಮರ್ಶೆಯ ನೆಲೆಯಿಂದ ಪರಿಶೀಲಿಸಬೇಕೋ ಎಂಬುದರ ಬಗ್ಗೆ ಶರ್ಮರು ತೀರ್ಮಾನ ತೆಗೆದುಕೊಂಡಿಲ್ಲ. ಇವೆಲ್ಲವನ್ನು ಮಾಡಬೇಕು, ನಿಜ. ಆದರೆ ಸುಮಾರು ಅರವತ್ತು ಪುಟಗಳಲ್ಲಿ ಆ ಕೆಲಸ ಮಾಡಹೊರಟಾಗ, ಗುರಿಯಿರದ ತಿರುಗಾಟ ಅನಿವಾರ್ಯ. ಅದೂ ಅಲ್ಲದೆ ಸ್ತ್ರೀವಾದೀ ಚಿಂತನೆ ಏನು ಹೇಳುತ್ತದೆ ಮತ್ತು ಸ್ವತಃ ಕೇಶವಶರ್ಮರು ಆ ಬಗ್ಗೆ ಏನು ಹೇಳುತ್ತಾರೆ ಎಂಬ ಎರಡು ಸಂಗತಿಗಳು ಪರಸ್ಪರ ಬೆರೆತುಹೋಗಿವೆ. ಕೆಲವೊಮ್ಮೆ ಆತುರದ, ಕೆಲವೊಮ್ಮೆ ಅಸಮರ್ಥಿತವಾದ ತೀರ್ಮಾನಗಳಿಗೆ ಎಡೆ ಮಾಡಿಕೊಟ್ಟಿವೆ. ಕನ್ನಡದ ಸ್ತ್ರೀವಾದೀ ಲೇಖಕಿಯರು ಈ ಕೃತಿಯ ಬಗ್ಗೆ ಯಾವ ರೀತಿಯ ಪ್ರತಿಕ್ರಿಯೆ ತೋರಿಸುವರೆಂಬ ಕುತೂಹಲ ನನಗಿದೆ.

ಒಟ್ಟಿನಲ್ಲಿ ತಮಗಿರುವ ಪ್ರಗತಿಪರ ನಿಲುವುಗಳು ಹಾಗೂ ಸೈದ್ಧಾಂತಿಕ ಆಸಕ್ತಿಗಳನ್ನು ಇನ್ನಷ್ಟು ಸಾವಧಾನವಾಗಿ ಮತ್ತು ಸ್ಪಷ್ಟವಾಗಿ ಮೈಗೂಡಿಸಿಕೊಂಡು ಬರೆದರೆ ಕೇಶವಶರ್ಮರು ಮಹತ್ವದ ಕೆಲಸ ಮಾಡಬಹುದು.

ಸಮರಸ : *ಎನ್.ಎಸ್. ತಾರಾನಾಥ್*

ಸಾಹಿತ್ಯ ವಿಮರ್ಶೆ ಮತ್ತು ಸಂಶೋಧನೆಗಳ ನಡುವೆ ಒಂದು ಬಗೆಯ ಕಂದರ ಏರ್ಪಟ್ಟು ಅವೆರಡೂ ಫಲಪ್ರದವಾದ ಕೊಳುಕೊಡೆಯಿಂದ ವಂಚಿತವಾಗಿರುವ ಈ ದಿನಗಳಲ್ಲಿ, ಸಂಶೋಧಕರೆಂದು ಹೆಸರು ಮಾಡಿರುವ ಎನ್.ಎಸ್. ತಾರಾನಾಥ್ ಅವರ ವಿಮರ್ಶೆಯ ಬರೆಹಗಳ ಸಂಕಲನವಾದ 'ಸಮರಸ' ಕೃತಿಯನ್ನು ಕುತೂಹಲ ಮತ್ತು ನಿರೀಕ್ಷೆಗಳೊಂದಿಗೆ ಓದಬೇಕೆನ್ನಿಸುತ್ತದೆ. ಆದರೆ ಅವರ ಸಂಶೋಧನೆಯ ಕ್ಷೇತ್ರವಾದ ಹಳಗನ್ನಡ ಕೃತಿಗಳನ್ನು ಕುರಿತ ವಿಮರ್ಶೆಯ ಲೇಖನ ಯಾವುದೂ ಇಲ್ಲಿ

ಇಲ್ಲದಿರುವುದರಿಂದ, ಅಷ್ಟರಮಟ್ಟಿಗೆ ಈ ಸಂಕಲನ ತಾರಾನಾಥರ ಸಂಶೋಧಕ ನೆಲೆಗಳಿಂದ ಪ್ರಯೋಜನ ಪಡೆದಿಲ್ಲ. ಬದಲಾಗಿ ಇಲ್ಲಿರುವುದು ಪ್ರಾಸಂಗಿಕವಾಗಿ ಬರೆದ, ಹೊಸಗನ್ನಡ ಕಥೆ, ಕವಿತೆ, ಕಾದಂಬರಿಗಳನ್ನು ಕುರಿತ ಪ್ರಾಯೋಗಿಕ ವಿಮರ್ಶೆಯ ಬರಹಗಳು ಮಾತ್ರ. ಟಿ.ಎಸ್. ವೆಂಕಣ್ಣಯ್ಯನವರ ಕೃತಿಗಳನ್ನು ಕುರಿತ ಲೇಖನದಲ್ಲಿ ಮಾತ್ರ ಗ್ರಂಥ ಸಂಪಾದನೆ, ಪ್ರಾಚೀನ ಸಾಹಿತ್ಯ ಮುಂತಾದ ಕ್ಷೇತ್ರಗಳನ್ನು ಕುರಿತು ಮಾತನಾಡುವ ಅವಕಾಶ ಅವರಿಗೆ ದೊರಕುತ್ತದೆ.

'ಹಂಸಗೀತೆ', 'ಧ್ವಜರಕ್ಷಣೆ', 'ರತ್ನನ ಪದಗಳು', 'ಬೊಮ್ಮನಹಳ್ಳಿಯ ಕಿಂದರಿಜೋಗಿ', 'ಕೈಲಾಸಂ ಅವರ ಕನ್ನಡ ಕವಿತೆಗಳು' ಹೀಗೆ ಹತ್ತು ಹಲವು ಸಂಗತಿಗಳು ಲೇಖಕರ ಸ್ವಂತ ಆಯ್ಕೆಯೇನೂ ಅಲ್ಲ. ಅವೆಲ್ಲವನ್ನು ಸಂಯೋಜಿಸುವ ವಿಮರ್ಶನ ಧೋರಣೆಗಳೂ ಇಲ್ಲಿ ಕಾಣುವುದಿಲ್ಲ. ಅಂಥ ಮಹಾತ್ವಾಕಾಂಕ್ಷೆಯನ್ನು ಲೇಖಕರು ಪಡೆದಿಲ್ಲ. ಆದರೆ ಒಮ್ಮೆ ಒಂದು ವಿಷಯವನ್ನು ಆರಿಸಿಕೊಂಡ ಮೇಲೆ, ತಾರಾನಾಥರು ತಮ್ಮ ಕೆಲಸವನ್ನು ಸಂಶೋಧಕ ಸಹಜವಾದ ಶಿಸ್ತು, ಮುತುವರ್ಜಿ ಹಾಗೂ ವಸ್ತುನಿಷ್ಠೆಗಳೊಂದಿಗೆ ನಿರ್ವಹಿಸುತ್ತಾರೆ. ಅವರದು ಒಳನೋಟಗಳಿಗಿಂತ ಹೆಚ್ಚಾಗಿ ಸಮಗ್ರತೆಯ ಕಡೆಗೆ ಒಲಿದ ವಿವರಣಾತ್ಮಕ ಬರವಣಿಗೆ. ಸಹೃದಯ ವಿಮರ್ಶೆಯ ಪರಿಮಿತಿಗಳೊಳಗೆ, ತೌಲನಿಕ ವಿವೇಚನೆಯನ್ನು ಅವರು ತೋರಿಸುತ್ತಾರೆ. 'ಹಂಸಗೀತೆ'ಯು 'ಸಂಧ್ಯಾರಾಗ'ಕ್ಕಿಂತ ಉತ್ತಮ ಆದರೆ 'ಸುಬ್ಬಣ್ಣ' ದಷ್ಟು ಒಳ್ಳೆಯದಲ್ಲ ಎಂಬ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುವಾಗ ಅಥವಾ 'ರತ್ನನ ಪದಗಳು' ವಸ್ತು ಭಾಷೆಗಳ ದೃಷ್ಟಿಯಿಂದ ಅನನ್ಯವಾದರೂ, ಕಾವ್ಯಾಶಯ ಮತ್ತು ಧೋರಣೆಗಳ ದೃಷ್ಟಿಯಿಂದ ಹಾಗಿಲ್ಲವೇನೋ ಎಂಬ ಅನುಮಾನವನ್ನು ವ್ಯಕ್ತಪಡಿಸುವಾಗ, ವಿಮರ್ಶನ ಸಾಮರ್ಥ್ಯವು ಸ್ಪಷ್ಟವಾಗುತ್ತದೆ. ತಾರಾನಾಥರ ವ್ಯಾಸಂಗವೂ ಸಮರ್ಪಕವಾದುದು. ಆದರೆ ಅವರು ಆರಿಸಿಕೊಂಡಿರುವ 'ಶ್ರೇಷ್ಠ ವಿಮರ್ಶೆ'ಯ ಮಾದರಿಗಳೇ ಸ್ವತಃ ಅವರ ವಿಮರ್ಶೆಯ ಪರಿಮಿತಿಗಳನ್ನು ನಿರ್ಧರಿಸುತ್ತವೆ. ತೀ.ನಂ.ಶ್ರೀ., ಬಸವನಾಳ ಮುಂತಾದ ಹಿರಿಯ ಸಂಶೋಧಕರು, ಪ್ರಾಚೀನ ಕೃತಿಗಳನ್ನು ಕುರಿತು ಬರೆದಿರುವ ವಿಮರ್ಶೆಯನ್ನು ಮಾದರಿಯಾಗಿಟ್ಟುಕೊಂಡು, ತಮ್ಮಲ್ಲಿ ಪಾಂಡಿತ್ಯದೊಂದಿಗೆ ಬರೆಯತೊಡಗಿದಾಗ ತಾರಾನಾಥರಿಂದ ಇನ್ನಷ್ಟು ಉತ್ತಮವಾದ ಬರವಣಿಗೆಯನ್ನು ನಿರೀಕ್ಷಿಸಬಹುದು. ಪ್ರಸ್ತುತ ಸಂಕಲನವು ಸಮಕಾಲೀನ ವಿಮರ್ಶೆಯ ಕೇಂದ್ರದಿಂದ ಆಚೆಗೇ ಉಳಿದು ಕೇವಲ ಅಕಡೆಮಿಕ್ ಆಸಕ್ತಿಯ ಕೃತಿಯಾಗುತ್ತದೆ.

ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳು ಮತ್ತು ಇತರ ಲೇಖನಗಳು : *ಎ.ವಿ. ನಾವಡ*

ಎನ್.ಎಸ್. ತಾರಾನಾಥ್ ಅವರು ಸಂಶೋಧನ ಕ್ಷೇತ್ರದಿಂದ ವಿಮರ್ಶೆಯ ಕಡೆಗೆ ಗಮನ ಹರಿಸಿದವರಾದರೆ, ಎ.ವಿ. ನಾವಡರು ಜಾನಪದ, ಭಾಷಾಶಾಸ್ತ್ರ, ಪ್ರಾದೇಶಿಕ ಸಂಶೋಧನೆಗಳ ದಿಕ್ಕಿನಿಂದ ಬಂದವರು. 'ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳು ಮತ್ತು ಇತರ ಲೇಖನಗಳು' ಎಂಬುದು ಅವರ ಏಳು ಲೇಖನಗಳ ೧೦೨ ಪುಟಗಳ

ಸಂಕಲನ. ಇವುಗಳ ಹಿಂದಿನ ಪ್ರೇರಣೆಯೂ ಪ್ರಾಸಂಗಿಕವಾದುದೇ ಹೊರತು ವೃತ್ತಿಪರವಲ್ಲ. ಡಿ.ವಿ.ಜಿ., ಉಳ್ಳಾಲ ಮಂಗೇಶರಾವ್, ನಿರಂಜನ ಮತ್ತು ಪರಮೇಶ್ವರಭಟ್ಟರ ಮೇಲಿನ ಲೇಖನಗಳು ಪರಿಚಯಾತ್ಮಕವಾದವು. ಉಳಿದ ಮೂರು ಲೇಖನಗಳಲ್ಲಿ ಮೊದಲ ಲೇಖನವು ಆರ್. ನರಸಿಂಹಾಚಾರ್ಯರಿಂದ ತೀ.ನಂ. ಶ್ರೀಯವರವರೆಗೆ ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳನ್ನು ಅರಸುತ್ತದೆ. ಪಂಡಿತ ಪರಂಪರೆಯ ವ್ಯಾಪ್ತಿಯಲ್ಲಿ ಎ.ಆರ್. ಕೃ., ಡಿ.ವಿ.ಜಿ. ಮುಂತಾದವರನ್ನು ಸೇರಿಸಿ, ಅವರಿಗೆ ಇಂಗ್ಲೀಷ್ ಸಾಹಿತ್ಯವಿಮರ್ಶೆಯ ತಂತ್ರ ಸಿದ್ಧಾಂತಗಳ ಸರಿಯಾದ ಪರಿಚಯವಿಲ್ಲವೆಂದು ಹೇಳಿದ ಮೂರು ಪುಟಗಳಲ್ಲೇ ಡಿ.ವಿ.ಜಿ. ಅರಿಸ್ಟಾಟಲ್, ಕೋಲರಿಜ್, ಅರ್ನಾಲ್ಡ್ ಮುಂತಾದವರನ್ನು ಬಳಸಿರುವರೆಂದು ಹೇಳಿರುವುದರಲ್ಲಿ ಪರಸ್ಪರ ವಿರೋಧವಿದೆ. ತೀ.ನಂ.ಶ್ರೀ. ಯವರವರೆಗೆ ಬಂದಿರುವಾಗ ಬೇಂದ್ರೆ, ಕುವೆಂಪು ಮತ್ತು ಮಾಸ್ತಿಯವರ ವಿಮರ್ಶೆಯ ಪರಿಚಯ ಅಗತ್ಯವಾಗಿತ್ತು.

ಈ ಕೃತಿಯ ಮುಖ್ಯ ಲೇಖನವೆಂದರೆ ಕನಕದಾಸರ 'ಮೋಹನ ತರಂಗಿಣಿ'ಯ ಶೈಲಿಯನ್ನು ಕುರಿತಿದ್ದು. ಭಾರತೀಯ ಕಾವ್ಯಮೀಮಾಂಸೆ ಮತ್ತು ಶೈಲಿಶಾಸ್ತ್ರಗಳೆರಡನ್ನೂ ಬಳಸಿಕೊಂಡು, ಹಲವು ನೆಲೆಗಳಲ್ಲಿ ಕೃತಿಯ ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ್ದಾರೆ. ಇನ್ನಷ್ಟು ಶ್ರೇಷ್ಠವಾದ ಕೃತಿಯ ಸಂದರ್ಭದಲ್ಲಿ ಅವರ ಶಾಸ್ತ್ರಜ್ಞಾನ ಹೆಚ್ಚು ಸಾರ್ಥಕವಾಗಬಹುದು. ಹಾಗೆಯೇ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ'ಯನ್ನು ಕುರಿತ ಲೇಖನವು ಅದರ ಶೈಲಿಯ ಮೇಲಿನ ಯಕ್ಷಗಾನದ ಪ್ರಭಾವ, ಜಾನಪದ ಬದುಕಿನ ವಿವರಗಳು, ಊರ್ಧ್ವಮುಖೀ ಸಮಾಜದ ತಲ್ಲಣಗಳು ಮುಂತಾದ ಸಂಗತಿಗಳನ್ನು ಸಮರ್ಥವಾಗಿ ಗುರುತಿಸಿದೆ. ವಿಮರ್ಶೆಯ ಪರಿಭಾಷೆ, ತಾತ್ವಿಕತೆ ಹಾಗೂ ಶಿಸ್ತುಗಳನ್ನು ರೂಢಿಸಿಕೊಂಡರೆ ನಾವಡರು ಇನ್ನಷ್ಟು ಒಳ್ಳೆಯ ಲೇಖನಗಳನ್ನು ಖಂಡಿತವಾಗಿಯೂ ಕೊಡಬಲ್ಲರು.

ಮಾಸ್ತಿ : ಜೀವನ ಮತ್ತು ಸಾಹಿತ್ಯ : *ಎಲ್. ಎಸ್. ಶೇಷಗಿರಿರಾವ್*

ಮಾಸ್ತಿಯವರ ಶತಮಾನೋತ್ಸವ ಸಂದರ್ಭದಲ್ಲಿ, 'ಅವರ ಜೀವನ ಮತ್ತು ಸಾಹಿತ್ಯದ ಪರಿಚಯಾತ್ಮಕ ಕೃತಿ' ಪ್ರಕಟಿಸಬೇಕೆಂಬ ಹಂಬಲದ ಫಲವಾಗಿ, ಎಲ್.ಎಸ್. ಶೇಷಗಿರಿರಾವ್ ಅವರ 'ಮಾಸ್ತಿ : ಜೀವನ ಮತ್ತು ಸಾಹಿತ್ಯ ' ಎಂಬ ಕೃತಿಯು ಹೊರಬಂದಿದೆ. ಇದರ ಎರಡನೆಯ ಭಾಗವಾದ 'ಸಾಹಿತ್ಯ' ಮಾತ್ರ ಪ್ರಸ್ತುತ ಸಮೀಕ್ಷೆಯ ವ್ಯಾಪ್ತಿಗೆ ಸೇರುತ್ತದೆ. ಒಟ್ಟು ಪುಸ್ತಕದ ಧಾಟಿಯೇ ವಿಮರ್ಶೆ ಮತ್ತು ವಿವರಗಳ ನಡುವಿನ ಸಮತೋಲನವನ್ನು ಕಾಪಾಡಿಕೊಳ್ಳಲು ಯತ್ನಿಸಿದೆ. ಮಾಸ್ತಿಯವರ ಬಗೆಗಿನ ಪ್ರೀತಿ, ಗೌರವಗಳು ಹೆಚ್ಚಾಗುವಂತೆ, ಅವರ ಸಾಧನೆಗಳ ಬಗ್ಗೆ ಒಳನೋಟಗಳನ್ನು ನೀಡುತ್ತಾ ಅವರ ಬಗೆಗಿನ ಟೀಕೆಗಳಿಗೆ ಅಲ್ಲಲ್ಲಿ ಸಮರ್ಥನೆ ನೀಡುತ್ತಾ, ಕೆಲವೊಮ್ಮೆ ಮಾಸ್ತಿಯವರ ಬಗೆಗೂ ಭಿನ್ನಾಭಿಪ್ರಾಯ ತೋರಿಸುತ್ತಾ ಸಾಗುವುದು ಈ ಕೃತಿಯ ಧಾಟಿ. ಮಾಸ್ತಿಯವರ ಬಗೆಗಿನ ವಿಮರ್ಶಾ ಪರಂಪರೆ ಹಾಗೂ ಅವರ ಕೆಲವು ರೀತಿಗಳ ಸುತ್ತ ಬೆಳೆದಿರುವ ವಾಗ್ವಾದಗಳ ನಿಕಟ ಪರಿಚಯವಿದ್ದರೂ, ಅವುಗಳನ್ನು ವಿವರವಾಗಿ

ಪ್ರಸ್ತಾಪಿಸಲು ಕೃತಿಯ ಸ್ವರೂಪ ಅವಕಾಶ ಮಾಡಿಕೊಟ್ಟಿಲ್ಲ. ಹಾಗೆಯೇ ವಿಮರ್ಶಾತ್ಮಕ ಚರ್ಚೆಯನ್ನು ಮುಂದುವರೆಸುವ ಆಸಕ್ತಿಯೂ ಲೇಖಕರಿಗೆ ಇಲ್ಲಿ ಇರುವಂತಿಲ್ಲ. ಆದರೂ ಜೀವನ ಚರಿತ್ರೆ, ಸಾಹಿತ್ಯಕ ಜೀವನ ಚರಿತ್ರೆಗಳ ಸಾಂಪ್ರದಾಯಿಕ ಪರಿಕಲ್ಪನೆಯಿಂದ ದೂರ ಸರಿದು ಮಾಸ್ತಿಯವರ ವ್ಯಕ್ತಿತ್ವದ ಪ್ರಭಾವಲಯದ ಹೊರಗೆ ನಿಂತು ಬರೆದಿದ್ದರೆ, ಈ ಪುಸ್ತಕದ ಅಧಿಕೃತತೆ, ಮೌಲಿಕತೆಗಳು ಇನ್ನಷ್ಟು ಹೆಚ್ಚುತ್ತಿತ್ತೆಂದು ತೋರುತ್ತದೆ. ಏಕೆಂದರೆ ಸ-ವಿಮರ್ಶಕ ಜೀವನ ಚರಿತ್ರೆ ಹಾಗೂ ಸಾಂಸ್ಕೃತಿಕ ಸಂದರ್ಭದ ಪರಿಪ್ರೇಕ್ಷ್ಯದಲ್ಲಿ ರೂಪು ತಳೆಯುವ ಸಾಹಿತ್ಯಕ ಜೀವನ ಚರಿತ್ರೆಗಳಿಗೆ ತನ್ನದೇ ಆದ ಹೊಳಪಿರುತ್ತದೆ.

ಕನ್ನಡದ ಆಸ್ತಿ : *ಎಂ. ರಾಮಚಂದ್ರ*

ಮಾಸ್ತಿ, ರಾಜರತ್ನಂ, ಗೋವಿಂದ ಪೈ ಮುಂತಾದ ಹಳೆಯ ತಲೆಮಾರಿನ ಹಿರಿಯರ ಬಗ್ಗೆ ಪ್ರೀತಿ ನಿಷ್ಠೆಗಳನ್ನಿಟ್ಟುಕೊಂಡು, ತಮಗೆ ಸರಿಯೆನಿಸಿದ ಹತ್ತು ಹಲವು ರೀತಿಗಳಲ್ಲಿ ಆ 'ಪಿತೃಋಣ'ವನ್ನು ತೀರೀಸುತ್ತಾ ಬಂದಿರುವ ಎಂ. ರಾಮಚಂದ್ರ ಅವರು ಮಾಸ್ತಿಯವರ ಬಗ್ಗೆ ಬರೆದಿರುವ ಒಂಬತ್ತು ಕಿರಿಬರೆಹಗಳ ಸಂಕಲನ. 'ಕನ್ನಡದ ಆಸ್ತಿ'. ಬೇರೆ ಬೇರೆ ತಲೆಮಾರುಗಳಿಗೆ ಸೇರಿಯೂ ಸಮಾನ ಮನೋಧರ್ಮಿಗಳಾದ ಇಬ್ಬರ ನಡುವಿನ ಸಂಬಂಧದಲ್ಲಿ ಸವಿಮರ್ಶಕ ಧೋರಣೆಯು ಸಹಜವಾಗಿಯೇ ಗೈರು ಹಾಜರಾಗುವುದರಿಂದ ಪ್ರಸ್ತುತ ಕೃತಿಯು ಮಾಸ್ತಿಯವರ ಸ್ತವನ, ಸ್ಮರಣ ಹಾಗೂ ಸಮರ್ಥನೆಗಳಿಗೆ ಮೀಸಲಾಗಿದೆ. ಎಲ್ಲ ಲೇಖನಗಳು ಉದಯವಾಣಿ, ತರಂಗ, ಕಸ್ತೂರಿ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿದೆಯೆಂಬ ಅಂಶವು ಅವುಗಳ ಶೈಲಿಯನ್ನು ರೂಪಿಸಿದೆ. ಸ್ವತಃ ಮಾಸ್ತಿಯವರೇ ಬರೆದ 'ಟೆಸ್ಟ್‌ಮೆಂಟ್ ಆಫ್ ಫೇತ್' ಎಂಬ ಲೇಖನದ ಕನ್ನಡ ಅನುವಾದ, ಹಾಗೂ 'ಗೌತಮಿ ಹೇಳಿದ ಕಥೆ'ಯ ನಾಟಕ ರೂಪಗಳು ಕುತೂಹಲಕಾರಿಯಾಗಿವೆ. ಉಳಿದಂತೆ ಇದು "ಮಾಸ್ತಿ ನೆನಪಿನ ನಂದಾದೀವಿಗೆಯ ಒಂದು ಕಿರುಬತ್ತಿ".

೧೯೯೨ರಲ್ಲಿ ಪ್ರಕಟವಾಗಿರುವ ವಿಮರ್ಶಾಕೃತಿಗಳಲ್ಲಿ ಸುಮಾರು ಅರ್ಧದಷ್ಟು ಕೃತಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳಾಗಿರುವುದು ಮಹತ್ವದ ಸಂಗತಿ. ಅದು ಪ್ರಚುರ ಪಡಿಸಿರುವ 'ಕನ್ನಡ ಸಾಹಿತ್ಯದ ಪುನರ್ಮೌಲ್ಯೀಕರಣ' ಮತ್ತು 'ಉಪ ಸಂಸ್ಕೃತಿಗಳ ಅಧ್ಯಯನ' ಎಂಬ ಇನ್ನೆರಡು ಯೋಜನೆಗಳ ಜೊತೆಯಲ್ಲಿ ನೋಡಿದಾಗ ಅಕಾಡೆಮಿಯು ಪುಸ್ತಕ ಪ್ರಕಾಶನದ ಕೆಲಸದಲ್ಲಿ ಎಷ್ಟೊಂದು ಬೃಹತ್ ಪ್ರಮಾಣದಲ್ಲಿ ತೊಡಗಿಸಿಕೊಂಡಿದೆಯೆಂಬುದು ಸ್ಪಷ್ಟವಾಗುತ್ತದೆ. ಅವುಗಳನ್ನು ಬಿಡಿಬಿಡಿಯಾಗಿ ಪರಿಶೀಲಿಸುವುದಕ್ಕಿಂತ ಮೊದಲು ಕೆಲವು ಸಾಮಾನ್ಯ ಸಂಗತಿಗಳನ್ನು ಗಮನಿಸುವುದು ಸೂಕ್ತವೆಂದು ತೋರುತ್ತದೆ.

೧. ಈ ಕೃತಿಗಳೆಲ್ಲವೂ ೧೯೯೧ ಅಥವಾ ೧೯೯೨ ರಲ್ಲಿ ಕರ್ನಾಟಕದ ಬೇರೆ ಬೇರೆ ಕಡೆ ನಡೆದ ವಿಚಾರ ಸಂಕಿರಣಗಳು ಅಥವಾ ಅಧ್ಯಯನ ಕಮ್ಮಟಗಳಲ್ಲಿ ಮಂಡಿಸಿದ

ಪ್ರಬಂಧಗಳ ಸಂಕಲನಗಳಾದ್ದರಿಂದ ಅವುಗಳಲ್ಲಿ ಒಂದು ಬಗೆಯ ತಾಜಾತನವನ್ನು ಗುರುತಿಸಬಹುದು.

೨. ವಿಚಾರ ಸಂಕಿರಣಗಳ ಕೇಂದ್ರಬಿಂದು, ಹಿರಿಯರ ಲೇಖಕರೇ ಆಗಿದ್ದರೂ (ಶಂ.ಬಾ. ಜೋಶಿ, ನಿರಂಜನ, ಕಂಬಾರ, ಬೀಚಿ ಇತ್ಯಾದಿ) ಅವರ ಬಗೆಗೆ ಚರ್ಚೆಯಾಗಬೇಕಾದ ವಿಷಯವನ್ನು ಸಾಂಸ್ಕೃತಿಕ ಮಹತ್ವವುಳ್ಳ ಆಯಾಮವೊಂದಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ. ಎಂದರೆ, ಲೇಖಕರ ಬರವಣಿಗೆಯನ್ನು ಕಥೆ, ಕವಿತೆ, ನಾಟಕ ಮುಂತಾಗಿ ವಿಂಗಡಿಸುವ ಪ್ರಬಂಧ ಬರೆಸುವ ಸಾಂಪ್ರದಾಯಕ ವಿಧಾನವನ್ನು ಕೈಬಿಡಲಾಗಿದೆ. ಹಾಗೆಯೇ ಪ್ರತಿಯೊಂದು ಸಂಕಲನದ ಬಿಡಿ ಪ್ರಬಂಧಗಳಿಗೂ ಹೆಚ್ಚು ಖಚಿತವೂ ಸೂಕ್ಷ್ಮವೂ ಆದ ಶೀರ್ಷಿಕೆಗಳನ್ನು ನೀಡಲಾಗಿದೆ. ಹೀಗೆ ಮಾಡುವುದರಿಂದ ಎಲ್ಲ ಲೇಖನಗಳ ವಸ್ತುವನ್ನು 'ನಿರ್ದೇಶಿಸುವುದು'ಹಾಗೆಯೇ ಅವುಗಳಿಗೆ ಒಂದು 'ಒತ್ತನ್ನು'ಕೊಡುವುದು ಅಕಾಡೆಮಿಗೆ ಸಾಧ್ಯವಾಗಿದೆ. ಇದರ ಫಲವಾಗಿ ಲೇಖಕರು ತಮಗೆ ತೋರಿದ್ದನ್ನು ಬರೆಯುವುದರ ಜೊತೆಗೆ ಅಕಾಡೆಮಿ ಸೂಚಿಸಿದ ವಸ್ತುವಿನ ಬಗೆಗೆ ಬರೆಯಬೇಕಾಗುವುದರಿಂದ ಒಟ್ಟು ಪ್ರಯತ್ನಕ್ಕೆ ಸಾಮೂಹಿಕತೆ ಹಾಗೂ ಮೊನಚುಗಳು ಒದಗಿ ಬಂದಿವೆ.

೩. ಸಂಕಿರಣದಲ್ಲಿ ಅಧ್ಯಯನವಾಗುವ ಲೇಖಕರ ಆಯ್ಕೆಗೆ ಪ್ರಶಸ್ತಿ, ಸಾವು ಮುಂತಾದ ಕಾರಣಗಳಿದ್ದರೂ, ಪ್ರಬಂಧಗಳನ್ನು ಬರೆದಿರುವ ಲೇಖಕರ ಆಯ್ಕೆಯಲ್ಲಿ, ಖಚಿತವಾದ ಮನೋಧರ್ಮವನ್ನು ಗುರುತಿಸಬಹುದು. ಈಗಾಗಲೇ ವಿಮರ್ಶಕರೆಂದು ಹೆಸರಾಗಿರುವವರ ಜೊತೆಗೆ, ಬದಲಾಗಿ ಹಲವು ರೀತಿಯ ವಿಮರ್ಶಕರಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶ ಕೊಡಲಾಗಿದೆ. ಅದರ ಹಿನ್ನೆಲೆಯೂ ವೈವಿಧ್ಯದಿಂದ ಕೂಡಿದ್ದು ವಿಮರ್ಶೆಯ'ಅಕಡೆಮಿಕ್' ಗುಣವನ್ನು ಕಡಿಮೆ ಮಾಡುವುದರಲ್ಲಿ ನೆರವಾಗಿದೆ. ಇಂಥ ಪ್ರಯತ್ನಗಳಲ್ಲಿ ಸಹಜವಾಗಿ ಆಗುವಂತೆ ಕೆಲವು ಲೇಖನಗಳ ಗುಣಮಟ್ಟ ಕಡಿಮೆಯೆನಿಸಿದರೂ ಅದೇ ಅದೇ ಮುಖಗಳ ಅದೇ ಅದೇ ಮಾತುಗಳನ್ನು ಕೇಳುವುದಕ್ಕಿಂತ ಇದು ಮೇಲು.

೪. ಪ್ರಸ್ತುತ ಸಮೀಕ್ಷೆಯ ಆಚೆಗೆ ಹೋಗಿ ಹೇಳುವುದಾದರೆ, ವೈಜ್ಞಾನಿಕ ಮನೋಧರ್ಮ, ಕೋಮುವಾದ ಮುಂತಾದ ಸಂಗತಿಗಳನ್ನು ಸಾಹಿತ್ಯದ ಸಂದರ್ಭದಲ್ಲಿಟ್ಟು ವಿಚಾರ ಸಂಕಿರಣಗಳಲ್ಲಿ ಚರ್ಚಿಸುವುದರಿಂದ, ಅಕಾಡೆಮಿಯ ಕೆಲಸಗಳಿಗೆ ಒಂದು ಪ್ರಮಾಣದ ಸಮಾಜ ಸಂಮುಖತೆ ಉಂಟಾಗುತ್ತದೆ.

೫. ಅಕಾಡೆಮಿಯು ಹಲವು ವರ್ಷಗಳಿಂದ ಕಮ್ಮಟಗಳನ್ನು ನಡೆಸುತ್ತ ಬಂದಿದ್ದರೂ ಅವು ಪುಸ್ತಕ ರೂಪದಲ್ಲಿ ಪ್ರಕಟವಾಗಿರುವುದು ಅಪರೂಪ. ಈ ವರ್ಷ ಅಂಥ ಮೂರು-ನಾಲ್ಕು ಪುಸ್ತಕಗಳು ಹೊರಬಂದಿವೆ. ಇಲ್ಲಿ ನಿರ್ದೇಶಕರ ಉಪನ್ಯಾಸಗಳು ಹಾಗೂ ವಿಶೇಷ ಉಪನ್ಯಾಸಗಳ ಜೊತೆಗೆ, ಕಮ್ಮಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಂದ ರಚಿತವಾದ ಕಿರುಬರೆಹಗಳನ್ನು ಸೇರಿಸಿರುವುದು ಸ್ವಾಗತಾರ್ಹವಾದ

ಬೆಳವಣಿಗೆ

ಈ ಎಲ್ಲ ಸಂಕಲನಗಳ ಬಿಡಿಬಿಡಿ ಲೇಖನಗಳನ್ನು ವಿವರವಾಗಿ ಚರ್ಚಿಸುವುದು ಇಲ್ಲಿ ಸಾಧ್ಯವಾಗುತ್ತಿಲ್ಲ. ಆದರೆ ಪ್ರತಿಯೊಂದು ಸಂಕಲನದ ಸ್ವರೂಪ ಮತ್ತು ಗುಣ-ದೋಷಗಳನ್ನು ಕುರಿತು ಕೆಲ ಮಾತುಗಳನ್ನು ಹೇಳುವುದು ಸೂಕ್ತ.

ಸ್ವತಃ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ಅಪರೂಪದ ಕನ್ನಡ ಸಾಹಿತಿ ಗೊರೂರರ ಬರವಣಿಗೆಯನ್ನು ಆ ಚಳುವಳಿಯ ಸಂದರ್ಭದಲ್ಲಿಟ್ಟು ಪರಿಶೀಲಿಸುವ ಪ್ರಯತ್ನ ಕುತೂಹಲಕಾರಿಯಾದುದು. ಇತಿಹಾಸ ತಜ್ಞರಾದ ಎಸ್. ಚಂದ್ರಶೇಖರ್ ಅವರು ಸ್ವಾತಂತ್ರ್ಯ ಚಳುವಳಿಯ 'ಮೈಸೂರು ಆವೃತ್ತಿ'ಯ ಪರಿಮಿತಿಗಳನ್ನು, ಹೊಂದಿರುವ ಗೊರೂರರ ಗಾಂಧೀವಾದವು ತನ್ನ ಹಲವು ವಿವರಗಳಲ್ಲಿ (ಮಹಿಳೆಯರಿಗೆ ಸ್ಥಾನಮಾನ, ಗ್ರಾಮೋದ್ಧಾರ, ದಲಿತ ಸಮಸ್ಯೆ,) ಗಾಂಧೀವಾದವೇ ಆಗಿರಲಿಲ್ಲವೆನ್ನುವ ತೀರ್ಮಾನಕ್ಕೆ ಬರುತ್ತಾರೆ. ಅವರಿಗೆ ಗೊರೂರರ ಬರವಣಿಗೆಯನ್ನು ಸಾಹಿತ್ಯೇತರ ಆಕರದಂತೆ ನೋಡಲು ಸಾಧ್ಯವಾಗಿದೆ. ಪ್ರಾಯಶಃ ಸಾಹಿತ್ಯಕವಾಗಿ ನೋಡಿದಾಗಲೂ ಇಂತಹುದೇ ತೀರ್ಮಾನಗಳು ಸಾಧ್ಯವೇನೋ. ಆದ್ದರಿಂದಲೇ ಇದು ಕೇವಲ ಆಶಯನಿಷ್ಠವಾದ ಮೌಲ್ಯಮಾಪನವಲ್ಲ. ಶಿವರಾಮ ಕಾಡನಕುಪ್ಪೆಯವರ, ಗೊರೂರರ ಕೃತಿಗಳಲ್ಲಿನ ಸುಧಾರಣಾ ವಾದವನ್ನು ಕುರಿತ ಲೇಖನವು ಗಾಂಧೀಜಿಯವರ ಎಡಪಂಥೀಯ ಆಶಯ ಮತ್ತು ಸನಾತನ ಮೌಲ್ಯಪ್ರತಿಪಾದನೆಗಳಲ್ಲಿ ಗೊರೂರರ ಆಯ್ಕೆ ಎರಡನೆಯದಾಗಿತ್ತೆಂದು ಹೇಳಿ, ಅವರ ಧೋರಣೆಗಳ ಮಿತಿಯನ್ನು ಹಲವು ನೆಲೆಗಳಲ್ಲಿ, ಸೋದಾಹರಣವಾಗಿ ತೋರಿಸುತ್ತದೆ. ಇಂಥ ಕಡೆ ಗೊರೂರರು ಏನಾಗಿದ್ದಾರೆ, ಅವರು ಏನು ಹೇಳುತ್ತಾರೆ ಎಂಬ ಸಂಗತಿಗಳು ಮುನ್ನಲೆಗೆ ಬಂದು ಅವರ ಕೃತಿಗಳ ವ್ಯಾಖ್ಯಾನ ಸಾಧ್ಯತೆಗಳು ಕುಗ್ಗಿ ಬಿಡುವುದನ್ನು ಗಮನಿಸಬಹುದು. ಪಾಶ್ಚಾತ್ಯ ಆಲೋಚನೆಗಳಿಂದ ಪ್ರಭಾವಿತವಲ್ಲದ ಗೊರೂರರ ಸುಧಾರಣಾವಾದವು , ಗಾಂಧೀ ನೆಲೆಯದೇ ಆಗಿತ್ತೆಂದು ತೋರಿದರೂ, ಅವರ ಬಹುಪಾಲು ಕೃತಿಗಳ ಹಿಂದೆ ಇರುವುದು ಮೇಲುನೆಲೆಯ ಬದಲಾವಣೆಗಳನ್ನು ಪಡೆದ ಯಥಾಸ್ಥಿತಿವಾದವೇ ಆಗಿತ್ತು. ಜಿ.ಎಸ್. ಅವಧಾನಿಯವರು ಗೊರೂರರ ಬರೆಹದ ಒಳ್ಳೆಯ ಅಂಶಗಳನ್ನು ಗುರುತಿಸುತ್ತಲೇ, ಗಾಂಧಿಯ ಮಿತಿಯೇ ಗೊರೂರರ ಮಿತಿಯು ಆಗಿತ್ತು ಎನ್ನುವ ನಿರ್ಧಾರಕ್ಕೆ ಬರುತ್ತಾರೆ. ಉಳಿದೆರಡು ಲೇಖನಗಳ ಜೊತೆಗೆ ಇದು ವಾಗ್ವಾದವನ್ನು ಬಯಸುತ್ತದೆ.

ಸಿ.ಜಿ. ವೆಂಕಟಯ್ಯ ಮತ್ತು ಹಿ.ಶಿ. ರಾಮಚಂದ್ರಗೌಡರ ಬರೆಹಗಳು ಈ ಕೃತಿಯಲ್ಲಿ ಹೆಚ್ಚು ಮುಖ್ಯವಾದವು. ಎರಡಕ್ಕೂ ಭದ್ರವಾದ ಸೈದ್ಧಾಂತಿಕ ಹಿನ್ನೆಲೆಯಿರುವ ಜೊತೆಗೆ ಗೊರೂರರ ಬಗ್ಗೆ ಸವಿಮರ್ಶಕವಾದ ಗೌರವವಿದೆ. ಗೊರೂರರಲ್ಲಿ ಮೂಡಿಬರುವ ದೇಶೀ ವ್ಯಕ್ತಿತ್ವದ ನೆಲೆಗಳನ್ನು ಹುಡುಕುತ್ತಾ, ಅವರ ಸಂಪ್ರದಾಯಸ್ಥ ಕ್ರಾಂತಿಕಾರೀತನ ಹಾಗೂ ಸ್ವಾತಂತ್ರ್ಯೋತ್ತರ ಮೌನಗಳ ಬಗ್ಗೆ ಬರೆಯುವ ವೆಂಕಟಯ್ಯನವರು ತಾತ್ವಿಕ ಗ್ರಹಿಕೆಯಲ್ಲಿ ತೋರುವ ಆಳವನ್ನು ಅನ್ವಯಿಕ

ವಿಮರ್ಶೆಯಲ್ಲಿ ತೋರುವುದಿಲ್ಲ. ಜಾನಪದ ವಿದ್ವಾಂಸರಾದ ರಾಮಚಂದ್ರಗೌಡರಿಗೆ ಗೊರೂರರ ಸಂಕೀರ್ಣತೆಯನ್ನು ಹುಡುಕುವ ಪರಿಕರಗಳು ಸಹಜವಾಗಿ ದೊರೆತಿವೆ. ಅವರು ಹಲವು ಮಹತ್ವದ ಒಳನೋಟಗಳನ್ನು ನೀಡಿದ್ದಾರೆ. ಗೊರೂರರ ಪರಿಮಿತಿಗಳನ್ನು ಗುರುತಿಸಿ, ಅವರ ಆಕರ್ಷಣೆಯ ರಹಸ್ಯವನ್ನು ಹೇಳುವ ಈ ಮಾತುಗಳನ್ನು ಗಮನಿಸಬಹುದು.

"ಅವರನ್ನು ನಾನು Ethno - Folklorist ಎಂದು ಕರೆಯುತ್ತೇನೆ. ಈತ ಒಟ್ಟು ಪರ್‌ಫಾರ್‌ಮರ್ ಪೊಯಿಟ್ ಅಥವಾ ಕಲ್ಚರಲ್ ಹೆಡ್. ತನ್ನ ಪ್ರೀತಿಯ ಸಂಸ್ಕೃತಿಯ ಒಳಗೆ ನಿಂತು, ಅದರ ಪ್ರದರ್ಶಕ ನೆಲೆಯನ್ನು ಗುರುತಿಸಿ, ಅದನ್ನು ಸಂಬಂಧಾತ್ಮಕವಾಗಿ ವಿವರಿಸುವುದು ಈತನ ಕೆಲಸ. ಈ ರೋಲ್ ಪ್ಲೇಯರ್ ಹೊರಗಿನಿಂದ ಬಂದವನಾಗದೆ ಒಳಗಿನವನಾಗಿರುವುದು ಮತ್ತು ಒಳಗೆ "ಪೇರಂಟ್ ಸ್ಟೇಟ್" ನಲ್ಲಿ ಪ್ರದರ್ಶನಕ್ಕೆ ಅಧಿಕಾರಯುತ ಮುಕ್ತತೆ ಬರುತ್ತದೆ. ಪ್ರಶ್ನೆಗಳು ಎದುರಾಗುವುದಿಲ್ಲ; ಪ್ರಶ್ನೆಗಳೂ ತನ್ನವೆ ಉತ್ತರವೂ ತನ್ನದೆ. ಹಾಗಾಗಿ ಪ್ರೇಕ್ಷಕನನ್ನು ತುಂಬ ಖುಷಿಗೊಳಿಸಬಹುದು. ಅವನ ರುಚಿಯನ್ನು ಹಿಗ್ಗಿಸಬಹುದು" (ಪುಟ ೬೯)

ನಿರೀಕ್ಷಿಸಬಹುದಾಗಿದ್ದಂತೆ ರಾಷ್ಟ್ರೀಯ ಚಳುವಳಿಯ ಪರಿಧಿಯನ್ನು ಮೀರಿ, ಒಟ್ಟು ಗೊರೂರರ ಬರೆಹಗಳ ಬಗ್ಗೆಯೇ ಕೆಲವು ಮಹತ್ವದ ಪ್ರಶ್ನೆಗಳನ್ನು ಎತ್ತುವ ಪ್ರಸ್ತುತ ಕೃತಿಯು ಉತ್ತರಗಳ ಶೋಧನೆಯಲ್ಲಿಯೂ ತೊಡಗಿದೆ.

ಗೊರೂರರ ಬರೆಹದಿಂದ ಹೊರಗುಳಿಯುವ ಸ್ವಾತಂತ್ರ್ಯೋತ್ತರ ಗ್ರಾಮ ಜೀವನವು ಶ್ರೀ ಕೃಷ್ಣಆಲನಹಳ್ಳಿಯವರ ಕಥೆ-ಕಾದಂಬರಿಗಳಲ್ಲಿ ಸಮೃದ್ಧ ಅಭಿವ್ಯಕ್ತಿಯನ್ನು ಪಡೆದಿರುವುದರಿಂದ, ಹಾಗೆಯೇ ಯಂತ್ರ ನಾಗರಿಕತೆಯಿಂದ ತಲ್ಲಣಗೊಂಡ ಹಳ್ಳಿಯ ಬದುಕಿನ ಧಾರಣ ಶೀಲತೆಯ ಹುಡುಕಾಟವೇ ಅವರ ಬರೆಹಗಳ ಕೇಂದ್ರವಾಗಿರುವುದರಿಂದ, ಅವರನ್ನು ಕುರಿತ ಸಂಕಿರಣದಲ್ಲಿ ಸಾಂಸ್ಕೃತಿಕ ಸ್ಥಿತ್ಯಂತರಗಳ ನೆಲೆಗಳನ್ನು ಅರಸಿರುವುದು ಸರಿಯಾಗಿದೆ.

ಆದರೆ ಸಂಕಿರಣದ ನಾಲ್ಕು ಲೇಖನಗಳಲ್ಲಿ ಆಲನಹಳ್ಳಿಯವರ ಬರವಣಿಗೆಯು ಬೇರೆ ಬೇರೆ ಕಾರಣಗಳಿಗಾಗಿ ಕಟುವಾದ ವಿಮರ್ಶೆಗೆ ಗುರಿಯಾಗಿದೆ. ಹಿಂದೊಮ್ಮೆ ಬೆಸಗರಹಳ್ಳಿ ರಾಮಣ್ಣ ಮುಂತಾದವರಿಗಿಂತ ಬಹಳ ಮುಂದಿರುವಂತೆ ಭಾಸವಾಗಿದ್ದ ಶ್ರೀ ಕೃಷ್ಣ ಅವರು ತಮ್ಮ ಸಮಕಾಲೀನ ಹಾಗೂ ಕಿರಿಯರಿಗಿಂತ ನಿರಾಕರಣೆಯಾಗುತ್ತಿರುವುದು, ಅವರ 'ಸಾಮಾಜಿಕ ಬದ್ಧತೆಯ ಅಭಾವ'ದಿಂದಲೋ 'ಕಾಮಕೇಂದ್ರಿತ ದೃಷ್ಟಿಕೇಂದ್ರಿತ ಚಿಂತನವಿಧಾನ'ದಿಂದಲೋ ಅಥವಾ ನಮ್ಮರಂತೆ ಬರೆದಿರುವರೆಂಬ ಕಾರಣದಿಂದಲೋ ಹೇಳುವುದು ಕಷ್ಟ. ಪ್ರಾಯಶಃ ಇದೆಲ್ಲದರ ಜೊತೆಗೆ'ಆರೋಗ್ಯಕರ ಆಶಯ'ಗಳಿಗೂ 'ಸೃಜನಶೀಲ ಸಾಮರ್ಥ್ಯ' ಕ್ಕೂ ಅವಿನಾಸಂಬಂಧ ಇರಬೇಕಿಲ್ಲವೆಂಬ ಸಂಗತಿಯನ್ನು ಗ್ರಹಿಸದೇ ಹೋದುದು ಹೀಗಾಗಲು ಕಾರಣವೆಂದು ತೋರುತ್ತದೆ. ಇಡೀ ಸಂಕಲನದಲ್ಲಿ ಕೃಷ್ಣ ತಮ್ಮ ಉತ್ತಮ

ಕೃತಿಗಳು (ಕಾಡು, ಭುಜಂಗಯ್ಯ) ಅಷ್ಟಾಗಿ ಚರ್ಚೆಗೆ ಬರದೆ, ಕಥೆ, ಕವಿತೆಗಳೇ ಚರ್ಚಿತವಾಗಿರುವುದು ಇದಕ್ಕೆ ಕಾರಣವಾಗಿರಬಹುದು.

ಆಧುನಿಕ ಸಂವೇದನೆಯ ಸ್ವರೂಪದ ಬಗೆಗೆ ಹಲವು ಮಹತ್ವದ ಮಾತುಗಳನ್ನು ಹೇಳಿರುವ ರಹಮತ್ ತರೀಕೆರೆಯವರ ಲೇಖನ, ಕುವೆಂಪುರವರ ಸೂರ್ಯಸಮ ಕಾದಂಬರಿಗಳನ್ನು ಓದಿ ಬೆರಗಾದ ಕಣ್ಣುಗಳಿಂದ ಆಲನಹಳ್ಳಿಯವರ ಕೃತಿಗಳನ್ನು ನೋಡಿದಾಗ ಎಲ್ಲವೂ ಮಂಕುಮಂಕಾಗಿ, ಜಾಳುಜಾಳಾಗಿ ಕಾಣುತ್ತದೆ. ಭುಜಂಗಯ್ಯ ಮರಂಕಿಯಂಥ ಪಾತ್ರಗಳು ಹೊರರೂಪೀ ಆಧುನಿಕತೆಯನ್ನು ಸ್ವೀಕರಿಸಿದವೆಂಬ ಮತ್ತು ಇಲ್ಲಿ ಹೆಣ್ಣಿನ ಬಗ್ಗೆ ಪುರುಷ ಪ್ರಧಾನೀ ದೃಷ್ಟಿಕೋನವಿದೆಯೆಂಬ ಮಾತು ನಿಜವಿರಬಹುದು. ಆದರೆ ನಿಷ್ಠುರ ವಾಸ್ತವವಾದಿ ಕಾದಂಬರಿಕಾರನಿಗೆ ಹೂವಯ್ಯ ಹೆಚ್ಚು ಆದರ್ಶವಾಗಿ, ಭುಜಂಗಯ್ಯನೇ ವಾಸ್ತವ ಸಾಧ್ಯತೆಯಾಗಿ ಕಾಣಬಹುದಲ್ಲವೇ? ಭುಜಂಗಯ್ಯನ ಪತನವು ಹೂವಯ್ಯನ 'ಗೆಲುವಿ' ಗಿಂತಲೂ ಸಹಜವಾಗಿ ಕಾಣಬಹುದಲ್ಲವೇ? ಇದು ಕುವೆಂಪುರವರ ಕಾದಂಬರಿಗಳು ಕನ್ನಡದ ಸರ್ವಶ್ರೇಷ್ಠ ಸೃಜನಶೀಲ ಕೃತಿಗಳೆಂದು ಒಪ್ಪಿಕೊಂಡ ಮೇಲೆಯೂ ಕೃಷ್ಣರ 'ವಿಶ್ವದರ್ಶನ' ಬೇರೆ ಬಗೆಯದಿರಬಹುದೆಂದು ಸೂಚಿಸಲು ಹೇಳಿದ ಮಾತು. ಅವರ ಕೊನೆಯ ಕೃತಿಗಳಾದ 'ಕೋಟೆ', 'ಅರಗಿನ ಅರಮನೆ' ,'ಸುಟ್ಟ ತಿಕದ ದೇವರು' ಕೂಡ ಹೊಸ ಜಗತ್ತುಗಳನ್ನೇ ಕಟ್ಟಿಕೊಡಹೊರಟಿದ್ದವು. ಆಲನಹಳ್ಳಿಯವರ ಕಥೆ ಕಾದಂಬರಿಗಳ ಅತಿ-ಲೈಂಗಿಕ ವಿವರಗಳನ್ನು ಒಟ್ಟು ಮಾಡಿ ಅವೆಲ್ಲದರ ಬಗ್ಗೆ ನಿರಾಕರಣೆಯ ಮಾತನಾಡುವ ನಾಗತಿಹಳ್ಳಿ ಚಂದ್ರಶೇಖರ ಅವರ ನಿಲುವುಗಳು ಸ್ತ್ರೀಪರ ದೃಷ್ಟಿಕೋನದಿಂದ ಸರಿ. ಆದರೆ 'ಕಾಡು' ಕಾದಂಬರಿಯ ನಾಯಕಿ, ಭುಜಂಗಯ್ಯನ ಸುಶೀಲೆ, ಎತ್ತಣ ಮಾಮರ ಎತ್ತಣ ಕೋಗಿಲೆ ?ಯ ಲಲಿತೆಯರೂ ಕೃಷ್ಣ ಸೃಷ್ಟಿಸಿದವರೇ ತಾನೆ ? ಪೂರ್ವಸಿದ್ಧವಾದ ದೃಷ್ಟಿಕೋನದಿಂದ ಸೃಜನಶೀಲ ಕೃತಿಯ ವಿವರಗಳನ್ನು ಗ್ರಹಿಸುವುದು ಎಚ್ಚರವನ್ನು ಬಯಸುವ ಪ್ರಕ್ರಿಯೆ.

ಚಂದ್ರಶೇಖರ ಕಂಬಾರರಿಗೆ ಕೇಂದ್ರ ಅಕಾಡೆಮಿಯ ಬಹುಮಾನ ಬಂದ ಸಂದರ್ಭದಲ್ಲಿ, ಅಕಾಡೆಮಿಯು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅಲ್ಲಿ ಮಂಡಿಸಲಾದ ಐದು ಲೇಖನಗಳು ಮತ್ತು ಕಂಬಾರರು ಮಾಡಿದ ಭಾಷಣ ಈ ಪುಸ್ತಕದಲ್ಲಿವೆ.

ಕಂಬಾರರ ಬರವಣಿಗೆಯನ್ನು ಕುರಿತ ಗಂಭೀರವಾದ ವಿಮರ್ಶೆ ಇನ್ನೂ ನಡೆಯಬೇಕಾಗಿದೆ. ಕೆಲವು ಬಿಡಿಲೇಖನಗಳು ಮಾತ್ರ ಈ ಮಾತಿಗೆ ಅಪವಾದವಾಗಿವೆ. ಅವರ ಜನಪದ ಆಸಕ್ತಿ ಮತ್ತು ಪ್ರಾದೇಶಿಕತೆಗಳ ಬಗ್ಗೆ ವಿಮರ್ಶಕರು ತಳೆದ ಅತಿ ಉತ್ಸಾಹವು, ಅವರ ಬರವಣಿಗೆಯ ನಿಜವಾದ ಮಹತ್ವವು ಮರೆಯಾಗುವಂತೆ ಮಾಡಿದೆ. ನಾಟಕಕಾರ ಕಂಬಾರರು ಮುನ್ನೆಲೆಗೆ ಬಂದು, ಕವಿ ಕಂಬಾರರು ಅದರಲ್ಲೂ ಗೇಯತೆಯ ಸುಳಿವಿಲ್ಲದ ಕವಿತೆಗಳನ್ನು ಬರೆದಿರುವ ಕಂಬಾರರು ವ್ಯಾಖ್ಯಾನದ ತೆಕ್ಕೆಗೆ ಸಿಲುಕದೆ ಹೋಗಿದ್ದಾರೆ. ಈ ಸಂಕಲನದ ಕೆಲವು ಲೇಖನಗಳು ಆ ರೀತಿಯ ಶೋಧನೆಯಲ್ಲಿ ತೊಡಗುತ್ತವೆ.

'ವಸಾಹತುಶಾಹಿ ಅನುಭವ ಮತ್ತು ಕಂಬಾರರ ಸಾಹಿತ್ಯ' ಎನ್ನುವುದು ವಿಚಾರ ಸಂಕಿರಣದ ಆಶಯ. ಆದರೆ ಇಲ್ಲಿನ ಲೇಖನಗಳು ಬಹುಮಟ್ಟಿಗೆ ತಮ್ಮ ಶೀರ್ಷಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿವೆಯೇ ವಿನಾ ಒಟ್ಟು ಆಶಯವನ್ನಲ್ಲ. ಆದ್ದರಿಂದಲೇ ಇಲ್ಲಿ ಜಾನಪದ, ಪುರಾಣ, ಪಠ್ಯ ವಿಶ್ಲೇಷಣೆ, ರಾಜಕಾರಣ, ಸೃಜನಶೀಲತೆ ಮುಂತಾದ ಬೇರೆ ಬೇರೆ ನೆಲೆಗಳಿಂದ ಕಂಬಾರರ ಕೃತಿಗಳನ್ನು ಪರಿಶೀಲಿಸಲಾಗಿದೆ. ಆದರೆ, ವಸಾಹತುಶಾಹಿ ಅನುಭವಕ್ಕೆ ಕಂಬಾರರು ಪ್ರತಿಕ್ರಿಯಿಸಿರುವ ರೀತಿಯ ಅನನ್ಯತೆ ಮತ್ತು ಮಹತ್ವಗಳು ಈ ಸಂಕಲನದಲ್ಲಿ ನಿಚ್ಚಳವಾಗಿ ಮೂಡುವುದಿಲ್ಲ.

ಕಿಕ್ಕೇರಿ ನಾರಾಯಣ ಅವರ ಲೇಖನವು, ಕೃತಿ ವಿಶ್ಲೇಷಣೆಯ ಸ್ವರೂಪವನ್ನು ಕುರಿತಂತೆ ಹಲವು ಮಹತ್ವದ ವಿಷಯಗಳ ಕೋಟನ್ನು ತಗುಲಿ ಹಾಕುವ ಮೊಳೆಯಾಗಿ ಕಂಬಾರರ ಸಾಹಿತ್ಯವನ್ನು ಬಳಸಿಕೊಂಡಿದೆ. ಸಾಹಿತ್ಯ ಕೃತಿಯ ವ್ಯಾಖ್ಯಾನ ಸಾಧ್ಯತೆಯ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುವಾಗಲೂ, ಈ ಲೇಖನವು ಕಂಬಾರರ ಬರವಣಿಗೆಯ ಬಗ್ಗೆ ಹೇಳಿರುವುದು ಕಡಿಮೆ. ಪುರುಷೋತ್ತಮ ಬಿಳಿಮಲೆಯವರ ಲೇಖನವು ಕಂಬಾರರ ಬರವಣಿಗೆಯ 'ಜಾನಪದ ಲಕ್ಷಣ'ಗಳನ್ನು 'ಮೂಲ ಜಾನಪದ'ದೊಂದಿಗೆ ಹೋಲಿಸಿ ಅವು ಪರಸ್ಪರ ಸಂವಾದಿಯಾಗಿಲ್ಲವೆಂದು ಹೇಳಹೊರಡುತ್ತದೆ. ಹೀಗಾಗಿರುವುದು ದೋಷವೆಂಬ ಇಲ್ಲಿನ ಸೂಚನೆಯನ್ನು ಒಪ್ಪಿಕೊಳ್ಳುವುದು ಕಷ್ಟ. ತನ್ನ ಅಂತರಂಗದಲ್ಲಿ ಜಾನಪದ ಮತ್ತು ಆಧುನಿಕತೆಗಳ ಮುಖಾಮುಖಿಯನ್ನು ಒಡ-ಮೂಡಿಸಿಕೊಂಡಿರುವ ಸಂವೇದನೆಯೊಂದು ಅನಿವಾರ್ಯವಾಗಿಯೇ, ತನ್ನ ಒಡಲಿನಲ್ಲಿ ಅವೆರಡರ ಸಂಯೋಜನೆಯಾದ ಬೇರೆ ಏನನ್ನೋ ಹೊಂದಿರುತ್ತದೆ. ಆದರೆ ಇದನ್ನು ಜಾನಪದ ದುರ್ಬಲಿಕೆಯೆಂದೋ ಅಥವಾ ನಗರಪ್ರಜ್ಞೆಯ ಗಾಢವಾದ ಸ್ವೀಕರಣೆಯೆಂದೋ ಕರೆಯುವುದು ಸೃಜನಶೀಲತೆಯ ಸಂಕೀರ್ಣತೆಗಳನ್ನು ಗಮನಿಸದೆ ಆಡಿದ ಮಾತಾಗುತ್ತದೆ. 'ಕಂಬಾರ ಸಾಹಿತ್ಯದಲ್ಲಿ ರಾಜಕಾರಣ' ಎಂಬ ಕೇಶವಶರ್ಮರ ಲೇಖನ ಕೂಡ ಸುದೀರ್ಘವಾದ ಸೈದ್ಧಾಂತಿಕ ಪೀಠಿಕೆಯನ್ನು ಒಳಗೊಂಡಿದೆ. ನೂರಕ್ಕೆ ನೂರರಷ್ಟು ರಾಜಕೀಯ ನಾಟಕಗಳಾದ 'ಜೈಸಿದ ನಾಯಕ' ಮತ್ತು 'ಹರಕೆಯ ಕುರಿ' ಗಳ ಬಗ್ಗೆ ಗಂಭೀರವಾಗಿ ಪ್ರಸ್ತಾಪ ಮಾಡದ ಈ ಲೇಖನವು ತನ್ನ ತಾತ್ವಿಕ ಉತ್ಸಾಹಕ್ಕೆ ಸಮವಾದ ಪ್ರಾಯೋಗಿಕ ವಿಮರ್ಶೆಯನ್ನು ಒಳಗೊಂಡಿಲ್ಲ. ಕಂಬಾರರ ಸಾಹಿತ್ಯವು ಪೌರಾಣಿಕ ಆಶಯಗಳನ್ನು ಒಳಗೊಂಡಿರುವ ಬಗೆಯಲ್ಲಿಯೇ ವಸಾಹತೀಕರಣಕ್ಕೆ ತೋರಿಸಲಾದ ಒಂದು ಪ್ರತಿಕ್ರಿಯೆ ಮಾದರಿ ಇರುವುದನ್ನು ಕೆ.ಎಲ್. ಗೋಪಾಲಕೃಷ್ಣಯ್ಯನವರು ಸವಿವರವಾಗಿ ಗುರುತಿಸಿದ್ದಾರೆ. ಎಚ್.ಎಸ್. ಶಿವಪ್ರಕಾಶ್ ಅವರ ಲೇಖನವು ಕೇವಲ ಕಂಬಾರರ ಬರೆಹಕ್ಕೆ ತೋರಿಸಿದ ಸೃಜನಶೀಲ ಪ್ರತಿಕ್ರಿಯೆಯಾಗಿರದೆ ಅದರ ಕೆಲವು ಪ್ರಧಾನ ಲಕ್ಷಣಗಳನ್ನು, ಹಾಗೆಯೇ ಪರಿಮಿತಿಗಳನ್ನು ಗುರುತಿಸುವ ಗಂಭೀರ ಪ್ರಯತ್ನವಾಗಿದೆ. ಕಂಬಾರರಲ್ಲಿರುವ ಎರಡು ಜಗತ್ತನ್ನು ಹಾಗೂ ಅವೆರಡರ ನಡುವಿನ ಸಂಯೋಜನೆಯನ್ನು ಗುರುತಿಸಿರುವುದು ಮಹತ್ವದ ಸಂಗತಿ. ತಮ್ಮ ಉಪನ್ಯಾಸದಲ್ಲಿ ಕಂಬಾರರು ಹೇಳಿಕೊಂಡಿರುವ ಅನುಭವವಿವರಗಳನ್ನು ಕೇವಲ ರೋಚಕವೆಂದು ಪರಿಗಣಿಸದೆ, ವಿಮರ್ಶಾತ್ಮಕವಾದ ವ್ಯಾಖ್ಯಾನಕ್ಕೆ ಒಳಪಡಿಸುವ ಅಗತ್ಯವಿದೆ.

ವಿಚಾರ ಸಂಕಿರಣಗಳ ಫಲಿತವಾದ ಪುಸ್ತಕಗಳಲ್ಲಿ 'ಶಂ.ಬಾ. ಜೋಶಿಯವರ ಸಂಸ್ಕೃತಿ' ಚಿಂತನೆಯನ್ನು ಕುರಿತು ಪುಸ್ತಕವು ಗಮನೀಯವಾದುದು. ಶಂ.ಬಾರ ಬರವಣಿಗೆಯು ಒಡ್ಡುವ ತೊಡಕುಗಳನ್ನು ಪ್ರೀತಿ, ಗೌರವಗಳಿಂದ ಪರಿಹರಿಸಿಕೊಂಡಿರುವ ಕಿರಿಯ ತಲೆಮಾರಿನ ಚಿಂತಕರ ಮಹತ್ವದ ಆಲೋಚನೆಗಳು ಇಲ್ಲಿ ದಾಖಲೆಯಾಗಿವೆ. ಈ ವಿದ್ವಾಂಸರೆಲ್ಲರೂ ಹಲವು ವರ್ಷಗಳಿಂದ ಶಂ.ಬಾ. ಚಿಂತನೆಯ ವಿದ್ಯಾರ್ಥಿಗಳಾಗಿರುವುದರಿಂದ ಈ ಲೇಖನಗಳು ಸೆಮಿನಾರಿನ ಸಂತೆಗೆ ನೆಯ್ದ ಮೂರು ಮೊಳ ಬಟ್ಟೆಯ ಚೂರುಗಳಾಗಿಲ್ಲ. ಹಾಗೆಯೇ ಅಭಿಮಾನಿಗಳ ಬಳಗದ ಸದಸ್ಯರು ಮಾಡುವ ಭಜನೆಗಳೂ ಇಲ್ಲಿಲ್ಲ. ಬದಲಾಗಿ ವಿಮರ್ಶಕ ದೂರವೊಂದನ್ನು ಉಳಿಸಿಕೊಂಡೇ ಶಂ.ಬಾ.ರ ಅರ್ಥಗ್ರಹಣಕ್ಕೆ ತೊಡಗಿರುವ ಪ್ರಯತ್ನಗಳು ಇಲ್ಲಿವೆ.

ಎಂ. ಎಂ. ಕಲ್ಬುರ್ಗಿಯವರ ಅಧ್ಯಕ್ಷ ಭಾಷಣವೂ ಸೇರಿದಂತೆ ಇಲ್ಲಿ ಆರು ಲೇಖನಗಳಿವೆ. ಕೆ.ವಿ. ನಾರಾಯಣ ಅವರ ಲೇಖನವು, ಶಂ.ಬಾರವರ ಅಧ್ಯಯನ ವಿಧಾನವನ್ನು ಅನನ್ಯವಾಗಿಸುವ ಸಂಗತಿಯನ್ನು ಅವರು ಭಾಷೆಯನ್ನು ಗ್ರಹಿಸಿದ ರೀತಿಯಲ್ಲಿ ಗುರುತಿಸುತ್ತದೆ. ಸಂಸ್ಕೃತಿಯ ಅಸ್ತಿತ್ವವನ್ನು ಅದರ ಭಾಷಿಕ ರೂಪದಲ್ಲಿಯೇ ಕಂಡುಕೊಳ್ಳುವ ಈ ಬಗೆಯು, ಭಾಷೆಗಿರುವ ಚಲನಶೀಲ ಸಾಧ್ಯತೆಗಳನ್ನು ನಿರಾಕರಿಸುವುದೆಂದು ಹೇಳುವುದರ ಮೂಲಕ ಅವರು ಕಲ್ಬುರ್ಗಿಯವರ ಅನಿಸಿಕೆಗಳಿಗೆ ಹತ್ತಿರವಾಗುತ್ತಾರೆ. 'ಕಂನಾಡು' ಪರಿಕಲ್ಪನೆಯ ಮೂಲಕ ಶಂ.ಬಾರವರು ಸಂಸ್ಕೃತಿಯ ಪುನಾರಚನೆ ಮಾಡುವ ಬಗೆಯನ್ನು ಗುರುತಿಸುವ ಮಲ್ಲೇಪುರಂ ವೆಂಕಟೇಶ್ ಅವರ ಲೇಖನವು, ಮಹತ್ವದ ವಿವರಣಾತ್ಮಕವಾದ ಸಂಗತಿಗಳನ್ನು ನೀಡುತ್ತದೆ. ಆದರೆ ಇಡೀ ಲೇಖನದಲ್ಲಿ ಸಮರ್ಥನೆಯ ಧಾಟಿಯೊಂದಿದೆ. ಜೋಶಿಯವರ ವಿಚಾರಗಳನ್ನು ಭಾಷಾಶಾಸ್ತ್ರದ ನೆಲೆಯಿಂದ ಗಂಭೀರವಾಗಿ ಪರಿಶೀಲಿಸುವ ಕೃಷ್ಣಪರಮೇಶ್ವರ ಭಟ್ಟರು ಕೂಡ ಮೌಲಿಕವಾದ ಅನುಮಾನಗಳನ್ನು ಎತ್ತುತ್ತಾರೆ. ವೈಚಾರಿಕ ಆಕೃತಿಗಳ ಚಲನಶೀಲತೆಯನ್ನು ನಿರಾಕರಿಸಿ, ಅವು ತಮ್ಮ ಮೂಲ, ಉದ್ದೇಶಿತ ರೂಪದಲ್ಲಿ ಸ್ವೀಕೃತವಾಗುವುದೆನ್ನುವುದರ ಬಗ್ಗೆಯೇ ಅವರ ಆಕ್ಷೇಪಣೆಯಿದೆ. ಇತಿಹಾಸ ಮತ್ತು ಮಾನವಶಾಸ್ತ್ರಗಳ ನೆಲೆಯಿಂದ ಹೊರಡುವ ಗುರುಮೂರ್ತಿಯವರು, ಜೋಶಿಯವರನ್ನು ಪ್ರಸರಣಾವಾದಿ ಮಾನವಶಾಸ್ತ್ರಜ್ಞರೆಂದು ಗುರುತಿಸುತ್ತಾರೆ. ಇಲ್ಲಿ ಶಂ.ಬಾ ವಿಚಾರಗಳ ವಿವರಣೆಯಿದೆ, ವಿಮರ್ಶೆಯಲ್ಲ. ಬಸವರಾಜ ಕಲ್ಗುಡಿಯವರ ಲೇಖನ ಬಹಳ ಮುಖ್ಯವಾದುದು. ಅವರು ಮಾನವ ಸಂಸ್ಕೃತಿಯನ್ನು ಕುರಿತ ಶಂ.ಬಾರವರ ವಿಚಾರಗಳನ್ನು ಅವುಗಳ ಸೂಕ್ಷ್ಮತೆಗೆ ಧಕ್ಕೆ ಬರದಂತೆ ಸಂಗ್ರಹಿಸುವುದಲ್ಲದೆ, ಅವರೊಂದಿಗಿರುವ ನಮ್ಮೆಲ್ಲರ ಭಿನ್ನಾಭಿಪ್ರಾಯಗಳನ್ನು ಹೀಗೆ ಧ್ವನಿಸುತ್ತಾರೆ :

"ಯಾವುದೇ ತಾತ್ವಿಕ ಆಕೃತಿಗಳು ಸಾರ್ವತ್ರಿಕ ಮಾದರಿಗಳಾದರೆ ಅವುಗಳನ್ನು ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ - ಆಳವಾಗಿ ಇಟ್ಟು ನೋಡಲು ಸಾಧ್ಯವಾಗುವುದಿಲ್ಲ. ನಾವೆಲ್ಲರೂ ಪ್ರಗತಿಪರ ಸಾರ್ವತ್ರಿಕ ತಾತ್ವಿಕ ಆಶಯಗಳ ಪರವಾದವರೇ ಆದರೂ,-ಸಂಸ್ಕೃತಿ ಗ್ರಹಿಕೆಯ ಈ ಮಾದರಿ ಅಷ್ಟು

ಪರಿಣಾಮಕಾರಿಯಲ್ಲವೆಂದೇ ನನ್ನ ನಂಬಿಕೆ". ಹೀಗೆ ಶಂ.ಬಾರವರ ಅರ್ಥಗ್ರಹಣದೊಂದಿಗೆ ಅವರ ಜೊತೆಯಲ್ಲಿ ಮುಖಾಮುಖಿಯಾಗಲು ಸಿದ್ಧವಾಗಿರುವ ಲೇಖನಗಳಿಂದ ಈ ಪುಸ್ತಕದ ಮಹತ್ವ ಹೆಚ್ಚಿದೆ.

ಪ್ರಗತಿಶೀಲ ಸಾಹಿತಿಗಳೆಂದು ಹೆಸರಾದ ಬಸವರಾಜ ಕಟ್ಟೀಮನಿ, ನಿರಂಜನ, ಬೀಚಿ ಮತ್ತು ದಿನಕರ ದೇಸಾಯಿಯವರ ಸಾಹಿತ್ಯವನ್ನು ಕುರಿತ ನಾಲ್ಕು ಪುಸ್ತಿಕೆಗಳು, ಒಂದರ್ಥದಲ್ಲಿ ಮರುಪರಿಶೀಲನೆಯ ಪ್ರಯತ್ನಗಳು. ನವ್ಯದ ಉತ್ಕರ್ಷದ ದಿನಗಳಲ್ಲಿ ಸಂಪೂರ್ಣ ಅನಾದರಕ್ಕೆ ಪಾತ್ರರಾದರೂ, ತಮ್ಮ ಬರವಣಿಗೆಯನ್ನು ಮುಂದುವರಿಸಿಕೊಂಡು ಬಂದ ಈ ಲೇಖಕರು, ದಲಿತ ಬಂಡಾಯ ಸಾಹಿತ್ಯದ ಪ್ರತಿಪಾದಕರಿಗೆ ತಾವು ಕಟ್ಟ ಬಯಸುವ ಪರಂಪರೆಯ, ತಮಗಿಂತ ಹಿಂದಿನ ಕೊಂಡಿಗಳಂತೆ ಭಾಸವಾಗುವುದು ಸಹಜವಾಗಿಯೇ ಇದೆ. ಆದರೆ ಈ ಲೇಖಕರನ್ನು ಕೇವಲ ನವ್ಯರೊಂದಿಗೆ ಹೋಲಿಸದೆ, ಕುವೆಂಪು, ಕಾರಂತ, ಮಾಸ್ತಿ, ಬೇಂದ್ರೆಯವರಂತಹ ನವೋದಯದ ಹಿರಿಯರೊಂದಿಗೆ ಹೋಲಿಸಿದರೆ ಮಾತ್ರ ನಿಜವಾದ ಮೌಲ್ಯಮಾಪನ ಸಾಧ್ಯವಾಗುತ್ತದೆ. ಈ ಸಂಕಲನಗಳ ಪ್ರಬಂಧಕಾರರನ್ನು ಆರಿಸುವಾಗ ಒಂದು ಬಗೆಯ ಪ್ರಾದೇಶಿಕತೆ ಹಾಗೂ ಲೇಖಕ ಪರವಾದ ನೆಲೆಗಳು ಕೆಲಸ ಮಾಡಿರುವಂತೆ ತೋರುತ್ತದೆ. ಎಂದರೆ ದಿನಕರ ದೇಸಾಯಿಯವರ ಬಗ್ಗೆ ಉತ್ತರ ಕನ್ನಡ ಜಿಲ್ಲೆಯವರು ಬರೆಯಬೇಕು, ಬೀಚಿಯವರ ಬಗ್ಗೆ ಬಳ್ಳಾರಿಯವರು, ಅನುಪಮಾ ಬಗ್ಗೆ ಮಹಿಳೆಯರು ಬರೆಯಬೇಕಲ್ಲವೇ ಎಂಬಂಥ ನೆಲೆಗಳು ವಸ್ತುನಿಷ್ಠ ಆಲೋಚನೆಗೆ ಅವಕಾಶ ಮಾಡಿಕೊಡುವ ಬದಲು, ಸಮರ್ಥನೆ ಹಾಗೂ ಆರಾಧನೆಗಳ ನೆಲೆಯನ್ನು ರೂಪಿಸಿ ಬಿಡುತ್ತವೆ.

ಈ ಸಂಕಲನಗಳಲ್ಲಿ ಬಂದಿರುವ ಪ್ರತಿಯೊಂದು ಲೇಖನದ ಪ್ರಸ್ತಾಪವು ಈ ಸಮೀಕ್ಷೆಯಲ್ಲಿ ಅಸಾಧ್ಯ ಹಾಗೂ ಅನಗತ್ಯ. ಆದರೆ ಬಹುಪಾಲು ಲೇಖನಗಳು, ಆಯಾ ಸಾಹಿತಿಗಳು ತಮ್ಮ ಕಾಲದ ಸಾಂಸ್ಕೃತಿಕ ಸನ್ನಿವೇಶದಲ್ಲಿ ವಹಿಸಿದ ಪಾತ್ರದ ವಿಶ್ಲೇಷಣೆಯ ಬಗ್ಗೆ ತೋರಿಸುವ ಕಾಳಜಿಯನ್ನು, ನಿರ್ದಿಷ್ಟ ಸಾಹಿತ್ಯ ಕೃತಿಗಳ ಮೌಲ್ಯಮಾಪನದಲ್ಲಿ ತೋರಿಸುವುದಿಲ್ಲ. ಅಥವಾ ಅವರ ಸಮಗ್ರ ಸಾಹಿತ್ಯದ ಮೌಲ್ಯಮಾಪನ ನಡೆಯುತ್ತಿದೆಯೆನ್ನಿಸಿದರೂ ಎರಡು ಬಗೆಯ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಮೊದಲನೆಯದಾಗಿ ಪ್ರತಿಯೊಬ್ಬ ಪ್ರಬಂಧಕಾರನೂ ತನ್ನದೇ ಆದ ಮಾನದಂಡಗಳೊಂದಿಗೆ ಚರ್ಚೆಯಲ್ಲಿ ಪ್ರವೇಶಿಸುತ್ತಾನೆ. ಹಾಗೆಯೇ ಬಹುಪಾಲು ಲೇಖನಗಳು ಅನಿವಾರ್ಯವೆನಿಸುವಂತೆ ಆಶಯಕೇಂದ್ರಿತವಾದ ಚರ್ಚೆಯಲ್ಲಿ ತೊಡಗುತ್ತವೆ. ಬೆಲೆಕಟ್ಟುವಿಕೆಗೆ ಅನಿವಾರ್ಯವಾದ ತೌಲನಿಕ ವಿಧಾನಕ್ಕೂ ಇಲ್ಲಿ ಅವಕಾಶ ದೊರೆಯುವುದಿಲ್ಲ. ಉದಾಹರಣೆಗೆ ಬೀಚಿಯವರಂಥ ಬರಹಗಾರರನ್ನು ಅವರ ಪರಂಪರೆಗೆ ಸೇರುವ ಕೈಲಾಸಂ, ನಾ. ಕಸ್ತೂರಿ, ಲಾಂಗೂಲಾಚಾರ್ಯ, ನಾಡಿಗೇರ್, ರಾಶಿ ಮುಂತಾದ ಲೇಖಕರ ಜೊತೆಯಲ್ಲಿಟ್ಟು ಹೋಲಿಸದೆ ಹೋದಾಗ ವಿಮರ್ಶೆಗೆ ಸಮಗ್ರತೆ ಬರುವುದಿಲ್ಲ. ಅದೂ ಅಲ್ಲದೆ ನಿರಾಕರಿಸಲೆಂದಾದರೂ

ವಿಮರ್ಶೆಯ ಪರಂಪರೆ ಹಾಗೂ ಪರಿಭಾಷೆಗಳ ಜೊತೆಯಲ್ಲಿ ಸಂಪರ್ಕವಿಟ್ಟುಕೊಳ್ಳದೆ ಹೋದಾಗ ಅರ್ಥಪೂರ್ಣವಾದ ವಾಗ್ವಾದಗಳು ಅಸಾಧ್ಯವಾಗುತ್ತವೆ.

ಹೊಸ ನೀರು ಕೂಡ ವಿಮರ್ಶೆಯ ಹೊಳೆಗೆ ಸೇರಬೇಕೇ ಹೊರತು ಕೆರೆಗಳಾಗಿ ಉಳಿಯಬಾರದು. ಬಂಡಾಯ ಸಾಹಿತ್ಯ ವಿಮರ್ಶಕರು ಬರೆಯಬಹುದಾದ ಸಾಹಿತ್ಯ ಚರಿತ್ರೆಯಲ್ಲಿಯೂ, ಕುವೆಂಪು, ಬೇಂದ್ರೆಯವರು ನಿರಂಜನ, ಕಟ್ಟೀಮನಿಯವರಿಗಿಂತ ಶ್ರೇಷ್ಠರೆಂದು ಪರಿಗಣಿತರಾಗಬಹುದಲ್ಲವೇ? ಅಂಥ ತೀರ್ಮಾನಕ್ಕೆ ಇರುವ ಕಾರಣಗಳ ಮೀಮಾಂಸೆಯೂ ಇಂಥ ಲೇಖನಗಳಲ್ಲಿ ಇರಬೇಕಲ್ಲವೇ? ಈ ಸಂದರ್ಭದಲ್ಲಿ ಈ ಮಾತುಗಳನ್ನು ಹೇಳುವ ಅಗತ್ಯವೆಂದರೆ ಬಿಡಿ ಬಿಡಿ ಲೇಖಕರ ಬಗ್ಗೆ ನಡೆಯುವ ಸಂಕಿರಣಗಳಲ್ಲಿಯೂ ಒಟ್ಟು ಸಾಹಿತ್ಯ ಚರಿತ್ರೆಯ ಪರಿಪ್ರೇಕ್ಷ್ಯವನ್ನು ಉಳಿಸಿಕೊಳ್ಳುವ ಕೆಲಸವನ್ನು ಲೇಖಕರು ಹಾಗೂ ಸಂಯೋಜಕರು ಗಮನಿಸುವ ಅಗತ್ಯವಿದೆಯೆಂದು. ಇದೆಲ್ಲದರ ನಡುವೆಯೂ ಹಲವು ಲೇಖನಗಳು ಮಹತ್ವದ ಒಳನೋಟಗಳನ್ನು ನೀಡುವುದರಲ್ಲಿ ಯಶಸ್ವಿಯಾಗುತ್ತವೆ. 'ಅಲಕ್ಷಿತ' ಲೇಖಕರ ಅಧ್ಯಯನ ನಡೆಸುವ ಈ ಪ್ರಯತ್ನಗಳು ಅಪೇಕ್ಷಣೀಯವೆಂಬುದರ ಬಗೆಗಂತೂ ಎರಡು ಮಾತಿಲ್ಲ.

ಆಕಾಶವಾಣಿ ಮತ್ತು ಸಾಹಿತ್ಯ ಅಕಾಡೆಮಿಗಳ ಸಹಯೋಗದಿಂದ ಪ್ರಕಟವಾಗಿರುವ ೧೯೯೦ ಮತ್ತು ೧೯೯೧ರ ಸಾಹಿತ್ಯ ಸಮೀಕ್ಷೆಗಳ ಬಗ್ಗೆಯೂ ಇಲ್ಲಿಯೇ ಕೆಲವು ಮಾತುಗಳನ್ನು ಬರೆಯಬಹುದು. ಪ್ರಸಾರ-ಪ್ರಕಟಣೆ ಯೋಜನೆಯು ಪ್ರಮುಖ ಸಾಹಿತ್ಯ ಪ್ರಕಾರಗಳ ಬಗೆಗಿನ ಮೂವತ್ತು ನಿಮಿಷಗಳ ಅವಧಿಯ ಪ್ರಸಾರ ಭಾಷಣವು ನಂತರ ಅದರದೇ ವಿಸ್ತೃತವಾದ ಲಿಖಿತ ರೂಪವನ್ನು ಒಳಗೊಳ್ಳುತ್ತದೆ. ಇಂತಹ ಬರೆಹಗಳಿಗೆ ಸಮೀಕ್ಷೆಯ ಸ್ವರೂಪವು ಸಹಜವಾಗಿಯೇ ಒದಗಿ ಬರುತ್ತದೆ. ಪುಸ್ತಕಗಳ ಉಪಲಬ್ಧತೆ, ಲೇಖಕರ ಅಭಿರುಚಿ ಪರಿಶ್ರಮ ಹಾಗೂ ಪ್ರತಿಭೆಗಳನ್ನು ಅವಲಂಬಿಸಿ ಇಂಥ ಲೇಖನಗಳ ಯೋಗ್ಯತೆಯು ಸಿದ್ಧವಾಗುತ್ತದೆ. ಮಾಹಿತಿಯಂತೂ ಎಲ್ಲ ಕಡೆಯೂ ಇರುತ್ತದೆ. ಈ ಬಗೆಯ ಬರೆವಣಿಗೆ ವಿಮರ್ಶಕರಿಗೆ, ಸಾಹಿತ್ಯದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಹಾಗೆ, ರೇಡಿಯೋದಲ್ಲಿ ಭಾಷಣ ಕೇಳಿದ ಸಾರ್ವಜನಿಕರನ್ನು ತಲುಪುವುದಿಲ್ಲ. ಆ ದೃಷ್ಟಿಯಲ್ಲಿ ಆಕಾಶವಾಣಿಯು ದೂರದರ್ಶನಕ್ಕಿಂತ ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸುತ್ತಿದೆ. ಹಿಂದೊಮ್ಮೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಮಾಡುತ್ತಿದ್ದ ಕೆಲಸದಲ್ಲಿ ಈಗ ಅಕಾಡೆಮಿ ಮತ್ತು ಆಕಾಶವಾಣಿ ತೊಡಗಿವೆ.

ಈ ವರ್ಷದ ವಿಮರ್ಶಾ ಕೃತಿಗಳಲ್ಲಿ ಬಂಡಾಯ ಸಾಹಿತ್ಯವನ್ನು ತನ್ನ ಕೇಂದ್ರದಲ್ಲಿ ಹೊಂದಿರುವ ಎರಡು ಸಂಕಲನಗಳಿವೆ. ಮೊದಲನೆಯದು 'ಸಾಹಿತ್ಯ ಮತ್ತು ಸಮೂಹ ಪ್ರಜ್ಞೆ'. ಇದು ಚಿತ್ರದುರ್ಗದಲ್ಲಿ ೧೯೯೦ ರಲ್ಲಿ ನಡೆದ 9ನೇ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಲೇಖನಗಳ ಸಂಕಲನ. (ಸಂ. ಸಿ. ಎಂ. ಮಹಾದೇವ, ಗುಡಿಹಳ್ಳಿ ನಾಗರಾಜ ಮತ್ತು ಎಲ್. ರಮೇಶ) ಎರಡನೆಯದು ಡಾ. ಬಸವರಾಜ ಸಬರದ ಅವರು ಕನ್ನಡ ಸಾಹಿತ್ಯ ಪರಿಷತ್ತಿಗಾಗಿ

ಸಂಪಾದಿಸಿಕೊಟ್ಟಿರುವ, ಬಂಡಾಯ ಸಾಹಿತ್ಯ ಚಳುವಳಿಯ ಮೊದಮೊದಲ ಹಂತದಿಂದ ಇಂದಿನವರೆಗೆ ಬಂದಿರುವ ಲೇಖನಗಳ ಸಂಗ್ರಹ.

ಎರಡೂ ಕೃತಿಗಳಲ್ಲಿ ಕಂಡು ಬರುವುದು ಅನೇಕರಿಂದ ಮೂಡಿ ಬಂದಿರುವ ಪರಸ್ಪರ ಪೂರಕವಾದ ಆಶಯಗಳು ಮಾತ್ರ. ಸಾಹಿತ್ಯಕ ಚಳುವಳಿಗಳು ಕೃತಿ ರಚನೆಯಲ್ಲಿ ವೈವಿಧ್ಯಮಯತೆಯನ್ನು ಹೊಂದಿದ್ದರೂ, ವೈಚಾರಿಕತೆಯ ನೆಲೆಯಲ್ಲಿ ಒಮ್ಮತವನ್ನು ಹೊಂದಿರುವಂತೆ ತೋರುವುದು ಎಲ್ಲ ಚಳುವಳಿಗಳಿಗೂ ಸಹಜವಾದ ಲಕ್ಷಣ. ನವ್ಯ, ಪ್ರಗತಿಶೀಲ, ನವೋದಯಗಳು ಈ ಮಾತಿಗೆ ಅಪವಾದವಲ್ಲ. ಬಂಡಾಯದ ವ್ಯಾಪ್ತಿಯಲ್ಲಿ ಬರುವರೆಂದು ಹೇಳಲಾದ ಸೃಜನಶೀಲ ಸಾಹಿತಿಗಳು ಇಂದು ಹಲವು ಬಗೆಯಲ್ಲಿ ಮೌಲಿಕವಾಗಿ ಬರೆಯುತ್ತಿದ್ದಾರೆ. ಶಿವಪ್ರಕಾಶ್, ಸಿದ್ದಲಿಂಗಯ್ಯ, ಮಹಾದೇವ, ಬೊಳುವಾರು, ಕುಂ.ವೀ. ಮುಂತಾದವರು ತಮ್ಮದೇ ವಿಶಿಷ್ಟ ನೆಲೆಗಳನ್ನು ಕಂಡುಕೊಳ್ಳುತ್ತಿದ್ದಾರೆ. ಆದರಲ್ಲೂ ಕೇವಲ ಸಾಹಿತ್ಯಕವಾಗಿ ಉಳಿಯದೆ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳ ಪಡೆದುಕೊಳ್ಳಬೇಕೆಂದು ಹಂಬಲಿಸುವ ಚಳುವಳಿಯಲ್ಲಿ ವೈಚಾರಿಕತೆಯ ನೆಲೆಗಳು ಕ್ರಿಯೆಗೆ ಪೂರಕವಾಗಿಯೋ ಅಥವಾ ಅದರ ಅಭಾವದಲ್ಲಿಯೋ ಮೂಡಿ ಬರುವುದು, ಒಮ್ಮುಖವಾಗಿ ಚಲಿಸುವುದು. ಕೇವಲ ಸಹಜ. ಚಂಪಾರವರು ಸರಿಯಾಗಿಯೇ ಹೇಳಿರುವಂತೆ "ನಮ್ಮ ಬಂಡಾಯಕ್ಕೆ ಹೀಗೆ ಎರಡು ಆಯಾಮಗಳಿವೆ -ಒಂದು ಅಕ್ಷರದ ಆಯಾಮ, ಇನ್ನೊಂದು ಕ್ರಿಯೆಯ ಆಯಾಮ, ಒಂದನ್ನೊಂದು ಸದಾ ಭೇದಿಸುತ್ತ, ಒಂದನ್ನೊಂದು ಸದಾ ಬೆಳಗುತ್ತಲೇ ಇರುವ ಆಯಾಮಗಳಿವು.... ನಮ್ಮ ಅಕ್ಷರಗಳು ಕೇವಲ ಘೋಷಣೆಗಳಾಗಿ ಜನರನ್ನು ತಲುಪದೆ ಅವು ಕಲೆಯಾಗಿ ಜನರ ಎದೆಗಳನ್ನು ಮಿಡಿಯಬೇಕಾಗಿದೆ.... ಈ ನಿಟ್ಟಿನಲ್ಲಿ ನಮ್ಮ ಬರಹಗಾರರು ಸಾಹಿತ್ಯ ಕಲೆಗೆ ವಿಶಿಷ್ಟವಾದ ಪರಿಕರಗಳ ಬಗ್ಗೆ ಪರಿಜ್ಞಾನ ಹೊಂದಿರಬೇಕಾಗುತ್ತದೆ. ಮೇಲು ಮೇಲಿನ ಸಂಘರ್ಷಗಳನ್ನು, ವೈರುಧ್ಯಗಳನ್ನು ಚಿತ್ರಿಸುವುದರ ಜೊತೆಗೇ ಅಂತರಂಗದ ಹೋರಾಟಗಳನ್ನು ಸೂಕ್ಷ್ಮವಾಗಿ ಚಿತ್ರೀಸಬೇಕಾಗಿದೆ." ಸ್ವತಃ ಸೃಜನಶೀಲರಾದ ಪಾಟೀಲರು ಮತ್ತು ಅವರಂಥ ಲೇಖಕರು ಮೊದಲಿನಿಂದಲೇ ಕಂಡುಕೊಂಡ ಈ ಸತ್ಯವನ್ನು, ಈಗ ಬಂಡಾಯದ ಪರವಾದ ಗಂಭೀರ ವಿಮರ್ಶಕರೂ ಕಂಡುಕೊಳ್ಳುತ್ತಿರುವುದಕ್ಕೆ ಇಲ್ಲಿನ ಹಲವು ಲೇಖನಗಳು ಸಾಕ್ಷಿ ಒದಗಿಸುತ್ತವೆ. ಬರಗೂರು ರಾಮಚಂದ್ರಪ್ಪನವರ ಲೇಖನದ ಶೀರ್ಷಿಕೆ'ಬರೀ ಹೊಗಳಿಕೆ ಬೇಡ' ಎಂದಿರುವುದು ಗಮನಾರ್ಹವಾಗಿದೆ. ನೆಲದಲ್ಲಿ ಬೆಳೆದು ಬಂದಿದ್ದನ್ನೆಲ್ಲ ಗಟ್ಟಿ ಕಾಳೆಂದು ಜೋಪಾನ ಮಾಡಬೇಕಾದ ಅಗತ್ಯ ಕಡಿಮೆಯಾದಂತೆ ಸ್ವವಿಮರ್ಶೆ ಸಾಧ್ಯವಾಗುತ್ತದೆ. ಶಿವಪ್ರಕಾಶ್ ಅವರು ತಮ್ಮ 'ಆಕೃತಿಯ ನಿರಾಕೃತಿ ' ಎಂಬ ಲೇಖನದಲ್ಲಿ ಮಾಡಿರುವ ಹಾಗೆ ಹಳೆಯದರ, (ನವ್ಯ) ಸೈದ್ಧಾಂತಿಕವಾದ ವಿಮರ್ಶೆಯನ್ನು ಮಾಡುವುದು ಸಾಧ್ಯವಾಗುತ್ತದೆ. ಆದರೆ ಶಿವಪ್ರಕಾಶ್ ಅವರೂ ಒಪ್ಪಿಕೊಳ್ಳುವಂತೆ ಯಾವುದೇ ಸಂಪ್ರದಾಯದ ತಾತ್ವಿಕತೆ ಅಥವಾ ವಿಮರ್ಶೆಯನ್ನು ಖಂಡಿಸುವಂತೆ, ಸೃಜನಶೀಲ ಕೃತಿಗಳನ್ನು ಅಲ್ಲಗಳೆಯಲಾಗುವುದಿಲ್ಲ.

ಡಾ. ಸಬರದ ಅವರು ಸಂಪಾದಿಸಿರುವ ಕೃತಿಯಲ್ಲಿ, ಹತ್ತು - ಹನ್ನೆರಡು ವರ್ಷಗಳ ಹಿಂದೆ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿ ಇಂದು ಅಲಭ್ಯವಾಗಿರುವ ಲೇಖನಗಳಿಂದ ಹಿಡಿದು ತೀರ ಈಚಿನ ಬರೆಹಗಳವರೆಗೆ ಅನೇಕ ಮುಖ್ಯವಾದ ಲೇಖನಗಳಿವೆ. ಆದರೆ ಇಂದಿನವರೆಗೆ ಬಂಡಾಯ ಚಳುವಳಿಗೆ ನಿಷ್ಠೆಯನ್ನು ಉಳಿಸಿಕೊಂಡಿರಬೇಕೆಂಬ, ಕರಾರೊಂದನ್ನು ಸಂಪಾದಕರು ಹಾಕಿಕೊಂಡಿರುವುದ ರಿಂದಲೋ ಏನೋ ಕೆಲವು ಮುಖ್ಯ ಲೇಖಕರು - ಲೇಖನಗಳು ಬಿಟ್ಟು ಹೋಗಿವೆ. ಏಕೆಂದರೆ ಎಂಬತ್ತರ ದಶಕದ ಕೊನೆಯ ಆ ದಿನಗಳಲ್ಲಿ ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ, ಡಿ.ಆರ್. ನಾಗರಾಜ್, ಪ್ರಸನ್ನ ಮುಂತಾದ ಹಲವು ಎಡಪಂಥೀಯ ನೆಲೆಗಳುಳ್ಳ ಲೇಖಕರು ತೊಡಗಿಸಿಕೊಂಡಿದ್ದರು. ಅವರು ಇಂದು ಯಾವುದೇ ನೆಲೆಯಲ್ಲಿರಲಿ, ಅವರ ಅಂದಿನ ಬರೆಹಗಳನ್ನು ಸೇರಿಸಿಕೊಂಡಿದ್ದರೆ ಸಂಕಲನಕ್ಕೆ ಇನ್ನಷ್ಟು ವ್ಯಾಪ್ತಿ ಬರುತ್ತಿತ್ತೆಂದು ತೋರುತ್ತದೆ. ಈಗಿರುವಂತೆಯೂ ಇಲ್ಲಿ ಅನೇಕ ಉಪಯುಕ್ತವಾದ ಲೇಖನಗಳಿವೆ. ಸಂಕ್ರಮಣದ ಬಂಡಾಯ ಸಾಹಿತ್ಯ ವಿಶೇಷಾಂಕದ ನಂತರ ಇದು ಮಹತ್ವದ ದಾಖಲೆ.

'ಸಂಕ್ರಮಣ' ಪತ್ರಿಕೆಯು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಎಷ್ಟೊಂದು ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿದೆಯೆನ್ನುವುದಕ್ಕೆ ಸಾಕ್ಷಿಯಾಗಿ, 'ಸಂಕ್ರಮಣ ಸಾಹಿತ್ಯ'ದ ಮೊದಲ ಸಂಪುಟವು ಹೊರಬಂದಿದೆ. ಕೆ. ಕೃಷ್ಣಮೂರ್ತಿಯವರಿಂದ ಹಿಡಿದು ರಾಜೇಂದ್ರಚೆನ್ನಿಯವರವರೆಗೆ ಹತ್ತು - ಹಲವು ಮಹತ್ವದ ಲೇಖಕರ ಬರವಣಿಗೆಯನ್ನು ಗುಣೈಕ ದೃಷ್ಟಿಯಿಂದ ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ. ಈ ಲೇಖನಗಳ ಸಾಂಸ್ಕೃತಿಕ ಮಹತ್ವವು ಸ್ವಯಂವೇದ್ಯವಾಗಿರುವುದರಿಂದ ಈ ಸಂಕಲನದ ಬಗ್ಗೆ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ಉಳಿದೆರಡು ಸಂಪುಟಗಳು ಆದಷ್ಟು ಬೇಗ ಹೊರ ಬರಲೆಂದು ಹಾರೈಸಬಹುದು.

ಅಕಾಡೆಮಿಯು ಹಲವು ವರ್ಷಗಳಿಂದ ನಡೆಸುತ್ತಿರುವ ಕಮ್ಮಟಗಳು, ಅದರಲ್ಲಿ ಭಾಗವಹಿಸುವ ಕೆಲವರನ್ನು ಬಿಟ್ಟರೆ ಉಳಿದಂತೆ ನಿರುಪಯುಕ್ತವಾಗಿರುತ್ತಿದ್ದವು. ಅದರಲ್ಲಿ ಭಾಗವಹಿಸಿದವರಿಗೂ ನಂತರ ಯಾವುದೇ ವಿಧವಾದ ಫಾಲೋಅಪ್ ಇಲ್ಲದೆ ಅದೊಂದು ದ್ವೀಪಸಮ ಅನುಭವವಾಗಿಬಿಡುತ್ತಿತ್ತು. ೧೯೯೨ ರಲ್ಲಿ ನಡೆದ ಎರಡು ಮೂರು ಕಮ್ಮಟಗಳಲ್ಲಿ ಮಂಡಿತವಾದ ಅಧ್ಯಯನ ಸಾಮಗ್ರಿಯನ್ನು ಪುಸ್ತಕರೂಪದಲ್ಲಿ ಪ್ರಕಟಿಸುವುದರ ಮೂಲಕ ಅಕಾಡೆಮಿಯು ಕಮ್ಮಟಗಳಲ್ಲಿ ನಡೆಯುವ ಕೆಲಸಕ್ಕೆ ಒಂದು ಬಗೆಯ ಶಾಶ್ವತತೆಯನ್ನು ತಂದುಕೊಟ್ಟು ಅವುಗಳ ವ್ಯಾಪ್ತಿಯನ್ನು ಹೆಚ್ಚಿಸಿದೆ. ಹೀಗೆ ಪ್ರಕಟಿಸುವಾಗ ಕೇವಲ ವಿಶೇಷ ಉಪನ್ಯಾಸಗಳು ಮತ್ತು ನಿರ್ದೇಶಕರ ಬರೆಹಗಳನ್ನು ಮಾತ್ರ ಆರಿಸಿಕೊಳ್ಳುವ ಬದಲು ಕಮ್ಮಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಂದಲೂ ಕಿರು ಲೇಖನಗಳನ್ನು ಬರೆಸಿರುವುದು ಸ್ವಾಗತಾರ್ಹ. ಪಾಶ್ಚಾತ್ಯ ಸನ್ನಿವೇಶದಲ್ಲಿ ಇಂಥ ಕಮ್ಮಟ ಅಥವಾ ಶಿಬಿರಗಳಲ್ಲಿ ನಡೆಯುವ ಚರ್ಚೆ ಮತ್ತು ಪ್ರಬಂಧ ಮಂಡನೆಗಳು ಎಷ್ಟೋ ಬಾರಿ ಹೊಸದೊಂದು ಜ್ಞಾನಶಾಖೆಯನ್ನೇ ಉದ್ಘಾಟಿಸಿವೆ. ಆ ದೃಷ್ಟಿಯಿಂದ

ಇಂಥ ಕಮ್ಮಟಗಳನ್ನು ಕೆಲವೊಮ್ಮೆ ಕೇವಲ ತಜ್ಞರಿಗೆ ಮಾತ್ರವೇ ನಡೆಸುವುದು ಕೂಡ ಉಪಯುಕ್ತವಾಗಬಹುದು.

ಇಂಥ ಪುಸ್ತಕಗಳಲ್ಲಿ ಮೊದಲನೆಯದು ಕೆ.ವಿ. ನಾರಾಯಣ ಮತ್ತೆ ಬಿ. ಕೃಷ್ಣಮೂರ್ತಿಯವರು ಸಂಪಾದಿಸಿರುವ "ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ" ಎನ್ನುವ ರೀತಿ. ಇಲ್ಲಿ ಕನ್ನಡ ಸಾಹಿತ್ಯ ಎಂಬ ಪರಿಪ್ರೇಕ್ಷ್ಯವನ್ನು ಇಟ್ಟುಕೊಂಡಿರುವುದರಿಂದ ಚರ್ಚೆಯು ಕೇವಲ ತಾತ್ವಿಕವಾಗುವ ಅಪಾಯ ಸಂಭವ ತಪ್ಪಿದೆ.

ಕೃತಿಯ ಮೊದಲ ಭಾಗದಲ್ಲಿ ಕಮ್ಮಟದ ನಿರ್ದೇಶಕರು ಬರೆದಿರುವ ಎರಡು ತಾತ್ವಿಕ ಟಿಪ್ಪಣಿಗಳಿವೆ. ಇವೆರಡೂ ಪರಸ್ಪರ ವಾಗ್ವಾದಗಳನ್ನು ಬೆಳಸಿಕೊಳ್ಳುತ್ತಲೇ ಚರ್ಚಿತವಾಗಬೇಕಾದ ವಿಷಯಗಳ ಸಾಧ್ಯತೆ ಸೂಕ್ಷ್ಮತೆ ಮತ್ತು ವ್ಯಾಪ್ತಿಗಳ ಬಗೆಗೆ ಮಹತ್ವದ ಒಳನೋಟಗಳನ್ನು ನೀಡುತ್ತವೆ.

ನಂತರ ಇತಿಹಾಸ, ಸಮಾಜಶಾಸ್ತ್ರ, ಮನಃಶಾಸ್ತ್ರ, ಭಾಷಾಶಾಸ್ತ್ರ ಹಾಗೂ ತತ್ವಶಾಸ್ತ್ರಗಳ ನೆಲೆಯಿಂದ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವ ಐದು ಗಂಭೀರ ಪ್ರಯತ್ನಗಳಿವೆ. ಐದೂ ಲೇಖಕರು ಸಾಹಿತ್ಯದ ವಿದ್ಯಾರ್ಥಿಗಳೇ ಎನ್ನುವುದು ಗಮನಾರ್ಹ. ಎಲ್ಲ ಲೇಖನಗಳೂ ಕನ್ನಡ ಸೃಜನಶೀಲ ಸಾಹಿತ್ಯವನ್ನು ಆಯಾ ಶಾಸ್ತ್ರದ ಹಿನ್ನೆಲೆಯಿಂದ ನೋಡುವುದರ ಜೊತೆಗೆ, ಆಯಾ ಶಾಸ್ತ್ರದ ದಿಕ್ಕಿನಿಂದ ಈವರೆಗೆ ನಡೆದಿರುವ ವಿಮರ್ಶೆಯನ್ನು ಗಮನಿಸುತ್ತವೆ. ಇಲ್ಲಿನ ಎಲ್ಲ ಅಭಿಪ್ರಾಯಗಳು ಅಂಗೀಕಾರಾರ್ಹವಲ್ಲದಿರಬಹುದು. ಆದರೆ ಅವುಗಳೊಡನೆ ಮಹತ್ವದ ಚರ್ಚೆಯಂತೂ ಸಾಧ್ಯ. ಮೂರನೆಯ ಭಾಗದಲ್ಲಿ ಕಮ್ಮಟದ ವಿದ್ಯಾರ್ಥಿಗಳ ಆಯ್ದ ಬರವಣಿಗೆಗಳಿದ್ದು ಇವು ಬಹುಮಟ್ಟಿಗೆ ಕಮ್ಮಟದಲ್ಲಿ ಪಡೆದ ತಿಳುವಳಿಕೆಯನ್ನು ಸಾಹಿತ್ಯ ಕೃತಿಗಳಿಗೆ ಅನ್ವಯಿಸುವ ರೀತಿಯವು.

'ಕಥನ ಕಲೆಯ ನೆಲೆಗಳು' ಎನ್ನುವುದು ಇಂತಹ ಎರಡನೆಯ ಕೃತಿ. ರಾಜಶೇಖರ ನೀರಮಾನ್ವಿ ಮತ್ತು ಕರೀಗೌಡ ಬೀಚನಹಳ್ಳಿಯವರು ಕಮ್ಮಟದ ನಿರ್ದೇಶಕರು ಹಾಗೂ ಕೃತಿಯ ಸಂಪಾದಕರು. ಸಣ್ಣಕಥೆಯ ಸ್ವರೂಪವನ್ನು ಚರ್ಚಿಸುವ ಉದ್ದೇಶದ ಜೊತೆಗೆ, ಸ್ವತಃ ಸೃಜನಶೀಲ ಕಥೆಗಾರರಿಗೆ ತಮ್ಮ ಅನುಭವ ಅನಿಸಿಕೆಗಳ ನಿರೂಪಣೆಗೆ ಅವಕಾಶ ನೀಡಿರುವುದು ಈ ಕಮ್ಮಟದ ವಿಶೇಷ. ಇಲ್ಲಿಯೂ ವಿದ್ಯಾರ್ಥಿಗಳ ಬರಹಗಳಿವೆ.

•

* * *

ವಿಮರ್ಶೆ ೨

— ಮಲ್ಲೇಪುರಂ ಜಿ. ವೆಂಕಟೇಶ

ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ನಮ್ಮ ಅಧ್ಯಯನಗಳು ಕಳೆದ ಹತ್ತು ವರ್ಷಗಳ ಈಚೆಗೆ ಇಳಿಮುಖವಾಗುತ್ತವೆ. 'ಪ್ರಾಚೀನ ಸಾಹಿತ್ಯ' ಕುರಿತಂತೆ ಹೊಸ ಹೊಸ ಅಧ್ಯಯನದ ನೆಲೆಗಳು ಸದ್ಯ ರೂಪುಗೊಳ್ಳುತ್ತಿರುವ ಸಮಯದಲ್ಲಿ ಈ ಬಗೆಗಿನ 'ಇಳಿಕೆ' ಕ್ರಮದ ಕಾರಣ ನೆಲೆಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕಾದ ಅಗತ್ಯ ಇದೆಯೆಂದು ನಾನು ತಿಳಿದಿದ್ದೇನೆ. ಇದಕ್ಕೆ ಮುಖ್ಯವಾಗಿ ಎರಡು - ಮೂರು ಕಾರಣಗಳು ಇವೆಯೆಂದು ತೋರುತ್ತದೆ.ಪ್ರಾಚೀನ ಸಾಹಿತ್ಯದ ಬಗೆಗಿನ ಗಂಭೀರವಾದ ಆಸಕ್ತಿಗಳು ವಿದ್ಯಾರ್ಥಿಗಳಲ್ಲಿ ಮತ್ತು ಆ ಕ್ಷೇತ್ರದ ಆಸಕ್ತರಲ್ಲಿ ಕುಂದುತ್ತಿರುವುದು ಒಂದು ಕಾರಣವಾದರೆ ; ಎರಡನೆಯದು ನಮ್ಮ ಪಠ್ಯರಚನೆ, ಓದುವ ಆಸಕ್ತಿ - ಎರಡರಲ್ಲೂ ಇರುವ ಕಂದಕಗಳು ಮತ್ತೊಂದು ಕಾರಣವೆಂದು ತೋರುತ್ತದೆ.

ಕಳೆದ ವರ್ಷಕ್ಕೆ ಹೋಲಿಸಿಕೊಂಡರೆ, ವಿಚಾರಸಂಕಿರಣಗಳಲ್ಲಿ ವಿಶೇಷೋಪನ್ಯಾಸಗಳ ಸಂದರ್ಭದಲ್ಲಿ ಅಲ್ಲೊಂದು ಇಲ್ಲೊಂದು ಪ್ರಾಚೀನ ಸಾಹಿತ್ಯದ ಬಗೆಗೆ ಹೊಸತನದ ನೆಲೆಗಳ ಅಧ್ಯಯನ ಆಗುತ್ತಿರುವುದು ಕಂಡುಬರುತ್ತಿದೆ. ಆದರೆ, ಇಂಥ ಮಹತ್ವದ ಚರ್ಚೆಗಳು ಪುಸ್ತಕದ ರೂಪದಲ್ಲಿ ಇರದೆ ಹೋಗುತ್ತಿದೆ. ಕೇವಲ ಅಧ್ಯಯನ ಮಾಡಿ ಪುಸ್ತಕ ಬರೆಯುತ್ತಿರುವವರ ಸಂಖ್ಯೆಯೂ ಕಡಿಮೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ 'ಪ್ರಾಚೀನ ಸಾಹಿತ್ಯ' ಕುರಿತ ಅಧ್ಯಯನದ ಹೊಸ ನೆಲೆಗಳ ಬಗೆಗೆ ನಾವು ಚರ್ಚಿಸಬೇಕಾದ್ದು ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ಎರಡು, ಪುಸ್ತಕಗಳನ್ನು ನೋಡಬಹುದೆಂದು ತೋರುತ್ತದೆ. ಬಸವರಾಜ ಸಬರದ ಅವರ 'ವಚನ ಚಳವಳಿ' ಮುಖ್ಯವಾಗಿ 'ಚಳವಳಿ' ಯ ಪರಿಕಲ್ಪನೆಯ ಹಿನ್ನಲೆಯಲ್ಲಿ ವಚನ ಸಾಹಿತ್ಯವನ್ನೂ ಕುರಿತು ಚರ್ಚಿಸಲು ತೊಡಗುತ್ತದೆ. ಇಲ್ಲಿನ ಈ ಮಾದರಿಯ ಚರ್ಚೆಗಳು, ಹುಟ್ಟಿಕೊಂಡ ಬಗೆಗಳು, ಅಧ್ಯಯನಕ್ಕೆ ಆಸಕ್ತಿದಾಯಕವಾಗಿವೆ. "ಜನಪರ, ಶೋಷಣೆ, ಸಾಮಾಜಿಕ ಪ್ರತಿಭಟನೆ

ಇಂತಹ ಪರಿಭಾಷೆಯನ್ನು ಸೃಷ್ಟಿಸುತ್ತ ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕನ್ನು ಕಾಣಿಸುತ್ತಿರುವ ಇಂದಿನ ದಲಿತ ಬಂಡಾಯ ಸಾಹಿತ್ಯದ ವಿಮರ್ಶೆಯ ಚೌಕಟ್ಟಿನಲ್ಲಿ ಮೂಡಿ ಬಂದಿರುವ ಇಲ್ಲಿನ ಲೇಖನಗಳು ಓದುಗರ ವಚನ ಸಾಹಿತ್ಯ ಗ್ರಹಿಕೆಗೆ ಹೆಚ್ಚಿನ ಅರ್ಥವಂತಿಕೆಯನ್ನೂ ತಂದುಕೊಡುವಷ್ಟು ಬೆಲೆಬಾಳುವಂಥಾವಾಗಿವೆ " - ಎಂದು ಬೆನ್ನುಡಿಯಲ್ಲಿ ಎಂ. ಚಿದಾನಂದ ಮೂರ್ತಿ ಅವರು ಹೇಳಿರುವ ಮಾತುಗಳು ಆಲೋಚನೀಯವೆಂದು ತೋರುತ್ತದೆ.

ಇಂದಿನ ದಲಿತ, ಬಂಡಾಯ ಮತ್ತು ಸ್ತ್ರೀಪರ ಹೋರಾಟದ ಹಿನ್ನಲೆಯ ತಾತ್ವಿಕಗ್ರಹಿಕೆಗಳಲ್ಲಿ ವಚನ ಸಾಹಿತ್ಯವನ್ನು ನೋಡುವ ಕ್ರಮ ಅನೇಕ ಹೊಸ ಹೊಳಹುಗಳಿಗೆ ದಾರಿ ಮಾಡಿಕೊಡುತ್ತವೆ. ವಚನಸಾಹಿತ್ಯವನ್ನು ಕುರಿತಂತೆ ಇಲ್ಲಿರುವ ಲೇಖನಗಳು ನಿರ್ಣಯಾತ್ಮಕ ಧಾಟಿಗಿಂತ ಆಲೋಚನಾಪರವಾದ ನೆಲೆಯಲ್ಲಿ ಸಾಗುವುದು ಗಮನಿಸಬೇಕಾದ ಅಂಶಗಳಲ್ಲಿ ಒಂದು. ಈ ಆಲೋಚನಾಪರವಾದ ನೆಲೆಯ ಬರವಣಿಗೆ - ಬೇರೆ ಬಗೆಯ ಬರವಣಿಗೆಗಿಂತ ಭಿನ್ನವಾದದ್ದು. ಒಟ್ಟು ಐಕ್ಯರೂಪೀ ಆಶಯವನ್ನು ಕಟ್ಟುತ್ತದೆ. ವಚನ ಚಳವಳಿಯಲ್ಲಿ ಎರಡು ಭಾಗಗಳಿವೆ. ಒಂದು ವಚನ ಸಾಹಿತ್ಯದ ಮೂಲ ಕಲ್ಪನೆಗಳನ್ನು ಒಟ್ಟು ನೋಡುವ ಸಂಗತಕ್ರಮ ಒಂದಾದರೆ ; ಎರಡನೆಯ ಭಾಗದಲ್ಲಿ ಬಿಡಿ ಬಿಡಿ ವಚನಕಾರರ ನೆಲೆಗಳನ್ನು 'ಒಟ್ಟು ಸಂಗತಕ್ರಮ'ವನ್ನು ಅನ್ವಯಿಸಿ ನೋಡುವುದು ಇನ್ನೊಂದಾಗುತ್ತದೆ. ಇದು ಒಂದು ಕಡೆ ಮೀಮಾಂಸಾ ರೂಪದ ಬರವಣಿಗೆಯ ಒತ್ತಡಕ್ಕೆ ಮಣಿಯುತ್ತಿದ್ದರೆ ;ಇನ್ನೊಂದು ಕಡೆ ಅನ್ವಯಿಕ ರೂಪದ ಬರವಣಿಗೆಯ ಕಡೆಗೆ ಕರೆದೊಯ್ಯುತ್ತದೆ. ಆದರೆ, ಸಬರದ ಅವರದ್ದು ಕೊಂಚಮಟ್ಟಿಗೆ ಆವೇಶದ ದಾಪುಗಾಲಿನ ಬರವಣಿಗೆಯೇ. ಒಂದು ಕಡೆ ಅವರು "ಭಕ್ತಿಯ ಅಮಲಿನಲ್ಲಿ ರಾಜಕೀಯ ಕ್ಷೇತ್ರವನ್ನು ನಿರ್ಲಕ್ಷಿಸಿದ್ದರಿಂದ ಚಳವಳಿ ಮುಂದೆ ಬೇರೆ ತಿರುವು ಪಡೆದು ಹಿಂಸೆಯಲ್ಲಿ-ದುರಂತದಲ್ಲಿ ಕೊನೆಗೊಂಡಿತು" (ಪುಟ.೮) ಈ ಮಾತಿನ ಪೂರ್ವವಾಕ್ಯವನ್ನು ಉತ್ತರವಾಕ್ಯದ ಜತೆಗೆ ಸೇರಿಸಿಕೊಂಡು ವ್ಯಾಖ್ಯಾನಿಸಿಕೊಳ್ಳುವುದು ಕಷ್ಟದ ಸಂಗತಿ. ಭಕ್ತಿಯನ್ನು ಅಮಲೆಂದು ಪೂರ್ವನಿರ್ಧರಿತಕ್ಕೆ ಬರುವ ಸಬರದ ಅವರು, 'ಮಿಸ್ಟಿಕ್ ಎಕ್ಸ್‌ಪೀರಿಯನ್ಸ್' ನ ಬೇರೆ ಬೇರೆ ಮಜಲುಗಳ ಬಗ್ಗೆ ಸುಮ್ಮನಾಗುತ್ತಾರೆ. ವಚನಗಳ ಬಗ್ಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳು ಇರುವ ಹಾಗೆ ಅನುಭಾವದ ಆಯಾಮಗಳೂ ಇವೆ. ಇಂಥ ಅನುಭಾವದ ವಿಭಿನ್ನ ನೆಲೆಗಳಿಗೆ 'ಭಕ್ತಿಯ ಅಮಲು' ಎಂಬ ಮಾತನ್ನು ಜೋಡಿಸುವುದು ಒಂದು ರೀತಿಯಲ್ಲಿ ಕ್ಲೀಷೆಯೇ ಸರಿ. ಆದರೆ ಇದನ್ನು ಬೇರೊಂದು ಲೇಖನದಲ್ಲಿ "ವೈದಿಕ ಸಂಸ್ಕೃತಿಯ ಕಪಿಮುಷ್ಟಿಯಲ್ಲಿ ಕರಗಿಹೋಗಿದ್ದ ಈ ಜನ ವಚನಕಾರರ ಸಮಸಂಸ್ಕೃತಿಯ ಬೆಳಕಿನಲ್ಲಿ ತಮಗೂ ವ್ಯಕ್ತಿತ್ವವಿದೆಯೆಂಬುದನ್ನು ಸಮರ್ಥಿಸಿಕೊಂಡರು." (ಪುಟ. ೧೬) ಎಂದೂ ಹೇಳುತ್ತಾರೆ.

ಸಬರದ ಅವರಿಗೆ ಭರದಿಂದ ಹೇಳಬೇಕೆಂಬ ಧಾಟಿಯೇ ತುಂಬ ಇಷ್ಟವಾದಂತೆ ತೋರುತ್ತದೆ. ಈ 'ಭರತ್ವ' ಅವರ ಆಲೋಚನೆಯ ನೆಲೆಗಳ ಮೇಲೆ ತಣ್ಣನೆಯ ಗಾಳಿ

ಬೀಸುತ್ತದೆ. ಒಂದು ಕಡೆ ಸ್ವೀಕರಣದ ನೆಲೆಯಲ್ಲಿದ್ದರೆ; ಮತ್ತೊಂದು ಕಡೆ ಅದೇ ವಿಷಯದ ಬಗ್ಗೆ ನಿರಾಕರಣೆಯ ನೆಲೆಗೆ ತಲುಪಿಬಿಡುತ್ತಾರೆ. ಇಂಥ ಅಂಶಗಳನ್ನು ಅವರು ಮಾತಾಡುವುದು ತಾತ್ವಿಕನೆಲೆಯಲ್ಲಿ ಚರ್ಚಿಸುವಾಗ ಮಾತ್ರ. ವಚನಗಳ ಬಗ್ಗೆ ಗಾಢವಾದ ಅರಿವು ಇದೆ ನಿಜ. ಆದರೆ, ವಚನಗಳ ಒಳನೋಟದ ಸಿದ್ಧ ನೆಲೆಗಳ ತಾತ್ವಿಕ ಪ್ರಸಂಗಕ್ಕೆ ಬಂದಾಗ ಏನು ಮಾತಾಡಬೇಕೆಂದು ತೋರದೆ; ಸುಮ್ಮನೆ ಹೇಳುತ್ತಾ ಹೋಗುತ್ತಾರೆ. ಇವುಗಳ ಹಿಂದೆ ಗಟ್ಟಿಯಾದ ಆಲೋಚನೆಯ ನಿರಂತರ ನೆಲೆಯಿದೆಯೆಂದು ನನಗಂತೂ ತೋರುವುದಿಲ್ಲ. ಆದರೆ ಎರಡನೆಯ ಭಾಗದ ಒಬ್ಬೊಬ್ಬ ಮುಖ್ಯ ವಚನಾಕಾರರ ಬಗ್ಗೆ ಬರೆಯುವಾಗ, ಇಂಥ ತಾತ್ವಿಕ ತೊಂದರೆಗಳು ಅಷ್ಟಾಗಿ ಕಂಡುಬರುವುದಿಲ್ಲ. ಬಸವಣ್ಣ, ಅಂಬಿಗರ ಚೌಡಯ್ಯನ ಬಗ್ಗೆ ಬರೆಯುವಾಗ ಅವರು ಸ್ಪಷ್ಟವಾದ ಹಾಗೂ ಖಚಿತವಾದ ನೆಲೆಯಲ್ಲಿ ಸಾಗುತ್ತಾರೆ. ಆದೇ ಅಲ್ಲಮಪ್ರಭು ಮತ್ತು ಮುಕ್ತಾಯಕ್ಕ - ಮಹಾದೇವಿಯಕ್ಕಗಳನ್ನೇ ಕುರಿತ ಸೈದ್ಧಾಂತಿಕ ಚರ್ಚೆ ಹಾಗೂ ಚೆನ್ನಬಸವಣ್ಣನವರ ಬಗ್ಗೆ ಇವರು ಬರೆಯುವಾಗ ಮೊದಲಿನ ತೊಂದರೆಯೇ ಒದಗಿ ಬರುತ್ತದೆ. ಲೇಖನಗಳನ್ನು ಬಿಡಿಬಿಡಿಯಾಗಿ ನೋಡಿದಾಗ ಕಂಡುಬರುವ ಚರ್ಚಿತ ನೆಲೆಗೂ ಒಟ್ಟಾಗಿ ನೋಡಿದಾಗ ಕಂಡು ಬರುವ ಚರ್ಚಿತ ನೆಲೆಗೂ ಬೇರೆ ಬೇರೆಯಾದ ಮುಖಗಳೇ ಕಾಣುತ್ತವೆ. ಇದಕ್ಕೆ ಕಾರಣ: ಸಬರದ ಅವರದ್ದು ಬಿಡಿ ಬಿಡಿಯಾದ ನೋಟವೇ ಹೊರತು; ಇಡಿಯಾದ ನೋಟವಲ್ಲ. ಇಡಿಯಾದ ನೋಟ ಕೇವಲ 'ಚಳವಳಿ' ಯ ಪರಿಕಲ್ಪನೆಯ ನೆಲೆಯಲ್ಲಿ ಮಾತ್ರ ಗಟ್ಟಿಯಾಗಿ ಕಾಣುತ್ತದೆ. ಆದರೆ ಅದನ್ನು ಹೊರತುಪಡಿಸಿ ನೋಡಿದಾಗ, ಸಬರದ ಅವರ ಆಲೋಚನೆಯ ನೋಟ ತೆಳುವಾಗಿ ಬಿಡುತ್ತದೆ.

ಕನಕದಾಸರ ಕೀರ್ತನೆಗಳ ಕೃತಿಚೌರ್ಯ- ಸುಧಾಕರ ಅವರ ವಿಶಿಷ್ಟಕೃತಿ. ಸುಧಾಕರ ಅವರು ಪ್ರಸ್ತುತ ಪುಸ್ತಕದಲ್ಲಿ ಅಗಾಧವಾದ ವಿದ್ವತ್ತನ್ನೂ ವಿಶ್ಲೇಷಣಾ ಸಾಮರ್ಥ್ಯವನ್ನೂ ಸಾಹಿತ್ಯ ಪ್ರತಿಭೆಯನ್ನೂ ತೋರಿಸಿದ್ದಾರೆ. ಒಟ್ಟು ಅವರ ಪುಸ್ತಕದ ನಿಲುವು ಇಷ್ಟು: ಕನಕದಾಸರ ಕೀರ್ತನೆಗಳನ್ನು ಅಪಹರಿಸಿದ ಸಂಪ್ರತಿಕಾರರು ಪುರಂದರದಾಸರ ಹೆಸರಿಗೆ ಅದನ್ನು ವರ್ಗಾಯಿಸಿದ್ದಾರೆ ಎಂಬುದೇ ಅವರ ಮುಖ್ಯ ನಿಲುವು. "ಕನಕ ಕೀರ್ತನೆಗಳ ಅಪಹರಣದ ದಾರುಣ ಕಥೆಯನ್ನು ಸನಿದರ್ಶನವಾಗಿ, ತರ್ಕಬದ್ಧವಾಗಿ, ನೇರವಾಗಿ ಸಂದೇಹಕ್ಕೆ ಅವಕಾಶವಿಲ್ಲದಂತೆ, ಕೃತಿಚೋರರ ಎದೆ ತಲ್ಲಣಿಸುವಂತೆ ಅವರು ವಿವರಿಸಿದ್ದಾರೆ" ಎಂಬ ದೇಜಗೌ ಅವರ ಹೇಳಿಕೆಯು ಕೃತಿಯೊಳಗಿನ ಆಶಯವನ್ನು ತಿಳಿಸುತ್ತದೆ. ಸುಧಾಕರರ ಒಟ್ಟು ಚರ್ಚಿತ ನೆಲೆ ಸಂಪ್ರತಿಕಾರರ ಮೇಲೆ ಇದೆ. ಇದಕ್ಕಾಗಿ ಅವರು ಅನೇಕ ಬಗೆಯ ಪಾಠಗಳನ್ನು ಹಿಡಿದುಕೊಂಡು ನೋಡಿದ್ದಾರೆ. ಮೇಲು ನೋಟಕ್ಕೆ ಇವೆಲ್ಲ ವ್ಯರ್ಥಪ್ರಯಾಸವೆಂದು ಕಾಣಬಹುದಾದರೂ ಇದರ ಹಿಂದೆ ಒಂದು ಸಂಸ್ಕೃತಿಯ ಒಂದು ಕೀರ್ತನ ಪರಂಪರೆಯ ನೆಲೆಯನ್ನು ಬೇಕಾಗಿಯೇ ಒತ್ತಟ್ಟಿಗೆ ಎತ್ತಿಟ್ಟಿರುವಂತೆ ಕಾಣುತ್ತದೆ. ಸುಧಾಕರರ ವಾದವನ್ನು ಈ ನೆಲೆಯಲ್ಲಿ ಒಪ್ಪಬಹುದೇನೊ ಸರಿ. ಆದರೆ, ಇದರ ಆಧಾರಕ್ಕೆ ಹೆಚ್ಚು ಹೆಚ್ಚಾಗಿ ಹಸ್ತಪ್ರತಿಕಾರರ ಕೈವಾಡದ ನೆಲೆಗಳು ಇನ್ನಷ್ಟು ದೊರಕಬೇಕು.

ಪುರಂದರದಾಸರ ಕೃತಿಗಳ ಪ್ರಾಚೀನ ಹಸ್ತಪ್ರತಿಗಳೂ ಕನಕದಾಸರ ಕೃತಿಗಳ ಪ್ರಾಚೀನ ಹಸ್ತಪ್ರತಿಗಳೂ ಹೆಚ್ಚಾಗಿ ಸಿಗದ ಹೊರತು ಈ ಬಗೆಯ ಅಧ್ಯಯನಗಳಿಗೆ ಹೆಚ್ಚಿನ ಸಾಧುತ್ವ ಬರುವುದಿಲ್ಲವೆಂದು ಸದ್ಯಕ್ಕೆ ತೋರುತ್ತದೆ.

ಇನ್ನು ಪ್ರಸ್ತುತ ಪುಸ್ತಕದಲ್ಲಿ 'ಕೃತಿಚೌರ್ಯ'ದ ಪರಿಕಲ್ಪನೆಯನ್ನು ಉದ್ದಕ್ಕೂ ಬಳಸಲಾಗಿದೆ. ದೇಜಗೌ ಅವರ ಮಾತಿನಲ್ಲಿ "ಈ ಕೃತಿಚೌರ್ಯ ಮೂರು ವಿಧವಾಗಿರುತ್ತದೆ : ಒಂದು ಪೂರ್ವ ಕೃತಿಗಳಿಂದೆತ್ತಿಕೊಂಡ ಪದ್ಯ ಪಂಕ್ತಿಗಳನ್ನು ಮೂಲ ಕವಿಯೇ ತನ್ನ ಕಾವ್ಯದಲ್ಲಿ ಸೇರಿಸಿಕೊಂಡಿದ್ದಾಗಿರಬಹುದು; ಎರಡು ಸರ್ವಜ್ಞ ತ್ರಿಪದಿಗಳಂಥ, ದಾಸರಪದಗಳಂಥ ಅತ್ಯಂತ ಜನಪ್ರಿಯ ಕೃತಿಗಳನ್ನು ಕೃತಿಕಾರರು ಗೊತ್ತಿರಲಿ, ಗೊತ್ತಿರದಿರಲಿ, ಸ್ವೇಚ್ಛೆಯಾಗಿ ಜನಸಾಮಾನ್ಯನು ಹಾಡಿಕೊಳ್ಳುವಾಗ ಒಬ್ಬ ಕವಿಯ ಮಾತು ಸಾಲುಗಳು ಅಪ್ರಜ್ಞಾಪೂರ್ವವಾಗಿಯೇ ಉದ್ದೇಶರಹಿತವಾಗಿಯೇ ಬೇರೊಬ್ಬ ಕವಿಯ ಕೃತಿಗಳಲ್ಲಿ ಸೇರಿಕೊಳ್ಳುವ ಸಂಭವವುಂಟು; ಮೂರು, ಒಬ್ಬಾನೊಬ್ಬ ಕವಿಯ ಆರಾಧಕರು ಪ್ರಜ್ಞಾಪೂರ್ವಕವಾಗಿ, ಪಕ್ಷಪಾತ ದೃಷ್ಟಿಯಿಂದ, ತಮ್ಮವರ ಪ್ರತಿಷ್ಠೆಯನ್ನು ತಿಳಿಸುವ ಧನ್ಯತಾ ಮನೋಭಾವದಿಂದ ತಮ್ಮ ಆರಾಧ್ಯ ಕವಿಗೆ ಅಪಚಾರವೆಸಗುತ್ತಿದ್ದೇವೆಂಬ ಪರಿವೆಯಿಲ್ಲದೆ ಬೇರೊಬ್ಬ ಕವಿಯ ಇಡೀ ಪದ್ಯಗಳನ್ನೊ ಪದಸಮುದಾಯಗಳನ್ನೊ ತಮ್ಮ ಆರಾಧ್ಯಕವಿಯ ಹೆಸರಿಗೆ ಜಮಾ ಮಾಡುವುದುಂಟು. ನಡುವಿನದು ಹೊರತಾಗಿ, ಉಳಿದವೆರಡು ಕೃತಿಚೌರ್ಯಗಳು ಅಕ್ಷಮ್ಯ ಅಪರಾಧಗಳೆಂದೇ ಹೇಳಬೇಕು" ಇದನ್ನು ಗಮನದಲ್ಲಿಟ್ಟು ನೋಡಿದಾಗ ಪ್ರಕ್ಷಿಪ್ತಕಾರರ ಕೈವಾಡದ ನೆಲೆಗಳನ್ನು ಈ ದಿಕ್ಕಿನಲ್ಲೇ ಸುಧಾಕರರು ನೋಡಿದ್ದಾರೆ. ಕನ್ನಡದಲ್ಲಿ ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಕೃತಿಚೌರ್ಯದ ನಾನಾ ನಮೂನೆಗಳನ್ನು ನೋಡಿದ, ನಮಗೆ ಮಧ್ಯಕಾಲೀನ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಈ ಬಗೆಯ ಕೃತಿಚೌರ್ಯದ ನೆಲೆಗಳನ್ನು ಸುಧಾಕರರು ಆವೇಶದಿಂದಲೇ ಬಗೆದು ನೋಡಿದ್ದಾರೆ. ಸುಧಾಕರರು ಸ್ವಲ್ಪ ಆವೇಶವನ್ನು ತಗ್ಗಿಸಿಕೊಂಡೇ ಬರೆಯಬೇಕಿತ್ತು. ಸಂಶೋಧನೆಯಲ್ಲಿ ಸತ್ಯ ಮುಖ್ಯ. ಸತ್ಯವನ್ನು ಹೇಳುವಾಗ ಸಾಕಷ್ಟು ನಿರುಂಬಳವಾಗಿ, ತಾಳ್ಮೆಯಿಂದ ಹೇಳಬೇಕು. ಅದು ಇಲ್ಲಿ ಆಗಾಗ ಬೇರಿಡುತ್ತದೆ. ಇದನ್ನು ಹೊರತುಪಡಿಸಿದರೂ ಗಮನಿಸಬೇಕಾದ ಗ್ರಂಥ.

ಮೊದಲೆ ತಿಳಿಸಿದಂತೆ, ಪ್ರಾಚೀನ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಕನ್ನಡದ ಬರೆವಣಿಗೆ ಸೊರಗುತ್ತಿದೆ. ಈ ದಿಕ್ಕಿನಲ್ಲಿ ಸಪ್ಪೆ ಬರೆವಣಿಗೆಯೇ ಸಾಗಿದೆ.

●

* * *

ಆತ್ಮಕಥನ, ಜೀವನಚರಿತ್ರೆ ಮತ್ತು ಪ್ರವಾಸಸಾಹಿತ್ಯ

– *ಹಿ.ಚಿ. ಬೋರಲಿಂಗಯ್ಯ*

೧೯೯೨ರಲ್ಲಿ ಪ್ರವಾಸ ಕಥನಗಳು ತುಂಬ ಕಡಿಮೆ. ಆದರೆ ಆತ್ಮ ಚರಿತ್ರೆ, ಜೀವನ ಚರಿತ್ರೆ ಅಥವಾ ವ್ಯಕ್ತಿ ಪರಿಚಯದ ರೀತಿಯ ವಿವಿಧ ಬರಹಗಳು ಹೆಚ್ಚಾಗಿಯೇ ಬಂದಿವೆ. ಅದರಲ್ಲಿಯೂ ಎಚ್. ನರಸಿಂಹಯ್ಯ ಅವರ 'ತೆರೆದ ಮನ', ಕೋ. ಚೆನ್ನಬಸಪ್ಪ ಅವರ 'ನ್ಯಾಯಾಧೀಶನ ನೆನಪುಗಳು', ಕು.ಶಿ. ಹರಿದಾಸಭಟ್ಟರ 'ಸಾಹಿತ್ಯಕಾರನ ಇತಿವೃತ್ತ' ಹಾಗೂ ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರ 'ಸಿರಿಸಂಪದ' ಬಹು ಮುಖ್ಯವಾದ ಕೃತಿಗಳಾಗಿವೆ. ಪ್ರವಾಸ ಕಥನದಲ್ಲಿ ಡಾ. ಶಿವರಾಮ ಕಾರಂತರ 'ಯಕ್ಷರಂಗಕ್ಕೊಂದು ಪ್ರವಾಸ' ಹಾಗೂ ಶಮಂತ ಅವರ 'ಗಿರಿಸ್ನೇಹ' ಮುಖ್ಯವಾಗಬಹುದಾದ ಕೃತಿಗಳು. ಉಳಿದಂತೆ ಪರಿಚಯ ರೂಪದ ವ್ಯಕ್ತಿ ಚಿತ್ರಗಳು ಬಂದಿವೆ. ಅವುಗಳಲ್ಲಿ ಪ್ರಫುಲ್ಲಚಂದ್ರರಾಯ್, ಮದರ್ ತೆರೆಸಾ, ತೀ.ನಂ. ಶ್ರೀಕಂಠಯ್ಯ, ಕನ್ನಡದ ಆಸ್ತಿ, ಡಿ.ಎಲ್. ನರಸಿಂಹಾಚಾರ್, ದೇವುಡು, ಡಾ.ಎಂ. ಶಿವರಾಂ, ಹಾಗೂ ಹರಪನಹಳ್ಳಿ ಭೀಮವ್ವ - ಈ ಪುಸ್ತಕಗಳನ್ನು ಹೆಸರಿಸಬಹುದು.

ಇಲ್ಲಿ ಪ್ರಾತಿನಿಧಿಕವಾಗಿ ಕೆಲವು ಪುಸ್ತಕಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದೇವಾದರೂ ಇವಷ್ಟೇ ಈ ಕ್ಷೇತ್ರದ ಉತ್ತಮ ಪುಸ್ತಕಗಳು ಎಂದು ಯಾರೂ ಭಾವಿಸಬೇಕಾಗಿಲ್ಲ.

ತೆರೆದ ಮನ : *ಎಚ್. ನರಸಿಂಹಯ್ಯ*

ಮನುಷ್ಯತ್ವದ ಪರವಾದ, ಆದರೆ ಯಾವುದೇ ಧರ್ಮದ ಹೆಸರಿನಲ್ಲಿ ತಳುಕು ಹಾಕಿಕೊಳ್ಳುವ ಮೂಢನಂಬಿಕೆಗಳ ವಿರೋಧಿಯಾದ ಎಚ್ಚೆನ್, ಈ ಶತಮಾನದ ಕರ್ನಾಟಕ ಕಂಡ ಆದರ್ಶ ವ್ಯಕ್ತಿಗಳಲ್ಲಿ ಒಬ್ಬರು. ೨೦ ನೇ ಶತಮಾನದ ಆದಿ ಮತ್ತು ಅಂತ್ಯ ತುಂಬ ವಿಚಿತ್ರ ರೀತಿಯ ವ್ಯಾಖ್ಯಾನಕ್ಕೆ ಒಳಗಾಗುತ್ತವೆ. ದಾಸ್ಯದಲ್ಲಿದ್ದ ಭಾರತದ ಅಪಮಾನದ ಬದುಕು ಪೂರ್ವವಾದರೆ, ಸ್ವಾತಂತ್ರ್ಯ ಪಡೆದೂ ಸಮಾನತೆ ಸಮೃದ್ಧಿ ಸಾಧಿಸಲಾಗದ ಹತಾಶೆ ಮತ್ತು ನೋವಿನ ಬದುಕು ಉತ್ತರದ್ದು. ಈ ನೋವುಗಳನ್ನು

ಹಂಚಿಕೊಳ್ಳುತ್ತಾ, ಅವುಗಳನ್ನು ತೊಡೆದುಹಾಕುವ ಪ್ರಯತ್ನಗಳಿಗೆ ಸ್ಪಂದಿಸಿದ ಎಚ್ಚೆನ್ ಆವತ್ತಿನ ಸ್ವಾತಂತ್ರ್ಯ ಹೋರಾಟದಿಂದ ಇವತ್ತಿನ ಸಾಮಾಜಿಕ ಚಳವಳಿಗಳವರೆಗೆ ತಮ್ಮನ್ನು ವಿಶಿಷ್ಟವಾಗಿ ಗುರುತಿಸಿಕೊಂಡಿದ್ದಾರೆ. ಅದರಲ್ಲೂ, ಮೂಢನಂಬಿಕೆ, ಪವಾಡಗಳು ಇತ್ಯಾದಿ ಅವೈಜ್ಞಾನಿಕ ಸಂಗತಿಗಳ ವಿರುದ್ಧ ಜನರನ್ನು ಎಚ್ಚರಗೊಳಿಸುವ ಚಳವಳಿಗಳನ್ನೇ ಹುಟ್ಟುಹಾಕಿದ್ದಾರೆ. ಬ್ರಿಟೀಷರು ತೊಲಗಿದರೂ ವಸಾಹತುಶಾಹಿ ನೆರಳಿನಲ್ಲಿ ಇನ್ನೂ ಬಳಲುತ್ತಿರುವ ಅರೆಬೆಂದ ಶಿಕ್ಷಣ ವ್ಯವಸ್ಥೆ ಹಾಗೂ ಮಾತೃಭಾಷೆಗೆ ಆಗುತ್ತಿರುವ ಅನ್ಯಾಯ ಇಂಥ ಗಂಭೀರ ವಿಚಾರಗಳ ಬಗ್ಗೆ ಸದಾ ಪ್ರಗತಿಪರವಾಗಿ ಆಲೋಚಿಸಿದ ಎಚ್ಚೆನ್, ನಮ್ಮೆಲ್ಲರ ನಡುವಿನ ಒಬ್ಬ ಸುಧಾರಕ ಮನೋಭಾವದ ಚಿಂತಕ. 'ಸುಧಾರಕ' ಮನೋಭಾವ ಅನ್ನುವ ಮಾತನ್ನು ಎಚ್ಚೆನ್ ವಿಚಾರದಲ್ಲಿ ಸ್ವಲ್ಪ ಒತ್ತಿ ಹೇಳಲು ಕಾರಣವಿದೆ. ಮಹಿಳೆ, ಮಾನವಹಕ್ಕು, ಶಿಕ್ಷಣ, ಅಧಿಕಾರಶಾಹೀ ವ್ಯವಸ್ಥೆಗಳನ್ನು ಇಂಡಿಯಾದ ಸಂದರ್ಭದಲ್ಲಿ ವಿಶ್ಲೇಷಿಸುವಾಗ ನಾವು ಹೆಚ್ಚು ಸೂಕ್ಷ್ಮವಾಗಬೇಕಾಗುತ್ತದೆ. ಇವುಗಳ ಆಮೂಲಾಗ್ರ ಬದಲಾವಣೆಯಾಗಬೇಕೆ ಅಥವಾ ಸುಧಾರಣೆ ಆಗಬೇಕೆ ಎಂಬ ಮಾತು ಬಂದಾಗ ಎಚ್ಚೆನ್ ವ್ಯವಸ್ಥೆಯೊಳಗಿನ ಒಬ್ಬ ಸುಧಾರಕರಾಗಿ ಮಾತ್ರ ನಮಗೆ ಕಾಣುತ್ತಾರೆ. ಹಾಗೆಯೇ ಧರ್ಮದೊಳಗಿನ ಒಬ್ಬ ಬಂಡಾಯಗಾರನಾಗಿ ನಮಗೆ ಗೋಚರವಾಗುತ್ತಾರೆಯೇ ಹೊರತು, ಧರ್ಮವನ್ನೇ ಧಿಕ್ಕರಿಸುವ ಒಬ್ಬ ಕ್ರಾಂತಿಕಾರಿಯಾಗಿ ಕಾಣುವುದಿಲ್ಲ. ಎಚ್ಚೆನ್ ಅವರ 'ತೆರೆದ ಮನ' ಪುಸ್ತಕದಿಂದ ಈ ಮಾತಿಗೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಶಿಕ್ಷಣದ ವಿಚಾರದಲ್ಲೇ ಹೇಳುವುದಾದರೆ, ವಸಾಹತುಶಾಹಿ ಕೊಡುಗೆಯಾದ ಇಂಗ್ಲಿಷ್ ಮಾದರಿ ಶಿಕ್ಷಣದ ಮೂಲಭೂತವಾದ ಮಾರ್ಪಾಡಿನ ಬಗ್ಗೆ ಎಚ್ಚೆನ್‌ಗೆ ಆಸಕ್ತಿ ಇದ್ದಂತಿಲ್ಲ. ಬದಲಾಗಿ ಅದನ್ನೇ ಸುಧಾರಿಸುವಲ್ಲಿ ಎಚ್ಚೆನ್ ಅವರ ತವಕವಿದೆ. ವೈಜ್ಞಾನಿಕ ಮನೋಭಾವ ಎಂದರೆ ಪವಾಡಗಳನ್ನು ವಿರೋಧಿಸುವುದು ಮಾತ್ರ ಎಂಬ ಸೀಮಿತತೆಗೆ ಎಚ್ಚೆನ್ ವಿಚಾರಗಳು ನಿಂತುಬಿಡುತ್ತವೇನೋ ಅನ್ನಿಸಿಬಿಡುತ್ತದೆ. ಸಾಯಿಬಾಬಾನಂಥ ಡೊಂಗಿಗಳು ಜನರನ್ನು ವಂಚಿಸುತ್ತಾರೆ ಅನ್ನುವುದು ನಿಜ. ಆದರೆ ಇಡೀ ದೇಶವನ್ನು ಉರಿಸುವ ಮತೀಯ ವಾದ? ಅಥವಾ ಆ ಕಲ್ಪನೆಯನ್ನೇ ಹೊತ್ತ ರಾಜಕೀಯ ಶಕ್ತಿಗಳು? ಇಂಥ ಆತಂಕಕಾರಿ ವಿಚಾರಗಳ ಬಗ್ಗೆ ಎಚ್ಚೆನ್ ಹೆಚ್ಚು ಚಿಂತಿಸಿದಂತೆ ಕಾಣುವುದಿಲ್ಲ. ಇದು ಅವರ ಬರಹದ ಅಥವಾ ವ್ಯಕ್ತಿತ್ವದ ಕೊರತೆ ಎಂದು ನಾನು ಹೇಳಬಯಸುವುದಿಲ್ಲ. ಆದರೆ ಪ್ರಸ್ತುತಕ್ಕೆ ಸದಾ ಸ್ಪಂದಿಸುವ ಎಚ್ಚೆನ್ ಅಂಥವರು ಇಂಥವುಗಳ ಬಗ್ಗೆ ಕೂಡ ಇನ್ನು ಹೆಚ್ಚು ನಿರ್ದಿಷ್ಟ ಹೋರಾಟಗಳನ್ನು ನಡೆಸಬಹುದಾಗಿತ್ತೇನೋ ಎಂಬ ಆಶಯ. ಇವೆಲ್ಲವನ್ನು ಮೀರಿ ಎಚ್ಚೆನ್ ಒಬ್ಬ ನಿಷ್ಠಾವಂತ ಮಾನವತಾವಾದಿ. ಒಟ್ಟಾರೆ ಸಮಾಜಕ್ಕೆ ಒಳ್ಳೆಯದಾಗಬೇಕೆಂಬ ಹಂಬಲ ಹೊತ್ತ ವ್ಯಕ್ತಿ. ಇದನ್ನು ಯಾರೂ ಪ್ರಶ್ನಿಸುವಂತಿಲ್ಲ. ಧರ್ಮದ ಅನಿಷ್ಟಗಳನ್ನು ಪ್ರತಿಭಟಿಸಿ, ವೈಜ್ಞಾನಿಕ ಮೌಲ್ಯಗಳಿಗೆ ಬೆಲೆ ಕೊಡುವ ಎಚ್ಚೆನ್, ಪುನರ್ಜನ್ಮ ಇತ್ಯಾದಿ ಸಾಧಿಸಿತೋರಿಸಲು ಸಾಧ್ಯವಿಲ್ಲದ ವಿಚಾರಗಳ ಬಗ್ಗೆ ಅವೈಜ್ಞಾನಿಕವಾಗಿಯೇ ನಂಬುತ್ತಾರೆ. ಮೌಢ್ಯಗಳ ವಿರುದ್ಧದ ವಿಚಾರವಾದಿ ಎಂದು ಗುರುತಿಸಲಾದ ಎಚ್ಚೆನ್

ಅವರ ಇಂಥ ಗೊಂದಲಗಳನ್ನು ಗುರುತಿಸುವುದು ಕೂಡ ಅವರ ಕೃತಿಗೆ ದೊರಕಿಸುವ ನ್ಯಾಯವಾಗುತ್ತದೆ. ಎಚ್ಚೆನ್ ಇಡೀ ಪುಸ್ತಕದಲ್ಲಿ ಗಾಂಧಿ ಮತ್ತು ನೆಹರೂ ಇಬ್ಬರನ್ನು ಹಲವಾರು ಬಾರಿ ಹೆಸರಿಸುತ್ತಾರೆ. ಮತ್ತು ಇವರಿಬ್ಬರ ಆದರ್ಶಗಳಲ್ಲಿ ಅಪಾರ ನಂಬಿಕೆ ಇಟ್ಟಿದ್ದಾರೆ. ವಾಸ್ತವವಾಗಿ ಗಾಂಧಿ ಗ್ರಾಮೀಣ ಬದುಕಿಗೆ, ಗೃಹ ಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಟ್ಟವರು. ಗ್ರಾಮೀಣಾಭಿವೃದ್ಧಿ ದೇಶದ ಅಭಿವೃದ್ಧಿ ಎಂದು ನಂಬಿದವರು. ಆದರೆ ನೆಹರು ಬೃಹತ್ ಕೈಗಾರಿಕಾಶಾಹಿಯನ್ನು, ನಗರಾಭಿವೃದ್ಧಿಯನ್ನು ದೇಶದ ಅಭಿವೃದ್ಧಿ ಎಂದು ಭ್ರಮಿಸಿದವರು. ಎಚ್ಚೆನ್ ಈ ಇಬ್ಬರನ್ನು ತಮ್ಮ ಮೇಲೆ ಪ್ರಭಾವ ಬೀರಿದವರು ಎನ್ನುವಾಗ ಇವರಲ್ಲಿ ಯಾರ ಪ್ರಭಾವ ಹೆಚ್ಚು ಹಾಗೂ ಯಾರ ವಿಚಾರ ಪ್ರಗತಿ ಪರವಾದದ್ದು ಎಂದು ಮಾತ್ರ ಹೇಳುವುದಿಲ್ಲ. ಸಾರಾಸಗಟಾಗಿ ನೆಹರು ಮತ್ತು ಗಾಂಧಿಯನ್ನು ನಂಬುತ್ತಾರೆ. ಎಚ್ಚೆನ್ ದ್ವಂದ್ವಕ್ಕೆ ಇದೊಂದು ಉದಾಹರಣೆ.

ಒಬ್ಬ ಚಿಂತಕನಲ್ಲಿ ಯಾವ ಗೊಂದಲಗಳಿರುವುದೂ ತಪ್ಪು ಎಂದೇನೂ ಅಲ್ಲ. ಕುಗ್ರಾಮದಲ್ಲಿ ಹುಟ್ಟಿ ಬಂದ ಎಚ್ಚೆನ್ ನಾನಾ ಹಂತಗಳಲ್ಲಿ ಬದುಕನ್ನು ವಿಸ್ತರಿಸಿಕೊಳ್ಳುತ್ತಾ ಈ ಶತಮಾನದ ಎಲ್ಲ ಮುಖ್ಯ ಘಟನೆಗಳನ್ನು ಕಂಡವರು. ಗಾಂಧಿ, ನೆಹರು ಪ್ರಭಾವವಲ್ಲದೆ, ರಾಮಕೃಷ್ಣಾಶ್ರಮದಂಥ ಆಧ್ಯಾತ್ಮಿಕ ಪರಿಸರದಲ್ಲಿ ಬೆಳೆದವರು. ಸ್ವಾತಂತ್ರ್ಯ ಭಾರತದ ಹಲವು ಸೋಲುಗಳ ಸಂಕೇತವಾಗಿ ಬೆಳೆಯುತ್ತಿರುವ ಯುವಜನಸಮೂಹಗಳ ಕರಾಳ ಭವಿಷ್ಯವನ್ನು ಅವರ ನಡುವೆಯೇ ಬದುಕುತ್ತ ಅರ್ಥಮಾಡಿಕೊಂಡವರು. ಹಿಂದೂ ಧರ್ಮದಲ್ಲಿಯ ಒಳ್ಳೆಯ ಸಂಗತಿಗಳ ಬಗ್ಗೆ ಪ್ರೀತಿ ಬೆಳೆಸಿಕೊಂಡೂ ಇತರ ಧರ್ಮಗಳನ್ನು ಗೌರವಿಸಿದವರು.

ಈ ಹಿನ್ನೆಲೆಯಲ್ಲಿ ಮತ್ತು ಅರ್ಥೈಸಲು ಸಾಧ್ಯವಿಲ್ಲದಂಥ ಸಂಕೀರ್ಣ ವ್ಯವಸ್ಥೆಯ ಬಗ್ಗೆ ಮಾತನಾಡುವಾಗ ಅಥವಾ ಬರೆಯುವಾಗ ಇಂಥ ಗೊಂದಲಗಳು ಅನಿವಾರ್ಯ. ಆದರೆ "ತೆರೆದ ಮನ" ಪುಸ್ತಕ ಇವೆಲ್ಲವನ್ನೂ ಮೀರಿ ನಿಲ್ಲುತ್ತದೆ. ಕಂಡದ್ದನ್ನು ಕಂಡ ಹಾಗೆ ಅನ್ನಿಸಿದ್ದನ್ನು ಅನ್ನಿಸಿದ ಹಾಗೆ ನಿರ್ಭೀತಿಯಿಂದ ಹೇಳುವ ಎಚ್ಚೆನ್ ಒಟ್ಟಾರೆ ಏನಾದರೂ ಆಗಲಿ ಅದು ಮನುಷ್ಯ ವಿರೋಧಿಯಾಗಕೂಡದು, ಸತ್ಯದ ಪರವಾಗಿರಬೇಕು, ಮತ್ತು ಆಮೂಲಕ ಸಂಸ್ಕೃತಿಯ ಉನ್ನತೀಕರಣ ಸಾಧ್ಯವಾಗಬೇಕು ಎಂದು ನಂಬಿದವರು. ಈ ಮೌಲ್ಯಗಳ ಪ್ರತಿಪಾದನೆಯೇ ತೆರೆದ ಮನ.

ತೆರೆದ ಮನ ಪುಸ್ತಕದಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳಿವೆ. ಅನುಭವ, ವಿಚಾರ, ನೆನಪುಗಳು ಮತ್ತು ಲಲಿತ ಪ್ರಬಂಧಗಳು. ಒಂದು ಲೇಖನದಿಂದ ಇನ್ನೊಂದು ಲೇಖನಕ್ಕೆ ಸಂಬಂಧವಿಲ್ಲದ ಬಿಡಿಬರಹಗಳಂತೆ ಕಂಡರೂ ಸೃಜನಶೀಲವಾದ ಮನಸ್ಸೊಂದು ಇವೆಲ್ಲವನ್ನೂ ಎಲ್ಲೋ ಒಂದು ಕಡೆ ಬಂಧಿಸುತ್ತದೆ. ಸರಳವಾದ ಅಷ್ಟೇ ಸುಲಲಿತವಾದ ಭಾಷೆ. ಆಗಾಗ ಕಾಣಿಸಿಕೊಳ್ಳುವ ಲಘು ಹಾಸ್ಯ, ವಿಡಂಬನೆ ಇಡೀ ಬರಹವನ್ನು ನಮಗೆ ಆಪ್ತವಾಗಿಸುತ್ತದೆ. ನಾನಾ ಅನುಭವಗಳು ಮತ್ತು ವ್ಯಕ್ತಿಗಳ ಪ್ರಭಾವದಿಂದ ಹಾಗೂ ಸ್ವಂತ ಆಲೋಚನೆಯಿಂದ ಹೊರಹೊಮ್ಮಿದ ಈ ಸಾಂದರ್ಭಿಕ ಬರಹಗಳು ನಮ್ಮ ಯುವ ಜನರಿಗೆ ತುಂಬ ಉಪಯುಕ್ತವಾಗುತ್ತವೆ. ಮತ್ತು

ಬೆಳೆಯುವ ಮನಸ್ಸನ್ನು ಚಿಂತನೆಗೆ ಹಚ್ಚುತ್ತವೆ. ಇವೆಲ್ಲದರ ಆಚೆಗೆ ಹೇಳಬೇಕಾದ ಮಾತೊಂದಿದೆ. ಎಚ್ಚೆನ್ ಅವರ ಸರಳ ಆದರ್ಶ ಬದುಕು ಈ ಬರಹಗಳನ್ನು ಮೀರಿದ್ದು.

ನ್ಯಾಯಾಧೀಶನ ನೆನಪುಗಳು : *ಕೋ. ಚೆನ್ನಬಸಪ್ಪ*

ಇಂಡಿಯಾದ ನ್ಯಾಯ ಪದ್ಧತಿ ಈಗ ವಿವಾದಾಸ್ಪದ. ನ್ಯಾಯ ನೀಡಬೇಕಾದ ಕೆಲವು ನ್ಯಾಯಾಧೀಶರ ಚಾರಿತ್ರ್ಯವೇ ಶಂಕಾಸ್ಪದ. ಶ್ರೀಸಾಮಾನ್ಯನಂತೂ ನ್ಯಾಯದ ನಂಬಿಕೆಯನ್ನೇ ಕಳೆದುಕೊಂಡಿದ್ದಾನೆ. ಹಣಬಲ ಅಥವಾ ಅಧಿಕಾರ ನ್ಯಾಯ ದೇವತೆಗೆ ಕಿರುಕುಳ ಕೊಡುತ್ತಿರುವ ಈ ಸಂದರ್ಭದಲ್ಲಿ ವಕೀಲರಾಗಿ ನ್ಯಾಯಾಧೀಶರಾಗಿ ಹಲವು ದಶಕಗಳ ಕಾಲ ಅನುಭವ ಪಡೆದು, ವಿಚಾರವಾದಿ ಹಾಗೂ ಸಾಹಿತಿಯಾಗಿಯೂ ಪ್ರಸಿದ್ಧರಾದ ಕೋ. ಚೆನ್ನಬಸಪ್ಪ ತಮ್ಮ 'ನ್ಯಾಯಾಧೀಶನ ನೆನಪುಗಳು' ಗ್ರಂಥದಲ್ಲಿ ಜೀವಮಾನದುದ್ದಕ್ಕೆ ಕಂಡುಂಡ ಅನೇಕ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅವರ ನೇರ ಹಾಗೂ ನಿರ್ಭೀತವಾದ ಬರಹ ನಮ್ಮ ನ್ಯಾಯಾಂಗದ ಕತ್ತಲು ಬೆಳಕಿನ ವಿನ್ಯಾಸಗಳನ್ನು ದರ್ಶಿಸುತ್ತದೆ.

ಪುಸ್ತಕದ ಬಗ್ಗೆ ಬರೆಯುತ್ತ ಕೋ. ಚೆನ್ನಬಸಪ್ಪ ಅವರು ಹೇಳುವ ಕೆಲವು ಮಾತುಗಳನ್ನು ಇಲ್ಲಿ ಉದಾಹರಿಸುವುದು ಸೂಕ್ತ - "ನ್ಯಾಯಾಧೀಶನ ಈ ನೆನಪುಗಳನ್ನು ಓದುವುದರಿಂದ ನ್ಯಾಯಪರಿಪಾಲನೆಯಲ್ಲಿ ಪಾಲ್ಗೊಳ್ಳಲೇಬೇಕಾದ ನ್ಯಾಯಾಧೀಶ, ವಕೀಲ, ಕಕ್ಷಿಗಾರ, ಸರ್ಕಾರ, ಸಮಾಜ ಹೇಗೆ ನಡೆದುಕೊಳ್ಳಬೇಕು ಎಂಬುದು ಕೆಲಮಟ್ಟಿಗಾದರೂ ಮನವರಿಕೆಯಾದರೆ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾದೀತು ಈ ನ್ಯಾಯ ಪರಿಪಾಲನಾ ಪದ್ಧತಿ ಮತ್ತು ಸ್ಥಿತಿಗತಿಯನ್ನು ಮೂರೇ ಮೂರು ಶಬ್ದಗಳಲ್ಲಿ ಹೇಳಿ ಮುಗಿಸಬಹುದು. 'ಅಪರಿಮಿತ ವಿಳಂಬ' 'ಭರಿಸಲಾಗದ ವೆಚ್ಚ' 'ಕೊನೆಗೂ ಸಂದೇಹಾಸ್ಪದ ನ್ಯಾಯ' ನ್ಯಾಯಾಲಯಗಳಿಗೆ ಪರಿಹಾರಕ್ಕೆಂದು ಬರುವ ನೊಂದ ಪ್ರಜೆಗಳು ಶೀಘ್ರ ನ್ಯಾಯ ದೊರಕದೆ ನ್ಯಾಯಾಲಯಗಳ ಮುಂದೆ ನಿಂತು ಮಣ್ಣುತೂರಿ ಬೆರಳು ಮುರಿದು ಮನೆಮಠ ಹಾಳುಮಾಡಿಕೊಂಡು ನಿರ್ಗತಿಕರಾಗಿ ಹೋದವರನ್ನು ನೋಡಿದ್ದೇನೆ. ಅಷ್ಟು ದೀರ್ಘಕಾಲ, ಅಷ್ಟು ವೆಚ್ಚ ಮಾಡಿದರೂ ಕೊನೆಗೆ ಅವರಿಗೆ ಸಿಗುವ ನ್ಯಾಯ ಎಂಥಾದ್ದು? ಸಂಶಯಾಸ್ಪದ....... ಲೋಕ ಅದಾಲತ್, ಗ್ರಾಹಕರ ಸಂರಕ್ಷಣಾ ವೇದಿಕೆ, ಆಡಳಿತ ನ್ಯಾಯ ಮಂಡಲಿ...... ಮುಂತಾದ ವ್ಯವಸ್ಥೆಗಳನ್ನು ಜಾರಿಯಲ್ಲಿ ತರಲಾಗಿದೆ. ಆದರೆ ಇವೆಲ್ಲ ಉಪಶಮನದ ಉಪಾಯಗಳೇ ಹೊರತು ರೋಗ ನಿವಾರಣ ಪದ್ಧತಿಯಲ್ಲ". ಕೋ. ಚೆ. ಅವರ ಈ ಮಾತುಗಳ ಹಿನ್ನೆಲೆಯಲ್ಲಿ ಅವರ ಇಡೀ ಬರಹ ಹರಡಿಕೊಂಡಿದೆ. ಸುಮಾರು ನಾನೂರು ಪುಟಗಳಿಗೂ ಮಿಕ್ಕಂತೆ ಅರವತ್ಮೂರು ಲೇಖನಗಳಲ್ಲಿ ನ್ಯಾಯಾಂಗದೊಂದಿಗಿನ ತಮ್ಮ ಇಡೀ ಅನುಭವಗಳನ್ನು ದಾಖಲಿಸಿದ್ದಾರೆ. ಈ ಲೇಖನಗಳಲ್ಲಿ ಅಸಹಾಯಕ ಮಹಿಳೆಯರು, ಸಮಾಜದ ಕಟ್ಟಕಡೆಗಿನ ದಲಿತರು; ನಿರ್ಲಕ್ಷಿಸಲ್ಪಟ್ಟ ನಾಲ್ಕನೇ ವರ್ಗದ ನೌಕರರು, ಮುಂತಾಗಿ ಅನ್ಯಾಯಕ್ಕೊಳಗಾದ ಜನರ ಚಿತ್ರಗಳು ಮೂಡುತ್ತವೆ. ನ್ಯಾಯನಿರ್ಣಯ ಏಕೆ ತಡವಾಗುತ್ತದೆ ಎಂಬುದಕ್ಕೆ ಉದಾಹರಣೆ ಸಮೇತ ಸಾಕ್ಷಿಗಳನ್ನು ಒದಗಿಸುತ್ತಾರೆ.

ಕೊಲೆಗಾರನೊಬ್ಬ ಏಕೆ ಕೊಲೆಗಾರನಾದ ಎಂಬ ಸಂದರ್ಭದ ಹಿನ್ನೆಲೆಯನ್ನು ಕುರಿತು ಸೂಕ್ಷ್ಮವಾಗಿ ಚಿಂತಿಸುತ್ತಾರೆ. ಕೊಲೆಗಾರನಿಗೂ ಹೃದಯವಿರುವುದನ್ನು ಗುರ್ತಿಸುತ್ತಾರೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಇಡಲು ಕಾರಣರಾದ ಪಕ್ಷಪಾತಿಗಳನ್ನು ನಿರ್ಭೀತಿಯಿಂದ ಹಳಿಯುತ್ತಾರೆ. ಕೋ. ಚೆ. ಅವರು ಸ್ವತಃ ಒಬ್ಬ ಲೇಖಕರೂ ಆಗಿರುವುದರಿಂದ ಅವರ ಬರಹಗಳಿಗೆ ಸಾಹಿತ್ಯದ ಗುಣ ಬಂದಿದೆ. ಬೇರೆಲ್ಲಿಯೂ ಕೆಲಸ ಸಿಗಲಿಲ್ಲವೆಂದು ಅಸಹಾಯಕರಾಗಿ ವಕೀಲರುಗಳಾಗುವ ನಮ್ಮ ಅನೇಕ ಯುವ ಜನರು ಇವರ ಬರಹಗಳನ್ನು ಓದುವ ಅಗತ್ಯವಿದೆ.

ಯಕ್ಷರಂಗಕ್ಕೊಂದು ಪ್ರವಾಸ : *ಶಿವರಾಮಕಾರಂತ*

ಡಾ.ಶಿವರಾಮ ಕಾರಂತ ಅವರ ಯಕ್ಷರಂಗಕ್ಕೊಂದು ಪ್ರವಾಸ ಒಂದು ವಿಶಿಷ್ಟವಾದ ಕೃತಿ. ಕಾರಂತರು ಈ ಹಿಂದೆ ಹಲವಾರು ಬಾರಿ ದೇಶವಿದೇಶಗಳನ್ನು ಸುತ್ತಿ ಬಂದಿದ್ದಾರಾದರೂ ಯಕ್ಷರಂಗ ಪ್ರವಾಸ ಅವರೇ ಕಟ್ಟಿದ 'ಯಕ್ಷರಂಗ' ಸಂಸ್ಥೆಯ ಜೊತೆಗಿನ ಪ್ರವಾಸವಾಗಿದೆ. ಅವರೇ ಹೇಳಿಕೊಂಡಂತೆ ಲೋಕೋದ್ಧಾರದ ಅಮಲು, ಪತ್ರಿಕೋದ್ಯಮದ ಅಲೆದಾಟ, ವಾಸ್ತು ಮತ್ತು ಕಲೆಗಳ ಅಭಿರುಚಿ ಅವರ ಒಟ್ಟಾರೆ ಪ್ರವಾಸದ ಹಿಂದಿನ ಪ್ರೇರಣೆಗಳು. ಯಕ್ಷರಂಗದ ಕಲಾವಿದರೊಡನೆ ರಷ್ಯಾ, ಕೊಲ್ಲಿ ರಾಷ್ಟ್ರಗಳು ಮತ್ತು ದಕ್ಷಿಣ ಅಮೇರಿಕಾದ ಹಲವು ರಾಷ್ಟ್ರಗಳನ್ನು ಸುತ್ತಿ ಬಂದ ಕಾರಂತರು ಅತ್ಯಂತ ಸಂಕ್ಷಿಪ್ತವಾಗಿ ಅವರ ಸಂಸ್ಥೆ, ಪ್ರದರ್ಶನ ರೀತಿ, ವ್ಯವಸ್ಥೆ ಮತ್ತು ಅಲ್ಲಿನ ಜನರ ಪ್ರತಿಕ್ರಿಯೆ ಇವಿಷ್ಟೇ ವಿಷಯಗಳಿಗೆ ಸೀಮಿತವಾಗಿ ಟಿಪ್ಪಣಿ ರೂಪದ ಪ್ರವಾಸ ಕಥನ ಬರೆದಿದ್ದಾರೆಂದೆನಿಸುತ್ತದೆ.

'ಇನ್ನೊಮ್ಮೆ ರಷ್ಯಾಕ್ಕೆ' ಮತ್ತು 'ರಷ್ಯಾದಲ್ಲಿನ ನಮ್ಮ ಪ್ರದರ್ಶನಗಳು' ಲೇಖನಗಳಲ್ಲಿ ಭಾರತದ ಆಯ್ಕೆಯ ರೀತಿ, ವಿದೇಶದಲ್ಲಿ ಉತ್ಸವವನ್ನು ಸಂಘಟಿಸಲು ಜವಾಬ್ದಾರಿ ವಹಿಸಿಕೊಳ್ಳುವ ವಿವಿಧ ಭಾರತೀಯ ಕಲಾ ನಿರ್ದೇಶಕರ 'ದಡ್ಡತನ' ಮುಂತಾದವುಗಳ ಬಗ್ಗೆ ಕಟುವಾಗಿ ಪ್ರತಿಕ್ರಿಯಿಸುವ ಕಾರಂತರು, ರಷ್ಯಾ ಉತ್ಸವದಂಥ ವಿಶೇಷ ಸಂದರ್ಭದಲ್ಲಿ ಯಾವ ರೀತಿಯ ಪ್ರದರ್ಶನ ತಂತ್ರವನ್ನು ಅಳವಡಿಸಿಕೊಳ್ಳಬಹುದಾಗಿತ್ತು ಎಂಬುದನ್ನ ಹೇಳುವುದಿಲ್ಲ. 'ಕೊಲ್ಲಿ ರಾಷ್ಟ್ರ'ಗಳ ಲೇಖನದಲ್ಲಿ ಕಾರಂತರ ಮಾತಿಲ್ಲದ ಯಕ್ಷಗಾನ ಪ್ರಯೋಗವನ್ನು ಟೀಕಿಸುವವರಿಗೆ ಒಂದು ರೀತಿಯ ಉತ್ತರವಿದೆ ಎಂದೆನಿಸುತ್ತದೆ. ಮಾತಿಲ್ಲದ ಇವರ ಪ್ರಯೋಗಗಳು, ಕನ್ನಡ ಬಾರದ ಕಲಾಸಕ್ತರಿಗೆ ಅನುಕೂಲವಾಗುತ್ತದೆ ಎನ್ನುವುದು ನಿಜವಾದರೂ, ಕನ್ನಡ ಗೊತ್ತಿರುವ ಹಾಗೂ ಮಾತಿನ ಭರಾಟೆಯಲ್ಲೇ ಬದುಕಿರುವ ಯಕ್ಷಗಾನ ಪ್ರಿಯರಿಗೆ ಇವರ ಪ್ರಯೋಗಗಳು ಇಷ್ಟವಾಗದೇ ಹೋದದ್ದು ಅತ್ಯಂತ ಸಹಜವೇ. ಇದಕ್ಕೆ ಕಾರಂತರೇ ಈ ಲೇಖನದಲ್ಲಿ ಉತ್ತರ ಕೊಟ್ಟಿದ್ದಾರೆ ಎಂದನಿಸುತ್ತದೆ. "ಆದರೆ, ಒಂದು ವರ್ಷ ಮೂರು ಹೊಸ ಆಟಗಳನ್ನು ತರಬೇತಿ ಮಾಡಿ ಉಡುಪಿಯಲ್ಲೇ ಆಡಿದ ಹೊತ್ತಿನಲ್ಲಿ-ಆ ಮೂರು ಆಟಗಳಿಗೆ ಒಟ್ಟು ರೂ. ೫೦೦-೦೦ ಲಭ್ಯವಾಯಿತು! ಆಗ ಜನರ ಪ್ರೀತಿಯೋ ಇನ್ನೇನೋ ನನ್ನ ಪ್ರಯತ್ನಕ್ಕೆ ಇರಲಿಲ್ಲ. ನನ್ನ ಪ್ರಯತ್ನ ಅವರ

ಪ್ರೀತಿಯ ಸಂಪ್ರದಾಯಕ್ಕೆ ಅಪಾಯಕಾರಿ ಎನಿಸಿತೊ ಏನೋ! ಅಂತೂ-ನಾನು ಬೇಡಿ ಬೇಡಿ ಶ್ರೋತೃಕಾರರ, ಪ್ರೇಕ್ಷಕರ ಕೃಪೆಯನ್ನು ಸಂಪಾದಿಸಲು ಇಷ್ಟ ಪಡದಾದೆ. ಆಗಾಗ ಪರ ಪ್ರಾಂತಗಳಿಂದ ಬರಬಹುದಾದ ಕರೆಗಳಿಂದ ನಮ್ಮ ಯಕ್ಷರಂಗ ಬದುಕುವಂತಾಯಿತು.... ಇದಕ್ಕೆ ಈತನಕ ಪರದೇಶಗಳು ಕೊಟ್ಟಿರುವ ವಿಶೇಷ ಮನ್ನಣೆಯನ್ನು ಕಂಡ ನನಗೆ, ಅದನ್ನು ಇಲ್ಲಿಗೇ ಕೈ ಬಿಡಲು ಇಷ್ಟವಾಗಲಿಲ್ಲ. ನನ್ನ ಕೆಲಸ ನನಗೆ ತೃಪ್ತಿ ಕೊಟ್ಟಿದೆ ; ಶ್ರಮವನ್ನ ಕೊಟ್ಟಿದೆ ; ಆನಂದ ಕೊಟ್ಟಿದೆ''.

ಕಾರಂತರ ಈ ಹೊಸ ಯಕ್ಷಗಾನ ಪ್ರಯೋಗ ಸ್ಥಳೀಯರಿಗಿಂತ ಭಾಷೆ ಗೊತ್ತಿಲ್ಲದ ಕನ್ನಡೇತರರಿಗೆ ಸರಿಯಾದದ್ದು ಎಂಬ ಅಭಿಪ್ರಾಯವನ್ನು ಕಾರಂತರೆ ತಮ್ಮ ಈ ಮಾತುಗಳ ಮೂಲಕ ಪುಷ್ಟೀಕರಿಸಿದ್ದಾರೆ ಎನ್ನದೆ ವಿಧಿಯಿಲ್ಲ.

ಕೊಲ್ಲಿ ರಾಷ್ಟ್ರದ ಪ್ರದರ್ಶನಗಳ ಬಗ್ಗೆ ಬರೆಯುತ್ತಾ "ಜನರು ಉದಾರಿಗಳಲ್ಲಿ ಉದಾರಿಗಳು. ರಸಿಕರೋ ಅಲ್ಲವೋ ನಾನು ತಿಳಿಯೇ" ಎಂದು ಹೇಳುವ ಮಾತು ಇನ್ನಷ್ಟು ವಿವಾದಸ್ಪದವಾಗುತ್ತದೆ. ಅಂದರೆ ಇಂಥ ಹೊರದೇಶಗಳ ಪ್ರವಾಸ ಹಣಕ್ಕಾಗಿಯೇ? ಎಂಬ ಅನುಮಾನ ಹುಟ್ಟುತ್ತದೆ. ಇದೇನೇ ಇರಲಿ, ಕಾರಂತರ ಯಕ್ಷಗಾನ ಪ್ರಯೋಗಗಳು ಕರ್ನಾಟಕದ ಈ ಕಲೆಯನ್ನು ಜಾಗತಿಕ ಮಾಧ್ಯಮವನ್ನಾಗಿ ಮಾಡುವ ವಿಶ್ವಾಸದಿಂದ ಪ್ರೇರಿತವಾದವುಗಳು ಎನ್ನುವುದರಲ್ಲಿ ಅನುಮಾನವಿಲ್ಲ. ಇಡೀ ಕೃತಿಯಲ್ಲಿ ಅದರಲ್ಲಿಯೂ ರಷ್ಯಾ, ಇಂಗ್ಲೆಂಡ್, ಹಾಗೂ ದಕ್ಷಿಣ ಅಮೇರಿಕಾದ ಪೆರೂ ಮತ್ತು ಬ್ರೆಜಿಲ್‌ಗಳಲ್ಲಿ ಕಾರಂತರ ಪ್ರಯೋಗಗಳು ಅತ್ಯುತ್ತಮ ಪ್ರತಿಕ್ರಿಯೆಯನ್ನು ಪಡೆದುಕೊಂಡಿವೆ ಎನ್ನುವುದನ್ನು ಸಾಬೀತುಪಡಿಸಲಾಗಿದೆ.

ಈ ಪ್ರವಾಸದ ಅತ್ಯುತ್ತಮ ಭಾಗ ದಕ್ಷಿಣ ಅಮೇರಿಕಾದ ಪ್ರವಾಸ. ಅದರಲ್ಲಿಯೂ ಪ್ರಾಚೀನ ದೇಶವಾದ ಪೆರು ಬಗ್ಗೆ ಬರೆಯುವಾಗ ಕಾರಂತರ ಬರಹ ತಮ್ಮ ಎಂದಿನ ಧಾಟಿಯನ್ನು ಕಂಡುಕೊಳ್ಳುತ್ತದೆ. ಪೆರೂವಿನ ಪ್ರಾಚೀನ ಇತಿಹಾಸದ ಜೊತೆ ಮನುಕುಲದ ಚರಿತ್ರೆಯ ವಿಚಾರಗಳನ್ನು ಹೇಳುತ್ತಾ ಬರಹವನ್ನು ನಮಗೆ ತುಂಬಾ ಆಪ್ತವಾಗಿಸುತ್ತಾರೆ. ಅದರಲ್ಲಿಯೂ'ಲೀಮಾ' ನಗರ ಹಾಗೂ ಅದರ ಸಂಕೀರ್ಣತೆ ಹಾಗೂ ಅಲ್ಲಿನ ಬಡತನ ಮತ್ತು ಶ್ರೀಮಂತಿಕೆಯ ಪರಾಕಾಷ್ಠತೆಯ ವೈರುಧ್ಯತೆ - ಇವು ನಮಗೆ ಬೆರಗು ಹುಟ್ಟಿಸುತ್ತವೆ. ಪಾಶ್ಚಾತ್ಯರ ವಸಾಹತೀಕರಣದ ಬಿರುಗಾಳಿಯಲ್ಲಿ ನಾಶವಾಗಿ ಹೋದ 'ಇಂಕಾ' ಜನಾಂಗದ ಸಂಸ್ಕೃತಿ ಕರುಣಾಜನಕವೆನಿಸುತ್ತದೆ.

ಒಟ್ಟಾರೆ ಕಾರಂತರ ಈ ಪ್ರವಾಸ ಹುಚ್ಚು ಮನಸ್ಸಿನ ಹತ್ತು ಮುಖಗಳು ಕೃತಿಯ ಕುತೂಹಲವನ್ನಾಗಲಿ ಅಥವಾ 'ಪೂರ್ವದಿಂದ ಅತ್ಯಪೂರ್ವಕ್ಕೆ'' ಮುಂತಾದ ಕೃತಿಗಳಲ್ಲಿನ ಸೂಕ್ಷ್ಮತೆಯನ್ನಾಗಲಿ ತೋರುವುದಿಲ್ಲ ಎಂದೆನಿಸುತ್ತದೆ.

ಗಿರಿಸ್ನೇಹ : *ಶಮಂತ*

ಶಮಂತ ಅವರ "ಗಿರಿಸ್ನೇಹ" ಪ್ರವಾಸ ಕಥನ ಮಹಿಳೆಯರ ಸಾಹಸ ಕುರಿತ ಒಂದು ಒಳ್ಳೆಯ ಬರಹ. ಈಗಾಗಲೇ ಚಾರಣದಲ್ಲಿ ಅಷ್ಟಿಷ್ಟು ಆಸಕ್ತಿ ಬೆಳೆಸಿಕೊಂಡು ಶಮಂತ ತನ್ನ ಇತರ ಮೂವರು ಸಹ ಪ್ರಯಾಣಿಕರೊಡನೆ ಪೂರ್ವ ಹಿಮಾಲಯದ 'ಮುಕ್ತಿನಾಥ'ಕ್ಕೆ ಹೊರಡುತ್ತಾರೆ. ಇವರ ಜತೆಗಿನ ಇತರ ಮಹಿಳೆಯರು ಬೇರೆ ಬೇರೆ ಕ್ಷೇತ್ರದವರಾಗಿದ್ದು ವಯಸ್ಸಿನಲ್ಲಿಯೂ ಅಸಮತೆ ಇರುವ ಕಾರಣಕ್ಕೆ ಒಬ್ಬೊಬ್ಬರ ಅನುಭವ ಒಂದೊಂದು ತೆರನಾಗಿರುತ್ತದೆ. ಐವತ್ತು ವರ್ಷ ದಾಟಿದ ನಿರ್ಮಲ ಅಂಟಿ ಪ್ಯಾಂಟ್ ಧರಿಸುವುದಾಗಲಿ, ತಿಂಗಳು ತುಂಬಿದ ಪರಿಣಾಮವಾಗಿ ಎಲ್ಲಿ ಮುಟ್ಟಾಗಿ ಬಿಡುತ್ತೇನೋ ಎನ್ನುವ ಆತಂಕವನ್ನು ನಿರ್ಭಿಡೆಯಿಂದ ಹೇಳಿಕೊಳ್ಳುವ ಶಮಂತ ಅವರ ವಾಚಾಳಿತನವಾಗಲಿ, ಇವರ ಸಹಾಯಕ್ಕಾಗಿ ಹೊರಡುವ ನೇಪಾಳಿ ಗೈಡಿನ ಅಸಹನೆಯಾಗಲಿ ಎಲ್ಲವೂ ಒಂದೊಂದು ರೀತಿಯ ಥ್ರಿಲ್‌ಗಳೆ. ಸರಳ ಹಾಗೂ ಮನ ಮುಟ್ಟುವ ಭಾಷೆಯಲ್ಲಿ ಸಂಪೂರ್ಣವಾಗಿ ಹಿಮಾಲಯಕ್ಕೆ ಓದುಗರನ್ನು ಕರೆದೊಯ್ಯುವ ಶಮಂತ ಪರಿಸರ ಹಾಗೂ ಸಾಮಾಜಿಕ ವಿಚಾರಗಳ ಬಗ್ಗೆ ಅಪಾರ ಕಾಳಜಿಯನ್ನು ಉಳ್ಳವರು ಕೂಡ. ಪ್ರವಾಸೋದ್ಯಮವನ್ನೇ ದೇಶದ ಪ್ರಮುಖ ಆದಾಯಗಳಲ್ಲಿ ಒಂದನ್ನಾಗಿಸಿಕೊಂಡ ನೇಪಾಳ ಹೇಗೆ ಸಣ್ಣಪುಟ್ಟ ಹಳ್ಳಿಗಳಲ್ಲಿಯೂ ತನ್ನ ಆಥಿತ್ಯದ ಜಾಲವನ್ನು ಹರಡಿದೆ ಎಂಬುದನ್ನು ತಿಳಿಸಿಕೊಡುವಾಗ ಸಹಜವಾಗಿ ಭಾರತದ ವ್ಯವಸ್ಥೆ ಕುರಿತು ಈ ರೀತಿ ಹೇಳುತ್ತಾರೆ "ಹೋಟೆಲ್ ಉದ್ಯಮದ ಬಗ್ಗೆ ಮಾತಾಡೋ ಕಂತ್ರಿ ಮಿನಿಸ್ಟರ್ಸ್ ಅಧಿಕಾರಿಗಳನ್ನು ಮೊದಲು ಈ ಕಾಡಿಗೆ ಎಳ್ಕೊಂಡುಬಂದು ನಿಮ್ಮ ಮಕ್ಕಳಿಗೆ, ನಿಮ್ಮ ಮನೆ ನಾಯಿಗೆ ನಮ್ಮ ತೆರಿಗೆ ತಿನ್ನಿಸೋ ಬದ್ಲು ಇಂತಹ ಉದ್ಧಾರದ ಕೆಲ್ಸ ಮಾಡಿ ಎನ್ನಬೇಕು". ಹಾಗೆಯೇ ಪ್ರವಾಸೋದ್ಯಮದ ಹೆಸರಿನಲ್ಲಿ ಸಂಪೂರ್ಣ ವಿದೇಶೀಯ ಜ್ವರಕ್ಕೆ ತುತ್ತಾಗಿರುವ ನೇಪಾಳ ಹೇಗೆ ಕ್ರಮೇಣ ತನ್ನ ಮೂಲ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿದೆ ಎಂಬ ವಿಚಾರವನ್ನು ಕೂಡ ಶಮಂತ ಗ್ರಹಿಸಿದ್ದಾರೆ. ಹಿಮಾಲಯದ ಗಿರಿ ಕಂದರಗಳು, ಮತ್ತೆ ಮತ್ತೆ ಸಿಗುವ 'ಗಂಡಕಿ'ನದಿ, ದಾರಿಯುದ್ದಕ್ಕೂ ಸಿಗುವ ಹತ್ತಾರು ವಿದೇಶೀಯ ಗೆಳೆಯ ಗೆಳತಿಯರು, ಹತ್ತುವ ಮತ್ತು ಇಳಿಯುವ ಕಷ್ಟ ಸುಖಗಳು, ಕೊನೆಯಲ್ಲಿಕಾಣುವ ಮುಕ್ತಿನಾಥದ ಭವ್ಯ ನೋಟ ಹಾಗೂ ಸಿಗುವ ಆತ್ಮತೃಪ್ತಿ ಇವೆಲ್ಲವು ಶಮಂತರವರ ಬರಹದಲ್ಲಿ ಜೀವ ಪಡೆದುಕೊಳ್ಳುತ್ತ ನಮ್ಮ ಮನಃಪಟಲದಲ್ಲಿಯೂ ದೃಗ್ಗೋಚರವಾಗುತ್ತವೆ. ಈ ಪುಟ್ಟ ಬರಹದ ಮೂಲಕ ಶಮಂತ ತಮಗೆ ಅನುಭವಿಸುವ ಮತ್ತು ಬರೆಯುವ ಎರಡೂ ಶಕ್ತಿಗಳಿರುವುದನ್ನ ಸಾಬೀತುಪಡಿಸುತ್ತಾರೆ.

ಮದರ್ ತೆರೆಸಾ : *ವಿದ್ಯಾಶಂಕರ್*

ಮದರ್ ತೆರೆಸಾ ಈ ಶತಮಾನದ ಒಂದು ಅಪೂರ್ವ ಮಾನವೀಯ ಚೇತನ. ದೀನರಲ್ಲಿ, ಬಡವರಲ್ಲಿ, ದರಿದ್ರರಲ್ಲಿ ದೇವರನ್ನು ಕಾಣಬೇಕೆಂದು ಸ್ವಾಮಿ ವಿವೇಕಾನಂದ ಹೇಳಿದರು. ಮನುಷ್ಯ ವಿಶ್ವಮಾನವನಾಗಬೇಕೆಂದು ನಮ್ಮ ಮಹತ್ವದ ಕವಿ ಕುವೆಂಪು

ಆಶಿಸಿದರು. ಇಂಥ ಮಾತುಗಳನ್ನು ನಿಜವಾಗಿಸಿದವರು ಮದರ್ ತೆರೇಸಾ. ದೂರದ ಯುಗೋಸ್ಲಾವಿಯಾದಲ್ಲಿ ಹುಟ್ಟಿ ದೀನರ ಸೇವೆಗಾಗಿಯೇ ಕಲ್ಕತ್ತಾಗೆ ಬಂದು ನೆಲೆಸಿದ ಮಹಾ ಚೈತನ್ಯ ಈ ಮದರ್‌ತೆರೆಸಾ.

ಡಾ. ಎಸ್. ವಿದ್ಯಾಶಂಕರರವರು ಬರೆದಿರುವ "ಮದರ್ ತೆರೆಸಾ" ಪುಸ್ತಕ ಗಾತ್ರದಲ್ಲಿ ಚಿಕ್ಕದಾದರು ಮನಸ್ಸಿನ ಮೇಲೆ ಗಾಢ ಪ್ರಭಾವವನ್ನು ಬೀರಬಲ್ಲಂಥ ಒಂದು ಸುಂದರ ಬರವಣಿಗೆ. ಸರ್ವಸುಖಗಳನ್ನು ಪರಿತ್ಯಾಗ ಮಾಡಿ ಜನತೆಯ ಸೇವೆಗೆ ಸಂಪೂರ್ಣವಾಗಿ ಅರ್ಪಿಸಿಕೊಂಡ ಮದರ್ ತೆರೆಸಾ "ನಾನು ಎಲ್ಲರನ್ನೂ ಪ್ರೀತಿಸಬಲ್ಲೆ, ಆದರೆ ನಾನು ಒಬ್ಬನೇ ಒಬ್ಬನನ್ನು ಪ್ರೀತಿಸುವುದಾದರೆ ಅದು ಜೀಸಸ್‌ನನ್ನು ಮಾತ್ರ" ಎಂಬ ಮಾತಿನ ಮೂಲಕ ನಮ್ಮ ಅಕ್ಕಮಹಾದೇವಿಯನ್ನ ನೆನಪಿಗೆ ತರುತ್ತಾರೆ. ಪ್ರತಿಯೊಬ್ಬ ರೋಗಿಯಲ್ಲಿಯೂ ಜೀಸಸ್‌ನನ್ನೆ ಕಾಣುವ ಮತ್ತು ಅವನಿಗೆ ಒಳ್ಳೆಯದಾದಾಗ ಜೀಸಸ್‌ನನ್ನು ಆರಾಧಿಸಿದ ಸುಖ ಕಾಣುವ ಮದರ್ ತೆರೆಸಾ ಕುಷ್ಠರೋಗಿಗಳ ಬಗ್ಗೆ ಅಪಾರವಾದ ಕರುಣೆ ಇಟ್ಟುಕೊಂಡವರು. ಕರುಣೆಯಲ್ಲಿ ನೀವು ಕರುಣೆಯಿಲ್ಲದ ಪವಾಡಗಳನ್ನು ಮಾಡುವುದನ್ನು ನಾನು ಬಯಸುವುದಿಲ್ಲ. ಅದರ ಬದಲು, ಕರುಣೆಯಲ್ಲಿ ನೀವು ತಪ್ಪು ಮಾಡುವುದನ್ನು ನಾನು ಬಯಸುತ್ತೇನೆ" ಎಂದು ತೆರೆಸಾ ಹೇಳುವಾಗ ಗಾಂಧೀಜೀ ನೆನಪಿಗೆ ಬರುತ್ತಾರೆ. ಇಂಥ ಒಬ್ಬ ಮಹಾನುಭಾವಿ, ತ್ಯಾಗ ಜೀವಿ ಮಹಿಳೆಯ ಜೀವನ ಮತ್ತು ವಿಚಾರಧಾರೆಗಳನ್ನು ತಮ್ಮ ನಿರಾಡಂಬರ ಭಾಷೆಯ ಮೂಲಕ ನಮಗೆ ಆಪ್ತವಾಗಿಸುವ ಡಾ. ಎಸ್. ವಿದ್ಯಾಶಂಕರರವರು ಅಭಿನಂದನಾರ್ಹರು.

ಹರಪನಹಳ್ಳಿ ಭೀಮವ್ವ : *ಜಯಸಿಂಹ*

ಜಯಸಿಂಹ ಎಂಬುವವರು ಸಂಪಾದಿಸಿರುವ "ಹರಪನಹಳ್ಳಿ ಭೀಮವ್ವ" ಎಂಬ ಕೃತಿಯಲ್ಲಿ ಭೀಮವ್ವನ ಸಂಕ್ಷಿಪ್ತ ಜೀವನ ವೃತಾಂತದ ಜೊತೆಗೆ ಭೀಮವ್ವ ಸೃಷ್ಟಿಸಿದ ಕೀರ್ತನೆಗಳು, ಸುಳಾದಿ, ಉಗಭೋಗ ಮತ್ತು ಇನ್ನಿತರ ಹಾಡುಗಳನ್ನು ಆಯ್ಕೆಮಾಡಿ ಪ್ರಕಟಿಸಲಾಗಿದೆ. ೧೯ನೇ ಶತಮಾನದಲ್ಲಿ ಬಾಳಿಬದುಕಿದ ಹರಪನಹಳ್ಳಿ ಭೀಮವ್ವ ನಿರಕ್ಷರಕುಕ್ಷಿಯಾಗಿಯೂ ಅಪಾರ ಪ್ರತಿಭೆವುಳ್ಳ ಒಬ್ಬ ಕವಯಿತ್ರಿ. ಭೀಮವ್ವನ ಅನೇಕ ಹಾಡುಗಳು ಮತ್ತು ಕೀರ್ತನೆಗಳು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಈಗಲೂ ಜನಪ್ರಿಯ. ಜನಸಾಮಾನ್ಯರ ನಾಲಿಗೆಯಲ್ಲಿ ಉಳಿಯುವ ಮೂಲಕ ಜಾನಪದ ಕವಯತ್ರಿಯಾಗಿ ಇಂದಿಗೂ ತನ್ನ ಸಾಹಿತ್ಯದ ಪ್ರಭೆಯನ್ನು ಬೀರುವ ಹರಪನಹಳ್ಳಿ ಭೀಮವ್ವಳ ಅನೇಕ ಕೃತಿಗಳನ್ನು ಪರಿಚಯಿಸುವ ಈ ಪುಸ್ತಕ ಇಷ್ಟಕ್ಕೇ ಸೀಮಿತವಾಗುತ್ತದೆ.

* * *

ನಾಟಕ

– ಎಂ.ಕೆ. ಅನಿಲ್

೧

ಯಾವುದೇ ಐಡಿಯಾಲಜಿಯನ್ನು ನೋಡಿದರೆ ಅದು ಕೇವಲ ಕೆಲವು ಸೂತ್ರೀಕೃತ ಕಟ್ಟು-ನಿಟ್ಟುಗಳ, ನಂಬಿಕೆ-ವಿಶ್ವಾಸಗಳ, ಆಲೋಚನಾ ಕ್ರಮಗಳ ವೈರುಧ್ಯರಹಿತ ಫಾರ್ಮುಲ ಆಗಿರದೆ; ಒಂದು ಸಂಘರ್ಷದ ವಲಯವಾಗಿರುತ್ತದೆ. ಮೇಲ್ನೋಟಕ್ಕೆ ತದ್ವಿರುದ್ಧ ಎಂದು ಕಾಣುವ ಪರಿಕಲ್ಪನೆಗಳು ಈ ಸಂಘರ್ಷವಲಯದಲ್ಲಿ ಒಂದೇ ಮೂಲದಿಂದ ಹುಟ್ಟುವ ಆಶೆ-ಆಕಾಂಕ್ಷೆಗಳಿಗೆ, ಭಯ-ಆತಂಕಗಳಿಗೆ ರೂಪಕಗಳನ್ನು ಒದಗಿಸಿ ಅವುಗಳ ಅಭಿವ್ಯಕ್ತಿಯ ಸ್ವರೂಪವನ್ನು ಒಂದು ಐಡಿಯಾಲಜಿಯಾಗಿ ನಿರ್ಧರಿಸುತ್ತದೆ. ಅಂದರೆ, ಚರಿತ್ರೆಯ ಗತಿಶೀಲತೆಯಲ್ಲಿ ಅಮೂರ್ತ ಮೌಲ್ಯಗಳು ಮತ್ತು ಪರಿಕಲ್ಪನೆಗಳಿಗೆ ಅರ್ಥಗಳನ್ನು ನೀಡುವುದು ಈ ರೂಪಕಗಳೇ. ಹೀಗೆ ನೋಡಿದಾಗ ಒಂದು ಐಡಿಯಾಲಜಿಯ ಶಕ್ತಿ ಇರುವುದು ಅದರ ಸೂತ್ರೀಕೃತ ತತ್ವಗಳಲ್ಲಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಉದಾಹರಣೆಗೆ ನಮ್ಮ ಮಧ್ಯಮ ವರ್ಗದ ಉದಾರ ಮಾನವತಾವಾದಿ ಐಡಿಯಾಲಜಿ'ಸ್ವಾತಂತ್ರ್ಯ'ದ ಪರಿಕಲ್ಪನೆಯನ್ನು ಎರಡು ರೂಪಕಗಳಲ್ಲಿ ವಿಂಗಡಿಸಿ ನಿರ್ವಚಿಸಿಕೊಳ್ಳುವುದನ್ನು ನೋಡಬಹುದು - ಎಡ ಅಥವಾ ಬಲಪಂಥವೇ ಆಗಿರಲಿ, ಸ್ವಾತಂತ್ರ್ಯದ ಪರಿಕಲ್ಪನೆಯನ್ನು 'ಹಕ್ಕು' ಮತ್ತು 'ಕರ್ತವ್ಯ'ಗಳ ರೂಪಕವಲಯಗಳಲ್ಲಿ ನಿರ್ವಚಿಸಿಕೊಳ್ಳುವುದನ್ನು ನಮ್ಮ ಕಾನೂನು, ನಮ್ಮ ಕಾರ್ಮಿಕ ಸಂಘಟನೆಗಳು, ಅಷ್ಟು ಯಾಕೆ, ನಮ್ಮ ಕುಟುಂಬಗಳಲ್ಲೇ ನಾವು ನೋಡಬಹುದು. ಈ ಹಕ್ಕುಗಳು ಮತ್ತು ಕರ್ತವ್ಯಗಳು ಏನು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಇರಬಹುದೇ ಹೊರತು, ಸ್ವಾತಂತ್ರ್ಯವನ್ನು ಈ ಎರಡು ರೂಪಕಗಳಲ್ಲಿ ವಿಂಗಡಿಸಿ ಅರ್ಥೈಸಿಕೊಳ್ಳುವ ಕ್ರಮದ ಬಗ್ಗೆ ಮೂಲಭೂತವಾದ ಭಿನ್ನಾಭಿಪ್ರಾಯಗಳಿಲ್ಲ. ನಮ್ಮ ನ್ಯಾಯಾಲಯಗಳಿಂದ ಹಿಡಿದು ನಮ್ಮ ದೈನಂದಿನ ಸಂಬಂಧಗಳ ವರೆಗೆ ಈ ರೂಪಕಗಳ ವ್ಯಾಪ್ತಿ ಇರುವುದು

ಕಾಣಿಸುತ್ತದೆ. ಹೇಗೆ'ನ್ಯಾಯ', 'ಅಧಿಕಾರ' 'ಸಮಾನತೆ'- ಇವತ್ತು ನಮಗೆ ಎದುರಾಗುತ್ತಿರುವ ಹಲವಾರು ಮುಖ್ಯ ಪರಿಕಲ್ಪನೆಗಳ ಸ್ವರೂಪದ ಆಳದಲ್ಲಿ ಇಂತಹ ರೂಪಕಗಳು ನಮ್ಮ ಗ್ರಹಿಕೆಯ ಕ್ರಮಗಳನ್ನು ರೂಪಿಸುತ್ತಿರುವುದನ್ನು ನೋಡಬಹುದು.

೧೯೯೨ ರಲ್ಲಿ ಪ್ರಕಟವಾದ ನಾಟಕಗಳನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಆ ಎಲ್ಲ ನಾಟಕಗಳನ್ನು ರೂಪಿಸಿರುವ ಸೈದ್ಧಾಂತಿಕ ಸಾಮ್ಯವನ್ನು ಗುರುತಿಸಬಹುದು. ಮೇಲ್ಪದರುಗಳಲ್ಲಿ ಎಷ್ಟೇ ವ್ಯತ್ಯಾಸಗಳು ಕಂಡುಬಂದರೂ ಆಳದಲ್ಲಿ ನಮ್ಮ ಅಂತರಂಗವನ್ನು ರೂಪಿಸುತ್ತಿರುವ ರೂಪಕಗಳಲ್ಲಿ ಈ ವ್ಯತ್ಯಾಸಗಳು ಕರಗಿಹೋಗುವುದನ್ನು, ಒಂದು ಸೈದ್ಧಾಂತಿಕ ಬಂಧನದಲ್ಲಿ ಸಿಲುಕಿಕೊಂಡಿರುವ ನಮ್ಮ ಸೃಜನಶೀಲತೆಯ ಮಿತಿಗಳನ್ನು ಗುರುತಿಸಿಕೊಳ್ಳಬಹುದು. ಸುಮಾರು 150 ವರ್ಷಗಳ ಚರಿತ್ರೆಯ ಸಂಘರ್ಷಗಳ ಪರಿಣಾಮವಾಗಿ ನಮ್ಮ ಮಧ್ಯಮ ವರ್ಗದ ಉದಾರ ಮಾನವತಾವಾದಿ ಮನೋಧರ್ಮ ಸಾಧಿಸಿರುವ ಸೈದ್ಧಾಂತಿಕ ಆಧಿಪತ್ಯವನ್ನು ಹೆಚ್ಚು ಸ್ಪಷ್ಟವಾಗಿ ನೋಡಬಹುದು.

೨

ನಮಗೆಲ್ಲ ಗೊತ್ತಿರುವ ಹಾಗೆ ನಮ್ಮ ದೇಶಿ ಮಧ್ಯಮ ವರ್ಗ ಹುಟ್ಟಿದ್ದು ಬ್ರಿಟಿಷ್ ವಸಾಹತುಶಾಹಿ ವ್ಯವಸ್ಥೆಯ ಒಡಲಿನಿಂದಇಲ್ಲ. ತಮ್ಮ ಸಾಮ್ರಾಜ್ಯಶಾಹಿ ಆಡಳಿತವನ್ನು ಸುಸೂತ್ರವಾಗಿ ನಡೆಸುವುದರ ಸಲುವಾಗಿ ಬ್ರಿಟಿಷರಿಗೆ ಒಂದು ದೇಶಿ ಆಡಳಿತಗಾರರ ವರ್ಗದ ಅಗತ್ಯವಿತ್ತು. ಈ ಅಗತ್ಯವನ್ನು ಕುರಿತು 1835ರಲ್ಲಿ ಮೆಕಾಲೆ ಹೀಗೆ ಬರೆದ :

"We must at present do our best to form a class who may be interpreters between us and the millions whom we govern, a class of persons Indian in blood and colour, but English in tastes, in opinions, in morals, and in intellect".

ಈ ಮಧ್ಯಮ ವರ್ಗಕ್ಕೆ ಸೇರಿಕೊಂಡವರೆಲ್ಲ ಒಂದು ಕಡೆ ವಸಾಹತುವಾದದ ಬಲಿಪಶುಗಳಾದರು; ಇನ್ನೊಂದು ಕಡೆ ಸಾಮ್ರಾಜ್ಯವಾದದ ಆಡಳಿತಗಾರರಾದರು. ಈ ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿದ ವರ್ಗ ಒಂದು ಸಂಕೀರ್ಣ ಚಾರಿತ್ರಿಕ ಪ್ರಕ್ರಿಯೆಯ ಪರಿಣಾಮವಾಗಿ ಕ್ರಮೇಣ ಉದಾರ ಮಾನವತಾವಾದದ ಆಧಾರದ ಮೇಲೆ ಒಂದು ಐಡಿಯಾಲಜಿಯನ್ನು ರೂಪಿಸಿಕೊಂಡಿತು. ಸ್ವಾತಂತ್ರ್ಯ, ಸಮಾನತೆ, ಅಧಿಕಾರ, ಇತಿಹಾಸ, ಸಮಾಜ, ನ್ಯಾಯ, ಸಂಸ್ಕೃತಿ, ರಾಜಕಾರಣ-ಈ ಎಲ್ಲ ಪರಿಕಲ್ಪನೆಗಳಿಗೆ ಉದಾರ ಮಾನವತಾವಾದದ ಪಾರಿಭಾಷಿಕ ಚೌಕಟ್ಟಿನಲ್ಲಿ ಹೊಸ ಅರ್ಥಗಳು ಬಂದುವು. ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿ ಪುನರ್‌ನಿರ್ವಚನದ ಒಂದು ದೊಡ್ಡ ವಲಯವನ್ನೇ ನಿರ್ಮಿಸಿತು. ಪಾಶ್ಚಾತ್ಯ ಉದಾರ ಮಾನವತಾವಾದ ಕ್ರಮೇಣ ಈ

ವರ್ಗದ ಆಶೆ-ಆಕಾಂಕ್ಷೆಗಳನ್ನು, ಭಯ-ಆತಂಕಗಳನ್ನು ಅಧಿಕೃತಗೊಳಿಸಿ, ಆಧುನಿಕತೆಯ ಜೊತೆ ರಾಜಿ ಮಾಡಿಕೊಳ್ಳಲು ಅಗತ್ಯವಿದ್ದ ಸಿದ್ಧಾಂತಗಳನ್ನು ಒದಗಿಸಿತು; ಆಧುನಿಕತೆಯನ್ನು ಅರ್ಥೈಸಿಕೊಳ್ಳಲು ಹೊಸ ರೂಪಕಗಳನ್ನು ಸೃಷ್ಟಿಸಿತು.

ಕಳೆದ ಸುಮಾರು ೧೫೦ ವರ್ಷಗಳಿಂದ ಈ ಮಧ್ಯಮ ವರ್ಗದ ಜೀವನದೃಷ್ಟಿ ನಮ್ಮಲ್ಲಿ ಬೇರೂರಿ, ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು, ನಮ್ಮ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಹಬ್ಬಿರುವುದನ್ನು ನೋಡಬಹುದು. ಇವತ್ತು ನಮಗೆ ಎದುರಾಗುವ ಎಲ್ಲ ಮತಗಳನ್ನೂ ಒಳಗೊಂಡ ಈ ಪ್ರಕ್ರಿಯೆಯನ್ನೇ ನಾವು 'ಪ್ರಗತಿ'ಎಂದು ಕರೆಯುತ್ತ ಬಂದಿದ್ದೇವೆ.

ಈ ವರ್ಷ ಪ್ರಕಟವಾಗಿರುವ ಕೆಲವು ನಾಟಕಗಳ ಸಮೀಕ್ಷೆ ಮತ್ತು ವೀಕ್ಷಣೆಯ ಹಿನ್ನೆಲೆಯಲ್ಲಿ ಇದನ್ನು ಗಮನಿಸೋಣ.

೩

ಟಿ. ಶ್ರೀನಿವಾಸರಾಜು ಅವರ ಹಳಿಯ ಮೇಲಿನ ಸದ್ದು ಒಬ್ಬ 'ಸಾಮಾನ್ಯ' ಮನುಷ್ಯನ ದಿನನಿತ್ಯದ ಜಗತ್ತಿಗೆ ನಮ್ಮನ್ನು ಆಹ್ವಾನಿಸುತ್ತದೆ. ತನ್ನ ಹೊಟ್ಟೆಪಾಡಿಗಾಗಿ ಹೋಗೋ ಬರೋ ರೈಲುಗಳನ್ನು ಅವಲಂಬಿಸಿರುವ ರೈಲ್ವೆ ಗೇಟನ್ನು ಕಾಯುವ ಒಬ್ಬ ಕಾವಲುಗಾರನ ದುರಂತ ಇಲ್ಲಿ ಚಿತ್ರಿತವಾಗಿದೆ. ಕಾವಲುಗಾರನ ಹೆಂಡತಿ ಬ್ಯಾಟಮ್ಮ, ಅವರ ಮಗಳು ಅಮ್ಮು, ಅಂತೋನಪ್ಪ, 'ಪ್ರಜಾಯುದ್ಧಂ' ಯುವಕರು, ನಾಟಕದಲ್ಲಿ ಎಲ್ಲೂ ಕಾಣಿಸಿಕೊಳ್ಳದೇ ಆ ಜಗತ್ತನ್ನು ನಿಯಂತ್ರಿಸುತ್ತಿರುವ ಟ್ರಾಲಿ ಸಾಹುಕಾರ - ಎಲ್ಲ ಹಾಕಿಟ್ಟ ಹಳಿಗಳ ಮೇಲೆ ರೈಲು ಬಿಡುವವರೇ.

ನಾಟಕದ ಕೊನೆಯಲ್ಲಿ ಬ್ಯಾಟಮ್ಮ ಕಾವಲುಗಾರನನ್ನು ಕೊಲ್ಲುತ್ತಾಳೆ. ತನ್ನ ಗಂಡನ ಸಾವಿನಿಂದಲೇ ತನ್ನ ಮಗಳಿಗೊಂದು ಭವಿಷ್ಯವನ್ನು ಬ್ಯಾಟಮ್ಮ ಸೃಷ್ಟಿಸುವ ವ್ಯಂಗ್ಯದಲ್ಲಿ ನಾಟಕ ಕೊನೆಗೊಳ್ಳುತ್ತದೆ. ರೈಲು, ಬಾವುಟ, ಹಳಿಗಳು - ಬಡತನದ ಬದುಕು ಬ್ಯಾಟಮ್ಮನ ಎದುರಿಗೆ ಒಂದು 'ಅಸಹಜ' ಆಯ್ಕೆಯನ್ನು ಒಡ್ಡುತ್ತದೆ. ಕಾವಲುಗಾರ ಗಂಗಣ್ಣನ ಕುಟುಂಬದ ದುರಂತದ ಮೂಲವಿರುವುದು ಅವರ 'ಸಹಜ' ಆಕಾಂಕ್ಷೆಗಳಿಗೂ, ಅವರನ್ನು ಸುತ್ತುವರೆದ'ಅಸಹಜ' ವ್ಯವಸ್ಥೆಗೂ ಇರುವ ಸಂಘರ್ಷದಲ್ಲಿ. ಆಧುನಿಕತೆಯ ಅನುಭವದಿಂದ ಎದುರಾದ 'ಸಹಜತೆ - ಅಸಹಜತೆ' ಯ ಉದಾರ ಮಾನವತಾವಾದಿ ದ್ವಂದ್ವ ಈ ನಾಟಕದಲ್ಲೂ ಕಾಣಿಸಿಕೊಳ್ಳುತ್ತದೆ. ಹೀಗಾಗಿ 'ಸಹಜ' ಮುಗ್ಧತೆ ಒಂದು 'ಅಸಹಜ' ವ್ಯವಸ್ಥೆಯ ಬಲೆಯಲ್ಲಿ ಸಿಲುಕಿ ನಾಶವಾಗುತ್ತದೆ. 'ಅಸಹಜ ಕೃತ್ಯ'ಗಳನ್ನು ಬಡತನದ 'ಸಹಜ' ಪರಿಣಾಮಗಳೆಂದು ಚಿತ್ರಿಸುವ ವರದಿಗಳನ್ನು ನಮ್ಮ ಪತ್ರಿಕೆಗಳಲ್ಲಿ ಆಗಾಗ ಗಮನಿಸಬಹುದು.

ಕೆ.ಟಿ. ಗಟ್ಟಿ ಅವರ ಬೊಂಬೆಯಾಟ ಕೂಡ ಇವೇ ಪರಿಮಿತಿಗಳಲ್ಲಿ, ತನ್ನ

ತೊಡಕುಗಳನ್ನು ಬಿಡಿಸಿಕೊಳ್ಳುತ್ತದೆ. "ಆಕಾಶವಿಲ್ಲದ ಭೂಗತ ಸಾಮ್ರಾಜ್ಯದಲ್ಲಿ" ಒಂದು ವ್ಯವಸ್ಥೆಯ ಬಲೆಗೆ ಬಿದ್ದು ಎಲ್ಲರೂ ಗೊಂಬೆಗಳಾಗಿರುವ ಪರಿಸ್ಥಿತಿಯನ್ನು ಈ ನಾಟಕ ಶೋಧಿಸಲು ಹೊರಡುತ್ತದೆ. ಬೊಂಬೆಯಾಟದ ಕೇಂದ್ರದಲ್ಲಿರುವ 'ಸ್ವಾತಂತ್ರ್ಯ'ದ ಪ್ರಶ್ನೆಯನ್ನು ನಾಟಕಕಾರರು ಬಿಡಿಸುವ ರೀತಿಯಲ್ಲೇ ಅವರ ಪೂರ್ವಗ್ರಹಗಳು ಸ್ಪಷ್ಟವಾಗುತ್ತವೆ.

ಕೇಶವ ಮೊರಬ್ ಅವರ 'ಕೈಲಾಸಕ್ಕು ಕೈಸಾಲ', ಚಂದ್ರಕಾಂತ ಕುಸನೂರರ 'ದಿಂಡಿ' ಮತ್ತು ಎಸ್.ಎನ್. ಶಿವಸ್ವಾಮಿ ಅವರ 'ವಾರಿಧಿ ನಿನಗಿದೋ ವಂದನೆ' ಇವು ಕೂಡ ಈ ರೀತಿಯ ಮಧ್ಯಮವರ್ಗದ ಸಂವೇದನೆಯನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ಪ್ರದರ್ಶಿಸುತ್ತವೆ. ಕೈಲಾಸಕ್ಕು ಕೈಲಾಸದ ಗೋವಿಂದ ರಾವ್ ಮತ್ತು ಅವರ ಕುಟುಂಬದ ಸುತ್ತ ಹೆಣೆಯಲ್ಪಟ್ಟ ವಿಡಂಬನಾತ್ಮಕ ಕಥನ ಹಾಗೂ ದಿಂಡಿಯ ವಿನಾಯಕರಾಯರ ಕಥೆಯನ್ನು ಗಮನಿಸಿದರೆ ಈ ನಾಟಕಗಳಲ್ಲಿ ಕಾಣಿಸಿಕೊಳ್ಳುವ ಮಧ್ಯಮವರ್ಗದ ಜೀವನ ಕ್ರಮದ ವಿಡಂಬನೆಯ ನೆಲೆಗಳು ಕೂಡ ಅದೇ ಮಧ್ಯಮವರ್ಗದ ದುಗುಡ ದುಮ್ಮಾನಗಳನ್ನು ಅವಲಂಬಿಸಿರುವುದನ್ನು ಸ್ಪಷ್ಟವಾಗಿ ನೋಡಬಹುದು. ಎಸ್.ಎನ್. ಶಿವಸ್ವಾಮಿ ಅವರ ವಾರಿಧಿ ನಿನಗಿದೋ ವಂದನೆಯಲ್ಲಿನ ಏಳೂ ರೇಡಿಯೊ ನಾಟಕಗಳಲ್ಲಿ (ಟಿಕ್-ಟಾಕ್, ಕ್ಲಿನಿಕ್, ಮೋಹನ ಮಂತ್ರ, ಬಿಂದು, ಅವರೋಹಣ, ಎಲ್ಲರೂ ಗೆಲ್ಲರು, ಹಾಗೂ ವಾರಿಧಿ ನಿನಗಿದೋ ವಂದನೆ) ಮಧ್ಯಮವರ್ಗದ ಸಂವೇದನೆಯ ಹಲವು ಮುಖಗಳನ್ನು ನೋಡಬಹುದು.

ನಂಬಿಕೆ - ಅಪನಂಬಿಕೆಗಳ ದ್ವಂದ್ವ ನಮ್ಮ ಆಧುನಿಕತೆಯ ಅನುಭವದ ಇನ್ನೊಂದು ಮುಖ. ಆಧುನಿಕತೆಯ 'ಅಪವಿತ್ರ' ಜಗತ್ತನ್ನು ಪವಿತ್ರಗೊಳಿಸುವ ಹಂಬಲ ಒಂದು 'ಪವಾಡ 'ದ ರೂಪಕವನ್ನೇ ಬಯಸುತ್ತದೆ. ಆಧುನಿಕ ಜಗತ್ತಿನ ಸಂಕೀರ್ಣತೆಗೆ ಪರ್ಯಾಯವಾಗಿ ಒಂದು ಬಗೆಯ ಸಹಜ ಸರಳತೆಯನ್ನು ಬಯಸುತ್ತದೆ. ಆಧುನಿಕತೆಯನ್ನು ತಾಯ್ಗಂಡತನದ ರೂಪಕಗಳ ಮುಖಾಂತರ ಗ್ರಹಿಸಿ ಅದರ ಸಂಪೂರ್ಣ ವಿನಾಶದ ಪವಾಡದಲ್ಲೇ ನಂಬಿಕೆಯ ಸಾಧ್ಯತೆಯನ್ನು ಗುರುತಿಸಿಕೊಳ್ಳುವ ಕ್ರಮ ಕೂಡ, ನಮ್ಮ ಮಧ್ಯಮ ವರ್ಗದ ಮನೋಧರ್ಮದ ಒಂದು ಮುಖ್ಯ ಅಂಶವಾಗಿದೆ.

'ಹೊಣೆಗಾರಿಕೆ ಇಲ್ಲದ ಅಪನಂಬಿಕೆ'ಯ ಪ್ರವೃತ್ತಿಯ ವಿರುದ್ಧ 'ಹೊಸ ಪವಿತ್ರತೆಯ ಹುಡುಕಾಟ'ವನ್ನು ಎಚ್.ಎಸ್. ಶಿವಪ್ರಕಾಶ್ ತಮ್ಮ 'ಮಾದಾರಿ ಮಾದಯ್ಯ' ನಾಟಕದಲ್ಲಿ ಮುಂದುವರೆಸಿದ್ದಾರೆ. ಆದರೆ, ಮಾದೇಶ್ವರನ ಕಥೆಯ ರೂಪಕಗಳ ಮುಖಾಂತರ ನಮ್ಮ ಆಧುನಿಕತೆಯ ಈ ಬಗೆಯ ಅನ್ವೇಷಣೆಯಲ್ಲಿ ಶಿವಪ್ರಕಾಶ್ ಅವರು ತುಂಬ ಸುಲಭವಾದ ಸಮಾಧಾನಗಳನ್ನು ಮತ್ತು ಒಂದು ಬಗೆಯ ಕೃತಕ 'ತಾದಾತ್ಮ್ಯ'ವನ್ನು ಸೃಷ್ಟಿಸಿದ್ದಾರೆ ಎಂಬ ಗುಮಾನಿ ಬರುತ್ತದೆ.

ಕೊನೆಗೆ ಚಂದ್ರಶೇಖರ ಕಂಬಾರರ ತುಕ್ರನ ಕನಸು, ಚೈನಾದ ಪ್ರಸಿದ್ಧ ಲೇಖಕ

ಲೂ ಷೂನ್‌ನ "The True Story of Ah Q" ಕಥೆಯನ್ನು ಆಧರಿಸಿದ ಈ ನಾಟಕವನ್ನು ಮೂಲ ಕಥೆಯ ಜೊತೆ ಹೋಲಿಸಿದರೆ ಇದು ವರೆಗೆ ನಾನು ಎಲ್ಲ ನಾಟಕಗಳ ಬಗ್ಗೆ ಹೇಳಿದ ಮಾತುಗಳು ಸ್ಪಷ್ಟವಾಗಬಹುದು. ಇದರ ಬಗ್ಗೆ ಹೆಚ್ಚು ಹೇಳುವ ಅವಕಾಶ ಈ ಲೇಖನದಲ್ಲಿ ಇಲ್ಲದಿರುವುದರಿಂದ ಒಂದು ಮುಖ್ಯವಾದ ವ್ಯತ್ಯಾಸವನ್ನು ಮಾತ್ರ ಇಲ್ಲಿ ಸೂಚಿಸಬಹುದು. ಲೂ ಷೂನ್‌ನ ಕಥೆಯಲ್ಲಿ ಅಂಟೋನಿಯೊ ಗ್ರಾಂಶಿ ಹೇಳುವ "Pessimism of the intellect, optimism of the will" ದಟ್ಟ ವಿವರಗಳಲ್ಲಿ ನಾಟಕೀಯವಾಗಿ ಮೂಡಿಬರುತ್ತದೆ. ಆದರೆ ಚರಿತ್ರೆಯನ್ನು ಪ್ರಗತಿ - ಅವನತಿಯ ರೂಪಕಗಳ ಮೂಲಕವೇ ಗ್ರಹಿಸುವ ತುಕ್ರನ ಕನಸು ಮುಖ್ಯವಾದ ಸಂಘರ್ಷಗಳನ್ನು ಕೇವಲ 'ಹೇಳಿಕೆ'ಗಳ ಮೂಲಕ ಧ್ವನಿಸಲು ಪ್ರಯತ್ನಿಸುತ್ತದೆ.

೪

ಚರಿತ್ರೆಗೂ ಪ್ರಗತಿಗೂ ಗಂಟುಹಾಕಿ ೧೮೩೫ರಲ್ಲಿ ಮೆಕಾಲೆ ಕಂಡ ಕನಸು ಹಾಗೂ ೧೯೯೨ರಲ್ಲಿ ಆ ಕನಸಿನ ಪ್ರತಿಫಲವಾಗಿ ಹುಟ್ಟಿಕೊಂಡಿರುವ ತುಕ್ರನ ಕನಸು-ಈ ಎರಡರ ಸೂಕ್ಷ್ಮ ಅಂತರ್‌ಸಂಬಂಧಗಳಲ್ಲಿ ನಾವು ಇವತ್ತು ಬದುಕುತ್ತಿದ್ದೇವೆ. ಈ ಎರಡೂ ಕನಸುಗಳು ನಮ್ಮ ಇಂದಿನ ವಾಸ್ತವ. ಆದರೆ ಇವೆರಡರ ಅಂತರ್‌ಸಂಬಂಧಗಳನ್ನು ಉದಾರ ಮಾನವತಾವಾದಿ ಜೀವನ ದೃಷ್ಟಿಯನ್ನು ಬಿಟ್ಟು ಶೋಧಿಸುವ ನಾಟಕಗಳು ೧೯೯೨ರಲ್ಲಂತೂ ಬಂದಂತೆ ಕಾಣುವುದಿಲ್ಲ. ಪ್ರಗತಿ, ಸ್ವಾತಂತ್ರ್ಯ, ನ್ಯಾಯ, ಸಮಾನತೆ, ಅಧಿಕಾರ - ಈ ಪರಿಕಲ್ಪನೆಗಳ ಬಗ್ಗೆ ಪುನರ್‌ಮೌಲ್ಯೀಕರಣದ ತೀವ್ರ ಜರೂರು ಇರುವ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸಮಕಾಲೀನ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭದ ವಿರೋಧಾಭಾಸಗಳಿಗೆ ಕಾರಣವಾಗಿರುವ ಮೌಲ್ಯಗಳ ಮತ್ತು ಪರಿಕಲ್ಪನೆಗಳ ಪುನರಾವರ್ತನೆ ನಿರಾಶೆಯನ್ನು ಹುಟ್ಟಿಸದೆ ಇರಲಾರದು.

●

* * *

ಜಾನಪದ ಕೃತಿಗಳು

— ಪುರುಷೋತ್ತಮ ಬಿಳಿಮಲೆ

ಜಾನಪದದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದಂತೆ ೧೯೯೨ರಲ್ಲಿ ಒಟ್ಟು ೧೧ ಕೃತಿಗಳು ಪ್ರಕಟವಾಗಿವೆ. ಇದರಲ್ಲಿ ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದ ಕೃತಿಗಳು ಮೂರು, ಬಿಡಿ ಲೇಖನಗಳ ಸಂಕಲನಗಳು ನಾಲ್ಕು, ಆಚರಣೆ, ಒಗಟು, ಸಾಹಿತ್ಯ ಮತ್ತು ಜಾನಾಂಗಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ತಲಾ ಒಂದೊಂದು ಕೃತಿಗಳಿವೆ. ಭೌತಿಕ ಜಾನಪದದ ಬಗ್ಗೆ ಒಂದು ಕೃತಿಯೂ ಪ್ರಕಟವಾಗಿಲ್ಲ. ಒಗಟುಗಳ ಬಗೆಗಿನ ಒಂದು ಸಂಕಲನವನ್ನು ಹೊರತುಪಡಿಸಿದರೆ, ಜಾನಪದದ ಸಾಹಿತ್ಯಿಕ ಭಾಗವೂ ಅವಗಣನೆಗೆ ಒಳಗಾಗಿದೆ. ಪ್ರಾದೇಶಿಕವಾಗಿ ನೋಡಿದರೆ ಕರಾವಳಿ ಕಡೆಯಿಂದ ಒಂಬತ್ತು ಕೃತಿಗಳೂ ಇತರೆಡೆಗಳಿಂದ ಕೇವಲ ಎರಡು ಕೃತಿಗಳು ಪ್ರಕಟವಾಗಿವೆ. ಪ್ರಕಟನೆಯ ಸಂಖ್ಯೆ ಮತ್ತು ವ್ಯಾಪ್ತಿಯನ್ನು ಗಮನಿಸಿದರೆ ನಿರಾಶಾದಾಯಕ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಅಖಿಲ ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ನೂರಾರು ಜನ ದುಡಿಯುತ್ತಿದ್ದರೂ ಪ್ರಕಟನೆಯ ವಿಷಯದಲ್ಲಿ ಮಾತ್ರ ಸಾಕಷ್ಟು ಹಿಂದೆ ಉಳಿದಿರುವುದು ಯೋಚಿಸಬೇಕಾದ ಸಂಗತಿ.

ಪ್ರದರ್ಶನ ಕಲೆಗಳಿಗೆ ಸಂಬಂಧಿಸಿದ ಮೂರು ಕೃತಿಗಳಲ್ಲಿ ಒಂದು ಗೊಂಬೆಯಾಟವನ್ನು ಕುರಿತಾಗಿದೆ, ಇನ್ನೊಂದು ಯಕ್ಷಗಾನದ ಕುರಿತಾಗಿದೆ, ಮತ್ತೊಂದು ಜನಪದ ಕುಣಿತಗಳಿಗೆ ಸಂಬಂಧಿಸಿದೆ. ಭೌಗೋಳಿಕವಾಗಿ ಮೂರು ಕೂಡಾ ತುಳು ನಾಡನ್ನು ಗಮನದಲ್ಲಿ ಇರಿಸಿಕೊಂಡು ರಚಿತವಾದ ಕೃತಿಗಳು. ಕಾಸರಗೋಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ದಶಮಾನೋತ್ಸವ ಸಂದರ್ಭದಲ್ಲಿ ಬಿಡುಗಡೆಯಾದ 'ಗೊಂಬೆಯಾಟವಯ್ಯಾ' (ಸಂಪಾದಕರು ಕೆ. ವೆಂಕಟಕೃಷ್ಣಯ್ಯ) ಕೃತಿಯಲ್ಲಿ ಒಟ್ಟು ೨೫ ಲೇಖನಗಳಿವೆ. ಪುಸ್ತಕದ ಶೀರ್ಷಿಕೆ ಗೊಂಬೆಯಾಟವನ್ನು ಕುರಿತಂತೆ ಇದ್ದರೂ, ಕೃತಿಯಲ್ಲಿ ಗೊಂಬೆಯಾಟಕ್ಕಿಂತ ಹೊರತಾದ ಅನೇಕ ಲೇಖನಗಳಿವೆ. ಉದಾಹರಣೆಗೆ ಕಾಸರಗೋಡಿನ ತುಳು ಜನಪದ

ಸಾಹಿತ್ಯ (ವೆಂಕಟರಾಜ ಪುಣಿಂಚಿತ್ತಾಯ) ಹವ್ಯಕರ ಜನಪದ ಸಾಹಿತ್ಯ (ನರಸಿಂಹ ಭಟ್) ಜಾನಪದ ಗೀತೆಗಳು (ಕೆ. ಸದಾಶಿವ ಶ್ಯಾನುಭೋಗ) ಕೋಟೆಯವರು ಇತಿಹಾಸ ಪರಿಚಯ, ಜನಪದ ಹಾಡುಗಳು (ಶಿವರಾಮ ಕಾಸರಗೋಡು) ಇತ್ಯಾದಿ. ಗೊಂಬೆಯಾಟಕ್ಕೆ ಸಂಬಂಧಿಸಿದಂತೆ ಎಸ್.ಎ. ಕೃಷ್ಣಯ್ಯ (ದಕ್ಷಿಣ ಕನ್ನಡ ಜಿಲ್ಲೆಯ ಗೊಂಬೆಯಾಟ) ಉಪ್ಪಂಗಳ ರಾಮ ಭಟ್ಟ (ಗಡಿನಾಡಿನಲ್ಲಿ ಜನಪದ ಕಲೆಗಳು)ಮತ್ತು ಎಂ.ಶಿವರಾಮ ಅಚಾರ್ (ರಷ್ಯ, ಅಮೇರಿಕಾ, ಆಸ್ಟ್ರೀಯಾ, ಜಪಾನ್, ಸ್ವೀಡನ್, ಜಾವಾಗಳಲ್ಲಿ ಪ್ರಚಲಿತದಲ್ಲಿರುವ ಗೊಂಬೆಯಾಟಗಳು) ಅವರು ಬರೆದ ಲೇಖನಗಳು ಉಪಯುಕ್ತ ಮಾಹಿತಿಗಳನ್ನು ನೀಡುತ್ತವೆ.

ಇಡೀ ಕೃತಿಯ ಬಗ್ಗೆ ಸಂಪಾದಕರು ಒಂದು ಖಚಿತ ಧೋರಣೆಯನ್ನು ಹೊಂದಿಲ್ಲ. ಲೇಖನಗಳ ಅಭಾವದಿಂದ ಕೈಗೆ ಸಿಕ್ಕಿದ ಲೇಖನಗಳನ್ನು ತುರುಕಿಸಿ ಕೃತಿಯನ್ನು ಹೊರತಂದಂತಿದೆ. ಜೊತೆಗೆ ಬ್ರಾಹ್ಮಣರ ಜಾನಪದ ವಿವರಗಳತ್ತಲೇ ಹೆಚ್ಚು ಒತ್ತು ನೀಡಲಾಗಿದೆ. ಸಂಪಾದಕರು ಕೇವಲ ಸಂಕಲನಕಾರರ ಹಾಗೆ ಕೆಲಸ ಮಾಡಿದರೆ ' ಏನಾಗುತ್ತದೆ ಎಂಬುದಕ್ಕೆ ಈ ಕೃತಿ ಸಾಕ್ಷಿಯಾಗಿದೆ. ಬೃಹತ್ ಕೃತಿಯಾದರೂ ಗೊಂಬೆಯಾಟದ ಬಗೆಗಾಗಲೀ, ಇತರ ಜಾನಪದ ಪ್ರಕಾರದ ಬಗೆಗಾಗಲೀ ಹೊಸ ಬೆಳಕು ಚೆಲ್ಲುವಲಿ ಕೃತಿ ಪೂರ್ತಿಯಾಗಿ ವಿಫಲವಾಗಿದೆ.

ರವಿ ರಾ.ಅಂಚನ್ ಬರೆದ 'ಯಕ್ಷರಂಗ' ಕೃತಿಯಲ್ಲಿ ಯಕ್ಷಗಾನದ ವಿವಿಧ ಮುಖಗಳ ಬಗೆಗೆ ಬರೆದ ಹತ್ತು ಲೇಖನಗಳಿವೆ. ಅದರಲ್ಲೂ ಮೊದಲ ಏಳು ಲೇಖನಗಳು ಮುಂಬೈ ಮಹಾನಗರ್ಧದಲ್ಲಿ ಯಕ್ಷಗಾನ ಬೆಳೆದು ಬಂದ ಬಗೆ, ಅದು ಇದಿರಿಸಿದ ಆತಂಕದ ಕ್ಷಣಗಳನ್ನು ವಿವರಿಸುತ್ತವೆ. ಎಂಟು ಮತ್ತು ಒಂಬತ್ತನೆಯ ಲೇಖನಗಳು ಯಕ್ಷಗಾನದಲ್ಲಿರುವ 'ಪ್ರತಿಗಾಮಿತನ'ದ ಬಗ್ಗೆ ದಿಟ್ಟ ವಿಶ್ಲೇಷಣೆ ನಡೆಸಿವೆ. ಈ ಲೇಖನಗಳಲ್ಲಿ ಅಂಚನ್‌ರವರು 'ಯಕ್ಷಗಾನಗಳು ಪ್ರಗತಿಪರ ಕೂಗನ್ನು ಅಡಗಿಸುತ್ತವೆ' ಎಂಬ ಚರ್ಚಾಸ್ಪದ ಹೇಳಿಕೆಯನ್ನು ನೀಡುತ್ತಾರೆ. ಈ ಹೇಳಿಕೆ ಮೇಲ್ನೋಟಕ್ಕೆ ಆಕರ್ಷಕವಾಗಿ ತೋರುತ್ತದೆ. ಆದರೆ ಅಂಚನರು ನೀಡಿದ ವಿವರಗಳು ವಿವರಗಳಷ್ಟಕ್ಕೇ ನಿಜ. ಮೂಲ ಪುರಾಣ ಪ್ರಸಂಗಗಳಲ್ಲಿ ಅವು ಹಾಗೆಯೇ ಇವೆ ಎಂಬುದೂ ನಿಜ. ಆದರೆ ರಂಗಪ್ರದರ್ಶನದಲ್ಲಿ ಅವುಗಳನ್ನು ಪುನರ್ ಸೃಷ್ಟಿಸುವಾಗ ಅವುಗಳು ಸಮಕಾಲೀನ ಒತ್ತಡಗಳಿಗೆ ಮಣಿದು ಆಧುನಿಕವಾದ ಧೋರಣೆಯೊಂದನ್ನು ಪ್ರತೀತಗೊಳಿಸುತ್ತವೆ. ಯಕ್ಷಗಾನಕ್ಕೆ 'ಸ್ಥಿರ ಪಠ್ಯ' ಇಲ್ಲದಿರುವುದೇ ಅದಕ್ಕೆ ಕಾರಣ. ಹೀಗೆ ನೋಡಿದಾಗ ಯಕ್ಷಗಾನದಲ್ಲಿ ಏಕಲವ್ಯ, ಕರ್ಣ, ಕೌರವ, ರಾವಣ, ವಾಲಿ ಮೊದಲಾದ ಪ್ರತಿನಾಯಕರ ಪಾತ್ರಗಳೇ ಏಕೆ ಜನ ಮನ್ನಣೆ ಪಡೆಯುತ್ತಿವೆ ಎಂಬುದಕ್ಕೆ ಉತ್ತರ ದೊರಕುತ್ತದೆ. ರವಿ ಅಂಚನ್ನರ ಬರವಣಿಗೆಯ ಪ್ರಧಾನ ದೋಷವೆಂದರೆ ಅವರು ಯಕ್ಷಗಾನದ ವಸ್ತುವನ್ನು, ಯಕ್ಷಗಾನದ ಹೊರಗಿನ ತರ್ಕದ ಮೂಲಕ ಗ್ರಹಿಸಲು ಯತ್ನಿಸುವುದು. ಅವರು ಎತ್ತಿರುವ ಪ್ರಶ್ನೆಗಳನ್ನು ಯಕ್ಷಗಾನದ ಚೌಕಟ್ಟಿನೊಳಗಿನ ತರ್ಕದ ಮೂಲಕ ಗ್ರಹಿಸಿದರೆ, ಎಲ್ಲ ಸಮಸ್ಯೆಗಳೂ ಪರಿಹಾರವಾಗಿ ಬಿಡುತ್ತವೆ. ಕೃತಿಯ

ಒಂಬತ್ತನೇ ಲೇಖನವಾದ 'ಪ್ರತಿಗಾಮಿ ಪರಂಪರೆ'ಯಲ್ಲಿ ಭಾಷೆ, ಆಹಾರಪದ್ಧತಿ, ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಕಂಡು ಬರುವ ಪ್ರಗತಿ ವಿರೋಧಿ ಅಂಶಗಳನ್ನು ಅವರು ಬಯಲಿಗೆಳೆದಿದ್ದಾರೆ.'ಯಕ್ಷ ಪ್ರಶ್ನೆ'ಎಂಬ ಕೊನೆಯ ಲೇಖನದಲ್ಲಿ ಯಕ್ಷ ಪ್ರಪಂಚದ ಕೆಲವು ಸಮಸ್ಯೆಗಳ ಬಗ್ಗೆ ನಮ್ಮ ಗಮನ ಸೆಳೆದಿದ್ದಾರೆ.

ಅಂಚನ್‌ರವರಿಗೆ ಯಕ್ಷಗಾನದ ಒಳ ಹೊರಗು ಚೆನ್ನಾಗಿ ತಿಳಿದಿದೆ. ಆದರೆ ತನ್ನ ಅವಸರ ಪ್ರವೃತ್ತಿಯಿಂದಾಗಿ ಅವರು ಕೆಲವು ಸಮಸ್ಯೆಗಳನ್ನು ಸುಮ್ಮನೆ ಮೇಲೆ ಎಳೆದುಕೊಂಡಂತೆ ಭಾಸವಾಗುತ್ತದೆ.

ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರ 'ತುಳುನಾಡಿನ ಜನಪದ ಕುಣಿತಗಳು' ಎಂಬ ಪುಟ್ಟ ಕೃತಿಯಲ್ಲಿ ತುಳುನಾಡಿನಲ್ಲಿ ಜನಪ್ರಿಯವಾಗಿರುವ ಹತ್ತು ಜನಪದ ಕುಣಿತಗಳ ಬಗ್ಗೆ ಪರಿಚಯಾತ್ಮಕ ಲೇಖನಗಳಿವೆ. ಕೃತಿಯ ಕೊನೆಯಲ್ಲಿ ಕುಣಿತದ ಸಂದರ್ಭದಲ್ಲಿ ಹೇಳುವ ಹಾಡುಗಳ ಆಯ್ದ ಭಾಗಗಳಿವೆ. ಕೃತಿಯ ಉದ್ದೇಶವೇ ಬಹಳ ಸೀಮಿತವಾಗಿದ್ದು, ಅದನ್ನು ಲೇಖಕರು ಚೆನ್ನಾಗಿ ಈಡೇರಿಸಿದ್ದಾರೆ. ಕೃತಿಯಲ್ಲಿರುವ ಚಿತ್ರಗಳು ಆಕರ್ಷಕವಾಗಿವೆ. ತುಳುನಾಡಿನ ಜನಪದ ಕುಣಿತಗಳ ಬಗ್ಗೆ ಏನೇನೂ ಗೊತ್ತಿಲ್ಲದವರಿಗೆ ಈ ಕೃತಿ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ.

ಆಚರಣಾತ್ಮಕ ಕಲೆಗಳಿಗೆ ಸಂಬಂಧಿಸಿದಂತೆ ೧೯೯೨ರಲ್ಲಿ ಶ್ರೇಷ್ಠ ಕೃತಿಯೊಂದು ಪ್ರಕಟವಾಗಿದೆ. ಅದು ಎ.ವಿ.ನಾವಡ ಮತ್ತು ಗಾಯತ್ರೀ ನಾವಡರವರು ಬರೆದ 'ಕಾಢ್ಯನಾಟ ಪಠ್ಯ ಮತ್ತು ಪ್ರದರ್ಶನ ಕೃತಿ. ಎರಡು ಕಾರಣಗಳಿಗೆ ಈ ಕೃತಿ ಮಹತ್ತ್ವದ್ದಾಗುತ್ತದೆ. ಮೊದಲನೆಯದಾಗಿ 'ಕಾಢ್ಯನಾಟ' ಎಂಬ ಅಪೂರ್ವ ಆರಾಧನಾ ಪ್ರಕಾರವೊಂದನ್ನು ಮೊದಲ ಬಾರಿಗೆ ನಾವಡ ದಂಪತಿಗಳು ಬಹಿರಂಗಕ್ಕೆ ತಂದಿದ್ದಾರೆ. ಎರಡನೆಯದಾಗಿ ಇಡೀ ಕೃತಿಯನ್ನು ಅತ್ಯಾಧುನಿಕವಾದ ಕ್ಷೇತ್ರಕಾರ್ಯದ ಸಹಾಯದಿಂದ ಸಂಪಾದಿಸಲಾಗಿದೆ. ಬಹುರೂಪೀ ದಾಖಲೀಕರಣ ವಿಧಾನಕ್ಕೆ ಈ ಕೃತಿ ಒಂದು ಮಾದರಿ ಉದಾಹರಣೆಯಾಗಿದೆ. ಕಾಢ್ಯನಾಟ ಕೃತಿಯು ಕನ್ನಡ ಜಾನಪದ ಅಧ್ಯಯನವು ತಲುಪಿದ ಒಂದು ಹಂತವನ್ನು ಸಮರ್ಥವಾಗಿ ಪ್ರತಿನಿಧಿಸುತ್ತದೆ.

ಕಾಢ್ಯನಾಟ ಕೃತಿಗೆ ಬರೆದ ದೀರ್ಘವಾದ ಪ್ರಸ್ತಾವನೆಯಲ್ಲಿ ನಾಗ ಪರಿಕಲ್ಪನೆ, ನಾಗಯಕ್ಷ, ನಾಗಸ್ವಾಮಿ ಮತ್ತು ಕಾಢ್ಯನಾಟನ ಬಗ್ಗೆ ಅಮೂಲ್ಯ ವಿವರಗಳನ್ನು ನೀಡಲಾಗಿದೆ. ದಲಿತ ವರ್ಗದಲ್ಲಿ ಪ್ರಚಲಿತದಲ್ಲಿರುವ ಸರ್ಪಾರಾಧನೆಯ ಬಗೆಗೆ ಇಲ್ಲಿ ಮೊದಲ ಬಾರಿಗೆ ಅಪಾರ ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಇದರ ಜೊತೆಗೆ ಅಪೂರ್ವವಾದ 'ಹಗಣ' (ಪಗರಣ)ದ ಉಲ್ಲೇಖವೂ ಇಲ್ಲಿ ಬಂದಿದೆ. ಮೂರು ರಾತ್ರಿ ಮತ್ತು ನಾಲ್ಕು ಹಗಲುಗಳಷ್ಟು ದೀರ್ಘವಾದ, ಆಚರಣೆಯ ಎಲ್ಲ ವಿವರಗಳನ್ನು ಕೃತಿಯಲ್ಲಿ ದಾಖಲಿಸಲಾಗಿದೆ. ಕೃತಿಯ ಅತ್ಯಂತ ಬಲಿಷ್ಠವಾದ ಭಾಗವೇ ಕ್ಷೇತ್ರ ಕಾರ್ಯದ ವರದಿಗೆ ಸಂಬಂಧಿಸಿದೆ. ಆ ವಿವರಗಳನ್ನು ವಿಶ್ಲೇಷಣೆಗೆ ಬಳಸಿಕೊಳ್ಳುವಲ್ಲಿ ನಾವಡ ದಂಪತಿಗಳ ದೌರ್ಬಲ್ಯ ಎದ್ದು ಕಾಣುತ್ತದೆ. ಪ್ರಸ್ತಾವನೆಯುದ್ದಕ್ಕೂ ಅವರು

ನೀಡುವ ತೀರ್ಮಾನಗಳು, ನಾಗಾರಾಧನೆಯ ಬಗೆಗೆ ಪ್ರಚಲಿತದಲ್ಲಿರುವ ತೀರ್ಮಾನಗಳನ್ನೇ ಪುರಸ್ಕರಿಸುತ್ತವೆ. ಕೃತಿಯ ಎರಡನೇ ಭಾಗದಲ್ಲಿರುವ ಹಾಡುಗಳು, ನಾವಡರ ಪ್ರಸ್ತಾವನೆಯಲ್ಲಿರುವ ವಿಶ್ಲೇಷಣೆಗಿಂತ ಬೇರೆಯದೇ ಆದ ತೀರ್ಮಾನಗಳಿಗೆ ಬರಲು ನಮ್ಮನ್ನು ಒತ್ತಾಯಿಸುತ್ತವೆ. ಉದಾಹರಣೆಗೆ ಬಚ್ಚಮೇರರು ಹೇಳಿದ ಕಾಡ್ಯನ ಹುಟ್ಟು ,ರಣಸಿರಿದೇವಿ ಮತ್ತಿತರ ಹಾಡುಗಳನ್ನು ಗಮನಿಸಬೇಕು. ಇಂಥ ಹಾಡುಗಳನ್ನು 'ಕೆಲವು ಆಚರಣೆಗೆ ಸನ್ನದಿನಂತಿದ್ದರೆ ಇನ್ನು ಕೆಲವು ಆಚರಣೆಗೆ ತೀರ ಸಂಬಂಧಪಟ್ಟಂತೆ ಕಾಣುವುದಿಲ್ಲ'ಎಂದು ನಾವಡ ದಂಪತಿಗಳು ಪಠ್ಯದ ಹೊರ ವಲಯದಲ್ಲಿ ಇರಿಸಿ ಬಿಡುತ್ತಾರೆ. ಆ ಮೂಲಕ ತಾವೇ ಕಲ್ಪಿಸಿಕೊಂಡ 'ಬೃಹತ್ ಪಠ್ಯ'ದ ಕಲ್ಪನೆಯನ್ನು ಸೀಮಿತಗೊಳಿಸಿಕೊಳ್ಳುತ್ತಾರೆ. ನಿಜವಾಗಲೂ ಇಂಥ ಹಾಡುಗಳು ಮೇರರ ಬದುಕಿನ ಹಿಂದಿನ ಸಾಮಾಜಿಕ ತತ್ತ್ವವನ್ನು ಚೆನ್ನಾಗಿ ಪ್ರಕಟಪಡಿಸುತ್ತವೆ. ಆ ಅರ್ಥದಲ್ಲಿ ಇವುಗಳೂ'ಸನ್ನದು'ಗಳೇ ಆಗಿವೆ. ಕಾಡ್ಯನಿಗೇ ಅತಿಯಾದ ಪ್ರಾಮುಖ್ಯ ನೀಡಿದ್ದರಿಂದ ಇತರ ವಿವರಗಳೆಲ್ಲ ಗೌಣವಾಗಿ ಬಿಟ್ಟಿವೆ. ಬಹುಶಃ ಗೌಣಗೊಳಿಸಲಾದ ವಿವರಗಳು ಆಚರಣೆಯಲ್ಲೂ ಗೌಣವಾಗಿದ್ದರೆ ಸಂಪಾದಕರ ತರ್ಕ ಸರಿಯಾಗುತ್ತಿತ್ತು. ಹೀಗಿರುವುದರಿಂದ ನಾವಡ ದಂಪತಿಗಳು ಶ್ರಮವಹಿಸಿ ಸಂಗ್ರಹಿಸಿಕೊಟ್ಟ ವಿವರಗಳನ್ನು ಇನ್ನಷ್ಟು ಪರಿಶೀಲಿಸಬೇಕಾದ ಅವಶ್ಯಕತೆಯಿದೆ. ಈ ಎಲ್ಲ ಮಿತಿಗಳ ಮಧ್ಯೆಯೂ ೧೯೯೨ರ ಶ್ರೇಷ್ಠ ಕೃತಿಯಿದು ಎಂದು ಧಾರಾಳವಾಗಿ ಹೇಳಬಹುದು.

ಜನಪದ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದಂತೆ 'ಬಾಚಿಗೊಂಡನ ಹಳ್ಳಿ ಮತ್ತು 'ಏಣಿಗಿ ಬಸಾಪುರದ ಜನಪದ ಗೀತೆಗಳು' ಎಂಬ ಸುಂದರವಾದ ಕೃತಿಯೊಂದನ್ನು ಎಸ್.ಎ. ಕೃಷ್ಣಯ್ಯನವರು ಸಂಪಾದಿಸಿಕೊಟ್ಟಿದ್ದಾರೆ. ಬಳ್ಳಾರಿ ಜಿಲ್ಲೆಯ ಏಣಿಗಿ ಬಸಾಪುರ ಮತ್ತು ಬಾಚಿಗೊಂಡನ ಹಳ್ಳಿಯಲ್ಲಿ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ ೩೮ ಹಾಡುಗಳನ್ನು ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಈ ಕೃತಿಯಲ್ಲಿ ಸಂಕಲಿಸಿಕೊಡಲಾಗಿದೆ. ಸಂಗ್ರಹಿಸಿದ ಹಾಡುಗಳನ್ನು ಕಥನ ಕಾವ್ಯಗಳು, ಪೌರಾಣಿಕ ಗೀತೆಗಳು, ಧಾರ್ಮಿಕ ವಿಧಿಗೀತೆ ಮತ್ತು ಕೌಟುಂಬಿಕ ಗೀತೆಗಳು, ಸಂತ ಶರಣರ ಹಾಡುಗಳು ಮತ್ತು ತತ್ತ್ವಪದ, ಸಾಮಾಜಿಕ ಘಟನಾತ್ಮಕ ಹಾಡುಗಳು, ಹಾಸ್ಯ ಪದ ಹಾಗೂ ಹಾಡುಗಳು ಮತ್ತು ಚಾರಿತ್ರಿಕ ಗೀತೆ ಎಂದು ಏಳು ರೀತಿಯಿಂದ ವಿಭಜಿಸಿಕೊಳ್ಳಲಾಗಿದೆ. ಇಂಥ ವಿಭಜನೆಗಳ ಔಚಿತ್ಯವೇನೇ ಇರಲಿ, ಸಂಕಲನದಲ್ಲಿ ಅಧ್ಯಯನಯೋಗ್ಯವಾದ ಅನೇಕ ಒಳ್ಳೆಯ ಹಾಡುಗಳಂತೂ ಇವೆ.

ಜನಪದರು ಪುರಾಣಗಳನ್ನು ಪುನರ್ - ಸೃಷ್ಟಿಸುವ ಬಗೆಗೆ, ತಮ್ಮ ನೈತಿಕ ನೆಲೆಗಳನ್ನು ಪ್ರಕಟಪಡಿಸುವ ಬಗೆಗೆ ಇತಿಹಾಸ ಸೃಷ್ಟಿಯ ಶಕ್ತಿ-ದೌರ್ಬಲ್ಯಗಳನ್ನು ಮುಂದಿಡುವ ಬಗೆಗೆ ಇಲ್ಲಿನ ಹಾಡುಗಳನ್ನು ಬಳಸಿಕೊಂಡು ನಾವು ಚರ್ಚೆಗಳನ್ನು ಮುಂದುವರಿಸಬಹುದು. ಕೃಷ್ಣಯ್ಯನವರು ತಮ್ಮ ಪ್ರಸ್ತಾವನೆಯಲ್ಲಿ ಅಂಥ ಚರ್ಚೆಗಳ ಸಾಧ್ಯತೆಗಳನ್ನು ತೆರೆದು ತೋರಿಸಿದ್ದಾರೆ. ಆದರೂ 'ಉತ್ತರ ಕರ್ನಾಟಕ' 'ಪರಿಶಿಷ್ಟ ವರ್ಗ', ಮೊದಲಾದ ಪದಗಳನ್ನು ಬಳಸುವಾಗ ಅವರು ಪ್ರಸ್ತುತ ರಾಜಕೀಯ

ಪರಿಭಾಷೆಯಲ್ಲಿಯೇ ಮಾತಾಡುತ್ತಾರೆ. ಜಾನಪದ ಅಧ್ಯಯನದಲ್ಲಿ ಇಂಥ ಪದಗಳಿಗೆ ಏನಾದರೂ ಅರ್ಥವಿದೆಯೆಂದು ನನಗೆ ಅನ್ನಿಸುವುದಿಲ್ಲ. ಏಕೆಂದರೆ ಇಂಥ ಪದಗಳು ಜಾನಪದದ ಪ್ರಾದೇಶಿಕ ಮತ್ತು ಸಮುದಾಯ ಬದ್ಧತೆಯನ್ನು ತಿರಸ್ಕರಿಸಿ 'ಸಾಮಾನ್ಯೀಕರಣ'ದತ್ತ ಕೊಂಡೊಯ್ಯುತ್ತವೆ. ಜಾನಪದದಲ್ಲಿ ಸಾಮಾನ್ಯೀಕರಣವು ಅಪಾಯಕಾರಿ. ಪ್ರಸ್ತಾವನೆಯಲ್ಲಿರುವ ಇಂಥ ತೊಂದರೆಗಳ ಮಧ್ಯೆಯೂ ಈ ಕೃತಿ ಮಹತ್ತ್ವದ್ದಾಗುವುದು ಕೃಷ್ಣಯ್ಯನವರು ಸಂಗ್ರಹಿಸಿಕೊಟ್ಟ ಅಮೂಲ್ಯ ಹಾಡುಗಳಿಂದ.

ಮೈಲಹಳ್ಳಿ ರೇವಣ್ಣನವರು 'ಜಂಬು ನೇರ್ಲಣ್ಣು ಜಗ್ಗಿ ಬಿದ್ದಾವೆ' ಎಂಬ ಒಗಟುಗಳ ಸಂಕಲನವನ್ನು ಪ್ರಕಟಿಸಿದ್ದಾರೆ. ಸಂಕಲನದಲ್ಲಿ ೭೩೬ ಒಗಟುಗಳಿವೆ. ದಲಿತರ ಮಧ್ಯದಿಂದ ಸಂಗ್ರಹಿಸಲಾದ ಈ ಒಗಟುಗಳನ್ನು ಅಕಾರಾದಿಯಾಗಿ ಜೋಡಿಸಿದ್ದಾರೆ. ಇಡೀ ಸಂಕಲನವು ಕನ್ನಡ ಜಾನಪದ ಅಧ್ಯಯನದ ಸಾಂಪ್ರದಾಯಿಕ ಕ್ರಮವನ್ನು ಸೂಚಿಸುತ್ತದೆ. ರೇವಣ್ಣನವರು ಬರೆದ ಪ್ರಸ್ತಾವನೆಯಲ್ಲಿ 'ಒಗಟುಗಳನ್ನು ಇಂಗ್ಲಿಷಿನಲ್ಲಿ ರಿಡಲ್ ಎಂದು ಕರೆಯುತ್ತಾರೆ' ಎಂಬಂತಹ ಹಳೆಯ ಹೇಳಿಕೆಗಳೇ ಕಂಡು ಬರುತ್ತವೆ. ಒಗಟುಗಳ ಸಾಂಸ್ಕೃತಿಕ ಸಂದರ್ಭ ವರ್ಗೀಕರಣ, ಕಾರ್ಯ, ರಚನೆಗಳ ಬಗೆಗೆ ಅಸಾಧಾರಣ ಚಿಂತನೆ ಬೆಳೆದಿರುವ ಸಮಕಾಲೀನ ಸಂದರ್ಭದಲ್ಲಿ ರೇವಣ್ಣನವರ ಸಂಗ್ರಹ ತುಂಬ ಸಪ್ಪೆಯಾಗಿ ತೋರುತ್ತದೆ. ಇಂಥ ಕೃತಿಗಳಿಗೆ ಜಾನಪದ ಅಧ್ಯಯನವನ್ನು ಮುಂದೆ ತೆಗೆದುಕೊಂಡು ಹೋಗುವ ಶಕ್ತಿ ಇರುವುದಿಲ್ಲ.

ಜಾನಾಂಗಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ 'ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ 'ದ' ಕುರಿತು ಎನ್. ಆರ್. ನಾಯಕರು ಪುಟ್ಟ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ೩೬ ಪುಟಗಳ ಈ ಪುಸ್ತಕದಲ್ಲಿ ಸಿದ್ದಿ ಜನಾಂಗದ ಮೂಲ, ಸ್ವಭಾವ, ಉಡುಗೆ, ತೊಡುಗೆ, ಭಾಷೆ, ಉದ್ಯೋಗ, ಆಹಾರ, ಕುಟುಂಬ ಪದ್ಧತಿ, ಆಚರಣೆಗಳು, ಹಬ್ಬಗಳ ಮತ್ತಿತರೆ ವಿಷಯಗಳ ಬಗೆಗೆ ಕ್ಷೇತ್ರಕಾರ್ಯಾಧರಿತ ಮಾಹಿತಿಗಳು ಲಭಿಸುತ್ತವೆ. ಸಿದ್ದಿಯರ ಬಗೆಗಿನ ಮುಂದಿನ ಅಧ್ಯಯನಕ್ಕೆ ಪ್ರಚೋದನೆ ನೀಡುವ ಕೃತಿಯಿದು.

ಬಿಡಿಲೇಖನಗಳ ಸಂಕಲನಗಳು

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದ 'ಜಾನಪದ ಸಾಹಿತ್ಯ ದರ್ಶನ'ದ ೧೪ನೇ ಸಂಪುಟವನ್ನು ವೀರಣ್ಣ ರಾಜೂರ ಅವರು ಸಂಪಾದಿಸಿಕೊಟ್ಟಿದ್ದಾರೆ. ಈ ಸಂಪುಟದಲ್ಲಿ ಜನಪದ ಕುಣಿತ-ವಾದ್ಯ-ಸಂಗೀತಗಳಿಗೆ ಸಂಬಂಧಿಸಿದಂತೆ ವಿವಿಧ ಲೇಖಕರು ಬರೆದ ೧೨ ಸಂಶೋಧನಾತ್ಮಕ ಪ್ರಬಂಧಗಳಿವೆ. ಕುಣಿತ ವಾದ್ಯ-ಸಂಗೀತಗಳು ಜಾನಪದದ ಪ್ರದರ್ಶನ ಕಲೆಗಳ ವ್ಯಾಪ್ತಿಗೆ ಸೇರುತ್ತವೆ. ಹೀಗಿದ್ದರೂ ಸಂಪುಟದ ಶೀರ್ಷಿಕೆಯಲ್ಲಿ 'ಸಾಹಿತ್ಯ ದರ್ಶನ' ಎಂಬ ಹಳೆಯ ಹೆಸರನ್ನೇ ಬಳಸಿಕೊಳ್ಳಲಾಗಿದೆ. ಮೇಲಾಗಿ ಜನಪದ-ಜಾನಪದ' ಪದಗಳ ಅರ್ಥವ್ಯಾಪ್ತಿಯೂ ಖಚಿತವಾಗಿದೆ. ಅನಂತರವೂ 'ಜಾನಪದ ಸಾಹಿತ್ಯ' ಎಂಬ ಪದವನ್ನು ಏಕೆ ಉಳಿಸಿಕೊಳ್ಳಲಾಗಿದೆಯೋ ತಿಳಿಯದು. ಅದು ನಿರಂತರವಾದ ಸ್ಥಿರ ಶೀರ್ಷಿಕೆಯಾಗಿರುವುದರಿಂದ ಆರಂಭದ

ತಪ್ಪನ್ನು ಈಗಲೂ ಉಳಿಸಿಕೊಳ್ಳಲಾಗಿದೆ ಎಂದು ವಾದಿಸುವುದಾದರೆ, ಉಪ ಶೀರ್ಷಿಕೆಗಳನ್ನು ಬಳಸಿ ಖಚಿತಗೊಳಿಸಿಕೊಳ್ಳುವುದು ಅಗತ್ಯ ಎಂದು ತೋರುತ್ತದೆ.

'ಜನಪದ ಕುಣಿತಗಳು'ಎಂಬ ಮೊದಲ ಭಾಗದಲ್ಲಿ ನಾಲ್ಕು ಲೇಖನಗಳಿದ್ದು, ಅದರಲ್ಲಿ ಹಿ.ಶಿ. ರಾಮಚಂದ್ರೇಗೌಡರು ಬರೆದ 'ಜನರಂಜನೆಯ ಕುಣಿತಗಳು' ಲೇಖನ ಅಪೂರ್ವವಾದ ಒಳನೋಟಗಳನ್ನು ಒಳಗೊಂಡಿದೆ. ಜನರಂಜನೆಯ ಕುಣಿತಗಳನ್ನು ಪರಂಪರಾನಿಷ್ಠ ಸಮಾಜ ಮತ್ತು ಆಧುನಿಕ ವ್ಯಕ್ತಿಯ ಸುಖಾನ್ವೇಷಣೆಯ ಮಧ್ಯದ ಘರ್ಷಣೆಯ ಪರಿಣಾಮವೆಂದು ಗುರುತಿಸುವ ಗೌಡರು, ಆಧುನಿಕ ಸಮಾಜವು ಸೃಷ್ಟಿಸುವ ಹಕ್ಕನ್ನು ಒತ್ತಾಯಪೂರ್ವಕವಾಗಿ ಕಿತ್ತುಕೊಂಡುದರ ಬಗೆಗೆ ಗಂಭೀರವಾದ ವಿಶ್ಲೇಷಣೆ ನಡೆಸಿದ್ದಾರೆ. ದೇವೇಂದ್ರಕುಮಾರ ಹಕಾರಿಯವರು 'ಪುರವಂತಿಕೆ'ಯ ಬಗೆಗೆ ನಡೆಸಿದ ಅಧ್ಯಯನ ಗಮನಾರ್ಹವಾಗಿದೆ. ಜೋಷಿ ಮತ್ತು ಬಿರಾದಾರ ಅವರ ಲೇಖನಗಳು ಪರಿಚಯಾತ್ಮಕವಾಗಿವೆ.

ಎರಡನೇ ಭಾಗದಲ್ಲಿ 'ಜನಪದ ವಾದ್ಯ'ಗಳ ಬಗೆಗೆ ನಾಲ್ಕು ಲೇಖನಗಳಿವೆ. ಪಡಶೆಟ್ಟಿ, ವಾಲಿ, ಶ್ರೀಕಂಠ ಕೂಡಿಗೆ, ಬಿ. ವಿ. ಮಲ್ಲಾಪುರ ಅವರು ಕ್ರಮವಾಗಿ ಚರ್ಮ -ಕಾಷ್ಠ ವಾದ್ಯಗಳು, ತಂತಿ ವಾದ್ಯಗಳು, ಲೋಹವಾದ್ಯಗಳು ಮತ್ತು ಉಸಿರು ವಾದ್ಯಗಳ ಕುರಿತು .ವ್ಯಾಪಕವಾದ ಮಾಹಿತಿ ಸಂಗ್ರಹಿಸಿ ಕೊಟ್ಟಿದ್ದಾರೆ. 'ಜನಪದ ಸಂಗೀತ'ದ ಬಗೆಗಣ ನಾಲ್ಕು ಲೇಖನಗಳನ್ನು ಎ.ಯು. ಪಾಟೀಲ, ಗುಂಡ್ಮಿ ಚಂದ್ರಶೇಖರ ಐತಾಳ, ಬಸವರಾಜ ಮಲಶೆಟ್ಟಿ ಮತ್ತು ವಸಂತ ಕವಲಿಯವರು ಬರೆದಿದ್ದಾರೆ. ಸಂಗೀತದ ವಿಷಯಗಳನ್ನು ಕುರಿತು ವಿಷಯ ಮಂಡಿಸುವ ಬಗೆಗೆ ಬೇರೆ ರೀತಿಯ ಆಲೋಚನೆಗಳನ್ನು ಮಾಡಬೇಕಾಗುತ್ತದೆ ಎಂದು ತೋರುತ್ತದೆ.

ಇಡೀ ಸಂಪುಟವು ಕ್ಷೇತ್ರ ಕಾರ್ಯಾಧರಿತ ಮಾಹಿತಿಗಳನ್ನು ನೀಡುವುದರಿಂದಾಗಿ ಗಮನಾರ್ಹವಾಗಿದೆ.

ಅಂಬಳಿಕೆ ಹಿರಿಯಣ್ಣನವರ 'ಸೈದ್ಧಾಂತಿಕ ಜಾನಪದ' ೧೯೯೨ರ ಪ್ರಮುಖ ಕೃತಿಗಳಲ್ಲಿ ಒಂದಾಗಿದೆ. ಈ ಕೃತಿಯಲ್ಲಿ ಒಟ್ಟು ಎಂಟು ಲೇಖನಗಳಿವೆ. ಸಾಂಸ್ಕೃತಿಕ ಅನನ್ಯತೆ, ಮಾನವಿಕಗಳು ಮತ್ತು ಮಾನವನಿಷ್ಠ ಜಾನಪದ, ಜನಪದ ಸಾಹಿತ್ಯ ಸಂಶೋಧನೆ ಕೆಲವು ಸಮಸ್ಯೆಗಳು, ಗಾದೆಗಳ ರಾಚನಿಕ ಅಧ್ಯಯನ ಡಂಡೆಸ್ ವಿಚಾರಗಳು, ಜಾನಪದ ಸಿದ್ಧಾಂತಗಳು:ಒಂದು ನೋಟ, ಜಾನಪದ ವಿಜ್ಞಾನ, ಇತ್ತೀಚಿನ ಪ್ರವೃತ್ತಿಗಳು, ಜಾನಪದ ಸಿದ್ಧಾಂತಗಳು ಮತ್ತು ಕ್ಷೇತ್ರಕಾರ್ಯ, ಸಾಹಿತ್ಯೇತರ ಜಾನಪದ ರೂಪಗಳ ಕ್ಷೇತ್ರಕಾರ್ಯ ಇವು ಈ ಕೃತಿಯಲ್ಲಿರುವ ಲೇಖನಗಳು. ಕೃತಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಹಿರಿಯಣ್ಣನವರಿಗೆ ಆಧುನಿಕ ಜಾನಪದ ಅಧ್ಯಯನದ ಇತ್ತೀಚಿನ ಪ್ರವೃತ್ತಿಗಳ ಬಗ್ಗೆ ಇರುವ ಗಾಢವಾದ ತಿಳಿವು. ಒಬ್ಬ ವಿನಮ್ರ 'ಓದುಗನಾಗಿ ಅವರು ಸಮಕಾಲೀನ ಬೆಳವಣಿಗೆಗಳನ್ನು ಗ್ರಹಿಸುತ್ತಾರೆ ಮತ್ತು ಅಧ್ಯಾಪಕ ವಿದ್ಯಾರ್ಥಿಗಳಿಗೆ ಟಿಪ್ಪಣಿ ಒದಗಿಸುವ ರೀತಿಯಲ್ಲಿ ವಿಷಯಗಳನ್ನು ಮುಂದಿಡುತ್ತಾರೆ.

ಇಂಥ ಬರಹಗಳ ಉಪಯುಕ್ತತೆ ಮಾತ್ರ ಸೀಮಿತವಾದುದು. ಏಕೆಂದರೆ ಇಲ್ಲಿ ಜಾನಪದ ವಿದ್ವಾಂಸನ ಸೃಷ್ಟಿಶೀಲತೆ ಇರುವುದಿಲ್ಲ. 'ಸಾಂಸ್ಕೃತಿಕ ಅನನ್ಯತೆ'ಯ ಬಗೆಗಿನ ಅವರ ಮೊದಲನೆಯ ಲೇಖನವನ್ನೇ ಗಮನಿಸಬಹುದು. ಇಲ್ಲಿ 'ಸಾಂಸ್ಕೃತಿಕ ಅನನ್ಯತೆ' ಎಂದರೇನೆಂಬುದನ್ನು ಸಮರ್ಪಕವಾಗಿ ಹಿರಿಯಣ್ಣನವರು ಪರಿಚಯಿಸುತ್ತಾರೆ. ಭಾರತದ ಜಾನಪದ ಅಧ್ಯಯನಗಳು ಸಾಂಸ್ಕೃತಿಕ ಅನನ್ಯತೆಯ ಹುಡುಕಾಟದಲ್ಲಿ ತೊಡಗಿರುವುದನ್ನು ಅವರು ಪಟ್ಟಿಮಾಡುತ್ತಾರೆ. ಆದರೆ ಅದಕ್ಕಿಂತ ಮುಂದೆ ಹೋಗಿ ಭಾರತದಂಥ ಜಾತಿ ಸಮಾಜದಲ್ಲಿ ಅದಕ್ಕೆ ಇರುವ ತೊಡಕುಗಳಿಗೆ ಮುಖಾಮುಖಿಯಾಗುವುದಿಲ್ಲ. ಅನೇಕ ಸಿದ್ಧಾಂತಗಳನ್ನು ಅವರು ಸುಲಭವಾಗಿ ವಿವರಿಸುತ್ತಾರೆ. ಆದರೆ ಕನ್ನಡದ ಜಾನಪದ ಸಾಮಗ್ರಿಗಳಿಗೆ ಅದನ್ನು ಅನ್ವಯಿಸುವಾಗ ಯಾಂತ್ರಿಕವಾಗಿ ಬಿಡುತ್ತಾರೆ. ಹಿರಿಯಣ್ಣನವರ ಬರಹಗಳ ಶೈಲಿಯೂ ಆಕರ್ಷಕವಾಗಿಲ್ಲ. ಕ್ಷೇತ್ರಕಾರ್ಯದ ವ್ಯಾಪಕವಾದ ಅನುಭವ ಮತ್ತು ಸೈದ್ಧಾಂತಿಕ ತಿಳುವಳಿಕೆ - ಇವೆರಡೂ ಇರುವ ಹಿರಿಯಣ್ಣನವರು ತಮ್ಮ ಬರಹಗಳಲ್ಲಿ ಹೆಚ್ಚು ದೇಸೀಯವಾದರೆ ಕನ್ನಡ ಜಾನಪದ ಅಧ್ಯಯನವನ್ನು ಗಮನಾರ್ಹವಾಗಿ ಪ್ರಭಾವಿಸಬಲ್ಲರು.

ವಾಮನ ನಂದಾವರ ಅವರ 'ಜನಪದ ಸುತ್ತಮುತ್ತ' ಕೃತಿಯಲ್ಲಿ ಜಾನಪದದ ವಿವಿಧ ವಿಷಯಗಳ ಕುರಿತು ಲಘು ಧಾಟಿಯ ೩೭ ಬರಹಗಳಿವೆ. ಇವು ಪ್ರಬಂಧಗಳನ್ನು ಹೋಲುತ್ತವೆ.ಜನಪದ ಆಚರಣೆ, ಐತಿಹ್ಯ, ಪ್ರದರ್ಶನ ಮತ್ತಿತರ ಸಂದರ್ಭಗಳಲ್ಲಿ ಕಂಡುಬರುವ ಅನೇಕ ಪುಟ್ಟ ಘಟನೆಗಳನ್ನು ನಂದಾವರರು ನವಿರಾದ ಭಾಷೆಯಲ್ಲಿ ವಿವರಿಸುತ್ತಾರೆ. ಇಂಥ ವಿವರಣೆಗಳಲ್ಲಿ 'ವ್ಯಂಗ್ಯ' ಕಾಣಿಸುವುದಿಲ್ಲ ಬದಲು 'ಹಾಸ್ಯ'ಕಂಡು ಬರುತ್ತದೆ. ಈ ಹಾಸ್ಯವು ಪ್ರೀತಿಯಲ್ಲಿ ಜನ್ಯವಾದುದರಿಂದ, ಪರೋಕ್ಷವಾಗಿ ಇಲ್ಲಿನ ಬರಹಗಳು ನಂದಾವರರ ಜಾನಪದ ಪ್ರೇಮವನ್ನು ಪ್ರಕಟಿಸುತ್ತವೆ. ಬರಹದ ಉದ್ದಕ್ಕೂ ಜನಜೀವನದ ಲವಲವಿಕೆಯನ್ನು ಕಾಪಾಡಿಕೊಂಡು ಬರಲಾಗಿದೆ. ಜಾನಪದ ಸಂದರ್ಭದಲ್ಲಿ ಇಂಥ ಬರಹಗಳ ಸಂಖ್ಯೆ ಹೆಚ್ಚಿಲ್ಲ. ಕ್ಷೇತ್ರಕಾರ್ಯದ ಅನುಭವವಿರುವವರು ಇಂಥ ಪುಸ್ತಕಗಳನ್ನು ಬರೆಯುವುದು ಹೆಚ್ಚು ಉಪಯುಕ್ತ.

ಎನ್.ಆರ್. ನಾಯಕರ 'ಜಾನಪದ ಸಂಬಾರು ಬಟ್ಟಲು' ಕೃತಿಯಲ್ಲಿ ಎಂಟು ಪರಿಚಯಾತ್ಮಕ ಲೇಖನಗಳಿವೆ. ಈ ಲೇಖನಗಳು ಐತಿಹ್ಯ, ಕ್ರೀಡೆ, ಜಾತ್ರೆ, ಪ್ರಾಣಿ -ಪಕ್ಷಿ, ಗಾದೆ, ಸುಗ್ಗಿ ಕುಣಿತ ಮತ್ತು ಸಾಹಿತ್ಯೇತರ ಜಾನಪದದ ಬಗೆಗೆ ಅನೇಕ ಮಾಹಿತಿಗಳನ್ನು ನೀಡುತ್ತವೆ. ಒಂದು ನಿರ್ದಿಷ್ಟ ಸಂಗತಿಯನ್ನು ವಿವರಿಸುವಾಗ ನಾಯಕರು ವಿಷಯ ಸಂಗ್ರಹಣೆಯ ತಾಳ್ಮೆಯನ್ನು ತೋರಿಸುತ್ತಾರೆ. ಆದರೆ ವಿವರಗಳ ಹಿಂದಿನ ಕಾರಣವನ್ನು ಶೋಧಿಸುವುದಿಲ್ಲ ಅಥವಾ ಅಂಥ ಶೋಧನೆಗಳು ಅವರ ಬರಹದ ಉದ್ದೇಶಗಳಲ್ಲ. ಇಷ್ಟಿದ್ದರೂ ನಿರ್ಲಕ್ಷಿತ ಜನವರ್ಗದಿಂದ ಅವರು ಆಯ್ದುಕೊಡುವ ವಿವರಗಳು ಮಹತ್ತ್ವದ್ದಾಗಿರುತ್ತವೆ.

೧೯೯೨ರ ಜಾನಪದ ಪ್ರಕಟನೆಗಳನ್ನು ಒಟ್ಟಂದದಲ್ಲಿ ಪರಿಶೀಲಿಸಿದಾಗ ಈ ಕೆಳಗಿನ ಎರಡು ಅಂಶಗಳು ಎದ್ದು ಕಾಣುತ್ತವೆ.

೧. ಹೆಚ್ಚಿನ ಕೃತಿಗಳು ಸಾಂಪ್ರದಾಯಿಕ ರೀತಿಯಲ್ಲಿ ವಿವರಗಳನ್ನು ಮಂಡಿಸುತ್ತವೆ. ಮಾಹಿತಿಗಳ ದೃಷ್ಟಿಯಿಂದ ಇವು ಮುಂದಿನ ಅಧ್ಯಯನಕಾರರಿಗೆ ಉಪಯುಕ್ತವಾಗಿವೆ.

೨. ಕೆಲವು ಕೃತಿಗಳು ಹೆಚ್ಚು ಸೈದ್ಧಾಂತಿಕವಾಗಿವೆ. ಒಟ್ಟು ಜಾನಪದ ಅಧ್ಯಯನದ ಬೆಳವಣಿಗೆಯ ದೃಷ್ಟಿಯಿಂದ ಈ ಸಿದ್ಧಾಂತಗಳ ಅಭ್ಯಾಸ ಬಹಳ ಅಗತ್ಯವಾದುದು. ನಮಗೆ ನಿಜವಾಗಲೂ ಬೇಕಾದದ್ದು ಮೇಲಿನ ಎರಡೂ ಹಾದಿಗಳಲ್ಲ. ಬದಲು ಅವೆರಡನ್ನು ಅರ್ಥಪೂರ್ಣವಾಗಿ ಜೋಡಿಸಿದ ಮೂರನೆಯ ಹಾದಿ.

●

* * *

ಭಾಷಾಂತರ ಕೃತಿಗಳು

– ಓ.ಎಲ್. ನಾಗಭೂಷಣಸ್ವಾಮಿ

ಭಾಷಾಂತರವು ಆಕರ ಭಾಷೆ ಮತ್ತು ಸ್ವೀಕಾರ ಭಾಷೆಗಳ ನಡುವೆ ನಡೆಯುವ ವ್ಯಾಖ್ಯಾನದ ಕ್ರಿಯೆ. ಭಾಷಾಂತರದ ಅಗತ್ಯವು ಸ್ವೀಕಾರ ಭಾಷೆಗೆ ಇರುತ್ತದೆ. ಭಾಷಾಂತರವು ಸ್ವೀಕಾರ ಭಾಷೆಯ ಓದುಗನನ್ನು ಕುರಿತದ್ದಾಗಿರುತ್ತದೆ. ಸ್ವೀಕಾರ ಭಾಷೆಯ ಸಾಂಸ್ಕೃತಿಕ ಅಗತ್ಯಗಳು ಭಾಷಾಂತರ ಕೃತಿಯ ಮಹತ್ವವನ್ನು ನಿರ್ಧರಿಸುತ್ತವೆ. ಹಾಗೆ ನೋಡಿದರೆ ಭಾಷಾಂತರವು ಆಕರ ಭಾಷೆಯಿಂದಾಚೆಗೆ, ಸ್ವೀಕಾರ ಭಾಷೆಯಿಂದಾಚೆಗೆ ಮೂರನೆಯ ವಲಯವೊಂದರಲ್ಲಿ ನಡೆಯುತ್ತದೆ. ಈ ಮೂರನೆಯ ವಲಯವು ಆಕರ ಭಾಷೆಯ ಮತ್ತು ಸ್ವೀಕಾರ ಭಾಷೆಯ ಸಾಮರ್ಥ್ಯಗಳು ಮುಖಾಮುಖಿಯಾಗುವ ಸ್ಥಳವಾಗಿರುತ್ತದೆ. ಮೂಲ ಕೃತಿಯೊಂದು ಉಂಟೆಂದೂ ಅದಕ್ಕೆ ಅತ್ಯಂತ ನಿಷ್ಠವಾಗಿರುವುದೇ ಯಶಸ್ವಿಯಾದ ಭಾಷಾಂತರವೆಂಬುದೂ ಸರಿಯಾದ ನಿಲುವಲ್ಲ. ಯಾಕೆಂದರೆ ಮೂಲ ಕೃತಿಯೆಂಬುದು ಭಾಷಾಂತರಕಾರನು ತನ್ನ ಭಾಷಿಕ ಸಾಮರ್ಥ್ಯದ ಮುಖಾಂತರ ಕಲ್ಪಿಸಿ ಗ್ರಹಿಸಿಕೊಂಡದ್ದೇ ಆಗಿರುತ್ತದೆ. ಭಾಷಾಂತರಕಾರನು ಆಕರ ಭಾಷೆಯ, ತಾನು ಗ್ರಹಿಸಿದ, ಎಷ್ಟೆಲ್ಲಾ ಸೂಕ್ಷ್ಮಗಳನ್ನು ಸ್ವೀಕಾರ ಭಾಷೆಯಲ್ಲಿ ಹೊಚ್ಚ ಹೊಸದಾಗಿ ರೂಪಿಸುವಲ್ಲಿ ಯಶಸ್ವಿಯಾಗಿದ್ದಾನೆ ಎಂಬುದು ಮುಖ್ಯವಾಗುತ್ತದೆ. ಭಾಷಾಂತರವೆಂಬಲ್ಲೇ 'ಅಂತರ' ಎಂಬುದಿದೆ. ಆಕರ ಭಾಷೆಯ ಸೊಗಸನ್ನೂ ಉಳಿಸಿಕೊಂಡು ಸ್ವೀಕಾರಭಾಷೆಯಲ್ಲಿ ಎಷ್ಟು ಸಹಜವೆಂಬಂತೆ ಬರೆಹ ನಡೆಸಿದ್ದಾನೆಂಬುದು ಮುಖ್ಯವಾಗುತ್ತದೆ. ಭಾಷಾಂತರ , ಎಷ್ಟು ಮಟ್ಟಿಗೆ ಸ್ವೀಕಾರ ಭಾಷೆಯ ಸಂಸ್ಕೃತಿಯ ಪರಂಪರೆಯೊಳಗೆ ಸೇರಿಕೊಳ್ಳುತ್ತದೆ, ಎಷ್ಟು ಮಟ್ಟಿಗೆ ಸ್ವೀಕಾರ ಭಾಷೆಯ ಸಾಮರ್ಥ್ಯವನ್ನು ಹಿಗ್ಗಿಸಿದೆ, ಎಷ್ಟು ಮಟ್ಟಿಗೆ ಸ್ವೀಕಾರ ಭಾಷೆಯೊಂದನ್ನೇ ಬಲ್ಲ ಓದುಗನ ಅರಿವಿನ ಭಾಗವಾಗುವ ಸಾಧ್ಯತೆಯಿದೆ ಎಂಬ ಸಂಗತಿಗಳು ಮುಖ್ಯವಾಗುತ್ತವೆ. ಅಂದರೆ ಸ್ವತಂತ್ರ್ಯ ಕೃತಿಯೊಂದರ ಮೌಲ್ಯಮಾಪನಕ್ಕೆ ಬಳಸುವ ಅಳತೆಗೋಲನ್ನೇ ಭಾಷಾಂತರದ ಮೌಲ್ಯಮಾಪನಕ್ಕೂ ಬಳಸಬೇಕು. ಈ ನಂಬಿಕೆಗಳ ಹಿನ್ನೆಲೆಯಲ್ಲಿ ಸಮೀಕ್ಷೆಗೆ ಒದಗಿದ ೧೯೯೨ರ ಭಾಷಾಂತರ ಕೃತಿಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

೧೯೯೨ರ ಭಾಷಾಂತರ ಕೃತಿಗಳನ್ನು ಹೀಗೆ ವರ್ಗೀಕರಿಸಬಹುದು:

ಇಂಗ್ಲಿಷ್ ಆಕರ ಭಾಷೆಯಾಗಿ ಉಳ್ಳವು	- ೧೨	: ಇವುಗಳಲ್ಲಿ ಕಾವ್ಯ ೨, ನಾಟಕ ೪, ಕಾದಂಬರಿ೧, ಇತಿಹಾಸ ೧, ಜೀವನ ಚಿತ್ರ ೧, ಬೇಟೆ ೧ ಸಾಮಾಜಿಕ ಚಿಂತನೆ ೧, ತತ್ವಶಾಸ್ತ್ರ ೧.
ಹಿಂದಿಯನ್ನು ಆಕರ ಭಾಷೆಯಾಗಿ ಉಳ್ಳವು	- ೬	: ಇವುಗಳಲ್ಲಿ ಕಾವ್ಯ ೨, ಕಾದಂಬರಿ ೩, ಜೀವನ ಚರಿತ್ರೆ ೧.
ಮರಾಠಿಯನ್ನು ಆಕರ ಭಾಷೆಯಾಗಿ ಉಳ್ಳವು	- ೫	: ಇವುಗಳಲ್ಲಿ ಪ್ರಾಚೀನ ಸಾಹಿತ್ಯ ವಿಮರ್ಶೆ ೧, ಕಾದಂಬರಿ ೧, ಕಥೆ ೧, ಸಾಮಾಜಿಕ ಚಿಂತನೆ ೧, ಜೀವನ ಚಿತ್ರ೧
ತಮಿಳು ಆಕರ ಭಾಷೆಯಾಗಿ ಉಳ್ಳದ್ದು	- ೧	: ಕಾವ್ಯ ೧.
ಸಂಸ್ಕೃತ ಆಕರ ಭಾಷೆಯಾಗಿ ಉಳ್ಳವು	- ೨	: ನಾಟಕ ೧, ಕಾವ್ಯ ೧.

ದಿನಪತ್ರಿಕೆ ಮತ್ತಿತರ ನಿಯತಕಾಲಿಕಗಳಲ್ಲಿ ತೆಲುಗು, ಮಲೆಯಾಳಂ ಮುಂತಾದ ಭಾಷೆಗಳಿಂದ ಭಾಷಾಂತರಗೊಂಡಿರುವ ಕಥೆ ಕವನ ಇತ್ಯಾದಿಗಳು ಈ ಸಮೀಕ್ಷೆಯಲ್ಲಿ ಸೇರಿಲ್ಲ.

ಕಾವ್ಯ : ಎಲ್ಲ ಬಗೆಯ ಭಾಷಾಂತರಗಳಲ್ಲಿ ಕಾವ್ಯದ ಭಾಷಾಂತರವು ಅತ್ಯಂತ ಕಷ್ಟದ್ದು. ಭಾಷೆಯೊಂದಕ್ಕೆ ಇರುವ ಸಾಂಸ್ಕೃತಿಕ ಮಿತಿಗಳು ಪದಸಂಪತ್ತಿನಿಂದ ಹಿಡಿದು ಕಾವ್ಯ ರೂಪಗಳವರೆಗೆ ಎಲ್ಲ ಅಂಶಗಳನ್ನೂ ನಿಯಂತ್ರಿಸುತ್ತವೆ. ಆಕರ ಭಾಷೆಯ ಕಾವ್ಯ ಸತ್ವಕ್ಕೆ ಸ್ವೀಕಾರ ಭಾಷೆಯಲ್ಲಿ ಹೊಸ ಜೀವ ತುಂಬುವ ಕೆಲಸಕ್ಕೆ ತೊಡಗಿದಾಗ ಭಾಷಾಂತರಕಾರನು ತನ್ನ ವ್ಯಕ್ತಿತ್ವದ ಶ್ರುತಿಯನ್ನು ಆಕರ ಭಾಷೆಯ ಕವಿ ವ್ಯಕ್ತಿತ್ವದ ಶ್ರುತಿಗೆ ಹೊಂದಿಸಿಕೊಳ್ಳುವುದರಿಂದ ಹಿಡಿದು ತನ್ನ ಭಾಷೆಯ ಸಾಧ್ಯತೆಗಳನ್ನು ನಿಜವಾಗಿ ಅರ್ಥಪೂರ್ಣವಾಗುವಂತೆ ವಿಸ್ತರಿಸುವವರೆಗೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕಾವ್ಯದ ಭಾಷಾಂತರದಲ್ಲಿ ವೈಯಕ್ತಿಕ ಅಗತ್ಯ ಮತ್ತು ಸ್ವೀಕಾರ ಭಾಷೆಯ ಸಾಂಸ್ಕೃತಿಕ ಅಗತ್ಯಗಳೆರಡೂ ಮಿಳಿತವಾದಾಗ ಭಾಷೆಗೆ ಅತ್ಯುತ್ತಮ ಭಾಷಾಂತರ ಲಭ್ಯವಾಗುತ್ತದೆ. ಮತ್ತು ಭಾಷಾಂತರವೂ ವ್ಯಾಖ್ಯಾನವೇ ಆದ್ದರಿಂದ ಆಕರ ಭಾಷೆಯ ಒಂದೇ ಪಠ್ಯವು ಹಲವು ಭಾಷಾಂತರಗಳಿಗೆ ಗುರಿಯಾಗುವುದು ಸಹಜ ಮತ್ತು ಅಪೇಕ್ಷಣೀಯ.

ಸದ್ಯದ ಕನ್ನಡ ಕಾವ್ಯದಲ್ಲಿ ಧರ್ಮ ಮತ್ತು ಅನುಭಾವ ಮತ್ತೆ ಆಸಕ್ತಿಯ ವಿಷಯಗಳಾಗುತ್ತಿವೆ. ಅನುಭಾವದ ಒಂದು ಪರಂಪರೆಯೇ ನಮ್ಮಲ್ಲಿದೆ. ಆದರೆ ಅನುಭಾವಿಗಳಿಗೆ ಕಾವ್ಯ ಮುಖ್ಯ ಆಸಕ್ತಿಯ ವಿಚಾರವಾಗಿರಲ್ಲಿಲ್ಲ. ಈಗ ಅನುಭಾವವನ್ನು

ಕಾವ್ಯವೆಂದು ಎಣಿಸುವ ದೃಷ್ಟಿ ಮುಖ್ಯವಾಗುತ್ತಿರುವಂತೆ ಕಾಣುತ್ತದೆ. ಇದರಿಂದ ಅನುಭಾವವನ್ನು ಕುರಿತ ಮುಖ್ಯ ಪ್ರಶ್ನೆಗಳು ಹುಟ್ಟಿವೆ. ವೈಚಾರಿಕತೆಯೇ ಪ್ರಮುಖವಾದ ಧೋರಣೆಯಾಗಿರುವಾಗ ಅನುಭಾವದ ಮೌಲಿಕತೆಯ ಬಗ್ಗೆಯೂ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಅನುಭಾವದ ಹಿನ್ನೆಲೆಗೆ ಇರುವ ಧಾರ್ಮಿಕತೆಯನ್ನೂ ಮರೆಯುವಂತಿಲ್ಲ. ಧಾರ್ಮಿಕವೆಂಬುದನ್ನು ಪ್ರಗತಿವಿರೋಧಿ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದೆ. ಅಥವಾ ಸದ್ಯದ ಕನ್ನಡ ಚಿಂತನೆಯಲ್ಲಿ 'ಪ್ರಗತಿ' ಎಂಬುದಕ್ಕೆ ಯಾವ ಸಾಮಾನ್ಯ ಅರ್ಥ ಪ್ರಾಪ್ತವಾಗಿದೆಯೋ ಅದರೊಂದಿಗೆ ಧಾರ್ಮಿಕ ಎಂಬುದರ ಅರ್ಥ ಹೊಂದಿಕೊಳ್ಳುತ್ತಿಲ್ಲ. ಹಾಗೆ ಶುದ್ಧ ಅನುಭಾವಕ್ಕೆ ಸಾಂಸ್ಥಿಕ ಧರ್ಮದ ಹಂಗಿಲ್ಲವಾದರೂ'ವೈಚಾರಿಕ'ಕ್ಕೂ ಅನುಭಾವಕ್ಕೂ ಹೊಂದಾಣಿಕೆ ಸಾಧ್ಯವೇ ಇಲ್ಲ. ತರ್ಕ, ಬುದ್ಧಿ, ಇಂದ್ರಿಯ ಜ್ಞಾನದ ಪರಿಮಿತಿ ಮತ್ತು ವ್ಯಕ್ತಿ ವಸ್ತುಗಳ ದ್ವಂದ್ವವನ್ನು ದಾಟುವುದೇ ಅನುಭಾವದ ನೆಲೆಯಾಗಿರುವಾಗ ವೈಚಾರಿಕದ ಚೌಕಟ್ಟನ್ನು ಬಲವಾಗಿ ನಂಬಿರುವ ಕಾಲವು ಅಮಭಾವವನ್ನು ಕೇವಲ ಕಾವ್ಯ ತಂತ್ರವಾಗಿ, ಅಭಿವ್ಯಕ್ತಿಯ ವೈಚಿತ್ರ್ಯಕ್ಕಾಗಿ ಮಾತ್ರ ಸಹಿಸಿಕೊಳ್ಳುವಂತೆ ತೋರುತ್ತದೆ.

ಡಿ.ಆರ್. ನಾಗರಾಜ್ ಅವರ 'ವಸಂತ ಸ್ಮೃತಿ' ಮತ್ತು ಎಸ್. ಮಂಜುನಾಥ್ ಅವರ 'ಸುಮ್ಮನಿರುವ ಸುಮ್ಮಾನ' ಇವೆರಡೂ ಅನುವಾದಕೃತಿಗಳ ಮೌಲ್ಯಮಾಪನದ ಬಗ್ಗೆಯೇ ಪ್ರಶ್ನೆಗಳನ್ನು ಹುಟ್ಟಿಸುವಂಥವಾಗಿವೆ. 'ವಸಂತ ಸ್ಮೃತಿ'ಯ ಭಾಷೆ ಮತ್ತು ರೂಪಗಳು ಕನ್ನಡದ ನವ್ಯ ಕವನಗಳನ್ನು ಓದುತ್ತಿರುವ ಭಾವವನ್ನು ಮೂಡಿಸುತ್ತವೆ. ಅನುಭಾವ ಬಹುಶಃ ಲೇಖಕರ ಮನೋಧರ್ಮಕ್ಕೆ ಹೊಂದುವುದಿಲ್ಲವೆಂದು ತೋರುತ್ತದೆ. 'ಈ ಅಸ್ತಿತ್ವ ಹೀನ ಸ್ಥಿತಿಯಿಂದ ಲೋಕಾತ್ಮ ಹುಟ್ಟಿತು'. ' ಕಟ್ಟಕಡೆಯ ದಂಡಾಧಿಕಾರಿಯ ಧ್ವನಿ ಕೇಳಿಸಿತು' : 'ಪ್ರೇಮದಾತ್ಮದೊಳಗೆ ಅಡಗಿದ್ದ ಅನುಭಾವಿ ಹಲ್ಲಜ್ ನೂರ್ಮಡಿಸಿ ಏಣಿ ಹತ್ತಿ ಎಲ್ಲಿಗೋ ಆಯ್ತು ಪಯಣಿಸಿ' -ಇಂಥ ಸಾಲುಗಳಲ್ಲಿನ ರಚನೆ ಎಲ್ಲೋ ಕನ್ನಡಕ್ಕೆ ಹೊಂದುತ್ತಿಲ್ಲವಲ್ಲ ಎನಿಸುತ್ತದೆ. ಹಾಗೆ ಪೂರ್ಣ ಕನ್ನಡವೇ ಏಕಾಗಬೇಕು ಪರ ಸಂಸ್ಕೃತಿಯ ಸೊಗಸು ಕೂಡ ಕನ್ನಡಕ್ಕೆ ಬೇಕಲ್ಲವೇ? ಈ ಸಮರ್ಥನೆ ನೆನಪಿಗೆ ಬರುತ್ತಿದ್ದಂತೆ 'ದೇಹದೊಳಗೆ ಅಡಗಿ ಕೂತ ಆತ್ಮ' 'ಭವಿಗಳ ನಡುವಿನ ಮಹಾ ಭಕ್ತನ ಹಾಗೆ': 'ಶೂನ್ಯ ಸಿಂಹಾಸನದ ಸರದಾರರು ನೀವು ? : 'ಪುರುಷೋತ್ತಮ': 'ಬ್ರಹ್ಮಾಂಡ' ಇತ್ಯಾದಿ ಕನ್ನಡ ಅನುಭಾವ ಸಾಹಿತ್ಯದ ಮತ್ತು ಸಂಸ್ಕೃತ ಧಾರ್ಮಿಕ ಬರವಣಿಗೆಗಳ ಪರಿಭಾಷೆಯನ್ನೂ ಬಳಸಿರುವುದು ಕಾಣುತ್ತದೆ. ಅಂದರೆ, ಪರ ಸಂಸ್ಕೃತಿಯ ವಿವರಗಳನ್ನು ಪರಕೀಯವಾಗಿಯೇ ಉಳಿಸಿಕೊಳ್ಳಬೇಕೋ ನಮ್ಮದಾಗಿ ಹೋಗಿರುವ ಪದಸಂಪತ್ತಿಗೆ ಅಳವಡಿಸಿಕೊಳ್ಳಬೇಕೋ ಅಥವಾ ತನ್ನದೇ ಕಾವ್ಯ ಭಾಷೆಯನ್ನು ರೂಪಿಸಿಕೊಳ್ಳಲು ಯತ್ನಿಸಬೇಕೋ ಎಂಬ ಗೊಂದಲ ಅನುವಾದದ ಉದ್ದಕ್ಕೂ ಇರುವಂತೆ ತೋರುತ್ತದೆ. ಹಾಗೆಯೇ ಅಂತ್ಯಪ್ರಾಸಗಳು ಸಹಜವೆಂಬಂತಿರದೆ ಯತ್ನ ಪೂರ್ವಕವಾಗಿ ಸಾಧಿಸಿದಂತೆನಿಸುತ್ತವೆ. 'ನೀನು ಕರ್ತಾರನ ಕಮ್ಮಟದ ಗುಟ್ಟು', 'ನಾನು ಅವನು'

ಇಂಥ ಕವನಗಳಲ್ಲಿ ಕೆಲವೆಡೆಗಳಲ್ಲಿ ಹೀಗಾಗಿದೆ. ಉನ್ಮಾದ, ಆವೇಶ, ಆವೇಗಗಳ ತೆಳು ನೆರಳು ಮಾತ್ರ ಲೆಕ್ಕಾಚಾರದ ಅನುವಾದದಲ್ಲಿ ಅಲ್ಲಲ್ಲಿ ಮೂಡಿ ಮರೆಯಾಗುತ್ತವೆ. ಬಹುಶಃ ರೂಮಿಯನ್ನು ಕಾವ್ಯ ತಂತ್ರ ಮಾತ್ರವಾಗಿ ಗ್ರಹಿಸಿದ್ದರಿಂದ ಇಂಥ - ಅನುವಾದ ವ್ಯಾಖ್ಯಾನ ಮೂಡಿದೆ ಎನಿಸುತ್ತದೆ. 'ಸಮಾನವಾದ ಭಾಷಾ ಪ್ರವೃತ್ತಿ' 'ಮೂಲ ವಾಕ್'ನ ಕಡೆಗೆಸಾಗುವ ಪ್ರಯತ್ನ, ಭಾಷೆಯ ವಿಶ್ವಾತ್ಮಕತೆಯನ್ನು ಭಾಷಾಂತರದ ಮೂಲಕ ಸಾಧಿಸುವ ಮಹಾತ್ವಾಕಾಂಕ್ಷೆ ಇವುಗಳನ್ನೆಲ್ಲ ಹೊಂದಿರುವ ಡಿ.ಆರ್.ನಾಗರಾಜ್‌ರ 'ವಸಂತ ಸ್ಮೃತಿ' ಇತರ ಅನುವಾದಕರಿಗೆ ಈ ದಾರಿಯಲ್ಲಿರುವ ಅಗಾಧ ಸಂಕಷ್ಟಗಳನ್ನು ಸೂರ್ಯ ಸ್ಪಷ್ಟಗೊಳಿಸುವಂಥದಾಗಿದೆ.

'ಸುಮ್ಮನಿರುವ ಸುಮ್ಮಾನ' ಇನ್ನೊಂದು ಬಗೆಯ ಅನುವಾದ. ಎಸ್. ಮಂಜುನಾಥರ ಈ ಟಾವೋ ಪದ್ಯಗಳ ಅನುವಾದ ಕೆ.ವಿ.ಸುಬ್ಬಣ್ಣನವರ 'ಝೆನ್' ಅನುವಾದದ ಪರಂಪರೆಗೆ ಸೇರಿದ್ದು. ಒಮ್ಮೊಮ್ಮೆ ಮಂಜುನಾಥರ ಸ್ವಂತ ಕವನಗಳ ಬನಿಯೇ ಈ ಅನುವಾದಕ್ಕೂ ಇಳಿದಿರುವಂತೆ ಕಾಣುತ್ತದೆ. ಆದರೆ ಎರಡು ವಾಕ್ಯಗಳ ನಡುವಿನ ತರ್ಕ ಕನ್ನಡದ್ದಲ್ಲವೆಂಬುದು ಹೊಳೆಯುತ್ತದೆ. ಕನ್ನಡದ ಅನುಭಾವ ಕಾವ್ಯಭಾಷೆಯ ಪರಂಪರೆಯ ಶಕ್ತಿಯನ್ನು ಬಳಸಿಕೊಂಡರೂ ಬಹಳಮಟ್ಟಿಗೆ ಪರಿಚಿತ ಶಬ್ದಕೋಶವನ್ನು ನಿರಾಕರಿಸಲಾಗಿದೆ. 'ಸ್ವಭಾವ ಸಿರಿವಂತ', 'ಸಮರಸ ಸರೋವರ', 'ಅದು, ನಿರೂಪದ ರೂಪ' ಇತ್ಯಾದಿ ರೂಪಕ ಕಲ್ಪನೆಗಳು ಪರಕೀಯ ತತ್ವವೊಂದರ ಅನುವಾದವಾಗಿ ಮತ್ತು ಕಾವ್ಯ ತಂತ್ರಗಳಾಗಿ ಹೊಸದೇನನ್ನೋ ಹೇಳಲು ಯತ್ನಿಸುವಂತಿವೆ. 'ಪ್ರಶ್ನೋತ್ತರ' ದಂಥ ರಚನೆಗಳು ಅಲ್ಲಮ, ಮುಕ್ತಾಯಕ್ಕರ ಸಂವಾದವನ್ನು ನೆನಪಿಸಿಯೂ ಭಿನ್ನತೆಯನ್ನು ಉಳಿಸಿಕೊಂಡಿವೆ. ಕನ್ನಡದ ವಚನಗಳಂತೆ ಹೇಳಿಕೆ ಮತ್ತು ದೃಷ್ಟಾಂತಗಳನ್ನು ಅನುಸರಿಸಿಯೂ ತಟ್ಟನೆ ಪಡೆವ ತಿರುವುಗಳಿಂದ ಆಶ್ಚರ್ಯ ಹುಟ್ಟಿಸುವಲ್ಲಿ ಸಮರ್ಥವಾಗಿವೆ. ಅನುಭಾವದ ಹಿಂದಿರುವ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಕಾಪಾಡಿಕೊಂಡು ಮರು ಓದುಗಳನ್ನು ಬೇಡುವ ಅನುವಾದಗಳಾಗಿವೆ.

ಇಟಗಿ ಈರಣ್ಣನವರು 'ಕಬೀರದಾಸರ ಕನ್ನಡ ದೋಹೆಗಳು' ಕೃತಿಯನ್ನು ಪ್ರಕಟಿಸಿದ್ದಾರೆ. ಕಬೀರ ಕನ್ನಡಕ್ಕೆ ಅಪರಿಚಿತನೇನೂ ಅಲ್ಲ. ಈ ಮಹಾ ಅನುಭಾವಿಯನ್ನು ಬೇಂದ್ರೆಯಂಥ ಸಮರ್ಥ ಕವಿಗಳೂ ಕನ್ನಡಿಸಿದ್ದಾರೆ. ಇಟಗಿ ಈರಣ್ಣನವರು ತಮ್ಮ ಭಾಷಾಂತರದಲ್ಲಿ ತುಂಬ ಧೈರ್ಯವನ್ನೂ ಸ್ವಾತಂತ್ರ್ಯವನ್ನೂ ವಹಿಸಿದ್ದಾರೆ. ಮೂಲ ಕೃತಿ ಒಂದಿದೆ, ಅದರ ಒಂದು ಖಚಿತ ಅರ್ಥಕ್ಕೆ ಬದ್ಧವಾಗಬೇಕು ಎಂಬ ಧೋರಣೆ ಅವರದಲ್ಲ. ತಮಗೆ ದಕ್ಕಿದ ಅರ್ಥವನ್ನು, ತಮ್ಮದೇ ಲಯದಲ್ಲಿ ಸಹಜವಾಗಿ ಕನ್ನಡಿಸುವ ಪ್ರಯತ್ನ ನಡೆಸಿದ್ದಾರೆ. ಉದಾಹರಣೆಗೆ " ಬೆಳಗನೆ ಬೆಳಗುವ ಬೆಳಗನ ನೋಡಲು" ಎಂದು ಆರಂಭವಾಗುವ ೪೦ನೆಯ ದೋಹೆಯನ್ನು ನೋಡಬಹುದು. ಇಲ್ಲಿ ಎಲ್ಲೋ ಮಧುರ ಚೆನ್ನರ ನುಡಿ ಕೇಳುವಂತಿದೆ. ಹಾಗೆ ಭಾಷಾಂತರದ ಉದ್ದಕ್ಕೂ ವಚನಕಾರರ, ಇತರ ಅನುಭಾವಿಗಳ ನುಡಿಗಟ್ಟುಗಳು ಹೇರಳವಾಗಿ ಬಳಕೆಯಾಗಿವೆ. ಇದರಿಂದಾದ ಕಬೀರ ಪೂರ್ಣ ಕನ್ನಡ ಪರಂಪರೆಗೇ ಸೇರಿದವನಾಗುತ್ತಾನೆ. ಆಧುನಿಕ

ಕನ್ನಡದ ಲಯದಲ್ಲಿ ಕನ್ನಡ ಅನುಭಾವ ಪಠ್ಯಗಳೊಡನೆ ಬೆರೆತು ಹೋಗುತ್ತಾನೆ. ೩೬೦ನೆ ದೋಹೆಯಲ್ಲಿ ಶ್ಲೇಷೆಯನ್ನು ಸಮರ್ಥವಾಗಿ ಕನ್ನಡಿಸಿರುವುದು ಒಂದು ಉದಾಹರಣೆ. ಕೊನೆಯಲ್ಲಿ ಕೊಟ್ಟಿರುವ ಪಾರಿಭಾಷಿಕ ತರಹದ ವಿವರಣೆ, ಮತ್ತು ಆರಂಭದಲ್ಲಿ ಕಬೀರರನ್ನು ಕುರಿತ ಪ್ರಸ್ತಾವನೆ ತುಂಬ ಉಪಯುಕ್ತವಾಗಿವೆ ಇಂಥ ಭಾಷಾಂತರ 'ಸುಮ್ಮನಿರುವ ಸುಮ್ಮಾನ'ಕ್ಕಿಂತ ಭಿನ್ನವಾದದ್ದು.

ಮ.ಸು. ಕೃಷ್ಣಮೂರ್ತಿಯವರ ತುಳಸೀದಾಸರ 'ರಾಮಚರಿತ ಮಾನಸ' ಸರಳ ಕನ್ನಡದ ಗದ್ಯಾನುವಾದವಾಗಿ ತುಳಸೀದಾಸರ ಕಾವ್ಯಮಾರ್ಗದ ಸಮರ್ಥನೆಯಾಗಿ, ಭಾರತೀಯ ಭಾಷೆಗಳ ತೌಲನಿಕ ಅಧ್ಯಯನಕ್ಕೆ ನೆರವಾಗುವ ಕೃತಿಯಾಗಿ ಗಮನಾರ್ಹವಾದುದಾಗಿದೆ. ಹಿಂದೀಕಾವ್ಯದ ಗದ್ಯಾನುವಾದವಾಗಿ ಇದು 'ವಚನ ಭಾರತ' 'ಜನಪ್ರಿಯ ವಾಲ್ಮೀಕಿ ರಾಮಾಯಣ'ಇಂಥ ಭಾಷಾಂತರಗಳ ಪರಂಪರೆಯ ಮುಂದುವರಿಕೆಯಾಗಿದೆ, ದೀರ್ಘ ಮಹಾಕಾವ್ಯಗಳ ಭಾಷಾಂತರಕ್ಕೆ ಗದ್ಯವೇ ಸೂಕ್ತ ಮಾಧ್ಯಮ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡುವಂತಿದೆ. ೬೧ ಪುಟಗಳಷ್ಟು ದೀರ್ಘವಾದ ಮುನ್ನುಡಿಯಲ್ಲಿ ತುಳಸೀದಾಸರ ಕಾವ್ಯವನ್ನು ಗ್ರಹಿಸುವುದಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸಲಾಗಿದೆ. ಹಿಂದುತ್ವ ಎಂಬುದು ಸುಡುವ ಪ್ರಶ್ನೆಯಾಗಿರುವ ಈ ದಿನಗಳಲ್ಲಿ ತುಳಸೀದಾಸರ ಪ್ರಸ್ತುತ ಅನುವಾದ ರಾಮಾಯಣವನ್ನು ಕುರಿತ ಗಂಭೀರ ಚರ್ಚೆಗೆ ಅವಕಾಶ ಮಾಡಿಕೊಡುವಂತಿದೆ. ಪುಟ ೬೬ ರಿಂದ ೮೨ ರವರೆಗೆ ಇರುವ ಕಾವ್ಯದ ಭಾಗವು ಕವಿ - ಕೃತಿ - ಓದುಗ - ಸಾಮಾಜಿಕ ವಾತಾವರಣ ಇವುಗಳ ಸಂಬಂಧವನ್ನು ಭಾರತೀಯ ಭಾಷೆಗಳ ಕಾವ್ಯದ ಹಿನ್ನೆಲೆಯಲ್ಲಿ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ರಾಮ ಮತ್ತು ರಾಮಾಯಣಗಳು ಆಧಿಕಾರ ರಾಜಕೀಯದ ಪ್ರಶ್ನೆಗಳಾಗಿ ಬದಲಾಗಿರುವ ಈ ದಿನಗಳಲ್ಲಿ ತುಳಸೀದಾಸನು ಭಾಷಾಂತರವನ್ನು ಹೇಗೆ ಸ್ವೀಕರಿಸಬೇಕೆಂಬ ಚರ್ಚೆಗೆ ಹೋಗದೆ ಕೃಷ್ಣಮೂರ್ತಿಯವರ ಸಮರ್ಥ ಭಾಷಾಂತರವನ್ನು ಅಭಿನಂದಿಸಲು ಹಿಂಜರಿಯಬೇಕಿಲ್ಲ.

'ಹಿಡಿ ಶಾಪ' ಐ.ಆರ್. ಪೆರುಮಾಳರ ಎರಡನೆಯ ಸಂಕಲನವನ್ನು ವೀಚಿಯವರು ತಮಿಳಿನಿಂದ ಕನ್ನಡಕ್ಕೆ ಭಾವಾನುವಾದ ಮಾಡಿದ್ದಾರೆ. ಇಲ್ಲಿನ ಕವನಗಳು ಇಂದಿನ ಕನ್ನಡ ಸಂದರ್ಭದಲ್ಲಿ ವ್ಯಾಪಕ ಮನ್ನಣೆ ಗಳಿಸಿರುವ ಬಂಡಾಯ ಮಾರ್ಗಕ್ಕೆ ಸೇರುವಂಥವು. ಇಲ್ಲಿನ ಕವನಗಳ ಆಶಯ ಕನ್ನಡದ ಕಾವ್ಯ ವಾಚಕರಿಗೆ ಅಪರಿಚಿತವೇನೂ ಅಲ್ಲ. ವೀಚಿಯವರ ಕನ್ನಡ ಅಲ್ಲಲ್ಲಿ ನುಸುಳುವ ಪ್ರಾಚೀನ ಪ್ರಯೋಗಗಳನ್ನು ಮರೆತರೆ ಸಮರ್ಥವಾಗಿಯೇ ಇದೆ. ಆದರೆ ಈ ಸಂಕಲನದ ಮಟ್ಟಿಗೆ ಪ್ರಶ್ನೆ ಭಾಷಾಂತರದ್ದಲ್ಲ ಕವಿತೆಯದೇ ಆಗಿದೆ. ಇಲ್ಲಿನ ಎಲ್ಲ ಕವನಗಳ ಆಶಯವನ್ನೂ ಸರಳವಾದ ವಾಕ್ಯಗಳಲ್ಲಿ ಸರಿಯಾಗಿಯೇ ತಪ್ಪಿಲ್ಲದಂತೆ ವಿವರಿಸಬಹುದು. ಆಶಯ ಮುಖ್ಯ ಕಾವ್ಯಕ್ಕೆ ಮರು ಓದುಗಳನ್ನು ತಾಳಿಕೊಳ್ಳುವ ಶಕ್ತಿ ಇರುವುದಿಲ್ಲ. ಜೊತೆಗೆ'ನಮ್ಮ ಕಾಲದ ನಾರಿಯರು'ಎಂಬಂಥ ಕವನಗಳಲ್ಲಿ ವ್ಯಕ್ತವಾಗುವ ಧೋರಣೆ ಆಧುನಿಕತೆಯ ಪರಿಣಾಮಗಳನ್ನು ಒಪ್ಪದೆ ಮತ್ತೆ ಸಾಂಪ್ರದಾಯಕ ನೀತಿಯ ನಿಲುವನ್ನು

ಪ್ರತಿಪಾದಿಸುವಂಥದೇ ಆಗಿದೆ. ಹಾಗಿರುವಾಗ 'ಪ್ರಗತಿಪರ' ಆಶಯಗಳು ಎಷ್ಟು ನಿಜ ಎಂಬ ಅನುಮಾನ ಹುಟ್ಟುತ್ತದೆ. ಬದುಕಿನ ಸಂಕೀರ್ಣತೆಯನ್ನು ಗ್ರಹಿಸದೆ ಸರಳವೂ ಯಾರೂ ತಿರಸ್ಕರಿಸಲಾಗದ ಆಶಯಗಳನ್ನು ವ್ಯಕ್ತ ಪಡಿಸುವಂಥವೂ ಆದ ಕವನಗಳನ್ನು ಮುಖ್ಯವೆಂದು ಏಕೆ ಒಪ್ಪಬೇಕು?

ಜಿ.ಎಲ್. ಹೆಗಡೆಯವರ 'ಸಂಸ್ಕೃತ ಕಾವ್ಯ ವಿನೋದ' ಸಂಸ್ಕೃತ ಪ್ರಹೇಳಿಕಾಗಳ ಸಂಗ್ರಹ, ಶಬ್ದಾರ್ಥ ಅನುವಾದ ಮತ್ತು ವಿವರಣೆಯಾಗಿಧೆ. ಭಾಷಿಕ ಕ್ರೀಡೆಗಳಲ್ಲಿ ಆಸಕ್ತರಾದವರಿಗೆ ರುಚಿಸುವಂತಿದೆ.

ನಾಟಕ: ಎಸ್.ವಿ. ಪರಮೇಶ್ವರ ಭಟ್ಟರ 'ಕನ್ನಡ ಭವಭೂತಿ ಮಹಾ ಸಂಪುಟ' ವಿದ್ವತ್ ಪೂರ್ಣವಾದದ್ದು. ಸಂಸ್ಕೃತ ಭಾಷೆಯ ಪಠ್ಯವನ್ನೂ ಕನ್ನಡ ಲಿಪಿಯಲ್ಲಿ ಕೊಡಲಾಗಿದೆ. ' ಮೂಲ ನಿಷ್ಠೆ'ಯನ್ನು ವ್ರತದಂತೆ ಸ್ವೀಕರಿಸುವ ಈ ಭಾಷಾಂತರವು ಕನ್ನಡಕ್ಕೆ ದೂರದ್ದಾಗಿರುವಂತೆ, ಸಂಸ್ಕೃತಕ್ಕೆ ಹೆಚ್ಚು ಹತ್ತಿರವಾಗಿರುವಂತೆ ಕಾಣುತ್ತದೆ. ಡಾ:ಕೆ.ಕೃಷ್ಣಮೂರ್ತಿಯವರ ಸಂಸ್ಕೃತ ಕಾವ್ಯ ನಾಟಕಗಳ ಭಾಷಾಂತರ ಪರಂಪರೆಯನ್ನು ಮುಂದುವರೆಸುವಂತೆ ತೋರುತ್ತದೆ. ಕನ್ನಡ ರಂಗಭೂಮಿ ಮತ್ತು ಕನ್ನಡ ಕಾವ್ಯಗಳು ಸಂಸ್ಕೃತ ನಾಟಕ ಮತ್ತು ಕಾವ್ಯಗಳನ್ನು ಸ್ವೀಕರಿಸುವ ಬಗೆಯೇ ಬೇರೆ. ಕೆ.ವಿ.ಸುಬ್ಬಣ್ಣನವರ 'ಸೂಳೆ ಸನ್ಯಾಸಿ' ಅಥವಾ 'ಲೋಕ ಶಾಕುಂತಲಾ'ಇಲ್ಲವೆ 'ವಿದಿಶೆಯ ವಿದೂಶಕ'ದಂಥ ಭಾಷಾಂತರಗಳು ಕನ್ನಡ ರಂಗಭೂಮಿಯ ದೃಷ್ಟಿಯಿಂದ ಮುಖ್ಯವಾಗುವಂತೆ ಪರಮೇಶ್ವರ ಭಟ್ಟರ ಭಾಷಾಂತರಗಳು ಮುಖ್ಯವಾಗಲಾರವೆನಿಸುತ್ತದೆ. ಆದರೆ ಸಂಸ್ಕೃತವನ್ನು ಅಭ್ಯಾಸ ಮಾಡುವ ಕನ್ನಡ ವಿದ್ಯಾರ್ಥಿಗಳಿಗೆ ಇಂಥ ಭಾಷಾಂತರಗಳಿಂದ ಲಾಭವುಂಟೆಂದು ಹೇಳಬಹುದು. ಕಾವ್ಯವನ್ನು ಕಾವ್ಯವಾಗಿಯೇ ಸಂಸ್ಕೃತ ಛಂದಸ್ಸಿನ ಇಕ್ಕಟ್ಟಿನಲ್ಲಿ ಭಾಷಾಂತರಿಸುವುದು ಇಂದಿನ ಕನ್ನಡ ಕಾವ್ಯಲೋಕಕ್ಕೆ ಅಗತ್ಯವಿಲ್ಲವೆಂದು ತೋರುತ್ತದೆ.

ಕೆ.ಎಚ್ ಶ್ರೀನಿವಾಸ್ ಅನುವಾದಿಸಿರುವ 'ಕೀನ್' ನಾಟಕ ತುಂಬ ಚೆನ್ನಾಗಿದೆ. ಇದನ್ನು ಓದುತ್ತಿದ್ದರೆ ನಮ್ಮೊಳಗನ್ನು ನಾವೇ ಪರಿಶೀಲಿಸಿಕೊಳ್ಳುವಂತೆ ಆಗುತ್ತದೆ. ಕನ್ನಡದ ನವ್ಯ ಸಾಹಿತ್ಯದ ಓದುಗರಿಗೆ ಸಾರ್ತ್ರನ ಹೆಸರು ಗೊತ್ತಿದೆ. ಕನ್ನಡದ ನವ್ಯ ಸಾಹಿತ್ಯದ ಆದ್ಯರಲ್ಲಿ ಅವನೂ ಒಬ್ಬನು ಎಂಬಷ್ಟು ಅವನ ಹೆಸರು ಗೊತ್ತಿದೆ. ಆದರೆ ಅವನದೇ ಬರವಣಿಗೆ ಕನ್ನಡಕ್ಕೆ ಬಂದಿರುವುದು ಕಡಿಮೆ. ಸಕ್ಕರೆಯ ಮರಳು, ಬೆಲ್ಲದ ಕೆಸರು, ತವರಾಜನ ನೊರೆ ಇರುವ ಸಾರ್ತ್ರನದಿಯನ್ನು ಬಿಟ್ಟು ಪಕ್ಕದಲ್ಲಿ ಬಾವಿ ತೋಡಿ ಉಪ್ಪುನೀರು ಕುಡಿಯುವಂತಿತ್ತು. ಈಗ ಕೆ.ಎಚ್. ಶ್ರೀನಿವಾಸರು ಒಂದು ಭಾಷಾಂತರದ ಕಾಲುವೆ ಮುಖಾಂತರ ಸಾರ್ತ್ರನ ಹೊಳೆಯ ಸಿಹಿ ನೀರು ನಮ್ಮಲ್ಲಿಗೆ ತಂದಿದ್ದಾರೆ ಎಂದು ಅವರಿಗೇ ಸಂಕೋಚವಾಗುವ ಹಾಗೆ ಹೊಗಳಬಹುದು. ಕಲೆಗಾರನೇ ಕಲೆಯ ವಸ್ತುವಾಗಿರುವ ಕೃತಿಗಳು ನಮ್ಮಲ್ಲೇನೂ ಕಡಿಮೆ ಇಲ್ಲ. ಅನಕೃ ಕಾದಂಬರಿಗಳಿಂದ ಹಿಡಿದು ಇತ್ತೀಚೆಗೆ 'ಷೇಕ್ಸ್‌ಪಿಯರ್‌ನ ಸ್ವಪ್ನನೌಕೆ' ಬರೆದ ಶಿವಪ್ರಕಾಶರ ನಾಟಕದವರೆಗೆ ಅಂಥವು ಬೇಕಾದಷ್ಟು ಇವೆ. ಕೆಲವು ಕೇವಲ ರಮ್ಯ

ಕನಸುಗಾರಿಕೆಯುವು ಇನ್ನು ಕೆಲವು, ಶಿವಪ್ರಕಾಶರ ನಾಟಕದ ಹಾಗೆ, ಸಾಂಸ್ಕೃತಿಕ ವಿಶ್ಲೇಷಣೆಯನ್ನು ಧ್ವನಿಸಲು ಯತ್ನಿಸುವಂಥವು. 'ಕೀನ್' ನಾಟಕ, ಯಾಕೆ ವಿಶಿಷ್ಟವೆಂದರೆ ಅದು 'ನಾನು ಏನು ? ನಾನು ಯಾರು ? ' ಎಂಬ, ಪ್ರತಿಯೊಬ್ಬರನ್ನೂ ಕಾಡುವ, ಮೂಲ ಪ್ರಶ್ನೆಗಳನ್ನು ಕೇವಲ ತತ್ವಶಾಸ್ತ್ರವಾಗದ ಹಾಗೆ ನಾಟಕವಾಗಿಸುತ್ತದೆ ಎಂಬುದು. ಕೀನ್ 19ನೆಯ ಶತಮಾನದ ಒಬ್ಬ ಅತ್ಯಂತ ಪ್ರಸಿದ್ಧ ನಟ. ಅವನು ಇಂಗ್ಲೆಂಡಿನವನು, ಷೇಕ್ಸ್‌ಪಿಯರ್‌ನ ನಾಟಕಗಳಲ್ಲಿ ಅಭಿನಯಿಸಿ ರಾಷ್ಟ್ರದ ಹೆಮ್ಮೆ ಎನಿಸಿದ್ದ. ಅವನನ್ನು ಕುರಿತು ಡ್ಯೂಮಾ ಎಂಬ ಫ್ರೆಂಚ್ ಲೇಖಕ ಒಂದು ರಮ್ಯ ದುರಂತ ನಾಟಕ ಬರೆದ. ಅದನ್ನು ಆಧರಿಸಿ ಸಾರ್ತ್ರ್ ಒಂದು ಅಮೋಘ ತಾತ್ವಿಕ ನಾಟಕ ಮಾಡಿದ.

ಮನುಷ್ಯ ಇರುವುದಲ್ಲ, ಆಗಬೇಕು. ಮೌಲ್ಯ ತತ್ವಗಿತ್ವ ಏನಿದ್ದರೂ ಎಲ್ಲ ಆಯಾ ಕ್ಷಣದ ಕ್ರಿಯೆಯಲ್ಲಿ ಆಗುವಂಥದೇ ಹೊರತು ಪೂರ್ವನಿರ್ಧಾರಿತವಲ್ಲ. ಮನುಷ್ಯ ಪೂರ್ಣನಾಗಿ ನಿರಾವಲಂಬಿ, ಸ್ವತಂತ್ರ. ನಿಜ. ಆದರೆ ಇದು ವ್ಯವಸ್ಥೆಯನ್ನೇ ಧಿಕ್ಕರಿಸುವ ನಿಲುವು. ವ್ಯವಸ್ಥೆ ಇಲ್ಲದಿದ್ದರೆ ಅರ್ಥ ಎಲ್ಲಿರುತ್ತದೆ ?ನಾನು ಅರ್ಥ 'ಆಗ'ಬೇಕಾದರೆ ವ್ಯವಸ್ಥೆಯ ಕೃತಕ ಕೋಟೆ ಒಡೆಯ ಬೇಕು. ಇದು ಆತಂಕ, ಅಥವಾ 'ದುರಂತ'. ಈ ನಾಟಕದ ಮುಖ್ಯ ಪಾತ್ರಗಳಾದ ಕೀನ್, ಎಲಿನಾ ಮತ್ತು ರಾಜಕುಮಾರರ ಪರಸ್ಪರ ಸಂಬಂಧದ ಸಂಘರ್ಷ ಏಕಕಾಲದಲ್ಲಿ ಕುತೂಹಲ ಕೆರಳಿಸುವ ಕಥೆಯಾಗಿ ಮತ್ತು ತಾತ್ವಿಕ ವಿವೇಚನೆಯು ವಸ್ತುವಾಗಿ ನಮ್ಮೆದುರು ತೆರೆದುಕೊಳ್ಳುತ್ತ ಹೋಗುತ್ತದೆ. "ನಿಜವಾಗಿ ನಾನು ಏನೂ ಅಲ್ಲವೇ ಅಲ್ಲ ನಾನು ಅನ್ನೋದೆಲ್ಲ ನಂದೇ ಒಂದು ನಟನೆ ಅಷ್ಟೆ" ಅಂತ ಕೀನ್ ಹೇಳಿದರೂ ನಾಟಕದ ಉದ್ದಕ್ಕೂ ನಿಜ ಯಾವುದು, ಸುಳ್ಳು ಯಾವುದು ಎಂದು ಪ್ರತಿ ಕ್ಷಣವೂ ತಡಕುತ್ತಲೇ ಇರಬೇಕಾಗುತ್ತದೆ.

ನಟನೆ ನಿಜವಾಗಿ, ನಿಜ ನಟನೆಯಾಗಿ ಆಯಾ ಕ್ಷಣದಲ್ಲಿ ಅದೇ ನಿಜವಾಗುತ್ತಾ ಇರುತ್ತದೆ. ಎಲಿನಾಳ ಸೌಂದರ್ಯ, ರಾಜಕುಮಾರನ ರಾಜತ್ವ ಮತ್ತು ಕೀನ್‌ನ ಪ್ರತಿಭೆ ಮೂರೂ ಕೂಡ ಯಾವುದು ನಿಜ ಯಾವುದು ಸುಳ್ಳು ಎಂದು ಬೇರ್ಪಡಿಸಲಾರದಂತೆ ಬೆರೆತಿವೆ "ನಾವು ಮೂವರು, ಬೇರೆಯವರ ಪ್ರೀತಿಯಿಂದ ಬದುಕುವವರು. ನಮ್ಮನ್ನ ನಾವೇ ಪ್ರೀತಿಸಿಕೊಳ್ಳಲು ಅಶಕ್ತರು. ನಿನಗೆ ನನ್ನ ಪ್ರೀತಿ ಬೇಕಿತ್ತು ನನಗೆ ನಿನ್ನದು, ಅವರಿಗೆ ನಮ್ಮಿಬ್ಬರದು. ಮೂರು ಬರೀ ಪ್ರತಿಬಿಂಬಗಳು. ಅವುಗಳಲ್ಲಿ ಒಂದೊಂದು ಇನ್ನುಳಿದೆರಡರ ಅಸ್ತಿತ್ವವನ್ನು ನಿಜವೆಂದು ನಂಬಿಕೊಂಡವು. ಅದೇಸೇ ತಮಾಷೆ " (ಪುಟ ೧೬೮) ಹಣವನ್ನು ಕುರಿತು, ಸಾಮಾಜಿಕವರ್ಗಗಳ ಸಂಬಂಧ ಸಂಘರ್ಷ ಕುರಿತು, ಗಂಡು ಹೆಣ್ಣಿನ ಪ್ರೀತಿ ಕುರಿತು, ನಾಟಕ-ಬದುಕುಗಳ ನಿಜ ಸುಳ್ಳುಗಳನ್ನು ಕುರಿತು ಈ ನಾಟಕವನ್ನೆ ಆಧಾರವಾಗಿಟ್ಟುಕೊಂಡು ಆಳವಾಗಿ ಚಿಂತಿಸಲು ಅವಕಾಶವಿದೆ.

ಆದರೆ ಒಂದೇ ತೊಂದರೆ. ನಮ್ಮ ಶಿಕ್ಷಣ ಕ್ರಮ ಇಂಥ ಕೃತಿಯನ್ನು ವಿವರವಾಗಿ ವಿವೇಚಿಸಲು ಬೇಕಾದ ಸಿದ್ಧತೆಯನ್ನು ನಾವು ಒದಗಿಸಿ ಕೊಡುತ್ತಿಲ್ಲ. 'ಕೀನ್'ನಂಥ ಸಮರ್ಥ ಭಾಷಾಂತರವೂ ಸೀಮಿತ ಓದುಗವಲಯಕ್ಕೆ ಮಾತ್ರ ಲಭ್ಯವಾಗುವ ಅಪಾಯ.

ದುರಂತ ಎರಡೂ ಇದೆ. ಇದನ್ನು ಪರಿಹರಿಸಲು ಸ್ವಲ್ಪ ಸಹಾಯವಾಗುವುದಕ್ಕೆ ಶ್ರೀನಿವಾಸರೇ ೩೬ಪುಟಗಳಷ್ಟು ದೀರ್ಘ ವಾದ ಪರಿಚಯಾತ್ಮಕ ಪ್ರಸ್ತಾವನೆ ಬರೆದಿದ್ದಾರೆ. ಇದರಿಂದ ಕೇವಲ ಕನ್ನಡ ಬಲ್ಲಓದುಗರಿಗೂ ತುಂಬ ಲಾಭವಾಗುತ್ತದೆ. ''ಆದರೆ ನನಗೆ ನಿಮ್ಮನ್ನ ಚೆನ್ನಾಗಿ ಗೊತ್ತು"(ಪುಟ ೭೮) "ಅದನ್ನು ಪ್ಯಾನಿಗೆ ಕೊಡೋದಿಕ್ಕೆ ಮಾಡ್ತಾನೆ"(ಪುಟ ೮೨) "ಸಂಜೆ ದಯಮಾಡಿಸಲಿರುವ ಒಬ್ಬ ಶ್ರೀಮತಿಯವರಿಗಾಗಿ ನನ್ನ ಹತ್ತಿರ ಇರೋ ಒಂದು ಒಳ್ಳೆ ರೂಂ ಸಿದ್ಧವಾಗಿಟ್ಟಿರಬೇಕೂಂತ ಹೇಳಿದರು"(ಪುಟ ೮೩)ಇಂಥ ಕನ್ನಡಕ್ಕೆ ಹೊಂದದ ಕೆಲವು ವಾಕ್ಯರಚನೆಗಳು ಅಲ್ಲಲ್ಲಿ ಕಾಣುತ್ತವೆ. ಇಂಥ ವಾಕ್ಯಗಳು ತೀರ ಅಪರೂಪಕ್ಕೆ ಆಗಾಗ ಬಂದು ಇದು ಭಾಷಾಂತರ ಎಂಬುದನ್ನು ಜ್ಞಾಪಿಸುತ್ತವೆ. "ಭಾಷಾಂತರ -ಭಾಷಾಂತರವಾಗಿರಬೇಕು, ಆದರೆ ಭಾಷಾಂತರವೆನಿಸಬಾರದು"ಎಂದು ಶ್ರೀನಿವಾಸ್ ಮುನ್ನುಡಿಯಲ್ಲಿ ಹೇಳುತ್ತಾರೆ. ಅವರ ಗುರಿ ಬಹಳ ಮಟ್ಟಿಗೆ ಈಡೇರಿದೆ. ರಂಗದ ಮೇಲೆ ಈ ನಾಟಕ ಪ್ರದರ್ಶನಗೊಂಡರೆ ಆಗ ಅದು ಮತ್ತಷ್ಟು ಅರ್ಥವಂತಿಕೆ ಪಡೆದೀತು. ಇಂಗ್ಲಿಷಿನಲ್ಲಿ ತಾವು ಓದಿ ಮೆಚ್ಚಿದ ಕೃತಿಯನ್ನು ಕನ್ನಡಕ್ಕೆ ಪರಿಚಯಿಸಬೇಕು ಎಂಬುದು ಶ್ರೀನಿವಾಸರ ಅಪೇಕ್ಷೆ. ಈ ಕೆಲಸವನ್ನು ಅವರು ಪ್ರೀತಿ, ಮುತುವರ್ಜಿಗಳಿಂದ ಮಾಡಿದ್ದಾರೆ.

ಕೆ.ವಿ. ಸುಬ್ಬಣ್ಣ ಅವರು ಜಾರ್ಜ್ ಬುಶ್ನರನ 'ವೊಯ್‌ಜೆಕ್' ಅನ್ನು ಅನುವಾದಿಸಿದ್ದಾರೆ. ಸುಬ್ಬಣ್ಣನವರ ಕಾಳಿದಾಸನಾಗಲೀ ಬ್ರೆಕ್ಟ್‌ನಾಗಲೀ ಅಥವ ಸಂಸ್ಕೃತ ಪ್ರಹಸನಗಳ ಅನುವಾದ - ರೂಪಾಂತರಗಳೇ ಆಗಲಿ ಕೇವಲ ರಸಿಕ ಅನುವಾದಗಳೋ ನಿರುದ್ದಿಶ್ಯ ಅನುವಾದಗಳೋ ಅಲ್ಲ. ನಾಟಕ ಮತ್ತು ರಂಗಭೂಮಿಗೆ ಇರುವ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಸುಬ್ಬಣ್ಣನವರಿಗೆ ಖಚಿತ ಕಲ್ಪನೆಗಳಿವೆ. ಅವರು ಮತ್ತು ನೀನಾಸಂನ ತಂಡ ಖಚಿತವಾದ ಒಂದು ಸಾಮಾಜಿಕ ಧೋರಣೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ರೂಪಿಸುವ ಸಲುವಾಗಿ ದುಡಿಯುತ್ತ ಪ್ರಯೋಗ ಮಗ್ನವಾಗಿವೆ. ಹಾಗಾಗಿ ಸುಬ್ಬಣ್ಣನವರ ಎಲ್ಲ ನಾಟಕಾನುವಾದಗಳೂ ರಂಗ ಪ್ರಯೋಗದ ನಿಕಷಕ್ಕೆ ಒಡ್ಡಿಕೊಂಡಿವೆ ಮತ್ತು ನಿರ್ದಿಷ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳಿಂದ ಮೂಡಿದವಾಗಿವೆ. ಇಲ್ಲಿಯೇ ಒಂದು ಪ್ರಶ್ನೆಯೂ ಮೂಡುತ್ತದೆ. ಸುಬ್ಬಣ್ಣನವರ 'ಸೂಳೆ ಸನ್ಯಾಸಿ''ಲೋಕ ಶಾಕುಂತಲ' ಇತ್ಯಾದಿ ಭಾರತೀಯ ಹಿನ್ನೆಲೆಯುಳ್ಳ ನಮಗೆ ಸಾಂಸ್ಕೃತಿಕವಾಗಿ ಪರಿಚಿತವಾದ ಕೃತಿಗಳ ಭಾಷಾಂತರದ ಹಾಗೆ ಪಾಶ್ಚಾತ್ಯ ಕೃತಿಯ ಭಾಷಾಂತರಗಳು ಆತ್ಮೀಯವೆನಿಸುವುದಿಲ್ಲ. ನಾಟಕಕ್ಕೆ ಪಠ್ಯ ಕೇವಲ ಒಂದು ನೆಪ, ರಂಗ ಕೃತಿಯ ಅರ್ಥ ಕೇವಲ ಭಾಷಿಕವಾದ್ದಲ್ಲ ಎಂಬುದು ನಿಜ. ಆದರೂ ಪಾಶ್ಚಾತ್ಯ ನಾಟಕಗಳ ಭಾಷಾಂತರದ ಭಾಷೆ ಇಂಗ್ಲಿಷ್ ಬಲ್ಲ ಕೆಲವರ ಭಾಷೆಯಂತೆಯೇ ಕೇಳುತ್ತದೆ. ಇತರ ಎಲ್ಲ ಪ್ರಕಾರಗಳಿಗಿಂತ ನಾಟಕದ ಪ್ರಕಾರ ಮತ್ತು ರಂಗಭೂಮಿಯ ಮಾಧ್ಯಮ ಸಂಸ್ಕೃತಿ ವಿಶಿಷ್ಟವಾದದ್ದು. ಆದ್ದರಿಂದಲೇ ನಾಟಕಗಳ ಭಾಷಾಂತರಕ್ಕೆ ಪ್ರತಿರೋಧವೂ ಹೆಚ್ಚೆಂದು ತೋರುತ್ತದೆ. ಅಳವಡಿಕೆಗಳು ರೂಪಾಂತರಗಳು ಪ್ರೇಕ್ಷಕರಿಗೆ ಹೆಚ್ಚು ಪ್ರಿಯವಾಗುತ್ತದೆ. ಆದರೆ ಎಷ್ಟೆಂದರೂ ಅಳವಡಿಕೆ ಭಾಷಾಂತರದ

ಮೊದಲ ಘಟ್ಟದ ಕೆಲಸ. ನಮ್ಮ ಸಮಾಜ ಸಂಸ್ಕೃತಿ ಬೆಳೆದಂತೆ ನೇರ ಭಾಷಾಂತರಗಳು ಅಪೇಕ್ಷಣೀಯವಾಗುತ್ತವೆ. ಆದರೆ ಅವು ಯಶಸ್ವಿಯಾಗುವುದು ಕೇವಲ ಭಾಷಾಂತರಕಾರನ ಸಾಮರ್ಥ್ಯವನ್ನು ಅವಲಂಬಿಸಿದ ಸಂಗತಿಯಲ್ಲ. ಮತ್ತೊಂದು ಸಂಸ್ಕೃತಿಯ ಬಗ್ಗೆ ಜನರಲ್ಲಿ ಸಾಮಾನ್ಯ ಜ್ಞಾನ ವ್ಯಾಪಕವಾಗಿಲ್ಲದ ಹೊರತು ನಾಟಕಗಳ ನೇರ ಭಾಷಾಂತರ ಯಶಸ್ವಿಯಾಗಲಾರದೆಂದು ತೋರುತ್ತದೆ. ಸುಬ್ಬಣ್ಣನವರು ಈ ಅನುವಾದದಲ್ಲಿ ಮತ್ತು ಇತರ ಪಾಶ್ಚಾತ್ಯ ನಾಟಕಗಳ ಅನುವಾದದಲ್ಲಿ ಈ ಪ್ರಶ್ನೆಯನ್ನು ಬಗೆಹರಿಸಲು ತಮ್ಮದೇ ದಾರಿಯನ್ನು ಕಂಡುಕೊಂಡಿದ್ದಾರೆ. ಅದು ನಮಗೆ ದೂರದ ಭಾಷೆಯ ನಾಟಕ ನಮ್ಮ ಸುತ್ತಲೇ ಇರುವ ವಾಸ್ತವದ ತುಣುಕು ಎಂಬುದನ್ನು ಮನಗಾಣಿಸುವ ವ್ಯಾಖ್ಯಾನದ ದಾರಿ. ಈ ಅನುವಾದದ ಪೀಠಿಕೆಯ ಹಾಡನ್ನು ಇದಕ್ಕೆ ಉದಾಹರಣೆ ಎಂದು ನೋಡಬಹುದು. ನಾಟಕಗಳ ಪ್ರಯೋಗವಾದರೂ, ರಂಗಭಾಷೆಯೊಂದರ ನಿರ್ಮಾಣದ ಉದ್ದೇಶದಿಂದ ಹೆಚ್ಚು ಪಾಶ್ಚಾತ್ಯವೆಂಬಂತೆಯೇ ಕಾಣುತ್ತದೆ. ನಾಟಕ ಮತ್ತು ರಂಗ ಪ್ರಯೋಗಗಳಲ್ಲಿ 'ನಮ್ಮ ತನ' ಹುಡುಕಾಟದ ಪ್ರಶ್ನೆ ಎಷ್ಟು ಜಟಿಲವಾದದ್ದು ಎಂಬುದನ್ನು ಇಂಥ ಭಾಷಾಂತರಗಳು ನಮ್ಮ ಮನಸ್ಸಿಗೆ ತರುತ್ತವೆ.

ಕಥೆ : ೧೯೭೯ರಿಂದ ಮರಾಠೀ ಸಾಹಿತ್ಯ ಕೃತಿಗಳನ್ನು ಭಾಷಾಂತರಿಸುತ್ತಿರುವ ರತ್ನಾಕರ ಶೆಟ್ಟಿಯವರು 'ಜಯಂತ ದಳವಿಯವರ ಕಥೆಗಳು' ಹೊರತಂದಿದ್ದಾರೆ. ದಳವಿಯವರ ಎರಡು ಕಾದಂಬರಿಗಳು ಮತ್ತು ಒಂದು ನಾಟಕ ಈಗಾಗಲೇ ಕನ್ನಡಕ್ಕೆ ಬಂದಿವೆ. ಈ ಸಂಕಲನದಲ್ಲಿ ಅವರ ಹನ್ನೊಂದು ಕಥೆಗಳನ್ನು ಭಾಷಾಂತರಿಸಲಾಗಿದೆ. ನೇರವಾಗಿ ಮರಾಠಿಯಿಂದ ಈ ಕಥೆಗಳು ಕನ್ನಡಕ್ಕೆ ಯಶಸ್ವಿಯಾಗಿ ಬಂದಿವೆ. 'ಮನೆಗೆಯೇ ಹೋಗಬಹುದಾಗಿತ್ತು'(ಪು. ೨೮) 'ಫೋನ್‌ನಲ್ಲಿ ಅವನ ಹೆಂಡತಿ ಇದ್ದಳು '(ಪು. ೩೮) 'ರಮಾತ್ತೆಯಿಂದ ಕಲಿಸಲ್ಪಟ್ಟ ಲತಾ ಕೇಳುವಳು' (ಪು. ೧೧೭)ಇಂಥ ಕೆಲವು ಕನ್ನಡಕ್ಕೆ ಹೊಂದದ ಪ್ರಯೋಗಗಳು ಅಲ್ಲಲ್ಲಿ ಕಾಣುತ್ತವೆಂಬುದನ್ನು ಬಿಟ್ಟರೆ ಭಾಷಾಂತರ ದಳವಿಯವರ ಆಶಯಗಳನ್ನು ಕನ್ನಡ ಓದುಗರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿವೆ. ಮನೆ, ಕುಟುಂಬ ಈ ಆವರಣದೊಳಗೇ ಇಲ್ಲಿನ ಹೆಚ್ಚಿನ ಕಥೆಗಳು ನಡೆಯುತ್ತವೆ. ಹಾಗೆ ಪರಿಮಿತ ಸ್ಥಳದಲ್ಲಿ ನಡೆಯುವವನೋ ವ್ಯಾಪಾರದ ಜಟಿಲತೆಯನ್ನು ಹಿಡಿದಿಡಲು ಯತ್ನಿಸುವ ಕಥೆಗಳು ಇವು. ಮನುಷ್ಯ ಸಂಬಂಧಗಳ ಗ್ರಹಿಕೆಗಳಲ್ಲಿ, ಕುಟುಂಬ ವ್ಯವಸ್ಥೆಯ ಕೆಲ ವಿವರಗಳಲ್ಲಿ ಮಹಾರಾಷ್ಟ್ರೀಯತೆ ಕಾಣುತ್ತದೆಯೆ ಹೊರತು ತೀರ ನಿಷ್ಠುರವಾಗಿ ಸಂಸ್ಕೃತಿ ವಿಶಿಷ್ಟ ವಿವರಗಳನ್ನೆ ಆಧರಿಸಿದ ಕಥೆಗಳಲ್ಲ ಇವು. ಹಾಗಾಗಿ ಭಾಷಾಂತರಕ್ಕೆ ಸ್ವಲ್ಪ ಸುಲಭವಾಗಿ ಒಗ್ಗುತ್ತವೆನಿಸುತ್ತದೆ. ಮರಾಠಿಯ ಜನಪ್ರಿಯ ಆದರೂ ಸಮರ್ಥ ಕಥೆಗಾರನನ್ನು ಕನ್ನಡಕ್ಕೆ ಪರಿಚಯಿಸುವ ಈ ಕೃತಿ ಸ್ವಾಗತಾರ್ಹ.

ಕಾದಂಬರಿ: 'ಮುರಿದ ರೆಕ್ಕೆಗಳು' ಮೊಳಕಾಲ್ಮೂರು ಶ್ರೀನಿವಾಸ ಮೂರ್ತಿಯವರು ಮಾಡಿರುವ ಖಲೀಲ್ ಗಿಬ್ರಾನ್‌ನ ಕೃತಿಯ ಅನುವಾದ. ಗಿಬ್ರಾನ್ ಕನ್ನಡಕ್ಕೆ ಅಪರಿಚಿತನಲ್ಲ. ಅವನ ಜೀವನ ಚರಿತ್ರೆ ಮತ್ತು ಎರಡು ಇಡೀ ಕೃತಿಗಳು

ಹಾಗೂ ಅನೇಕ ಬಿಡಿಬರಹಗಳು ಕನ್ನಡಕ್ಕೆ ಬಂದಿವೆ. ಲೆಬನಾನಿನ ಈ ಪ್ರವಾದಿಯ ಇಂಗ್ಲಿಷ್ ಅನುವಾದಗಳು ನೇರ, ಸರಳ, ಸ್ಪಷ್ಟ ಮೊನಚಾದ ಭಾಷೆಯಿಂದ ಗಮನಸಳೆಯುತ್ತವೆ. ಅಲ್ಲಲ್ಲಿ ಹೊಳೆವ ಅರ್ಥದ ಮಿಂಚುಗಳು ವಿಚಿತ್ರ ಸಂತೋಷವನ್ನೂ ನೆಮ್ಮದಿಯನ್ನೂ ತರಬಲ್ಲವು. ಅವನ ಬರವಣಿಗೆಯೇ ವಿಲಕ್ಷಣ. ಮುರಿದ ರೆಕ್ಕೆಗಳು ಗಿಬ್ರಾನನ ಕಾದಂಬರಿ. ಆದರೆ ನಾವು ಈಗ ಕಾದಂಬರಿ ಪ್ರಕಾರದ ಬಗ್ಗೆ ಯಾವ ಅಪೇಕ್ಷೆ ನಿರೀಕ್ಷೆಗಳನ್ನು ಬೆಳೆಸಿಕೊಂಡಿದ್ದೇವೋ ಅದಕ್ಕೆ ಅನುಗುಣವಾದದ್ದಲ್ಲ.

ಆಧುನಿಕರು ಯಾವುದನ್ನು ಕಾದಂಬರಿಯ ದೋಷಗಳೆನ್ನುತ್ತಾರೋ ಅವೆಲ್ಲ ಗಿಬ್ರಾನನಲ್ಲಿ ಹೆಚ್ಚಾಗಿಯೇ ಇವೆ. ಆದರೆ ನಮ್ಮ ಅರಿವನ್ನು ಕೆಣಕದೆ ಸತ್ಯದ ಇನ್ನೊಂದು ನೋಟವನ್ನು ಕಾಣಿಸುವ ಹೌದೆಂದು ಒಪ್ಪಿಕೊಳ್ಳುವಂತೆ ಮಾಡುವ ಅವನ ಕಾವ್ಯಗುಣ ಅವನ ಕಾದಂಬರಿಯಲ್ಲೂ ಇದೆ. ಸರಳವಾಗಿ ಓದಿಸಿಕೊಳ್ಳುವ ಕನ್ನಡದಲ್ಲಿ ಮೂರ್ತಿಯವರು ಗಿಬ್ರಾನನ ಕಥೆಯನ್ನು ನಮ್ಮೆದುರು ಇಡುತ್ತಾರೆ. ಹಾಗೆ ಗಿಬ್ರಾನ್ ಅನುವಾದಕ್ಕೆ ಸುಲಭವಾಗಿ ಸಿಗುವಂಥವನು. ಯಾಕೆಂದರೆ ಸೂಕ್ಷ್ಮ ಸಾಂಸ್ಕೃತಿಕ ವಿವರಗಳಿಗಿಂತ ಅವನ ಶಕ್ತಿ ಇರುವುದು ಸಾರ್ವಕಾಲಿಕವಾದದ್ದನ್ನು ಮತ್ತೊಂದು-ಕೋನದಿಂದ ಮಂಡಿಸುವುದರಲ್ಲಿ;ಸರಳವಾದ ಅನ್ಯೋಕ್ತಿಯಲ್ಲಿ. ಶ್ರೀನಿವಾಸಮೂರ್ತಿಯವರು ಈ ಅಂಶಗಳನ್ನು ಕನ್ನಡಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಶರಣ ಕುಮಾರ ಲಿಂಬಾಲೆಯವರ ಮರಾಠೀ ಕೃತಿಯನ್ನು ದು.ನಿಂ. ಬೆಳಗಲಿ ಯವರು 'ಅಕ್ರಮ ಸಂತಾನ 'ವೆಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಮರಾಠಿಯ ಆತ್ಮಕಥಾತ್ಮಕ ಸಾಹಿತ್ಯದ ಉತ್ತಮ ಉದಾಹರಣೆಯಾಗಿರುವ 'ಅಕ್ರಮ ಸಂತಾನ'ಎರಡು ಕಾರಣಗಳಿಗಾಗಿ ಸ್ವಾಗತಾರ್ಹವಾಗಿದೆ. ಮೊದಲನೆಯದು ಈ ಕೃತಿಯ ವಸ್ತು ಮತ್ತು ನಿರ್ವಹಣೆ ತನ್ನಷ್ಟಕ್ಕೇ ಮಹತ್ವವನ್ನು ಪಡೆದು ಕನ್ನಡದ ದಲಿತ - ಬಂಡಾಯ ಪಂಥದ ಹೊಸ ಬರಹಗಾರರಿಗೆ ಸ್ಫೂರ್ತಿ ಮತ್ತು ಧೈರ್ಯವನ್ನು ತುಂಬುವಂತಿದೆ. ಎರಡನೆಯದಾಗಿ ಮೂಲತಃ ಬಹುಭಾಷಿಕ ಪ್ರದೇಶದ ಮರಾಠಿ ಬರಹಗಾರನನ್ನು ಭಾಷಾಂತರಿಸಲು ಬೆಳಗಲಿಯವರು ಆಯ್ಕೆಮಾಡಿಕೊಂಡಿರುವ ಭಾಷಾರೂಪ. ಭಾರತೀಯ ಭಾಷೆಗಳ ಪರಸ್ಪರ ಭಾಷಾಂತರದ ಸಾಂಸ್ಕೃತಿಕ ಮುಖಗಳನ್ನು ಕುರಿತ ಚರ್ಚೆಯಲ್ಲಿ ಬೆಳಗಲಿಯವರ ಈ ಯತ್ನ ಗಮನಸೆಳೆಯುತ್ತದೆ.

ಹಿಂದಿಯ ವೃಂದಾವನಲಾಲ್‌ವರ್ಮರ 'ಝಾನ್ಸಿರಾಣಿ ಲಕ್ಷ್ಮೀಬಾಯಿ' ಕಾದಂಬರಿಯನ್ನು ಲಕ್ಷ್ಮಣಯ್ಯನವರು ಕನ್ನಡಕ್ಕೆ ತಂದಿದ್ದಾರೆ. ಭಾಷಾಂತರವನ್ನು ಇನ್ನಷ್ಟು ಪರಿಷ್ಕರಿಸಬೇಕಿತ್ತೆಂದು ತೋರುತ್ತದೆ. ಅದರಲ್ಲೂ ವಿಶೇಷವಾಗಿ 'ಮತ್ತು'ಗಳ ಸರ್ವನಾಮಗಳ ಬಳಕೆ, ಹಿಂದಿಗೆ ಯಾವುದು ಸಹಜವೋ ಅದು, ಕನ್ನಡದ ಸುಲಲಿತ ಓದಿಗೆ ಅಡ್ಡಿಯಾಗುತ್ತವೆ. ಜೊತೆಗೆ ಹಿಂದಿಯ ವಾಕ್ಯ ಜೋಡಣೆಯ ತರ್ಕ ಕನ್ನಡ ವಾಕ್ಯಗಳ ಜೋಡಣೆಯ ಹಿಂದಿರುವ ತರ್ಕಕ್ಕಿಂತ ಭಿನ್ನವಾದದ್ದು. ಉದಾ.ಗೆ ೨೮೦ಮತ್ತು

೨೮೮ನೆಯ ಪುಟಗಳಲ್ಲಿ ಬರುವ ೪೭೭ನೆ ಅಧ್ಯಾಯದ ಭಾಗಗಳನ್ನು ನೋಡಬಹುದು. ಇಲ್ಲಿ ಪ್ರತಿವಾಕ್ಯವೂ ತನ್ನಷ್ಟಕ್ಕೆ ಸಂಪೂರ್ಣ ಅರ್ಥ ಕೊಡುವಂತಿದ್ದರೂ ಅವುಗಳನ್ನೆಲ್ಲ ಒಟ್ಟಾಗಿ, ಒಂದೊಂದು ವಾಕ್ಯವೃಂದವಾಗಿ ಓದುವಾಗ ಎಲ್ಲೋ ನಡಿಗೆ ಕುಂಟುವಂತೆ ತೋರುತ್ತದೆ.

ಯಶಪಾಲ ಕಪೂರರ ಹಿಂದಿ ಕಾದಂಬರಿ 'ದೇಶದ್ರೋಹಿ'ಯನ್ನು ನುರಿತ ಭಾಷಾಂತರಕಾರರಾದ ಪ್ರಧಾನ ಗುರುದತ್ತರು ಕನ್ನಡಕ್ಕೆ ತಂದಿದ್ದಾರೆ. ಗುರುದತ್ತರು ತಮ್ಮ ಭಾಷಾಂತರದಲ್ಲಿ ಅವರು ಎಷ್ಟು ಶ್ರಮವಹಿಸುತ್ತಾರೆಂದು ಓದುಗನಿಗೆ ಪ್ರತಿ ಪುಟದಲ್ಲೂ ತಿಳಿಯುತ್ತದೆ. ಭಾಷಾಂತರ ಇನ್ನು ಸ್ವಲ್ಪ ಆರಾಮಾವಾಗಿರಬಹುದಿತ್ತೆನಿಸಿದರೂ ಗುರುದತ್ತರು ಎಲ್ಲೂ 'ಮೂಲ'ಕ್ಕೆ ಅಪಚಾರ ಮಾಡುವುದಿಲ್ಲ. ಸ್ವಾತಂತ್ರ್ಯ ಪೂರ್ವ ಯುಗದ ರಾಜಕೀಯ ಒಳಸುಳಿಗಳನ್ನು ಸಮರ್ಥವಾಗಿ ಚಿತ್ರಿಸುವ ಯಶಪಾಲ ಕಪೂರ ಕೃತಿ ಕನ್ನಡದ ಪ್ರಗತಿಶೀಲ ಕಾದಂಬರಿಗಳನ್ನು ಚರ್ಚಿಸಲು ಹೊಸ ನೋಟಗಳನ್ನು ಒದಗಿಸುತ್ತದೆ.

ಪ್ರೇಮಚಂದರ ನಿರ್ಮಲಾ ಕಾದಂಬರಿಯನ್ನು ತಿಪ್ಪೇಸ್ವಾಮಿಯವರು ಕನ್ನಡಕ್ಕೆ ತಂದಿದ್ದಾರೆ. ಪ್ರೇಮಚಂದರು ತಮ್ಮ ಕತೆಗಾರಿಕೆಯಿಂದ ಮತ್ತು ಧೋರಣೆಯಿಂದ ಕನ್ನಡ ಬರಹಗಾರರಿಗೆ ಮತ್ತು ಲೇಖಕರಿಗೆ ಪ್ರಿಯರಾದರು. ಆಧುನಿಕ ಭಾರತೀಯ ಭಾಷೆಗಳೆಲ್ಲದರ ಮೇಲೂ ಅವರ ಪ್ರಭಾವ ಇದ್ದೇ ಇದೆ. ಸದ್ಯದ ಕನ್ನಡ ಕಥೆಗಾರಿಕೆ ಪ್ರೇಮಚಂದರಂಥವರ ಮಾದರಿಯನ್ನು ದಾಟಿ ಬಹಳದೂರ ಕ್ರಮಿಸಿಬಿಟ್ಟಿದೆ. ಆದರೂ ಸರಳವಾಗಿ ನೇರವಾಗಿ ಕಥೆ ಹೇಳುವ ಅವರ ರೀತಿಯನ್ನು ಇಂದೂ ಮೆಚ್ಚಿ ಓದುವುದು ಸಾಧ್ಯ. ಹಿಂದಿ ಮತ್ತು ಕನ್ನಡ ಎರಡರಲ್ಲೂ ಬರೆಯುತ್ತಿರುವ ತಿಪ್ಪೇಸ್ವಾಮಿಯವರು ಪ್ರೇಮಚಂದರ ಎಲ್ಲ ಕೃತಿಗಳನ್ನೂ ಕನ್ನಡಿಸುವ ಆಕಾಂಕ್ಷೆ ಹೊತ್ತಿದ್ದಾರೆ. ಹೀಗೆ ಒಬ್ಬ ಲೇಖಕನ ಭಾಷಾಂತರಕ್ಕೇ ತಮ್ಮನ್ನು ತಾವು ತೆತ್ತುಕೊಳ್ಳುವ ಭಾಷಾಂತರಕಾರರು ಕನ್ನಡಕ್ಕೆ ಇಂದು ಅಗತ್ಯವಾಗಿದ್ದಾರೆ.

ಪ್ರಾಚೀನ ಸಾಹಿತ್ಯ ವಿಮರ್ಶೆ: ಮಹಾಭಾರತವನ್ನು ಕುರಿತ ಮತ್ತೊಂದು ವಿವೇಚನೆ ೧೯೯೨ರಲ್ಲಿ ಮತ್ತೊಮ್ಮೆ ಮರಾಠಿಯಿಂದಲೇ ಕನ್ನಡಕ್ಕೆ ಬಂದಿದೆ. ಇರಾವತಿ ಕರ್ವೆಯವರ 'ಯುಗಾಂತದ 'ಕನ್ನಡ ಅನುವಾದ ಈಗಾಗಲೇ ಪ್ರಸಿದ್ಧಿ ಪಡೆದಿದೆಯಷ್ಟೆ. ದುರ್ಗಾಭಾಗವತ ಅವರ 'ವ್ಯಾಸಪರ್ವ' ಕೂಡ ಅದೇ ವರ್ಗಕ್ಕೆ ಸೇರಿದ್ದು. ಆದರೆ 'ಯುಗಾಂತ'ಸ್ಪಷ್ಟವಾಗಿ ಸಮಾಜಶಾಸ್ತ್ರೀಯ ದೃಷ್ಟಿ ಹೊಂದಿದ್ದರೂ ಈ ಕೃತಿಯು ಅವರ ವ್ಯಾಸ ಭಾರತದೊಂದಿಗಿನ ಆತ್ಮೀಯ ಒಡನಾಟದಿಂದ ಮೂಡಿದ್ದಾಗಿದೆ. ಸ್ತ್ರೀ ಸಹಜ ಅಂತಃಕರಣದೊಂದಿಗೆ ವ್ಯಾಸ ಭಾರತದ ತಮ್ಮದೇ ಪಠ್ಯವನ್ನು ದುರ್ಗಾಭಾಗವತ ಅವರು ನಿರ್ಮಿಸಿಕೊಳ್ಳುತ್ತಾರೆ. ವ್ಯಾಸನ ಭಾರತದ ಮುಖ್ಯ ಪಾತ್ರಗಳನ್ನು ಅವು ತಮ್ಮ ಪ್ರಜೆಯಲ್ಲಿ ರೂಪುಗೊಂಡ ರೀತಿಯನ್ನು ವಿವರಿಸುತ್ತಲೇ ವ್ಯಾಖ್ಯಾನಿಸುತ್ತಲೂ ಹೋಗುತ್ತಾರೆ. ಇದರಿಂದ ಕೃತಿಗೆ ಒಂದು ವಿಶೇಷ ರೂಪ

ಪ್ರಾಪ್ತವಾಗುತ್ತದೆ. ಇಲ್ಲಿನ ವಿಮರ್ಶೆ ಕಾದಂಬರಿಯ ಕಲ್ಪಕತೆಯನ್ನು, ಕಾದಂಬರಿಯ ಕಲ್ಪಕತೆ ಸಮಾಜ ಶಾಸ್ತ್ರೀಯ ರುಚಿಯನ್ನೂ ಪಡೆದುಬಿಡುತ್ತದೆ. ಇಂಥ ಕೃತಿಗಳನ್ನು ಕಾದಂಬರಿಯಿಂದಾಗಲೀ ವಿಮರ್ಶೆ ಎಂದಾಗಲೀ ವರ್ಣಿಸುವುದು ತಪ್ಪಾಗುತ್ತದೆ. ಇಲ್ಲಿನ ಒಳನೋಟಗಳಿಂದಾಗಿ 'ವ್ಯಾಸಪರ್ವ' ಮುಖ್ಯವಾಗುತ್ತದೆ. ವ್ಯಾಸ ಭಾರತವು ಸೃಜನಶೀಲ ಮನಸ್ಸೊಂದರಲ್ಲಿ ಹೇಗೆ ಪಠ್ಯವಾಗಿ ಕೃತಿಯಾಗಿ ಮೂಡಿತೆಂಬುದು ಮುಖ್ಯವಾಗುತ್ತದೆ. ಇದರಿಂದಾಗಿ ಕನ್ನಡದ ಓದುಗ ಮಹಾಭಾರತವನ್ನು ಕುರಿತ ತನ್ನದೇ ಒಳನೋಟಗಳನ್ನು ಉಜ್ಜಿ ಪರೀಕ್ಷಿಸಿಕೊಳ್ಳಲು ಸಹಾಯವಾಗುತ್ತದೆ. ಕನ್ನಡದಲ್ಲೇ ಮಹಾಭಾರತಗಳ ಒಂದು ಪರಂಪರೆ ೧೧ನೆ ಶತಮಾನದಿಂದ ಇಲ್ಲಿಯವರೆಗೂ ಬೆಳೆದದ್ದುದ್ದು ಇದೆ. ಜೊತೆಗೇ ಮಾಸ್ತಿ, ಶ್ರೀರಂಗ ಇಂಥ ಲೇಖಕರ ಚಿಂತನಶೀಲ ಬರವಣಿಗೆಗಳೂ ಇವೆ. ಇವುಗಳೊಟ್ಟಿಗೇ ನೆರೆಯ ಮಹಾರಾಷ್ಟ್ರದಲ್ಲಿ ಮಹಾಭಾರತ ಕುರಿತು ನಡೆದ ಚಿಂತನೆಗಳೂ ಈಗ ಲಭ್ಯವಿವೆ. ಇವುಗಳಿಂದ ಮಹಾಭಾರತದ ಪಠ್ಯ ಹೆಚ್ಚು ಸಂಕೀರ್ಣವಾಗುತ್ತ ನಡೆದಿದೆ. ಮಹಾಭಾರತಕ್ಕೆ ನಮ್ಮ ದೇಶದ ಬೇರೆ ಬೇರೆ ಭಾಷೆಗಳು ಪ್ರತಿಕ್ರಿಯ ತೋರಿದ ರೀತಿಯನ್ನು ತಿಳಿಯಬಯಸುವ ಕನ್ನಡ ಓದುಗನಿಗೆ ಗೌರೀಶ ಕಾಯ್ಕಿಣಿಯವರ ಭಾಷಾಂತರದಿಂದ ತುಂಬ ಲಾಭವಾಗುತ್ತದೆ. ನೇರವಾಗಿ ಮರಾಠಿಯಿಂದಲೇ ಅನುವಾದಗೊಂಡಿರುವ ಈ ಕೃತಿ ಆ ಕಾರಣದಿಂದಲೂ ಸ್ವಾಗತಾರ್ಹ. ಬೇರೊಂದು ಭಾಷಾ ಮಾಧ್ಯಮದ ನೆರವಿಲ್ಲದೆ ಭಾರತೀಯ ಭಾಷೆಗಳಲ್ಲಿ ಪರಸ್ಪರ ಭಾಷಾಂತರ ನಡೆವ ಅಗತ್ಯ ಇಂದು ತುಂಬ ಹೆಚ್ಚಾಗಿದೆ. ಇಂಥ ಕೆಲಸದಲ್ಲಿ ತೊಡಗಿರುವ ಪುಣೆಯ ಮರಾಠೀ -ಕನ್ನಡ ಸ್ನೇಹವರ್ಧನಕೇಂದ್ರದವರಿಗೂ ಹಿರಿಯರಾದ ಕಾಯ್ಕಿಣಿಯವರಿಗೂ ಅಭಿನಂದನೆಗಳು. ಕಾಯ್ಕಿಣಿಯವರ ಭಾಷಾಂತರ ಕನ್ನಡದ ಸೊಗಸನ್ನು ಬಿಡದೆ ಆದರೆ ಮರಾಠೀ ಭಾಷೆಯ ಗಂಧವನ್ನೂ ಉಳಿಸಿಕೊಂಡದ್ದಾಗಿದೆ. ವಿಶೇಷವಾಗಿ ಸಂಸ್ಕೃತ ಪದಗಳನ್ನು ಮರಾಠಿ ಮತ್ತು ಕನ್ನಡ ಸ್ವೀಕರಿಸುವ ರೀತಿಯ ಬಗ್ಗೆ ಇಂಥ ಭಾಷಾಂತರಗಳು ನಮ್ಮ ಗಮನ ಸೆಳೆಯುತ್ತವೆ.

ಇತಿಹಾಸ: ಸದಾನಂದ ಕನವಳ್ಳಿಯವರ ರಾಬರ್ಟ್ ಸಿವೆಲ್‌ನ ಕೃತಿ 'ಫರ್‌ಗಾಟನ್ ಎಂಪೈರ್'ಅನ್ನು ಮರೆತುಹೋಗಿರುವ ಸಾಮ್ರಾಜ್ಯ ಎಂದೂ ಸುಂದರನಾಡಕರ್ಣಿಯವರ ಕೃತಿಯನ್ನು 'ಭೀಮಸೇನ ಜೋಷಿ ವ್ಯಕ್ತಿ ಮತ್ತು ಅವರ ಸಂಗೀತ' ಎಂದೂ ಇಂಗ್ಲಿಷಿನಿಂದ ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಸಿವೆಲ್‌ನ ಪುಸ್ತಕ ವಿಜಯನಗರದ ಇತಿಹಾಸದಲ್ಲಿ ಆಸಕ್ತರಾದವರಿಗೆಲ್ಲ ಪರಿಚಿತವಾದದ್ದು. ೧೭ಅಧ್ಯಾಯಗಳಲ್ಲಿ ೧೩೩೬ರಿಂದ ೧೬೧೬ ವರೆಗಿನ ವಿಜಯನಗರ ಇತಿಹಾಸವನ್ನು ಡೊಮಿಂಗೊ ಪಾಯಸ್‌ನ ದಾಖಲೆಗಳ ಇಂಗ್ಲಿಷ್ ಅನುವಾದದ ಮುಖಾಂತರ ಮತ್ತು ೨೦ಅಧ್ಯಾಯಗಳಲ್ಲಿ ನೂನಿಝನ ಕಡತಗಳ ಅನುವಾದದ ಮುಖಾಂತರ ಸಿವೆಲ್ ತನ್ನ ಕೃತಿಯನ್ನು ರೂಪಿಸಿದ್ದಾನೆ. ಜೊತೆಗೆ ಮೂರು ಅನುಬಂಧಗಳೂ ಇವೆ. ಪ್ರವಾಸಿಗರ ದಾಖಲೆಗಳನ್ನು ಆಧರಿಸಿದ ಸಿವೆಲ್‌ನ ಇಂಗ್ಲಿಷ್ ಬರಹ ಕಾವ್ಯಮಯವಾದ ಶೈಲಿಯಲ್ಲಿದೆ. ಸಿವೆಲ್‌ನನ್ನು ಇತಿಹಾಸಕಾರ ಅಥವಾ ಚರಿತ್ರಜ್ಞ ಎಂದಲ್ಲದಿದ್ದರೂ ಚರಿತ್ರೆಯ ರಚನೆಗೆ ಪೂರಕವಾದ ಮಾಹಿತಿಗಳನ್ನು ಒದಗಿಸುವವನೆಂದು

ಗೌರವಿಸಬಹುದು. ಕೇವಲ ಹೆಸರು ಮಾತ್ರವಾಗಿ ಕನ್ನಡ ಮಾತ್ರ ಬಲ್ಲ ಓದುಗರಿಗೆ ಗೊತ್ತಿದ್ದ ಈ ಪುಸ್ತಕವನ್ನು ಭಾಷಾಂತರಿಸಿ ಕನವಳ್ಳಿಯವರು ಉಪಕಾರ ಮಾಡಿದ್ದಾರೆ. ಆದರೆ ಕನ್ನಡವನ್ನು ಇನ್ನಷ್ಟು ಪರಿಷ್ಕರಿಸಬಹುದಾಗಿತ್ತೆಂದು ತೋರುತ್ತದೆ. ವಿಶೇಷವಾಗಿ ಇಂಗ್ಲಿಷಿನ ಪ್ಯಾರಂಥೆಟಿಕಲ್ ವಾಕ್ಯಗಳನ್ನು ಕನ್ನಡಕ್ಕೆ ತರುವಾಗ ವಾಕ್ಯ ರಚನೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅಗತ್ಯವಾಗುತ್ತದೆ. ಉದಾ. ಪು. ೫೭, ೯೩ ಮತ್ತು ೧೩೭. ಬೇರೆ ಬೇರೆ ಪ್ರವಾಸಿಗರ ಭಾಷೆ, ನಿರೂಪಣೆ ಮತ್ತು ಅವುಗಳನ್ನೆಲ್ಲ ಪೋಣಿಸುವ ಸಿವೆಲ್‌ನ ನಿರೂಪಣೆ ಇವುಗಳ ಭಿನ್ನತೆ ಭಾಷಾಂತರದಲ್ಲೂ, ಅಚ್ಚಿನ ವಿನ್ಯಾಸದಲ್ಲೂ ವ್ಯಕ್ತವಾಗುವಂತಿದ್ದರೆ ಚೆನ್ನಾಗಿರುತ್ತಿತ್ತು. ಜಟಿಲವಾದ ಕೃತಿಯನ್ನು ಅದು ಪ್ರಕಟವಾದ ಅನೇಕ ಸಾಕಷ್ಟು ವರ್ಷಗಳ ನಂತರ ಕನ್ನಡಕ್ಕೆ ತರುವ ಸಾಹಸ ಮಾಡಿದ ಕನವಳ್ಳಿ ಅಭಿನಂದನಾರ್ಹರು.

ಜೀವನಚಿತ್ರ: ಭೀಮಸೇನ ಜೋಷಿಯವರನ್ನು ಕುರಿತ ಕೃತಿಯ ಭಾಷಾಂತರದಲ್ಲಿ ಕನವಳ್ಳಿಯವರು ಹೆಚ್ಚು ಯಶಸ್ವಿಯಾಗಿದ್ದಾರೆ. ಸಂಗೀತದ ಅನುಭವವನ್ನು ಭಾಷೆಯಲ್ಲಿ ವಿವರಿಸಿ ವ್ಯಾಖ್ಯಾನಿಸುವುದು ನಿಜವಾಗಲೂ ತುಂಬ ದೊಡ್ಡ ಸವಾಲು. ಮೋಹನ ನಾಡಕರ್ಣಿಯವರು ಭೀಮಸೇನ ಜೋಷಿಯವರ ವ್ಯಕ್ತಿತ್ವ ಮತ್ತು ಬದುಕಿನ ವಿವರಗಳನ್ನು ಆತ್ಮೀಯವಾಗಿ ಸ್ನೇಹಪೂರ್ವಕವಾಗಿ ನೀಡುವುದಲ್ಲದೆ ಅವರ ಸಂಗೀತದ ವಿಶಿಷ್ಟ ಗುಣಲಕ್ಷಣಗಳನ್ನೂ ವಿವರಿಸುತ್ತಾರೆ. ಸಹೃದಯ ಸಂಗೀತಜ್ಞನ ಮೆಚ್ಚುಗೆ ಮತ್ತು ವ್ಯಾಖ್ಯಾನಗಳು ಸಂಗೀತಪ್ರಿಯರಿಗೆ ತಮ್ಮ ತಮ್ಮ ಅನುಭವಗಳನ್ನೂ ಮತ್ತೆ ಪರಿಶೀಲನೆಗೆ ಒಳಪಡಿಸಿಕೊಳ್ಳುವ ಅವಕಾಶವನ್ನು ಒದಗಿಸುತ್ತವೆ. ಕನವಳ್ಳಿಯವರ ಭಾಷಾಂತರ ಕನ್ನಡದಲ್ಲೇ ಸಂಗೀತ ಮತ್ತು ಸಂಗೀತಗಾರರನ್ನು ಕುರಿತು ಕೃತಿಗಳ ರಚನೆಗೆ ಪ್ರೇರಣೆ ಒದಗಿಸಲೆಂದು ಆಶಿಸಬಹುದು.

ಸುರೇಂದ್ರ ಚೌಧರಿಯವರ 'ಫಣೀಶ್ವರ ನಾಥ ರೇಣು' ಕೃತಿಯನ್ನು ಹಿಂದಿಯಿಂದ ಎಚ್.ಎಸ್.ಪಾರ್ವತಿಯವರು, ನಾಮದೇವನನ್ನು ಕುರಿತು ಮಾಧವ ಗೋಪಾಲ ದೇಶಮುಖ ಅವರ ಮರಾಠಿ ಕೃತಿಯನ್ನು ಜಯತೀರ್ಥ ರಾಜಪುರೋಹಿತ ಮತ್ತು ಎಸ್.ಪಿ. ಪಾಟೀಲ ಅವರೂ ಕನ್ನಡಿಸಿದ್ದಾರೆ. ಭಾರತೀಯ ಸಾಹಿತ್ಯ ನಿರ್ಮಾಣಕಾರರು ಮಾಲೆಯಲ್ಲಿ ಪ್ರಕಟಗೊಂಡಿರುವ ಈ ಭಾಷಾಂತರಗಳು ಕನ್ನಡ ಓದುಗರಿಗೆ ಈ ಮಹನೀಯರನ್ನು ಕುರಿತು ಮಾಹಿತಿ ನೀಡಿ ಆಸಕ್ತಿ ಹುಟ್ಟಿಸುವಲ್ಲಿ ಸಫಲವಾಗಿವೆ.

ಬೇಟೆ : 'ಶಿವನಿಪಳ್ಳಿಯ ಕಪ್ಪು ಚಿರತೆ' ಕೆನೆತ್ ಅಂಡರ್‌ಸನ್‌ರ ಕೃತಿಯ ಭಾಷಾಂತರ. ಬೋಳಂತೋಡಿ ಈಶ್ವರಭಟ್ಟರು ೧೯೬೨ರಲ್ಲಿ ಮತ್ತು ೧೯೬೩ ರಲ್ಲಿ ಭಾಷಾಂತರಿಸಿದ್ದ ಒಟ್ಟು ೯ ಲೇಖನಗಳು ಈಗ ಒಂದು ಪುಸ್ತಕವಾಗಿ ಪ್ರಕಟವಾಗಿದೆ. ಪ್ರಸಿದ್ಧ ಶಿಕಾರಿ ಅಂಡರ್‌ಸನ್‌ನ ಈ ಬರಹಗಳು ತುಂಬ ರೋಚಕವಾಗಿವೆ. ಮನುಷ್ಯರಿಗೆ ಬೇಟೆ ಕುರಿತು, ಕಾಡುಪ್ರಾಣಿಗಳನ್ನು ಕೊಲ್ಲುವುದನ್ನು ಕುರಿತು ಇರುವ ಆಸಕ್ತಿ ತುಂಬ

ಪ್ರಾಚೀನವಾದದ್ದು. ಇರುವ ಭೂಮಿಯನ್ನು ತನ್ನದಾಗಿಸಿಕೊಳ್ಳುವ ಮನುಷ್ಯಯತ್ನದಲ್ಲಿ ಕಾಡುಪ್ರಾಣಿಗಳು ಪ್ರತಿ ಸ್ಪರ್ಧಿಗಳಾಗಿ, ಜೀವ ತೆಗೆವ ದುಷ್ಟ ಜಂತುಗಳಾಗಿ ಕಂಡದ್ದು ಆಶ್ಚರ್ಯವಲ್ಲ. ಅಂತೆಯೇ ಶಿಕಾರಿ ಕುರಿತ ಬರಹಗಳು ಇಂದು ಆಸಕ್ತಿ ಕೆರಳಿಸುತ್ತವೆ. ನಿಜ. ಆದರೆ ಪರಿಸರ ಮತ್ತು ಪ್ರಾಣಿಗಳ ಮನುಷ್ಯನ ಸಂಬಂಧ ಕುರಿತು ಹೊಸ ಅರಿವು ಮೂಡುತ್ತಿರುವ ಈ ದಿನಗಳಲ್ಲಿ ಶಿಕಾರಿಯ ವೈಭವೀಕರಣವನ್ನು ಒಪ್ಪುವುದು ಕಷ್ಟವಾಗುತ್ತದೆ. ಈ ಪುಸ್ತಕದಲ್ಲಿ ಚಿರತೆಗಳ ಮತ್ತು ಹಾವು ಹಾಗೂ ಇತರ ಜೀವಿಗಳನ್ನು ಕುರಿತ ಬದುಕಿನ ವಿವರಗಳ ಭಾಗ ತುಂಬ ಚೆನ್ನಾಗಿದೆ. ಬೇಟೆಯ ವಿವರಗಳು ರೋಚಕವಾದರೂ ಮೌಲಿಕತೆ ಪ್ರಶ್ನಾರ್ಹವಾಗಿದೆ. ಪರಿಸರವನ್ನು ಕುರಿತು ನಮ್ಮಲ್ಲಿರುವ ಚಿಂತನೆಗಳಿಗೂ ಪಾಶ್ಚಾತ್ಯ ಶಿಕಾರಿಯೊಬ್ಬನ ಸಾಹಸ ಕಥನಗಳಾದ ಇಂಥ ಬರವಣಿಗೆಗಳಿಗೂ ಇರುವ ಸಂಬಂಧ ಕುರಿತು ಹೆಚ್ಚಿನ ಚರ್ಚೆಗೆ ಅವಕಾಶವಿದೆ.

ಸಾಮಾಜಿಕ ಚಿಂತನೆ : ೧೯೮೮ರ ತಿರುಮಲಾಂಬಾ ಪ್ರಶಸ್ತಿ ಪಡೆದ ಶ್ರೀಮತಿ ಛಾಯಾ ದಾತಾರ್ ಅವರ ಕೃತಿಯನ್ನು ಸರಸ್ವತಿ ರಿಸಬೂಡ ಅವರು 'ಸ್ತ್ರೀ-ಪುರುಷ'ಎಂಬ ಹೆಸರಿನಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಗೋದಾವರೀ ಪರುಳೇಕರ್ ಅವರ ಕೃತಿಯ ಕನ್ನಡ ಭಾಷಾಂತರ 'ಮಾವ ಎಚ್ಚೆತ್ತಾಗ ' ಓದಿರುವವರಿಗೆ ಸರಸ್ವತಿಯವರ ಹೆಸರು ಪರಿಚಯವೇ ಆಗಿದೆ. ಮರಾಠಿ - ಕನ್ನಡ ಭಾಷಾಂತರಕಾರರಲ್ಲಿ ಸರಸ್ವತಿ ರಿಸಬೂಡರು ಅತ್ಯಂತ ಮುಖ್ಯರಾಗಿದ್ದಾರೆ. ಅವರು ಭಾಷಾಂತರಕ್ಕೆ ಆಯ್ದುಕೊಳ್ಳುವ ಕೃತಿಗಳೂ ಸಾಂಸ್ಕೃತಿಕ ಮಹತ್ವದ್ದೇ ಆಗಿರುತ್ತವೆ. ಪ್ರಸ್ತುತ ಪುಸ್ತಕವೂ ಅಷ್ಟೆ. 'ಆತ್ಮ ಶೋಧನೆ' ಹೆಸರಿನ ಮೊದಲ ಅಧ್ಯಾಯವು ಛಾಯಾದಾತಾರರ ಚಿಂತನೆಗಳ ವಿಕಾಸವನ್ನು ತಮ್ಮ ಬದುಕಿನ ವಿವರಗಳ ಹಿನ್ನಲೆಯಲ್ಲಿ ಆತ್ಮೀಯವಾಗಿ ವಿವರಿಸುತ್ತಾರೆ. ಇದರಿಂದ ಪುಸ್ತಕದ ಮುಂದಿನ ಭಾಗದಲ್ಲಿ ಬರುವ ತಾತ್ವಿಕ ಚಿಂತನೆಗಳಿಗೆ ಮಾನವೀಯತೆಯ ಸ್ಪರ್ಶ ದೊರೆತಿದೆ. ಭಾಷಾಂತರದ ಕನ್ನಡ ಎಷ್ಟು ಸರಳ, ನೇರ ಮತ್ತು ಸ್ಪಷ್ಟವಾಗಿದೆಯೆಂದರೆ ಸರಸ್ವತಿ ರಿಸಬೂಡರು ಪಟ್ಟಿರುವ ಶ್ರಮ ನಮಗೆ ಅರಿವಾಗುವುದೇ ಇಲ್ಲ. ಇಂಥ ಕೃತಿಗಳನ್ನು ನಮ್ಮ ಶಿಕ್ಷಣ ಕ್ರಮದಲ್ಲಿ ಅಳವಡಿಸಿಕೊಳ್ಳುವುದು ತೀರ ಅಗತ್ಯವೆಂದು ತೋರುತ್ತದೆ. ಯಾಕೆಂದರೆ ಇಂಥ ಚಿಂತನೆಗಳು ನಮ್ಮ ಸಾಮಾನ್ಯ ಶಿಕ್ಷಣದ ಭಾಗವಾಗದ ಹೊರತು ನಮ್ಮ ಸ್ತ್ರೀಪರ ಚಿಂತನೆಗಳು, ಚಳವಳಿಗಳು ಪರಿಣಾಮಕಾರಿಯಾಗುವುದು ಕಷ್ಟ.

ಡಾ. ಎನ್.ಜಿ. ಮಹಾದೇವಪ್ಪನವರು ಜಾನ್ ಹಿಕ್ ಅವರ 'ಫಿಲಾಸಫಿ ಆಫ್ ರಿಲಿಜನ್' ಎಂಬ ಕೃತಿಯನ್ನು 'ಧರ್ಮಮೀಮಾಂಸೆ'ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ತತ್ತ್ವಶಾಸ್ತ್ರದ ಕೃತಿಗಳ ಭಾಷಾಂತರ ಇತ್ತೀಚಿನ ದಿನಗಳಲ್ಲಿ ಅಪರೂಪದ ಸಂಗತಿ. ಪಾಶ್ಚಾತ್ಯ ತತ್ತ್ವಚಿಂತನೆಯ ಬೆಳವಣಿಗೆಗಳನ್ನು ಕನ್ನಡದಲ್ಲಿ ಪರಿಚಯಿಸುವುದು ಅಗತ್ಯವೂ ಹೌದು. ಸುಮಾರು ೬೦ರ ದಶಕದ ನಂತರ ಪಾಶ್ಚಾತ್ಯದಲ್ಲಿ ತತ್ತ್ವಶಾಸ್ತ್ರದ ಚರ್ಚೆ ಹೇಗೆ ಬೆಳೆದಿದೆ ಎಂಬುದು ಕೇವಲ ಕನ್ನಡ ಮಾತ್ರ ಬಲ್ಲವರಿಗೆ ಅಪರಿಚಿತವಾಗಿಯೇ ಇದೆ. ಇಂಥ ಸನ್ನಿವೇಶದಲ್ಲಿ ಹಿಕ್‌ನ ಕೃತಿಯ

ಅನುವಾದ ಸ್ವಾಗತಾರ್ಹ. ಈ ಕೃತಿಯ ಭಾಷಾಂತರವಾದರೋ ತತ್ತ್ವಶಾಸ್ತ್ರವನ್ನು ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ರೂಪಿತವಾದಂತಿದೆ. ಫೌಂಡೇಷನ್ಸ್ ಆಫ್ ಫಿಲಾಸಫಿ ಮಾಲೆಯಲ್ಲಿ ಬಂದ ಈ ಪುಸ್ತಕಕ್ಕೆ ಒಂದು ರೀತಿಯ ಪಠ್ಯಪುಸ್ತಕ ಗುಣವೂ ಇದೆ. ಕನ್ನಡ ಭಾಷಾಂತರವನ್ನು ಓದಿದಾಗ ಒಂದು ಪ್ರಶ್ನೆ ಹುಟ್ಟುತ್ತದೆ. ಅದು ತತ್ತ್ವಶಾಸ್ತ್ರದ ಪಾರಿಭಾಷಿಕಗಳ ಭಾಷಾಂತರದ ಸಮಸ್ಯೆ. ಯಾವುದೇ ಭಾಷೆಯಲ್ಲಿ ತತ್ತ್ವಶಾಸ್ತ್ರದ ಪರಿಭಾಷೆಗಳು ಆಯಾ ಭಾಷೆಯ ಸಾಂಸ್ಕೃತಿಕ ಸೊಗಡನ್ನು ಉಳಿಸಿಕೊಂಡೇ ಪಾರಿಭಾಷಿಕಗಳಾಗಿರುತ್ತವೆ, ತಮ್ಮ ವಿಶಿಷ್ಟ ಸಾಂಸ್ಕೃತಿಕ ಅರ್ಥ ಛಾಯೆಗಳನ್ನು ಪಡೆದಿರುತ್ತವೆ. ಭಾರತೀಯ ತತ್ತ್ವಶಾಸ್ತ್ರದ ಪರಿಭಾಷೆಗಳನ್ನು ಪಾಶ್ಚಾತ್ಯ ಪರಿಭಾಷೆಗಳಿಗೆ ಸಮಾನಾರ್ಥಕವೆಂದು ಬಳಸುವುದು ಎಷ್ಟು ಸರಿ ? ಉದಾಹರಣೆಗೆ "ಶ್ರುತಿ" ಎಂಬ ಪದ ಭಾರತೀಯ ತತ್ತ್ವ ಚಿಂತನೆಗಳಲ್ಲಿ ಪಡೆದಿರುವ ಅರ್ಥ ಪರಿವೇಷ ಅದನ್ನು ಯಾವ ಇಂಗ್ಲಿಷ್ ಪದಕ್ಕೆ ಸಮಾನಾರ್ಥಕವಾಗಿ ಬಳಸಲಾಗಿದೆಯೋ ಅದಕ್ಕಿಂತ ತೀರ ಭಿನ್ನ ಅಲ್ಲವೆ ? ಇಂಥ ತತ್ತ್ವಶಾಸ್ತ್ರಗಳ ಅನುವಾದದಲ್ಲಿ ಮೂಲ ಪಾರಿಭಾಷಿಕಗಳಿಗೆ ಭಾಷಾಂತರಕಾರರು ಆಯ್ಕೆ ಮಾಡಿಕೊಂಡಿರುವ ಸಮಾನಾರ್ಥಕಗಳನ್ನು ಒಂದು ಕೋಷ್ಟಕವಾಗಿ ಕೊಡುವುದು ಅಗತ್ಯವೆಂದು ತೋರುತ್ತದೆ. ಅಂತೆಯೇ ಹಿಕ್‌ನ ಪುಸ್ತಕ ಪ್ರಕಟವಾದದ್ದು ಯಾವಾಗ, ಎಲ್ಲಿ, ಅದು ಯಾಕೆ ನಮಗೆ ಮಹತ್ವ ಎಂಬಂಥ ಪ್ರಾಥಮಿಕ ವಿವರಗಳೂ ಅಗತ್ಯವೆಂದು ತೋರುತ್ತದೆ. ಭಾಷಾಂತರ ತತ್ತ್ವಶಾಸ್ತ್ರದಲ್ಲಿ ಪ್ರವೇಶ ಉಳ್ಳವರಿಗೆ ಉಪಯುಕ್ತವಾಗಿ, ಸಮರ್ಥವಾಗಿ ಇದೆ.

೧೯೯೨ರ ಭಾಷಾಂತರ ಕೃತಿಗಳು ವೈವಿಧ್ಯಮಯವಾಗಿದ್ದು ಕನ್ನಡವನ್ನು ಶ್ರೀಮಂತಗೊಳಿಸಲು ಸಹಾಯಕವಾಗಿವೆ. ಆದರೆ ಭಾಷಾಂತರಗಳನ್ನು ಕನ್ನಡದ ಅರಿವಿನ ಬೇರೆ ಬೇರೆ ವಲಯಗಳು, ಅಂದರೆ ಶಿಕ್ಷಣ, ವಿಮರ್ಶೆ ಇತ್ಯಾದಿಗಳು ಸಮರ್ಥವಾಗಿ ಬಳಸಿಕೊಳ್ಳಲು ದಾರಿ ಕಂಡುಕೊಳ್ಳಬೇಕಾಗಿದೆ.

* * *

ಸಂಶೋಧನೆ

— *ರಹಮತ್ ತರೀಕೆರೆ*

೧

"ಕನ್ನಡ ಸಂಶೋಧನಾ ಶಾಸ್ತ್ರ" ವೆಂಬ ತಮ್ಮ ಕೃತಿಯ ಮೊದಲಲ್ಲಿ "ಸಂಶೋಧನೆ ಮಾಡುವುದು ಕಷ್ಟ, ಸಂಶೋಧನೆಯ ಬಗ್ಗೆ ಬರೆಯುವುದು ಇನ್ನೂ ಕಷ್ಟ ಎಂಬ ಸ್ಥಿತಿಯಲ್ಲಿ ನಿಂತು ಈ ಪುಸ್ತಕ ರಚಿಸಿದ್ದೇನೆ" ಎಂಬ ಮಾತನ್ನು ಎಂ.ಎಂ. ಕಲಬುರ್ಗಿಯವರು ಹೇಳುತ್ತಾರೆ; ಸಂಶೋಧನೆಯಲ್ಲಿ ದೊಡ್ಡ ಹೆಸರು ಪಡೆದಿರುವ ಕಲಬುರ್ಗಿಯವರು ಬಹುಶಃ ಮಾರ್ಗ-೨ ಸಂದರ್ಭದಲ್ಲಿ ಪಡೆದ ಅನುಭವಗಳ ನೆರಳಿನಲ್ಲೇ ಈ ಆತಂಕದ ಮಾತಾಡಿದ್ದಾರೆ ಎನಿಸುತ್ತದೆ. ಆ ಅನುಭವಗಳು "ಸಂಶೋಧಕ ತನ್ನ ಒಳದನಿಗೆ ಬದ್ಧನಾಗಬೇಕೋ ಹೊರಗಿನ ಒತ್ತಡಕ್ಕೆ ಮಣಿಯಬೇಕೋ?" ಎಂಬಂಥ ಪ್ರಶ್ನೆಗಳನ್ನು ಕೂಡ ಕೇಳಿಕೊಳ್ಳುವಂತೆ ಮಾಡಿದೆ. ಹೀಗಾಗಿ ಸಂಶೋಧನೆ ಮಾಡಲು ಸಂಶೋಧಕರಿಗಿರಬೇಕಾದ ತಯಾರಿಗಳು ಯಾವುವು ಎಂಬುದನ್ನು ಹೇಳುವ ಈ ಪುಸ್ತಕದ ಆರಂಭದಲ್ಲಿ ಕಲಬುರ್ಗಿಯವರು ಕೆಲವು ಮುಖ್ಯವಾದ ತಾತ್ವಿಕ ಪ್ರಶ್ನೆಗಳನ್ನು ಎತ್ತುತ್ತಾರೆ. ಈ ಪ್ರಶ್ನೆಗಳಲ್ಲಿ ಒಂದು ಬಗೆಯ ತೀವ್ರತೆ ಇದ್ದು ಕೊನೆಗೆ ಅವರು ಈ ತೀರ್ಮಾನಗಳಿಗೆ ತಲುಪುತ್ತಾರೆ:

೧ ಭಾರತದಂಥ ಜಾತಿವಾದಿ ರಾಷ್ಟ್ರಗಳಲ್ಲಿ ಜಾತಿ-ಮತಗಳ ವಿಷಯವಾಗಿ ಮಾಡಿದ ಸಂಶೋಧನೆ ಅನೇಕ ಪ್ರತಿಭಟನೆಗೆ ಗುರಿಯಾಗುತ್ತದೆ. ವ್ಯಕ್ತಿವಿರೋಧ, ಸಾಮಾಜಿಕ ವಿರೋಧ, ಧಾರ್ಮಿಕ ವಿರೋಧ, ರಾಜಕೀಯ ವಿರೋಧಗಳನ್ನು ಸಂಶೋಧಕ ಎದುರಿಸಬೇಕಾಗಿ ಬರುವುದರಿಂದ, ಈ ದೇಶದಲ್ಲಿ ಅವನು ಒಂದು ಬಗೆಯ ಸಂರಕ್ಷಣಾತ್ಮಕ ನಿಲುವಿನಲ್ಲಿಯೇ ತನ್ನ ಬರವಣಿಗೆಯನ್ನು ಮುಂದುವರೆಸುವ ಪರಿಸ್ಥಿತಿಯಿದೆ

೨ ಇಲ್ಲಿ ಪರಂಪರೆಯ ಬಗ್ಗೆ ಕುರುಡುವ್ಯಾಮೋಹ ಬೆಳೆಸಿಕೊಂಡ ಮನಸ್ಸುಗಳಿಗೆ ಚುರುಕ್ಕುಮುಟ್ಟಿಸುವ ಶೋಧವನ್ನು ವಿದ್ವಾಂಸ ಧೈರ್ಯದಿಂದ ಪ್ರಕಟಿಸಬೇಕು.* (ಪುಟ ೧೪ ಮತ್ತು ೧೫)

ಇಲ್ಲಿ ಒಂದು ವಾಸ್ತವ, ಇನ್ನೊಂದು ಆದರ್ಶ. ಈ ಎರಡರ ಎಳೆದಾಟಗಳಲ್ಲಿ ಕನ್ನಡ ಸಂಶೋಧನೆಯು ಕೆಲವು ಸಮಸ್ಯೆಗಳನ್ನೆದುರಿಸುತ್ತಿದೆ. ಕಲಬುರ್ಗಿಯವರು 'ಚುರುಕುಮುಟ್ಟಿಸುವ ಶೋಧ' ಎಂದು ಹೇಳುವಾಗ, ಸಂಶೋಧನೆಗೆ ಇಂಡಿಯಾದಂಥ ದೇಶಗಳಲ್ಲಿ ಇರಬೇಕೆಂದು ಅಪೇಕ್ಷಿಸುವ ಸಾಂಸ್ಕೃತಿಕ ಹೊಣೆಗಾರಿಕೆಯ ಸಮಸ್ಯೆಯನ್ನೇನಾದರೂ ಪ್ರಸ್ತಾಪಿಸುತ್ತಿದ್ದಾರೆಯೆ? ಈ ಪ್ರಶ್ನೆ ಯಾಕೆಂದರೆ, ಹೊಸಸತ್ಯಗಳನ್ನು ಕಂಡುಹಿಡಿದು 'ಶಾಕ್' ಕೊಡುವುದೂ, ಆ ಸತ್ಯಗಳನ್ನು ಸಾಂಸ್ಕೃತಿಕ ಪರಿವರ್ತನೆಯ ಚರಿತ್ರೆಯ ನಿರ್ಮಾಣಕ್ಕೆ ಬಳಸಿಕೊಳ್ಳುವುದೂ, ಎರಡೂ ಬೇರೆ ಬೇರೆಯಾಗಿದೆ. ಶಂಬಾ, ಪೋಲಂಕಿ, ಭಗವಾನ್, ಬಿ.ವಿ. ವೀರಭದ್ರಪ್ಪ -ಮೊದಲಾದವರು, ತಮ್ಮ 'ಸಂಶೋಧನೆ'ಗಳನ್ನು ಚಿಂತನೆಗಳನ್ನಾಗಿ, ವೈಚಾರಿಕತೆಯನ್ನಾಗಿ, ಸಾಂಸ್ಕೃತಿಕ ಸಂವಾದವನ್ನಾಗಿ ಮಾರ್ಪಡಿಸುತ್ತಾರೆ. ಕಲಬುರ್ಗಿಯವರು ನಮ್ಮ ಸಾಂಪ್ರದಾಯಿಕ ಶಿಸ್ತಿನ ಸಂಶೋಧಕರಲ್ಲಿ ಒಬ್ಬರು. ಅವರ ಸಂಶೋಧನೆಗಳಲ್ಲಿ ಖಂಡಿತ ವಸ್ತುನಿಷ್ಠತೆಯಿರುತ್ತದೆ. ಆದರೆ ಅದನ್ನು ಸಾಂಸ್ಕೃತಿಕ ಚರ್ಚೆಗೆ ಒಳಗುಮಾಡುವ ಕೆಲಸ ನಡೆಯುವುದಿಲ್ಲ. ಈ ಹೊತ್ತು, ಪುರಾಣವನ್ನು ಚರಿತ್ರೆಯಾಗಿ ಮಾರ್ಪಡಿಸುತ್ತಿರುವ ಮತೀಯವಾದೀ ರಾಜಕಾರಣಕ್ಕೆ, ಸಂಶೋಧಕರು ನಿಜವಾಗಿಯೂ ಸವಾಲನ್ನೊಡಿದ್ದಾರೆಯೇ? ಬದಲಿಗೆ, ಸಂಶೋಧಕರೆಸಿಕೊಂಡವರು ಚರಿತ್ರೆಯ ವೈಭವೀಕರಣದ ಆಕೃತಿಗಳನ್ನು ಬಲಪಂಥೀಯ ರಾಜಕಾರಣಕ್ಕೆ ಸರಬರಾಜು ಮಾಡುತ್ತಿರುವ ಬಗ್ಗೆ, ವರ್ತಮಾನದ ಸಂಸ್ಕೃತಿದೃಷ್ಟಿಯಿಂದ ಏನೇನೂ ಮುಖ್ಯವಲ್ಲದ ಜಡವಿಷಯಗಳಲ್ಲಿ ತೌಡುಕುಟ್ಟುವಂಥ ಚರ್ಚೆ ಮಾಡುವ ಬಗ್ಗೆ, ಪ್ರಶ್ನೆಗಳನ್ನು ಎತ್ತಬೇಕಿದೆ. ಈಗ ಸಂಶೋಧನೆಯ ನಿಜವಾದ ಸಮಸ್ಯೆಗಳು ಇವು.

ಕಲಬುರ್ಗಿಯವರು 'ಸಂಶೋಧನೆ'ಎಂದರೆ ಏನು ?' ಅನ್ವೇಷಣೆ ' 'ಆವಿಷ್ಕಾರ' **ಗಳಿಗೂ**'ಸಂಶೋಧನೆಗೂ' ಇರುವ ವ್ಯತ್ಯಾಸಗಳು ಯಾವುವು? -ಎಂಬಂಥ ಸೈದ್ಧಾಂತಿಕವಾದ ಪರಿಕಲ್ಪನಾ ಚರ್ಚೆಯಿಂದ ಶುರುಮಾಡಿ, ಸಂಶೋಧಕರು ತಮ್ಮ ಕುತೂಹಲ - ಪಾಂಡಿತ್ಯ -ಶ್ರಮಗಳನ್ನು ಬಳಸಿ ಹೇಗೆ ಸಂಶೋಧನೆ ಮಾಡಬೇಕೆಂಬ ಪ್ರಯೋಗಗಳ ತನಕ, ಇಲ್ಲಿ ಚಿಂತನೆ ಮಾಡಿದ್ದಾರೆ. ಸಂಶೋಧನೆಯ ಕ್ಷೇತ್ರದಲ್ಲಿ ತಮ್ಮ ಬಹುಕಾಲದ ಅನುಭವ - ಅಧ್ಯಾಪನಗಳ ಬಲದಿಂದ ರಚಿತವಾಗಿರುವ ಈ ಪುಸ್ತಕದಲ್ಲಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಆಗತ್ಯಪಾಠಗಳಿವೆ. ಕಲಬುರ್ಗಿಯವರು ತುಂಬ ಆಕರ್ಷಕ ರೀತಿಯಲ್ಲಿ ಪ್ರಾಯೋಗಿಕ ಉದಾಹರಣೆಗಳನ್ನು ಕೊಟ್ಟು ಈ ಕೃತಿ

---

* ಈ ಹೊತ್ತಿನ ಸಾಹಿತ್ಯಕ ಚರ್ಚೆಯಲ್ಲಿ ಆರೋಗ್ಯಕರವಾದ ಅರ್ಥದಲ್ಲಿ ಬಳಸುತ್ತಿರುವ ಎರಡು ಪರಿಕಲ್ಪನೆಗಳನ್ನು ('ಪರಂಪರೆ', ಪ್ರತಿಭಟನೆ') ಕಲಬುರ್ಗಿಯವರು ಇಲ್ಲಿ ಸಂಪ್ರದಾಯ ಮತ್ತು ವಿರೋಧ ಎಂಬ ಸಂಕುಚಿತ ಅರ್ಥಗಳಲ್ಲಿ ಬಳಸಿದ್ದಾರೆನಿಸುತ್ತದೆ.

ರಚಿಸಿದ್ದಾರೆ. ಸವದತ್ತಿ ಎಲ್ಲಮ್ಮನಗುಡಿ ಹೇಗೆ ಹಿಂದೆ ಜೈನಬಸದಿಯಾಗಿತ್ತು? ಎಂಬಂಥ ಉದಾಹರಣೆಗಳ ವಿಶ್ಲೇಷಣೆಗಳು, ತುಂಬ ಸ್ವಾರಸ್ಯಕರವಾಗಿವೆ. ಸಂಶೋಧನೆಯನ್ನು ತುಂಬ ಗಂಭೀರವಾದ ಮತ್ತು ಶ್ರದ್ಧೆಯ ಕೆಲಸವನ್ನಾಗಿ ತಿಳಿದಿರುವ ಕಲಬುರ್ಗಿಯವರು, ಸಂಶೋಧಕರು ಮತ್ತು ಸಾಮಾಜಿಕ- ರಾಜಕೀಯ ಸನ್ನಿವೇಶಗಳು ಸಂಘರ್ಷದ ಹಾದಿಹಿಡಿದಿರುವ ಕುರಿತು ಆಡಿರುವ ಮಾತುಗಳನ್ನು ಚರ್ಚೆಗೆತ್ತುಕೊಳ್ಳಬೇಕಿದೆ.

೨

ಈ ವರ್ಷ ಈ ಕೆಲವು ಪಿಎಚ್.ಡಿ. ಪ್ರಬಂಧಗಳೂ,ಸಂಶೋಧನಾ ಬರೆಹಗಳ ಸಂಕಲನಗಳೂ ಪ್ರಕಟವಾಗಿವೆ:

(೧) ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು : ರಾಗೌ.
(೨) ತಿಂತಿಣಿ ಮೋನಪ್ಪಯ್ಯ ಒಂದು ಅಧ್ಯಯನ : ಎಂ.ಎಂ. ಪಡಸೆಟ್ಟಿ.
(೩) ಹರಿಶಂದ್ರನ ಕಥೆಯ ಬೆಳವಣಿಗೆ :ಒಂದು ಅಧ್ಯಯನ: : ಎನ್.ವಿ.ವಿಮಲ.
(೪) ಕನ್ನಡ ಹಸ್ತಪ್ರತಿಗಳ ಅಧ್ಯಯನ : ಬಿ.ಕೆ. ಹಿರೇಮಠ.
(೫) ಭೈರಪ್ಪನವರ ಕಾದಂಬರಿಗಳ ಸ್ವರೂಪ : ಲೀಲಾವತಿ ತೋರಣಗಟ್ಟಿ.
(೬) ಚದುರಂಗರ ಕಾದಂಬರಿಗಳು : ಒಂದು ಅಧ್ಯಯನ : ರಾಜಣ್ಣ ಹುಣಿಸೆಪಾಳ್ಯ.
(೭) ಶಬ್ದಮಣಿದರ್ಪಣದಲ್ಲಿ ಗ್ರಾಂಥಿಕ -ವ್ಯಾವಹಾರಿಕ ಶೈಲಿಗಳು : ಒಂದು ಸಮಾಜೋ ವಿಶ್ಲೇಷಣೆ : ವಿ.ಶಿವಾನಂದ.
(೮) ಎರಡನೇ ವಿಕ್ರಮಾದಿತ್ಯನ
(೯) ಶ್ರೀ ರಾಮಾಯಣದರ್ಶನಂ: ಒಂದು ವಿಮರ್ಶಕ ಅಧ್ಯಯನ : ಎಚ್.ಜೆ. ಲಕ್ಕಪ್ಪಗೌಡ

ಕಾವ್ಯಗಳು, ಹಸ್ತಪ್ರತಿಗಳು, ಶಾಸನಗಳು, ಪತ್ರಿಕೆಗಳು, ಇತಿಹಾಸದ ಬರವಣಿಗೆಗಳು —ಇಂಥ ಹಲವು ಆಕರಗಳನ್ನು ಅಧ್ಯಯನ ಮಾಡಿ, ಅಪಾರವಾದ ಸಾಮಗ್ರಿಯನ್ನು ಕಲೆಹಾಕಿಕೊಂಡು, ರಾಗೌ ಅವರ ಮಹಾಪ್ರಬಂಧ ರಚನೆಯಾಗಿದೆ. ತನ್ನ ತೆಕ್ಕೆಗೆ ಬಹಳಷ್ಟು ಸಾಮಗ್ರಿಯನ್ನು ಬಾಚಿಕೊಂಡಿರುವುದರಿಂದಲೇ, ಪ್ರಬಂಧ, ಗಾತ್ರದಲ್ಲಿ ದೊಡ್ಡದೂ ಆಗಿದೆ. ಅನುಬಂಧವನ್ನು ಗಮನಿಸಿರೆ ಅವರ ಓದಿನ ಪ್ರಮಾಣ ತಿಳಿಯತ್ತದೆ. ಅನುಬಂಧದಲ್ಲಿ ಗ್ರಂಥಸೂಚಿ, ವ್ಯಕ್ತಿಸೂಚಿ, ಸ್ಥಳಸೂಚಿ, ಕವಿ - ಕೃತಿ ಸೂಚಿ, ಪದ್ಯಗಳ ಅಕಾರಾದಿ —ಎಲ್ಲವೂ ಅಚ್ಚುಕಟ್ಟಾಗಿದೆ. ವಿಷಯ, ಕನ್ನಡ ಕಾವ್ಯಗಳಲ್ಲಿ ಚಾರಿತ್ರಿಕ ಅಂಶಗಳ ಪರಿಶೀಲನೆಯಾಗಿದ್ದು, ರಾಗೌ, ತಮ್ಮ ಅಧ್ಯಯನವನ್ನು ಪ್ರಾಚೀನ ಕಾವ್ಯಗಳಿಗೇ ಸೀಮಿತಗೊಳಿಸಿಕೊಂಡಿದ್ದಾರೆ. ಈ ಥೀಸಿಸ್,

ಕಾವ್ಯ ಮತ್ತು ಇತಿಹಾಸದ ಸಂಬಂಧ ಕುರಿತು ಕೆಲವು ಮುಖ್ಯ ಪ್ರಶ್ನೆಗಳನ್ನು ಎತ್ತಲು ಪ್ರೇರಿಸುತ್ತದೆ : ಮೊದಲನೆಯದಾಗಿ, ಚರಿತ್ರೆಯನ್ನು ಆಳುವ ವರ್ಗದ ಕಥನವಾಗಿ ವ್ಯಾಖ್ಯಾನಿಸಲಾದ ಸಾಂಪ್ರದಾಯಿಕ ಗ್ರಹಿಕೆಯನ್ನು ಪ್ರಶ್ನಿಸದಿರುವುದು. ಅದನ್ನು ರಾಗೌ ಒಪ್ಪುತ್ತಾರೆ ಕೂಡ : "ಒಂದು ನಾಡಿನ ಇತಿಹಾಕಸವೆಂದರೆ, ಅದನ್ನು ಆಯಾ ಕಾಲಮಾನಗಳಲ್ಲಿ ಆಳಿದ ಇಂಥ ರಾಜರ ಸಂಕೀರ್ಣ ಸ್ವರೂಪದ ಚರಿತ್ರೆಯೆಂದೇ ಅರ್ಥವಾಗುತ್ತದೆ " (ಪುಟ :೪) ಹೀಗಾಗಿ ಈ ಪ್ರಬಂಧ ಕಟ್ಟಿಕೊಡುವ ಇತಿಹಾಸದ ವಿವರಗಳಲ್ಲಿ ಸಮುದಾಯದ ಬಾಳಿನಕಥನ ಸಹಜವಾಗಿ ಮೂಡಿಬಂದಿಲ್ಲ ಮತ್ತು ಯಾಕೆ ಮೂಡಿಬಂದಿಲ್ಲವೆಂಬ ಪ್ರಶ್ನೆಯೂ ಎದ್ದಿಲ್ಲ. ಎರಡನೆಯದಾಗಿ, ಚರಿತ್ರೆಯನ್ನು ಕಟ್ಟಿಕೊಳ್ಳಲು ಸಾಹಿತ್ಯಕೃತಿಗಳನ್ನು ಆಕರವಾಗಿಸಿಕೊಳ್ಳುವ ಪ್ರಶ್ನೆ. ರಾಗೌ 'ಪಂಪಭಾರತ' 'ಗದಾಯುದ್ಧ' ದಂಥ ಕಾವ್ಯಗಳನ್ನು ಚಾರಿತ್ರಿಕ ಧ್ವನಿಕಾವ್ಯಗಳೆಂದೂ 'ರಾಮನಾಥ ಚರಿತೆ', 'ಕೆಳದಿನೃಪವಿಜಯ', 'ಚಿಕದೇವರಾಜ ವಿಜಯದಂಥ' ಕೃತಿಗಳನ್ನು ಐತಿಹಾಸಿಕ ಕಾವ್ಯಗಳೆಂದೂ ಬೇರೆ ಮಾಡಿ ಅಧ್ಯಯನ ಮಾಡಿದ್ದಾರೆ;ಇದರಿಂದ ಕನ್ನಡ ಸಾಹಿತ್ಯ ವಿದ್ಯಾರ್ಥಿಗಳು, ಅಮುಖ್ಯವೆಂದೆಣಿಸಿರುವ 'ನಿಂಬಸಾಮಂತ ಚರಿತೆ' 'ಸಿರುಮಣನಾಯಕನ ಸಾಂಗತ್ಯ'ಗಳೂ ತಮ್ಮ 'ಐತಿಹಾಸಿಕ 'ವಿವರಗಳ ಕಾರಣಕ್ಕೆ ಇಲ್ಲಿ ಪ್ರಮುಖ ಗಣನೆಗೊಳಗಾಗಿವೆ. ಮೂಲಭೂತ ಪ್ರಶ್ನೆಗಳೆಂದರೆ, ಇತಿಹಾಸವನ್ನು ಸಾಹಿತ್ಯಕೃತಿಯೊಂದು ಹೇಗೆ ಬಳಸಿಕೊಳ್ಳುತ್ತದೆ ? ಅದು ಸಾಹಿತ್ಯವಾಗಿ ಏನಾಗುತ್ತದೆ? ಸಾಹಿತ್ಯದ ವಿದ್ಯಾರ್ಥಿಗೆಯಾವುದು ಮುಖ್ಯ? ಅವನು ಸೂಕ್ಷ್ಮವಾಗಿರಬೇಕಾದ್ದು ಅಥವಾ ಗಮನವಹಿಸಬೇಕಾದ್ದು ಯಾವುದರ ಕಡೆಗೆ? ಸಾಹಿತ್ಯಕೃತಿಗಳಲ್ಲಿ ಇತಿಹಾಸವನ್ನು ಹುಡುಕುವ ಕೆಲಸ ಯಾರದು? ಎಂಬುವು. ಚರಿತ್ರೆಯಾಗಲಿ, ಸಮಾಜಶಾಸ್ತ್ರವಾಗಲೀ ಸೃಜನಶೀಲತೆಯಲ್ಲಿ ಹೇಗೆ ಹೊಸರೂಪಧಾರಣೆ ಮಾಡಿಕೊಂಡು ಮಾನವೀಕರಣವಾಗಿವೆ ಎಂಬುದೇ ಸಾಹಿತ್ಯವಿದ್ಯಾರ್ಥಿಯ ಮೊದಲ ಕೆಲಸ. ಈ ಸಮಸ್ಯೆಯನ್ನು ರಾಗೌ ಅವರು ಲಕ್ಷಿಸಿದ್ದಾರೆ. ಒಮ್ಮೆ ಈ ಅಳಕು ಅವರಿಗೆ ಕಾಡಿದೆ (ಪು:೫೬೩) ಆದರೆ ಅವರು ನಿಜವಾಗಿ ತೊಡಗುವುದು ಮಾತ್ರ ಸಾಹಿತ್ಯವನ್ನು ಬಳಸಿಕೊಂಡು ಚರಿತ್ರೆಯನ್ನು ನಿರ್ಮಿಸುವತ್ತ ಪ್ರಬಂಧದ ಮುಖ್ಯ ಉದ್ದೇಶ ಆಗಿದೆ. ಸಾಹಿತ್ಯಕೃತಿಗಳನ್ನು ಇತಿಹಾಸಕಾರರು ಮುಖ್ಯ ಆಕರವೆಂದು ಗಂಭೀರವಾಗಿ ಪರಿಗಣಿಸದ ಸಂದರ್ಭದಲ್ಲಿ, ರಾಗೌ ಈ ಕೆಲಸ ಮಾಡಿದ್ದಾರೆ. ಇದರಿಂದಾಗಿರುವುದೇನೆಂದರೆ, ಸಾಹಿತ್ಯಕೃತಿಯೊಳಗಿನ ಸಂಗತಿಗಳನ್ನೂ ಸೆಳೆದು, ಇತಿಹಾಸದ ಬರಹಗಳಿಂದ ಸಮರ್ಥಿಸುತ್ತಾ ಹೋಗುವುದು. ಸಾಹಿತ್ಯಚರಿತ್ರೆಯ ಬರೆಹಗಳಿಗೆ ಈ ವಿಧಾನ ಬಳಕೆಯಾಗಿದೆ ನಿಜ. ಆದರೆ ರಾಗೌ ಅವರ ಗಮನವೆಲ್ಲ historography ಯತ್ತಲೇ ಇದೆ. ಹೀಗಾಗಿ ಶುದ್ಧ ಇತಿಹಾಸದ ವಿದ್ಯಾರ್ಥಿಯ ನಿಷ್ಠುರತೆ ಇಲ್ಲಿ ಬಂದುಬಿಟ್ಟಿದೆ : ಎಂತಲೇ"ಕಾವ್ಯವಾಗಿ ಅವುಗಳ ಸಾಧನೆ ಏನೇ ಇರಲಿ ಇತಿಹಾಸದ ದೃಷ್ಟಿಯಿಂದ ಉಪಯುಕ್ತವಾಗಿವೆ" (ಪು::೫೫೬) "ಸುಲ್ತಾನನ ಮಗಳ ಪ್ರಸಂಗಗಳು ಕಾವ್ಯಕ್ಕೆ ಮೆರುಗುಕೊಟ್ಟಿದ್ದರೂ ಚಾರಿತ್ರಿಕವಲ್ಲವೆಂಬುದನ್ನು ತೋರಿಸಿಕೊಡಲಾಗಿದೆ "(ಪುಟ : ೫೫೩)ಎಂಬಂಥ ಅಭಿಪ್ರಾಯಗಳನ್ನು ಇಲ್ಲಿ ನೋಡಬಹುದು : ಕರ್ನಾಟಕ

ಇತಿಹಾಸರಚನೆಗೆ ಕಾವ್ಯಾಧಾರಗಳೂ ಶಾಸನಗಳಂತೆ ಉಪಯುಕ್ತವಾದವು. ಕವಿಗಳು ಇತಿಹಾಸಕಾರರಲ್ಲ ಎಂಬ ಮಾತು ನಿಜವಲ್ಲ- ಎಂದು ಸಮರ್ಥಿಸುವುದು ಇಲ್ಲಿನ ಗುರಿಯಾಗಿದೆ. ಈ ವಿಷಯದಲ್ಲಿ ರಾಗೌ ಇತಿಹಾಸಕಾರರೊಡನೆ ಜಗಳಕ್ಕಿಳಿದು ಪ್ರತಿವಾದ ಮಾಡುತ್ತಾರೆ. "ರನ್ನನ 'ಗದಾಯುದ್ಧ' ಇತಿಹಾಸದ ದೃಷ್ಟಿಯಿಂದ ಅಷ್ಟೇನು ಮೌಲಿಕವಲ್ಲ ಎಂಬ ನೀಲಕಂಠಶಾಸ್ತ್ರಿಯವರ ಮಾತನ್ನು ಒಪ್ಪಲಾಗುವುದಿಲ್ಲ... ತೈಲಪ ಮತ್ತು ಸತ್ಯಾಶ್ರಯ ಕಾಲದ ಕೆಲವು ಐತಿಹಾಸಿಕ ವಿಚಾರಗಳಿಗೆ ಗದಾಯುದ್ಧ ನಿಸ್ಸಂದೇಹವಾಗಿಯೂ ಒಂದು ಪ್ರಮಾಣಗ್ರಂಥವಾಗಿ ಉಳಿದುಕೊಳ್ಳುತ್ತದೆ " (ಪುಟ :೧೬೮)ಎಂದು ಆತ್ಮವಿಶ್ವಾಸದಿಂದ ಸ್ಥಾಪಿಸುತ್ತಾರೆ. ಕಾವ್ಯಾಭ್ಯಾಸಿಗಳಿಗಿಂತ ಚರಿತ್ರೆಯ ಬರಹಗಾರರು ಆಸಕ್ತಿಯಿಂದ ಅಧ್ಯಯನ ಮಾಡಬೇಕಾದ ಸಂಗತಿಗಳನ್ನು ಇಟ್ಟುಕೊಂಡಿರುವ ಸಂಶೋಧನಾ ಪ್ರಬಂಧವಿದು.

ಹದಿನೇಳನೇ ಶತಮಾನದಲ್ಲಿ, ಉತ್ತರಕರ್ನಾಟಕದಲ್ಲಿ ಅದರಲ್ಲೂ ಹೈದ್ರಾಬಾದ್ ಕರ್ನಾಟಕದಲ್ಲಿ ಆಗಿಹೋದ, ಆದರೆ ಈ ಹೊತ್ತೂ ಜಾನಪದದಲ್ಲಿ ಉಳಿದು ಜೀವಂತ ಆಚರಣೆಗಳಲ್ಲಿರುವ, ಅನುಭಾವಿ ಸಂತ "ತಿಂತಿಣಿ ಮೋನಪ್ಪಯ್ಯ"ನನು ಕುರಿತು, ಪಡಸೆಟ್ಟಿಯವರು ಅಭಿಮಾನ ಮತ್ತು ಭಾವುಕತೆಯಿಂದ ಅಧ್ಯಯನ ನಡೆಸಿದ್ದಾರೆ. ಅವರು ಬಹಳ ಗಂಭೀರವಾಗಿ ಈ ಸಂಬಂಧವಾಗಿ ಬಂದಿರುವ ಪೂರ್ವ ಬರೆಹಗಳನ್ನು ಅಧ್ಯಯನ ಮಾಡಿದ್ದಾರೆ. ಮತ್ತು ಪ್ರಾಮಾಣಿಕವಾಗಿ ಕ್ಷೇತ್ರಕೆಲಸಮಾಡಿ ಮಾಹಿತಿ ಸಂಗ್ರಹಿಸಿದ್ದಾರೆ. ಆದರೆ ವಿಶ್ಲೇಷಣೆಯ ಹಂತದಲ್ಲಿ ಭಾವುಕತೆಯನ್ನು ಬಿಟ್ಟುಕೊಡದಿರುವುದರಿಂದ, ಇಡೀ ಮೋನಪ್ಪಯ್ಯನ ಬದುಕಿನ ಬಗ್ಗೆ, ಬರೆಹದ ಬಗ್ಗೆ, ವಿಮರ್ಶನಾ ದೂರವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ. ಎರಡನೆಯದು, ಚರಿತ್ರೆಯ ಬಗೆಗಿನ ಪಡಸೆಟ್ಟಿಯವರ ನಿಲುವು. ಮಧ್ಯಯುಗದ ಇತಿಹಾಸವನ್ನು ಕುರಿತು ಬರೆಯುವಾಗ ಜನಪ್ರಿಯ ಇತಿಹಾಸಕಾರರ ಶೈಲಿಯನ್ನೇ ('ಹಿಂದುಗಳ ಕಲಿತನದ ಪೌರುಷ' 'ಮಹಮದೀಯರ ಧಾಳಿಯ ಅನ್ಯಾಯ ಅತ್ಯಾಚಾರ' ಗಳಂಥ) ಕೋಮುವಾದೀ ಇತಿಹಾಸ ಬರೆಹಗಳ ಪರಿಭಾಷೆಯನ್ನೇ (ಪು:೧೭) ಅನುಕರಿಸಿದ್ದಾರೆ. ಹೀಗಾಗಿ 'ಕಂಠೀರವನರಸರಾಜ ವಿಜಯ'ದಂಥ ವ್ಯಕ್ತಿ ಆರಾಧನೆಯ ಹೊಗಳು ಕೃತಿಗಳಲ್ಲಿರುವ ವರ್ಣನೆಯನ್ನೇ, "ಕನ್ನಡಿಗರ ದುಃಸ್ಥಿತಿಯ ದಾರುಣಚಿತ್ರ"ದ ಇತಿಹಾಸವೆಂದೂ, ನಂಬಿಬಿಟ್ಟಿದ್ದಾರೆ ಅಥವಾ ನಂಬಿಸುತ್ತಾರೆ. ಯಾವ ಮನುಷ್ಯ 'ಹಿಂದೂ - ಮುಸ್ಲಿಮರೆಲ್ಲ ಒಂದೇ; ಅವರಲ್ಲಿ ಭೇದ ಕಾಣುವವರು ನೀಚರು' ಎಂದು ಬರೆದನೋ, ಅವನ ಆರಾಧನೆಯ ಪರಾಕಿನಲ್ಲಿ (ಸಹಜವಾಗಿ ಒಟ್ಟಿಗೆ)ಇರುವ 'ಓಂ' 'ಪೈಗಂಬರ್' 'ಹರಹರಮಹಾದೇವ' ಎಂಬ ಶಬ್ದಗಳನ್ನು, ಪಡಸೆಟ್ಟಿ ಅವರು " ಹಿಂದೂಗಳ ಜಾಗೃತಿಗಾಗಿ ಜನರನ್ನು ಎಚ್ಚರಿಸಿದ ದಾರ್ಶನಿಕ" (ಪುಟ:೮೭) ಎಂದು ವ್ಯಾಖ್ಯಾನಿಸುವುದು ಸೋಜಿಗವಾಗಿದೆ. ಎರಡು ಧರ್ಮಗಳ ಸಾಮರಸ್ಯವನ್ನೂ, ಯಾವುದೋ ಒಂದು ಧರ್ಮದವರನ್ನು ಎಚ್ಚರಿಸುವುದನ್ನೂ ಒಂದೇ ಏಟಿನಲ್ಲಿ ಹೇಗೆ ಪರಿಭಾವಿಸುವುದು ?

ಆದರೆ ಸಾಂಸ್ಕೃತಿಕವಾಗಿ ಮೋನಪ್ಪಯ್ಯನನ್ನು ಕುರಿತ ಈ ಅಧ್ಯಯನ ಮತ್ತು ಪ್ರಕಟಣೆಯು, ಮತೀಯಗಲಭೆಗಳು ಈ ನಾಡ ಮನಸ್ಸನ್ನು ಗಾಯಗೊಳಿಸಿರುವ ಈ ಹೊತ್ತಲ್ಲಿ, ತುಂಬ ಮುಖ್ಯವಾಗಿವೆ. ಪ್ರಧಾನಚರಿತ್ರೆಯ ಆಚಾರ್ಯರೇ ಈ ದೇಶದ ಧಾರ್ಮಿಕ ಚರಿತ್ರೆಯ ಹೀರೋಗಳಾಗಿದ್ದಾರೆ. ಅವರು ಪಠ್ಯಪುಸ್ತಕಗಳಲ್ಲಿ ಮೆರೆಯುತ್ತಾರೆ. ಆದರೆ ಮೋನಪ್ಪಯ್ಯನಂಥ ಸಂತರು ಜನರ ನಡುವೆ ಸಾಮಾನ್ಯರಾಗಿ ಹುಟ್ಟಿ, ಸಾಮಾನ್ಯರ ಬಾಳುವೆಮಾಡಿ, ಜನರ ನಡುವೆ ಈಗಲೂ ಜೀವಂತವಾಗಿ ಉಳಿದಿರುವವರು. ಇಂಥ ನಿರ್ಲಕ್ಷಿತ ವ್ಯಕ್ತಿಗಳ ವಿಷಯಗಳ ಅಧ್ಯಯನಗಳು (Subaltern studies) ನಮ್ಮ ಒಟ್ಟು ಚರಿತ್ರೆಯ ಅರೆಕೊರೆಯನ್ನು ತುಂಬಲು ಬೇಕಾಗುತ್ತವೆ. ಇದರ ಅರಿವು ಈ ಪ್ರಬಂಧದಲ್ಲಿ ಇದ್ದು, ಇದು ತುಂಬ ಮುಖ್ಯ ಸಂಗತಿಯಾಗಿದೆ :

"ಈವರೆಗೆ ಶಿಷ್ಟ ಸಾಹಿತ್ಯದ ಪ್ರಸಿದ್ಧಕವಿ ಪ್ರತಿಷ್ಠಿತ ವ್ಯಕ್ತಿಗಳೇ ಸಂಶೋಧನೆಯ ವಸ್ತುವಾಗುತ್ತಿದ್ದರು. ಆದರೆ ಇಂದು ಶ್ರೀಸಾಮಾನ್ಯ ಮತ್ತು ಅವನ ಪರಿಸರ, ಉಪೇಕ್ಷಿತ ಜನಪದ ಸಾಹಿತ್ಯ, ಜನಪರವ್ಯಕ್ತಿಗಳು ಅಧ್ಯಯನಕ್ಕೆ ವಸ್ತುವಾಗುತ್ತಲಿದ್ದಾರೆ, ಇಂಥ ಅಭ್ಯಾಸವೇ ಒಂದು ನಾಡಿನ ಸಮಷ್ಟಿ ಅಭ್ಯಾಸದ ಭಾಗವೆನಿಸುತ್ತದೆ " (ಪು:5)

ಮಧ್ಯಕಾಲೀನ ಸಂತರು ಮತ್ತು ಅನುಭಾವಿಗಳ ಚರಿತ್ರೆಯಲ್ಲಿ ಸೂಫಿಸಂತರ ಸಂಪರ್ಕದ ಬಗೆಗಿನ ಉಲ್ಲೇಖಗಳು ಈ ಪ್ರಬಂಧದಲ್ಲಿವೆ, ನಿಜ. ಆದರೆ ಕರ್ನಾಟಕಕ್ಕೆ ಸೂಫಿಸಂತರು ಯಾವಾಗ, ಹೇಗೆ ಬಂದರು ಮತ್ತು ಅವರು ಕರ್ನಾಟಕದ ಇಂಥ ಅನುಭಾವಿಗಳ/ತತ್ವಪದಕಾರರ ಚಿಂತನೆಯನ್ನು ತಾತ್ವಿಕವಾಗಿ ಹೇಗೆ ಪ್ರಭಾವಿಸಿದರು ಎಂಬ ವಿಶ್ಲೇಷಣೆ ಈ ಪ್ರಬಂಧದಲ್ಲಿ ಮುಖ್ಯವೆನಿಸಿಲ್ಲ.

ಎನ್.ವಿ. ವಿಮಲ ಅವರು ಹರಿಶ್ಚಂದ್ರನ ಕಥೆಯ ಬೆಳವಣಿಗೆಯನ್ನು, ಆಳವಾದ ಮತ್ತು ವ್ಯಾಪಕವಾದ ಅಧ್ಯಯನದಿಂದ ಶೋಧಿಸಿದ್ದಾರೆ. ಇದಕ್ಕಾಗಿ ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಇಂಗ್ಲಿಷ್ ಕೃತಿಗಳನ್ನು ಪರಿಶೀಲಿಸಿದ್ದಾರೆ. ಇದೊಂದು 'ವಿದ್ವತ್ ಸಾಹಸವೇ' ನಿಜ. ಹರಿಶ್ಚಂದ್ರನ ಕಥೆಯು ಬೇರೆ ಬೇರೆ ಕಡೆ ಹೇಗೆ ಕಾಣಿಸಿಕೊಂಡಿದೆ, ಹೇಗೆ ವಿಕಾಸವಾಗಿದೆ ಮುಂತಾದ - ಪಾಂಡಿತ್ಯಪೂರ್ಣ ಶೋಧನೆಗೆ ಸಾಧ್ಯವಾದ -ತೌಲನಿಕ ವಿವರಣೆಗಳಿಂದ ಪ್ರಸ್ತುತ ಮಹಾಪ್ರಬಂಧ ಕೂಡಿದೆ. ಆದರೆ, ಹೀಗೆ ಕಥೆಯೊಂದು ಬೇರೆ ರೂಪ ಪಡೆಯಲು ಚರಿತ್ರೆಯ ಯಾವ ಒತ್ತಡಗಳು ಕಾರಣವಾದವು ಎಂಬ ಚಾರಿತ್ರಿಕವಾದ ಸಾಂಸ್ಕೃತಿಕವಾದ ಒಳನೋಟಗಳನ್ನು ಪಡೆಯಲು ಇಲ್ಲಿ ಸಾಧ್ಯವಾಗಿಲ್ಲ. ಅದು ಈ ಸಂಶೋಧನೆಯ ಉದ್ದೇಶವೂ ಅಲ್ಲ. ಆದರೆ ಬಹಳ ಸಲ ಇಂಥ ವಿದ್ವತ್ ಸಂಶೋಧನೆಗಳು ಕಥೆಯೊಂದು ಪುರಾಣಗಳಲ್ಲಿ ಹೇಗೆ ಬಂದಿದೆ, ಮಹಾಕಾವ್ಯಗಳಲ್ಲಿ ಹೇಗೆ ಬಂದಿದೆ, ಬ್ರಾಹ್ಮಣಗಳಲ್ಲಿ ಹೇಗಿದೆ -ಎಂಬಂಥ ತೌಲನಿಕ ವಿವರಣೆಗಳ ಮಟ್ಟದಲ್ಲೇ ನಿಂತುಬಿಡುತ್ತವೆ. ವಿಮಲ ಅವರ ಸಂಶೋಧನೆಯ ಉಪಯುಕ್ತ ಭಾಗವೆಂದರೆ, ಸಂಸ್ಕೃತದ ಉಪನಿಷತ್ತು, ಪುರಾಣ, ಮಹಾಕಾವ್ಯಗಳೊಗಿನ ಹರಿಶ್ಚಂದ್ರನ ಕಥೆಯು ಕನ್ನಡದ ರಾಘವಾಂಕ ಮತ್ತು ಪುತಿನ ಅವರಲ್ಲಿ ಹೇಗೆ ಹೊಸರೂಪ ಪಡೆದುಕೊಂಡು ವಿಶಿಷ್ಟವಾಗಿದೆ ಎಂಬ ಪರಿಶೀಲನೆಯಾಗಿದೆ.

ಆದರೆ ಶಿಸ್ತುಬದ್ಧ ಅಧ್ಯಯನವನ್ನು ಮೀರುವ, ಲೋಕಾಭಿರಾಮಶೈಲಿಯ ಸಂಶೋಧನೆ ಲೀಲಾವತಿ ತೋರಣಗಟ್ಟಿ ಅವರದು. ನಮ್ಮ ಸಂಸ್ಕೃತಿ ಸಾಹಿತ್ಯಗಳ ಸಂದರ್ಭದಲ್ಲಿ ಮೌಲಿಕವಾದ ವಿಶ್ಲೇಷಣೆಯನ್ನು ಶಿಸ್ತುಬದ್ಧವಲ್ಲದ ಅಧ್ಯಯನಗಳೂ ಕೊಡಲು ಸಾಧ್ಯವಿದೆ. ಆದರೆ ಲೀಲಾವತಿಯವರು ಭೈರಪ್ಪನವರ ಕಾದಂಬರಿಗಳ ಮೆಚ್ಚಿನ ಓದುಗರಾಗಿ, ಅಭಿಮಾನಿಯಾಗಿ ಈ ಬರವಣಿಗೆ ಮಾಡಿದ್ದಾರೆ "ಬಾಳಿನ ರಸಾನುಭೂತಿಯ ಭವಭೂತಿಯಾಗಬಲ್ಲ ಭೈರಪ್ಪನವರು ಅದರ ತತ್ವಮೀಮಾಂಸೆಯ ಸುಪ್ತಭಾಷ್ಯದ ಭೂಮಿತಿಯೂ ಆಗಬಲ್ಲರು "ಎಂಬ ರೀತಿಯ ವಿಶ್ಲೇಷಣೆಯು, ಮೊದಲ ಪುಟದಿಂದಲೇ ಕಾಣಸಿಗುತ್ತದೆ. ಈ ಪುಸ್ತಕದೊಳಗಿನ ಅನುಬಂಧಗಳು ತುಂಬಾ ಕುತೂಹಲಕರವಾಗಿವೆ. ಅದರಲ್ಲಿ ಭೈರಪ್ಪನವರ ಜತೆಗಿನ ಲೇಖಕಿಯ ಸಂದರ್ಶನವಿದೆ; ತಮ್ಮ ಓದುಗರ ಪ್ರಶ್ನೆಗಳಿಗೆ ಟಿವಿಯಲ್ಲಿ ಭೈರಪ್ಪನವರು ಕೊಟ್ಟ ಉತ್ತರಗಳು ಇದೆ;ಇನ್ನೂ ವಿಶೇಷವೆಂದರೆ, ಭೈರಪ್ಪನವರ ಒಬ್ಬ ವಿದ್ಯಾರ್ಥಿಗೆ ಹಾಗೂ ಅವರ ಕಾದಂಬರಿಗಳ ಪ್ರಕಾಶಕರಿಗೆ ಪ್ರಶ್ನೆಹಾಕಿ ಪಡೆದಿರುವ ಉತ್ತರಗಳು ಸ್ವಾರಸ್ಯಕರವಾಗಿವೆ. ಆದರೆ ಪಿಎಚ್.ಡಿ. ಪ್ರಬಂಧಗಳಲ್ಲಿ ಇಂಥ ಅನುಬಂಧಗಳಿಂದ ಏನೂ ಪ್ರಯೋಜನವಿಲ್ಲ. ಲೀಲಾವತಿಯವರ ದಿಢೀರ್ ಸಾವಿನನಂತರ ಭಾವುಕರಾದ ಅವರ ಬಂಧುಗಳು, ಅಭಿಮಾನದಿಂದ ಪ್ರಕಟಿಸಿರುವ ಕೃತಿಯಿದು. ಮುನ್ನುಡಿಯಲ್ಲಿ ಹಾ.ಮಾ.ನಾಯಕರು ಈ ಪ್ರಬಂಧದ ಮಿತಿಗಳನ್ನು ವಿಮರ್ಶಿಸಿದ್ದಾರೆ. ಜತೆಗೆ ಭೈರಪ್ಪನವರ ಕಾದಂಬರಿಗಳಿಗೆ ಬಂದಿರುವ ವಿಮರ್ಶೆಯಿಂದ ಬೇಸರಗೊಂಡು, 'ಭೈರಪ್ಪನವರು ಪ್ರತಿಗಾಮಿ ಅಲ್ಲ ' ಎಂದು ಅಭಿಮಾನದಿಂದ ಸಮರ್ಥಿಸಿದ್ದಾರೆ. ಆದರೆ ಸಂಬಂಧಪಟ್ಟ ಯಾವ ವಿಮರ್ಶೆಯನ್ನೂ ಖಚಿತವಾಗಿ ಉಲ್ಲೇಖಿಸದೆ ಮಗುಮ್ಮಾಗಿ ತಮ್ಮ ವಿರೋಧಗಳನ್ನು ದಾಖಲಿಸಿರುವುದರಿಂದ, ಸಂವಾದಕ್ಕೆ ಅವಕಾಶವೇ ಇಲ್ಲದಂತಾಗಿದೆ.

'ಉಪೇಕ್ಷಿತ' ವಿಷಯಗಳನ್ನು ಆರಿಸಿ ಸಂಶೋಧನೆಗೆ ತೊಡಗಿಸುವ ಕಲಬುರ್ಗಿಯವರ ಮಾರ್ಗದರ್ಶನದಲ್ಲಿ "ಕನ್ನಡ ಹಸ್ತಪ್ರತಿಗಳ ಅಧ್ಯಯನ"ವನ್ನು ಬಿ.ಕೆ. ಹಿರೇಮಠ ಮಾಡಿದ್ದಾರೆ. ಬಹಳ ಶ್ರಮದಿಂದ ಅವರು ಬಹಳಷ್ಟು ವಿಷಯಗಳನ್ನು ಕಲೆಹಾಕಿ, ವರ್ಗೀಕರಿಸಿದ್ದಾರೆ. ಸಾಹಿತ್ಯ ಬರೆಯುವ ಲೇಖಕನನ್ನು ಬಿಟ್ಟು ಹಸ್ತಪ್ರತಿಯನ್ನು ತಯಾರಿಸುವ ಹಿಂದೆ ಬಡಿಗ, ಲಿಪಿಕ, ಬರೆಪಕಾರ, ಲೋಹಕಾರ, ಚಿತ್ರಕಾರ - ಎಂದು ಹಲವು ಬಗೆಯ ಕೆಲಸಗಾರರು ದುಡಿಯುತ್ತಾರೆ. ಅವರ ನಿಪುಣತೆ, ಅವರ ಹತ್ಯಾರಗಳು, ಅವರ ದಣಿಗಳು —ಈ ಬಗ್ಗೆ ಎಷ್ಟೋ ವಿವರಗಳಿವೆ. ಈ ಕೃತಿಯ ಆಕರ್ಷಕ ಭಾಗವೆಂದರೆ, ಹಸ್ತಪ್ರತಿಗಳ ಚಿತ್ರವಿನ್ಯಾಸದ ಸುಂದರ ವರ್ಣಚಿತ್ರಗಳು. ಕೇವಲ ಪಂಡಿತರಿಗೆ ಮಾತ್ರ ರುಚಿಸುವ ಹಸ್ತಪ್ರತಿಗಳ ಅಧ್ಯಯನದಂಥ 'ಶುಷ್ಕ' ವಿಷಯವನ್ನೂ, ಸಾಂಸ್ಕೃತಿಕ ಕುತೂಹಲಗಳಿದ್ದರೆ, ನಮ್ಮ ಚರಿತ್ರೆಯ ಬಗ್ಗೆ ಒಳನೋಟಕೊಡಬಲ್ಲಂತೆ ಮಾಡಬಹುದು. ಉದಾ:ಕನಕನ'ರಾಮಧಾನ್ಯಚರಿತೆ'ಗೆ ಯಾಕೆ ಒಂದೇ ಒಂದು ಹಸ್ತಪ್ರತಿ ಸಿಗುತ್ತದೆ? ಎಂಬ ಪ್ರಶ್ನೆಯಾಗಬಹುದು; ಅಥವಾ ಹಲವಾರು 'ಆದಿಪುರಾಣದ' ಹಸ್ತಪ್ರತಿಗಳ ಎದುರು ಯಾಕೆ ಒಂದು-ಅರ್ಧ

'ಪಂಪಭಾರತ' ಸಿಗುತ್ತದೆಯೆಂಬ ಪ್ರಶ್ನೆಯಾಗಬಹುದು. ಆದರೆ ನಮ್ಮ ಸಂಶೋಧನೆಗಳು ಇನ್ನೂ ಮಾಹಿತಿ ಸಂಗ್ರಹದ ನೆಲೆಯನ್ನು ಬಿಟ್ಟುಹೊರಬರಲು ಸಾಧ್ಯವಾಗುತ್ತಿಲ್ಲ.

ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿರುವ ವಿ. ಶಿವಾನಂದ ಅವರು "ಶಬ್ದಮಣಿ ದರ್ಪಣದಲ್ಲಿ ಗ್ರಾಂಥಿಕ -ವ್ಯಾವಹಾರಿಕ ಶೈಲಿಗಳು :ಒಂದು ಸಮಾಜೋ ವಿಶ್ಲೇಷಣೆ "ಯನ್ನು ಮಾಡಿ, ಇದೇ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಕೇಶಿರಾಜನನ್ನು ಕುರಿತು, ಆರಂಭದಲ್ಲಿ ತುಂಬ ಅಭಿಮಾನದಿಂದ "ತೌಲನಿಕ ವ್ಯಾಕರಣಿಗಳಿಗೆ ತಲೆಮಣಿ" "ಸವ್ಯಸಾಚಿ" ಎಂಬ ಭಾಷೆಯಲ್ಲಿ ಕೊಂಡಾಡಿದ್ದಾರೆ. ಆದರೆ ಒಳಗೆ ಅಧ್ಯಯನದ ಹಂತ ದಲ್ಲಿ ಅವರು ತುಂಬ ಆಳವಾಗಿ, ಸೂಕ್ಷ್ಮವಾಗಿ ಮತ್ತು ಗಂಭೀರವಾಗಿ ಶಬ್ದಮಣಿ ದರ್ಪಣವನ್ನು ಅಧ್ಯಯನ ಮಾಡಿದ್ದಾರೆ. ಅವರು ಹೀಗೆ ತುಂಬ ಗಂಭೀರವಾಗಿ ತೆಗೆದುಕೊಂಡಿರುವುದೇ ಸ್ವಲ್ಪಮಟ್ಟಿನ ತೊಂದರೆಯಾಗಿದೆಯೋ ಏನೋ? ಏಕೆಂದರೆ ಬರವಣಿಗೆ ತುಂಬ ಶಾಸ್ತ್ರೀಯವಾಗಿ ಬಿಟ್ಟಿದೆ. ಭಾಷಾಶಾಸ್ತ್ರದಲ್ಲಿ ಕೆಲಸ ಮಾಡುವವರನ್ನೇ ಉದ್ದೇಶಿಸಿ ಬರೆದಿರುವಂತಿದೆ. ಇದರರ್ಥ ಅಧ್ಯಯನ ಸರಳೀಕರಣವಾಗಬೇಕೆಂದಲ್ಲ. ಸಮಾಜೋಭಾಷಿಕದಂಥ ತೀರ ಸಾಂಸ್ಕೃತಿಕ– ವಾಗಬೇಕಾದ ವಿಶ್ಲೇಷಣೆಯಾದರೂ ಶುಷ್ಕತೆಯನ್ನು ಮೀರದಿದ್ದರೆ ಹೇಗೆ ? ಪ್ರದಾತ್ಯ, ಪ್ರಶಾಸನೈಕ, ಪ್ರಜಾತಿ, ಪ್ರತ್ಯಯಿಕ ಪ್ರವೃದ್ಧಿ, ಧ್ವನಿಮೈಕ್ಯ, ದ್ವಿಕೀರ್ಣದಂಥ ಪರಿಭಾಷೆಗಳ ತೊಡಕು ಬೇರೆ. ಈ ಆಕ್ಷೇಪಣೆ - ಸಂವಹನವನ್ನು ಕುರಿತದ್ದು ಮಾತ್ರ.

ಎಂ.ಫಿಲ್. ಪದವಿಗೆ ಒಪ್ಪಿಸಿದ ಡೆಸರ್ಟೇಶನ್ ಬರೆಹಗಳೂ ಪ್ರಕಟವಾಗುತ್ತಿವೆ. ಇದಕ್ಕೆ ಚದುರಂಗ ಕಾದಂಬರಿಗಳ ಬಗೆಗಿನ ರಾಜಣ್ಣನವರ ಈ ಅಧ್ಯಯನವು ಪುರಾವೆಯಾಗಿದೆ. ರಾಜಣ್ಣ ಕಾದಂಬರಿಗಳನ್ನು ಚೆನ್ನಾಗಿ ಓದಿದ್ದಾರೆ ಮತ್ತು ಕತೆಯನ್ನು ಸಾರಾಂಶ ಮಾಡಿ ಚೆನ್ನಾಗಿ ಹೇಳುತ್ತಾರೆ. ಉದ್ದಕ್ಕೂ ಅವರಿವರ ಉದ್ಧರಣೆಗಳಿಂದ ತುಂಬಿರುವ ಈ ಬರೆಹದಲ್ಲಿ, ಸ್ವತಂತ್ರ ಆಲೋಚನೆಯ ಕುರುಹುಗಳೇ ಇಲ್ಲ. ಅಡಿಟಿಪ್ಪಣಿಗಳಲ್ಲಿ ಇಡೀ ಕೃತಿಯ ವಿವರಗಳನ್ನು ಪೂರ್ತಿಯಾಗಿ ಮತ್ತೆ ಮತ್ತೆ ಕೊಡುವುದನ್ನು ಕಂಡರೆ, ಅವರಿಗೆ ಅಧ್ಯಯನದ ಮೂಲಶಿಸ್ತು ಕೂಡ ಇದ್ದಂತಿಲ್ಲ.

ಈ ಸಲ ಕನ್ನಡ ಭಾಷಾಶಾಸ್ತ್ರ ಮತ್ತು ಹಸ್ತಪ್ರತಿಶಾಸ್ತ್ರದ ಮೇಲೆ ಕೆಲವು ಕೃತಿಗಳು ಪ್ರಕಟವಾಗಿವೆ.ಅವೆಂದರೆ, ಪಾವೆಂ ಅವರ 'ಪದಾರ್ಥ ಚಿಂತಾಮಣಿ' (ಭಾಗ ೨) ಸಾ.ಶಿ. ಮರುಳಯ್ಯನವರ 'ಕನ್ನಡ ಭಾಷಾಚರಿತ್ರೆ' ಮತ್ತು ಬಿ.ಎಸ್. ಸಣ್ಣಯ್ಯನವರ 'ಹಸ್ತಪ್ರತಿಶಾಸ್ತ್ರ'.

ಯಾವುದೇ ವಿಶ್ವವಿದ್ಯಾಲಯಗಳಲ್ಲಿರದೆ ಕೇವಲ ಒಂದು ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಪಾವೆಂ. ಆಚಾರ್ಯ, ಶಬ್ದಗಳ ಬೆನ್ನುಹತ್ತಿಹೋಗಿ ಅದರ ಮೂಲಶೋಧನೆ ಮಾಡುವ ತಮ್ಮ ಹುಚ್ಚಿನ ಪರಿಣಾಮವಾಗಿ, ಕನ್ನಡ ಭಾಷಾಶಾಸ್ತ್ರಕ್ಕೆ ಕೊಟ್ಟಿರುವ ಮುಖ್ಯ ಕೊಡುಗೆಯಂತೆ 'ಪದಾರ್ಥ ಚಿಂತಾಮಣಿ'ಯ ಸಂಪುಟಗಳಿವೆ.

ಶಬ್ದದ ಮೂಲಹುಡುಕುವ ಛಲದ ಹಿಂದೆ ಅಪಾರವಾದ ವಿದ್ವತ್ತೂ ಮತ್ತು ಬದುಕಿನ - ಸಾಹಿತ್ಯಕೃತಿಗಳ ಆಳವಾದ ಪರಿಚಯವೂ ಇರುವುದರಿಂದ, ಪಾವೆಂ ಅವರ ಶೋಧನೆ ಬರಿಯ ಪಾಂಡಿತ್ಯದ ಕೆಲಸವಾಗಿಲ್ಲ. ಸಂಸ್ಕೃತಿಯ ಶೋಧನೆಯೂ ಅಗಿದೆ. ಸಂಸ್ಕೃತ, ಪಾರ್ಸಿ, ಲ್ಯಾಟಿನ್, ಇಂಗ್ಲಿಷ್, ಕನ್ನಡ, ಉರ್ದು - ಹೀಗೆ ಬಹುಭಾಷೆಗಳ ಅರಿವಿನಿಂದ ಈ ಕೆಲಸ ಮಾಡಿದ್ದರೂ, ಸಾಮಾನ್ಯ ಓದುಗರಿಗೂ ಪ್ರಿಯವಾಗುವಂತೆ ಆಕರ್ಷಕವಾದ ರೀತಿಯಲ್ಲಿ ಬರೆವಣಿಗೆಯಿದೆ. ಇದು ಪಾವೆಂಗೆ ಸಾಧ್ಯವಾಗಿರುವುದು, ಅವರ ಪತ್ರಿಕೆಯ ಮನೋಧರ್ಮದಿಂದಾಗಿ. ಒಂದು ಶಬ್ದ ಹಿಡಿದುಕೊಂಡು, ಒಂದು ಪ್ರದೇಶದ ಮತ್ತು ಅದರ ಸಂಸ್ಕೃತಿಯ ಸಣ್ಣ ಇತಿಹಾಸವನ್ನೇ ಕಟ್ಟಿಕೊಡುವ ಈ ಸಂಶೋಧನೆಯ ಪರಿ, ಅನನ್ಯವಾದುದಾಗಿದೆ. (ಉದಾ: 'ನಂಬ್ರು' ಶಬ್ದ) ಈ ಪುಸ್ತಕ ಓದಿದಾಗ ಅನಿಸುವುದು. ಹೀಗೆ:ಭಾಷಾಶಾಸ್ತ್ರಕೂಡ, ಇಂಡಿಯಾದ ಸಾಂಸ್ಕೃತಿಕ ಸಂಕರದ ಚರಿತ್ರೆಯನ್ನು ಬರೆಯಲು, ಅಂದರೆ ಒಂದು ನಾಡಿನ ಅಥವಾ ಜಗತ್ತಿನ ಭಾಷೆಗಳು ಒಂದಕ್ಕೊಂದು ಕೊಡುಕೊಳು ಮೂಲಕ ಹೇಗೆ ಸಾಂಸ್ಕೃತಿಕ ಸಮನ್ವಯವನ್ನು ಸಾಧಿಸಿವೆ ಎಂದು ತೋರಲು, ಒಂದು ಸಾಧನ ಆಗಬಲ್ಲದು ಎಂದು. ಸಂಕರವೇ ಒಂದು ಸಂಸ್ಕೃತಿಯ ಬಲತಾನೇ?

ಪಾವೆಂ.ಗೆ ಹೋಲಿಸಿದರೆ ಸಾ.ಶಿ. ಮರುಳಯ್ಯನವರ 'ಕನ್ನಡ ಭಾಷಾಚರಿತ್ರೆ'ಯ ಪುಸ್ತಕದ ಸ್ವರೂಪ ಹೇಗೆ ಭಿನ್ನವೆಂದು ಗೊತ್ತಾಗುತ್ತದೆ. ಇಲ್ಲಿ ಹೊಸ ಹೊಳಹು ಇಲ್ಲ, ವಿದ್ವತ್ತಿನ ಬೆಳಕು ಇಲ್ಲ. ಪಾಠಮಾಡಲು ಇಟ್ಟುಕೊಂಡಿರುವ ಅಧ್ಯಾಪಕನ ಟಿಪ್ಪಣಿಗಳಂತೆ ಈ ಪುಸ್ತಕವಿದೆ. ವಿದ್ಯಾರ್ಥಿಗಳಿಗೆ ಕನ್ನಡ ಭಾಷಾಚರಿತ್ರೆಯ ಬಗ್ಗೆ ತಿಳಿಯಲು ಕಲೆ ಹಾಕಿದ ವಿವರಗಳನ್ನುಳ್ಳ ಪುಸ್ತಕವಿದು. ಪುಸ್ತಕದ ಹಿಂದೆ ಅಚ್ಚಾಗಿರುವ ಐಎಎಸ್. ಪರೀಕ್ಷೆಯ ಹಳೇ ಪ್ರಶ್ನೆಪತ್ರಿಕೆಗಳೂ ಇದನ್ನು ಖಚಿತಪಡಿಸುತ್ತವೆ; ಬಿ.ಎಸ್. ಸಣ್ಣಯ್ಯನವರ 'ಹಸ್ತಪ್ರತಿಶಾಸ್ತ್ರ' ಕೂಡ, ಪರಿಚಯಾತ್ಮಕ ಸ್ವರೂಪವುಳ್ಳ ಪಠ್ಯಪುಸ್ತಕ ಮಾದರಿಯ ಪುಸ್ತಕ. ಈ ಶಾಸ್ತ್ರದಲ್ಲಿ ಆಸಕ್ತಿಯುಳ್ಳ ಹೊಸಬರು ಹಸ್ತಪ್ರತಿಗಳ ಚರಿತ್ರೆಯನ್ನು ತಿಳಿಯಲು ಉಪಯುಕ್ತವಾಗಿರುವಂಥ ಪುಸ್ತಕ.

ಎಚ್.ಜೆ. ಲಕ್ಕಪ್ಪಗೌಡರು ಸುಮಾರು ಎರಡು ದಶಕಗಳಷ್ಟು ಕಾಲದ ಅಧ್ಯಯನದಿಂದ ರಚಿಸಿರುವ 'ಶ್ರೀರಾಮಾಯಣದರ್ಶನಂ: ಒಂದು ವಿಮರ್ಶಾತ್ಮಕ ಅಧ್ಯಯನ'ವು, ೯೦೦ ಪುಟಗಳ, ನಿಜಕ್ಕೂ 'ಮಹಾ' ಪ್ರಬಂಧವಾಗಿದೆ. ಮುನ್ನುಡಿಯಲ್ಲಿ ದೇಜಗೌ ಅವರು ಇದನ್ನು 'ಮಹಾಭಾಷ್ಯ'ವೆಂತಲೂ,'ಶ್ರೀರಾಮಾಯಣದರ್ಶನಂ' ಅಧ್ಯಯನಕ್ಕೆ companion volume ಎಂತಲೂ ಕರೆದಿದ್ದಾರೆ. ಈ ಪ್ರಬಂಧ ರಚನೆಗಾಗಿ ಲಕ್ಕಪ್ಪಗೌಡರು ವಿಸ್ತಾರವಾದ ಅಧ್ಯಯನ ಮಾಡಿದ್ದಾರೆ; ಎಂತಲೇ ಜೈನ -ಬೌದ್ಧ ರಾಮಾಯಣಗಳು, ಜನಪದ ರಾಮಾಯಣ, ಕಂಬ-ತುಳಸೀ ರಾಮಾಯಣ, ಕನ್ನಡದ ನಾಗಚಂದ್ರ ತೊರವೆಯರ ರಾಮಾಯಣಗಳು - ಹೀಗೆ ವಿಭಿನ್ನ ಸಂಪ್ರದಾಯ-ಭಾಷೆಗಳ ರಾಮಾಯಣಗಳನ್ನು ಹೋಲಿಸುತ್ತ, ಇದನ್ನೊಂದು ತೌಲನಿಕ

ಅಧ್ಯಯನವನ್ನಾಗಿ ಮಾಡಿದ್ದಾರೆ. ಆದರೆ ಈ ಅಧ್ಯಯನದ ಮುಖ್ಯ ಒಲವು ವಾಲ್ಮೀಕಿಯ ರಾಮಾಯಣದೊಂದಿಗೆ ಹೋಲಿಸುತ್ತ ಕನ್ನಡದ 'ರಾಮಾಯಣದರ್ಶನಂ'ನ ವಿಶೇಷತೆಯನ್ನು ಗುರುತಿಸುವುದೇ ಆಗಿದೆ; 'ರಾಮಾಯಣ ದರ್ಶನಂ'ನ ಪಾತ್ರಗಳು, ದರ್ಶನ, ಶೈಲಿ, ರೂಪಕ-ಉಪಮೆ ಹೀಗೆ ಸವಿವರವಾಗಿ ಇಲ್ಲಿ ಕಾವ್ಯ ಪರಿಶೀಲನೆ ಮಾಡಲಾಗಿದೆ.

ರಾಮಾಯಣದರ್ಶನಂ ಬಗ್ಗೆ ತುಂಬ ಪ್ರೀತಿ ಮತ್ತು ವಿಸ್ಮಯಭಾವ ತಳೆಯಲಾಗಿರುವುದರಿಂದ, ಕೃತಿಯಯನ್ನು ಸಹೃದಯರಿಗೆ ಅರ್ಥೈಸುವಂಥ ಧಾಟಿಯೊಂದು ಇಲ್ಲಿ ರೂಪಗೊಂಡಿದೆ. ಭಾಷೆನೇರವಾಗಿ, ಸ್ಪಷ್ಟವಾಗಿದೆ; ಭಾವಾವೇಶದಿಂದ ಕೂಡಿದೆ. ಹೀಗಾಗಿ ಕೃತಿ ಕುರಿತ ಭಾವನಾತ್ಮಕ ಸ್ಪರ್ಶದಿಂದ ಬಿಡಿಸಿಕೊಳ್ಳಲು ಆಗದೆ ವಿವರಣೆ ಮತ್ತು ಸಮರ್ಥನೆಯಲ್ಲಿ ಮಗ್ನವಾಗಿಬಿಡುವಂತಾಗಿದೆ. ಅಂದರೆ ಕೆಲವೊಮ್ಮೆ ವಿಮರ್ಶನಾದೂರವನ್ನೂ ನಿಷ್ಠುರವಾದ ನಿಲುವನ್ನೂ ತಳೆಯಲು ಆಗದೆ ಹೋಗಿದೆ. ಉದಾ: 'ಶ್ರೀ ರಾಮಾಯಣ ದರ್ಶನಂ'ನಲ್ಲಿರುವ ಕರ್ಮವಾದ -ವಿಧಿವಾದದ ಚರ್ಚೆಯ ಸಂದರ್ಭ. ಆದರೆ ಈ ಸಮರ್ಥನೆಯನ್ನು ಕೃತಿಯೊಳಗೇನಿಂತು ಮಾಡಲಾಗಿದೆ ಎಂಬುದು ನಿಜ. ದೇಜಗೌ, ಸುಜನಾ, ತಿಪ್ಪೇರುದ್ರಸ್ವಾಮಿಯವರ ಕುವೆಂಪು ಕುರಿತ ಬರೆಹಗಳನ್ನು ಹೆಚ್ಚು ಉಲ್ಲೇಖಿಸಲಾಗಿರುವುದರ ಕಾರಣ ಕೂಡ ಇಲ್ಲಿ ಸ್ಪಷ್ಟವಾಗಿದೆ. ನಮ್ಮ ಈ ಕಾಲದ ಬದುಕಿಗೆ, ಪ್ರಶ್ನೆಗಳಿಗೆ, ಕುವೆಂಪು ಅವರ ವಿಧಿ-ಕರ್ಮಗಳ ಮರುವ್ಯಾಖ್ಯಾನಿತ ರೂಪಾಂತರಗಳ ಪ್ರಸ್ತುತತೆಯೇನು? ಸರ್ವೋದಯ ಸಮನ್ವಯಪೂರ್ಣದೃಷ್ಟಿಯಂಥ ಆದರ್ಶಗಳು ವಾಸ್ತವದಲ್ಲಿ ಹೇಗೆ ಸಲ್ಲುತ್ತವೆ? ಇದು ನಮ್ಮೆದುರಿನ ಸಮಸ್ಯೆ.

ಈ ಪ್ರಬಂಧದ ಮುಖ್ಯ ಭಾಗಗಳಾಗಿರುವ ಕೊನೆಯ ಅಧ್ಯಾಯಗಳಲ್ಲಿ ಲಕ್ಕಪ್ಪಗೌಡರು, ಮೇಲಿನ ಪ್ರಶ್ನೆಗಳಿಗೆ ಉತ್ತರಿಸುವಂತೆ 'ಶ್ರೀ ರಾಮಾಯಣದರ್ಶನಂ', ವಿಶ್ಲೇಷಣೆಯನ್ನು ಮಾಡಿದ್ದಾರೆ;ಬಹಳ ಶ್ರದ್ಧೆ ಮತ್ತು ಶ್ರಮಗಳಿಂದ ಸಿದ್ಧವಾಗಿರುವ ಈ ಕೃತಿ, ಕನ್ನಡದ 'ಶ್ರೀ ರಾಮಾಯಣದರ್ಶನಂ'ಹೇಗೆ ಜಗತ್ತಿನ ಮಹಾಕಾವ್ಯಗಳ ಸಾಲಿಗೆ ಸೇರುವಂಥದ್ದು ಎಂಬುದನ್ನು ಪಾಶ್ಚಾತ್ಯ ಮಹಾಕಾವ್ಯಗಳ ಜತೆಗಿಟ್ಟು ಸಾಧಿಸುತ್ತದೆ.

೩

ಈ ವರ್ಷದ ಸಂಶೋಧನೆಯ ಪುಸ್ತಕಗಳನ್ನು ಗಮನಿಸಿದಾಗ ಕಂಡುದಿಷ್ಟು:

೧. ಶೈಕ್ಷಣಿಕವಾದ ಚರ್ಚೆಗಳಲ್ಲಿ ಬರದಂಥ ಎಷ್ಟೋ ವಿದ್ವಾಂಸರು, ತಮ್ಮ ಸ್ವಂತ ಶ್ರಮ ಮತ್ತು ಶ್ರದ್ಧೆಗಳಿಂದ ನಿಜವಾದ ಸಂಶೋಧನೆಯನ್ನು ನಡೆಸುತ್ತಿರುವುದು: ಆದರೆ ವಿಶ್ವವಿದ್ಯಾಲಯಗಳ ಶಿಸ್ತಿನಲ್ಲಿ ನಡೆದ ಎಷ್ಟೋ ಸಂಶೋಧನಾ ಪ್ರಕಟಣೆಗಳಲ್ಲಿ ಅಮೂಲ್ಯವಾದ ಸಂಗತಿಗಳಿಲ್ಲದಿರುವುದು.

೨. ಮರೆಗೆ ಸಂದ ಅಜ್ಞಾತಚರಿತ್ರೆಯ ತುಣುಕುಗಳನ್ನು ಆರಿಸಿಕೊಂಡು ಸಂಶೋಧನೆ ನಡೆಸಬೇಕೆಂಬ ಪ್ರಜ್ಞೆ ಮೂಡುತ್ತಿರುವುದು ಹಾಗೂ ಸಂಶೋಧನೆ ಮತ್ತು ಸಮುದಾಯದ ಸಂಬಂಧಗಳಲ್ಲಿ ಹುಟ್ಟುತ್ತಿರುವ ಸಂಘರ್ಷಗಳ ಬಗ್ಗೆ, ಅಂದರೆ ಸಂಶೋಧಕರು ಮತ್ತೀಯ ಸೂಕ್ಷ್ಮ ಪರಿಸ್ಥಿತಿಗಳಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳ ಬಗ್ಗೆ ಚಿಂತನೆ ನಡೆದಿರುವುದು.

೩. ವಿಷಯ ಕಲೆಹಾಕಿ, ಪಠ್ಯಪುಸ್ತಕವಾಗಿಯೋ ಪರೀಕ್ಷೆಯ ಗೈಡುಗಳಾಗಿಯೋ ಶಾಸ್ತ್ರಗಳ ಮಾಹಿತಿಗಳನ್ನು ಪ್ರಕಟಿಸುವುದು ಒಂದು ಕಡೆ ಇದ್ದರೆ, ವಿದ್ಯಾರ್ಥಿಗಳನ್ನುದ್ದೇಶಿಸಿದಂತೆ ಬರೆದರೂ ಸಂಶೋಧನೆಯ ಕ್ಷೇತ್ರಕ್ಕೆ ಮೌಲಿಕವಾದ ಚಿಂತನೆಯನ್ನು ಸೇರಿಸುತ್ತಿರುವುದು ಇನ್ನೊಂದು ಕಡೆ ಇದೆ.

೪. ಒಳ್ಳೆಯ ಒಳ ನೋಟಗಳನ್ನುಳ್ಳ ಒಂದು ಲೇಖನಕ್ಕೂ ಸರಿಸಾಟಿಯಿಲ್ಲದಂಥ, ಪದವಿಗಾಗಿ ಮಾಡುವ ಅಧ್ಯಯನಗಳು ಅನಗತ್ಯವಾಗಿ ಪ್ರಕಟವಾಗುತ್ತಿರುವುದು.

೫. ಪಿಎಚ್.ಡಿ. ಅಧ್ಯಯನಗಳಿಗೂ ಗಾತ್ರಕ್ಕೂ ಇರುವ ಬಹಳ ಹಳೆಯನಂಟು ಇನ್ನೂ ತಪ್ಪಿಲ್ಲದಿರುವುದು.

೬. ಸಾಹಿತ್ಯಕ ಅಧ್ಯಯನಗಳಲ್ಲಿರುವ ಚರಿತ್ರೆಯ ಗ್ರಹಿಕೆಯು, ಇನ್ನೂ ವೈಭವೀಕರಣದ ಮತ್ತೀಯ ಆಳುವರ್ಗದ ನೆಲೆಯ ಗ್ರಹಿಕೆಗಳನ್ನು ಬಿಟ್ಟುಕೊಡದಿರುವುದು.

●

* * *

ಅಭಿನಂದನ ಮತ್ತು ಸಂಸ್ಮರಣ ಕೃತಿಗಳು

— ಚಲಪತಿ. ಆರ್

ವ್ಯಕ್ತಿ ಅಥವಾ ವ್ಯಕ್ತಿಗಳ ಸಾಧನೆ ಸ್ನೇಹಿತರು, ಶಿಷ್ಯರು, ಬಂಧುಗಳು ಇವರ ಅಭಿಮಾನಕ್ಕೆ ಕಾರಣವಾಗಿ 'ಅಭಿನಂದನೆ' 'ಸಂಸ್ಮರಣೆ' ಯಂಥ ಗ್ರಂಥಗಳು ಬರುತ್ತವೆ. ಇದಕ್ಕೆ ಕನ್ನಡದ ಸಂದರ್ಭದಲ್ಲಿ ದಶಕಗಳ ಚರಿತ್ರೆಯೇ ಇದೆ. ೧೯೯೨ನೇ ಸಾಲಿನಲ್ಲಿ ಅಭಿನಂದನ ಗ್ರಂಥಗಳು ಹೆಚ್ಚಿಗೆ ಬಂದಂತೆ ತೋರುವುದಿಲ್ಲ. ನನ್ನ ಗಮನಕ್ಕೆ ಬಂದಿರುವ ಹಾ.ಮಾ. ನಾಯಕರಿಗೆ ಅರವತ್ತು ತುಂಬಿದಾಗ ತಂದಿರುವ 'ಮಾನ' ಅಕಬರ ಅಲಿಯವರ ಷಷ್ಟಬ್ದಿಯ ಕಾರಣದಿಂದ ರೂಪುಗೊಂಡ "ಅಕಬರ ಅಲಿ ಜೀವನ-ಸಾಹಿತ್ಯ" ಮುಖ್ಯವಾದವುಗಳು ಇದರ ಜೊತೆಗೆ ಮತ್ತು ಪುತ್ತೂರು ತಾಲ್ಲೂಕಿನ ಸಾಂಸ್ಕೃತಿಕ ವ್ಯಕ್ತಿಗಳನ್ನು ಕುರಿತಂತೆ ದಕ್ಷಿಣ ಕನ್ನಡ ಜಿಲ್ಲಾ ಐದನೇ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ (೧೯೯೨) ಹೊರ ಬಂದ 'ಅಭಿಮಾನ' ಸಂಸ್ಮರಣ ಗ್ರಂಥ.

ಎಸ್.ಎಲ್. ಭೈರಪ್ಪ, ಜೆ.ಆರ್. ಲಕ್ಷ್ಮಣರಾವ್, ಪ್ರಧಾನ ಗುರುದತ್ತ ಇವರ ಸಂಪಾದಕತ್ವದಲ್ಲಿ ರೂಪುಗೊಂಡದ್ದು 'ಮಾನ' ಇದರ ಮೊದಲ ಭಾಗದಲ್ಲಿ ಹಾರೈಕೆಯ ರೂಪದಲ್ಲಿನ ನಾಲ್ಕು ಜನ ಹಿರಿಯರ ಮಾತುಗಳನ್ನು ಹೊರತು ಮಾಡಿದರೆ ಒಟ್ಟು ಐವತ್ತೆರಡು ಲೇಖನಗಳಿವೆ. ಇದು ಐದು ಭಾಗಗಳಲ್ಲಿ ಸಂಕಲನಗೊಂಡಿರುವ ಎಂಟನೂರು ಪುಟಗಳ ಬೃಹದ್ಗ್ರಂಥ.

ವ್ಯಕ್ತಿ-ಕೃತಿ ಭಾಗದ ಮೊದಲೆರಡು ಮತ್ತು ಕೊನೆಯ ಒಂದು ಲೇಖನಗಳು ನಾಯಕರ ವ್ಯಕ್ತಿತ್ವದ ಹಿರಿಮೆಯನ್ನೊಳಗೊಂಡಿವೆ. ಈ ಭಾಗದ ಉಳಿದ ಐದು ಲೇಖನಗಳು ಅವರ ಸಾಹಿತ್ಯ, ಸಾಹಿತ್ಯ ವಿಮರ್ಶೆ, ವೈಚಾರಿಕತೆ, ಜಾನಪದ ಅಧ್ಯಯನವನ್ನು ಕುರಿತಂತೆ ಬರೆದಿರುವ ವಿಮರ್ಶಾ -ಸಮೀಕ್ಷಾ ರೂಪದವು. ಎಂ.ಎಚ್. ಕೃಷ್ಣಯ್ಯನವರ ಲೇಖನ, ಹಾಮಾನಾ ಅವರ ವೈಚಾರಿಕ ಲೇಖನಗಳು ಮತ್ತು ಸಾಹಿತ್ಯ ವಿಮರ್ಶೆಯ ಕೃತಿಗಳನ್ನು ಪರಿಚಯ ಮಾಡಿಕೊಡುತ್ತದೆ. ಇಲ್ಲಿ, ವೈಚಾರಿಕ ಸಾಹಿತ್ಯಕ್ಕೆ

ಅರ್ಥಪೂರ್ಣ ಕಾಣಿಕೆಯನ್ನು ನೀಡಿರುವ, ನೀಡುತ್ತಾ ಬಂದಿರುವ - ಹಾಮಾನಾ ಅವರು ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿರುವುದನ್ನು ಗುರ್ತಿಸಿದ್ದಾರೆ, ಅ.ರಾ. ಮಿತ್ರ 'ಲಲಿತ ಪ್ರಬಂಧ ನಾಯಕರು' ಲೇಖನದಲ್ಲಿ ಹಾಮಾನಾ ರ ಪ್ರಬಂಧ ಶೈಲಿಯನ್ನು ಗುರ್ತಿಸಲು ಬಳಸುತ್ತಾರೆ. ಬಹಳ ಮುಖ್ಯವಾಗಿ ಈ ಭಾಗದಲ್ಲಿ ಗಮನಿಸಬೇಕಾದ ಲೇಖನ ಹೆಚ್.ಎಸ್. ರಾಘವೇಂದ್ರರಾವ್ ಅವರ 'ಹಾಮಾನಾ ಅವರ ಅಂಕಣ ಬರವಣಿಗೆ ಕೆಲವು ಆಲೋಚನೆಗಳು'. "ಮನರಂಜನೆ, ಮಾಹಿತಿ - ಸಂಸ್ಕೃತಿ ಪ್ರಕಾರಗಳನ್ನು ತಮ್ಮ ಮೂಲ ನೆಲೆಗಳಾಗಿ ಹೊಂದಿರುವ ನಿಯತಕಾಲಿಕೆಗಳ ಒಟ್ಟು ಸಂದರ್ಭದಲ್ಲಿ ಅಂಕಣ ಬರಹಕ್ಕೆ ತನ್ನದೆ ಆದ ಕೆಲವು ಆಯಾಮಗಳು, ತುರ್ತುಗಳು ಮತ್ತು ಮಿತಿಗಳು ಪ್ರಾಪ್ತವಾಗುತ್ತವೆ. ಪುಸ್ತಕದಂಥ ತಣ್ಣನೆಯ ಮಾಧ್ಯಮದಲ್ಲಿ (cold medium) ಪ್ರಕಟವಾಗುವ ಲೇಖನವು ವ್ಯವಧಾನವನ್ನು ತಾನು ಬಯಸುತ್ತದೆ. ಓದುಗನಿಗೆ ನೀಡುತ್ತದೆ. ಓದುಗನ ಕಾಲಕ್ಕಾಗಿ ಪೈಪೋಟಿ ನಡೆಸುವ, ಅವನನ್ನು ಒಲಿಸಿ ಓದಿಸಿಕೊಳ್ಳುವ ದರ್ದು ಅದಕ್ಕೆ ಇರುವುದಿಲ್ಲ" ಎಂದು ಒಟ್ಟಾರೆ ಅಂಕಣ ಸಾಹಿತ್ಯವನ್ನು ಆ ಮೂಲಕ ಹಾಮಾನಾ ಅವರ ಅಂಕಣ ಸಾಹಿತ್ಯದ ವ್ಯಾಪಕತೆ-ಮಿತಿಗಳನ್ನು ಗುರ್ತಿಸಿ ಗಮನ ಸೆಳೆಯುತ್ತದೆ.

ಎರಡನೆಯ ಭಾಗ 'ಉನ್ನತ ಶಿಕ್ಷಣ' ಈ ಭಾಗದಲ್ಲಿ ಶಿಕ್ಷಣ, ಭಾಷೆಯ ಆತಂಕ ಕುರಿತ ಚಿಂತನೆ ನಡೆದಿದೆ. ಇಲ್ಲಿನ ಬಹಳಷ್ಟು ಲೇಖನಗಳು ಉನ್ನತ ಶಿಕ್ಷಣದ ಸೈದ್ಧಾಂತಿಕ ನೆಲೆಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಇರಬೇಕಾದ ಅಧ್ಯಾಪಕ–ವಿದ್ಯಾರ್ಥಿ ಆಡಳಿತವರ್ಗ ಈ ಅಂಶಗಳ ಮೇಲೆ ಒತ್ತುಕೊಟ್ಟು ಬರೆದಿರುವಂತಹವು. ಇವತ್ತಿನ ಸಂದರ್ಭದಲ್ಲಿ ಎ.ಎನ್. ಮೂರ್ತಿರಾವ್, ವಿ.ಕೃ. ಗೋಕಾಕ ಮೊದಲಾದ ಲೇಖಕರ ಉನ್ನತ ಶಿಕ್ಷಣವನ್ನು ಕುರಿತ ಇಲ್ಲಿನ ಚಿಂತನೆಗಳು ಇವತ್ತಿನ ವ್ಯವಸ್ಥೆಯ ಹಿನ್ನೆಲೆಯಲ್ಲಿ ರೂಪಳಗೊಳ್ಳಬೇಕಾದ ಶಿಕ್ಷಣ ಕ್ರಮವನ್ನು ಕುರಿತಂತೆ ಸೈದ್ಧಾಂತಿಕವಾಗಿ ನಿರೂಪಿಸಲು ಪ್ರಯತ್ನಿಸಿವೆ. "ಪ್ರಗತಿಪರ ಶಿಕ್ಷಣವನ್ನು ಕುರಿತಂತೆ" rules ಇಲ್ಲವೆ ನಿಯಮಗಳು, ಇಲ್ಲವೆ do's and dont's ಹಾಗೆ ಕಲಿಸದೆ ಆ ವಿಷಯಕ್ಕೂ ಸುತ್ತಣ ದೃಷ್ಟಿ ಹಾಗೂ ಸಮಾಜಗಳಿಗೂ ಒಳಗೊಳಗೆ ಆಳವಾಗಿ ಇರುವ ಸಂಬಂಧವನ್ನು ತೋರಿಸಿಕೊಡುವುದು" ಪ್ರಗತಿಪರ ಶಿಕ್ಷಣದ ಮುಖ್ಯ ಲಕ್ಷಣವಾಗಲೇಬೇಕೆನ್ನುವ (ಪ್ರಗತಿಪರ ಶಿಕ್ಷಣ) : ವಿ.ಕೃ. ಗೋಕಾಕ್ ಮಾತುಗಳು ಮುಖ್ಯವೆನಿಸುತ್ತವೆ. ಇಂದಿನ ರಾಜಕೀಯ ವ್ಯವಸ್ಥೆಯ ಕಾರಣದಿಂದ ಹದಗೆಟ್ಟ ಶಿಕ್ಷಣ ವ್ಯವಸ್ಥೆಯ ಬಗೆಗಿರುವ ಅಸಮಾಧಾನ - ಇಲ್ಲಿನ ಇಂಗ್ಲಿಷ್ ಲೇಖನಗಳೂ ಸೇರಿದಂತೆ ಒಂದೇ ಆಗಿದೆ. ಇಂಗ್ಲಿಷರ ಕಾಲದಿಂದ ಇಲ್ಲಿಯ ತನಕ ನಮ್ಮ ಶಿಕ್ಷಣ ವ್ಯವಸ್ಥೆ ರೂಪುಗೊಂಡ ಚರಿತ್ರೆಯನ್ನೇ ಸಿ.ಜಿ. ವೆಂಕಟರಮಣಶೆಟ್ಟಿ ವಿವರಿಸಿದ್ದಾರೆ. ಈ ವಿಭಾಗದಲ್ಲಿ ಎಚ್.ವೈ. ಶಾರದಾ ಪ್ರಸಾದ್‌ರ 'ಕನ್ನಡದ ಹೊನ್ನು ಹಂಚುವ ಹಾದಿ' ಇಂಗ್ಲಿಷ್ ಭಾಷೆಯ ಒತ್ತಡದಿಂದಾಗಿ ಕನ್ನಡ ಭಾಷೆಯ (ಭಾರತೀಯ ಭಾಷೆಗಳ) ಅವಸ್ಥೆಯ ಕಾರಣಗಳನ್ನು ಹುಡುಕುವ ಪ್ರಯತ್ನ ಮುಖ್ಯವಾಗಿರುತ್ತದೆ. ಸ್ವಾತಂತ್ರ್ಯಾನಂತರವೂ ಇಂಗ್ಲಿಷ್‌ನ ಹೆಚ್ಚಳವನ್ನು ಗುರ್ತಿಸುತ್ತಾ ಅದರಿಂದ

ತಪ್ಪಿಸಿಕೊಳ್ಳಲು "ಕನ್ನಡದ ಕವಿಗಳ ಖ್ಯಾತಿ ಮಿಕ್ಕ ಭಾರತೀಯ ಭಾಷೆಗಳಲ್ಲಿ ಹರಡಬೇಕಾದರೆ, ಆ ಕೆಲಸ ನಾವು ಬಂಗಾಳೀ, ಹಿಂದೀ, ಗುಜರಾತಿ ಕಲಿಯುವುದರ ಮೂಲಕ ಅಥವಾ ಆಯಾ ಭಾಷೆಗಳವರು ಕನ್ನಡ ಕಲಿಯುವುದರ ಮೂಲಕ; ಹೆಚ್ಚು ಸಫಲವಾಗಿ ನಡೆಯುತ್ತದೆ. ಎಲ್ಲರೂ ಎಲ್ಲವನ್ನು ಇಂಗ್ಲಿಷ್‌ಗೆ ಹಚ್ಚಬೇಕಾಗಿಲ್ಲ.

ನಮ್ಮ ದೇಶದಲ್ಲಿ Social mobility ಹೆಚ್ಚಿದೆ; ಹೆಚ್ಚುತ್ತಿದೆ. ಆದ್ದರಿಂದ ಅಂತಃಪ್ರಾಂತೀಯ ಸಾಂಸ್ಕೃತಿಕ ವಿನಿಮಯ ಗಗನಕುಸುಮವಲ್ಲ, ಸಾಧ್ಯ ಎನ್ನುವ ಎಚ್ಚರಿಕೆ ಮತ್ತು ಭರವಸೆ ನಮ್ಮ ಭಾಷಿಕ ಆತಂಕಗಳನ್ನು ಕಡಿಮೆ ಮಾಡಿಕೊಳ್ಳುವ ದಾರಿಯನ್ನು ಹೇಳುತ್ತದೆ.

ಭಾಗ ಮೂರು 'ಸಂಶೋಧನ' ಲೇಖನಗಳು. ಹಂಪಿಯಲ್ಲಿ ಹರಿಹರ ವಾಸವಾಗಿದ್ದ ನಿವೇಶನ ಮತ್ತು ಅವನು ಹೂಗಳನ್ನು ತರುತ್ತಿದ್ದ ಹೂದೋಟದ ಪ್ರದೇಶಗಳನ್ನು ಕಲ್ಪಿಸಿಕೊಳ್ಳಲೆಂದು ಚರ್ಚಿಸಿರುವ ಎಂ. ಚಿದಾನಂದಮೂರ್ತಿಯವರ "ಮನ್ಮಥತೀರ್ಥ ಮತ್ತು ಹರಿಹರನ ಹೂದೋಟ : ಒಂದು ಅಭಿಜ್ಞೆ" ಸಾಂಪ್ರದಾಯಿಕ ನೆಲೆಯಲ್ಲಿ ನಿರ್ವಹಣೆಗೊಂಡ ಲೇಖನ. ಜಿ.ಎಸ್. ಗಾಯಿರವರ 'ಕನ್ಯಾದಾನ ಮತ್ತು ಪಾಣಿಗ್ರಹಣ' ಪರಿಕಲ್ಪನೆಯ ಪ್ರಾಚೀನ ಅರ್ಥಗಳನ್ನು ಭೂಮಿಯ ದಾನಕ್ಕೆ ಸಂಬಂಧಿಸಿದಂತೆ ಚರ್ಚಿಸಿದರೆ, ಅ. ಸುಂದರ ಅವರ ಲೇಖನ ಹರಪ್ಪ ಸಂಸ್ಕೃತಿಯ ಪ್ರಭಾವ ಮತ್ತು ಅದರ ಕುರುಹುಗಳನ್ನು ಕರ್ನಾಟಕದ ಕೃಷ್ಣಾ ಮೇಲ್ದಂಡೆಯ ಪ್ರದೇಶದಲ್ಲಿ ಕಾಣುವ ಆ ಮೂಲಕ ಕರ್ನಾಟಕದ ಪೂರ್ವಭಾವಿ ಇತಿಹಾಸವನ್ನು "ನೂತನ ಶಿಲಾಯುಗ ಮತ್ತು ಸಂಸ್ಕೃತಿ ಮತ್ತು ಕಬ್ಬಿಣಯುಗದ ಬೃಹದ್ ಶಿಲಾ ಸಂಸ್ಕೃತಿ" ಎಂದು ಎರಡು ಹಂತಗಳಲ್ಲಿ ಗುರ್ತಿಸುವುದಾಗಿದೆ. ಬಾ.ರಾ.ಗೋಪಾಲ ಅವರ "ದಕ್ಷಿಣ ಭಾರತದ ಎರಡು ಪ್ರಮುಖ ವಿಭಿನ್ನ ಸಮಾಜಗಳಾಗಿ" ಕರ್ನಾಟಕ - ತಮಿಳುನಾಡುಗಳನ್ನು ವಿಭಿನ್ನ ಆರ್ಯ - ದ್ರಾವಿಡ ಸಮಾಜಗಳ ಅಸ್ತಿತ್ವವಾಗಿ ಗುರ್ತಿಸುವ ಪಟುತ್ವ ಭಾಷಿಕ ಹೊಡೆದಾಟದ ಸೀಮಿತ ದೃಷ್ಟಿಯನ್ನು ಮುಖ್ಯ ಮಾಡಿಕೊಂಡಿದೆ. ಇಂತಹ ಮಿತಿ ಈ ಗ್ರಂಥದ ಹಲವಾರು ಲೇಖನಗಳದ್ದೂ ಆಗಿದೆ. ಶ್ರೀನಿವಾಸ ಹಾವನೂರರ "ಕಾವ್ಯದ ಪ್ರಯೋಗ ಎಂದರೆ ಪಠಣ-ಶ್ರವಣದ ಅವ್ಯಾಹತ ಪರಂಪರೆ" ಎಂದು ಕವಿರಾಜಮಾರ್ಗದ "ಕಾವ್ಯಪ್ರಯೋಗ ಪರಿಣತಮತಿಗಳ್" ಉಕ್ತಿಯ ಹಿನ್ನೆಲೆಯಲ್ಲಿ ಚರ್ಚಿಸಿ; "ಬಹ್ವಂಶ ಕನ್ನಡ ಕವಿಗಳು ಈ ಪರಂಪರೆಯವರ" ಎಂದು ಗುರ್ತಿಸುವ "ಕಾವ್ಯಪ್ರಯೋಗ ಮತ್ತು ಕಾವ್ಯದ ಪಠನ" ಲೇಖನ ಈ ದಿಕ್ಕಿನಲ್ಲಿ ಗಮನಹರಿಸಬಹುದಾದಂಥ ಲೇಖನ. ಎಂ.ಎಂ. ಕಲ್ಬುರ್ಗಿಯವರ "ತೀ.ನಂ. ಶ್ರೀ ಛಂದೋವಿಚಾರ : ಪರಿಶೀಲನೆ" ತೀ.ನಂ.ಶ್ರೀ ಅವರ ಛಂದಸ್ಸಿನ ವಿಚಾರಗಳ ಇತಿ-ಮಿತಿಗಳನ್ನು ಗುರ್ತಿಸಿದರೂ "ಛಂದಸ್ಸಿನ ಅಧ್ಯಯನ ಮಾತ್ರ ನವೀಕರಣಗೊಳ್ಳದೆ ಹಳೆಯ ದಾರಿಯಲ್ಲಿಯೇ ತೆವಳುತ್ತ ನಡೆದಿದೆ." ಎನ್ನುವ ಮಾತು ಇತ್ತೀಚಿನ ಮಹತ್ವದ ಕೃತಿಯಾದ ಸೇಡಿಯಾಪುರವರ 'ಛಂದೋಗತಿ' ಯನ್ನು ಗಮನಿಸಿದರೆ ಬಂದ ಅಭಿಪ್ರಾಯ ಎನಿಸುತ್ತದೆ.

ಕೆ.ಎಸ್. ದೇಶಪಾಂಡೆಯವರ "ಮರೆತು ಹೋದ ಮಹಾ ಪುರುಷ—ರಾ.ಹ ದೇಶಪಾಂಡೆ" ಈ ಭಾಗದ ಭಿನ್ನಲೇಖನ. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಮರಾಠಿ ಪ್ರಭಾವದಿಂದ ಕನ್ನಡವನ್ನು ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಧಾರವಾಡದಲ್ಲಿ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ ರಾಮಚಂದ್ರ ಹನುಮಂತ ದೇಶಪಾಂಡೆಯವರನ್ನು ಕುರಿತ ವ್ಯಕ್ತಿ ಚಿತ್ರ. ವಿದ್ಯಾವರ್ಧಕ ಸಂಘದ ಬೆಳವಣಿಗೆ, ವಾಗ್ಭೂಷಣ ಪತ್ರಿಕೆಯ ಪ್ರಾರಂಭ ಆ ಮೂಲಕ ಕನ್ನಡ ಪರ ಹೋರಾಟ ಈ ಕಾರಣದಿಂದಾಗಿ ಇದು ಗಮನಿಸಬಹುದಾದ ಲೇಖನ.

ನಾಲ್ಕನೆಯ ಭಾಗ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಪ್ಪತ್ತಾರು ಲೇಖನಗಳನ್ನೊಳಗೊಂಡ ದೀರ್ಘ ಭಾಗ. ಇದರಲ್ಲಿ ಭಾಷಾ ವಿಜ್ಞಾನ, ಜಾನಪದ ಸಾಹಿತ್ಯ ವಿಮರ್ಶೆ, ಸಾಹಿತ್ಯಾಧ್ಯಯನದ ಕೆಲವು ಪರಿಕಲ್ಪನೆಗಳ ಚರ್ಚೆಯನ್ನು ಕುರಿತ ಲೇಖನಗಳಿವೆ. ಇಲ್ಲಿನ ಬಹಳಷ್ಟು ಲೇಖನಗಳ ಮಿತಿ ಸಮೀಕ್ಷಾ ರೂಪದ ಪರಿಚಯಸ್ಥ ಲೇಖನಗಳು ಎಂಬುದು. "ನವೋದಯದ ಬಹಳಷ್ಟು ವಿಮರ್ಶಕರು ತಮ್ಮ ವಿಮರ್ಶೆಯ ಮಾನದಂಡಗಳನ್ನು ಯಥಾವತ್ ಭಾರತೀಯ ಕಾವ್ಯ ಮೀಮಾಂಸೆಯಿಂದ ಸ್ವೀಕರಿಸಿದ್ದೂ ಅವರ ವಿಮರ್ಶೆಯ ಇತಿಮಿತಿಗಳಿಗೆ ಒಂದು ಕಾರಣವಿರಬಹುದು". ಎಂದು ಹೇಳುವ ಟಿ.ಪಿ. ಅಶೋಕರ "ನವೋದಯ ವಿಮರ್ಶೆ: ಇತಿಮಿತಿಗಳು" ಎಂಬ ಲೇಖನವೂ ಒಳಗೊಂಡಂತೆ, ಡಾ: ಬಸವರಾಜ ಸಬರದರ "ಬಂಡಾಯ ಸಾಹಿತ್ಯ : ಒಂದು ದಶಕದ ಅವಲೋಕನ" ಮೀರಾಮೂರ್ತಿಯವರ "ಅಸಂಗತ ರಂಗಭೂಮಿ" ಎಚ್.ಕೆ. ರಾಮನಾಥರ "ಬೀದಿ ನಾಟಕಗಳು" ಸಿ.ಪಿ.ಕೆ. ಯವರ "ವಿ.ಕೃ. ಗೋಕಾಕರ ವಿಮರ್ಶೆ" ಪ್ರಧಾನ ಗುರುದತ್ತರ "ರುದ್ರನಾಟಕ ಅಂದು-ಇಂದು" "ತೌಲನಿಕ ಸಾಹಿತ್ಯ ಇನ್ನೂ ವಿವಾದಾಸ್ಪದವಾಗಿರುವ ಒಂದು ಸಾಹಿತ್ಯಕ ಶಿಸ್ತು ಮತ್ತು ಪರಿಕಲ್ಪನೆ" ಎನ್ನುವ ರೆನೆವಲೆಕ್‌ನ ಮಾತಿನ ಹಿನ್ನಲೆಯಲ್ಲಿ ಚರ್ಚಿಸುವ ಎನ್.ಎಸ್. ತಾರಾನಾಥರ "ತೌಲನಿಕ ಸಾಹಿತ್ಯ" ಮೊದಲಾದ ಲೇಖನಗಳು ಹೊಸದಾಗಿ ಸಾಹಿತ್ಯಾಧ್ಯಯನ ಪ್ರವೇಶ ಮಾಡುವವರಿಗೆ ಮೂಲಭೂತ ಆಹಾರವನ್ನು ಒದಗಿಸುವ ಸಮೀಕ್ಷೆಯ ಮಿತಿಗೆ ಒಳಪಟ್ಟಿರುವಂತಹವುಗಳು.

'ಸಣ್ಣಕತೆಯ ಸ್ವರೂಪ' ಕುರಿತು ಗಿರಡ್ಡಿಯವರ ಲೇಖನ ಸಣ್ಣಕತೆಗಳ ಮಿತಿ ಮತ್ತು ವಿಸ್ತಾರಗಳನ್ನು ಚರ್ಚಿಸುವ ಗಮನಾರ್ಹ ಲೇಖನ. ಇದು ಕನ್ನಡದಲ್ಲಿನ ಸಣ್ಣಕತೆಯ ಪ್ರತ್ಯೇಕ ಅಸ್ತಿತ್ವವನ್ನು ಮಾಸ್ತಿಯವರ ಕೊಡುಗೆಯೊಂದಿಗೆ ವಿವರಿಸುತ್ತದೆ. ಅದರ ಪ್ರಾಚೀನತೆಯನ್ನು ಚರ್ಚಿಸುತ್ತಾ ಆಧುನಿಕ ಸಂದರ್ಭದಲ್ಲಿ ಭಾರತವನ್ನು ಈ ಪ್ರಕಾರ ಪ್ರವೇಶಿಸಿದ ಬಗೆಯನ್ನು ವಿವರಿಸುವುದು ಈ ಲೇಖನದ ಮತ್ತೊಂದು ಇತ್ಯಾತ್ಮಕ ಅಂಶವಾಗಿದೆ. ಆಧುನಿಕ ಸಂದರ್ಭದಲ್ಲಿ 'ಕಾಮಿಡಿ' ಪರಿಕಲ್ಪನೆಯ ವಿನ್ಯಾಸಗಳನ್ನು ವಿವರಿಸುತ್ತಾ ಪ್ರಾಚೀನದಿಂದ ಅದು ಬೆಳೆದುಬಂದ ಚರಿತ್ರೆಯನ್ನು ಸಾಹಿತ್ಯ ಪ್ರಕಾರಗಳ ಹಿನ್ನಲೆಯಲ್ಲಿ ತಾತ್ವಿಕವಾಗಿ ಚರ್ಚಿಸುವ ಲೇಖನ ಜಿ.ಎಸ್. ಆಮೂರರ "ಕಾಮಿಡಿ: ಒಂದು ಪಾಶ್ಚಾತ್ಯ ಪರಿಕಲ್ಪನೆ".

"ಭೂತಾರಾಧನೆಯ ಚಲನಶೀಲತೆ" (ಕೆ. ಚಿನ್ನಪ್ಪಗೌಡ) "ಇತಿಹಾಸದಲ್ಲಿ ನಡೆದ ಮತ್ತು ವರ್ತಮಾನದಲ್ಲಿ ಇರುವ ಅಸಮಾನತೆಯನ್ನು ಸೂಕ್ಷ್ಮವಾಗಿ ಗುರ್ತಿಸುವ" ನೆಲೆಯನ್ನು ಜಾತಿ, ವರ್ಗ ಸಮಾಜದ ಹಿನ್ನಲೆಯಲ್ಲಿ, "ರಾಜಕೀಯ ಆಡಳಿತಾತ್ಮಕ ಘಟಕವಾಗಿ" ಚರ್ಚಿಸುವ ಈ ಲೇಖನ ತುಳುನಾಡಿನ ಜಾನಪದ ಇತಿಹಾಸವಾಗಿ ಅಲ್ಲಿನ ಜೀವನ ಸ್ವರೂಪದ ಪ್ರತಿಮಾತ್ಮಕ ನೆಲೆಯಾಗಿ ಕಂಡುಕೊಳ್ಳುವ ಬಗ್ಗೆ ಗಮನ ಸೆಳೆಯುವಂತಹುದಾಗಿದೆ. ಎ.ವಿ. ನಾವಡರು"ಮೌಖಿಕ ಕಾವ್ಯದ ವಿಶಿಷ್ಟಾಂಶಗಳು ಹಾಗೂ ಅದರ ಸಂಯೋಜನ ಪ್ರಕ್ರಿಯೆ"ಯನ್ನು ತುಳು ಪಾಡ್ದನಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡಿದ್ದಾರೆ.

"ಜಾನಪದ ವಿಜ್ಞಾನ: ಇತ್ತೀಚಿನ ಪ್ರವೃತ್ತಿಗಳು" (ಅಂಬಳಿಕೆ ಹಿರಿಯಣ್ಣ) "ಭಾಷಾ ವಿಜ್ಞಾನ:ಇತ್ತೀಚಿನ ಪ್ರವೃತ್ತಿಗಳು " (ಸೋಮಶೇಖರಗೌಡ) ಈ ಲೇಖನಗಳು ಕ್ರಮವಾಗಿ ಜಾನಪದ ಅಧ್ಯಯನ ಮತ್ತು ಭಾಷೆಯ ಅಧ್ಯಯನ ವಿಧಾನಕ್ಕೆ ಸಂಬಂಧಿಸಿದ ಇತ್ತೀಚಿನ ವಿಧಾನಗಳ ಬೆಳವಣಿಗೆಯನ್ನು ಪರಿಚಯಿಸುವ ಲೇಖನಗಳಾಗಿವೆ. ಕಿಕ್ಕೇರಿ ನಾರಾಯಣರ "ಸಂರಚನಾವಾದ"ಕೆ. ಕೆಂಪೇಗೌಡರ "ಶೈಲಿ ವಿಜ್ಞಾನ" ಭಾಷಾ ವಿಜ್ಞಾನದ ಅಧ್ಯಯನ ಕಾರಣದಿಂದ ರೂಪುಗೊಂಡ ಈ ಎರಡೂ ನೆಲೆಗಳು ಸಾಹಿತ್ಯ ಪಠ್ಯದೊಂದಿಗಿನ ಭಾಷಿಕ ಸಂಬಂಧವನ್ನು ಅಧ್ಯಯನ ಮಾಡುವ ಪ್ರಾಮುಖ್ಯತೆಯ ಕಾರಣದಿಂದ ಪರಿಚಯಿಸುವ ಲೇಖನಗಳಾಗಿವೆ. ಲಕ್ಷ್ಮೀನಾರಾಯಣ ಅರೋರರ "ಭಾಷಾಂತರ:ಇತ್ತೀಚಿನ ಪ್ರವೃತ್ತಿಗಳು" ಲೇಖನವು ಆಧುನಿಕ ಸಂದರ್ಭದಲ್ಲಿ ಭಾಷಾಂತರ ಕಾರ್ಯ ಪಡೆದುಕೊಂಡಿರುವ ಸ್ವರೂಪವನ್ನು ಭಾಷಾಂತರದ ೧೦ಕ್ಕೂ ಹೆಚ್ಚು ವಿಧಾನಗಳನ್ನು ಮೂರು ನೆಲೆಗಳಲ್ಲಿ (ಭಾಷಿಕ ಪ್ರವೃತ್ತಿಗಳು, ಸಾಹಿತ್ಯಕ ಪ್ರವೃತ್ತಿಗಳು, ಸಾಹಿತ್ಯೇತರ ಪ್ರವೃತ್ತಿಗಳು) ಪರಿಚಯಿಸುವ ಮೂಲಕ ವಿವರಿಸುತ್ತಾರೆ.

ಇವುಗಳ ಜೊತೆಯಲ್ಲಿಯೇ ಅವಕ್ಕಿಂತ ಭಿನ್ನವಾದದ್ದು ಎಂ.ಕೆ. ನಾಯಕ್‌ರ "ಪ್ರಾಜ್ಞ ಬ್ರಿಟಿಷರ ಅಜ್ಞಾನವನ್ನು ಕುರಿತು" ಆಂಗ್ಲೋ ಇಂಡಿಯನ್ ಕಾದಂಬರಿಗಳ ಹಿನ್ನೆಲೆಯಲ್ಲಿ ಚರ್ಚಿಸಿರುವ ಲೇಖನ. ಇದು ಈ ಸಂಕಲನದಲ್ಲಿ ಸೇರಿರುವ ಒಂದೇ ಒಂದು ಅನುವಾದ. ಸ್ವಾತಂತ್ರ್ಯಪೂರ್ವ ಕಾಲದಿಂದ ಆನಂತರದ ಕಾಲದವರೆಗೂ ಆಂಗ್ಲೋ ಇಂಡಿಯನ್ ಕಾದಂಬರಿಕಾರರು ಭಾರತೀಯ ಸಂಸ್ಕೃತಿಯ (ಚರಿತ್ರೆ, ಧರ್ಮ, ಭಾಷೆ, ಜೀವನ ಮೊದಲಾಗಿ) ನೆಲೆಗಳನ್ನು ಗ್ರಹಿಸಿರುವಲ್ಲಿ ಮಾಡಿರುವ ಮೂಲಭೂತ ಅಜ್ಞಾನವನ್ನು ಕುರಿತ ಚರ್ಚೆಯನ್ನು ಉದಾಹರಣೆಗಳೊಂದಿಗೆ ಒಳಗೊಂಡಿದೆ.

ಒಟ್ಟಾಗಿ ಹೇಳುವುದಾದರೆ: ಭಾಷೆ, ಸಾಹಿತ್ಯ, ಜಾನಪದ, ಭಾಷಾಂತರ, ಶಿಕ್ಷಣ ಹೀಗೆ ಅನೇಕ ವಲಯಗಳನ್ನು ವ್ಯಾಪಿಸಿರುವ ಲೇಖನಗಳನ್ನು ಒಳಗೊಂಡಿರುವುದು ಈ ಗ್ರಂಥದ ವಿಶೇಷವಾಗಿದೆ. ಇಲ್ಲಿನ ಅನೇಕ ಲೇಖನಗಳು ಪಾಶ್ಚಾತ್ಯ ಮಾದರಿಗಳಿಂದ ಬಿಡಿಸಿಕೊಂಡು ಬರಲಾಗದ ಸ್ಥಿತಿ, ಅವುಗಳ ಮಿತಿಯೂ ಆಗಿದೆ. ಮತ್ತು ಕೆಲವು

ಲೇಖನಗಳು ಅವುಗಳ ತಾತ್ವಿಕ ಶಿಸ್ತು ಮತ್ತು ಅವು ಒದಗಿಸಿರುವ ವಿಚಾರಗಳ ಕಾರಣದಿಂದಾಗಿ ಗಮನವನ್ನು ಸೆಳೆಯುತ್ತವೆ.

'ವಿಷ್ಣು ನಾಯ್ಕ'ರು ಸಂಪಾದಿಸಿರುವ "ಅಕಬ ಅಲಿ ಜೀವನ-ಸಾಹಿತ್ಯ" ೧೯೮೫ರ ಮಾರ್ಚ್ ತಿಂಗಳಲ್ಲಿ ಅಕಬರ ಅಲಿಯವರ ಷಷ್ಠ್ಯಬ್ದಿ ಸಮಾರಂಭದ ಕಾರಣದಿಂದ ರೂಪುಗೊಂಡು ಈ ವರ್ಷ ಪ್ರಕಟಗೊಂಡಿದೆ. ಈ ಸಮಾರಂಭದ ಸಂದರ್ಭದಲ್ಲಿ ನಡೆದ ಅಕಬರ ಅಲಿಯವರ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಯನ್ನು ಕುರಿತ ಗೋಷ್ಠಿಯಲ್ಲಿ ಮಂಡಿಸಲಾದ ಲೇಖನಗಳೊಂದಿಗೆ ನಾಡಿನ ಹಿರಿಯರು, ಮಿತ್ರರು, ಶಿಷ್ಯರು ಅಲಿಯವರ ವ್ಯಕ್ತಿತ್ವವನ್ನು ಕುರಿತು ಬರೆದಿರುವ ಲೇಖನಗಳು ಇದರಲ್ಲಿ ಸೇರಿವೆ. ಅಲ್ಲದೆ, ಅಲಿಯವರು ಪು.ತಿ.ನ, ಕುವೆಂಪು, ಮಾಸ್ತಿ, ಕಣವಿ, ಗಂಗಾಧರ ಚಿತ್ತಾಲ, ಎಕ್ಕುಂಡಿಯವರ ಕಾವ್ಯದ ಬಗ್ಗೆ ಬರೆದ ವಿಮರ್ಶಾ ಲೇಖನಗಳೂ ಸೇರಿರುವುದು ಈ ಗ್ರಂಥದ ವಿಶಿಷ್ಟ ಅಂಶವಾಗಿದೆ. ವ್ಯಕ್ತಿ-ಕೃತಿ, ಕನ್ನಡ ಕಾವ್ಯಾಧ್ಯಯನ, ಅಭಿನಂದನ —ಈ ಮೂರು ಭಾಗಗಳಲ್ಲಿರುವ ಈ ಗ್ರಂಥ ಮೊದಲನೆಯ ಭಾಗದಲ್ಲಿ ಅಕಬರ ಅಲಿಯವರನ್ನು ಹತ್ತಿರದಿಂದ, ಸಾಹಿತ್ಯದ ಮೂಲಕ ಕಂಡವರು ಅವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಕುರಿತು ಬರೆದ ಲೇಖನಗಳು ಇವೆ. ಅಲಿಯವರ ಕಾವ್ಯವನ್ನು ವಿಮರ್ಶೆ ಮಾಡುವುದರೊಂದಿಗೆ ಅವರ ವಿಮರ್ಶಾ ಲೇಖನಗಳನ್ನು ಆರ್.ವಿ. ಭಂಡಾರಿಯವರು ಸಮೀಕ್ಷಿಸಿದ್ದಾರೆ. ಮುಸ್ಲಿಂ ಬರಹಗಾರನೊಬ್ಬ ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ಎದುರಿಸಬಹುದಾದ ಇಕ್ಕಟ್ಟಿನ ಹಿನ್ನೆಲೆಯಲ್ಲಿ ರೂಪುಗೊಂಡ ಅಕಬರ ಅಲಿಯವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ನೋಡುವುದು ಈ ಲೇಖನಗಳ ಕಾಳಜಿಯಾಗಿದೆ. ಗೌರೀಶ ಕಾಯ್ಕಿಣಿಯವರ "ಹೋಗೋಣವೆ ಒಳಗೆ"ಜಿ.ಎಚ್. ನಾಯಕರ"ಅಕಬರ ಅಲಿ ಕಾವ್ಯದ ಒಳದನಿ" ಜಿ.ಎಸ್. ಆವಧಾನಿಯವರ "ಅಕಬರ ಅಲಿಯ ಕಾವ್ಯ"ಇವು ಇಲ್ಲಿನ ಗಮನಿಸಬಹುದಾದ ಲೇಖನಗಳು.

"ಕನ್ನಡ ಕಾವ್ಯಾಧ್ಯಯನ" ಭಾಗದ ತಮ್ಮ ಹಿರಿಯ ತಲೆಮಾರಿನ ಮೂವರು, ಮತ್ತು ಹೆಚ್ಚು ಕಡಿಮೆ ತಮ್ಮ ಸಮಕಾಲೀನರಾದ ಮೂವರು ಕವಿಗಳ ಕಾವ್ಯಕ್ಕೆ ವಿಮರ್ಶೆಯನ್ನು ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಬರೆಯುತ್ತಿದ್ದರೂ ನವೋದಯ ವಿಮರ್ಶೆಯಿಂದ ಪ್ರೇರಣೆಗೊಂಡ ವಿವರಣಾತ್ಮಕ ವಿಮರ್ಶೆಯಾಗಿದೆ. ನಿಸರ್ಗ ಮತ್ತು ಮನುಷ್ಯನ ಬದುಕಿನ ಬಗೆಗಿರುವ ಪ್ರೀತಿ ಈ ವಿಮರ್ಶೆಯ ಹಿಂದಿರುವ ಆದರ್ಶವಾಗಿದೆ. ಇಲ್ಲಿನ ಆರೂ ಲೇಖನಗಳು ಈ ಅಂಶವನ್ನು ಮುಖ್ಯ ಮಾಡಿಕೊಂಡಿರುವಂಥವೇ ಆಗಿವೆ. ಮೂರನೆಯ ಭಾಗ 'ಅಭಿನಂದನ' ಅಕಬರ ಅಲಿಯವರ ಬಗೆಗಿನ ಪ್ರೀತಿ ಮಾತುಗಳು, ಅವರ ಬಗ್ಗೆ ಅಭಿಮಾನಿಗಳು ಬರೆದ ಕವಿತೆಗಳು ಮತ್ತು ಮಾನಪತ್ರವನ್ನು ಒಳಗೊಂಡಿದೆ. ಒಟ್ಟಾರೆಯಾಗಿ ಅಕಬರ ಅಲಿಯವರ ವ್ಯಕ್ತಿತ್ವವನ್ನು, ಸಾಹಿತ್ಯ, ಸಾಹಿತ್ಯ ವಿಮರ್ಶೆ ಮತ್ತು ಅಭಿಮಾನದ ಮೂಲಕ ಪರಿಚಯಿಸುವುದು ಈ ಗ್ರಂಥದ ಮುಖ್ಯ ಉದ್ದೇಶವಾಗಿದೆ.

ಈ ಮೇಲಿನ ಎರಡೂ ಗ್ರಂಥಗಳಿಗಿಂತ ಸಹಜವಾಗಿ ಭಿನ್ನವಾದದ್ದು, ದಕ್ಷಿಣ ಕನ್ನಡ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಬೋಳಂತಕೋಡಿ ಈಶ್ವರಭಟ್ಟರ ಪ್ರಧಾನ ಸಂಪಾದಕತ್ವದಲ್ಲಿ ಬಂದಿರುವ 'ಅಭಿಮಾನ' "ಹಳೆಯ ಪುತ್ತೂರು ತಾಲೂಕಿನಲ್ಲಿ ಆಗಿಹೋದ ಮಹನೀಯರ ಜೀವನ ಸಾಧನೆಗಳನ್ನು ವ್ಯಕ್ತಿಚಿತ್ರಗಳ ಮಾದರಿಯಲ್ಲಿ ಹೇಳುವ ಪುಸ್ತಕ ಇದು. ಸಂಪಾದಕರೆ ಹೇಳುವಂತೆ "ಇಲ್ಲಿ ದಾಖಲಾಗಿರುವ ಲೇಖಕ ಕಲಾವಿದರು ಪುತ್ತೂರಿನೊಡನೆ ಸಂಬಂಧವಿರಿಸಿಕೊಂಡಿದ್ದುದರಿಂದ ಕೃತಿಯ ವ್ಯಾಪ್ತಿಗೆ ಹಳೆಯ ಪುತ್ತೂರು ತಾಲೂಕನ್ನು ಗಣನೆಗೆ ತೆಗೆದುಕೊಂಡು" ರೂಪಿಸಿದ್ದಾರೆ. ಈ ಕೃತಿಯಲ್ಲಿ ಪ್ರತ್ಯೇಕವಾಗಿ ಗಮನಿಸಬೇಕಾದ ವಿಚಾರವೆಂದರೆ ಪುತ್ತೂರನ್ನೇ ತಮ್ಮ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡು "ತಮ್ಮ ಸಾಧನೆಗಳ ಮೂಲಕ ಜಗತ್ತಿನ ಸಾಂಸ್ಕೃತಿಕ ನಕಾಶೆಯಲ್ಲಿ ಪುತ್ತೂರಿಗೆ ಸ್ಥಾನ ಕಲ್ಪಿಸಿಕೊಟ್ಟ "ಕಾರಂತರ ಪುತ್ತೂರಿನ ಚಟುವಟಿಕೆಗಳ ಚರಿತ್ರೆ ಕುರಿತು'ಸಾಧನೆ' ಎಂಬ ಮೊದಲ ಭಾಗ. ಕಾರಂತರು ಪ್ರಾರಂಭಿಸಿದ ದಸರ, ಯಕ್ಷಗಾನ ಮೇಳಗಳು, ಬಾಲವನ ಮೊದಲಾದ ಚಟುವಟಿಕೆಗಳು ಮತ್ತು ಅವರ ಸಿನಿಮಾ ಆಸಕ್ತಿಯ ತನಕ ಅವರ ಬದುಕಿನ ಏರುಪೇರುಗಳ ಪರಿಚಯ ಮಾಡಿಕೊಡುವ ಈ ಸಂಕಲನದ ದೀರ್ಘ ಲೇಖನ ಇದು. ಈ ಲೇಖನವೊಂದನ್ನು ಹೊರತುಪಡಿಸಿದರೆ ಇನ್ನು ಉಳಿದಂತೆ ಆಗಿಹೋದ ಎಂಬತ್ತೆರಡು ಮಂದಿ ಲೇಖಕ ಕಲಾವಿದ ಪಂಡಿತರ ಜೀವನ ಸಾಧನೆಯ ಸಂಸ್ಮರಣೀಯ ವ್ಯಕ್ತಿತ್ವಗಳು'ಸ್ಮರಣೆ' ಭಾಗದಲ್ಲಿ ಸೇರಿವೆ. ಮೂರನೆಯ ಭಾಗ 'ಸಾಹಸ' ಈ ಭಾಗದಲ್ಲಿ "ಪುತ್ತೂರು ಕನ್ನಡ ಸಂಘಗಳು" ಮತ್ತು ಅವುಗಳ ಸಾಧನೆಯ ಬಗ್ಗೆ ಮತ್ತು ಪುತ್ತೂರಿನ ಇತರ ಸಂಘಗಳ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಪುತ್ತೂರಿನ ದಸರಾ ಅಂದಿನಿಂದ ಇಂದಿನವರೆಗೂ ನಡೆದು ಬಂದದ್ದನ್ನು ಪರಿಚಯ ಮಾಡಿಕೊಡುವ ಲೇಖನಗಳನ್ನು ಒಳಗೊಂಡಿವೆ.

ಬಹಳ ಮುಖ್ಯವಾಗಿ ಈ ಗ್ರಂಥ, ಒಂದು ಸೀಮಿತ ಪ್ರದೇಶದಲ್ಲಿ ವಿಭಿನ್ನ ವ್ಯಕ್ತಿಗಳ ಸಾಧನೆಗಳನ್ನು ಒಂದು ಕಡೆಗೆ ಕೂಡಿಸಿ ವಿವರಿಸುವುದರ ಮೂಲಕ, ಆ ಪ್ರದೇಶದ ವಿಭಿನ್ನ ಸಾಂಸ್ಕೃತಿಕ ಚಟುವಟಿಕೆಗಳ ಒಟ್ಟಾರೆ ಕಲ್ಪನೆಯನ್ನು ತಂದು ಕೊಡುತ್ತದೆ. ಕವಿಗಳು, ನಾಟಕಕಾರರು, ಕಥೆ, ಕಾದಂಬರಿಕಾರರು, ಭಾಷಾಂತರಕಾರರು, ಸಂಗೀತಜ್ಞರು, ವೈದ್ಯರು, ಯಕ್ಷಗಾನ ಪಂಡಿತರು, ನಟರು, ಸಮಾಜಸೇವಾ ಧುರೀಣರು ಯಾರೊಬ್ಬರೂ ಕಡಿಮೆಯಿಲ್ಲದಂತೆ ಹೀಗೆ ವಿಭಿನ್ನ ವ್ಯಕ್ತಿತ್ವಗಳ ಪ್ರೀತಿ ಅಭಿಮಾನದ ಕಾರಣ ಈ ಗ್ರಂಥದ ಹಿಂದೆ ಕೆಲಸ ಮಾಡಿದೆ.ಅನೇಕ ಸಂಘಸಂಸ್ಥೆಗಳು ಹುಟ್ಟಿಕೊಂಡು ಬೆಳೆದ ಬಗೆ, 'ಕರ್ನಾಟಕ ಕೇಸರಿ' 'ನವಭಾರತ'ಮೊದಲಾದ ಪತ್ರಿಕೆಗಳು ಉದಯವಾದದ್ದು, ಶೈಕ್ಷಣಿಕ ಅಭಿವೃದ್ಧಿ, ಯಕ್ಷಗಾನ ನಾಟಕಗಳೊಂದಿಗೆ ಆ ರಂಗಭೂಮಿಯು ಪಡೆದುಕೊಂಡ ವಿಸ್ತಾರ ವಿನ್ಯಾಸಗಳು ಮುಂತಾದ ಎಲ್ಲ ಸಾಂಸ್ಕೃತಿಕ ನೆಲೆಗಳನ್ನು ಈ ವ್ಯಕ್ತಿಗಳ ಪರಿಚಯದೊಂದಿಗೆ ಗುರ್ತಿಸಿರುವ ಪ್ರಯತ್ನ ಇದಾಗಿದೆ. ಆ ಪ್ರದೇಶದ ಅಧ್ಯಯನಕ್ಕೆ ತೊಡಗುವವರಿಗೆ ಇದೊಂದು ಆಕರ ಗ್ರಂಥ.

ಕಳೆದ ಶತಮಾನದ ಕೊನೆಯ ಭಾಗದಿಂದ ಈ ಶತಮಾನದ ಎಂಬತ್ತರ ದಶಕದ ತನಕ ಆಗಿಹೋದವರನ್ನು ಗುರ್ತಿಸಿರುವುದು ಇಲ್ಲಿನ ವಿಸ್ತಾರತೆಯಾಗಿದೆ. ಬಹಳ ಮಟ್ಟಿಗೆ ಶಿಶು ಸಾಹಿತ್ಯವನ್ನು ರಚಿಸಿದ ಮೊದಲಿಗರಲ್ಲಿ ಹೆಚ್ಚು ಮಂದಿ ಈ ಪ್ರದೇಶದವರಾಗಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬರುವ ಅಂಶ. ಇಂಗ್ಲಿಷ್‌ವಿದ್ಯಾಭ್ಯಾಸ ಕ್ರಮ, ವ್ಯಾಪಕವಾದ ನಗರೀಕರಣದ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಕೃತಿಯೊಂದರ ಬೆಳವಣಿಗೆಯನ್ನು ಹೊಳೆಯಿಸುವುದರಿಂದಾಗಿಯೂ ಈ ಗ್ರಂಥ ಉಪಯುಕ್ತವಾದುದಾಗಿದೆ.

ಈ ಸಮೀಕ್ಷೆಯ ಬಗ್ಗೆ ಒಂದು ಮಾತು :

ಪ್ರತಿಯೊಂದು ಲೇಖನವನ್ನು ಚರ್ಚಿಸುವುದು ಇಲ್ಲಿನ ಮೂಲ ಉದ್ದೇಶವಲ್ಲವಾದ್ದರಿಂದ, ಒಟ್ಟಾರೆ ಪ್ರತಿ ಗ್ರಂಥದ ಸ್ವರೂಪ ಮತ್ತು ಪರಿಚಯ ಇಲ್ಲಿನ ಸಮೀಕ್ಷೆಯ ಮುಖ್ಯ ಕಾಳಜಿ ಆಗಿರುವುದರಿಂದ ಇದಕ್ಕೆ ತನ್ನದೇ ಆದ ಮಿತಿ ಇರುವುದನ್ನು ವಾಚಕರು ಗಮನಿಸಬೇಕೆಂದು ಕೋರಿಕೆ.

●

* * *

ವಿಜ್ಞಾನವನ್ನು ಕುರಿತ ಕೃತಿಗಳು

— ಪ್ರಕಾಶ್ ಗರುಡ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಬಂದ ವೈಜ್ಞಾನಿಕ ಸಾಹಿತ್ಯ ಕೃತಿಗಳು ಹಲವಾರು ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ. ಸಂಖ್ಯೆಯ ದೃಷ್ಟಿಯಿಂದಲೂ ೧೯೯೨ರಲ್ಲಿ ಗಮನಾರ್ಹವಾದ ಬೆಳವಣಿಗೆ ಆಗಿದ್ದು ಕಂಡುಬರುತ್ತದೆ. ಈ ವರ್ಷದಲ್ಲಿ ಬಂದ ವೈಜ್ಞಾನಿಕ ಸಾಹಿತ್ಯ ಕೃತಿಗಳು ಕೇವಲ ಒಂದೆರಡು ಶಾಸ್ತ್ರ, ಶಾಖೆಗಳಿಗೆ ಸೀಮಿತವಾಗದೆ, ಉಪಯುಕ್ತ ಮಾಹಿತಿಯನ್ನೊದಗಿಸುವಲ್ಲಿ ಯಶಸ್ವಿಯಾಗಿವೆ.

ಈ ವರ್ಷದಲ್ಲಿ ಬಂದ ವೈಜ್ಞಾನಿಕ ಸಾಹಿತ್ಯಕೃತಿಗಳಲ್ಲಿ ಜೀವಶಾಸ್ತ್ರ, ವೈದ್ಯಕೀಯ, ಭೂಗರ್ಭಶಾಸ್ತ್ರ, ಕೃಷಿ ವಿಜ್ಞಾನ, ಜ್ಯೋತಿಃಶಾಸ್ತ್ರ, ಭೌತಶಾಸ್ತ್ರ, ಮನಃಶಾಸ್ತ್ರ, ಶಾಸ್ತ್ರ ವಿಜ್ಞಾನಗಳ ಬಗ್ಗೆ ಓದುಗರ ಗಮನ ಸೆಳೆಯುತ್ತವೆ. ಕೇವಲ ಕ್ಲಿಷ್ಟವಾದ ವೈಜ್ಞಾನಿಕ ಪರಿಭಾಷೆಯನ್ನು ಬಳಸದೆ ಅನುಕೂಲಕರ ರೀತಿಯಲ್ಲಿ ಶ್ರೀಸಾಮಾನ್ಯರಿಗೆ ಗ್ರಾಹ್ಯವಾಗುವ ರೀತಿಯಲ್ಲಿ ಕೃತಿಗಳನ್ನು ರಚಿಸುವತ್ತ ಈ ವರ್ಷದ ಕೃತಿಗಳು ಗಮನ ಹರಿಸಿರುವುದು ಸ್ತುತ್ಯಾರ್ಹ.

ವೈಜ್ಞಾನಿಕ ಸಾಹಿತ್ಯ ಕೃತಿಗಳ ರಚನೆಯಲ್ಲಿ ಹೆಸರಾದ ಜಿ.ಟಿ. ನಾರಾಯಣರಾವ್ ಮತ್ತು ಟಿ.ಆರ್. ಅನಂತರಾಮು ಇವರುಗಳು ಈ ವರ್ಷವೂ ಕೆಲವು ಉಪಯುಕ್ತ ಕೃತಿಗಳನ್ನು ನೀಡಿದ್ದಾರೆ. ಇವರುಗಳಲ್ಲದೆ ಸಿ.ಆರ್. ಚಂದ್ರಶೇಖರ, ಕೃಷ್ಣಾನಂದ ಕಾಮತ್, ಎಚ್.ಎಸ್. ಮೋಹನ, ಜಿ.ಆರ್. ಲಕ್ಷ್ಮಣರಾವ್, ಕೈಂತಜೆ ವಿಷ್ಣುಭಟ್, ಬಿ.ಪಿ. ರಾಧಾಕೃಷ್ಣ, ಎಸ್. ಜೀತೇಂದ್ರ ಕುಮಾರ್ ಮತ್ತು ಸೃಜನಶೀಲ ಲೇಖಕರಾದ ಕೆ.ಪಿ. ಪೂರ್ಣಚಂದ್ರತೇಜಸ್ವಿ ಮುಂತಾದವರು ಈ ವರ್ಷದ ವೈಜ್ಞಾನಿಕ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನಿತ್ತಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ವೈಜ್ಞಾನಿಕ ಸಾಹಿತ್ಯ ಕೃತಿಗಳ ವಿಶೇಷತೆಯೆಂದರೆ, ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ರಚನೆಗೊಂಡಿದ್ದು ಮತ್ತು ಕೃಷಿ ವಿಜ್ಞಾನದ ಬಗ್ಗೆ ಓದುಗರ ಆಸಕ್ತಿ ಕೆರಳಿಸುವಂತಹ ಕೃತಿಗಳು ಹೊರಬಂದದ್ದು.

ಅ) ಕೃಷಿ ವಿಜ್ಞಾನಕ್ಕೆ ಸಂಬಂಧಪಟ್ಟ ಕೃತಿಗಳು

ಸಹಜ ಕೃಷಿ ಒಂದು ಪರಿಚಯ:

ಜಪಾನಿನ ಕೃಷಿ ತಜ್ಞ, ಫೊಕೋಕಾ ಬರೆದ "One straw revolution" and "Natural way of farming" ಎಂಬ ಕೃತಿಗಳಲ್ಲಿಯ ವಿಚಾರಧಾರೆಯನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ತೇಜಸ್ವಿಯವರು ತಮ್ಮ ಈ ಕೃತಿ ಹೊರ ತಂದಿದ್ದಾರೆ.

ಫೋಕೋಕಾನ ಪ್ರಕಾರ ನಿಸರ್ಗದ ಪ್ರಕ್ರಿಯೆಯಲ್ಲಿ ಭೂಮಿ ತನ್ನ ಫಲವತ್ತತೆಯನ್ನು ಕಾಯ್ದುಕೊಳ್ಳಲು ತನ್ನದೇ ಆದ ನೈಸರ್ಗಿಕ ಚಕ್ರವಿದೆ. ಆದ್ದರಿಂದ ಅದನ್ನು ಫಲವತ್ತಾಗಿಸಲು ನಾವು ಯಾವುದೇ ಅನೈಸರ್ಗಿಕ ಪದ್ಧತಿಯನ್ನು ಬಳಸಬಾರದು. ಅವರ ವಿಚಾರಗಳನ್ನು ಈ ರೀತಿ ಸಂಗ್ರಹಿಸಬಹುದು.

ನೆಲದ ಉಳುಮೆ ಅವಶ್ಯಕವಿಲ್ಲ: ಯಾವುದೇ ರಾಸಾಯನಿಕ ಗೊಬ್ಬರ ಉಪಯೋಗಿಸದೆ ಇರುವುದು; ಕಳೆ ನಿರ್ಮೂಲನೆ ಮಾಡದಿರುವುದು; ಕ್ರಿಮಿನಾಶಕ ಸಿಂಪರಣೆ ಉಪಯೋಗಿಸದೇ ಇರುವುದು; ಹೈಬ್ರೀಡ್ ತಳಿಗಳಿಂದ ಸಹಜ ಕೃಷಿ ಸಾಧ್ಯವಿಲ್ಲ; ಸ್ವಾಭಾವಿಕ ತಳಿಗಳಿಂದ ಮಾತ್ರ ಸಹಜಕೃಷಿ ಸಾಧ್ಯ.

'ಸಹಜ ಕೃಷಿ ಲೋಕ ಪ್ರವೇಶ' ಓದುತ್ತಿದ್ದಂತೆ ಫೊಕೋಕಾನ ಅದ್ಭುತ ಶಕ್ತಿಗೆ ವಿಚಾರಧಾರೆಗಳಿಗೆ ಮಾರು ಹೋಗುತ್ತೇವೆ ಹೊರತು ಬೃಹತ್ ಆಹಾರ ಸಮಸ್ಯೆ ಇರುವ ಭಾರತಕ್ಕೆ ಅವನ ಕೃಷಿ ಪದ್ಧತಿ ಅನುಕರಣೆ ಯೋಗ್ಯವೆ, ಅಲ್ಲವೆ ? ಎಂಬುದನ್ನು ಲೇಖಕರಾದ ತೇಜಸ್ವಿಯವರು ವ್ಯವಹಾರಿಕವಾಗಿ (ಪ್ರಾಕ್ಟಿಕಲಿ) ಚರ್ಚಿಸುವುದಿಲ್ಲ. ಪ್ರಾಯೋಗಿಕವಾಗಿ ಫೊಕೋಕಾನ ಸಾಧನೆಯನ್ನು ಇಲ್ಲಿಗಿಳಿಸಲು ಯಾವ ಮಾರ್ಗವನ್ನು ಅವರು ಸೂಚಿಸಿಲ್ಲವಾದರೂ ಇದೊಂದು ಎಲ್ಲರೂ ಓದಲೇ ಬೇಕಾದಂತಹ ಕೃತಿ.

ಕೈಂತಜೆ ವಿಷ್ಣುಭಟ್ಟರ 'ಕೃಷಿ ಲೋಕ ಪ್ರವೇಶ' ಕೃತಿ ಕೃಷಿಕರಿಗೆ ಒಂದು ಕೈಪಿಡಿ ಇದ್ದಂತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಳಕೆಯಾದ ಕೃಷಿಯ ಬಗ್ಗೆ ಇಲ್ಲಿ ಹೆಚ್ಚಿನ ಮಾಹಿತಿಗಳಿವೆ. ರಾಸಾಯನಿಕ ಗೊಬ್ಬರ ಉಪಯೋಗಿಸುವುದರಿಂದ ರೈತ ಎದುರಿಸುತ್ತಿರುವ ಸಮಸ್ಯೆಗಳನ್ನು ಇವರು ವಿಪುಲವಾಗಿ ಚರ್ಚಿಸುತ್ತಾರೆ. ಕೀಟನಾಶಕ ಉಪಯೋಗವನ್ನು ಇವರು ಖಂಡಿತ ಒಪ್ಪುವುದಿಲ್ಲ. ಧಾನ್ಯಗಳು, ತರಕಾರಿ, ಹಣ್ಣು ಮುಂತಾದವುಗಳನ್ನು ಹೇಗೆ ಬೆಳೆಯಬೇಕು; ಅವುಗಳ ವೈಶಿಷ್ಟ್ಯವೇನು ಎಂಬುದರ ಬಗ್ಗೆ ಮಾಹಿತಿ ನೀಡುತ್ತದೆ.

ಒಟ್ಟಿನಲ್ಲಿ ಕೃಷಿಯನ್ನು ಕುರಿತು ಬಂದ ಹೆಚ್ಚಾದ ಕೃತಿಗಳು ಕೃಷಿಯಲ್ಲಿಯ ಹೈಬ್ರೀಡ್ ತಳಿಗಳನ್ನು ಧಿಕ್ಕರಿಸುತ್ತವೆ ಆದರೆ ಹೆಚ್ಚುತ್ತಿರುವ ಆಹಾರ ಸಮಸ್ಯೆಗೆ ಹೈಬ್ರೀಡ್ ವಿಧಾನವನ್ನು ಬಿಟ್ಟರೆ, ಬೇರೆ ದಾರಿ ಉಂಟೆ? ಎಂಬ ವಾಸ್ತವದ ಪ್ರಶ್ನೆ ಹಾಗೆ ಉಳಿಯುತ್ತದೆ.

ಆ) ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಪಟ್ಟ ಕೃತಿಗಳು

ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಪಟ್ಟ ಕೃತಿಗಳನ್ನು ಮಾನಸಿಕ ಮತ್ತು ದೈಹಿಕ ಎಂದು ವಿಂಗಡಿಸಬಹುದು. ಈ ವರ್ಷದಲ್ಲಿ ಬಂದ ಒಟ್ಟು ನಾಲ್ಕು ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಪಟ್ಟ ಕೃತಿಗಳಲ್ಲಿ ಮೂರು ಕೃತಿಗಳನ್ನು ಸಿ.ಆರ್. ಚಂದ್ರಶೇಖರ ಅವರೇ ರಚಿಸಿದ್ದಾರೆ. ಇನ್ನೊಂದು ಕೃತಿಯನ್ನು ಎಚ್.ಎಸ್. ಮೋಹನ್ ಅವರು ಬರೆದಿದ್ದಾರೆ.

ನಿಮ್ಮ ಮಾನಸಿಕ ಆರೋಗ್ಯವನ್ನು ಹೆಚ್ಚಿಸಿಕೊಳ್ಳಿ: ಸಿ.ಆರ್. ಚಂದ್ರಶೇಖರ ಅವರು ಈ ಕೃತಿಯಲ್ಲಿ ಮನಸ್ಸಿನ ವಿವಿಧ ಅವಸ್ಥೆಗಳ, ಅದರ ವಿದ್ಯಮಾನಗಳನ್ನು ಫ್ರಾಯ್ಡ್, ಯುಂಗ್, ಆ್ಯಡ್ಲರ್ ಮುಂತಾದ ಜಗತ್ಪ್ರಸಿದ್ಧ ಮನಃಶಾಸ್ತ್ರಜ್ಞರ ವಿಚಾರಧಾರೆಗಳ ಹಿನ್ನೆಲೆಯಲ್ಲಿ ಉದಾಹರಣೆ ಸಮೇತ ನಮ್ಮ ಮುಂದಿಡುತ್ತಾರೆ. ದೃಢವಾದ ಮನಸ್ಸು ಎಂದರೇನು, ಅದನ್ನು ಪಡೆಯುವುದು ಹೇಗೆ, ಆಲೋಚನಶಕ್ತಿ, ಕಲಿಯುವ ಸಾಮರ್ಥ್ಯ, ಜ್ಞಾಪಕ ಶಕ್ತಿಯನ್ನು ವೃದ್ಧಿಸಿಕೊಳ್ಳುವುದು ಹೇಗೆ, ಮನಸ್ಸನ್ನು ಮುತ್ತಿಕಾಡುವ ಅಂಜಿಕೆ, ಖಿನ್ನತೆ, ಕೀಳರಿಮೆ, ನಿವಾರಿಸಿಕೊಳ್ಳುವುದು ಹೇಗೆ, ಮುಪ್ಪಿನಲ್ಲಿ ಮನಸ್ಸಿನ ನೆಮ್ಮದಿ ಕಾಪಾಡಿಕೊಳ್ಳುವುದು ಹೇಗೆ ಎಲ್ಲರನ್ನೂ ಕಂಗೆಡಿಸುವ ಸಾವನ್ನು ಎದುರಿಸುವುದು ಹೇಗೆ? ಹೀಗೆ ಮಾನಸಿಕ ಸಮಸ್ಯೆಗಳನ್ನು ಪಾಶ್ಚಾತ್ಯ ಮನೋವೈಜ್ಞಾನಿಕ ಚಿಂತನೆಯಿಂದ ಹಿಡಿದು ಭಾರತೀಯ ಯೋಗಶಾಸ್ತ್ರಗಳಿಂದ ಹೇಗೆ ಬಗೆಹರಿಸಿಕೊಳ್ಳಬಹುದು ಎಂಬುದನ್ನು ದಾಖಲಿಸುವ ಕೃತಿ ಇದಾಗಿದೆ. ಕೃತಿಯಲ್ಲಿ ಡಾಕ್ಟರ್-ರೋಗಿ ಸಂಬಂಧ ಎದ್ದುಕಾಣುತ್ತದೆ. ಓದುಗ ಇಲ್ಲಿ ಪೇಶಂಟ್:ಪ್ರಸ್ತುತ ಪರಿಸ್ಥಿತಿಯಲ್ಲಿ ಆಧುನಿಕ ಜಗತ್ತಿನಲ್ಲಿ ಅತ್ಯಂತ ಸಂಕೀರ್ಣವಾಗುತ್ತಿರುವ ಮನುಷ್ಯನ ಮನಸ್ಸು ಮತ್ತು ಇದರ ಆರೋಗ್ಯವನ್ನು ಕಾಯ್ದುಕೊಳ್ಳುವುದು ಹೇಗೆ ಎಂಬುದನ್ನು ಲೇಖಕರು ಅಷ್ಟು ಆಳವಾಗಿ ಚರ್ಚಿಸಲು ಹೋಗುವುದಿಲ್ಲ. ಉದಾಹರಣೆಗೆ ನಮ್ಮ ದೇಶದಲ್ಲಿ ಹೊಗೆಯಾಡುತ್ತಿರುವ ವರ್ಗಭೇದ ಹಿಂದೂ ಮುಸಲ್ಮಾನ ವೈಷಮ್ಯ ಈ ಚಕ್ರದಲ್ಲಿ ಸಿಕ್ಕ ವ್ಯಕ್ತಿಯ ಮನಸ್ಸಿನ ಸ್ಥಿತಿ ಯಾವುದು ಇತ್ಯಾದಿ ವಿಷಯಗಳ ಬಗ್ಗೆ ಲೇಖಕರು ಚರ್ಚಿಸುವುದಿಲ್ಲ. ಇಲ್ಲಿಯ ಲೇಖನಗಳೆಲ್ಲಾ ವೈಯಕ್ತಿಕ (ಇಂಡಿಯ್ಯೂಜಯಲ್) ಮಾನಸಿಕ ಸಮಸ್ಯೆಗೆ ಪರಿಹಾರ ಅದರ ಸ್ವಾಸ್ಥ್ಯ ಕಾಪಾಡಿಕೊಳ್ಳುವುದರಲ್ಲಿ ಮಾತ್ರ ಸೀಮಿತವಾಗಿವೆ.

ದಾಂಪತ್ಯ ಸಮಸ್ಯೆಗಳು : ಇದೂ ಕೂಡ ಸಿ.ಆರ್. ಚಂದ್ರಶೇಖರ್ ಅವರ ಕೃತಿ. ದಾಂಪತ್ಯದಲ್ಲಿನ ಮನೋವೈಜ್ಞಾನಿಕ ಹಾಗೂ ದೈಹಿಕ ಎರಡೂ ಸಮಸ್ಯೆಗಳ ಬಗ್ಗೆ ಈ ಕೃತಿಯಲ್ಲಿ ಚರ್ಚಿಸುತ್ತಾರೆ. ದಾಂಪತ್ಯ ಸಮಸ್ಯೆಗಳು ಉದ್ಭವಿಸಲು ಹಲವಾರು ಕಾರಣಗಳುಂಟು. ಕೆಲವು ಲೈಂಗಿಕ ಕಾರಣಗಳಾದರೆ ಕೆಲವು ಮನೋವೈಜ್ಞಾನಿಕ. ಲೈಂಗಿಕ ಅನಾಸಕ್ತಿ, ಶೀಘ್ರವೀರ್ಯಸ್ಖಲನ ಷಂಢತನದಂತಹ ಲೈಂಗಿಕ ದುರ್ಬಲತೆಯಿಂದ ದಂಪತಿಗಳಲ್ಲಿ ಉದ್ಭವಿಸುವ ಸಮಸ್ಯೆಗಳ ಬಗೆಗೆ ಲೇಖಕರು ಮಾಹಿತಿ ಒದಗಿಸುತ್ತಾರೆ. ದಾಂಪತ್ಯ ವಿರಸವೆಂಬ ಬೆಂಕಿ ದಂಪತಿಗಳನ್ನಲ್ಲದೇ ಇಡೀ ಕುಟುಂಬವನ್ನು ಹೇಗೆ ಸುಡಬಲ್ಲದು ಎಂಬ ಕಳವಳವನ್ನು ನಿವಾರಿಸುವುದೇ ಲೇಖಕರ ಮುಖ್ಯ ಆಶಯ.

ಯಂತ್ರ ದೇಹ ಮನಸ್ಸು : ಎಚ್.ಎಸ್. ಮೋಹನ ಅವರ ಈ ಕೃತಿಯಲ್ಲಿ ವೈದ್ಯಕೀಯದಲ್ಲಿ ಯಾಂತ್ರೀಕರಣ ಇತ್ತೀಚಿನ ಬೆಳವಣಿಗೆ ವಿವಿಧ ರೋಗಲಕ್ಷಣಗಳು ಹಾಗೂ ಇತರ ಆರೋಗ್ಯ ಮತ್ತು ವೈದ್ಯಕೀಯ ಲೇಖನಗಳು ಮನೋವೈಜ್ಞಾನಿಕ ಲೇಖನಗಳು ಈ ಕೃತಿಯಲ್ಲಿ ಒಳಗೊಂಡಿವೆ. ಸ್ಕಾನರ್, ಎನ್.ಎಂ.ಆರ್., ಪ್ಲಾಸ್ಟಿಕ್ ಸರ್ಜರಿ, ಮ್ಯಾಮೊಗ್ರಾಫಿ, ತಲೆನೋವು ಏಕೆ ಬರುತ್ತದೆ, ದಿಢೀರ್ ಹೊಟ್ಟೆನೋವು, ಅಲರ್ಜಿ, ಮದ್ಯಪಾನಿಗಳಲ್ಲಿ ಹೆಚ್ಚುತ್ತಿರುವ ಯಕೃತ್ತಿನ ಸಿಂಡ್ರೋಮ, ಹೆಣ್ಣುಮಕ್ಕಳ ಸಂತತಿ ಕಡಿಮೆಯಾಗುತ್ತಿರುವುದರ ಬಗ್ಗೆ, ಒಲಂಪಿಕ್ಸ್‌ನಲ್ಲಿ ಔಷಧಿ ಸೇವನೆ ಸ್ಪರ್ಧೆ, ಮೇಲರಿಮೆ, ಕೀಳರಿಮೆ, ಮಕ್ಕಳ ಸ್ವಭಾವದಲ್ಲಿ ಭಿನ್ನತೆ ಏಕೆ -ಎಂಬ ವಿವಿಧ ವಿಷಯಗಳ ಬಗ್ಗೆ ಲೇಖಕರು ವಿವರ ನೀಡುತ್ತಾರೆ. ಒಲಂಪಿಕ್ಸ್‌ನಂತಹ ಪ್ರತಿಷ್ಠಿತ ಕ್ರೀಡೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮಾದಕ ಸೇವನೆ ಆದರ ಪರಿಣಾಮಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿರುವುದು ಈ ಪುಸ್ತಕದ ವಿಶೇಷತೆ.

ನಮ್ಮ ಶರೀರ—ಅದರ ರಕ್ಷಣೆ : ಸಿ.ಆರ್. ಚಂದ್ರಶೇಖರ ಅವರ ಈ ಪುಸ್ತಕದಲ್ಲಿ ಅಚ್ಚುಕಟ್ಟಾದ ಚಿತ್ರಗಳೊಂದಿಗೆ ದೇಹದ ವಿವಿಧ ಅಂಗಗಳ ರಚನೆ ಕಾರ್ಯ ವೈಖರಿಗಳನ್ನು ವಿವರಿಸಿದ್ದಾರೆ. ಪ್ರಾಥಮಿಕವಾಗಿ ನಮ್ಮ ದೇಹದ ಅಂಗಾಂಗಗಳ ರಚನೆಯ ಜ್ಞಾನ ಪಡೆಯಬಯಸುವವರಿಗೆ ಇದೊಂದು ಉಪಯುಕ್ತ ಪುಸ್ತಕ. ಈ ಪುಸ್ತಕ ಕಿರಿಯರಿಗಾಗಿ ಬರೆದುದ್ದಾಗಿದೆ. ಎಲ್ಲರೂ ಓದಬೇಕಾದ ಪುಸ್ತಕ.

ಕೀಟ ಜಗತ್ತು: 'ಪ್ರಾಣಿ ಪರಿಸರ' ದಂತಹ ಲವಲವಿಕೆಯ ವೈಜ್ಞಾನಿಕ ಬರಹಗಳಿಂದ ಚಿರಪರಿಚಿತರಾಗಿರುವ ಡಾ ಕೃಷ್ಣಾನಂದ ಕಾಮತರ ಈ ವರ್ಷದ ಕೃತಿ 'ಕೀಟಜಗತ್ತು' ನಮ್ಮ ಸುತ್ತಮುತ್ತ ನಮ್ಮ ಜೊತೆಯಲ್ಲೇ ಇರುವ ಕ್ಷುದ್ರಜೀವ ಜಂತುಗಳ ಜೀವನವನ್ನು ಸ್ವಾರಸ್ಯಕರವಾಗಿ ಬಿಚ್ಚಿಡುವ ಕೃತಿ. ಈ ಕೀಟ ಜಗತ್ತನ್ನು ಕಾಮತರು ಎರಡು ಭಾಗದಲ್ಲಿ ಚರ್ಚಿಸುತ್ತಾರೆ. ಮೊದಲನೆಯ ಭಾಗದಲ್ಲಿ ಪಾತರಗಿತ್ತಿ, ರೇಶಿಮೆ ಪತಂಗ, ತಿಗಣೆ, ಧಾನ್ಯಕೀಟ, ಅಕ್ಕಿ ಪತಂಗ, ಷಟ್ಪದಿಗಳು -ಹೀಗೆ ಮುಂತಾದ ಕೀಟ ಜಗತ್ತಿನ ಪರಿಚಯ ಮಾಡಿಕೊಡುತ್ತಾರೆ. ಎರಡನೆಯ ಭಾಗದಲ್ಲಿ ಇರುವೆಗಳ ಇರುವನ್ನು ಕುರಿತು ಚರ್ಚಿಸುತ್ತಾರೆ. ಡಾ ಕಾಮತರು ಈ ಕೀಟಗಳಿಗೆ ಅವುಗಳ ಪ್ರವೃತ್ತಿಗೆ ತಕ್ಕಂತೆ ಇಟ್ಟ ಅನ್ವರ್ಥಕ ಹೆಸರು ತುಂಬಾ ಸ್ವಾರಸ್ಯಕರವಾಗಿವೆ. ಉದಾಹರಣೆಗೆ - ಹೋಗದ ಅತಿಥಿ ತಗಣಿ, ಪೀಡನೆಗೆ ಹೆಸರಾದ ಪ್ರಾಣಿ ಇರುವೆ, ಪುಟ್ಟದೆವ್ವ ಧಾನ್ಯಕೀಟ, ತುತ್ತಿನಚೀಲದ ಕೊಳ್ಳೆಗಾರ ಅಕ್ಕಿಪತಂಗ, ಮೀಸೆ ಮಂಡೋದರಿಯರು —ಇತ್ಯಾದಿ.

ಮಿಸ್ಸಿಂಗ್ ಲಿಂಕ್ : ಡಾರ್ವಿನ್ನನ ವಿಕಾಸವಾದ ಮತ್ತು ಮಂಗನಿಂದ ಮಾನವ ಎಂಬ ಸಿದ್ಧಾಂತವನ್ನು ತಲೆಬುರುಡೆ ಪಳೆಯುಳಿಕೆಗಳ ನಿಗೂಢತೆಯನ್ನು ಕುತೂಹಲ ಹುಟ್ಟಿಸುವ ರೀತಿಯಲ್ಲಿ ಕೆ.ಪಿ. ಪೂರ್ಣಚಂದ್ರತೇಜಸ್ವಿಯವರು ತಮ್ಮ "ಮಿಸ್ಸಿಂಗ್ ಲಿಂಕ್" ಪುಸ್ತಕದಲ್ಲಿ ಚರ್ಚಿಸಿದ್ದಾರೆ. ಜೀವಿಗಳು ವಿಕಾಸವಾದಂತೆ ಈಗ ನಾವು ಕಾಣುವ ಮನುಷ್ಯ ಜೀವಿ ಲಕ್ಷಾಂತರ ವರ್ಷಗಳ ಹಿಂದೆ ಇದ್ದ ಮೂಲರೂಪ

ಯಾವ ರೀತಿಯಲ್ಲಿ ರೂಪಾಂತರ ಹೊಂದುತ್ತ ಬಂತು, ಈಗ ಇರುವ ಮಾನವ ಆಕಾರಕ್ಕೆ ಮೂಲ ಯಾವುದು? ಮಾನವ ಮತ್ತು ಮಂಗನಿಗೆ ನಡುವೆ ಏಕರೂಪದಲ್ಲಿ ಮಧ್ಯಸ್ಥಿಕೆ ವಹಿಸಿದ ಆಕೃತಿ ಯಾವುದು? ಬೇರೆ ಬೇರೆ ದೇಶಗಳಲ್ಲಿ ವಿಜ್ಞಾನಿಗಳು ತಮಗೆ ದೊರೆತ ತಲೆಬುರುಡೆ ಪಳೆಯುಳಿಕೆಗಳನ್ನಿಟ್ಟುಕೊಂಡು ತಮ್ಮ ತಮ್ಮ ಸಿದ್ಧಾಂತಗಳನ್ನು ವಿಸ್ಮಯ ರೀತಿಯಲ್ಲಿ ಮಂಡಿಸುತ್ತ ತಲೆಬುರುಡೆಯ ರಹಸ್ಯವನ್ನು ಬೇಧಿಸುವಲ್ಲಿ ಪಟ್ಟ ಶ್ರಮ ಸಾಧನೆಯ ರೋಮಾಂಚಕಾರಿ ಪತ್ತೇದಾರಿ ಶೈಲಿಯ ಕೃತಿಯೇ "ಮಿಸ್ಸಿಂಗ್ ಲಿಂಕ್". ಸಣ್ಣಕಥೆ, ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರು ಪಡೆದ ತೇಜಸ್ವಿಯವರು ಸೃಷ್ಟಿಯ ನಿಗೂಢತೆ, ಅದರ ನಿರಂತರ ವಿಸ್ಮಯ ವೈವಿಧ್ಯವನ್ನು ತಮ್ಮ ವೈಜ್ಞಾನಿಕ ಕೃತಿಗಳಲ್ಲಿ ಸ್ವಾರಸ್ಯಪೂರ್ಣವಾಗಿ ಚರ್ಚಿಸುತ್ತಾರೆ. ತೇಜಸ್ವಿಯವರ ವೈಜ್ಞಾನಿಕ ಕೃತಿ ಓದುತ್ತಿದ್ದಂತೆ ಅವರು ವಿಸ್ಮಯಗೊಳ್ಳುವ ರೀತಿ ನಮಗೆ ಅವರು ಒಬ್ಬ ಕಾದಂಬರಿಕಾರರೆಂಬುದು ನೆನಪಿಗೆ ಬರದೆ ಇರುವುದಿಲ್ಲ. ಸ್ವಾರಸ್ಯಪೂರ್ಣ ವಿಸ್ಮಯಾತ್ಮಕ ವಿಶ್ಲೇಷಣೆಯೇ ವೈಜ್ಞಾನಿಕ ದೃಷ್ಟಿಕೋನ ಮೂಡಿಸುವಲ್ಲಿ ತೆಳುವಾಗುತ್ತದೆಯೆ? ಇದನ್ನು ಗಂಭೀರವಾಗಿ ಯೋಚಿಸಬೇಕಾಗಿದೆ.

ಪೆಡಂಭೂತಗಳು ಅಳಿದವೇಕೆ : ವೈಜ್ಞಾನಿಕ ಬರಹಗಳಿಗೆ ಹೆಸರಾದ ಟಿ.ಆರ್. ಅನಂತರಾಮು ಅವರು ಈ ಕೃತಿಯಲ್ಲಿ ಲಕ್ಷಾಂತರ ವರ್ಷಗಳ ಹಿಂದೆ ಇದ್ದ ದಢೂತಿ ದೇಹದ (ಸುಮಾರು ಏಳು ಮೀಟರಿನಿಂದ ಮೂವತ್ತು ಮೀಟರವರೆಗೆ) 'ಹೆರೆಲಾಸಾರೆಸ್', ಮೆಗೊಲೊಸಾರಸ್, ಬ್ರಾಂಟೋಸಾರಸ್ ಇತ್ಯಾದಿ ಪೆದ್ದು ಪ್ರಾಣಿಗಳ ರುದ್ರರಮಣೀಯ ಪರಿಚಯ ಮಾಡಿಕೊಡುವ ಪುಸ್ತಕ ಇದು. ಇವರ ಪ್ರಕಾರ ಈ ದಢೂತಿ ಪ್ರಾಣಿಗಳ ದೇಹ ದೈತ್ಯಾಕಾರವಾಗಿದ್ದರೂ ಮೆದುಳು ಮಾತ್ರ ತುಂಬಾ ಚಿಕ್ಕದು. ಇವುಗಳ ಅಳಿವಿಗೆ ಪ್ರಕೃತಿಯ ವಿಕೋಪವೇ ಕಾರಣ ಎಂದು ಲೇಖಕರು ಅಭಿಪ್ರಾಯಪಟ್ಟರೂ ವಿಕಾಸವಾದದ ಪ್ರಕಾರ ಏಕಾಏಕಿ ಅಳಿಯದೆ ಇವು ರೂಪಾಂತರ ಹೊಂದಿರಬಹುದೆ ಎಂಬ ಓದುಗರ ಸಂಶಯಕ್ಕೆ ಲೇಖಕರು ಈ ಪುಸ್ತಕದಲ್ಲಿ ಯಾವ ವಿವರಣೆಯನ್ನೂ ನೀಡಿಲ್ಲ.

ಜೀವ ಜಾಲ : ಚಂದ್ರಶೇಖರ ದುಬ್ಬಿ ಅವರ 'ಜೀವ ಜಾಲ' ಆಸಕ್ತರಿಗೆ ಮಾತ್ರವಲ್ಲ, ಮಕ್ಕಳಿಗೆ ಕೈತುಂಬ ಕೊಡುವ ಉಡುಗೊರೆ. "ಜೀವವಿಕಾಸ ಪಥದ ಸರಪಳಿಯಲ್ಲಿ ತಮ್ಮ ಬದುಕನ್ನು ಅದ್ಭುತ ರೀತಿಯಲ್ಲಿ ರೂಪಿಸಿಕೊಂಡಿರುವ ಜೀವಿಗಳ ಬದುಕಿನ ರೀತಿ ಅತ್ಯಂತ ಸೋಜಿಗವಾದುದು". ಎಂಬ ಬೆನ್ನುಡಿಯ ಮಾತು ಸತ್ಯ. ಪುಸ್ತಕವನ್ನು ತೆರೆದರೆ ಎಡಭಾಗಕ್ಕೆ ಜೀವರಾಶಿಗಳ ಒಂದೊಂದೇ ಚಿತ್ರ ಬಲಭಾಗಕ್ಕೆ ಅದರ ಬಗೆಗೆ ಖಚಿತವೂ ವೈಜ್ಞಾನಿಕವೂ ಅರ್ಥಪೂರ್ಣವಾದ ವಿವರಣೆ. ಆಗಸ, ಭೂಮಿ ಮತ್ತು ಸಾಗರಗಳಲ್ಲಿರುವ ಪ್ರಾಣಿ, ಪಕ್ಷಿ, ಕೀಟಗಳ ಬಗೆಗೆ ತೋರಿಸಿರುವ ಆಸಕ್ತಿ ಪುಸ್ತಕವನ್ನು ಕೆಳಗೆ ಇಡದಂತೆ ಮಾಡುತ್ತದೆ. 'ಲಂಕೇಶ್ ಪತ್ರಿಕೆ'ಯಲ್ಲಿ ಮೊದಲು ಮಕ್ಕಳಿಗಾಗಿ ಬರುತ್ತಿದ್ದ, ಪ್ರಸ್ತುತ ಸಂಕಲನ. ಈಗ ಮುದ್ರಣಗೊಂಡು ಬಂದಿದೆ. ಪ್ರಾಣಿ, ಪಕ್ಷಿ, ಜಲಚರಗಳ ಆಹಾರ ಕ್ರಮ, ಸಂತಾನಕ್ರಿಯೆ, ಪ್ರೇಮ, ಕಾಳಗ, ಜಾಣ್ಮೆ, ದಡ್ಡತನ, ಮೊದಲಾದ ವಿವರಗಳು ನಮ್ಮನ್ನು ಹಿಡಿದು ಓದುವಂತೆ ಮಾಡುತ್ತದೆ.

ಇಂದ್ರಪ್ರಸ್ಥ ಪ್ರಕಾಶನದ ಉತ್ಸಾಹಿ ಗೆಳೆಯರ ಪುಸ್ತಕ ಪ್ರೀತಿ, ಪರಿಸರದ ಬಗೆಗಿನ ಕಾಳಜಿ ಇಂಥದೊಂದು ಪುಸ್ತಕ ಬರುವುದರಲ್ಲಿ ಸಹಾಯಕವಾಗಿದೆ. ಅಲ್ಲಲ್ಲಿ ಕೆಲವು ತಾಂತ್ರಿಕ ದೋಷಗಳನ್ನು ಹೊರತುಪಡಿಸಿದರೆ ಮಕ್ಕಳು, ಆಸಕ್ತರು ಓದಬೇಕಾದ ಪುಸ್ತಕ.

ಸಸ್ಯ ಪ್ರಪಂಚ : ಈ ವರ್ಷದಲ್ಲಿ ಬಂದ ಕೃಷ್ಣಾನಂದ ಕಾಮತ್‌ರ ಇನ್ನೊಂದು ಕೃತಿ ಇದು. ಕೋಟ್ಯಂತರ ವರ್ಷಗಳ ಹಿಂದೆ ಸಸ್ಯಗಳ ಆವಿಷ್ಕಾರದ ಇತಿಹಾಸವನ್ನು ಬಿಚ್ಚಿಡುವ ಲೇಖನ ಇದಾಗಿದೆ. ನಿಸರ್ಗದ ಕೃಷಿಯೇತರ ಸಸ್ಯಗಳ ಪರಿಚಯವನ್ನು ಮಾಡಿಕೊಡುತ್ತಾ ನಮ್ಮ ವನಸಿರಿ ಅದರ ಅಳಿವು ಉಳಿವು ರೂಪಾಂತರ, ಅವುಗಳ ರೋಧನ, ಗಿಡಮರಗಳು ಕೋಟ್ಯಂತರ ವರ್ಷಗಳಿಂದ ಬೆಳೆದು ಬಂದ ರೀತಿ ಇತ್ಯಾದಿ ವಿಷಯಗಳನ್ನು ಲೇಖಕರು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಇಷ್ಟು ಬೃಹತ್ ಆದ ಸಸ್ಯ ಪ್ರಪಂಚವನ್ನು ಸುಮಾರು ನೂರು ಪುಟಗಳಲ್ಲಿ ಕ್ರೋಢೀಕರಿಸಿ ವಿವರಿಸಲು ಲೇಖಕರು ಪಟ್ಟ ಪ್ರಯತ್ನ ಪ್ರಾಮಾಣಿಕವಾದರೂ ವಿವರಗಳನ್ನು ಮೊಟಕುಗೊಳಿಸಿದ್ದರಿಂದ ಕೊರತೆ ಎನ್ನಿಸುತ್ತದೆ

ಭವಿಷ್ಯವಾಚನ –ಜಾತಕ ಮತ್ತು ಭವಿಷ್ಯ : ವೈಜ್ಞಾನಿಕ ಬರೆಹಗಳಿಗೆ ಹೆಸರಾದ ಇನ್ನೊಬ್ಬ ಮುಖ್ಯ ಲೇಖಕರೆಂದರೆ ಜಿ.ಟಿ. ನಾರಾಯಣರಾವ್ ಅವರು 'ಭವಿಷ್ಯವಾಚನ' ಮತ್ತು 'ಜಾತಕ ಮತ್ತು ಭವಿಷ್ಯ' ಎಂಬ ಎರಡೂ ಕೃತಿಗಳಲ್ಲಿ ಜ್ಯೋತಿಃಶಾಸ್ತ್ರವನ್ನು ಸಂಪೂರ್ಣವಾಗಿ ಅಲ್ಲಗಳೆಯುವ ಪ್ರಯತ್ನ ಮಾಡಿದ್ದಾರೆ. "ಜಾತಕ ಮತ್ತು ಭವಿಷ್ಯ" ಈ ಪುಸ್ತಕ ಇದೇ ವರುಷ ಮರುಮುದ್ರಣ ಕಂಡಿದೆ. "ಭವಿಷ್ಯ ವಾಚನ" ಇದೇ ವರ್ಷ ಪ್ರಕಟಗೊಂಡ ಕೃತಿ. "ಭವಿಷ್ಯ ವಾಚನ" ಈ ಪುಸ್ತಕ "ಜಾತಕ ಮತ್ತು ಭವಿಷ್ಯ" ಪುಸ್ತಕದ ಮುಂದುವರಿಕೆ ಎಂದೇ ಹೇಳಬಹುದು.

ನಮ್ಮ ಹುಟ್ಟು ಸಾವು ಆಗುಹೋಗುಗಳಿಗೆ ಚೈತನ್ಯಶೀಲವಾದ ಸೃಷ್ಟಿಯ ಗ್ರಹಗಳು ಕಾರಣವೆಂದು ಲೆಕ್ಕಾಚಾರ ಹಾಕಿ ಹೇಳುವುದು ಎಂದು ಜ್ಯೋತಿಃಶಾಸ್ತ್ರ ಹೇಳಿದರೆ ನಮ್ಮ ಹುಟ್ಟು ಸಾವು ಆಗುಹೋಗುಗಳಿಗೂ ಜಡವಾದ ಸೃಷ್ಟಿಯ ಗ್ರಹಗಳಿಗೂ ಯಾವ ಸಂಬಂಧವೂ ಇಲ್ಲವೆಂದು ವಿಜ್ಞಾನಿಗಳ ಅಭಿಪ್ರಾಯ. ಸೃಷ್ಟಿಯ ಜಡ ತತ್ತ್ವವನ್ನು ಒಪ್ಪಿಕೊಂಡ ಲೇಖಕರಾದ ಜಿ.ಟಿ. ನಾರಾಯಣರಾವ್ ಇವರು ಸಾಕಷ್ಟು ವಿವರಣೆಯೊಂದಿಗೆ ತಮ್ಮ ವಾದವನ್ನು ಮಂಡಿಸುತ್ತಾ ಜ್ಯೋತಿಃಶಾಸ್ತ್ರವನ್ನು ಅಲ್ಲಗಳೆದಿದ್ದರೂ ಅವರು ಈ ಕೃತಿ ಖಂಡಿತಾ ಚರ್ಚೆಗೆ ವೇದಿಕೆಯನ್ನು ಮಾಡಿಕೊಡುತ್ತದೆ. "ಜಾತಕ ಮತ್ತು ಜ್ಯೋತಿಃಶಾಸ್ತ್ರ" ಸ್ವಲ್ಪ ಸರಳವಾದ ಶೈಲಿಯಿಂದ ಕೂಡಿದ್ದರೂ ಭವಿಷ್ಯವನ್ನೇ ಹೆಚ್ಚಾಗಿ ನಂಬುವ ಹಳ್ಳಿಯ ಓದುಗರಿಗೆ ತಲುಪುತ್ತದೆಯೇ ಎಂಬ ಅನುಮಾನ ಹುಟ್ಟುತ್ತದೆ. "ಭವಿಷ್ಯ ವಾಚನ" ಮಾತ್ರ ತೀರ ವೈಜ್ಞಾನಿಕ ವಿಶ್ಲೇಷಣೆಗಳ ಪಾರಿಭಾಷಿಕ ಶಬ್ದಗಳನ್ನೊಳಗೊಂಡಿದ್ದರಿಂದ ಲೇಖಕರ ಉದ್ದೇಶ ಓದುಗರನ್ನು ತಲುಪುವುದಿಲ್ಲ.ಜ್ಯೋತಿಃಶಾಸ್ತ್ರ ನಮ್ಮ ಹಿಂದು ಜನತೆಯ ಅವಿಭಾಜ್ಯ ಅಂಗವೆಂದೇ ಹೇಳಬಹುದು. ಇದರ ಮೂಲ ತಳಹದಿ "ನಂಬಿಕೆ".

ನಂಬಿಕೆಗೂ-ಮೂಢ ನಂಬಿಕೆಗೂ ವ್ಯತ್ಯಾಸವಿದೆ. ಜ್ಯೋತಿಃಶಾಸ್ತ್ರವನ್ನು ಜ್ಯೋತಿಷಿಗಳು, ಪುರೋಹಿತರೂ ದುರುಪಯೋಗ ಪಡಿಸಿಕೊಂಡಿದ್ದುಂಟು. ಹಾಗೆಂದು ಅದು ಆ ಶಾಸ್ತ್ರವೇ ಅಲ್ಲ ಎಂದು ಹೇಳಬಹುದು. ವೈಜ್ಞಾನಿಕ ಪರಿಮಿತಿಯನ್ನು ಮೀರಿದ ಶಾಸ್ತ್ರಗಳಲ್ಲೂ ಊನಗಳಿವೆ : ಹಾಗೆಂದು ಆ ಶಾಸ್ತ್ರಗಳ ಹಿಂದೆ ಇರುವ ನಂಬಿಕೆಗಳನ್ನು ಅಶಾಸ್ತ್ರೀಯ ಎನ್ನುವಂತಿಲ್ಲ. ಮಾನವನ ಮನಸ್ಸನ್ನು ಎಷ್ಟೇ ನಾವು ವೈಜ್ಞಾನಿಕ ವಿಶ್ಲೇಷಣೆಗಳಿಂದ ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸಿದರೂ, ಅದು ಅದಕ್ಕೆ ಮೀರಿದ್ದು, ಅದರ ಆಗುಹೋಗುಗಳಿಗೆ ವೈಜ್ಞಾನಿಕ ವಿಶ್ಲೇಷಣೆಯೊಂದೇ ಮಾರ್ಗವಲ್ಲ. ವಿಕೃತಗೊಂಡ ಮನುಷ್ಯನ ಜೀವನಕ್ಕೆ ಈ ಶಾಸ್ತ್ರಗಳು ಬೇರೆ ರೀತಿಯಲ್ಲಿ ಮಾಯಿಸುವ ಸ್ಪರ್ಶ (ಹೀಲಿಂಗ್ ಟಚ್) ನೀಡುತ್ತವೆ. ಲೇಖಕರು ಸಾರಾಸಗಟಾಗಿ ಜ್ಯೋತಿಃಶಾಸ್ತ್ರವನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದ್ದು ಅದರ ಇನ್ನೊಂದು ಮುಖವನ್ನು ಕಡೆಗಣಿಸಿದ್ದಾರೆ. ಭಾರತ ಹಳ್ಳಿಗಳ ನಾಡು ನಮಗೆ ವಿಜ್ಞಾನದ ಆಸರೆ ಬೇಕಾಗಿರುವಂತೆ ವಿಜ್ಞಾನದ ಪರಿಮಿತಿಯನ್ನು ಮೀರಿದ ಶಾಸ್ತ್ರಗಳ ಆಸರೆಯೂ ಮತ್ತು ಮನೋವೈಜ್ಞಾನಿಕ ಸಾಧನೆಯ ಆಸರೆಯೂ ಅಷ್ಟೇ ಅವಶ್ಯವಾಗಿ ಬೇಕಾಗಿದೆ. ಇದನ್ನು ಪ್ರತಿಯೊಬ್ಬ ವೈಜ್ಞಾನಿಕ ಬರಹಗಾರರು ಮರೆಯಬಾರದು. ಪ್ರಯೋಗ ಶಾಲೆಯಲ್ಲಿ ಸಾಬೀತಾದುದೊಂದೇ ಪ್ರಮಾಣವಲ್ಲ ಅಲ್ಲವೆ?

ಸೂರ್ಯನ ಸಾಮ್ರಾಜ್ಯ : ಜಿ.ಟಿ. ನಾರಾಯಣರಾವ್ ಅವರ ಇನ್ನೊಂದು ಕೃತಿ 'ಸೂರ್ಯನ ಸಾಮ್ರಾಜ್ಯ' ಲೇಖಕರು ಈ ಕೃತಿಯಲ್ಲಿ ಭೂಕೇಂದ್ರವಾದ ಪರಂಪರೆ, ಕೆಪ್ಲರ್ ಆವಿಷ್ಕರಿಸಿದ ಗ್ರಹ ಚಲನ ನಿಯಮಗಳನ್ನು, ವಿಶ್ವ ಗುರುತ್ವಾಕರ್ಷಣ ನಿಯಮ, ನ್ಯೂಟನ್ ನೀಡಿದ ಗುರುತ್ವ ಸ್ಪರ್ಶ, ಸೌರವ್ಯೂಹ ಜನನ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಸೂರ್ಯಕೇಂದ್ರ ವಾದವನ್ನು ಸ್ಪಷ್ಟಪಡಿಸಿಕೊಳ್ಳಲು ವಿಜ್ಞಾನಿಗಳು (ಉದಾ ಗೆಲಿಲಿಯೊ, ಕೆಪ್ಲರ್, ನ್ಯೂಟನ್) ನಡೆಸಿದ ಪ್ರಯೋಗ ಸಿದ್ಧಾಂತಗಳನ್ನು ಸ್ವಾರಸ್ಯಪೂರ್ಣವಾಗಿ ಈ ಕೃತಿಯಲ್ಲಿ ದಾಖಲಿಸಲಾಗಿದೆ. ಇದೊಂದು ಉಪಯುಕ್ತ ಪುಸ್ತಕ.

ಈ ವರ್ಷದಲ್ಲಿ ಬಂದ ಇನ್ನೊಂದು ಉಪಯುಕ್ತ ವೈಜ್ಞಾನಿಕ ಸಾಹಿತ್ಯ ಕೃತಿಯೆಂದರೆ, ಬಿ.ಪಿ. ರಾಧಾಕೃಷ್ಣ ಮತ್ತು ಎಸ್. ಜಿತೇಂದ್ರಕುಮಾರ್ ಇವರೀರ್ವರೂ ಕೂಡಿ ಬರೆದ "ಅಂತರ್ಜಲ" ಎಂಬ ಪುಸ್ತಕ. ಪದೇ ಪದೇ ನಮ್ಮ ದೇಶ ಎದುರಿಸುತ್ತಿರುವ ನೀರಿನ ಅಭಾವವನ್ನು ಬಗೆಹರಿಸಿಕೊಳ್ಳಲು ಈ ಪುಸ್ತಕ ಸಾಕಷ್ಟು ಮಾರ್ಗದರ್ಶಿಯಾಗುತ್ತದೆ. ಭಾರತ ಜಲ ಸಮೃದ್ಧ ದೇಶ. ಆದರೆ ತಕ್ಕ ರೀತಿಯಲ್ಲಿ ಅದನ್ನು ಉಪಯೋಗಿಸಿಕೊಳ್ಳದೇ ಇರುವುದರಿಂದ ನೀರಿನ ಅಭಾವ ನಮಗೆ ಎದುರಾಗಿದೆ ಎಂಬುದು ಲೇಖಕರ ಅಭಿಮತ. ಸುಮಾರು ಮೂನ್ನೂರು ಪುಟಗಳಲ್ಲಿರುವ ಈ ಪುಸ್ತಕ ೧೯೯೨ರಲ್ಲಿ ಬಂದ ವೈಜ್ಞಾನಿಕ ಕೃತಿಗಳಲ್ಲಿಯೇ ಉತ್ತಮ ಪುಸ್ತಕ ಎಂದು ಹೇಳಬಹುದು. ನೆಲದಲ್ಲಿನ ಜಲ ನೀರಿನ ವಿವಿಧ ರೂಪಗಳು, ಮಳೆ, ನೆಲದಲ್ಲಿ ಜಲಶೇಖರವಾಗುವ ಬಗೆ, ನೆಲದ ನೀರನ್ನು ಪಡೆಯುವ ವಿಧಾನಗಳು,

ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ಬಳಕೆ, ನೆಲದ ನೀರಿಗಾಗಿ ರಾಜ್ಯದಲ್ಲಿ ನಡೆಸಿದ ಕೆಲವು ಸಂಶೋಧನೆಗಳ ವಿವರ –ಹೀಗೆ ಅಂತರ್ಜಲಕ್ಕೆ ಸಂಬಂಧಪಟ್ಟ ಬೇರೆ ಬೇರೆ ವಿವರಗಳನ್ನು ಚರ್ಚಿಸಲಾಗಿದೆ.

ಟಿ.ಆರ್. ಅನಂತರಾಮು ಅವರ ಇನ್ನೊಂದು ಕೃತಿ "ರಾಜರ ಲೋಹ–ಲೋಹಗಳ ರಾಜ ಚಿನ್ನ" ತಲೆತಲಾಂತರದಿಂದ ಮಾನವನನ್ನು ಆಕರ್ಷಿಸಿದ ಲೋಹ ಚಿನ್ನ ಅದರ ಕಥೆಯೇ ಈ ಪುಸ್ತಕದಲ್ಲಿದೆ. ಪುಸ್ತಕದ ಕೊನೆಯಲ್ಲಿ ಕೊಟ್ಟ ಅನುಬಂಧ ಪಟ್ಟಿ ಗಮನಿಸಬೇಕಂತವುಗಳಾಗಿವೆ.

ಜಿ.ಆರ್. ಲಕ್ಷ್ಮಣರಾವ್ ಅವರ "ಬೈಜಿಕ ವಿದ್ಯುತ್ತು " (ನ್ಯೂಕ್ಲಿಯರ್ ಪವರ್) ಕೃತಿಯಲ್ಲಿ ಪರಮಾಣು ಶಕ್ತಿಯ ಬಗ್ಗೆ ವಿವರಿಸಲಾಗಿದೆ. ಕೈಗಾ ಪ್ರಾಜೆಕ್ಟ್, ಚೆರ್ನೋಬೆಲ್ ದುರಂತದ ಮೇಲೆ ಬೆಳಕು ಚೆಲ್ಲುವ ಕೃತಿ. ಯುರೇನಿಯಂ ಅದಿರಿನಿಂದ ಬೈಜಿಕ್ ವಿದ್ಯುತ್ತನ್ನು ಬಿಡುಗಡೆಗೊಳಿಸುವ ವಿಧಾನವನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಆಧುನಿಕ ಜಗತ್ತಿನ ಚಾಲನೆಗೆ ಶಕ್ತಿ ಅನಿವಾರ್ಯ. ಆದರೆ ಈ ಬೃಹತ್ ಶಕ್ತಿ ಸಂಪಾದಿಸಲು ಹೋಗಿ ಅದರ ವಿನಾಶಕಾರಿ ಮಗ್ಗುಲನ್ನು ನಾವು ಮರೆಯಬಾರದು ಎಂಬುದು ಲೇಖಕರ ಅಭಿಪ್ರಾಯ.

ಪ್ರಕಟವಾಗಿರುವ ಎಲ್ಲಾ ಕೃತಿಗಳನ್ನು ಇಲ್ಲಿ ಪರಿಶೀಲಿಸಿಲ್ಲವಾದರೂ ೧೯೯೨ರ ವೈಜ್ಞಾನಿಕ ಕೃತಿರಚನೆಯ ಒಟ್ಟು ಮನಃಸ್ವರೂಪವನ್ನೂ ಕುರಿತು ಚರ್ಚೆಗೆ ಎಳೆದಿದ್ದೇನೆ. ವೈಜ್ಞಾನಿಕ ಸಾಹಿತ್ಯ, ಕನ್ನಡದಲ್ಲಿ ಅಪರೂಪವೂ ಅಲ್ಲ. ಹೊಸತೂ ಅಲ್ಲ. ಪಾರಿಭಾಷಿಕ ಪದಗಳ ನಿರ್ವಹಣೆಯಲ್ಲಿ ಮತ್ತು ವಿಷಯದ ಸುಲಭ ನಿರೂಪಣೆಯಲ್ಲಿ ನಮ್ಮ ಲೇಖಕರು ಪಳಗಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ 'ಅಂತರ್ಜಲ' ಕೃತಿ. ವೈಜ್ಞಾನಿಕ ವಿಷಯವನ್ನು ವಸ್ತುನಿಷ್ಠವಾಗಿ ಹೇಳುವಾಗ ಭಾಷೆ ನಿರೂಪಣೆಯಲ್ಲಿ ಎಡಚುಗಳುಂಟಾಗುವುದು ತಪ್ಪಿದ್ದಲ್ಲ. ನಮ್ಮ ಬಹಳಷ್ಟು ವೈಜ್ಞಾನಿಕ ಸಾಹಿತ್ಯಕಾರರು ಈ ಎಡಚುಗಳನ್ನು ನಿವಾರಿಸಿಕೊಂಡಿದ್ದಾರೆ.

"ಅಂತರ್ಜಲ"ದ ವಿಷಯ ಎಲ್ಲ ಬಗೆಯ ಜನರಿಗೆ ಸೇರುವಂತಹದಾದ್ದರಿಂದ ಇದರ ಓದುಗರು ವಿವಿಧ ವರ್ಗಗಳಲ್ಲಿರುವವರು. ಅವರೆಲ್ಲರಿಗೂ ಹೊಂದುವಂತಹ ಶೈಲಿಯನ್ನು ಲೇಖಕರು ಬಳಸಿದ್ದು ಕೃತಿಯ ಯಶಸ್ಸಿಗೆ ಕಾರಣವಾಗಿದೆ. "ಬೈಜಿಕ ವಿದ್ಯುತ್ತು" ಸರ್ವ ಸಾಮಾನ್ಯರಿಗೆ ಸಂಬಂಧಿಸಿದುದಲ್ಲ. ಇದು ಭೌತಶಾಸ್ತ್ರದ ಅದರಲ್ಲೂ "ನ್ಯೂಕ್ಲಿಯರ್ ಫಿಜಿಕ್ಸ್"ಗೆ ಸಂಬಂಧಿಸಿದ ಕಿರುವ್ಯಾಪ್ತಿಯ ವಿಷಯ. ಆದ್ದರಿಂದ ಇದರ ನಿರೂಪಣೆಯಲ್ಲಿ ಸರಳತೆ -ಸುಲಭತೆಗಿಂತ ಪಠ್ಯ ಕೇಂದ್ರಿತ ದೃಷ್ಟಿಯೇ ಮುಖ್ಯ ಮತ್ತು ಅನಿವಾರ್ಯ.

ಮೇಲಿನ ಪಾರಿಭಾಷಿಕ ನಿರೂಪಣೆಗೆ ಹೊರತಾದುದು ಪೂರ್ಣಚಂದ್ರತೇಜಸ್ವಿಯವರ ಪ್ರಯತ್ನ. ವೈಜ್ಞಾನಿಕ ಸತ್ಯದ ಕಡೆಗೆ ಓದುಗರನ್ನು ಸೆಳೆಯುವ ಸಾಮಾಜಿಕ ಕಳಕಳಿ ತೇಜಸ್ವಿಯವರ ಮುಖ್ಯ ಉದ್ದೇಶ. ವಿಜ್ಞಾನವನ್ನು

ಜನಪ್ರಿಯಗೊಳಿಸುವಲ್ಲಿ ಬಹು ಹಿಂದೆ ಶಿವರಾಮ ಕಾರಂತರು ಮಾಡಿದ್ದ ಪ್ರಯತ್ನಕ್ಕೆ ತೇಜಸ್ವಿಯವರು ಇನ್ನೊಂದು ಪುರವಣಿ ಜೋಡಿಸಿದಂತಾಗಿದೆ. ಇದು ಸ್ವಾಗತಾರ್ಹ ಪ್ರಯತ್ನ.

ವಿಜ್ಞಾನವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವಾಗ ಲೇಖಕರ ಉದ್ದೇಶಗಳು ಮುಖ್ಯವಾಗಿ ಎರಡು ಬಗೆಯವಾಗಿರುತ್ತವೆ. ೧. ಪಠ್ಯವನ್ನು ಯಥಾರ್ಥವಾಗಿ-ಬಹು ಶಿಸ್ತಿನಿಂದ ಪಾರಿಭಾಷಿಕ ನಿರೂಪಣೆಯಲ್ಲಿ ಒದಗಿಸುವುದು. ಹೀಗೆ ಮಾಡುವಾಗ ಲೇಖಕನಿಗೆ ಯಾವ ಸ್ವಾತಂತ್ರ್ಯವೂ ಇರಬೇಕಾಗಿಲ್ಲ. ಇದು ಕೃತಿ ಕೇಂದ್ರಿತ ಬರವಣಿಗೆ. ಇಂಥ ಬರವಣಿಗೆಗೆ ಮೇಲಿನ ಕೃತಿಗಳಲ್ಲಿ "ಬೈಜಿಕ ವಿದ್ಯುತ್ತು" ಒಂದೇ ಸೇರುತ್ತದೆ. ಈ ಕೃತಿರಚನೆಯಲ್ಲಿ ಲೇಖಕರು ಯಾಂತ್ರಿಕವಾಗಿ ನಿರೂಪಣೆ ಮಾಡಿಲ್ಲ. ವಿಷಯದ ಆಳ ಅಗಲಗಳನ್ನು ಮನದಟ್ಟು ಮಾಡಿಕೊಂಡು ಕನ್ನಡ ಓದುಗರಿಗೆ ಹೇಗೆ ಒದಗಿಸಬೇಕೆಂಬ ಎಚ್ಚರವನ್ನು ಇಟ್ಟುಕೊಂಡು ಬರೆದಿದ್ದಾರೆ. ಹೀಗಾಗಿ ಈ ಪಠ್ಯ ವೈಜ್ಞಾನಿಕ ಸಾಹಿತ್ಯಕ್ಕೆ ಸುಲಭವಾಗಿ ಸೇರ್ಪಡೆಯಾಗುತ್ತದೆ. ೨. ಪಠ್ಯವನ್ನು ಓದುಗರಿಗೆ ಅವರ ಮಟ್ಟಕ್ಕೆ ಒಯ್ದು ಅವರು ಸ್ಪಂದಿಸುವಂತೆ ಮಾಡುವುದೇ ಎರಡನೆಯ ಬಗೆ. ಇದನ್ನು ಸಾಧಿಸುವಾಗ ಲೇಖಕ ತಾನೆತ್ತಿಕೊಂಡ ವಿಷಯದಲ್ಲಿ ಪಳಗಿರಬೇಕು. ಅಂದರೆ ಪಾರಿಭಾಷಿಕತೆಯ ಜಡತೆಯಿಂದ ಕೃತಿಯನ್ನು ಬಿಡುಗಡೆಗೊಳಿಸಿ ಆಹ್ಲಾದಕರವೂ ಚೈತನ್ಯಶೀಲವೂ ಆದ ನಿರೂಪಣೆ ಮಾಡುವಂತಹ ಶೈಲಿಯನ್ನು ಪಡೆದಿರಬೇಕು. ಹೀಗಾದಾಗಲೇ ವೈಜ್ಞಾನಿಕ ಕೃತಿಗೆ ಸಾಹಿತ್ಯಕ ಮೌಲ್ಯ ಬರುವುದು. ಓದುಗನನ್ನು ಕೇಂದ್ರವಾಗಿಸಿಕೊಂಡು ಬರೆಯುವ ಪ್ರಯತ್ನದಲ್ಲಿ ಬಹುಪಾಲು ಲೇಖಕರು ಯಶಸ್ವಿಯಾಗಿದ್ದಾರೆ : ಅವರು ತಮ್ಮ ತಮ್ಮ ಅಧ್ಯಯನ ಕ್ಷೇತ್ರದ ಹೊಸ ಹೊಸ ಶೋಧನೆಗಳನ್ನು ಕನ್ನಡದಲ್ಲಿ ತರುತ್ತ ಹೋದರೆ ವಿಜ್ಞಾನ ಸಾಹಿತ್ಯ ಬೆಳೆದು ಕನ್ನಡದ ಅಭಿವ್ಯಕ್ತಿ ಕೂಡ ಹೆಚ್ಚುವುದರಲ್ಲಿ ಸಂದೇಹವಿಲ್ಲ.

●

* * *

ಮಕ್ಕಳ ಸಾಹಿತ್ಯ

— ಅಮರೇಶ ನುಗಡೋಣಿ

ಇತ್ತೀಚೆಗೆ ಕೆಲವರಾದರೂ ಮಕ್ಕಳ ಸಾಹಿತ್ಯದ ಬಗ್ಗೆ ಗಂಭೀರ ಚಿಂತನೆ ನಡೆಸಿರುವುದು ಸಂತೋಷದ ಸಂಗತಿ. ಶಿವರಾಮ ಕಾರಂತರು ಮಕ್ಕಳ ಮೇಳಗಳನ್ನು ನಡೆಸುತ್ತ ಅವರ ವಿಕಾಸಕ್ಕೆ ಹಲವು ಪ್ರಯೋಗಗಳಲ್ಲಿ ನಿರತರಾಗಿದ್ದಾರೆ. ಪಂಜೆ ಮಂಗೇಶರಾಯ, ಗೋವಿಂದ ಪೈ, ಕುವೆಂಪು, ಬೇಂದ್ರೆ, ದಿನಕರ ದೇಸಾಯಿ, ಹೊಯಿಸಳ, ಸಿದ್ಧಯ್ಯ ಪುರಾಣಿಕ ಮುಂತಾದ ಲೇಖಕರು ಮಕ್ಕಳಿಗಾಗಿ ಸಾಹಿತ್ಯ ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಮಕ್ಕಳ ಸಾಹಿತ್ಯಕ್ಕೆ ಪ್ರಶಸ್ತಿಯನ್ನು ನೀಡುತ್ತಿದೆ. ಮಕ್ಕಳ ಸಾಹಿತ್ಯಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನೂ ಇಡಲಾಗಿದೆ. ಜತೆಗೆ ಕೆಲವು ಖಾಸಗಿ ಬಹುಮಾನಗಳು ಮಕ್ಕಳ ಸಾಹಿತ್ಯಕ್ಕೆ ಮೀಸಲಾಗಿದೆ.

ಇಷ್ಟಾಗಿಯೂ ಕನ್ನಡದಲ್ಲಿ ಮಕ್ಕಳ ಸಾಹಿತ್ಯವು ಗಂಭೀರ ಚಿಂತನೆಗೆ ಅರ್ಹವಾಗಿದೆಯೆ? ಗಂಭೀರ ಚಿಂತನೆಗೆ ಅರ್ಹವಾಗುವ ಕೃತಿಗಳು ಬಂದಿವೆಯೇ ? ಈಗ ಪ್ರಕಟವಾಗುತ್ತಿರುವ ಕೃತಿಗಳನ್ನು ಅನುಲಕ್ಷಿಸಿ ಹೇಳಿದಂತಿರುವ "ಜಗತ್ತಿನ ಸಾಹಿತ್ಯಕ್ಕೆ ಒಂದು ಕೊಡುಗೆ ಎಂದು ಹೇಳುವಂಥ ಮಕ್ಕಳ ಸಾಹಿತ್ಯ ಕೃತಿ ಕನ್ನಡದಲ್ಲಿ ಇನ್ನು ಬಂದಿಲ್ಲ". ಎನ್ನುವ ಜಿ.ಎಸ್. ಶಿವರುದ್ರಪ್ಪನವರ ಮಾತು ನಿಜವಾದರೂ, ಈ ಬಗ್ಗೆ ಒಂದು ವಾತಾವರಣವನ್ನು ಮೂಡಿಸುವ ಜವಾಬ್ದಾರಿ ಸಾಹಿತಿಗಳ ಮೇಲಿದೆ - ಎಂದು ಭಾವಿಸಿದ್ದೇನೆ. ಬಂಗಾಳದಲ್ಲಿ ಒಬ್ಬ ಸಾಹಿತಿ ಹಿರಿಯರಿಗಾಗಿ ಎಷ್ಟೇ ಉತ್ಕೃಷ್ಟವಾದ ಸಾಹಿತ್ಯ ರಚಿಸಿದ್ದರೂ ಆತನಿಗೆ ಹೆಚ್ಚಿನ ಗೌರವ ಪಡೆದುಕೊಳ್ಳಬೇಕಾಗಿದ್ದರೆ ಸ್ವಲ್ಪವಾದರೂ ಮಕ್ಕಳಿಗಾಗಿ ಸಾಹಿತ್ಯ ರಚನೆ ಮಾಡಿರಲೇ ಬೇಕು -ಎಂದು ಹೇಳಲಾಗುತ್ತಿದೆ. ಮೊದಲೇ ಹೇಳಿದಂತೆ, ಇತ್ತೀಚೆಗೆ ಮಕ್ಕಳ ಸಾಹಿತ್ಯದ ಬಗ್ಗೆ ಚರ್ಚೆಯೇನೋ ಆಗುತ್ತಿದೆ. ಆ ಚರ್ಚೆಯ ಫಲವಾಗಿ ಹೊರಬರುತ್ತಿರುವ ಸಾಹಿತ್ಯ ಗಮನಿಸಿದರೆ ನಿರಾಶಾದಾಯಕ ಅನ್ನಬಹುದು. ಗಮನಾರ್ಹವಾದ ಒಂದು ಸಮಸ್ಯೆಯೆಂದರೆ ಸಾಹಿತ್ಯವು ಹೇಗೆ, ಯಾವ ಪ್ರಮಾಣದಲ್ಲಿ ಜನರನ್ನು ತಲುಪುತ್ತಿದೆ? ಎಂದು ಪ್ರಶ್ನೆ ಹಾಕಿಕೊಂಡರೆ, ಇದನ್ನೇ ಮಕ್ಕಳಿಗಾಗಿ ಬರೆದ

ಸಾಹಿತ್ಯವನ್ನು ಹೇಗೆ ಮಕ್ಕಳಿಗೆ ತಲುಪಿಸಬೇಕೆಂಬುದು ಸಮಸ್ಯೆಯಾಗುತ್ತದೆ. ಒಂದು ಕಡೆ ಬಡತನದಿಂದ ಶಿಕ್ಷಣ ಸಿಗದೇ ಇರುವುದು. ಇನ್ನೊಂದು ಕಡೆ ಮಧ್ಯಮ ವರ್ಗದ ಮಕ್ಕಳಿಗೆ ಸರಿಯಾದ ಶಿಕ್ಷಣ ದಕ್ಕದೆ ಇರುವುದು. ಮಗದೊಂದು ಕಡೆ ಉಳ್ಳವರ ಮಕ್ಕಳು ಇಂಗ್ಲಿಷ್ ವ್ಯಾಮೋಹಕ್ಕೆ ಬಿದ್ದು ಕನ್ನಡ ಸಂಸ್ಕೃತಿ, ಭಾಷೆ ಮುಂತಾದ ವಿಷಯದ ಬಗ್ಗೆ ಅಲಕ್ಷ್ಯದಿಂದಿರುವುದನ್ನು ಕಾಣುತ್ತಿದ್ದೇವೆ. ನೂರೋ ಇನ್ನೂರೋ ಕೊಟ್ಟು ಮಕ್ಕಳಿಗೆ ರ್‍ಯಾಂಬೋಗನ್ ಕೊಡಿಸುವ ತಂದೆ-ತಾಯಿಗಳೇ ಹೆಚ್ಚಾಗಿರುವಾಗ, ಇನ್ನು ಇವರು ತಮ್ಮ ಮಕ್ಕಳಿಗೆ ಪುಸ್ತಕ (ಪಠ್ಯ ಬಿಟ್ಟು) ಕೊಡಿಸುವವರ ಸಂಖ್ಯೆ ಕಮ್ಮಿ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಆದರೂ ನಮ್ಮಲ್ಲಿ ಓದುವವರ ಸಂಖ್ಯೆ ಕಮ್ಮಿಯಾಗುತ್ತಿದೆ ಎಂದು ಅನ್ನಿಸಿದರೂ ಪ್ರಕಟವಾಗುವ ಪುಸ್ತಕಗಳ ಸಂಖ್ಯೆಯೇನೂ ಕಮ್ಮಿಯಾಗಿಲ್ಲವಲ್ಲ!

೧೯೯೨ರಲ್ಲಿ ಪ್ರಕಟವಾದ ಮಕ್ಕಳ ಸಾಹಿತ್ಯವನ್ನು ಕುರಿತು ಸಮಗ್ರವಾಗಿ ಸಮೀಕ್ಷೆ ನಡೆಸುವುದಾಗಲೀ, ಪರಿಶೀಲಿಸುವುದಾಗಲಿ ಸಂಖ್ಯೆಯ ದೃಷ್ಟಿಯಿಂದ ಮಹತ್ವದ್ದಾಗಬಹುದು. ಹೀಗಾಗುವುದರಿಂದ, ಈ ಕೆಲಸವು ಔಪಚಾರಿಕ ನೆಲೆಯಲ್ಲಿಯೇ ನಡೆದಂತಾಗುತ್ತದೆಯೇ ಹೊರತು ವರ್ಷದ ಸಾಧನೆಯನ್ನು ಸ್ಪಷ್ಟವಾಗಿ ಗುರುತಿಸಿ ವಿಮರ್ಶಿಸುವುದಕ್ಕೆ ಧಕ್ಕೆ ಬರುವ ಸಂಭವವೂ ಉಂಟು. ಮೇಲಾಗಿ ವರ್ಷದ ಎಲ್ಲ ಕೃತಿಗಳನ್ನು ಸಂಗ್ರಹಿಸುವುದು ಈ ಲೇಖನದ ಕಾಲಮಿತಿಯಲ್ಲಿ ಸಾಧ್ಯವಾಗಿಲ್ಲ. ಇಷ್ಟಾಗಿಯೂ ಕೈಯಿಗೆ ಸಿಕ್ಕ ಕೃತಿಗಳನ್ನು ಅದರಲ್ಲಿ ಮುಖ್ಯ ಎನಿಸಿದವುಗಳನ್ನು ಇಲ್ಲಿ ಗಮನಿಸಲಾಗಿದೆ.

ಜಯರಾಮಾಚಾರ್ಯ ಅವರು ಬರೆದ 'ಅನುಕರಣಗೀತ ಲಹರಿ' ಈಗ ಪುನರ್ಮುದ್ರಣಗೊಂಡಿದೆ.ಶ್ರೀ ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಅಲಭ್ಯವಾಗಿದ್ದ ಈ ಪುಟ್ಟ ಕೃತಿಯನ್ನು ಸಂಪಾದಿಸಿ ಕೊಟ್ಟಿದ್ದಾರೆ. 'ಅನುಕರಣ ಗೀತ ಲಹರಿ'ಯ ಪದ್ಯಗಳು ಮಕ್ಕಳು ಹಾಡುವಂತಿವೆ ಮಾತ್ರವಲ್ಲ ಕುರುಕುವಂತಿವೆ. ಮಕ್ಕಳ ಜೊತೆಗೆ ದೊಡ್ಡವರೂ ಕೂಡ ಹಾಡಬಹುದು. ಆರಂಭಿಕ ಮಕ್ಕಳ ಸಾಹಿತ್ಯವಾಗಿ ಅಧ್ಯಯನಕ್ಕೆ ಒಳಪಡಿಸಬಹುದು.

ಮಕ್ಕಳಿಗಾಗಿ ಆರೇಳು ಕೃತಿಗಳನ್ನು ಹೊರತಂದಿರುವ 'ಮಹಾಂತಪ್ರಿಯ' (ಬಿ. ಶೇಖರಪ್ಪ ಹುಲಿಗೆರೆ) ಅವರ ಕವನ ಸಂಕಲನ 'ಚಕ ಚಕ ಚುಕ್ಕಿ' ಯಲ್ಲಿ ಪ್ರಾಣಿ, ಪರಿಸರ, ಸಾಮಾಜಿಕ ಪ್ರಜ್ಞೆ ಮುಂತಾದ ವಸ್ತು ವೈವಿಧ್ಯತೆಯೇನೋ ಇದೆ. ಆ ವಸ್ತುವನ್ನು ಹೇಗೆ ಮಕ್ಕಳ ದೃಷ್ಟಿಯಲ್ಲಿ ಅರ್ಥೈಸಬೇಕು ಎಂಬುದರ ಕಡೆಗೆ ಗಮನ ಹರಿಸಬೇಕಾಗಿದೆ.

ಹೋಗಲು ಶಾಲೆಗೆ
ಪುಸ್ತಕವಿಲ್ಲ
ತುಂಬಲು ಹೊಟ್ಟೆಗೆ
ಅನ್ನವು ಇಲ್ಲ

ಬಡ ಮಕ್ಕಳ ಮೇಲೆ ಇರುವ ಈ ಕವಿತೆ,
ಹಿಂಡಿ - ರೊಟ್ಟಿಯೇ
ರಸಗುಲ್ಲಾ
ಬೆವರಿನ ಹನಿಯೆ

ಬೇವು ಬೆಲ್ಲ - ಹೀಗೆ ಕೊನೆಯಾಗುತ್ತದೆ. ಆದರ್ಶದಂತೆ ಕಾಣುವ ಈ ಅಂಶವು ಒಳಗೆ ಒಂದು ವ್ಯವಸ್ಥೆಯನ್ನು ಒಪ್ಪಿಕೊಂಡಂತಿದೆ. 'ಕಾಯಕವೇ ಪೂಜೆ' ಎನ್ನುವ ಕವಿತೆ ಚೆನ್ನಾಗಿದೆ. 'ಬಿಡಿಸೋಣ ಬಾ ಜಗಳ' ಎನ್ನುವ ಕವಿತೆಗಳ ಸಂಕಲನವನ್ನು ೬ನೆಯ ತರಗತಿಯಲ್ಲಿ ಓದುತ್ತಿರುವ ಜಯಲಕ್ಷ್ಮಿ ಮಾ ಬೆಳಗೇರಿ ಬರೆದಿದ್ದಾರೆ. ಕಣ್ಣಿಗೆ ಕಂಡದ್ದನ್ನು, ಅನುಭವಕ್ಕೆ ಬಂದದ್ದನ್ನು ಹೇಳುವ ಕುತೂಹಲ ಕಾಣುತ್ತದೆ. ಅನುಭವವನ್ನು ದಕ್ಕಿಸಿಕೊಂಡು ಬರೆಯುವುದು ಸಾಧ್ಯವಾಗದಿದ್ದರೂ, ಕಂಡದ್ದನ್ನು ಸ್ಪಷ್ಟವಾಗಿ ಹೇಳುವುದರ ಕೊರತೆಯಿದೆ. ಆದರೂ ಇಂಥ ಪ್ರಸಂಗದಲ್ಲಿ ಮಕ್ಕಳೇ ಬರೆದಿರುವ ಪದ್ಯಗಳನ್ನು ಶಿಕ್ಷಕರೋ, ಪಾಲಕರೋ ನೋಡಿ ಸರಿಯಾದ ತಿಳಿವಳಿಕೆ ನೀಡಿದರೆ ಇಂಥ ಮಕ್ಕಳಿಗೆ ಪ್ರೋತ್ಸಾಹ ಸಿಕ್ಕು ಬರೆಯುವ ಭರವಸೆ ಕಂಡುಕೊಳ್ಳುತ್ತಾರೆ.

ಕನ್ನಡದ ಮಹತ್ವದ ಬರಹಗಾರರಾದ ಶಿವರಾಮ ಕಾರಂತ ಅವರ 'ಸೂರ್ಯಚಂದ್ರ'ನಾಟಕ ೫೦ ವರ್ಷಗಳ ಹಿಂದೆ ಬರೆದದ್ದು ಈ ವರ್ಷ ಪ್ರಕಟಗೊಂಡು ಹೊರಬಂದಿದೆ. ಪುತ್ತೂರು ತಾಲೂಕಿನ ಐದಾರು ಪ್ರಾಥಮಿಕ ಶಾಲೆಗಳನ್ನು ಸಂಪರ್ಕಿಸಿ; ಅಲ್ಲಿನ ವಿದ್ಯಾರ್ಥಿಗಳ ಸೃಜನಶೀಲತೆಯನ್ನು ತಿಳಿಯಲು ಕಾರಂತರು ಪ್ರಯತ್ನಿಸಿ; ಅದರ ಫಲವಾಗಿ ಮಕ್ಕಳಿಗಾಗಿ ಶಿಶುಗೀತ, ನಾಟಕ, ಕಲೆ ರಚಿಸಿದರು. 'ಸೂರ್ಯಚಂದ್ರ' ನಾಟಕವನ್ನು ರಂಗದ ಮೇಲೆ ತರುವುದರ ಜತೆಗೆ ಮಕ್ಕಳಲ್ಲಿ ಅಭಿನಯವನ್ನು ಕಲಿಸಲು ಪ್ರೇರೇಪಿಸಿದರು. "ಮಕ್ಕಳ ಮನಸ್ಸನ್ನು ಒಂದು ಕಥೆಯೇ ಆಗಲಿ, ನಾಟಕವೇ ಆಗಲಿ ಪ್ರಚೋದಿಸಿ ಪ್ರಯೋಜನ ಕೊಡಬೇಕಾದರೆ ಅಲ್ಲಿನ ಕಥಾ ಪಾತ್ರಗಳು ಜೀವಂತವಾಗಿ ಕಾಣಿಸಿಕೊಳ್ಳಬೇಕು; ವರ್ತಿಸಬೇಕು. ಅದಿಲ್ಲದೆ ಹೋದರೆ ಹತ್ತು ಪಂಕ್ತಿಗಳಲ್ಲಿ ಕಥೆ ಮುಗಿದು, ನೀತಿ ಬೋಧನೆ ಮಾಡುವ ಕಥೆಯ ಗುರಿ ಪ್ರಯೋಜನ ಕೊಡಲಾರದು" ಎಂದು ಮುನ್ನುಡಿಯಲ್ಲಿ ಶಿವರಾಮ ಕಾರಂತರು ಬರೆದಿದ್ದಾರೆ. ಮಕ್ಕಳ ಸಾಹಿತ್ಯವೆಂದರೆ ಹೆಚ್ಚಾಗಿ ನೀತಿ ಹೇಳುವ ಧಾಟಿಯಲ್ಲಿರುವುದು ಸಾಮಾನ್ಯ. 'ಸೂರ್ಯಚಂದ್ರ' ನಾಟಕದಲ್ಲಿ ಅದು ಕಾಣುವುದಿಲ್ಲ. ಇದು ಒಟ್ಟು ಪರಿಣಾಮದಿಂದ ಸೂಚಿತವಾಗುತ್ತದೆ.

'ಹಾವು ಕಪ್ಪೆ ಮತ್ತು ಏಡಿ' ಟಿ.ಎಸ್. ನಾಗರಾಜಶೆಟ್ಟಿ ಅವರು ಮಕ್ಕಳಿಗಾಗಿ ನೀಡುತ್ತಿರುವ ೬ನೆಯ ಪುಸ್ತಕವಿದು. ತುಂಬ ಕುತೂಹಲ ಹುಟ್ಟಿಸುವಂತೆ ಹೇಳುವ ಕೌಶಲವಿದೆ. ಒಂದು ಗಾದೆಯ ಮಾತನ್ನೋ, ಪ್ರಾಣಿಗಳ ಮೇಲೆ ಪ್ರಚಲಿತವಿರುವ ಸಂಗತಿಗಳನ್ನೋ ಆಯ್ದುಕೊಂಡು ಅದನ್ನು ಕಥೆಕಟ್ಟಿ ಅರ್ಥೈಸುವ ಕ್ರಿಯೆ ಮಾಡುತ್ತಾರೆ. ಇದರಿಂದ ಕಥೆಗಳು ಹೆಚ್ಚು ಪ್ರಿಯವಾಗುತ್ತವೆ. ಕಪ್ಪೆಗೆ ಸುಂದರವಾದ ಬೆನ್ನು ಯಾಕಿದೆ? ಹಾವಿಗೆ ಕಾಲೇಕೆ ಇಲ್ಲ? ಏಡಿಗೆ ಏಕೆ ತಲೆಯಿಲ್ಲ? ಎಂಬುದಕ್ಕೆ ಕುತೂಹಲ ಹುಟ್ಟಿಸುವಂತೆ ಕಥೆ ಸೃಷ್ಟಿಸಿ ಬಿಡುತ್ತಾರೆ. ವಿಜ್ಞಾನ ವಿಷಯವನ್ನು 'ಸೂರ್ಯ

ಚಂದ್ರ' ಮತ್ತು 'ನಾಚಿದ ಬೀಜಣ್ಣ' ಕಥೆಯಲ್ಲಿ ನವಿರಾಗಿ ಬಿಚ್ಚಿಡುತ್ತಾರೆ. 'ನಾಯಿ ನಿದ್ದೆ ಕಥೆಯಲ್ಲಿ ನಿರೂಪಿಸುವಂತೆ ಪ್ರಾಣಿ ಜಗತ್ತಿನ ಕೆಲ ವೈಶಿಷ್ಟ್ಯಗಳಿಗೆ ಕಾರಣಗಳನ್ನು ಹುಡುಕುತ್ತ ಕಾಲ್ಪನಿಕವಾಗಿ ಕತೆಯನ್ನು ಕಟ್ಟುವ ರೀತಿ ಮಕ್ಕಳಿಗೆ ರಂಜಿಸುತ್ತವೆ. ವಸ್ತು, ಭಾಷೆ, ನಿರೂಪಣೆಯ ದೃಷ್ಟಿಯಿಂದಲೂ ಪ್ರಿಯವಾಗುತ್ತದೆ.

'ಸಿಸು' ಸಂಗಮೇಶ ಅವರು ಮಕ್ಕಳ ಸಾಹಿತಿಯೆಂದೇ ಹೆಸರಾಗಿದ್ದಾರೆ. ಅವರ'ಕಥೆ ಹೇಳುವೆ ಬಾ' ಎನ್ನುವ ಕಥಾ ಸಂಕಲನದಲ್ಲಿ ಆನೆಯ ಮೇಲೆಯೇ ಎರಡು ಕಥೆಗಳನ್ನು ಬರೆದಿದ್ದಾರೆ. ಆನೆಯನ್ನೇ ಕೇಂದ್ರವಾಗಿಟ್ಟುಕೊಂಡು, ಇತರ ಪ್ರಾಣಿಗಳನ್ನು ಬಳಸಿಕೊಂಡು ಸ್ವಾರಸ್ಯಕರವಾದ ಘಟನೆಗಳೊಂದಿಗೆ, ಸಂಗತಿಗಳೊಂದಿಗೆ ಕಥೆಯನ್ನು ಸೃಷ್ಟಿಸಿಬಿಡುತ್ತಾರೆ. ಮಕ್ಕಳಿಗೆ ಹೊಂದುವ ಭಾಷೆ, ಸರಳ ನಿರೂಪಣೆಯಿಂದ 'ಮಾತೆಯ ಮಮತೆ' ರಂಜಿಸುತ್ತದೆ. ಮನ ಮುಟ್ಟುತ್ತದೆ;

ಈ ವರ್ಷ ವೈದೇಹಿ ಅವರು ಮಕ್ಕಳಿಗಾಗಿಯೇ ಐದು ನಾಟಕಗಳನ್ನು ಅಕ್ಷರ ಪ್ರಕಾಶನದಿಂದ ಹೊರ ತಂದಿದ್ದಾರೆ. 'ಮೂಕನ ಮಕ್ಕಳು', 'ಧಾಣಾ ಡಂಗುರ', 'ನಾಯಿಮರಿ ನಾಟಕ' 'ಧಾಂಧೂಂ ಸುಂಟರಗಾಳಿ', 'ಗೊಂಬೆ ಮ್ಯಾಕ್‌ಬೆತ್' - ಇವೇ ಈ ಐದು ನಾಟಕಗಳು. 'ಗೊಂಬೆ ಮ್ಯಾಕ್‌ಬೆತ್, 'ಧಾಂಧೂಂ ಸುಂಟರಗಾಳಿ' - ಇವೆರಡು ಶೇಕ್ಸ್‌ಪಿಯರ್‌ನ ನಾಟಕಗಳನ್ನು ಆಧರಿಸಿ ಬರೆಯಲಾಗಿದೆ. 'ಮೂಕನ ಮಕ್ಕಳು' ಇದು ಮಾಸ್ತಿಯವರ 'ಮೂಕನ ಮಕ್ಕಳು' ಎಂಬ ಕಥನ ಕವನವನ್ನು ಆಧರಿಸಿದ್ದು.'ಧಾಣಾ ಡಂಗುರ'ವು 'ಮಣ್ಣಿನ ಮಕ್ಕಳು' ಎಂಬ ಸೋವಿಯತ್ ಮಕ್ಕಳ ಕಥೆಯನ್ನು ಸ್ಥೂಲವಾಗಿಟ್ಟುಕೊಂಡು ಬರೆದದ್ದು. ಜತೆಗೆ ಅವರೇ ಹೇಳುವಂತೆ ಈ ನಾಟಕದಲ್ಲಿ "ಕೆಲ ಮಕ್ಕಳ ಕತೆ, ಶಿಶುಗೀತೆ (ಬೆಕ್ಕೇ ಬೆಕ್ಕೇ) ಗಳನ್ನು ಅಡ್ಡ ಉದ್ದೊ ಹಿಗ್ಗಿಸಿ, ಬಗ್ಗಿಸಿ ಬರೆದಿದ್ದಾರೆ. 'ನಾಯಿಮರಿ ನಾಟಕ' ವನ್ನು "ನೀನಾಸಮ್ ತಿರುಗಾಟ-೯೧" ಕ್ಕಾಗಿ ರಚಿಸಿ ಕೊಟ್ಟಿದ್ದಾಗಿದೆ.

ಈ ಎಲ್ಲ ನಾಟಕಗಳು ಬೇರೆ ಬೇರೆ ಸಂದರ್ಭಗಳಲ್ಲಿ ರಂಗದ ಮೇಲೆ ಪ್ರಯೋಗಗಳನ್ನು ಕಂಡಿವೆ. ರಂಗ ಪ್ರಯೋಗದ ದೃಷ್ಟಿಯಿಂದ ತಾಂತ್ರಿಕತೆಯನ್ನು ಮೈಗೂಡಿಸಿಕೊಂಡು ಈ ನಾಟಕಗಳು ಹೆಚ್ಚು ಯಶಸ್ಸಿಯನ್ನು ಪಡೆಯಬಲ್ಲವುಗಳಾಗಿವೆ. ಸಾಹಿತ್ಯಕ ಕೃತಿಗಳಾಗಿ ಇವುಗಳನ್ನು ಮಕ್ಕಳು ಓದಿದರೆ ರಂಜಿಸುವುದು ಕಠಿಣ. ಮಕ್ಕಳಿಗಾಗಿಯೇ ಬರೆದವುಗಳಾದರೂ, ಇಲ್ಲಿ ಪ್ರಯೋಗವಾದ ವಸ್ತು, ಭಾಷೆ, ನಿರೂಪಣೆ ಮಕ್ಕಳಿಗೆ ಮೀರಿದ್ದು. 'ಮಕ್ಕಳು' ಎಂದು ಗುರುತಿಸುವ ಯಾವ ವಯಸ್ಸಿನವರನ್ನು ಪರಿಗಣಿಸಿದರೂ ಈ ನಾಟಕಗಳು ಭಾರವಾಗುತ್ತವೆ. ಸ್ವಲ್ಪಮಟ್ಟಿಗೆ 'ನಾಯಿಮರಿ ನಾಟಕ' ರುಚಿಸಿ ರಂಜಿಸುತ್ತದೆ. ಅವರೆ ಹೇಳುವಂತೆ 'ಮೂಕನ ಮಕ್ಕಳು' ಕಿರಿಯರಿಗಾಗಿ, ಹಿರಿಯರಿಗೂ ಸಲ್ಲುವಂತೆ ಬರೆದಿದ್ದಾರೆ.

ಆದರೂ ಈ ನಾಟಕಗಳ ಬಗ್ಗೆ ಹೇಳುವ ಮಾತಿದೆ. ಇವು ಬೇರೆ ಬೇರೆ ಕಾರಣಗಳಿಂದ ಮಕ್ಕಳ ಸಾಹಿತ್ಯವನ್ನು ವಿಸ್ತರಿಸುವಂತೆ ಕಾಣುತ್ತವೆ. ಇದರಿಂದ ಇವು ಉಪಯುಕ್ತ ಕೊಡುಗೆಯೆಂದೇ ಹೇಳಬೇಕಾಗುತ್ತದೆ.

ಹಿರಿಯ ಸಾಹಿತಿಗಳಾದ ಪಂಜೆ ಮಂಗಾಶರಾಯ, ಗೋವಿಂತ ಪೈ, ಕುವೆಂಪು, ಬೇಂದ್ರೆ, ದಿನಕರ ದೇಸಾಯಿ, ಹೊಯಿಸಳ, ಸಿದ್ಧಯ್ಯ ಪುರಾಣಿಕ ಮುಂತಾದವರು ರಚಿಸಿದ ಕವಿತೆಗಳು ಮಕ್ಕಳಿಗೂ, ಹಿರಿಯರಿಗೂ ಪ್ರಿಯವಾಗುತ್ತದೆ. ಈ ಎಲ್ಲ ಹಿರಿಯರ ಮುಂದುವರಿಕೆಯಂತೆ ಕಾಣುವ ಮಕ್ಕಳ ಸಾಹಿತ್ಯ ಹೆಚ್ಚು ಸೃಷ್ಟಿಯಾಗದೇ ಇರುವುದು ವಿಷಾದನೀಯ. ಆದರೂ ಎಚ್.ಎಸ್. ವೆಂಕಟೇಶಮೂರ್ತಿ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಶಿಶು, ಸಂಗಮೇಶ ಶಂ.ಗು. ಬಿರಾದಾರ, ರಾಜಶೇಖರ ಭೂಸನೂರ ಮಠ ಮುಂತಾದವರ ಕೊಡುಗೆಯನ್ನು ಗಮನಿಸಬೇಕಾದದ್ದೇ.

●

* * *

ಸಂಕೀರ್ಣಕೃತಿಗಳು

— ಲಕ್ಷ್ಮಣ್ ತೆಲಗಾವಿ

ಸಾಹಿತ್ಯ ಸಂಶೋಧನೆ, ವೈಚಾರಿಕತೆ ಮತ್ತು ಸಮಾಜಕಾರ್ಯಗಳಿಗೆ ಸಂಬಂಧಿಸಿದಂತೆ ೧೯೯೨ರಲ್ಲಿ ಕೆಲವು ಗಮನಾರ್ಹ ಕೃತಿಗಳು ಹೊರಬಂದಿವೆ. ಇವುಗಳಲ್ಲಿ ವೈಚಾರಿಕ ಕೃತಿಗಳೇ ಅಧಿಕ. ಲೇಖನಸಂಗ್ರಹಗಳ ಸಂಖ್ಯೆ ಕಡಮೆಯಿದ್ದರೂ ಗಣನೀಯವಾದುವು. ಸೇಡಿಯಾಪು ಕೃಷ್ಣಭಟ್ಟರ ಬರಹಗಳ ಸಂಕಲನ ಒಂದೆಡೆಯಾದರೆ, ಶಂಬಾ ಜೋಶಿ, ಶಿವರಾಮ ಕಾರಂತ, ಕೆ.ವಿ. ಸುಬ್ಬಣ್ಣ ಅವರುಗಳ ವಿಚಾರಸಂಗ್ರಹ ಕೃತಿಗಳು ಇನ್ನೊಂದೆಡೆ. ಪ್ರಾಚೀನ ಸಾಹಿತ್ಯಮಾರ್ಗದಿಂದ ಇಂದಿನ ಚಳವಳಿ ಸನ್ನಿವೇಶಗಳವರೆಗಿನ ಚಿತ್ರಣ ಈ ಕೃತಿಗಳಲ್ಲಿದೆ. ಭಾರತೀಯ ಪ್ರಾಚೀನ ಚಿಂತನಕ್ರಮದಿಂದ ಪ್ರಸ್ತುತ ಮೂಢನಂಬಿಕೆಗಳನ್ನು ಪರಿಹರಿಸುವ ಪ್ರಯತ್ನದವರೆಗೆ ಇಲ್ಲಿಯ ವೈಚಾರಿಕ ಕೃತಿಗಳು ಚರ್ಚಿಸಿವೆ; ಪ್ರಚಲಿತ ಸಮಸ್ಯೆಗಳ ಬಗೆಗೆ ಚಿಂತಿಸಿವೆ. ಬಂಡಾಯ ಮನೋಧರ್ಮದ ವಿವಿಧ ಮುಖಗಳನ್ನು, ಹೋರಾಟದ ವಿವಿಧ ಮಜಲುಗಳನ್ನು ತಿಳಿಸುವ ಬರಹಗಳೂ ಗಮನಾರ್ಹವೆನಿಸಿವೆ.

ಸಮಾಜಕಾರ್ಯ ಮತ್ತು ಶಿಕ್ಷಣಕ್ಷೇತ್ರಗಳನ್ನು ಕುರಿತ ಪುಸ್ತಕಗಳು ಸಹಾ ಇದೇ ಜಾಡಿನವು. ಪರಂಪರಾಗತವಾಗಿ ಬಂದ ನಮ್ಮ ಸಮಾಜ ಮತ್ತು ಶಿಕ್ಷಣಪದ್ಧತಿಗಳ ಒಳಿತು-ಕೆಡಕುಗಳು, ಸೊಗಸು-ಹೊಲಸುಗಳನ್ನು ತಕ್ಕಮಟ್ಟಿಗೆ ಪ್ರಾಮಾಣಿಕವಾಗಿ ವಿಮರ್ಶಿಸುವಂತಹವು. ಜೀತಪದ್ಧತಿಯ ಪಿಡುಗು ಇನ್ನೂ ಸಾಯದಿರುವ ಸತ್ಯಾಂಶವು ಎದೆ ನಡುಗಿಸುತ್ತದೆ. ಶಿವರಾಮ ಕಾರಂತರ ಸಾಹಿತ್ಯಸೂಚಿಯು ಇಲ್ಲಿ ಹೆಸರಿಸಬಹುದಾದ ಇನ್ನೊಂದು ಪ್ರಮುಖ ಪ್ರಕಟಣೆ. ಏನೇ ಬರೆದರೂ ಎಷ್ಟೇ ಬರೆದರೂ ಇಂತಹ ಸೂಚಿಗಳಿಲ್ಲದಿದ್ದರೆ ಯಾವೊಬ್ಬ ಲೇಖಕನು ತನ್ನ ಕ್ಷೇತ್ರದಲ್ಲಿ ಸರಿಯಾಗಿ ಗುರುತಿಸಲ್ಪಡದೇ ಹೋಗಬಹುದು.

ಇಷ್ಟಲ್ಲದೆ, ಸಾಹಿತ್ಯ ಮತ್ತು ವಿಚಾರವಾದಗಳಿಗೆ ಸಂಬಂಧಿಸಿದ, ಈ ವರುಷ ಪ್ರಕಟಗೊಂಡ, ಇನ್ನೂ ಕೆಲವು ಪುಸ್ತಕಗಳಿವೆ. ಸ್ಥೂಲವಾಗಿ ಹೇಳುವುದಾದರೆ,

೧೯೯೨ರಲ್ಲಿ ಪ್ರಕಟಗೊಂಡ ವಿವಿಧ ವಿಷಯಗಳನ್ನು ಕುರಿತ ಪುಸ್ತಕಗಳು ಗುಣ, ಗಾತ್ರ, ವಿಷಯ ಮೊದಲಾದವುಗಳ ದೃಷ್ಟಿಯಿಂದ ನಿರಾಶೆಯನ್ನೇನೂ ಮಾಡುವುದಿಲ್ಲ ವೆಂಬುದು ಖಚಿತವಾಗಿ ಹೇಳಬಹುದಾದ ಮಾತು. ಇಲ್ಲಿ ಪರಿಶೀಲಿಸಲಾದ ಪುಸ್ತಕಗಳ ಮಟ್ಟಿಗಂತೂ ಇದು ನಿಜವೆಂದೇ ಹೇಳಬೇಕು.

* * *

ಲೇಖನಗಳ ಸಂಗ್ರಹಕೃತಿಗಳನ್ನು ಮೊದಲಿಗೆ ಇಲ್ಲಿ ಪ್ರಸ್ತಾಪಿಸುವುದಾದರೆ, 'ಸೇಡಿಯಾಪು ಕೃಷ್ಣಭಟ್ಟರ ವಿಚಾರ ಪ್ರಪಂಚ' ಕೃತಿಯು ಗಮನ ಸೆಳೆಯುತ್ತದೆ. ಪಾದೇಕಲ್ಲು ವಿಷ್ಣುಭಟ್ಟ ಅವರು ಈ ಸಂಕಲನದ ಸಂಪಾದಕರು. "ಈ ಲೇಖನಗಳ ಪ್ರಕಟನೆಯಿಂದ ಸೇಡಿಯಾಪು ಅವರು ಸಂತೃಪ್ತಿಯೊಂದನ್ನಲ್ಲದೆ ಹೆಚ್ಚಿನದೇನನ್ನೂ ಗಳಿಸುವುದಿಲ್ಲ. ಆದರೆ ಕನ್ನಡನಾಡು ಈ ಸಂಕಲನರೂಪದಲ್ಲಿ ಅವರ ಅಮೂಲ್ಯ ವಿಚಾರಗಳನ್ನು ಉಳಿಸಿದಂತಾಗುತ್ತದೆ. ಮುಂದಿನ ಕನ್ನಡ ಜನತೆ ಅದನ್ನು ಬಳಸಿಕೊಳ್ಳಲು ಅನುಕೂಲವಾಗುತ್ತದೆ. ಕನ್ನಡಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಸಂಶೋಧಕರಿಗೆ ಇದೊಂದು ಅಮೂಲ್ಯ ಆಕರಗ್ರಂಥವಾಗುವುದರಲ್ಲಿ ಸಂದೇಹವೇನೂ ಇಲ್ಲ" ಎಂದು ಬರೆದಿದ್ದಾರೆ ಸಂಪಾದಕರು, ತಮ್ಮ 'ಪ್ರಸ್ತಾವನೆ' ಯಲ್ಲಿ. ಇದು ಒಪ್ಪತಕ್ಕ ಮಾತೇ.

ಕನ್ನಡ ಛಂದಸ್ಸು, ವ್ಯಾಕರಣ, ಭಾಷಾಶಾಸ್ತ್ರ, ಇತ್ಯಾದಿ ಕ್ಷೇತ್ರಗಳಲ್ಲಿ ವಿಶೇಷ ಸೇವೆಗೈದ ಹಿರಿಯ ವಿದ್ವಾಂಸ ಸೇಡಿಯಾಪು ಕೃಷ್ಣಭಟ್ಟರು ಸುಮಾರು ೭೦ ವರುಷಗಳಷ್ಟು ದೀರ್ಘಕಾಲಾವಧಿಯಲ್ಲಿ ಬರೆದು ಪ್ರಕಟಿಸಿರುವ ಪ್ರಮುಖ ಲೇಖನಗಳ ಸಂಕಲನವಿದು. ಸಂಖ್ಯೆಯಿಂದಲ್ಲದಿದ್ದರೂ ಗುಣಮಟ್ಟದ ದೃಷ್ಟಿಯಿಂದ ಉತ್ತಮ ಮಟ್ಟದ ಲೇಖನಗಳಿವೆ ಇಲ್ಲಿ. ಸೇಡಿಯಾಪು ಅವರ ೯೧ ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಇದನ್ನು ಹೊರತರಲಾಗಿದೆ. ಇಲ್ಲಿಯ ೭೧ ಲೇಖನ ಮತ್ತು ಬಿಡಿಬರಹಗಳು ೧೯೨೩ ರಿಂದ ೧೯೯೨ ರವರೆಗಿನ ಅವಧಿಯಲ್ಲಿ ಬರೆಯಲಾದುವು.

ಸೇಡಿಯಾಪು ಅವರ ಲೇಖನಗಳು ಈ ಸಂಕಲನದಲ್ಲಿ ಸಾಹಿತ್ಯವಿಚಾರ, ಭಾಷಾವಿಚಾರ, ಕಲಾವಿಚಾರ, ವ್ಯಕ್ತಿವಿಚಾರ ಹಾಗೂ ನಾನಾವಿಚಾರಗಳಾಗಿ ಐದು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿವೆ; ಅವರ ಸಮಗ್ರದೃಷ್ಟಿಯ ದ್ಯೋತಕವೆನಿಸಿವೆ. ಸೇಡಿಯಾಪು ಅವರ ಗಾಢ ಮತ್ತು ತರ್ಕಬದ್ಧ ಚಿಂತನಕ್ರಮ, ಹೊಸ ವಿಚಾರಗಳ ಶೋಧನ ಸಾಮರ್ಥ್ಯ, ಪರಿಶುದ್ಧ ಬರವಣಿಗೆಯ ಪ್ರಯತ್ನ, ಪ್ರತಿಪಾದನೆಯ ಪ್ರಖರತೆ, ಉಚಿತ ಶಬ್ದಗಳನ್ನೂ ಉದಾಹರಣೆಗಳನ್ನೂ ಜೋಡಿಸಿರುವ ಕಲಾವಂತಿಕೆ; ವಿಷಯ ನಿರೂಪಣೆಯಲ್ಲಿ ಪೂರ್ವಾಪರ ವಿರೋಧಗಳನ್ನು ವಿಶ್ಲೇಷಿಸುವ ವಿಧಾನ; ಎಲ್ಲಕ್ಕೂ ಮುಖ್ಯವಾಗಿ, ಲೇಖನಗಳ ಪರಿಪೂರ್ಣತೆಗಾಗಿ ಅವುಗಳನ್ನು ಸಾಕಷ್ಟು ತಿದ್ದುಪಾಟುಗಳಿಗೊಳಪಡಿಸುವ ಪ್ರವೃತ್ತಿ - ಇವೆಲ್ಲವೂ ಇಲ್ಲಿಯ ಲೇಖನಗಳಲ್ಲಿ

ವ್ಯಕ್ತಪಡುತ್ತವೆ. ಅವರ ಸಾಹಿತ್ಯಕ ವಿಚಾರಗಳು ಇಂದಿಗೂ ಪ್ರಸ್ತುತವೆನಿಸಿರುವುದಕ್ಕೆ ಇಂತಹ ಗುಣಗಳೇ ಕಾರಣ. ಇಲ್ಲಿಯ ಲೇಖನಗಳಲ್ಲಿ ಮೇಲೆದ್ದು ಕಾಣುವ ಇನ್ನೊಂದು ವಿರಳಗುಣವೆಂದರೆ, ಆಧಾರರಹಿತವಾದುದನ್ನು ಬರೆಯದಿರುವ ಮತ್ತು ಹೇಳದಿರುವ'ಸೇಡಿಯಾಪು ಧೋರಣೆ!'

ಪ್ರಗತಿಪರ ಸಾಹಿತ್ಯ ಕುರಿತು ಸೇಡಿಯಾಪು ಇಲ್ಲಿ ಬರೆದಿದ್ದಾರೆ. ಪ್ರಗತಿಗಾಗಿ ಪ್ರಯತ್ನಿಸುವವರು ಪ್ರಗತಿಪರರು. ಪ್ರಯತ್ನವೆಂಬುದೆಲ್ಲವೂ ಪ್ರಗತಿಗಾಗಿಯೇ ಎಂದಮೇಲೆ ಪ್ರಯತ್ನಶೀಲರೆಲ್ಲ ಪ್ರಗತಿಪರರೆಂದಾಗಲಿಲ್ಲವೇ? ಸಾಹಿತ್ಯ ನಿರ್ಮಾಣವೂ ಒಂದು ಪ್ರಯತ್ನ ಎಂದೆನ್ನುತ್ತಾರವರು. "ಪ್ರತಿಭಾಜನ್ಯವೂ ಸ್ವತಂತ್ರವೂ ಸಹಜಶುದ್ಧವೂ ಆದ ಸಾಹಿತ್ಯವು ಯಾವ ಕಾಲದ್ದೇ ಆದರೂ -ಅದು ಆಸ್ತಿಕವಾಗಲಿ ನಾಸ್ತಿಕವಾಗಲಿ, ಸಮಾಜಚಿತ್ರವಾಗಿರಲಿ, ಆದರ್ಶಪರವಾಗಿರಲಿ, ಯಥಾರ್ಥರಮ್ಯವಾಗಿರಲಿ, ಕಲ್ಪನಾಮನೋಹರವಾಗಿರಲಿ, ಲೋಕಾನುಭವ ಜನಿತವಾಗಿರಲಿ, ಆತ್ಮಾನುಭವಜನಿತವಾಗಿರಲಿ, ವಿಚಾರಪ್ರಧಾನವಾಗಿರಲಿ, ರಸಪ್ರಧಾನವಾಗಿರಲಿ -ಅದು ಪ್ರಗತಿಪರವೇ ಆಗಿರುತ್ತದೆಂದು ಕಂಡುಬಾರದಿರದು. ಶ್ರೇಷ್ಠಸಾಹಿತ್ಯವೇ ಪ್ರಗತಿಪರ ಸಾಹಿತ್ಯ" ಎಂಬುದು ಸೇಡಿಯಾಪು ನಿಲುವು. ವಿದ್ವತ್ತೆಯಿಂದಲೂ ಅಂತರ್‌ದೃಷ್ಟಿಯಿಂದಲೂ ರಸಿಕತೆಯಿಂದಲೂ ಸೇಡಿಯಾಪು ಬರೆಯಬಲ್ಲರೆಂಬುದಕ್ಕೆ ಇಲ್ಲಿಯ 'ಭಾನುಮತಿಯ ನೆತ್ತ' ಲೇಖನವು ಉದಾಹರಣೆಯಾಗಿ ನಿಲ್ಲುತ್ತದೆ. 'ಪಂಪಭಾರತ'ದ "ನೆತ್ತಮನಾಡಿ ಭಾನುಮತಿ ಸೋಲ್ತೊಡೆ ......" (ಆಶ್ವಾಸ ೯, ಪದ್ಯ ೬೯) ಎಂಬ ಪದ್ಯವನ್ನು ಅವರು ವಿವರವಾಗಿ ವಿಮರ್ಶಿಸಿದ್ದಾರೆ. ಈ ಪದ್ಯದೊಳಗೆ ಅಡಕವಾಗಿರುವ ಕೌರವ ಭಾನುಮತಿಯರ ನೆತ್ತದ ಪ್ರಸಂಗವು ಹಳಗನ್ನಡ ಸಾಹಿತ್ಯದಲ್ಲಿ ಪ್ರಾಯಃ ಅನ್ಯತ್ರ ನಾವು ಕಾಣಲಾರದ ಒಂದು ಅಪೂರ್ವ ಶೃಂಗಾರ ಖಂಡ. 'ಅಮರಕ'ಸದೃಶವೆನ್ನುವುದರೊಡನೆ, ಕರ್ಣನ ಆರ್ಜವದ ಅರುಣಪ್ರಭೆಯಲ್ಲಿ ಕ್ಷಣಕಾಲ ಮಿನುಗಿ ಮಾಯವಾಗುವ ಬೆಳಗಿನ 'ಬೆಳ್ಳಿ' ಈ ಶೃಂಗಾರವೆಂದು ಉದ್ಗರಿಸುತ್ತಾರೆ.

'ಕನ್ನಡ ಭಾಷಾಸೇವೆ', 'ಕನ್ನಡ ಲೇಖನ', 'ಕರ್ಣಾಟಕ ಕವಿತಾ ಪ್ರಪಂಚ' ಮತ್ತು 'ಹೊಸಗನ್ನಡ ಪದ್ಯಕವಿತೆ' ಲೇಖನಗಳಲ್ಲಿ, ಕನ್ನಡ ಸಾಹಿತ್ಯದ ವಿವಿಧ ಮುಖಗಳ ಬೆಳವಣಿಗೆಯೊಡನೆ ಕೆಲವು ಉತ್ಕೃಷ್ಟ ಗುಣಲಕ್ಷಣಗಳನ್ನೂ ಬಗೆಗಳನ್ನೂ ಪ್ರಯೋಜನಗಳನ್ನೂ ದೋಷಗಳನ್ನೂ ವ್ಯಾಪಕ ಪರಿಶೀಲನೆಗೊಳಪಡಿಸಿದ್ದಾರೆ ಸೇಡಿಯಾಪು.

ಕನ್ನಡ ಛಂದಸ್ಸಿನ ಬಗೆಗೆ ಸೇಡಿಯಾಪು ವಿಶೇಷ ಕೆಲಸ ಮಾಡಿರುವರು. 'ಛಂದೋಗತಿ' ಮತ್ತು'ಕನ್ನಡ ಛಂದಸ್ಸು' ಎಂಬ ಎರಡು ಗ್ರಂಥಗಳನ್ನು ಅವರು ಪ್ರಕಟಿಸಿರುವರು. ಇವಲ್ಲದೆ,'ಕನ್ನಡ ವರ್ಣಗಳು' ಮತ್ತು 'ಕೆಲವು ದೇಶನಾಮಗಳು' ಇವರಿಂದ ಪ್ರಕಟಿಸಲ್ಪಟ್ಟಿದ್ದರೂ ಭಾಷಾವಿಷಯಕ್ಕೆ ಸಂಬಂಧಿಸಿದಂತೆ ಇತರ ೧೨ ಲೇಖನಗಳು ಈ ಸಂಕಲನದಲ್ಲಿವೆ. ಪ್ರಸ್ತುತ ಸಂಕಲನದಲ್ಲಿಯ 'ಕನ್ನಡ ವ್ಯಾಕರಣದ

ಕೆಲವು ಸಮಸ್ಯೆಗಳು' ಲೇಖನವು ವ್ಯಾಕರಣ ಸಮಸ್ಯೆಗಳಿಗೆ ಸಂಬಂಧಪಟ್ಟ ಅವರ ಗ್ರಂಥಯೋಜನೆಯೆಂಬುದು ಗಮನಿಸತಕ್ಕ ಸಂಗತಿ. ಹಾಗೆಯೇ, 'ಗಮಕ ಸಮಾಸ' ವೆಂಬ ಲೇಖನವು ಅವರು ಹಲವು ವರುಷಗಳಿಂದ ಚಿಂತಿಸಿದ ಹೊಸ ಅಂಶಗಳನ್ನು ಒಳಗೊಂಡಿದೆ. ಗಮಕ ಸಮಾಸವೆಂಬುದನ್ನು ಕನ್ನಡದ ಸ್ವಭಾವಾನುಗುಣವಾಗಿ ಪರಿಶೀಲಿಸುವಾಗ ಅದು ಒಂದು ಸಮಾಸವೇ ಅಲ್ಲವೆಂದು ಕಂಡುಬರುವ ಕಾರಣ, ಆ ಪದಭೇದ ವಿಭಾಗಕ್ರಮವನ್ನು ಒಂದಿಷ್ಟು ಬದಲಾಯಿಸದೆ ಈ ಸಮಸ್ಯೆಯನ್ನು ಪರಿಹರಿಸುವುದು ಅಸಾಧ್ಯ; ಆದ್ದರಿಂದ ಗಮಕ ಸಮಾಸವೆಂಬವುಗಳ ಪೂರ್ವಪದಗಳ ಸ್ವಭಾವ ವಿಶೇಷವನ್ನು ಗಮನಿಸಿ, ಆ ಪದರೂಪಗಳನ್ನು ಸಮುಚಿತವಾದ ಬೇರೊಂದು ಹೆಸರಿನಿಂದ ಕರೆಯುವ ಮೂಲಕ, ನಾಮಪದ, ಕ್ರಿಯಾಪದ, ಅವ್ಯಯ-ಎಂಬೀ ಮೂರು ಪದಭೇದಗಳಲ್ಲದೆ ನಾಲ್ಕನೆಯದೊಂದು ಪದಭೇದವನ್ನು ಒಪ್ಪಿಕೊಳ್ಳುವುದು ಈ ಸಮಸ್ಯೆಗೆ ಇರುವ ಏಕಮಾತ್ರ ಪರಿಹಾರವೆಂದು ಅವರು ತಮ್ಮ ಅಭಿಮತವನ್ನು ಸೂಚಿಸುವರು. ಕನ್ನಡದಲ್ಲಿ ಸಹಜವಾಗಿ ಪಂಚಮೀ ವಿಭಕ್ತಿ ಇದೆಯೆಂದೂ ತನ್ನದೇ ಆದ ಪ್ರತ್ಯಯವಿಲ್ಲದೆ ಒಮ್ಮೆ ಸಪ್ತಮಿಯನ್ನು ಇನ್ನೊಮ್ಮೆ ಪಂಚಮಿಯನ್ನು ಆಶ್ರಯಿಸುವುದು ತೃತೀಯಾರ್ಥವೆಂದೂ ದ್ರಾವಿಡ ಭಾಷಾಮರ್ಯಾದೆಗೆ ಇದು ಅವಿರುದ್ಧ ಮಾತ್ರವಲ್ಲ, ಸಹಜವೆಂದೂ ತಮ್ಮ 'ಪಂಚಮೀ ವಿಭಕ್ತಿ' ಲೇಖನದಲ್ಲಿ ಸೇಡಿಯಾಪು ಸಾಧಿಸಿದ್ದಾರೆ. 'ಹೊಸಗನ್ನಡ ಗದ್ಯಭಾಷೆ' ಲೇಖನದಲ್ಲಿ ಅವರು ಅಭಿಪ್ರಾಯಪಡುವಂತೆ, ನಮ್ಮ ರಚನೆಯಲ್ಲಿ ಅರ್ಥವನ್ನಾಗಲಿ, ಶಬ್ದವನ್ನಾಗಲಿ ಬೇಕೆಂದೇ ಸುಂದರವಾಗಿ ಮಾಡುವ ಪ್ರಯತ್ನಗಳ ಪರಿಣಾಮದ ಅತಿಶಯೋಕ್ತಿ ವಾಗಾಡಂಬರಗಳಿಗೆ ಬೆನ್ನುಹಾಕಿ, ನಮ್ಮ ಮನಸ್ಸಿನಲ್ಲಿ ರೂಪುಗೊಂಡ ಅರ್ಥವು ಸ್ವಸ್ವರೂಪದಲ್ಲಿಯೇ ವಾಚಕರ ಮನಸ್ಸಿನಲ್ಲಿ ಮೂಡುವಂತೆ ಮಾಡುವುದರಲ್ಲಿ ಅಮೋಘವಾದೊಂದು ಕಲೆಯಿದೆ ಎಂಬುದನ್ನು ಮನಗಂಡು ಅದಕ್ಕಾಗಿ ಪ್ರಯತ್ನವನ್ನು ಏಕಾಗ್ರಗೊಳಿಸಬೇಕು.

ಸೇಡಿಯಾಪು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ರಚನಾಕಾರ್ಯದಲ್ಲಿ ನೀಡಿದ ಉಪಯುಕ್ತ ಸಲಹೆ, ಸೂಚಿಸಲಾದ ಸ್ವರೂಪಗಳು ಈ ಸಂಕಲನದಲ್ಲಿ ಟಿಪ್ಪಣಿ ರೂಪದಲ್ಲಿ ಸೇರಿಕೊಂಡಿವೆ. 'ಅಕ್ಷರ ಮತ್ತು ವರ್ಣ', 'ಋಇಗಳ ಸ್ವರವರ್ಣತ್ವ', 'ಪದಭೇದಗಳು', 'ಱಱ ಕುಳ ಕ್ಷಳ ಸಂಜ್ಞೆಗಳ ಹುಟ್ಟು' ಮೊದಲಾದ ಲೇಖನಗಳು ಕನ್ನಡ ಭಾಷೆಯನ್ನು ತಳಮುಟ್ಟಿ ಶೋಧಿಸುವುದರ ಪ್ರಯತ್ನವಾಗಿ ಬರೆಯಲ್ಪಟ್ಟವು. ಹಾಗೆಯೇ, ಯಕ್ಷಗಾನ, ಯಕ್ಷಗಾನದ ಸ್ತ್ರೀವೇಷ, ತಾಳಮದ್ದಳೆಯ ಸುಧಾರಣೆ ಹಾಗೂ ಭಾರತೀಯ ಸಂಗೀತಶಾಸ್ತ್ರ, ಇತ್ಯಾದಿಗಳನ್ನು ಕುರಿತ ಸೇಡಿಯಾಪು ವಿಚಾರಗಳು ಇಲ್ಲಿ ಗಮನೀಯವಾದುವು. ಯಕ್ಷಗಾನವು 'ದ್ರಾವಿಡ' ಪದ್ಧತಿಯದೊಂದು ನಾಟಕವಲ್ಲ; ಭರತಾದಿಗಳ ಶಾಸ್ತ್ರಕ್ರಮವನ್ನನುಸರಿಸಿಯೇ ಜನ್ಮವೆತ್ತಿದ ಒಂದು ನಾಟ್ಯವಿಶೇಷವೆಂತಲೂ ನಾಟ್ಯಶಾಸ್ತ್ರದಲ್ಲಿ ವರ್ಣಿತವಾದ ತಾಂಡವಾದಿಗಳನ್ನು ದ್ರಾವಿಡವೆಂದು ವಿದ್ವಾಂಸರು ಸಿದ್ಧಾಂತಿಸಿದರೆ ಮಾತ್ರ ಇದನ್ನು ಆ ವರ್ಗಕ್ಕೆ ಸೇರಿಸಬಹುದೆಂತಲೂ ಅಭಿಪ್ರಾಯಪಡುತ್ತಾರೆ. ಯಕ್ಷಗಾನದ ಸ್ತ್ರೀವೇಷ

ಕುರಿತು, ವೇಷಗಳು 'ವಾಸ್ತವಿಕ'ವಾಗುತ್ತಾ ಹೋದರೆ, ತೆಂಕತಿಟ್ಟು ತನ್ನ ಸ್ವರೂಪವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದಕ್ಕೆ ಬಹಳ ಕಾಲ ಬೇಕಾಗಲಿಕ್ಕಿಲ್ಲವೆನ್ನುತ್ತಾರವರು.

'ವ್ಯಕ್ತಿವಿಚಾರ' ವಿಭಾಗದಲ್ಲಿ ಸೇರಿರುವ ಕಡೆಂಗೋಡ್ಲು ಶಂಕರಭಟ್ಟ, ಪಂಜೆ ಮಂಗೇಶರಾಯರು,ಆಯುರ್ವೇದಭೂಷಣ ಯಂ.ವಿ.ಶಾಸ್ತ್ರೀ, ಮುಳಿಯತಿಮ್ಮಪ್ಪಯ್ಯ ಜಿ.ಪಿ. ರಾಜರತ್ನಂ, ತೆಕ್ಕುಂಜೆ ಗೋಪಾಲಕೃಷ್ಣಭಟ್ಟ, ಕುಕ್ಕಿಲ ಕೃಷ್ಣಭಟ್ಟ, ಪೊಳಲಿ ಶೀನಪ್ಪ ಹೆಗ್ಗಡೆ, ಕೆ. ಶಿವರಾಮ ಕಾರಂತ, ಕು.ಶಿ. ಹರಿದಾಸಭಟ್ಟ ಮೊದಲಾದವರನ್ನು ಕುರಿತ ಲೇಖನಗಳು ಆತ್ಮೀಯವಾಗಿ ಓದಿಸಿಕೊಂಡು ಹೋಗುತ್ತವೆ. ವ್ಯಕ್ತಿವಿಚಾರದೊಡನೆ ಸಾಹಿತ್ಯ-ಸಂಸ್ಕೃತಿ ವಿಚಾರಗಳೂ ಇಲ್ಲಿ ವಿಪುಲವಾಗಿ ಚರ್ಚೆಗೊಳಪಟ್ಟಿವೆ. ಸೇಡಿಯಾಪು ಗುರುತಿಸುವಂತೆ, ಹೊಸಗನ್ನಡಕ್ಕೆ ದಕ್ಷಿಣಕನ್ನಡದ ಗುರುಜನರು ಮೂವರು -ಕಿರುಗವನ -ಕಿರುಗತೆಗಳ ಕೊಂಡಾಟದ ಪಂಜೆಯವರು ; ಪ್ರಾಸಭಂಜಕ ದೇಶವಿದೇಶ ಕಾವ್ಯಮಾರ್ಗ ಮಹಾರಥಿಕ ಸಂಶೋಧಕ ಮನೋರಂಜಕ ಪೈಯವರು ಹಾಗೂ ಕನ್ನಡ ಶಬ್ದಭಂಡಾರಿ ಹಳಗನ್ನಡ ಕಾವ್ಯಾರಣ್ಯ ಕೇಸರಿ ವಿದ್ವನ್ಮನೋಹಾರಿ ಶಿಷ್ಯಹೃದಯವಿಹಾರಿ ಮುಳಿಯ ತಿಮ್ಮಪ್ಪಯ್ಯನವರು.

ಸೇಡಿಯಾಪು ಅವರ ಇತರ ಮೌಲಿಕ ಲೇಖನಗಳು ಕಂಡುಬರುವುದು 'ನಾನಾವಿಚಾರ'ವಿಭಾಗದಲ್ಲಿ. ಇಲ್ಲಿಯ ಹಲವಾರು ಲೇಖನಗಳೂ ಭಾಷಾವಿಚಾರಕ್ಕೆ ಸಂಬಂಧಿಸಿದುವೇ ಆಗಿವೆ. ಇವುಗಳಲ್ಲಿ ಕೆಲವು 'ಕೆಲವು ದೇಶನಾಮಗಳು-ವಿಮರ್ಶೆ', 'ಛಂದೋಗತಿಯ ವಿಮರ್ಶೆ',ಇತ್ಯಾದಿಗಳಿಗೆ ಪ್ರತಿಕ್ರಿಯೆರೂಪದ ಉತ್ತರಗಳು. ತುಳುವಿನ ವಿಶಿಷ್ಟ ಎ ಕಾರದ ಬಗೆಗೆ ತುಳು ನಿಘಂಟುವಿಗೆ ಬರೆದ ಪತ್ರಗಳು, 'ಕನ್ನಡ ವೈಯಾಕರಣ ಭಟ್ಟಾಕಲಂಕ' ಕೃತಿಗೆ ಬರೆದ ಮುನ್ನುಡಿ, ಇತ್ಯಾದಿಗಳೂ ಇಲ್ಲಿವೆ. ದ್ರಾವಿಡಗೌಡ ವಿಚಾರ ಕುರಿತ ವಿಮರ್ಶೆಯಲ್ಲಿ ದ್ರಾವಿಡ-ಬ್ರಾಹ್ಮಣ ಮತ್ತು ಗೌಡ-ಬ್ರಾಹ್ಮಣರೆಂಬ ಎರಡು ವರ್ಗಗಳ ಬಗೆಗೆ ಹಾಗೂ ದ್ರಾವಿಡ, ತಮಿಳ್, ಗೌಡ ಮೊದಲಾದ ಶಬ್ದಗಳ ನಿಷ್ಪತ್ತಿ ಕುರಿತು ದೀರ್ಘ ಚರ್ಚೆ ನಡೆದಿದೆ. 'ತಾಲಿ (ತಾಳಿ)', 'ಇಡ್ಲಿಯ ಇತಿಹಾಸ' ಮೊದಲಾದ ಲೇಖನಗಳಲ್ಲಿ ಹಲವಾರು ಗಂಭೀರ ಮತ್ತು ಸ್ವಾರಸ್ಯಕರ ಅಂಶಗಳ ಪ್ರಸ್ತಾಪವಿದೆ. ಇವೆಲ್ಲವೂ ಸೇಡಿಯಾಪು ಅವರ ವಿದ್ವತ್ತನ್ನು ಪ್ರತಿಬಿಂಬಿಸುವ ಕನ್ನಡಿಗಳಂತಿವೆ.

ಕರ್ಮಕಾಂಡವನ್ನು ನಾಶಪಡಿಸದೆ ಕೇವಲ ಅದರ ಪ್ರಾಬಲ್ಯವನ್ನು ಮುರಿದ ಶಂಕರಾಚಾರ್ಯರು ವರ್ಣಾಶ್ರಮಾದಿ ವಿಚಾರಗಳಲ್ಲಿ ಸ್ಮೃತಿಗಳನ್ನೇ ಅನುಸರಿಸಿದರು; ಆದ್ದರಿಂದಲೇ ಅವರ ಮತಕ್ಕೆ ಸ್ಮಾರ್ತಮತವೆಂದು ಹೆಸರು ಬಂದಿತೆಂದು 'ಶ್ರೀ ಶಂಕರಾಚಾರ್ಯರು' ಲೇಖನದಲ್ಲಿ ವಿವರಿಸುತ್ತಾರೆ ಸೇಡಿಯಾಪು. ಮನುಷ್ಯನ ಸ್ಥಿತಿಗಳಲ್ಲಿ ಹೆಚ್ಚಿನವಕ್ಕೆ -ಶಿಷ್ಯ, ಪುತ್ರ, ಸೋದರ, ಪತಿ, ಮಿತ್ರ, ಪ್ರಭು,ವೀರ, ರಾಜ -ಮೊದಲಾದವುಗಳಿಗೆಲ್ಲ ಶ್ರೀರಾಮನು ಆದರ್ಶವಾಗಿದ್ದಾನೆ; ಆ ರಾಮನ ಮಹತ್ವವೆಂದರೆ, ಅವನ ಕರ್ತವ್ಯನಿಷ್ಠೆ; ಪರಿಣಾಮವಾದಿಗಳ ಗೊಡವೆಯಿಲ್ಲದೆ ಕೇವಲ ನಿಷ್ಕಾಮಕರ್ತವ್ಯನಿಷ್ಠೆ-ಎಂಬುದು 'ಶ್ರೀರಾಮನ ಮಹತ್ವ' ಲೇಖನದಲ್ಲಿ ಸೇಡಿಯಾಪು ವಿವರಿಸಿರುವ ರೀತಿ.

ನೇರ, ನಿಖರ ಹಾಗೂ ನಿಸ್ಸಂದಿಗ್ಧ ವಿಚಾರಗಳು ಸೇಡಿಯಾಪು ಕೃಷ್ಣಭಟ್ಟರ ಎಲ್ಲ ಲೇಖನಗಳಲ್ಲಿ ಹರಿದಾಡಿವೆ. ಹಳೆತಲೆಮಾರಿನ ವಿದ್ವದ್ಗಾಂಭೀರ್ಯದ ಹೊಳಹು ಈ ಸಂಗ್ರಹದಲ್ಲಿ ತುಂಬಿಕೊಂಡಿದ್ದು, ಹಿರಿಯರಿಗೂ ಕಿರಿಯರಿಗೂ ಏಕರೀತಿಯಲ್ಲಿ ಮಾರ್ಗ ತೋರುವ, ಅಧ್ಯಯನಶೀಲತೆ ಬೆಳೆಸುವ ಯೋಗ್ಯತೆ ಹೊಂದಿದೆ. ಸರ್ವಾದರಣೀಯ ವಿದ್ವಾಂಸರೆನಿಸಿರುವ ಸೇಡಿಯಾಪು ಅವರ ಲೇಖನಗಳನ್ನು ಕ್ರಮವಾಗಿ ಜೋಡಿಸಿ, ಎಚ್ಚರ-ಚಚ್ಚರಗಳಿಂದ ಪರಿಶೋಧಿಸಿ, ಸಂಕಲನಕ್ಕೆ ಸಲ್ಲುವ ಅತ್ಯುತ್ತಮ ಪ್ರಸ್ತಾವನೆ ಬರೆದು ಸೇಡಿಯಾಪು ಬರಹಗಳ ಅಧ್ಯಯನಕ್ಕೆ ನಾಂದಿ ಹಾಡಿದ್ದಾರೆ ಸಂಪಾದಕ ಪಾದೇಕಲ್ಲು ವಿಷ್ಣುಭಟ್ಟ. ಅವರ ಈ ಕಾರ್ಯ ಸ್ತುತ್ಯಾರ್ಹವಾದುದು.

ಕನ್ನಡದ ಯುವ ವಿಮರ್ಶಕ ಟಿ.ಪಿ. ಅಶೋಕ ಅವರು 'ಕೆ.ವಿ. ಸುಬ್ಬಣ್ಣ ಅವರ ಆಯ್ದ ಬರಹಗಳು' ಸಂಕಲನವನ್ನು ಸಂಪಾದಿಸಿಕೊಟ್ಟಿದ್ದು, ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಇದನ್ನು ಪ್ರಕಟಿಸಿದೆ. ಕುಲಪತಿ ಡಾ|| ಚಂದ್ರಶೇಖರ ಕಂಬಾರ ಅವರು ಈ ಸಂಪುಟವು ಕನ್ನಡ ವಿಶ್ವವಿದ್ಯಾಲಯದ ಒಂದು ಹೆಮ್ಮೆಯ ಪ್ರಕಟಣೆಯೆಂದು ಕರೆದಿದ್ದಾರೆ ತಮ್ಮ ಮುನ್ನುಡಿಯಲ್ಲಿ. ಹಾಗೆಯೇ, ಈ ಸಂಪುಟವನ್ನು ಸಿದ್ಧಪಡಿಸಿಕೊಡಲು ಅವಕಾಶವಾದುದು ತಮಗೆ ದೊರೆತ ಗೌರವವೆಂದೇ ಭಾವಿಸುತ್ತಾರೆ ಸಂಪಾದಕರು. ಈ ಈರ್ವರ ಆಶಯಗಳಲ್ಲಿ ವ್ಯತ್ಯಾಸ ಕಂಡುಬಾರದಿದ್ದರೂ ಸಂಪುಟದ ಅಂತರಂಗವನ್ನು ಪ್ರವೇಶಿಸುತ್ತಿದ್ದಂತೆಯೇ ಅಂತಹ ಭಾವನೆ ಓದುಗರಿಗೂ ತಟ್ಟುತ್ತಿರುವ ಅನುಭವವಾಗುವುದಂತೂ ದಿಟ. ನೇರವಾಗಿ ಹೇಳುವುದಾದರೆ, ಈ ಸಂಪುಟದ ವಾಚನವೂ ಒಂದು ಹೆಮ್ಮೆಯ ಕಾರ್ಯವೆಂದೇ ಭಾಸವಾಗತೊಡಗುತ್ತದೆ, ಓದಿದಂತೆಲ್ಲಾ!

ಸಾಹಿತ್ಯ, ರಂಗಭೂಮಿ, ಚಲನಚಿತ್ರ, ಸಂಗೀತ, ಶಿಲ್ಪ, ಸಂಸ್ಕೃತಿ, ರಾಜಕೀಯ, ಪರಿಸರ, ಶಿಕ್ಷಣ, ಇತ್ಯಾದಿ ಕ್ಷೇತ್ರಗಳ ಹರಹನ್ನು ಪಡೆದಿರುವ ಇಲ್ಲಿಯ ಬರಹಗಳಲ್ಲಿ ಸುಬ್ಬಣ್ಣ ಅವರ ಆಳವಾದ ಜೀವನಾನುಭವ, ವ್ಯಾಪಕವಾದ ಜೀವನಪ್ರೀತಿ, ದಟ್ಟವಾದ ವಿಚಾರವಂತಿಕೆ, ದಿಟ್ಟ ಚಿಂತನಶೀಲತೆ -ಹೀಗೆ ಇಂತಹವೆಲ್ಲವೂ ಮೂಡಿಕೊಂಡಿವೆ. ಸುಬ್ಬಣ್ಣ ಅವರದು ಮುದ ನೀಡುವ, ಕಚಗುಳಿ ಇಡುವ, ಕುತೂಹಲ ಕೆರಳಿಸುವ ಭಾಷೆ; ವೈಯ್ಯಾರದ ಶೈಲಿ; ಬಿಂಕ -ಬಿನ್ನಾಣಗಳ ಭಾವ ! ಬೆರಗಾಗುವಷ್ಟರಮಟ್ಟಿನ ಧಾಟಿಯಲ್ಲಿ ಕ್ಲಿಷ್ಟ ವಿಚಾರಗಳನ್ನು ವಿವರಿಸುತ್ತಲೇ ಓದುಗರನ್ನು ವಿಷಯದ ಆಳಕ್ಕೆ ಎಳೆದೊಯ್ಯುತ್ತಾರೆ; ವಿಷಯದ ಸಮಗ್ರ ಪರಿಚಯ ಮಾಡಿಕೊಡುತ್ತಾರೆ. ಗಂಭೀರವಾದುದನ್ನೂ ಸಲೀಸಾದ ಬರಹಕ್ಕಿಳಿಸುವ ಕಲಾವಂತಿಕೆ ಅವರದು. ಈ ಕಾರಣದಿಂದಲೇ ತಮ್ಮ ಮತ್ತು ಓದುಗರ ನಡುವೆ ಆತ್ಮೀಯ ಸೇತುವೆ ನಿರ್ಮಿಸಿಕೊಳ್ಳುತ್ತಾರೆ ಸುಬ್ಬಣ್ಣ, ತೀರಾ ಸುಲಭದಲ್ಲಿ !

ವಾಸ್ತವವಾಗಿ, ಸುಬ್ಬಣ್ಣನವರ ಬರಹಗಳ ಈ ಸಂಗ್ರಹಕ್ಕೆ ಸಂಪಾದಕ ಅಶೋಕ ಅವರು ಬರೆದಿರುವ ಪ್ರಸ್ತಾವನೆಯೇ ಮಜಬೂತಾಗಿದೆ, ಬೇರೆ ಏನನ್ನೂ

ಹೇಳಲಾಗದಷ್ಟು. ಸಂಪಾದಕರ ಸೂಕ್ಷ್ಮನೋಟ ಲೇಖನಗಳ ಒಳ-ಹೊರಗನ್ನು ಪರಿಚಯಿಸುವಲ್ಲಿ ಸಫಲವಾಗಿದೆ. ಸುಬ್ಬಣ್ಣನವರ ಬರಹದ ಎತ್ತರಕ್ಕೆ ಸಂಪಾದಕರೂ ಏರಲೆತ್ನಿಸಿರುವುದರಿಂದ ಸಂಕಲನದ ತುಷ್ಟಿ-ಪುಷ್ಟಿಗಳು ಹೆಚ್ಚಲು ಸಹಾಯಕವಾಗಿದೆ. ಅಶೋಕ ಹೇಳುತ್ತಾರೆ: "ಸುಬ್ಬಣ್ಣನವರು ಸಾಹಿತ್ಯ, ರಂಗಭೂಮಿ, ಚಲನಚಿತ್ರ, ಸಂಗೀತ, ಶಿಲ್ಪ, ರಾಜಕೀಯ, ಸಂಸ್ಕೃತಿ, ಪರಿಸರ, ಶಿಕ್ಷಣ- ಹೀಗೆ ಯಾವ ವಿಷಯದ ಮೇಲೆ ಬರೆಯಲಿ ಇಲ್ಲ ಮಾತನಾಡಲಿ ಯಾವುದನ್ನೂ ಬಿಡಿಬಿಡಿಯಾಗಿ ಪ್ರತ್ಯೇಕಿಸಿ ನೋಡುವುದಿಲ್ಲ. ಒಂದು ರೀತಿಯ holistic ದರ್ಶನ ಅವರ ಕೃತಿಗಳ ಹಿಂದಿದೆ. ಸ್ಮೃತಿ-ವಿಸ್ಮೃತಿಗಳ ದ್ವಂದ್ವ, ಭೂತ-ವರ್ತಮಾನಗಳ ಸಂಘರ್ಷ, ಪರಂಪರೆ-ವ್ಯಕ್ತಿ ವಿಶಿಷ್ಟತೆಗಳ ಹುಡುಕಾಟ, ವ್ಯಷ್ಟಿ-ಸಮಷ್ಟಿಗಳ ಸಂಬಂಧ - ಹೀಗೆ ಈ ಕೆಲವು ಮೂಲಭೂತ ಕಾಳಜಿಗಳು ಅವರ ಎಲ್ಲ ಬರವಣಿಗೆಯ ಹಿಂದೆ ಕೆಲಸ ಮಾಡಿವೆ. ಆದ್ದರಿಂದಲೇ ವಿಷಯಬಾಹುಳ್ಯ, ಆಸಕ್ತಿಗಳ ಬಹುಮುಖತೆ ಅವರ ವ್ಯಕ್ತಿತ್ವವನ್ನು ಹೋಳುಹೋಳು ಮಾಡಿಲ್ಲ. ಪಾಂಪ್ಲೆಟ್, ಬ್ಲರ್ಬ್, ವಾಚಕರವಾಣಿ ಪತ್ರಗಳು - ಇಂಥ ಬರವಣಿಗೆಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ ತುಂಬಾ ಸಾಂದ್ರವಾಗಿ, ಸಂಗ್ರಹವಾಗಿ ಇವೆ. ವಿಷಯಗಳು ಸಂಕೀರ್ಣವಾಗಿದ್ದರೂ ಬರಹ ಸರಳವಾಗಿವೆ. ಸರಳತೆ, ಸಾಂದ್ರತೆ, ಸಂಗ್ರಹ ಗುಣಗಳನ್ನು ಸುಬ್ಬಣ್ಣ ಯಾವಾಗಲೂ ಇಷ್ಟಪಡುತ್ತಾರೆ".

ಈ ಸಂಗ್ರಹದಲ್ಲಿ ಸುಬ್ಬಣ್ಣನವರ ಬರಹಗಳನ್ನು ವಿಂಗಡಿಸಿರುವುದು ಅನುಬಂಧವೂ ಸೇರಿದಂತೆ ಆರು ಭಾಗಗಳಲ್ಲಿ. ಎಂಟು ಲೇಖನಗಳಿರುವ ಒಂದನೆಯ ಭಾಗವು ಸಂಘ-ಸಂಸ್ಥೆ, ರಾಜಕಾರಣ, ವಿಚಾರವಾದ, ರಂಗಭೂಮಿ, ಇತ್ಯಾದಿಗಳನ್ನು ಕುರಿತದ್ದು. ಭಾಗ ಎರಡರಲ್ಲಿ ಐದು ಲೇಖನಗಳಿದ್ದು, ಅವು ರಂಗಭೂಮಿ, ರಂಗಪ್ರಯೋಗಗಳಿಗೆ ಸಂಬಂಧಿಸಿದುವು. ಸಿನಿಮಾ ಕುರಿತದ್ದು ಭಾಗ ಮೂರು; ಮೂರು ಲೇಖನಗಳುಳ್ಳದ್ದು. ಸಾಹಿತ್ಯದ ಬಗೆಗಿನ ಮೂರು ಲೇಖನಗಳನ್ನು ಒಳಗೊಂಡಿದೆ ನಾಲ್ಕನೆಯ ಭಾಗ. ಸಂಕೀರ್ಣ ಸ್ವರೂಪದ ಏಳು ಲೇಖನಗಳಿವೆ ಭಾಗ ಐದರಲ್ಲಿ ಆರನೆಯ ಭಾಗವೇ ಅನುಬಂಧ.

ನಮ್ಮ ಚಾರಿತ್ರಿಕ, ಸಾಂಸ್ಕೃತಿಕ ಪರಂಪರೆಗಳ ಖಚಿತ ಕಲ್ಪನೆ ಹೊಂದಿರುವ ಸುಬ್ಬಣ್ಣನವರ ಬರವಣಿಗೆ ಅಪ್ರಯತ್ನಪೂರ್ವಕವಾಗಿಯೇ ನಮ್ಮ ಸಮಾಜದ ಸಮಗ್ರ ದರ್ಶನ ಮಾಡಿಸಲು ಉದ್ಯುಕ್ತವಾಗುತ್ತದೆ. ಅರಿವಿನ ಕಣ್ಣನ್ನು ತೆರೆಸುವಂತೆಯೇ ವಿವೇಕದ ಮಾರ್ಗವನ್ನೂ ಬೋಧಿಸುತ್ತದೆ. ಅವರ ಬರಹಗಳು ಶ್ರೇಷ್ಠತೆಯ ವ್ಯಸನವೆಂಬುದು ಪ್ರತ್ಯೇಕತೆ, ಭಿನ್ನತೆ-ಆಯ್ಕೆ-ಸಂಕರ ಭಯ, ಇತ್ಯಾದಿಗಳನ್ನು ಅತಿರೇಕಕ್ಕೊಯ್ಯುವ ಉನ್ಮಾದವಾಗುವುದೆಂತಲೂ ಸಮತ್ವವನ್ನು ತಪ್ಪಿಸಿಬಿಡುವುದೆಂತಲೂ ನಿಜ ನುಡಿಯುತ್ತವೆ. ಆರ್ಥಿಕ ಸ್ವಾವಲಂಬನೆಯು ಯಾವುದೇ ಸಂಸ್ಥೆಯನ್ನು ಬೇಜವಾಬ್ದಾರಿ ಸ್ವಚ್ಛಂದ ಸಂಸ್ಥೆಯಾಗಿ ಬೆಳೆಸಬಹುದೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಉದಾಹರಣೆಯೊಡನೆ ವ್ಯಕ್ತಪಡಿಸುತ್ತವೆ. ಪ್ರೀತಿಯಿಂದ ಹಗೆಯನ್ನು ಗೆಲ್ಲುವ, ಹಿಂದುಳಿದ ಕಲ್ಪನೆಯನ್ನು ನೀಗುವ, ಧರ್ಮಾಂಧತೆಯನ್ನು ಧಿಕ್ಕರಿಸುವ ಛಲವನ್ನೂ

ಬಲವನ್ನೂ ಗಳಿಸುವಂತೆ ತರುಣ ಪೀಳಿಗೆಗೆ ಕರೆಕೊಡುತ್ತವೆ. ದಲಿತೋದ್ಧಾರವಾಗಿ ಸಮಾನ ಸಮಾಜ ನಿರ್ಮಾಣಗೊಳ್ಳುವ ಬಗೆಗೆ ತವಕಿಸುತ್ತವೆ. ತಟ್ಟನೆ ಬೆಚ್ಚಿಸಿದ್ದೆಲ್ಲವನ್ನೂ ಅದ್ಭುತವೆಂದು ಬಾಯ್ತೆರೆದು ನಿಲ್ಲುವ ಅಪ್ರಬುದ್ಧತೆ ಬಿಟ್ಟು ಈಗಲಾದರೂ ಪೀಟರ್‌ಬ್ರೂಕ್ ಮಹಾಶಯನ ಪ್ರಯೋಗಗಳ ನಿಜವಾದ ಮೌಲ್ಯ ಸ್ವರೂಪ ಕಂಡುಕೊಳ್ಳುವಂತೆ ಆತನ ಮಹಾಭಾರತ ಚಲನಚಿತ್ರ ಕುರಿತು ಕಟುವಾಗಿ ಟೀಕಿಸುತ್ತವೆ. ಜಪಾನಿ ವಸಾಹತು ಕುರಿತು ಕನ್ನಡಿಗರನ್ನು ಖಂಡಿಸುವ ಮೂಲಕ ಅವರ ಅಭಿಮಾನಶೂನ್ಯತೆಯನ್ನೂ ಜಡತೆಯನ್ನೂ ಜರೆಯುತ್ತವೆ.

ಮುಖ್ಯವಾಗಿ, ತಮಗೆ ಸಂದ ಪ್ರತಿಷ್ಠಿತ ಮ್ಯಾಗ್‌ಸೆಸೆ ಪ್ರಶಸ್ತಿಯ ಬಗೆಗೆ ಸುಬ್ಬಣ್ಣನವರು ವ್ಯಕ್ತಪಡಿಸಿರುವ ಪ್ರತಿಕ್ರಿಯೆಯನ್ನು ಚಿಂತನಶೀಲರೆಲ್ಲರೂ ಗಮನಿಸಬೇಕಾದ್ದೆ. ಅವರು ತಮ್ಮ ಭಾಷಣದಲ್ಲಿ, ಈ ಹಿಂದೆ ಭವಿಷ್ಯದಲ್ಲಿ ಭರವಸೆ ಕಂಡುಕೊಂಡು ಅದರ ಸಾಧನೆಗಾಗಿ ಕಲುಷಿತ ವರ್ತಮಾನದಲ್ಲಿ ತೀವ್ರವಾದ ಹೋರಾಟ ನಡೆಸಿದಂತಹವರಿಗೇ ಈ ಗೌರವಯುತ ಪ್ರಶಸ್ತಿಯು ಸಂದಿರುವುದನ್ನು ಸರಿಯಾಗಿಯೇ ಗುರುತಿಸಿರುವರೆನಿಸುತ್ತದೆ. ಇದು ಪ್ರಾಯಃ ತೃತೀಯ ಜಗತ್ತಿನ ಹೊಸ ಸಂಗತಿಯ (ಸಿಂಥೆಸಿಸ್) ಪ್ರಕ್ರಿಯೆಗೆ ಸಂದ ಪ್ರಶಸ್ತಿಯೆಂತಲೂ ಅವರು ವರ್ಣಿಸುತ್ತಾರೆ.

ನಾಟಕ ಕುರಿತ ವ್ಯಾಖ್ಯಾನ, ತಮ್ಮ ಅನುಭವಕ್ಕೆ ದಕ್ಕಿದ ರಂಗಕಲ್ಪನೆಯ ನಿರೂಪಣೆ, ಲೋಕಶಾಕುಂತಲದ ಪ್ರದರ್ಶನ ಪ್ರಯೋಗ, ಬಿ.ವಿ.ಕಾರಂತರ ರಂಗಕೌಶಲ, ಗಂಗೊಳ್ಳಿ ಗ್ರಾಮದಲ್ಲಿ ಪ್ರಯೋಗಿಸಿದ ನಾಟಕದ ಒಟ್ಟು ಪರಿಣಾಮ-ಇವುಗಳನ್ನು ನಿರೂಪಿಸುವಲ್ಲಿ ಸುಬ್ಬಣ್ಣನವರ ಮಾಗಿದ ಅನುಭವ ಸಹಿತವಾದ ವಿಚಾರಗಳು ಸಾಲುಪುಟಗಳಲ್ಲಿ ಸುಂದರವಾಗಿ, ಗಂಭೀರವಾಗಿ ಪ್ರವಹಿಸುತ್ತವೆ, ಸಂಭ್ರಮದಿಂದ. ಈ ಶತಮಾನದ ಹೊಸ ಭಾಷೆಯಾಗಿ ಸಿನೆಮಾ ಬೆಳೆದುಬಂದುದನ್ನು, ಮೂಲದಲ್ಲಿ ಪ್ರಾಗ್ಯೆತಿಹಾಸಿಕ ಗುಹಾಮಾನವನ ಬೇಟೆಯ, ಪ್ರಾಣಿಯ ಹಾಗೂ ಉತ್ಸವ ಚಿತ್ರಗಳಲ್ಲಿ ವ್ಯಕ್ತಪಟ್ಟ ಚಲನೋದ್ಯುಕ್ತ ಭಂಗಿಗಳಲ್ಲಿಯ ಹಂಬಲದಿಂದ ಆರಂಭಿಸಿ ಇಂದಿನವರೆಗೆ ಗುರುತಿಸಿಕೊಡುತ್ತಾರೆ. ರಂಗಭೂಮಿಯಂತೆಯೇ ಸಿನಿಮಾದ ಬಗೆಗೂ ಸುಬ್ಬಣ್ಣನವರಿಗೆ ಇರುವ ಒಲವು, ಅನುಭವ, ಆಸಕ್ತಿಗಳು ಇಲ್ಲಿ ವ್ಯಕ್ತಪಡುತ್ತವೆ.

'ರಶೋಮೋನ್' - ಇದು ೧೯೫೧ ರ ವೆನಿಸ್ ಚಿತ್ರೋತ್ಸವದ ಅತ್ಯುನ್ನತ ಪ್ರಶಸ್ತಿ ಪಡೆದುಕೊಂಡ ಜಪಾನಿ ಚಿತ್ರ. ಅಕಿರ ಕುರೊಸವ ಇದರ ನಿರ್ದೇಶಕ. ಈ ಚಿತ್ರವು ಜಪಾನಿನ ಕೆಲವೇ ಶ್ರೇಷ್ಠ ಚಿತ್ರಗಳಲ್ಲೊಂದೆಂದು ಪರಿಗಣಿತವಾದುದು. ಈ ಚಿತ್ರವನ್ನು ಈತನಕ ೫೦ಕ್ಕೂ ಹೆಚ್ಚು ಸಲ ವೀಕ್ಷಿಸಿರುವುದಾಗಿ ಹೇಳಿದ್ದಾರೆ ಸುಬ್ಬಣ್ಣ. ಈ ಕಾರಣದಿಂದಲೇ ಅವರ ಬರಹದಲ್ಲಿ ಅನಾವರಣಗೊಂಡಿರುವ ಈ ಚಿತ್ರದ ಒಳನೋಟವು ಚಿತ್ರದ ನೇರ ವೀಕ್ಷಣೆಗಿಂತಲೂ ಖಚಿತವಾದ ಕಲ್ಪನೆಯನ್ನು ಮೂಡಿಸುವಲ್ಲಿ ಪರಿಣಾಮಕಾರಿಯಾಗಿದೆಯೆನ್ನಬೇಕು. ಸಂಪಾದಕ ಅಶೋಕ

ಹೇಳುವಂತೆ, ಸುಬ್ಬಣ್ಣನವರ ಈ ಬರಹದೊಂದಿಗೆ ಹೋಲಿಸಬಹುದಾದ ಮತ್ತೊಂದು ಲೇಖನ ಕನ್ನಡದಲ್ಲಿ ಇಲ್ಲ. ಅಂತೆಯೇ'ಹಿರೋಶಿಮಾ ಮೋನ್ ಅಮೊರ್' ಚಿತ್ರದ ಬಗೆಗಿನ ಬರವಣಿಗೆ ಸಹಾ.

ಪಂಪನನ್ನು ಅರ್ಥೈಸುವಿಕೆಯ ಬಗೆಗಿನ ವಿದ್ವತ್ಪೂರ್ಣ ಬರಹವು ಸುಬ್ಬಣ್ಣನವರ ಪ್ರತಿಭೆಯ ಇನ್ನೊಂದು ಮುಖವಾಗಿ ಕಾಣಿಸಿಕೊಳ್ಳುತ್ತದೆ. ಧರ್ಮ, ರಾಜ್ಯ, ವ್ಯವಸ್ಥೆ, ಸಂಸ್ಕೃತಿ, ನಾಗರಿಕತೆ, ಸಮಾಜ, ಸಮುದಾಯ, ಸ್ವಾತಂತ್ರ್ಯ ಸಮಾನತೆ, ಇತ್ಯಾದಿ ಇತ್ಯಾದಿ ಹೊಸ ಹೆಸರುಗಳಲ್ಲಿ ಇವತ್ತು ನಮ್ಮ ಧೀಮಂತರು ಚಿಂತಿಸುವ, ಅಂತಹ ಮೂಲಭೂತ ವಿಷಯಗಳ ಬಗೆಗೆ ಗಾಢವಾಗಿ ಚಿಂತಿಸಿದವನು ಪಂಪ; ಸಾಮಾನ್ಯವಾಗಿ ಜಗತ್ತಿನ ನಾವು ಬಲ್ಲ ಕಾವ್ಯ ಸಂಪ್ರದಾಯಗಳಲ್ಲಿ ಎಲ್ಲೂ ಕಾಣದ ವಿಶಿಷ್ಟ ಕಾರ್ಯತಂತ್ರದ ಮೂಲಕ, ಜಗತ್ತಿನ ಅಭಿವ್ಯಕ್ತಿ ಪರಂಪರೆಗೇ ಹೊಸ ಕೊಡುಗೆಯಿತ್ತವನು ಅವನು-ಇದು ಸುಬ್ಬಣ್ಣನವರ ಖಚಿತ ವಿವರಣೆ. ಇದರಂತೆಯೇ, ಆಧುನಿಕ ಕನ್ನಡ ಸಾಹಿತ್ಯಕ್ಕೆ ಅವರು ಆಹ್ವಾನಿಸುವ ಪರಿಯಾದರೂ ವಸ್ತುನಿಷ್ಠವಾಗಿದೆ. ಆಧುನಿಕ ಭಾರತೀಯ - ಕನ್ನಡ ಸಾಹಿತ್ಯವೆಲ್ಲವೂ ಪೂರ್ವಪಶ್ಚಿಮಗಳ ಮುಖಾಮುಖಿಯನ್ನೇ ವಸ್ತುವಾಗಿಸಿಕೊಂಡಿರುವ ಜಿಜ್ಞಾಸೆಯ ಹಿನ್ನಲೆಯಲ್ಲಿ, ಸುಬ್ಬಣ್ಣ ಸೂಚಿಸುವಂತೆ, ನಮ್ಮ ಆಧುನಿಕ ಸಾಹಿತ್ಯವು ಆಧುನಿಕ ಬದುಕಿನ ತರಹವೇ, ಒಂದು ವಿಶಿಷ್ಟ ಇತಿಹಾಸ ಕ್ಷೇತ್ರದಲ್ಲಿ ಹುಟ್ಟಿ ಬೆಳೆದು ಫಲವಂತವಾದುದು; ಈ ಇತಿಹಾಸ ಸಂದರ್ಭದ ಮೂಲಕ ನಮ್ಮ ಸಾಹಿತ್ಯಕ್ಕೆ ಸರಿಯಾದ ಪ್ರವೇಶ ಸಿಕ್ಕುತ್ತದೆ.

ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ತ್ರಿವಳಿಗಳಾದ ಸಂಸ್ಕಾರ, ಭಾರತೀಪುರ ಮತ್ತು ಅವಸ್ಥೆಗಳನ್ನು ಕುರಿತು ಸುಬ್ಬಣ್ಣ ನಿರೂಪಿಸಿರುವ ಸಂಗತಿಗಳು ಕುತೂಹಲಕಾರಿಯಾಗಿವೆ ; ಜೇಮ್ಸ್ ಎಫ್. ಡೇವಿಡ್‌ಸನ್ ಎಂಬ ವಿಮರ್ಶಕನು 'ರಶೋಮೋನ್'ಚಲನಚಿತ್ರವನ್ನು ಎರಡನೆಯ ಮಹಾಯುದ್ಧದ ಅಂತ್ಯದಲ್ಲಿ ಜಪಾನಿನ ಮೇಲೆ ಉಂಟಾದ ಆಟಂಬಾಂಬ್ ಘಟನೆಯ ಹಿನ್ನೆಲೆಯಲ್ಲಿ ಪರಿಭಾವಿಸಬೇಕೆನ್ನುವಂತಹ ಪರಿಯ ವಿರಳ ವಿಮರ್ಶೆಯ ಗುಣವನ್ನು ಹೊಂದಿವೆ. ಈ ಹಿನ್ನಲೆಯಲ್ಲಿ ಗಮನಿಸುವಂತಹದ್ದೆಂದರೆ, ಸುಬ್ಬಣ್ಣ ಹೇಳುವಂತೆ, ಅನಂತಮೂರ್ತಿಯವರ ಕಾದಂಬರಿಗಳು ಕಥೆಯ ಮಟ್ಟದಲ್ಲಿ ಒಂದರಿಂದೊಂದಕ್ಕೆ ಪ್ರತ್ಯೇಕವೆನಿಸಿದಾಗ್ಯೂ ಆಂತರಿಕ ಪ್ರಕ್ರಿಯೆಯ ಏಕೋವಾಹಿನಿಯನ್ನು ಶೋಧಿಸುವ ಸಾಹಸದಲ್ಲಿ ಬೆಸೆದುಕೊಳ್ಳುತ್ತವೆ. ಇದನ್ನು ತ್ರಿವಳಿಯೆಂದು ಭಾವಿಸಲು ಸುಬ್ಬಣ್ಣನವರಿಗೆ ಪ್ರೇರಣೆ ಕೊಟ್ಟಿದ್ದು ಈ ಅಂಶವೇ.

ಚಿತ್ರಶಿಲ್ಪ ನಿಪುಣ ಆರೆಸ್ಸೆನ್, ಚಲನಚಿತ್ರ ಮತ್ತು ರಂಗಭೂಮಿಯ ನಿಪುಣೆ ಇಂಗ್ಲೆಂಡಿನ ಮೇರಿ ಸೀಟನ್, ಜರ್ಮನಿಯ ಹೆಸರಾಂತ ರಂಗನಿರ್ದೇಶಕ ಫ್ರಿಟ್ಸ್ ಬೆನೆವಿಟ್ಜ್, ಖ್ಯಾತ ಸಂಗೀತ ಕಲಾವಿದ ಕುಮಾರ ಗಂಧರ್ವ-ಇವರುಗಳನ್ನು ಕುರಿತ ಲೇಖನಗಳು ಓದುಗರನ್ನು ಆತ್ಮೀಯತೆಯ ತೆಕ್ಕೆಯಲ್ಲಿ ಬಂಧಿಸಿ ಪ್ರೀತಿ, ಸ್ನೇಹ, ಸಹೃದಯತೆ, ಮಾನವೀಯತೆಗಳ ಮಹಾಪೂರದಲ್ಲಿ ನೂಕಿಬಿಡುವಂತಹವು. ಜಪಾನಿನ

ಬೌದ್ಧಪಂಥ 'ಝೆನ್'ನ ಸಾಧನೆಯ ವೃತ್ತಾಂತವಾದರೂ ಇಲ್ಲಿ ಗರಿಗೆದರಿರುವ ರೀತಿ ಮೋಹಕವಾದುದು; ವಿಚಾರ ಪ್ರಬೋಧಕ ಕೂಡಾ.

ಪ್ರಾಯಃ, ಎಂಗೆಲ್ಸ್‌ನ ಗ್ರಂಥವನ್ನೇ ಮೇಲ್ಪಂಕ್ತಿಯಾಗಿಟ್ಟುಕೊಂಡು ಅದನ್ನು ಅನುಸರಿಸಿಕೊಂಡು ಬರೆಯಲ್ಪಟ್ಟಿರುವ ಶ್ರೀಪಾದ ಅಮೃತ ಡಾಂಗೆಯವರ ಆಂಗ್ಲ ಮೂಲದ ಕೃತಿಯನ್ನು 'ಸಂಘಜೀವನದಿಂದ ಗುಲಾಮಗಿರಿಗೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ ಅನಂತಕೃಷ್ಣ ಹೆಬ್ಬಾರ್ ಮತ್ತು ರಾಮಚಂದ್ರ ಉಡುಪ. ಅಲ್ಲದೆ, ಎಸ್. ಚಂದ್ರಶೇಖರ್ ಅವರು 'ಅಂಬೇಡ್ಕರ್ ಮತ್ತು ಗಾಂಧಿ' ಕೃತಿಯನ್ನು ಪ್ರಕಟಿಸಿರುವರು. ಈ ಎರಡು ಪುಸ್ತಕಗಳಿಗೂ ಮುನ್ನುಡಿ ಬರೆದಿದ್ದಾರೆ ಸುಬ್ಬಣ್ಣ. ಆಯಾ ಕೃತಿಗಳ ಮಿತಿಗಳನ್ನು ಗಮನಿಸಿಯೂ ಅವುಗಳ ಅಂತರಂಗವನ್ನು ವಿಶ್ಲೇಷಿಸಿ ವಿಸ್ತರಿಸಲೆತ್ನಿಸಿರುವರು ; ಕೃತಿಗಳ ಮೂಲವಿಚಾರಗಳಿಗೆ ಹೊಸ ಅರ್ಥಗಳು ಸ್ಫುರಿಸಲು ಕಾರಣವಾಗಿರುವರು.

ಸುಬ್ಬಣ್ಣನವರ ಬರಹ, ಚಿಂತನಗಳ ಬಗೆಗೆ ಓದುಗರಿಗೆ ಒಂದು ಕಲ್ಪನೆ ದೊರೆಯಬಹುದೆಂಬ ಸಂಪಾದಕ ಟಿ.ಪಿ. ಅಶೋಕ ಅವರ ಆಶಯವು ಈ ಸಂಗ್ರಹದ ಮೂಲಕ ಸಫಲವಾಗಿದೆಯೆನ್ನಬಹುದು. ಇದಕ್ಕಾಗಿ ಶ್ರಮಿಸಿದ ಅವರು ಅಭಿನಂದನಾರ್ಹರು.

ಕನ್ನಡ ನಾಡು, ನುಡಿ, ಸಂಸ್ಕೃತಿಗಳನ್ನು ಕುರಿತು ಗಂಭೀರ ಸಂಶೋಧನೆ ಕೈಗೊಂಡ ಈ ಕ್ಷೇತ್ರಗಳಿಗೆ ಹೊಸ ಆಯಾಮ ನೀಡಿದವರು ಡಾ. ಶಂ.ಬಾ. ಜೋಶಿ. ಅವರ ಕೃತಿಗಳನ್ನಾಧರಿಸಿ ಏರ್ಪಡಿಸಲಾದ ಸಂಸ್ಮರಣ ಉಪನ್ಯಾಸಗಳ ಸಂಕಲನವೇ 'ಶಂ.ಬಾ. ಕೃತಿ ಸಮೀಕೆ'. ಶಂಬಾ ಸಾಹಿತ್ಯವನ್ನು ಗಂಭೀರವಾಗಿ ಗಮನಿಸುವ ಮಲ್ಲೇಪುರಂ ಜಿ. ವೆಂಕಟೇಶ ಅವರು ಇದನ್ನು ಸಂಪಾದಿಸಿಕೊಟ್ಟಿದ್ದಾರೆ. ಶಂಬಾ ಸಾಹಿತ್ಯವನ್ನನುಸರಿಸಿ ಜೀವನಚರಿತ್ರೆ, ವಿಚಾರಸಾಹಿತ್ಯ, ಸಮಾಜ, ಇತಿಹಾಸ, ಸಾಹಿತ್ಯ ವಿಮರ್ಶೆ ಕುರಿತು ಕೆಲವು ಸಮೀಕ್ಷಾ ಬರಹಗಳನ್ನು ಈ ಸಂಕಲನದಲ್ಲಿ ಸೇರಿಸಲಾಗಿದೆ. ಜತೆಗೆ, ಕಂನಾಡ ಸಂಸ್ಕೃತಿಯನ್ನು ಕುರಿತು ಶಂಬಾ ನಡೆಸಿದ ಅಧ್ಯಯನದ ನೆಲೆಗಳನ್ನೇ ಪ್ರಧಾನವಾಗಿಟ್ಟುಕೊಂಡು ಇನ್ನಷ್ಟು ಲೇಖನಗಳನ್ನು ನಿಯೋಜಿಸಲಾಗಿದೆ. ಹಾಗೆಯೇ, ಭಾರತೀಯ ಹಾಗೂ ಜಾಗತಿಕ ಸಂಸ್ಕೃತಿಗಳ ಬಗೆಗೆ ಶಂಬಾ ನಡೆಸಿರುವ ಕೃತಿಗಳ ಸಮೀಕ್ಷೆಯನ್ನು ಸೇರಿಸಲಾಗಿದೆ. ಈ ಸಂಕಲನವನ್ನು ಸಿದ್ಧಗೊಳಿಸುವಲ್ಲಿ ಅನುಸರಿಸಲಾದ ವಿಧಾನ ಇದು.

ಸಂಪಾದಕರು ಬರೆದ ಪ್ರಸ್ತಾವನೆಯು ಈ ಸಂಕಲನದ ಮುಖ್ಯವಾದ ಭಾಗ. ಶಂಬಾ ಅವರ ಬದುಕು-ಬರಹಗಳನ್ನು ಇಲ್ಲಿ ಸೂಕ್ಷ್ಮವಾಗಿ, ಸಮರ್ಥವಾಗಿ ನಿರೂಪಿಸಲಾಗಿದೆ. ಕಡುಕಷ್ಟವೆಂದು ತಿಳಿಯಲಾಗುವ ಶಂಬಾ ಸಾಹಿತ್ಯವನ್ನು ಓದಿ ಅರ್ಥೈಸುವ ಸಾಹಸಕ್ಕೆ ಕೈಯಿಕ್ಕಿದ ಈ ತಲೆಮಾರಿನ ಕೆಲವೇ ಮಂದಿಯ ಪೈಕಿ ಓರ್ವರು ಮ.ಜಿ. ವೆಂಕಟೇಶ. ಶಂಬಾ ಸಾಹಿತ್ಯವನ್ನು ಕುರಿತು ಅವರು ವ್ಯಾಖ್ಯಾನಿಸುವುದು ಹೀಗೆ:

"ಸಂಸ್ಕೃತಿ ಮತ್ತು ಭಾಷೆಗಳ ಅನ್ಯೋನ್ಯತೆಯ ಹಿನ್ನೆಲೆಯಲ್ಲಿ ತಮ್ಮ ಬರವಣಿಗೆಯ ಒಟ್ಟು ಸ್ವರೂಪವನ್ನು ಗ್ರಹಿಸಿಕೊಂಡು ಬರೆದ ಮಹತ್ವದ ಪಂಡಿತರಲ್ಲಿ ಶಂ.ಬಾ. ಅವರು ಮೊತ್ತಮೊದಲಿಗರೆಂಬುದನ್ನು ಈ ಸಂದರ್ಭದಲ್ಲಿ ಅಗತ್ಯವಾಗಿ ನೆನೆಯಲೇಬೇಕು. ಸಂಸ್ಕೃತಿಯ ಸರ್ವೇಕ್ಷಣ ಮತ್ತು ವಿಶ್ಲೇಷಣಗಳ ಮೂಲಕ ಇತಿಹಾಸದ ಅಧ್ಯಯನಕ್ಕೆ ಅದರಲ್ಲೂ, ಮಾನವ ಸಂಸ್ಕೃತಿಯ ಅಧ್ಯಯನಕ್ಕೆ ಹೊಸದೊಂದು ತಿರುವನ್ನೇ ತಂದುಕೊಟ್ಟ ಶಂ.ಬಾ. ಅವರು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಗಡಿಯನ್ನು ದಾಟಲಿಲ್ಲ. ಭಾರತೀಯ ಜಾಗತಿಕ ಇತಿಹಾಸದ ದೃಷ್ಟಿಯಿಂದ ಶಂ.ಬಾ. ಅವರ ಅಧ್ಯಯನದ ಹಾಗೂ ಬರೆವಣಿಗೆಯ ನೆಲೆಗಳು ವ್ಯಾಪಕವಾದ ಪ್ರಚಾರ ಹಾಗೂ ಅಧ್ಯಯನದ ವಿವಿಧ ಮಾದರಿಗಳು ಭಾರತೀಯ ವಿದ್ವಾಂಸರ ಸ್ಪಷ್ಟವಾದ ತಿಳಿವಳಿಕೆಗೆ ಸಿಗಲಿಲ್ಲವೆಂಬುದೇ ಕೊರತೆಯ ಸಂಗತಿ".

ಈ ಸಂಕಲನದ ಬಹುಪಾಲು ಲೇಖನಗಳು ಶಂಬಾ ವ್ಯಕ್ತಿತ್ವ, ವಿಚಾರ ಮತ್ತು ಸಾಹಿತ್ಯಗಳ ಒಳನೋಟಗಳನ್ನು ಗ್ರಹಿಸಲು ಸಹಕಾರಿಯಾಗಿವೆ. ಶಂಬಾ ಅವರ ವಿಚಾರ ಸಾಹಿತ್ಯದ ಸ್ಥೂಲನೋಟ ಒದಗಿಸಿರುವ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು, ಅನನ್ಯವಾದ ಮನೋಧರ್ಮದ ಶಂಬಾ ಅವರ ಶಾಸ್ತ್ರೀಯ ದೃಷ್ಟಿ ಶುಷ್ಕ ತರ್ಕವಲ್ಲವೆಂತಲೂ ಬದುಕಿನ ಜ್ವಲಂತ ಸಮಸ್ಯೆಗಳನ್ನು ನಿರ್ಲಿಪ್ತವಾಗಿ ವಿಶ್ಲೇಷಿಸಿ ಜಟಿಲತೆಯನ್ನು ಬಿಡಿಸಿ ಸ್ವರೂಪದರ್ಶನ ಮಾಡಿಸಬಲ್ಲುದೆಂತಲೂ ತಮ್ಮ ವಿಚಾರವನ್ನು ಮಂಡಿಸುವರು. ಗತಕಾಲವನ್ನು ವರ್ತಮಾನದೊಂದಿಗೆ ತಗುಳ್ಚಿ ಪ್ರಸ್ತುತವೆನಿಸುವ ಅರ್ಥವ್ಯಾಖ್ಯಾನ ನೀಡಬಲ್ಲವರಾದ್ದರಿಂದಲೇ ಶಂಬಾ ಅವರು ಸಂಪ್ರದಾಯವಾದಿಗಳ ಹಾಗೂ ವೈದಿಕ ಕರ್ಮನಿಷ್ಠರ ವಿರೋಧಕ್ಕೆ ಗುರಿಯಾದುದರಲ್ಲಿ ಆಶ್ಚರ್ಯವಿಲ್ಲವೆಂಬ ಕೃಷ್ಣಯ್ಯ ಅವರ ಗ್ರಹಿಕೆ ಸರಿಯಾಗಿಯೇ ಇದೆ. ಅಂತೆಯೇ, ಆದರ್ಶ ಮನುಷ್ಯನ, ಆದರ್ಶ ಬದುಕಿನ, ವ್ಯಕ್ತಿತ್ವದ ಕಲ್ಪನೆಯಿದ್ದು, ಈ ಆದರ್ಶ, ವಿಚಾರ ಮತ್ತು ತರ್ಕಗಳಿಗನುಗುಣವಾಗಿ ಸಕಲ ಮಾನವರು ತಮ್ಮ ಬದುಕನ್ನು ರೂಢಿಸಿಕೊಳ್ಳಬೇಕೆಂಬ ಹಂಬಲವನ್ನು ತಮ್ಮ ಮನಸ್ಸಿನಾಳದಲ್ಲಿ ಹೊತ್ತವರು ಶಂಬಾ ಎಂಬುದನ್ನು ಕೆ. ಸತ್ಯನಾರಾಯಣ ಅವರು ವ್ಯಕ್ತಮಾಡಿರುವುದು ಸಹಾ ಗಮನೀಯವಾದುದೇ.

'ಕಣ್ಮರೆಯಾದ ಕನ್ನಡ' ಮತ್ತು 'ಕನ್ನಡದ ನೆಲೆ' ಕೃತಿಗಳ ಅಧ್ಯಯನದ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಅಂಶಗಳನ್ನು ಶ್ರುತಪಡಿಸಿದ್ದಾರೆ ಡಾ. ಬಸವರಾಜ ಕಲ್ಗುಡಿ. ಕರ್ನಾಟಕ ಪ್ರದೇಶದ ವ್ಯಾಪ್ತಿ, ಈ ಪ್ರದೇಶದ ಮೂಲ ಜನಾಂಗ - ಸಂಸ್ಕೃತಿಯನ್ನು ಬೆಳೆಸಿದ ರಾಜವಂಶಗಳು ಹಾಗೂ ಕನ್ನಡದೇಶ ಹಾಗೂ ಜನಾಂಗ ತಮ್ಮ ವ್ಯಾಪ್ತಿ ಮತ್ತು ಪ್ರಾಧಾನ್ಯತೆಯನ್ನು ಕಳೆದುಕೊಂಡಿದ್ದರ ಕಾರಣಗಳು - ಹೀಗೆ ಮೂರು ಅಂಗಗಳಾಗಿ ವಿಂಗಡಿಸಿ ನಡೆಸುವ ಅಧ್ಯಯನದಿಂದಾಗಿ, ಶಂಬಾ ಅವರ ಅಧ್ಯಯನವು ಮುಂದಿನ ಅನೇಕ ರೀತಿಯ ಐತಿಹಾಸಿಕ ಸಂಶೋಧನೆಗಳಿಗೆ ದಾರಿಯನ್ನೂ ತೋರುತ್ತದೆಂದು ಗ್ರಹಿಸುತ್ತಾರೆ. ಶಂಬಾ ಅವರ ಮಹತ್ವದ ಕೃತಿಯಾದ 'ಎಡೆಗಳು

ಹೇಳುವ ಕಂನಾಡ ಕತೆ'ಯು ಸ್ಥಳನಾಮ ಅಧ್ಯಯನದ ಫಲಿತಾಂಶಗಳನ್ನೇ ಒಳಗೊಂಡುದು. ೧೯೪೭ರ ವೇಳೆಗೆ ಕನ್ನಡದಲ್ಲಿ ಸ್ಥಳನಾಮಗಳ ಅಧ್ಯಯನದಿಂದ ಕರ್ನಾಟಕ ಸಂಸ್ಕೃತಿಯನ್ನು ರೂಪಿಸುವ ಪ್ರಯತ್ನ ಈ ಮೂಲಕ ನಡೆದುದನ್ನು ಎತ್ತಿ ಹೇಳುವ ಡಾ. ಎಸ್. ವಿದ್ಯಾಶಂಕರ ಅವರು, ಈ ಅಧ್ಯಯನದಲ್ಲಿ ಶಂಬಾ ಅವರು ಕಂನಾಡಿನಲ್ಲಿ ಬಳಕೆಯಲ್ಲಿದ್ದ ಪರ್ವತಪೂಜೆ, ವೃಕ್ಷಪೂಜೆ, ನರಬಲಿ, ಧರ್ಮಗಳನ್ನೂ ಕಂನಡರ ಸಮಾಜ, ಕುಟುಂಬ ಪದ್ಧತಿ, ವಿದ್ಯೆ, ರಸಿಕತೆ, ಭಾಷೆ, ಇತ್ಯಾದಿಗಳನ್ನೂ ಪ್ರಸ್ತಾಪಿಸಿರುವುದನ್ನು ಸೂಕ್ಷ್ಮವಾಗಿ ತಿಳಿಯಪಡಿಸುವರು.

ವೇದಗಳ ಅಂತರಾರ್ಥದತ್ತ ಕನ್ನಡ ಸಾಹಿತಿಗಳು ಹಾಗೂ ಸಾಹಿತ್ಯ ವಿಮರ್ಶಕರ ಗಮನವನ್ನು ವಿಶೇಷವಾಗಿ ಸೆಳೆದ ಶಂಬಾ ಅವರ ಇನ್ನೊಂದು ಗ್ರಂಥವೆಂದರೆ 'ಋಗ್ವೇದಸಾರ: ನಾಗಪ್ರತಿಮಾ ವಿಚಾರ'. ಪ್ರೊ. ಆರ್.ಜಿ. ಕುಲಕರ್ಣಿ ಅವರು ಇದನ್ನು ವಿಮರ್ಶಿಸಿದ್ದು, ಕೆಲವು ವಿಚಾರಾತ್ಮಕ ಸಂಗತಿಗಳನ್ನು ಪ್ರಸ್ತಾಪಿಸಿದ್ದಾರೆ. ಅವರು ದೃಷ್ಟಿಸುವಂತೆ, "ಜೀವನ ಪರವಾದ ಸತ್ಯನಿಷ್ಠ ಬದುಕು, ಜೀವನ ವಿರೋಧಿ, ಸ್ವಾಂತಸ್ಸುಖಪ್ರಧಾನ ಕತ್ತಲೆಯ, ವಿಷಯಲಂಪಟ ಸಂಸ್ಕೃತಿಯೊಂದು ತಲೆ ಎತ್ತಿ, ಮೂಲ ಋಗ್ವೇದದ ತಿರುಳನ್ನೇ ಬದಲಿಸಿತು, ಮರೆಮಾಡಿತು ಎಂದು ಶಂ.ಬಾ ಪ್ರತಿಪಾದಿಸುತ್ತಾರೆ. ಇದೇ ಇಂದಿನ ಋಗ್ವೇದದ ಮೋಸ. ಏಕೆಂದರೆ, ಈ ರೀತಿ ಅರ್ಥವು ಮೂಲಭೂತವಾಗಿ ಬದಲಾದರೂ ಏನೂ ಆಗಿಯೇ ಇಲ್ಲವೆಂಬಂತೆ, ಇಂದಿನ ಋಗ್ವೇದವೇ ಮೂಲವೇದವೆಂಬ ಭ್ರಮೆ ಬೆಳೆದಿರುವದೆಂದು ಶಂ.ಬಾ ಸಂಶೋಧನೆಯ ಮುಖ್ಯ ಫಲಿತಾಂಶ. ಮೂಲವೇದವು ಸೂರ್ಯ, ಇಂದ್ರ ತ್ರಿತ ಆಪ್ತ್ಯರ ಪ್ರತಿಮೆಗಳಲ್ಲಿ ಅಭಿವ್ಯಕ್ತ ಪಡೆದರೆ ಇಂದಿನ ಋಗ್ವೇದವು 'ನಾಗ' ಪ್ರತಿಮೆಯ ವಿವಿಧ ರೂಪಾಂತರಗಳಲ್ಲಿ ಮೈದಾಳುತ್ತದೆಂದು ಅವರ ಸಂಶೋಧನೆಯ ವಾದ".

ಶಂಬಾ ಅವರ ವಿಚಾರಗಳು ವರ್ಗ-ವರ್ಣಗಳ ವೈಷಮ್ಯದಿಂದ ಛಿದ್ರಗೊಂಡ, ಸಮುದಾಯಕ್ಕಿಂತ ವ್ಯಕ್ತಿಯೇ ಮುಖ್ಯವೆಂದು ತಿಳಿಯುವ, ಜ್ಞಾನದ ಬೆಳಕನ್ನು ತೂರೆದು ಕರ್ಮಕಾಂಡಗಳ ಬೂದಿಯನ್ನು ಬಳಿದುಕೊಂಡಿರುವ ನಮ್ಮ ಸಮಾಜದ ತಳವನ್ನು ಒಡೆಯುವ ಸಿಡಿಮದ್ದಿನಂತೆ ಕೆಲಸಮಾಡುವ ಶಕ್ತಿಯನ್ನು ಪಡೆದಿವೆಯೆನ್ನುತ್ತಾರೆ, ಎಚ್.ಎಸ್. ರಾಘವೇಂದ್ರರಾವ್ - "ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ" ಕೃತಿಯನ್ನು ವಿಶದವಾಗಿ ವಿಮರ್ಶಿಸುವಾಗ. ಇಂದಿನ ಸಾಹಿತ್ಯ ವಿಮರ್ಶೆಯ ಸನ್ನಿವೇಶದಲ್ಲಿ 'ರೂಪನಿಷ್ಠ' ಸಾಹಿತ್ಯ ವಿಮರ್ಶೆಗೂ ಬಂಡಾಯಪರವಾದ 'ಆಶಯನಿಷ್ಠ' ವಿಮರ್ಶೆಗೂ ನಡುವೆ ಹುಟ್ಟಿಕೊಂಡಿರುವ ಸಂಘರ್ಷದಲ್ಲಿ ಶಂಬಾ ಅವರು ಅಚ್ಚರಿ ಹುಟ್ಟಿಸುವಷ್ಟು ಬಂಡಾಯಪರವಾದ ನಿಲುವುಗಳನ್ನು ವ್ಯಕ್ತಪಡಿಸಿರುವರೆಂಬುದು ಅವರ ಅಭಿಮತ. ಒಟ್ಟು ಜೀವನಕ್ರಮದ ಬಗೆಗೆ ಗಂಭೀರವಾದ ಚಿಂತನೆಗೆ ತೊಡಗಿಸುವ ಪ್ರಯತ್ನ, 'ಹಿಂದೂ' ಎಂಬ ಧರ್ಮದ ನಿಜವಾದ ಸ್ವರೂಪವನ್ನು ಗ್ರಹಿಸಿ ಅಂತಹದೊಂದು ಜೀವನಕ್ರಮವನ್ನು ವೈಯಕ್ತಿಕ ಬದುಕಿನಲ್ಲಿ ಅಳವಡಿಸಿಕೊಂಡು ಸಮಷ್ಟಿಯ ಬದುಕಿನಲ್ಲಿ ನಿಜವಾಗಿಸಲು

ಪ್ರಯತ್ನಿಸಬೇಕೆಂಬ ಗಂಭೀರ ಕಳಕಳಿ - ಇವುಗಳು ಶಂಬಾ ಅವರ ಈ ಕೃತಿಯಲ್ಲಿ ಗೋಚರವಾಗಿರುವುದು ಇಲ್ಲಿ ವ್ಯಕ್ತಪಡುತ್ತದೆ.

'ಬುಧನ ಜಾತಕ' ವನ್ನು ಪರಿಚಯಿಸಿಕೊಡುತ್ತಾರೆ ಡಾ. ಕೆ.ವಿ. ನಾರಾಳು. ಬುದ್ಧಿಯ ಅಧಿದೇವತೆಯೆಂದು ಹೇಳಲಾದ ಪುರಾಣದೈವತ ಬುಧನನ್ನು ಶಂಬಾ ವಿವರಿಸಿರುವ ರೀತಿಯನ್ನು ಅವರು ವಿಶ್ಲೇಷಿಸಿರುವ ವಿಧಾನವು ಅತ್ಯಂತ ಸೂಕ್ಷ್ಮದ್ದು. ಇದು ಬುಧನ ಜಾತಕವಲ್ಲ 'ಮಾನವನ ಜಾತಕ' ಎನ್ನುವ ಡಾ. ನಾರಾಯಣ, ಗತಿಸಿದ ಕಾಲದ ಆಯ್ಕೆಯನ್ನು ಬೆಳೆಸುತ್ತ ತನಗಿರುವ ಆಯ್ಕೆಯನ್ನು ಬಳಸದ ಮನುಷ್ಯನ ಬಗೆಗೆ ಈ ಪುಸ್ತಕವು ಕಾಳಜಿ ವಹಿಸುತ್ತದೆನ್ನುತ್ತಾರೆ.

ಶಂಬಾ ಅವರ ಚಿಂತನ ವಿಧಾನಗಳ ನೆಲೆಯನ್ನು ವಿವರವಾಗಿ ಹಾಗೂ ಸ್ಪಷ್ಟವಾಗಿ ಅರಿಯಲು ನೆರವಾಗುವ ಇಂತಹ ಮೌಲಿಕ ಸಂಕಲನವನ್ನು ಶುದ್ಧವಾಗಿ ಹೊರತರುವಲ್ಲಿ ಶ್ರದ್ಧೆ-ಗೌರವ-ಪ್ರೀತಿಗಳಿಂದ ಶ್ರಮಿಸಿ ಯಶಸ್ವಿಯಾಗಿದ್ದಾರೆ ಮಲ್ಲೇಪುರಂ ಜಿ. ವೆಂಕಟೇಶ.

ಡಾ. ಕೋಟ ಶಿವರಾಮ ಕಾರಂತರು ಆರೇಳು ದಶಕಗಳಿಂದ ಅವಿರತವಾಗಿ ರಚಿಸಿದ ಸಮಗ್ರ ಸಾಹಿತ್ಯ ಸಾರ ಸಂಗ್ರಹ ಕೃತಿಯೇ 'ಶಿವರಾಮ ಕಾರಂತ ವಾಙ್ಮಯ ವೃತ್ತಾಂತ'. ಕೋಟದ ಕಾರಂತ ಸಂಮಾನ ಸಮಿತಿಯು ಹೊರತಂದ 'ಕಾರಂತ ಕೃತಿ ಕರಂಡ'ಕ್ಕಾಗಿ ವಿಶೇಷವಾಗಿ ದುಡಿದ ಬಿ. ಮಾಲಿನಿ ಮಲ್ಯ ಅವರು ಇದರ ಸಂಪಾದಕರು. ಕಾರಂತರ ಜೀವನ ಪರಿಚಯ, ಅವರಿಗೆ ದೊರೆತ ಗೌರವ-ಪ್ರಶಸ್ತಿಗಳು, ಅವರು ರಚಿಸಿದ ಲಲಿತ ಸಾಹಿತ್ಯ, ಬಾಲಸಾಹಿತ್ಯ, ವಿಚಾರಸಾಹಿತ್ಯ, ಸಹಾಯಕ ಸಾಹಿತ್ಯ, ಸಂಪಾದನೆ, ಅನುವಾದ ಕೃತಿಗಳು - ಇವುಗಳ ಯಾದಿ ಮತ್ತು ಸಮೀಕ್ಷೆಗಳು ಈ ಸಂಗ್ರಹದಲ್ಲಿವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾರಂತರ ಸ್ಥಾನವನ್ನು ಕುರಿತು ಮಾಹಿತಿ ಒದಗಿಸುವ ಈ ಸಂಗ್ರಹವು, ಕಾರಂತರ ಓದುಗರಿಗೆ, ಅಭಿಮಾನಿಗಳಿಗೆ, ಸಾಹಿತ್ಯದ ವಿದ್ಯಾರ್ಥಿಗಳಿಗೆ, ವಿಮರ್ಶಕರಿಗೆ - ಒಟ್ಟಾರೆ ಕನ್ನಡಿಗರಿಗೆ ಅಪೂರ್ವ ಕಾಣಿಕೆಯಂತಿದೆ. ಸಂಪಾದಕರ ಅಂದಾಜಿನ ಪ್ರಕಾರ, ವಿವಿಧ ಗಾತ್ರದ ಪುಸ್ತಕಗಳ ಪುಟಗಳನ್ನೆಲ್ಲ ಒಂದೇ ಮಾನದಿಂದ ಅಳೆದರೂ ಕಾರಂತ ಕೃತಿಗಳ ಪುಟಸಂಖ್ಯೆ ೩೫ ಸಾವಿರವನ್ನು ಮೀರುತ್ತದೆ. ಬಿಡಿ ಲೇಖನಗಳ ಪುಟಸಂಖ್ಯೆ ೮ ಸಾವಿರವನ್ನು ದಾಟುತ್ತದೆ. ಕಾರಂತರು ರಚಿಸಿದ ಕ್ರೌನ್ ೧/೪ ಗಾತ್ರದ ಬೃಹತ್‌ಗ್ರಂಥಗಳು ನಾನ್ನೂರರಷ್ಟಿವೆ.

ಕಾರಂತರು ಎಂದೋ ಬರೆದು ಪ್ರಕಟಿಸಿದ್ದ ಹಾಗೂ ಬಹಳಷ್ಟು ಮಂದಿ ಓದಿರದ ಕೃತಿಗಳ ಸ್ಥೂಲ ಅವಲೋಕನವನ್ನು ಈ ಸಂಗ್ರಹದಲ್ಲಿ ಕೊಟ್ಟಿರುವುದರಿಂದ, ಇದು ಸಾಹಿತ್ಯಾಭ್ಯಾಸಿಗಳಿಗೆ ಆಕರಗ್ರಂಥವೆನಿಸಿದೆ. ಇಲ್ಲಿ ಕಾರಂತರ ಸೃಜನಶೀಲ ಕೃತಿಗಳ ಸಾರ ಸಂಗ್ರಹವಿದ್ದರೆ, ಸೃಜನೇತರ ಗ್ರಂಥಗಳ ವಿಷಯಸೂಚಿಯ ವಿವರಗಳು ಮಾತ್ರ ಇವೆ. ಸೂಚಿಯ ನಿಖರತೆ ಬಗೆಗೆ ಸಂಪಾದಕರಲ್ಲಿ ಅಧಿಕ ವಿಶ್ವಾಸವಿರುವುದೂ ಇಷ್ಟರವರೆಗೆ ಹೊರಬಂದ ಕಾರಂತ ಕೃತಿಸೂಚಿಗಳಲ್ಲಿಯೇ ಇದು ಅತ್ಯಂತ ಹೆಚ್ಚು

ಕಾರಂತ ಕೃತಿಗಳನ್ನೊಳಗೊಂಡಿದೆಯೆಂಬುದೂ ಗಮನೀಯವಾದುದು. ಆದರೆ ಕಾರಂತರ ಅನುವಾದಿತ ಕೃತಿಗಳ ವಿವರಗಳು ಇಲ್ಲಿಲ್ಲ. ಅವರ ಲೇಖನಗಳನ್ನು ಅಕಾರಾದಿಯಲ್ಲಿ ವಿಂಗಡಿಸಲಾಗಿದೆ. ವಸ್ತುವಿನ ವೈವಿಧ್ಯತೆ, ವೈವಿಧ್ಯಮಯ ಸಾಹಿತ್ಯ ಪ್ರಕಾರಗಳ ಮೂಲಕ ತಮ್ಮ ಸೃಜನಶೀಲತೆಯನ್ನು ಸಾಧಿಸಿರುವ ಕಾರಂತರ ಬಹುಮುಖ ಪ್ರತಿಭೆ ಇಲ್ಲಿ ಅನಾವರಣಗೊಂಡಿದೆಯೆನ್ನುವುದು ಗಮನಿಸತಕ್ಕ ವಿಷಯ.

ಕನ್ನಡ ವಿಶ್ವವಿದ್ಯಾಲಯವು ಆರಂಭದಲ್ಲೆ ಹಮ್ಮಿಕೊಂಡ ಗಮನಾರ್ಹ ಯೋಜನೆಗಳಲ್ಲಿ 'ಕನ್ನಡ ವಾರ್ಷಿಕ -೧೯೯೧ 'ದ ಪ್ರಕಟಣೆಯೂ ಒಂದು. ಕರ್ನಾಟಕದ ಆಯಾ ವರುಷದ ಸಂಸ್ಕೃತಿ ಸಾಧನೆಗಳನ್ನು ಗುರುತಿಸುವ ಉದ್ದೇಶ ಇದರದು. ಈ ಚೊಚ್ಚಲು ಸಂಪುಟವನ್ನು ಸಂಪಾದಿಸಿರುವವರು ಡಾ. ಬಸವರಾಜ ಕಲ್ಗುಡಿ. ಈ ಪ್ರಕಟಣೆ ಕುರಿತು ಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರು ವ್ಯಕ್ತಪಡಿಸಿರುವಂತೆ, "ಕನ್ನಡ ವಿಶ್ವವಿದ್ಯಾಲಯದ 'ಕನ್ನಡ ವಾರ್ಷಿಕ'ವು ಸಾಹಿತ್ಯ ವಾರ್ಷಿಕದ ವ್ಯಾಪ್ತಿ ಏನಿತ್ತು ಅದನ್ನು ಒಳಗೊಂಡು ಸಂಸ್ಕೃತಿ ಸಾಧನೆಯ ಸಮೀಕ್ಷೆಯನ್ನು ಮಾಡುವೆಡೆಗೆ ತನ್ನ ದೃಷ್ಟಿಯನ್ನೂ, ವ್ಯಾಪ್ತಿಯನ್ನೂ ಬೆಳೆಸಿಕೊಂಡಿದೆ. 'ಕನ್ನಡ ವಾರ್ಷಿಕ' ಕೇವಲ ಸಾಧನೆಗಳ, ಅಭಿವ್ಯಕ್ತಿಗಳ ಪಟ್ಟಿ ಮಾತ್ರವಾಗದೇ ಆಯಾ ಸಾಧನೆಗಳ ಸಾಂಸ್ಕೃತಿಕ ಸತ್ವವನ್ನು ಅರಿಯುವ ಕಾರ್ಯವನ್ನೂ ಮಾಡಿದೆ. ಈ ದೃಷ್ಟಿಯಿಂದ ಇದು ಅನನ್ಯ ಕೃತಿಯಾಗಿದೆ."

ಈ ಬಗೆಯ ಸಂಗ್ರಹವು ಸರಣಿಯಲ್ಲಿ ಮೊದಲನೆಯದಾದ್ದರಿಂದ, ಅದರ ಸ್ವರೂಪ, ವ್ಯಾಪ್ತಿ, ಉಪಯೋಗ, ಸಮಗ್ರತೆ, ಇತ್ಯಾದಿಗಳ ಖಚಿತ ಕಲ್ಪನೆಯನ್ನು ಹೊಂದಿ, ಮಾದರಿ ಸಂಪುಟವನ್ನು ಸರ್ವಗ್ರಾಹ್ಯವೆನಿಸುವಂತೆ ಸಿದ್ಧಪಡಿಸಿಕೊಡುವ ಸವಾಲಿನ ಕಾರ್ಯವನ್ನು ಸಂಪಾದಕ ಡಾ. ಕಲ್ಗುಡಿ ಯಶಸ್ವಿಯಾಗಿ ನಿರ್ವಹಿಸಿರುವರೆನ್ನಬಹುದು. ಈ ಸಂಕಲನದಲ್ಲಿ ಅಭಿವ್ಯಕ್ತಗೊಂಡಿರುವ ಸಂಸ್ಕೃತಿ ಸಮೀಕ್ಷೆ, ಸಾಧನೆಯ ವಿವರಗಳು- ಕನ್ನಡ ಬದುಕು ಇಡುತ್ತಿರುವ ಹೆಜ್ಜೆಯ ವಾಸನೆಯ ಕಿಂಚಿತ್ತನ್ನಾದರೂ ಹಿಡಿಯಬೇಕು, ಹಿಡಿಯುತ್ತದೆ ಎನ್ನುವ ಆಶಯ ಅವರದು. ಇದು ಕೇವಲ ಸಾಧನೆಯ, ಅಭಿವ್ಯಕ್ತಿಯ ವಿವರಗಳ ಪಟ್ಟಿಯಲ್ಲ; ಆಯಾ ಸಾಧನೆಯ, ಅಭಿವ್ಯಕ್ತಿಗಳ ಸಾಂಸ್ಕೃತಿಕ ಸತ್ವವನ್ನು ಅರಿಯುವ ಮುಖ್ಯ ಉದ್ದೇಶವನ್ನು ಇದು ಹೊಂದಿದೆಯೆನ್ನುತ್ತಾರವರು. ಅವರು ನಂಬುವಂತೆ, ಇಲ್ಲಿ ಅಭಿವ್ಯಕ್ತಗೊಂಡ ವಿವರಗಳನ್ನು ಸಮಗ್ರವಾಗಿ ಗಮನಿಸಿದರೆ ನಮ್ಮ ಸಂಸ್ಕೃತಿಯ ದಾರಿ, ಸದ್ಯಕ್ಕೆ ಎತ್ತಣದಿಂದೆತ್ತಣಕ್ಕಿರಬಹುದು ಎನ್ನುವ ಬಗೆಗೆ ಆಲೋಚನೆಗೆ ಹಚ್ಚುವಂತೆ ಮಾಡುತ್ತದೆ. ಹಾಗೆಯೇ, ಅವರು ಸೂಚಿಸುವಂತೆ, ೧೯೯೧ ರ ಅಭಿವ್ಯಕ್ತಿ, ಹಾಗೂ ಸಾಧನೆಗಳ ಒಡಲಾಳದಲ್ಲಿ ನಮ್ಮ ಬದುಕಿನ ಸತ್ವಗಳ ಹುಡುಕಾಟವು ಪ್ರಧಾನವಾಗಿ ತೋರುತ್ತದೆ ಎನ್ನುವುದು ಪ್ರಮುಖವಾಗಿ ಗಮನಿಸಬೇಕಾದ ವಿಚಾರ.

ಈ ವಾರ್ಷಿಕದ ಒಳಪುಟಗಳನ್ನು ತೆರೆದರೆ ಸಂಪಾದಕರ ಆಶಯವು ಪಡಿಮೂಡಿರುವುದು ಸ್ಪಷ್ಟಪಡುತ್ತದೆ. ಎರಡು ಭಾಗಗಳಲ್ಲಿ ಹಂಚಿಹೋಗಿರುವ ಲೇಖನಗಳು ಕರ್ನಾಟಕದ ಸ್ಥೂಲ ಪರಿಚಯ, ೧೯೯೧ ರ ಪ್ರಮುಖ ಘಟನೆಗಳು,

ಪ್ರಮುಖ ವ್ಯಕ್ತಿಗಳು ಮತ್ತು ಪ್ರಶಸ್ತಿಗಳು, ಅಂದು ಇಂದನ್ನು ಜೋಡಿಸುವ ನೆನಪು, ಆ ವರುಷದ ಸಾಂಸ್ಕೃತಿಕ ಅಭಿವ್ಯಕ್ತಿಗಳು, ಇತ್ಯಾದಿ ಸ್ವರೂಪಗಳನ್ನು ಹೊಂದಿವೆ. ಭಾಗ ಎರಡರಲ್ಲಿರುವ ಲೇಖನಗಳು ಸಾಹಿತ್ಯದ ಎಲ್ಲ ಪ್ರಕಾರಗಳ ವಿಮರ್ಶೆಗಳನ್ನೂ ಚಿತ್ರಕಲೆ, ಸಂಗೀತ ಚಟುವಟಿಕೆ, ಶೈಕ್ಷಣಿಕ ಮತ್ತು ವೈಜ್ಞಾನಿಕ ಚಟುವಟಿಕೆಗಳು, ಕನ್ನಡ ಚಿತ್ರರಂಗ, ನಾಟಕ-ರಂಗಭೂಮಿ, ಹೊರನಾಡ ಕನ್ನಡ ಚಟುವಟಿಕೆಗಳು, ರಾಜಕಾರಣ, ಕ್ರೀಡಾ ಚಟುವಟಿಕೆಗಳನ್ನೂ ಕುರಿತದ್ದಾಗಿವೆ. ಇಲ್ಲಿಯವು ಗ್ರಂಥಾಧಾರಿತ, ದಾಖಲೆಯಾಧಾರಿತ, ಖಚಿತ ಅಂಕಿ-ಅಂಶಗಳಾಧಾರಿತ ಲೇಖನಗಳಾದ್ದರಿಂದ, ಈ ಸಂಪುಟವು ಬೆಲೆಯುಳ್ಳದ್ದಾಗಿರುವುದಂತೂ ದಿಟ. ಸಾಹಿತ್ಯ-ಸಾಹಿತ್ಯೇತರ ಸಂಗತಿಗಳನ್ನು ಇದರಲ್ಲಿ ವಿಪುಲವಾಗಿ ಇಡುಕಿರುವುದರಿಂದ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಸಾಮಾನ್ಯ ಓದುಗರಿಗೂ ಅಗತ್ಯವಾದುದೆನಿಸಿದೆ.

ಕನ್ನಡಿಗರಿಗೆ ವರುಷಕ್ಕೊಮ್ಮೆ ಉತ್ತಮ ಹಾಗೂ ಅತ್ಯುಪಯುಕ್ತ ಪರಾಮರ್ಶನ ಗ್ರಂಥವನ್ನು -ಮಾಹಿತಿಸಂಗ್ರಹ ಸ್ವರೂಪದ ಗ್ರಂಥವನ್ನು ನೀಡುವ ಸತ್ಕಾರ್ಯಕ್ಕೆ ಕೈಯಿಕ್ಕಿದೆ ಕನ್ನಡ ವಿಶ್ವವಿದ್ಯಾಲಯ. ಇದಕ್ಕೆ ಯಶಸ್ಸನ್ನು ಹಾರೈಸೋಣ.

* * *

ಈ ವರುಷದ ಸಾಹಿತ್ಯದ ಹೊಸಬೆಳೆಯಲ್ಲಿ ತೊನೆದಾಡುವ ಸತ್ವಯುತ ತೆನೆಗಳೆಂದರೆ ವಿಚಾರಾತ್ಮಕ ಕೃತಿಗಳು. ಡಾ. ಜಿ. ರಾಮಕೃಷ್ಣ ಅವರ 'ವೈಚಾರಿಕ ಜಾಗೃತಿ' ಕೃತಿಯು ಈ ಸಾಲಿನಲ್ಲಿ ಪ್ರಧಾನವಾಗಿ ನಿಲ್ಲುವಂತಹದು. ರೂಢಮೂಲವಾದ ಭಾರತೀಯ ನಂಬಿಕೆ, ಆಚರಣೆಗಳನ್ನು ಪಾಶ್ಚಾತ್ಯ ವೈಚಾರಿಕ ದೃಷ್ಟಿಯೊಂದಿಗೆ ತುಲನೆ ಮಾಡಿ ವಿಮರ್ಶಿಸಲು ಪ್ರಯತ್ನಿಸಿರುವ ಲೇಖಕರ ವಿಚಾರ ಸರಣಿಯು ಒಂಬತ್ತು ಅಧ್ಯಾಯಗಳಲ್ಲಿ ಕ್ರಮಿಸಿದೆ.

ಭಾರತೀಯ ತತ್ವಶಾಸ್ತ್ರ ಪರಂಪರೆಯನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿಯೇ ವಿಶ್ಲೇಷಿಸಲು ರಾಮಕೃಷ್ಣ ಅವರು, ಶತಪಥ ಬ್ರಾಹ್ಮಣ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟ ಉದ್ದಾಲಕ ಆರುಣಿ ಎಂಬವನ ಉದಾಹರಣೆಯನ್ನು ಗ್ರಂಥದ ಆರಂಭದಲ್ಲೆ ಕೊಡುವುದರೊಂದಿಗೆ, ಛಾಂದೋಗ್ಯ ಉಪನಿಷತ್ತಿನಲ್ಲಿಯ ಕೆಲವು ಸಂಗತಿಗಳನ್ನೂ ಎತ್ತಿ ಕೊಡುತ್ತಾರೆ. ಆತ್ಮನ್, ಬ್ರಹ್ಮ, ಮೋಕ್ಷ ಎಂಬ ಕಲ್ಪನೆಗಳು; ವಿಶ್ವದ ಮೂಲವಸ್ತು ಇತ್ಯಾದಿಗಳ ಬಗೆಗಿನ ಜಿಜ್ಞಾಸೆ ಕುರಿತ ಚರ್ಚೆ ಇಲ್ಲಿ ಸೋದಾಹರಣವಾಗಿ ನಡೆದಿದೆ. ವಿಶ್ವದ ಎಲ್ಲ ವಸ್ತುಗಳಿಗೂ ಆದ್ಯವೆನಿಸುವ ವಸ್ತುವನ್ನು ಕುರಿತ ಮೂಲಭೂತ ಪ್ರಶ್ನೆಯನ್ನು ಮುಂದಿರಿಸಿ ಉದ್ದಾಲಕನು ತನ್ನ ಮಗ ಶ್ವೇತಕೇತುವಿನೊಡನೆ ನಡೆಸುವ ಸಂವಾದದಲ್ಲಿ ಅದನ್ನು ವಿಶ್ಲೇಷಿಸಲಾಗಿದೆ. ಶ್ರುತಿಗಿಂತಲೂ ಮೇಲಾದ್ದು ಅವಲೋಕನ ಅಥವಾ ಪರಿಶೀಲನೆ; ಮಾನವ ಜನಾಂಗದ ಇತಿಹಾಸದಲ್ಲಿ ಪ್ರಕೃತಿ ವಿಜ್ಞಾನದ ಆದ್ಯ ಪ್ರವರ್ತಕ ಅಥವಾ 'ಮೊದಲ ತತ್ವಜ್ಞಾನಿ'

ಅಥವಾ 'ವಿಜ್ಞಾನಿ' ಎಂಬ ಖ್ಯಾತಿಗೆ ಪಾತ್ರನಾದವನು ಈ ಉದ್ದಾಲಕನೆಂದು ನಿರೂಪಿಸುತ್ತಾರೆ ಲೇಖಕರು. ಉದ್ದಾಲಕನ ಪ್ರಕೃತಿವಿಜ್ಞಾನದ ಪ್ರಯೋಗಗಳ ಹಿಂದಿನ ಗಾಢವಾದ ಅವಲೋಕನಶಕ್ತಿಯು ಇಲ್ಲಿ ಅನೇಕ ಉದಾಹರಣೆಗಳಿಂದ ಸ್ಪಷ್ಟಪಡುತ್ತದೆ.

ಸಮಗ್ರ ಬದಲಾವಣೆಯ ಕ್ರಿಯೆಗೆ ವೈಚಾರಿಕತೆಯು ಯುಕ್ತವಾಗುವ ದಿಕ್ಕಿನಲ್ಲಿ ನಡೆಯುವ ಪ್ರಯತ್ನವೇ ರಾಮಕೃಷ್ಣ ಅವರ ದೃಷ್ಟಿಯಲ್ಲಿ ವೈಚಾರಿಕತೆಯ ನಿಜಲಕ್ಷಣ. ಅಪೌರುಷೇಯವಾದ ಆರ್ಷೇಯ ಸಾಹಿತ್ಯವನ್ನು ಕುರಿತು, ವೈದಿಕ ಸಾಹಿತ್ಯವು ಎಲ್ಲದರ ಬಗೆಗೂ ಸರ್ವಜ್ಞತ್ವವನ್ನು ಹೊಂದಿರುತ್ತದೆಂಬ ಕಲ್ಪನೆಯು ಒಂದು ಅಗಾಧವಾದ ತಪ್ಪುಕಲ್ಪನೆಯಾಗುತ್ತದೆಂದು ಅವರು ಯಥಾರ್ಥವನ್ನೆ ನುಡಿಯುತ್ತಾರೆ. ವೇದಗಳಿಗೆ ಅಗತ್ಯವಿರುವುದು ಪೂಜೆಯಲ್ಲ, ಬದಲಿಗೆ ಅದರ ಅಧ್ಯಯನವೆನ್ನುತ್ತಾರವರು. ವೇದಗಳನ್ನು ಆದ್ಯಂತವಾಗಿ ತಿಳಿದುಕೊಳ್ಳುವ ಹಂಬಲ ಬೇಕೆಂತಲೂ ಭಾವೋದ್ರೇಕವನ್ನು ಬದಿಗೊತ್ತಬೇಕೆಂತಲೂ ಕರೆ ಕೊಡುತ್ತಾರೆ.

ವಿಜ್ಞಾನಿಗಳು ಮತ್ತು ಧರ್ಮಶಾಸ್ತ್ರಕಾರರ ನಡುವಣ ಸಂಬಂಧ-ವ್ಯತ್ಯಾಸಗಳನ್ನು ಕುರಿತು 'ತರ್ಕದಿಂದ ಮೂಡಿ ಬರದ ಕೇವಲ ಆಕಸ್ಮಿಕ ಜ್ಞಾನ' ವೆಂಬ ಚರಕಸಂಹಿತೆಯ ವಾಕ್ಯವನ್ನು ವಿಜ್ಞಾನಪದ್ಧತಿಗೆ ಮೂಲದ್ರವ್ಯದಂತಿರುವುದೆಂದು ರಾಮಕೃಷ್ಣ ಭಾವಿಸುತ್ತಾರೆ. ಇಟಲಿಯ ಕ್ಯಾಥೊಲಿಕ್ ಕ್ರೈಸ್ತ ಸಂಪ್ರದಾಯದ ಎಣೆಯಿಲ್ಲದ ಪ್ರಾಬಲ್ಯವನ್ನೆ ಹಿಮ್ಮೆಟ್ಟಿಸಿದ ವಿಜ್ಞಾನಿ ಗೆಲಿಲಿಯೋ, ಕ್ರೈಸ್ತಪಾದ್ರಿ ಹಾಗೂ ಖಗೋಳಶಾಸ್ತ್ರಜ್ಞ ಗಿಯೋರ್ದನೋ ಬ್ರೂನೋ ಅವರುಗಳ ಉದಾಹರಣೆಗಳೊಡನೆ ಋಗ್ವೇದದಲ್ಲಿ ಸ್ತುತಿಸಲಾಗಿರುವ ಅಮೋಘ ವೈದ್ಯರಾಗಿರುವ ಅಶ್ವಿನಿ ದೇವತೆಗಳು ಧರ್ಮಶಾಸ್ತ್ರಕಾರರ ಕೋಪಕ್ಕೆ ತುತ್ತಾದ ಪ್ರಸಂಗಗಳು ಇಲ್ಲಿ ಉಲ್ಲೇಖಿತವಾಗಿವೆ.ಆಧುನಿಕ ವಿಜ್ಞಾನದ ಮೂಲಭೂತ ನಂಬಿಕೆಗಳಿಗೆ 'ಚರಕ ಸಂಹಿತೆ'ಯು ಹತ್ತಿರವಿದ್ದು, ಆಧುನಿಕ ವಿಜ್ಞಾನದ ಹೊಸ್ತಿಲಿಗೆ ಇಂದಿನವರನ್ನು ತಂದು ನಿಲ್ಲಿಸುತ್ತದೆಂಬ ವ್ಯಾಖ್ಯಾನವು ಗಮನೀಯವಾದುದು.

ಭಾರತೀಯ ದರ್ಶನಗಳ ಬಗೆಗೆ, ಅದರಲ್ಲೂ ವೇದಾಂತದ ತತ್ವಗಳ ಬಗೆಗೆ ತತ್ವನಿರೂಪಣೆ ಮಾಡುವವರ ಸಿದ್ಧಾಂತಕ್ಕೂ ಅವರ ಜೀವನಕ್ರಮಕ್ಕೂ ಇರುವ ವ್ಯತ್ಯಾಸ; ವಸ್ತುನಿಷ್ಠ ಮೌಲ್ಯಮಾಪನರಹಿತ ವೈಚಾರಿಕತೆಯೊಡನೆ ಉಪನಿಷತ್ತುಗಳು ಸಕಲ ಜ್ಞಾನಸರ್ವಸ್ವವೂ ಅಡಗಿದೆಯೆಂದು ಇತ್ಯಾದಿಯಾಗಿ ವ್ಯಾಖ್ಯಾನಿಸುವ ಪರಿ ಮೊದಲಾದುವನ್ನು ತತ್ವಶಾಸ್ತ್ರದಲ್ಲಿ ಬಿಡುಗಡೆಯ ನೆಲೆಯ ಹಿನ್ನೆಲೆಯಲ್ಲಿ ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಪ್ರಾಚೀನ ಗ್ರೀಸ್‌ನ ತತ್ವಜ್ಞಾನಿ ಸಾಕ್ರೆಟಿಸ್ ಮತ್ತು ಉದ್ದಾಲಕ ಆರುಣಿಯರ ಜೀವನ ದೃಷ್ಟಿಗಳನ್ನೂ ಅವರೀರ್ವರ ನಡುವಣ ವ್ಯತ್ಯಾಸಗಳನ್ನೂ ತೋರಿಸುವುದರೊಡನೆ ವಿಶ್ವದ ನಿರಾಕರಣೆ ಮತ್ತು ಅದರ ಅರ್ಥೈಸುವಿಕೆ ಅಥವಾ ಭಾವನಾವಾದ ಮತ್ತು ಭೌತವಾದಗಳ ನಡುವಣ ವೈಚಾರಿಕತೆಯ ಪ್ರಸ್ತಾಪವಿದೆ ಇಲ್ಲಿ. ಈ ಕೃತಿಯು ಉಲ್ಲೇಖಿಸುವಂತೆ, ಶಂಕರಾಚಾರ್ಯರ ಪ್ರಕಾರ, ಅಂತಿಮವಾಗಿ ತತ್ವಶಾಸ್ತ್ರದ ಚಿಂತನೆಗೆ ಶ್ರುತಿಯ ಆಧಾರವೇ ವಿನಾ ವೈಚಾರಿಕ ಮಾರ್ಗವಲ್ಲ. ಆದರೆ

ಪ್ರಸಿದ್ಧ ವಿಜ್ಞಾನಿ ಪ್ರಫುಲ್ಲಚಂದ್ರರಾಯ್ ಅವರು ಭಾವಿಸುವಂತೆ, ಭಾರತದ ಇತಿಹಾಸದಲ್ಲಿ ವಿಜ್ಞಾನ ಪದ್ಧತಿಯು ಕುಸಿಯುವುದಕ್ಕೆ ಶಂಕರಾಚಾರ್ಯರ ಸಿದ್ಧಾಂತವೂ ಕಾರಣಗಳಲ್ಲಿ ಒಂದು. ವೈಜ್ಞಾನಿಕ ಪದ್ಧತಿಗೆ ಮಾರಕವಾಗಿ ಮಾರ್ಪಟ್ಟ ಭಾರತೀಯ ತತ್ವಶಾಸ್ತ್ರವನ್ನು ರಾಯ್ ಜರೆದಿರುವರು.

ಭಾರತೀಯ ನಿರೀಶ್ವರವಾದ ಕುರಿತು ವಿಶ್ಲೇಷಿಸುತ್ತಾರೆ ರಾಮಕೃಷ್ಣ. ಋಗ್ವೇದದ ಒಂದು ಮಂತ್ರದಲ್ಲಿ ಇಂದ್ರನನ್ನು ಕುರಿತ ಮಾತೊಂದನ್ನು ಉಲ್ಲೇಖಿಸಿ, ಐದುಸಾವಿರ ವರುಷಗಳ ಹಿಂದೆಯೇ ನಿರೀಶ್ವರವಾದದ ಬೀಜವು ಹೇಗೆ ಅಂಕುರಿಸುತ್ತಿದ್ದಿತೆಂಬುದಕ್ಕೆ ಅದು ಸ್ಪಷ್ಟ ನಿದರ್ಶನವಾಗಿದೆಯೆನ್ನುತ್ತಾರೆ. ದೇವತೆಗಳಿಗೆ ಉಪಚಾರವನ್ನೆಸಗುತ್ತಿದ್ದವರು ಕ್ರಮೇಣ ಯಜ್ಞಯಾಗಾದಿಗಳಿಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡಿ ಆ ಯಜ್ಞಕರ್ಮಗಳನ್ನು ದೇವತೆಗಳಿಗಿಂತಲೂ ಹೆಚ್ಚಿನ ಸ್ಥಾನದಲ್ಲಿರಿಸಿದರೆಂಬುದು ಅವರ ವ್ಯಾಖ್ಯಾನ. ಮಹಿಳಾಪ್ರಶ್ನೆಯನ್ನು ಕುರಿತು ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಆಲೋಚಿಸುವ ಲೇಖಿಕರು, ವೈಚಾರಿಕ ನೆಲೆಯಲ್ಲಿ ಅಭಿಪ್ರಾಯಪಡುವಂತೆ, ಸಮಾನತೆ ಮತ್ತು ಆತ್ಮಗೌರವಗಳನ್ನು ಏಕಕಾಲದಲ್ಲಿ ಮತ್ತು ಏಕತ್ರ ಸಂಯೋಜಿಸಿದಾಗ ಬರುವ ಕಲ್ಪನೆಯ ಪರಿಧಿಯಲ್ಲಿ ಸ್ತ್ರೀ-ಪುರುಷರ ಸಮಾನತೆಯ ಪ್ರಶ್ನೆ ಇತ್ಯರ್ಥವಾಗಬೇಕು.

ಪರಮಾರ್ಥವೇ ಮೂಲಭೂತವಾದುದೆಂದು ಹೇಳಿ ಜಾರಿಕೊಳ್ಳುವುದು ಉತ್ತಮ ಸಂಸ್ಕೃತಿಗೆ ಉದಾಹರಣೆಯಾಗುವುದಿಲ್ಲವೆಂಬುದು; ಶಿಕ್ಷಣಕ್ಷೇತ್ರದಲ್ಲಿ ಪರೀಕ್ಷಾ ಮಂಟಪಕ್ಕಿಂತಲೂ ತರಗತಿಯ ಕೋಣೆ ಹೆಚ್ಚು ಮುಖ್ಯವೆಂಬುದನ್ನು ಕಾರ್ಯತಃ ತೋರಿಸಿಕೊಡುವುದೆಂಬುದು; ಬದಲಾವಣೆಯ ತತ್ವವು ಸಮಷ್ಟಿಯ ದೃಷ್ಟಿಯಿಂದ ಇಂದು ನಮಗೆ ಅಗತ್ಯವಿದ್ದು ಭೂತಕಾಲ ಮತ್ತು ಬೇರೊಂದು ಲೋಕದತ್ತ ಬೆರಳು ಮಾಡಿ ತೋರಿಸುವ ತತ್ವವು ಅಷ್ಟೇನೂ ಹಿತಕಾರಿಯಲ್ಲವೆಂಬುದು; ಪ್ರತಿ ಸನ್ನಿವೇಶದ ಮಿತಿಗಳನ್ನೂ ಅರಿತುಕೊಂಡು ಅದರ ಪರಿಧಿಯಲ್ಲಿ ನಡೆಯುವುದು ಸ್ವಾತಂತ್ರ್ಯದ ಮೂಲಭೂತ ಲಕ್ಷಣ ಮತ್ತು ಅವಶ್ಯಕತೆಯೆಂಬುದು; ಒಂದು ಸಾಧನೆಗೆ ಅರ್ಥಬರುವುದು ಆಯಾ ಕ್ಷೇತ್ರದ ಪರಿಣತರ ಮೆಚ್ಚುಗೆ ಮತ್ತು ವಿಮರ್ಶೆಗಳಿಂದ ಎಂಬುದು; ಭಾವನಾಲೋಕದಲ್ಲಿ ವಿಹರಿಸುತ್ತಲೇ, ಸಾಹಿತ್ಯರಚನೆಗೆ ತೊಡಗಬೇಕೆನ್ನುವ ಮೊಂಡುತನ ಅಪ್ರಬುದ್ಧತೆಯ ಪ್ರಾಥಮಿಕ ಲಕ್ಷಣವೆಂಬುದು; ಚರಿತ್ರೆಯ ಪುಟಗಳ ಅಧ್ಯಯನದ ಸಂದರ್ಭದಲ್ಲಿ ಸಮಾಜದ ಎಲ್ಲ ವಿಭಾಗಗಳ ಹಿತಾಸಕ್ತಿಗಳನ್ನು ತಳ್ಳಿಹಾಕದೆ ಅದಕ್ಕೆ ಪೂರಕವಾದ ಕ್ರಮಗಳನ್ನು ಅನುಸರಿಸಬೇಕೆಂಬುದು; ಅಕ್ಷರತೆಗೂ ಅಸ್ಮಿತೆಯ ಸಂಬಂಧಗಳಿಗೂ ಅವಿರತವಾದ ಸಂಬಂಧವಿದೆಯೆಂಬುದು; ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದಂತೆ ಸಮಾಜದ ಯಾವುದೇ ಭಾಗವು ಬದಲಾವಣೆಯನ್ನು ಎಷ್ಟು ಸ್ವೀಕರಿಸುತ್ತದೆ ಅಥವಾ ತಿರಸ್ಕರಿಸುತ್ತದೆ ಹಾಗೂ ಸಮಾಜದ ಇತರ ಭಾಗಗಳು ಅದರೊಡನೆ ಎಷ್ಟು ಸಮ್ಮಿಳಿತವಾಗಲು ಸಿದ್ಧವಿವೆಯೆಂಬುದು ; ಆತ್ಮಜ್ಞಾನವೂ ಜ್ಞಾನವಾದ್ದರಿಂದ ಅದನ್ನೂ

ಸಾರ್ವತ್ರಿಕವಾಗಿ ಪಡೆದುಕೊಳ್ಳಲು ವೈಚಾರಿಕವಾದ ಒಂದು ಕ್ರಮ ಇನ್ನೂ ಸಿದ್ಧವಾಗಬೇಕೆಂಬುದು– ಹೀಗೆ ಹತ್ತು ಹಲವು ವಿಚಾರಗಳು 'ವೈಜ್ಞಾನಿಕ ಜಾಗೃತಿ'ಯಲ್ಲಿ ಚರ್ಚೆಗೊಳಪಟ್ಟಿವೆ.

ವೈಚಾರಿಕತೆಯ ಬಗೆಗಿನ ಚರ್ಚೆ ಮತ್ತು ಚಳವಳಿಗೆ ಇಂದೂ ಸಾಕಷ್ಟು ಪ್ರತಿರೋಧವಿದ್ದರೂ ಹಿಂದಿನ ಚಿಂತಕರು, ಸುಧಾರಕರು ಮೊದಲಾದವರು ಎದುರಿಸಿದ್ದ ಮುಗ್ಗಟ್ಟು ಈಗ ಬಹುಮಟ್ಟಿಗೆ ಕಡಿಮೆಯಾಗಿದೆಯೆಂದು ಅಭಿಪ್ರಾಯಪಡುತ್ತಾರೆ ರಾಮಕೃಷ್ಣ. ಏನೇ ಇದ್ದರೂ ಇತಿಹಾಸದಲ್ಲಿ ಉದ್ದಕ್ಕೂ ಕಂಡುಬರುವ ವೈಚಾರಿಕತೆಯ ಸ್ಪಷ್ಟತೆ ಮತ್ತು ಅದರ ವಿರೋಧದ ಆರ್ತನಾದಗಳನ್ನು ಅವರು ತಮ್ಮ ಪುಸ್ತಕದ ಪ್ರತಿಯೊಂದು ಪುಟದಲ್ಲಿಯೂ ಓದುಗರಿಗೆ ಕೇಳಿಸಲು ಪ್ರಯತ್ನಿಸಿರುವುದಂತೂ ದಿಟ. ಹಾಗೆಯೇ, 'ವೈಚಾರಿಕ ಜಾಗೃತಿ' ಯಂತಹ ಕೃತಿಗಳು ವರ್ತಮಾನಕ್ಕೆ ಹೆಚ್ಚುಹೆಚ್ಚಾಗಿ ಒದಗಬೇಕಿದೆಯೆಂಬುದೂ ಅಷ್ಟೇ ಸತ್ಯ.

ಕನ್ನಡ ಸಾರಸ್ವತ ಪ್ರಪಂಚದಲ್ಲಿ 'ಹರಿಹರಪ್ರಿಯ'ರೆಂದೇ ಪ್ರಸಿದ್ಧಿ ಪಡೆದಿರುವವರು ಸಾತವಲ್ಲಿ ವೆಂಕಟ ವಿಶ್ವನಾಥ. 'ಬಂಡಾಯ ಮನೋಧರ್ಮ'ವೆಂಬ ಅವರ ಪುಸ್ತಕವು ೧೯೯೨ ರ ಪ್ರಕಟಣೆ. ಬಸವಣ್ಣ, ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್, ಚಂಪಾ, ಅನುಪಮಾ ನಿರಂಜನ ಮೊದಲಾದವರ ಬದುಕು-ಬರಹಗಳ ತೀಕ್ಷ್ಣ ವಿವೇಚನೆ ಈ ಕೃತಿಯಲ್ಲಿದೆ. ಸರಳ, ನೇರ ಮತ್ತು ಶುದ್ಧ ಬರವಣಿಗೆಯು ಇಲ್ಲಿ ಎದ್ದುಕಾಣುವ ಗುಣಾಂಶ. ವ್ಯಂಗ್ಯ ಬೆರೆತ ಮೊನಚುಧಾಟಿಯ ಬರವಣಿಗೆಯು ಕೃತಿಯುದ್ದಕ್ಕೂ ಕಾಣುವಂತಹದು. ಭಾವಾವೇಶದ ಛಾಯೆ ಇದ್ದರೂ ತಕ್ಕಮಟ್ಟಿನ ಸಂಯಮದ ಚೌಕಟ್ಟಿನಲ್ಲಿ ಇಲ್ಲಿಯ ಸಂಗತಿಗಳು ಅಚ್ಚುಕಟ್ಟಾಗಿ ನಿರೂಪಿತಗೊಂಡಿವೆ; ವಿಚಾರದ ಬೆಳಕನ್ನು ಹಾಯಿಸುವ ಮೌಲ್ಯವುಳ್ಳವಾಗಿವೆ. ಮುಖ್ಯವಾಗಿ ಅಧ್ಯಯನಶೀಲತೆ ಇಲ್ಲಿ ಒಡೆದು ತೋರುವ ಲಕ್ಷಣ.

ವೆಂಕಟ ವಿಶ್ವನಾಥ ಅವರ ಆಸಕ್ತಿಯ ಕ್ಷೇತ್ರಗಳು ಹಲವಾರು. ಈ ಕೃತಿಯ ಮಟ್ಟಿಗೆ, ಅವರು ವಿಚಾರವಾದಕ್ಕೆ ಸೀಮಿತಗೊಳಿಸಿಕೊಂಡಿರುವುದರಿಂದ, ಸಮಕಾಲೀನ ಸಂಗತಿಗಳಿಗೇ ಅಧಿಕ ಆದ್ಯತೆ ನೀಡಿದ್ದಾರೆ. ತಮ್ಮ ವಿಚಾರವಾದದ ನೆಲೆಯನ್ನು, ಬಸವಣ್ಣನವರ ಸಮಾಜಕಾರ್ಯದ ನೆಲೆಯಿಂದ ಗುರುತಿಸಲು ಪ್ರಯತ್ನಿಸಿರುವ ಇವರ ಉಪಕ್ರಮ ಸರಿಯಾಗಿದೆ. ಶಿಶರಣರ ಕ್ರಾಂತಿಯು ವಿಫಲಗೊಂಡುದಕ್ಕೆ ವಿಶ್ವನಾಥ ವಿಷಾದಿಸುತ್ತಾರೆ. ಫ್ರಾನ್ಸ್, ರಷ್ಯಾ, ಚೈನಾಗಳಿಗಿಂತಲೂ ಮುಂಚೆಯೇ ಬುದ್ಧಿಜೀವಿಗಳು-ದುಡಿಮೆದಾರರ-ಕಲಾವಿದರ ಒಂದು ದೂರದೃಷ್ಟಿಯ ಭವ್ಯರಾಜಕೀಯ ನಿರ್ಮಾಣವನ್ನು ಕರ್ನಾಟಕದ ಕಲ್ಯಾಣರಾಜ್ಯದಲ್ಲಿ ಸಂಭವಿಸುವುದು ತಪ್ಪಿಹೋಯಿತೆಂದು ವ್ಯಥೆಪಡುತ್ತಾರೆ ತಮ್ಮ 'ಬಸವಣ್ಣ:ಮರುಚಿಂತನೆ' ಲೇಖನದಲ್ಲಿ.

ಕನ್ನಡದ ಸಂದರ್ಭದಲ್ಲಿ ಮಾರ್ಕ್ಸ್, ಲೋಹಿಯಾ ಮತ್ತು ಅಂಬೇಡ್ಕರ್ ಅವರುಗಳ ಪ್ರಭಾವ-ಪ್ರೇರಣೆಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿಶ್ಲೇಷಿಸುವ

ಪ್ರಯತ್ನವನ್ನು ವೆಂಕಟ ವಿಶ್ವನಾಥ ಅವರು, ಈ ಮೂವರು ವ್ಯಕ್ತಿಗಳ ಹಿನ್ನೆಲೆಯಲ್ಲಿ 'ಬಂಡಾಯದ ಮನೋಧರ್ಮ'ಲೇಖನದಲ್ಲಿ ಮಾಡಿದ್ದಾರೆ. ಹಳೆಯ ಮೈಸೂರಿನ ಅರಸೊತ್ತಿಗೆಯ ಸಂದರ್ಭದಲ್ಲಿ ಸಂಭವಿಸಿದ ಶಿಕ್ಷಣ ಮತ್ತು ಆಡಳಿತಕ್ಕೆ ಸಂಬಂಧಿಸಿದ ಕೆಲವು ಘಟನೆಗಳ ಹಿನ್ನೆಲೆಯಲ್ಲಿ ಒಕ್ಕಲಿಗರ ಸಂಘವು ಅಸ್ತಿತ್ವಕ್ಕೆ ಬಂದದ್ದು, ಬ್ರಾಹ್ಮಣ-ಬ್ರಾಹ್ಮಣೇತರರ ತಿಕ್ಕಾಟ ಆರಂಭಗೊಂಡದ್ದು, ೧೯೭೯ ರಿಂದೀಚೆಗೆ ದನಿ ಇಲ್ಲದ ಶೂದ್ರ-ದಲಿತ ವರ್ಗಗಳಿಗೆ ಉಸಿರಾಡಲು ಅವಕಾಶವಾದದ್ದು, ಈಚಿನ ಚಳವಳಿ-ವರ್ಣಹೋರಾಟಗಳು ಹಿಡಿದಿರುವ ದಿಕ್ಕು-ದಿಸೆ ಇತ್ಯಾದಿ ಕುರಿತು ವಿವರವಾದ ಹಾಗೂ ಕೆಲವು ದಾಖಲೆಗಳ ಸಹಿತವಾದ ಚರ್ಚೆ ಇಲ್ಲಿ ನಡೆದಿದೆ. ಲೋಹಿಯಾವಾದ, ಗಾಂಧೀವಾದ, ಕೊನೆಗೆ ಶಂಕರ ಸಿದ್ಧಾಂತ, ರಾಮಾನುಜ ಸಿದ್ಧಾಂತ, ಮಾಧ್ವ ಸಿದ್ಧಾಂತ ಎಂದು ಸ್ವೀಕರಿಸುವ ಜನರು ಬಸವ ಸಿದ್ಧಾಂತ -ಅಂಬೇಡ್ಕರ್ ವಾದ ಎಂದೇಕೆ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಕುರಿತು ತಾತ್ವಿಕ ಚಿಂತನೆಯನ್ನು ನಡೆಸುತ್ತಾರೆ.

ಕವಿ, ನಾಟಕಕಾರ, ಚಳವಳಿಗಾರರಾದ ಚಂದ್ರಶೇಖರ ಪಾಟೀಲರನ್ನು ಮೆಚ್ಚಿಕೊಳ್ಳುವ ಲೇಖಕರು, ಚಂಪಾ ಅವರ ವಿಚಾರಗಳನ್ನು ವಿಮರ್ಶಿಸುವಾಗ, ಅವರ ಈವರೆಗಿನ ನೆಲೆ ಇವತ್ತಿನ ನಮ್ಮ ತಲೆಮಾರಿನವರಿಗೆ ಒಂದು ಪಾಠವಾಗಿ ಮುಂದಿನ ಹಾದಿಯ ನಿರ್ಮಾಣಕ್ಕೆ ಚಾರಿತ್ರಿಕ ಮಹತ್ವ ತಂದುಕೊಡುವುದರಲ್ಲಿ ಯಾವ ಸಂದೇಹವೂ ಇಲ್ಲವೆನ್ನುತ್ತಾರೆ. ಡಾ. ಅನುಪಮಾ ನಿರಂಜನ ಅವರ ಕಥಾಪ್ರಪಂಚದ ವಸ್ತು ಮತ್ತು ನೆಲೆ ಹಾಗೂ ಸಂಸ್ಕೃತಿಗಳನ್ನು ಆತ್ಮೀಯವಾಗಿ ಪರಿಚಯಿಸಿಕೊಡುತ್ತಾರೆ.

'ಪ್ರಜಾಸಾಹಿತಿ' ಮತ್ತು 'ಅಕಾಡೆಮಿಕ್ ಸಾಹಿತಿ'ಗಳ ನಡುವಣ ಭೇದಗಳನ್ನು ಎತ್ತಿ ತೋರಿಸಲೆತ್ನಿಸುವ ವೆಂಕಟ ವಿಶ್ವನಾಥ, ಆ ಕುರಿತು ಕೊಂಚ ಖಾರವಾಗಿಯೇ ಬರೆಯುವರು. ಪ್ರಜಾಸಾಹಿತಿಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಎಲ್ಲ ಪ್ರಶಸ್ತಿ-ಬಹುಮಾನಗಳ ಬಗೆಗೆ ಅವರದು ವಿಶೇಷ ಕಾಳಜಿ. ಅವರ ಪ್ರಕಾರ, ಸಾಹಿತ್ಯಪಾಠ ಹೇಳಿದವರ ಅನುಭವ ವಲಯವಷ್ಟನ್ನೇ ಪಡೆದು ವಸ್ತು ವಿಷಯ ಸ್ವರೂಪ ಕೂಡಾ ಜಿಡ್ಡು ಹಿಡಿದುಹೋಗಿದೆ!

'ಬಂಡಾಯ ಮನೋಧರ್ಮ'ದ ಮೂಲಕ ಲೇಖಕ ವೆಂಕಟವಿಶ್ವನಾಥ ಅವರು ವಿಚಾರ ಪ್ರಬೋಧಕ ಹಾಗೂ ಪ್ರಚೋದಕ ಸಂಗತಿಗಳನ್ನು ವಿಚಾರವಾದಿಗಳ ಮುಂದೆ ಮಂಡಿಸಿರುವರೆನ್ನಬಹುದು.

ವೆಂಕಟಯ್ಯ ಅಪ್ಪಗೆರೆ ಅವರ 'ಚಾರ್ವಾಕ' ಎಂಬುದು ಇಲ್ಲಿ ಗಮನಿಸಬೇಕಾದ ಮತ್ತೊಂದು ವೈಚಾರಿಕ ಕೃತಿ. ಪರಂಪರಾಗತ ನಂಬಿಕೆ, ಸಂಪ್ರದಾಯ-ಆಚರಣೆ, ಜ್ಯೋತಿಷ್ಯ, ಮುಹೂರ್ತ, ಜಾತಕ-ನಕ್ಷತ್ರ, ಪವಾಡ, ದೇವರು, ದೈವ ಮೊದಲಾದವುಗಳನ್ನು ಮೊದಲನೆಯ ಹಂತದಲ್ಲಿಯೂ ದೇವರು ಮತ್ತು ಸತ್ಯ,

ಪೂಜಾರಿಗಳು ನಾಸ್ತಿಕರೇ, ಜನಸಾಮಾನ್ಯರಲ್ಲಿ ವೈಚಾರಿಕತೆ, ಆಸ್ತಿಕ-ನಾಸ್ತಿಕರಲ್ಲಿ ಶ್ರೇಷ್ಠರು, ದರ್ಶನಭ್ರಾಂತಿ, ಪರಾವರ್ತನ ಪ್ರತಿಕ್ರಿಯೆ, ಗ್ರಾಮಾಂತರ ವೈಚಾರಿಕತೆ, ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕಗಳು, ಬೆನಿಫಿಟ್ ಆಫ್ ಡೌಟ್, ಪಾರಮಾರ್ಥಿಕ ಬೇರೆ - ಆಧ್ಯಾತ್ಮಿಕ ಬೇರೆ, ಇತ್ಯಾದಿಗಳನ್ನು ಎರಡನೆಯ ಹಂತದಲ್ಲಿಯೂ ವೈಚಾರಿಕತೆಯ ನೆಲೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಈ ಕೃತಿಯ ಮುಖ್ಯಭಾಗವೇ 'ಚಾರ್ವಾಕ'. ಈ ಶಬ್ದದ ಅರ್ಥ; ರಾಮಾಯಣ, ಮಹಾಭಾರತ, ಪುರಾಣ-ವೇದೋಪನಿಷತ್ತು, ಬೌದ್ಧಮತ, ಜೈನಮತ ಇತರೆ ಸಿದ್ಧಾಂತ-ಸಂಹಿತೆ-ಶಾಸ್ತ್ರಜ್ಞರುಗಳ ದೃಷ್ಟಿಯಲ್ಲಿ ಚಾರ್ವಾಕ ಮತ; ಹಾಗೂ ಕರ್ನಾಟಕದಲ್ಲಿ ಚಾರ್ವಾಕ ಪರಂಪರೆಯನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ವೆಂಕಟಯ್ಯನವರ ವೈಯಕ್ತಿಕ ಅನುಭವ-ಅನಿಸಿಕೆಗಳು ಪುಸ್ತಕದುದ್ದಕ್ಕೂ ದಾಖಲಾಗಿವೆ. ತಮ್ಮ ಮತ್ತು ಇತರರ ಆಲೋಚನೆ ಮತ್ತು ವಿಚಾರಗಳನ್ನು ಸಂದರ್ಭೋಚಿತವಾಗಿ ಉಲ್ಲೇಖಿಸುವುದರೊಡನೆ ಅವರು ತಮ್ಮ ವೈಚಾರಿಕ ಮನೋಗತವನ್ನು ವ್ಯಕ್ತಪಡಿಸಲೆತ್ನಿಸಿರುವರು.

ವೈಚಾರಿಕ ದರ್ಶನವೇ ಚಾರ್ವಾಕ ದರ್ಶನವೆನ್ನುವ ವೆಂಕಟಯ್ಯನವರ ಉದ್ದೇಶವಾದರೂ ಆರಂಭದಲ್ಲಿ ವೈಚಾರಿಕ ವಾತಾವರಣವನ್ನು ಸೃಷ್ಟಿಸಿ, ಅಂತಹ ಮಾನಸಿಕ ಸಿದ್ಧತೆಯಲ್ಲಿಯೇ ವಾಚಾಕರಿಗೆ ಚಾರ್ವಾಕ ಚಿಂತನೆಗೆ ಪ್ರೇರೇಪಿಸುವುದು. ದ್ವಂದ್ವಮಯವಾದ ಜೀವನವನ್ನು ಸರಳಮಯ ಮಾಡಿಕೊಳ್ಳಲು, ಸರಳ-ಸಹಜವಾದ ವಿಚಾರಗಳನ್ನು ಯೋಚಿಸಲು ಹಾಗೂ ಕ್ರಿಯಾಶೀಲತೆ ವೃದ್ಧಿಸಿ, ಪ್ರಗತಿ-ಫಲಿತಾಂಶಗಳನ್ನು ಹೆಚ್ಚಿಸಿಕೊಳ್ಳಲು ವೈಚಾರಿಕತೆಯ ಅಗತ್ಯವಿದೆಯೆಂಬುದು ಅವರ ಅಭಿಮತ.

ವೆಂಕಟಯ್ಯ ಅಪ್ಪಗೆರೆಯವರ ಭಾಷೆ ಮತ್ತು ನಿರೂಪಣೆಗಳು ಚೊಕ್ಕವಾಗಿವೆ. ಕೃತಿಯ ಕೊನೆಯವರೆಗೂ ಕುತೂಹಲಾಸಕ್ತಿಗಳಿಂದ ಓದಿಸಿಕೊಳ್ಳುವ ಗುಣದಿಂದ ಕೂಡಿದೆ. ಪ್ರಾಜ್ಞರಲ್ಲದೆ ಜನಸಾಮಾನ್ಯರಿಗೂ ಹಿಡಿಸಬಹುದಾದ 'ಚಾರ್ವಾಕ'ವು ಅವಶ್ಯವಾಗಿ ಸಂಗ್ರಹಿಸಿಟ್ಟುಕೊಳ್ಳಬೇಕಾದ ಕೃತಿ.

'ರಾಮ ಅಳುತ್ತಿದ್ದಾನೆ' ಎಂಬುದು ಡಾ. ಹಿ.ಶಿ. ರಾಮಚಂದ್ರೇಗೌಡ ಅವರ ಪುಸ್ತಕ;ಹದಿನಾಲ್ಕು ಬರಹಗಳ ಸಂಕಲನ. ವಿಚಾರವಾದಕ್ಕೆ ಇಲ್ಲಿ ಆದ್ಯತೆ ನೀಡಿರುವುದರಿಂದ ಬರಹಗಳು ವಿವಿಧ ವಿಷಯಗಳನ್ನು ಕುರಿತಿದ್ದೂ ಒಂದೇ ಜಾಡಿನಲ್ಲಿ ಸಾಗಿವೆ. ದೇವರು, ಧರ್ಮ, ಜಾತಿ, ಜಲ, ಜಾನಪದ, ಚಳವಳಿ, ವಿಚಾರ, ವ್ಯಕ್ತಿತ್ವ, ರಾಜಕೀಯ-ಹೀಗೆ ಸಂಕೀರ್ಣ ಸ್ವರೂಪದ ಬರಹಗಳಿವೆ ಇಲ್ಲಿ. ಪ್ರಚಲಿತ ಸವಾಲು-ಸಮಸ್ಯೆಗಳನ್ನೇ ಬರಹದ ವಸ್ತುವಾಗಿರಿಸಿಕೊಂಡಿರುವುದರಿಂದ ಲೇಖಕರ ವಿಚಾರವಾದದ ದಿಕ್ಕನ್ನು ಗುರುತಿಸಲು ಸಹಾ ಈ ಕೃತಿಯು ನೆರವಾಗುತ್ತದೆ. ಹರಿತ ವಿಚಾರಗಳನ್ನು ಅಂತಹುದೇ ಭಾಷೆಯಲ್ಲಿ ನಿರೂಪಿಸಿರುವುದರಿಂದ ವಿಚಾರವಾದಕ್ಕೆ ಇಲ್ಲಿ ಕಲಾತ್ಮಕತೆಯ ಚೌಕಟ್ಟು ಒದಗಿದೆ.

ಇಂದಿನ ಕೆಲವು ಮತೀಯವಾದಿ ರಾಜಕೀಯ ಪಕ್ಷಗಳು ಧರ್ಮದ ಹೆಸರಿನಲ್ಲಿ ರಾಮನ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ಕಟುವಾಗಿ ಟೀಕಿಸುವ ರಾಮಚಂದ್ರೇಗೌಡರು, ರಾಮಾಯಣವನ್ನು ಪುನರ್‌ಸೃಷ್ಟಿಸುವುದರೊಡನೆ ಕುವೆಂಪು ಅವರು ಹಿಂಸೆಯನ್ನು ತಪ್ಪಿಸಿರುವರೆಂದು ಭಾವಿಸುತ್ತಾರೆ. ಕೊನೆಯಿಲ್ಲದ ರಾಮಾಯಣದ ಜಗಳದ ಹಿನ್ನೆಲೆಯಲ್ಲಿ ಆರ್ಯ-ದ್ರಾವಿಡ ಘರ್ಷಣೆಯಿಂದ ಆರಂಭಿಸಿ ಭಾರತದ ಅಸ್ತಿತ್ವದ ಘರ್ಷಣೆಯವರೆಗೆ ಒಟ್ಟು ಒಂಬತ್ತು ಘರ್ಷಣೆಗಳನ್ನು ಅವರು ಗುರುತಿಸುತ್ತಾರೆ. ಬಾಬರಿ ಮಸೀದಿ ಮತ್ತು ರಾಮಜನ್ಮಭೂಮಿಗಳ ಸಮಸ್ಯೆಗಳ ಹಿನ್ನೆಲೆಯಲ್ಲಿ ಅವರು ಗುರುತಿಸುವುದು: ಮುಸ್ಲಿಂ ಜನಾಂಗದಲ್ಲಿರುವ ವ್ಯಾಪಕ ಅವಿದ್ಯಾವಂತಿಕೆ ಮತ್ತು ಸಮಾಜದ ಮುಖ್ಯವಾಹಿನಿಯಲ್ಲಿ ಮುಸ್ಲಿಮರು ಭಾಗವಹಿಸದಿರುವಿಕೆಯನ್ನು. 'ಹಿಂದೂಧರ್ಮಕ್ಕೆ ಬನ್ನಿ' ಲೇಖನದಲ್ಲಿ, ರಾಮನ ಧರ್ಮವನ್ನು ಕಣ್ಣು ಮುಚ್ಚಿಕೊಂಡು ಅನುಸರಿಸುತ್ತಿರುವ ಇತರ ವರ್ಗಗಳವರ ಮೂಢತನವನ್ನು ಬಯಲಿಗೆಳೆಯುವ ಪ್ರಯತ್ನವಿದೆ. ಸಮಾಜದ ವಿವಿಧ ಸ್ತರಗಳಲ್ಲಿರುವವರ ಅನುಭವಗಳನ್ನು ವಿಶ್ಲೇಷಿಸುವುದರೊಡನೆ ಅವರ ಮುಗ್ಧತೆ, ಮುರ್ಖತನಗಳನ್ನು ಸಾಮಾನ್ಯವಾಗಿ ತಮ್ಮ ಎಲ್ಲ ಲೇಖನಗಳಲ್ಲೂ ಪ್ರಸ್ತಾಪಿಸುತ್ತಾ ಹೋಗುತ್ತಾರೆ ರಾಮಚಂದ್ರೇಗೌಡ.

ಗಂಗಾ-ಕಾವೇರಿ ಕೂಡು ಯೋಜನೆಯನ್ನು ಸ್ವಾಗತಿಸುವ ಲೇಖಕರು, ಈ ಯೋಜನೆಯು ವಿಳಂಬಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸ್ವಾರ್ಥರಾಜಕಾರಣಿಗಳ, ಪ್ರಗತಿವಿರೋಧಿ ಶಕ್ತಿಗಳ, ಕೆಲವು ಕುತಂತ್ರಿಗಳ ಇರುವಿಕೆಯನ್ನು ಗುರುತಿಸುತ್ತಾರೆ. ಈ ಕೂಡು ಯೋಜನೆಯು ಕಾರ್ಯರೂಪಕ್ಕೆ ಬಂದರೆ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ದೃಷ್ಟಿಗಳಿಂದ ಉತ್ತರ ಮತ್ತು ದಕ್ಷಿಣಭಾರತಗಳ ಕೆಲವು ಪ್ರದೇಶಗಳು ಹೇಗೆ ಪ್ರಗತಿ ಹೊಂದುವುವೆಂಬುದರ ಸಮಗ್ರ ನೋಟ ಇಲ್ಲಿ ಕಾಣಸಿಕ್ಕುತ್ತದೆ. ಇದು ಇಂದಿನ ಅವಶ್ಯಕತೆಯೆಂಬುದನ್ನು ಅವರ ಲೇಖನವು ಸಾರಿಹೇಳುತ್ತದೆ.

ಪ್ರೀತಿಸುವ ಒಂದು ಮಾಧ್ಯಮವಾಗಿ ವಿಚಾರವನ್ನು ಗ್ರಹಿಸಿರುವ ರಾಮಚಂದ್ರೇಗೌಡರು, ಅದನ್ನು ವಿವರಿಸಿರುವ ರೀತಿ ಸೂಕ್ಷ್ಮವಾಗಿಯೂ ಖಚಿತವಾಗಿಯೂ ಇದೆ. ವಿಚಾರವು ಒಂದು ಮಾನವೀಯ ನೆಲೆ, ದ್ವೇಷವಲ್ಲ; ಎಲ್ಲ ಬಗೆಯ ಮನುಷ್ಯರನ್ನೂ ಒಳಗೊಳ್ಳುವ, ಮನುಷ್ಯರನ್ನು ನಿಜವಾದ ಮನುಷ್ಯರನ್ನಾಗಿಸುವ ಮಾಧ್ಯಮ: ಜನಪರ ಚಳವಳಿಗಳ ನೆಲೆಯನ್ನು ಲೇಖಕರು ನೋಡುವ ಬಗೆ ಇದು. ಆದರೆ ಜನಪರ ಚಳವಳಿಗಳು ಈಗ ದಿಕ್ಕುತಪ್ಪಿರುವ ಹಾಗೂ ನಿಷ್ಕ್ರಿಯವಾಗಿರುವ ಬಗೆಗೆ ಲೇಖಕರು ಹೊಣೆಗಾರರನ್ನಾಗಿಸುವುದು ಶೂದ್ರರನ್ನೆ. ರೈತ ಚಳವಳಿಯನ್ನು ವಿಶದವಾಗಿ ವಿಮರ್ಶಿಸುವಾಗ, ಇದೀಗ ಸತ್ವಹೀನವಾಗಿರುವ ಹಾಗೂ ವಿಚಾರವಂತಿಕೆಯನ್ನೆ ಮರೆತಿರುವ ಈ ಚಳವಳಿಯನ್ನು ತಾತ್ವಿಕವಾಗಿ ಜರೆಯುತ್ತಾರೆ.

ಹೊಲೆಯರು ಮತ್ತು ಶೂದ್ರರನ್ನು ಕುರಿತು ರಾಮಚಂದ್ರೇಗೌಡರು ವಿವೇಚಿಸಿರುವುದುಂಟು. ವಾಸ್ತವವಾಗಿ, ಅವರ ದೃಷ್ಟಿಯಲ್ಲಿ ಹೊಲೆಯರೆಂದರೆ ಭ್ರಷ್ಟ ಸರಕಾರಿ ನೌಕರರೇ. "ದುಡಿಮೆಗೆ ಮೀರಿದ್ದು, ಲಂಚ, ಮೋಸ ಹಾಗೂ ಹಿಂಸೆಯಿಂದ ಪಡೆದ ಆದಾಯವೆಲ್ಲ ಹೊಲಸೆ. ಬಹುಪಾಲು ನೌಕರರು ತಮ್ಮ ಸಂಬಳಕ್ಕಿಂತ ಈ ಹೊಲಸನ್ನು ತಿಂದೇ ದೊಡ್ಡವರಾಗಿದ್ದಾರೆ. ಅದನ್ನು ತಿನ್ನದೆ ಬದುಕಲಾರದ ಸ್ಥಿತಿಗೆ ತಲುಪಿದ್ದಾರೆ. ಜಾತಿ, ಹೆಣ್ಣು, ಗಂಡು, ಬಡವ ಎನ್ನದೆ-ಈ ಎಲ್ಲರ ಹೊಲಸನ್ನು ಇವರು ತಿಂದು ಮುಗಿಸುತ್ತಾರೆ. ಇವರನ್ನು ಬೇರೆ ಹೆಸರಿನಿಂದ ಕರೆಯಲು ಸಾಧ್ಯವೆ ?" ಎಂಬುದು ಅವರ ಪ್ರಶ್ನೆ. ಹಾಗೆಯೇ, ತಮ್ಮಲ್ಲಿಯೇ ಇರುವ, ತಮ್ಮವರೇ ಆದ ದಲಿತರನ್ನು ಹೊರಗಿಟ್ಟು ಸಂಸ್ಕೃತಿಯನ್ನು ರೂಪಿಸಿಕೊಂಡ ಶೂದ್ರರನ್ನೂ ಅವರು ತಮ್ಮ ವಿಚಾರವಾದದ ಅಲಗಿನಿಂದ ಕೊಚ್ಚಿಹಾಕುವರು. ಶೂದ್ರ ವಿದ್ಯಾವಂತನು ವಸಿಷ್ಠನಾಗಲು ಹೊರಡುವ ಚಪಲವನ್ನು ವ್ಯಂಗ್ಯವಾಗಿ ಕಾಣುತ್ತಲೇ ಕ್ರೂರವಾದ ಅವಹೇಳನಕ್ಕೆ ಅದು ಪಾತ್ರವಾಗುವಂತಹದೆಂಬುದನ್ನು ತೀಕ್ಷ್ಣವಾದ ಶೈಲಿಯಲ್ಲಿ ನಿರೂಪಿಸುವರು.

ರಾಮಚಂದ್ರೇಗೌಡರು ಆಲೋಚಿಸುವ 'ಗುಣಾಧಾರಿತ ವ್ಯಕ್ತಿತ್ವ' ವಾದರೂ ಹಲವಾರು ಚಿಂತನಶೀಲ ಗುಣಾಂಶಗಳಿಂದ ಕೂಡಿದೆ. ಭಾರತೀಯ ಚರಿತ್ರೆಯ ಸೂಕ್ಷ್ಮ ಒಳನೋಟ ಇಲ್ಲಿದ್ದು, ಮೇಲ್ವರ್ಗದ ಸಮಯಸಾಧಕತನವನ್ನು ಇಲ್ಲಿ ಬಯಲಿಗಿಡಲು ಪ್ರಯತ್ನಿಸಲಾಗಿದೆ. ಸಾಧಾರಣ ವರ್ಗಗಳಲ್ಲಿ ವ್ಯಕ್ತಿತ್ವವಿಲ್ಲದವರೇ ಹೆಚ್ಚೆಂಬ ಲೇಖಕರ ವಾದ ಹುಸಿಯಾದುದೇನೂ ಅಲ್ಲ. ಸಾಹಿತಿಗಳು ಮತ್ತು ಮಾತೃಭಾಷೆಯ ಬಗೆಗೆ ಅವರು ವ್ಯಕ್ತಪಡಿಸಿರುವ ಅಭಿಪ್ರಾಯದಂತೆ, ಮಾತೃಭಾಷೆಯಲ್ಲಿಚಿಂತಿಸುವವರ ಚಿಂತನೆ ಗಟ್ಟಿಯಾಗಿ, ಅನ್ವಯಿಕವಾಗಿ ಬೆಳೆಯುವುದು. ಮಾತೃಭಾಷೆ ಹಾಗೂ ಮಾತೃ ಸಂಸ್ಕೃತಿಯಲ್ಲಿ ಬೆಳೆದು ಬೇರೆ ಭಾಷೆಗಳ ಮೂಲಕ ಕಲಿಯುವುದು ಅನುಕರಣೆ ಮಾತ್ರವಲ್ಲದೆ, ಆ ಮೂಲಕ ಓದಿ ಬಂದವರು ಸ್ವತಂತ್ರ ಚಿಂತನೆ ಬೆಳೆಸಿಕೊಳ್ಳುವಲ್ಲಿ ಹಿಂದುಳಿಯುತ್ತಾರೆ; ತಮ್ಮ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದ ಒಂದು ಸಂಸ್ಕೃತಿ ಭಾಷೆಗಳ ಜೊತೆಗೆ ಮಾತೃತ್ವದ ಐಡೆಂಟಿಟಿ ಇಲ್ಲದವನು ಪ್ರಥಮ ದರ್ಜೆಯ ಪ್ರಜೆ, ಲೇಖಕ ಅಥವಾ ವ್ಯಕ್ತಿತ್ವವುಳ್ಳವನಾಗಲಾರ. ಲೇಖಕರ ಈ ಮಾತು ಖಂಡಿತ ವಿವಾದಾಸ್ಪದವಲ್ಲವೆಂಬುದನ್ನು ಒಪ್ಪಲೇಬೇಕು. ಇಷ್ಟಲ್ಲದೆ, ಜನಪದ ಕಲಾವಿದರ ಶೋಷಣೆಯ ಬಗೆಗೆ ಲೇಖಕರು ಬರೆದಿರುವುದು ವಸ್ತುಸ್ಥಿತಿಯನ್ನು ಚೆನ್ನಾಗಿ ಪರಿಚಯಿಸಿದಂತಾಗಿದೆ.

'ರಾಮನು ಅಳುತ್ತಿದ್ದಾನೆ' ಕೃತಿಯಲ್ಲಿ ಪ್ರಸ್ತುತ ಸಂದರ್ಭದ ಹಲವಾರು ಸೂಕ್ಷ್ಮ ಸಂಗತಿಗಳನ್ನು ಚರ್ಚಿಸುವುದರೊಡನೆ ಸಮಸ್ಯೆಗಳಿಗೆ ಪರಿಹಾರವನ್ನೂ ಸೂಚಿಸಲೆತ್ನಿಸಿದ್ದಾರೆ ರಾಮಚಂದ್ರೇಗೌಡ. ವಿಚಾರಗಳು ಖಚಿತವಾಗಿ, ಹರಿತವಾಗಿ ಇದ್ದರೂ ಅವುಗಳ ನಿರೂಪಣೆಯು ಕ್ರಮಬದ್ಧವಾಗಿಲ್ಲದೆ ಓದುಗರನ್ನು ಕೊಂಚ ಗಲಿಬಿಲಿಗೊಳಿಸುವಂತಿವೆ. ಅಲ್ಲದೆ, ವಿಚಾರಗಳ ಪುನರಾವರ್ತನೆಯು ಇಲ್ಲಿಯ

ಲೇಖನಗಳ ಸಾಮಾನ್ಯ ಗುಣ. ಒಂದೇ ವಸ್ತುವು ಭಿನ್ನ ಸಂದರ್ಭಗಳಲ್ಲಿ ಭಿನ್ನ ರೂಪದಲ್ಲಿ ನಿರೂಪಿಸಲ್ಪಟ್ಟಿರುವುದೇ ಇದಕ್ಕೆ ಕಾರಣವಿರಬಹುದು. ರಾಮಚಂದ್ರೇಗೌಡರು ಸತ್ವಶಾಲಿ ಬರವಣಿಗೆಯಲ್ಲಿ ಸಿದ್ಧಹಸ್ತರೆನ್ನುವುದನ್ನು ಈ ಕೃತಿಯು ಸಾಬೀತುಪಡಿಸಿದೆ.

ಚಿಂತನ ಬರಹಗಳ ಪ್ರಕಾರದಲ್ಲಿ ಡಾ. ಸಿ.ಪಿ. ಕೃಷ್ಣಕುಮಾರ್ ಅವರ 'ಹರಳು'ಸಂಗ್ರಹವು ಈ ವರ್ಷದ ಪ್ರಕಟಣೆಯಾಗಿದ್ದು, ಗಮನ ಸೆಳೆಯುತ್ತದೆ. ಈವರೆಗೆ ಅವರು ಹೊರತಂದಿರುವ ಚಿಂತನ ಕೃತಿಗಳಲ್ಲಿ ಇದು ಆರನೆಯದು. ಒಟ್ಟು ೨೯ ಚಿಂತನ ಬರಹಗಳು ಈ ಸಂಗ್ರಹದಲ್ಲಿವೆ. ಇವು ತಮ್ಮದೇ ಆದ ವಿಶಿಷ್ಟತೆ ಪಡೆದುಕೊಂಡಿವೆಯೆಂಬುದನ್ನು ಲೇಖಕರು ತಮ್ಮ ಮುಮ್ಮಾತಿನಲ್ಲಿ ಕಾಣಿಸಿರುವರು. 'ಹರಳು' ಕೃತಿಯನ್ನು ಓದಿದ ಯಾರಾದರೂ ಇದನ್ನು ಒಪ್ಪಲೇಬೇಕು. ಸಿ.ಪಿ.ಕೆ. ಅವರ ಗಂಭೀರ ಹಾಗೂ ದೀರ್ಘಚಿಂತನೆಯ ಪ್ರತೀಕ ಈ ಕಿರು ಬರಹಗಳು; ವಿದ್ವತ್ತಿನ ಹೊಳಹುಗಳು.

ಸಾಹಿತ್ಯ, ಭಾಷೆ, ಶಿಕ್ಷಣ, ಮನೋವಿಜ್ಞಾನ, ಧರ್ಮ, ರಾಜಕೀಯ, ವೈಚಾರಿಕತೆ, ಸಮೂಹ ಮಾಧ್ಯಮ, ಇತ್ಯಾದಿ ಕುರಿತು ಸಿ.ಪಿ.ಕೆ. ಇಲ್ಲಿ ಬರೆದಿದ್ದಾರೆ. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಕೃತಿಗಳಿಂದ ಆಯ್ದ ಮುಕ್ತಕಗಳು ಕೃತಿಯುದ್ದಕ್ಕೂ ವಿಪುಲವಾಗಿವೆ; ಚಿಂತನೆಯ ವಸ್ತುವನ್ನು ವಿನ್ಯಾಸಗೊಳಿಸಿವೆ, ಶ್ರೀಮಂತಗೊಳಿಸಿವೆ.

ನಾಡು-ನುಡಿ-ನಡತೆಗಳ ಬಗೆಗಿನ ಲೇಖಕರ ಕಾಳಜಿ ಇಲ್ಲಿ ವಿಶೇಷವಾಗಿ ಎದ್ದು ಕಾಣುವ ಅಂಶ. ಬದುಕಿನ, ಆಲೋಚನೆಯ ಹಾಗೂ ಮನುಷ್ಯನ ಸಂಕೀರ್ಣ ಪ್ರವೃತ್ತಿಗಳನ್ನು ಕುರಿತ ಹದವರಿತ ವಿಶ್ಲೇಷಣೆಯ ನೋಟ ಇಲ್ಲಿಯದು. ಮುಖ್ಯವಾಗಿ, ಓದುಗರಲ್ಲಿ ಸಾಹಿತ್ಯಾಭಿರುಚಿಯನ್ನೂ ವಾಚನಾಭಿರುಚಿಯನ್ನೂ ಮೂಡಿಸುವ ದಿಸೆಯಲ್ಲಿ ಈ ಕೃತಿಯ ಪ್ರಭಾವ ಅಪಾರ. ಚಿಂತನಶೀಲತೆಯ ಮಾರ್ಗ-ಮರ್ಮಗಳೆರಡನ್ನೂ ಚೆನ್ನಾಗಿ ಪರಿಚಯಿಸುತ್ತದೆ. ಲೇಖಕರ ಮನೋಧರ್ಮದ ದರ್ಪಣ ಈ ಕೃತಿ.

ಗೆಲುವಾದ, ಚೆಲುವಾದ ಹಾಗೂ ಸತ್ವಪೂರ್ಣವಾದ ಬರಹಗಳಿಗೆ ಪ್ರಸಿದ್ಧರಾದ ಸಿ.ಪಿ.ಕೆ., ಈ ಅನಿಸಿಕೆಯನ್ನು 'ಹರಳು' ಕೃತಿಯ ಮೂಲಕ ಇನ್ನಷ್ಟು ಗಟ್ಟಿಗೊಳಿಸಿಕೊಂಡಿದ್ದಾರೆ.

* * *

ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಕಟಗೊಂಡಿರುವ ಕೃತಿಗಳಲ್ಲಿ, ಮಹಾಬಲೇಶ್ವರರಾವ್ ಅವರು ಹೊರತಂದಿರುವ 'ಬಹುಮುಖಿ ಶಿಕ್ಷಣ' ಮತ್ತು 'ಶಿಕ್ಷಣ: ಕಾರಂತರ ದೃಷ್ಟಿ-ಸೃಷ್ಟಿ' ಎಂಬುವು ಮುಖ್ಯವಾದುವು. ಈಚಿನ ಶಿಕ್ಷಣ ಚಿಂತಕರ ಸಾಲಿನಲ್ಲಿ ಗಮನ ಸೆಳೆದಿರುವವರಲ್ಲಿ ಮಹಾಬಲೇಶ್ವರರಾವ್ ಅವರೂ

ಒಬ್ಬರು. ಪ್ರಸ್ತುತ ಕೃತಿಗಳಲ್ಲಿ ಮೊದಲನೆಯದು ಶೈಕ್ಷಣಿಕ ಲೇಖನಗಳ ಸಂಗ್ರಹ; ಕನ್ನಡ ದೈನಿಕವೊಂದಕ್ಕೆ ಸಿದ್ಧಪಡಿಸಲಾದ ಲೇಖನಗಳು ಇಲ್ಲಿವೆ. ಎರಡನೆಯದು, ಶಿವರಾಮ ಕಾರಂತರ ಶೈಕ್ಷಣಿಕ ಆಲೋಚನೆಗಳು ಮತ್ತು ಪ್ರಯೋಗಗಳನ್ನು ಸಮೀಕ್ಷಿಸಿದ ಮೊದಲ ಬರಹ; ಕಾರಂತರ ಆತ್ಮಕಥನ ಹಾಗೂ ಅವರ ಇನ್ನಿತರ ವೈಚಾರಿಕ ಗ್ರಂಥಗಳಲ್ಲಿ ಕಂಡುಬರುವ ಶಿಕ್ಷಣವನ್ನು ಕುರಿತಾದ ಚಿಂತನ ಹಾಗೂ ಪ್ರಯೋಗಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ. ಈ ಎರಡೂ ಪುಸ್ತಕಗಳು ಲೇಖಕರ ಪಾಂಡಿತ್ಯ ಹಾಗೂ ಸೃಜನಶೀಲತೆಯ ದಾಖಲೆಗಳಂತಿವೆ.

'ಬಹುಮುಖ 'ಶಿಕ್ಷಣ'ದಲ್ಲಿ ಶಿಕ್ಷಣಕ್ಷೇತ್ರದ ಪ್ರಬುದ್ಧ ವಿಚಾರಗಳನ್ನು ಸರಳವಾಗಿ ಮಂಡಿಸುವ ಲೇಖಕರ ಪ್ರತಿಭೆಯು ಅಚ್ಚು ಒತ್ತಿದಂತಿದೆ. ಪ್ರಬುದ್ಧ ಭಾಷೆ, ಹರಿತ ವಿಚಾರಧಾರೆ, ಸೋದಾಹರಣ ನಿರೂಪಣೆ, ಸಾಮಾಜಿಕ - ಶೈಕ್ಷಣಿಕ ಕಳಕಳಿ-ಇವು ಇಲ್ಲಿಯ ವೈಶಿಷ್ಟ್ಯಗಳು. ಶಿಕ್ಷಣ, ಸಾಹಿತ್ಯ, ವಿಚಾರ, ಇತ್ಯಾದಿಗಳ ಚರ್ಚೆಯೂ ಇಲ್ಲಿ ನಡೆದಿದೆ. ಕನ್ನಡ ಮಾಧ್ಯಮದ ದುಸ್ಥಿತಿ, ಇಂಗ್ಲಿಷ್ ಭಾಷೆಯ ಪ್ರಭಾವ, ಪರೀಕ್ಷೆಗಳ ಪಿಡುಗು, ಶಿಕ್ಷಕರ ಮನೋಭಾವ ಮತ್ತು ಗುಣಮಟ್ಟ, ಆಂತರಿಕ ಮೌಲ್ಯಮಾಪನದ ಅಗತ್ಯ, ಬಾನುಲಿ ಮತ್ತು ದೂರದರ್ಶನಗಳ ಮೂಲಕ ಶೈಕ್ಷಣಿಕ ಪ್ರಸಾರದ ಪರಿಣಾಮಗಳು ಇತ್ಯಾದಿಗಳನ್ನು ವಿವೇಚಿಸಲಾಗಿದೆ. 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ' ಬರಹವು ಗಮನ ಸೆಳೆಯುವಂತಹದು. ಈ ಕ್ಷೇತ್ರದಲ್ಲಿ ಆಗಬೇಕಾದ ಸುಧಾರಣೆ, ಪ್ರಯೋಗಗಳನ್ನು ವಿವರಿಸುವಲ್ಲಿ ಲೇಖಕರ ಕಾಳಜಿ ಎದ್ದು ತೋರುತ್ತದೆ. ಒಂದು ವಿಧದಲ್ಲಿ ಈ ಪುಸ್ತಕದಲ್ಲಿರುವ ಒಟ್ಟು ೨೭ ಪ್ರಬಂಧಗಳು ಲೇಖಕರಲ್ಲಿಯ ಶಿಕ್ಷಣ ಕ್ಷೇತ್ರದ ಬಗೆಗಿನ ಕಾಳಜಿ ಮತ್ತು ಪ್ರೀತಿಗಳನ್ನು ವ್ಯಕ್ತಪಡಿಸುವಂತಹವೇ ಆಗಿವೆ.

ಎರಡನೆಯ ಕೃತಿಯಲ್ಲಿ, ಶಿವರಾಮ ಕಾರಂತರ ದೃಷ್ಟಿ-ಸೃಷ್ಟಿಗಳ ಹಿನ್ನೆಲೆಯಲ್ಲಿ, ಶಿಕ್ಷಣದ ವಿವಿಧ ಮುಖಗಳು ಹಾಗೂ ಸಮಸ್ಯೆಗಳನ್ನು ವಿಶ್ಲೇಷಿಸಲು ಯತ್ನಿಸಿದ್ದಾರೆ ಮಹಾಬಲೇಶ್ವರರಾವ್. ಕಾರಂತರ ಶೈಕ್ಷಣಿಕ ವಿಚಾರಗಳನ್ನು ಇಲ್ಲಿ ಎರಡು ಭಾಗಗಳಲ್ಲಿ ಚರ್ಚಿಸಲಾಗಿದೆ. ಭಾಗ -೧: 'ದೃಷ್ಟಿ'ಯಲ್ಲಿ ಪ್ರಸ್ತಾಪಿಸಲಾಗಿರುವ ವಿಚಾರಗಳ ಪ್ರಕಾರ, ಕಾರಂತರು ಬುದ್ಧಿಭಾವಗಳ ವಿಕಾಸಕ್ಕೆ ಹೆಚ್ಚಿನ ಮಹತ್ವ ನೀಡಿದಂತಹವರು. ವ್ಯಕ್ತಿವಿಕಾಸ, ವೃತ್ತಿಶಿಕ್ಷಣ ಹಾಗೂ ಸಾಮಾಜಿಕ ಹೊಂದಾಣಿಕೆ- ಈ ಮೂರು ಅಂಶಗಳು ಅವರು ಪ್ರತಿಪಾದಿಸುವ ಶಿಕ್ಷಣದ ಗುರಿಗಳು. ಆದರೆ ವ್ಯಕ್ತಿಯ ಅಂತರಂಗದ ವಿಕಾಸಕ್ಕೆ ಪ್ರೋತ್ಸಾಹ ದೊರೆಯಬೇಕೆಂಬುದು ಅವರ ಕಳಕಳಿ. ಶಿಕ್ಷಣ ಪದ್ಧತಿಯ ಬದಲಾವಣೆಯ ಕುರುಡು ಪ್ರಯತ್ನಗಳನ್ನು ಅವರು ಖಂಡಿಸುತ್ತಾರೆ. 'ಶಿಶುಕೇಂದ್ರಿತ'ವೆನ್ನಲಾದ ಈಚಿನ ರಾಷ್ಟ್ರೀಯ ಶಿಕ್ಷಣ ನೀತಿಯೂ ಕಾರಂತರಿಗೆ ಸಮಾಧಾನ ತರುವುದಿಲ್ಲ. ಪರಿಸರ ಶಿಕ್ಷಣದ ಬಗೆಗೆ ಅವರು ಒತ್ತು ಕೊಡುತ್ತಾರೆ. ಅವರ ದೃಷ್ಟಿಯಲ್ಲಿ, ನೀತಿಶಿಕ್ಷಣವೆಂಬುದು -ಶೀಲ, ನಡತೆಗಳು ಅನುಕರಣೆ ಮತ್ತು ಹಿರಿಯರ ವರ್ಚಸ್ಸಿನಿಂದ ಬರುವ ಅಭ್ಯಾಸಗಳೇ ಹೊರತು ಬಾಯ ಉಪದೇಶದಿಂದ ಬರಲಾರವು. ಮಗುವಿನ ಮೇಲೆ ಹಲವಾರು ಭಾಷೆಗಳನ್ನು ಹೇರುವುದನ್ನು ಅವರು

ಒಪ್ಪಲಾರರು. ಒಂದು ಸಲಕ್ಕೆ ಒಂದು ಭಾಷೆ-ಮೊದಲಿಗೆ ಪ್ರಾದೇಶಿಕ ಭಾಷೆ ನಂತರ ಪ್ರಪಂಚ ಜ್ಞಾನಕ್ಕಾಗಿ ಇನ್ನೊಂದು ಭಾಷೆ. ಇದು ಪ್ರಾಥಮಿಕ ಹಂತದ ಶಿಕ್ಷಣವು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲೇ ಆಗಬೇಕೆನ್ನುವ ಕಾರಂತರ ನಿಲುವನ್ನು ವ್ಯಕ್ತಪಡಿಸುತ್ತದೆ. ಇಂದು ವಿದ್ಯಾರ್ಥಿಗಳ ಬರವಣಿಗೆಯಲ್ಲಿ ಕೃತಕತೆ, ನಿರ್ಜೀವತೆ ಕಾಣಿಸುತ್ತಿದ್ದರೆ ಅದು ಹುಟ್ಟಿದ್ದು ಶಾಲಾ ಪಠ್ಯಪುಸ್ತಕಗಳಿಂದ ಎಂದು ಲೇವಡಿ ಮಾಡುತ್ತಾರೆ ಕಾರಂತ. ಅಲ್ಲದೆ, ಪಠ್ಯಪುಸ್ತಕಗಳು ಉತ್ತಮಗ್ರಂಥಗಳ ಪ್ರಚಾರಕ್ಕೆ ಬಾಧಕವಾಗಿವೆಯೆನ್ನುವುದು ಅವರ ಆಪಾದನೆ.

ಭಾಗ-೨: 'ಸೃಷ್ಟಿ'ಯಲ್ಲಿ ಮಹಾಬಲೇಶ್ವರರಾವ್ ಅವರು, ಕಾರಂತರು ವಯಸ್ಕರು ಮತ್ತು ಮಕ್ಕಳಿಗಾಗಿ ಬರೆದ ಪಠ್ಯಪುಸ್ತಕಗಳನ್ನು ಉಲ್ಲೇಖಿಸಿ ಅವರ ವಿಶಿಷ್ಟ ಪ್ರಯೋಗಗಳ ಬಗೆಗೆ ಚರ್ಚಿಸುತ್ತಾರೆ; ಅವರ ವಿಚಾರಗಳಿಗೆ ತಲೆದೂಗುತ್ತಾರೆ. ಹಾಗೆಯೇ, ರಾಷ್ಟ್ರೀಕೃತ ಪಠ್ಯಪುಸ್ತಗಳಲ್ಲಿರುವ ತಪ್ಪುಗಳಿಗಾಗಿ ಕಿಡಿಕಾರುವ ಕಾರಂತರು ಸ್ವತಃ ತಮ್ಮ ಪಠ್ಯಪುಸ್ತಕಗಳಲ್ಲಿ ಹೇಗೆ ತಪ್ಪುಗಳನ್ನು ಎಸಗಿರುವರೆಂಬುದನ್ನು ಸೋದಾಹರಣವಾಗಿ ತೋರಿಸಿಕೊಡುತ್ತಾರೆ.

'ಅನ್ನಿಸಿಕೆಗಳು' ಎಂಬ ೩ನೆಯ ಭಾಗದಲ್ಲಿ, ಕಾರಂತರ ವಿಚಾರಗಳನ್ನು ವಿಮರ್ಶಿಸುತ್ತಾ, ಶಿಕ್ಷಣ ಕ್ಷೇತ್ರದ ವಿವಿಧ ಮುಖಗಳ ಬಗೆಗೆ, ಅದರ 'ನೋವು-ನಲಿವು'ಗಳ ಬಗೆಗೆ ಅತ್ಯಂತ ಅಧಿಕೃತವಾಗಿ ಕನ್ನಡ ಜನತೆಗೆ ತಿಳಿಯಹೇಳಿದ ಇಂತಹ ಇನ್ನೊಬ್ಬ ಚಿಂತಕರಿಲ್ಲವೆಂದು ಅಭಿಮಾನಪಡುತ್ತಾರೆ ಮಹಾಬಲೇಶ್ವರರಾವ್. ಒಟ್ಟಿನಲ್ಲಿ, ಕಾರಂತರ ಶೈಕ್ಷಣಿಕ ವಿಚಾರಗಳನ್ನು ಒಂದೆಡೆ ಸಂಗ್ರಹಿಸಿ ವಿಶ್ಲೇಷಿಸುವುದರೊಡನೆ ಲೇಖಕರು, ಕಾರಂತರ ಪ್ರಯತ್ನಕ್ಕೂ ಶಿಕ್ಷಣಕ್ಷೇತ್ರಕ್ಕೂ ಗೌರವಯುತವಾದ ನ್ಯಾಯ ಸಲ್ಲಿಸಿರುವರೆನ್ನಬೇಕು.

'ಭಾರತದಲ್ಲಿ ಸಮಾಜಕಾರ್ಯ: ಹಿನ್ನೆಲೆ, ಮುನ್ನೋಟ' ಎಂಬ ಗ್ರಂಥವನ್ನು ಸಂಪಾದಿಸಿಕೊಟ್ಟಿರುವವರು ಎಸ್.ಆರ್. ರಾಮಸ್ವಾಮಿ. ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಇದನ್ನು ಪ್ರಕಟಿಸಿದೆ. ರಾಷ್ಟ್ರೀಯ ದೃಷ್ಟಿಯಿಂದ ಚರಿತ್ರೆಯನ್ನು ಬರೆಯುವ ಉದ್ದೇಶವನ್ನಿಟ್ಟುಕೊಂಡು ಪರಿಷತ್ ಹೊರತರಲಾದ ಪುಸ್ತಕಗಳಲ್ಲಿ ಇದೂ ಒಂದು.

ಗ್ರಂಥದ ವಿಷಯವನ್ನು ಸ್ಥೂಲರೂಪದಲ್ಲಿ ನಾಲ್ಕುಭಾಗಗಳಲ್ಲಿ ವಿಂಗಡಿಸಲಾಗಿದೆ. ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆ, ಸಾಮಾಜಿಕ ಕಾರ್ಯದ ತಾತ್ತ್ವಿಕ ಚಿಂತನೆ, ಕೆಲವು ಸ್ಫೂರ್ತಿದಾಯಕ ಪ್ರಯೋಗಗಳು ಹಾಗೂ ಸಮಾಜಕಾರ್ಯದ ಸಮೀಕ್ಷೆ-ಮುನ್ನೋಟಗಳನ್ನು ಕುರಿತ ಲೇಖನಗಳನ್ನು ಇವುಗಳಲ್ಲಿ ಅಳವಡಿಸಲಾಗಿದೆ. ಸಂಪಾದಕರು ಬರೆಯುವಂತೆ, ಶಾಸ್ತ್ರೀಯ ರೀತಿಯ ಮಂಡನೆಗಿಂತ ಭಾವನಾತ್ಮಕ ಸಂಗತಿಗಳಿಗೆ ಇಲ್ಲಿ ಪ್ರಾಶಸ್ತ್ಯ ಸಂದಿರುವುದು ಸಹಜವಾಗಿದ್ದು, ಶಾಸ್ತ್ರರೀತಿಯ ಪ್ರತಿಪಾದನೆ ಪ್ರಕೃತೋದ್ದೇಶಕ್ಕೆ ಹೊರತಾದದ್ದೆಂಬುದು ಸ್ಪಷ್ಟವಾಗಿಯೇ ಇದೆ.

ಸಂಪಾದಕ ಎಸ್.ಆರ್. ರಾಮಸ್ವಾಮಿ ಅವರೂ ಸೇರಿದಂತೆ,

ಸ್ವಾಮಿರಂಗನಾಥಾನಂದ, ಕೆ.ಆರ್. ಮಲ್ಕಾನಿ, ಕೆ.ಎಸ್. ನಾರಾಯಣಸ್ವಾಮಿ, ನಾನಾಜಿ ದೇಶಮುಖ್, ಬಾಬಾ ಆಮ್ಟೆ, ಅಣ್ಣಾ ಹಜಾರೆ, ವಿದ್ಯಾನಂದ ಶೆಣೈ, ಚಂದ್ರಶೇಖರ ಭಂಡಾರಿ, ಉಪೇಂದ್ರ ಶೆಣೈ ಅವರುಗಳ ಲೇಖನಗಳು ಇವೆ ಇಲ್ಲಿ. ರಾಮಸ್ವಾಮಿಯವರ'ಸಾಮಾಜಿಕ ವ್ಯವಸ್ಥೆ : ಹಿಂದೆ, ಇಂದು'ಲೇಖನವು ದೀರ್ಘವೂ ಮಾಹಿತಿಪೂರ್ಣವೂ ವಿಚಾರಾತ್ಮಕವೂ ಆದುದು. ವೇದಕಾಲದಿಂದ ಇಂದಿನವರೆಗಿನ ಸಾಮಾಜಿಕ ವ್ಯವಸ್ಥೆಯ ಸಮರ್ಥವಾದ ಐತಿಹಾಸಿಕ ಸಮೀಕ್ಷೆ ಇಲ್ಲಿ ನಡೆದಿದೆ.

ಸಮಾಜ ಕಾರ್ಯವು ತಮ್ಮ ಆತ್ಮ ಸಂಸ್ಕರಣಕ್ಕೂ ಸಾಧನವೆಂಬ ಮನವರಿಕೆ ಇದ್ದವರಿಂದ ಮಾತ್ರ ಸಾರ್ಥಕ ಸೇವೆ ಸಮಾಜಕ್ಕೆ ಲಭಿಸಬಲ್ಲದೆನ್ನುತ್ತಾರೆ ರಾಮಸ್ವಾಮಿ ತಮ್ಮ ಲೇಖನದಲ್ಲಿ. 'ಸೇವೆ' ಎಂದು ಕರೆಯುವುದು ವಾಸ್ತವವಾಗಿ 'ಸಮಾಜ ಋಣ'ದ ತೀರಿಸುವಿಕೆಯಲ್ಲದೆ ಬೇರೆಯಲ್ಲವೆನ್ನುವುದು ಇವರ ವಿಚಾರದ ತಿರುಳು. ಸ್ವಾಮಿ ರಂಗನಾಥಾನಂದ ಅವರ 'ಸಾಮಾಜಿಕ ಕಾರ್ಯದ ತಾತ್ತ್ವಿಕ ಹಿನ್ನೆಲೆ' ಲೇಖನದ ಸಾರವಾದರೂ ಇಂದು ಕಾಣುವ ಹೆಚ್ಚು ಸಮಸ್ಯೆಗಳ - ಅದು ಬಡತನವೇ ಇರಲಿ, ನಿರುದ್ಯೋಗವೇ ಇರಲಿ - ಮೂಲ ಇರುವುದು ನೈತಿಕ ಸ್ತರದಲ್ಲಿ ಎಂಬುದೇ. ಕೆ.ಆರ್. ಮಲ್ಕಾನಿ ಅವರು ತಮ್ಮ ಲೇಖನದಲ್ಲಿ ಹೇಳುವಂತೆ, ಬಡವರಿಗಾಗಿಯೂ ಸಂತ್ರಸ್ತರಿಗಾಗಿಯೂ ನೈಜ ಸೇವೆ ಸಲ್ಲಿಸಬಯಸುವವರಲ್ಲಿ ಸಹಜ ಮಾನವಾನುಕಂಪವೂ ಇತರರ ಸಂಕಷ್ಟ ತಮ್ಮದೇ ಎಂಬ ಏಕಾತ್ಮಭಾವವೂ ಇರಬೇಕಾಗುತ್ತದೆ. 'ಲೋಕಶಕ್ತಿಯ ಹೊಸ ರಾಜನೀತಿ'ಯನ್ನು ವಿಶ್ಲೇಷಿಸಿರುವ ಕೆ.ಎಸ್. ನಾರಾಯಣಸ್ವಾಮಿಯವರ ದೃಷ್ಟಿಯಲ್ಲಿ, ಪಕ್ಷಾತೀತ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ರಚನೆ ಸಾಧ್ಯವೆಂಬ ಭರವಸೆ ಮೂಡಿಸುವ ವ್ಯಾಪಕ ಪ್ರಯೋಗಗಳು ಸ್ವಯಂಪ್ರೇರಿತ ಸೇವಾಸಂಸ್ಥೆಗಳಿಂದ ಮಾತ್ರ ಸಾಧ್ಯ. ನಾನಾಜಿ ದೇಶಮುಖ್ ಅವರು ಸಹಾ ಗ್ರಾಮೋದಯದ ಮೂಲತತ್ತ್ವಗಳನ್ನು ವಿವರಿಸುವಾಗ, ಗ್ರಾಮೋದಯದ ಕಾರ್ಯದಲ್ಲಿ ತೊಡಗಿರುವವರು ಆತ್ಮಸಂಮಾನ, ಪ್ರಸಿದ್ಧಿ ಕಾಮನೆಗಳಿಂದ ಪೂರ್ಣ ಮುಕ್ತರಾಗಿರಬೇಕಾಗುತ್ತದೆಂಬುದನ್ನು ಒತ್ತಿ ಹೇಳುತ್ತಾರೆ. ಅಣುಶಕ್ತಿ ಕೇಂದ್ರಗಳನ್ನೂ ಮಾಲಿನ್ಯಕಾರರ ಕಾರ್ಖಾನೆಗಳನ್ನೂ ದೈತ್ಯಗಾತ್ರದ ಅಣೆಕಟ್ಟೆಗಳನ್ನೂ ಸ್ಥಾಪಿಸಬಯಸುವವರ ಮನಸ್ಸಿನ ಜಡತೆಯು ಆಘಾತವನ್ನುಂಟು ಮಾಡುವಂತಹದೆಂದು ಹೇಳುತ್ತಾ ಇಂತಹ ವಿಕೃತ'ಪ್ರಗತಿ'ಯಿಂದ ಪಾರಾಗೋಣವೆಂದು ಕರೆಕೊಡುತ್ತಾರೆ ಬಾಬಾ ಆಮ್ಟೆ. ಸ್ವಪರಿಶ್ರಮವೇ ಗ್ರಾಮವಿಕಾಸದ ಏಕೈಕ ಮಾರ್ಗವೆಂದು ಸೂಚಿಸುತ್ತಾರೆ ಅಣ್ಣಾ ಹಜಾರೆ. ಹೀಗೆ ಸಮಾಜಕಾರ್ಯದ ತಾತ್ತ್ವಿಕ ಚಿಂತನೆಯ ನಡೆದಿದೆ ಇಲ್ಲಿಯ ಲೇಖನಗಳಲ್ಲಿ.

ಸಮಾಜಕಾರ್ಯದ ಸಮಕಾಲೀನ ಪ್ರಮುಖ ಸೇವಾಪ್ರಯೋಗಗಳ ವೃತ್ತಾಂತವನ್ನು ಮೂರನೆಯ ಭಾಗವು ಒಳಗೊಂಡಿದೆ. ಉತ್ತರಪ್ರದೇಶದ ಗೋಂಡಾ ಜಿಲ್ಲೆಯ ಝುಂಜರಿ ತಹಸೀಲಿನ ಕೇಶವಪುರ ಗ್ರಾಮ ಕುರಿತ ರಾಮಸ್ವಾಮಿಯವರ ಲೇಖನ ಹಾಗೂ ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ರಾಳೇಗಣಸಿದ್ಧಿ ಗ್ರಾಮ

ಕುರಿತ ವಿದ್ಯಾನಂದ ಶೆಣೈ ಅವರ ಲೇಖನಗಳು, ಗ್ರಾಮವಿಕಾಸದ ಹಿನ್ನೆಲೆಯಲ್ಲಿ ದೀನದಯಾಳ ಶೋಧ ಸಂಸ್ಥಾನ ಹಾಗೂ ಅಣ್ಣಾ ಹಜಾರೆ ಅವರ ತ್ಯಾಗ, ಸಹಕಾರ ಮತ್ತು ಮಾರ್ಗದರ್ಶನಗಳು ಪ್ರಭಾವ ಬೀರಿರುವುದನ್ನು ಗುರುತಿಸುತ್ತವೆ. ಆನಂದವನದ ಕರ್ಮಯೋಗಿ ಬಾಬಾ ಆಮ್ಟೆ ಅವರನ್ನು ಚಂದ್ರಶೇಖರ ಭಂಡಾರಿ ಅವರು ಗುರುತಿಸುವುದು, ಗ್ರಾಮೀಣ ಭಾರತದ ಏಳಿಗೆಗಾಗಿ ಹಂಬಲಿಸುವ ಯಥಾರ್ಥವಾದಿ ದಾರ್ಶನಿಕನೆಂದು.

ಈ ಭಾಗದಲ್ಲಿ ರಾಮಸ್ವಾಮಿಯವರ ಇನ್ನೆರಡು ಲೇಖನಗಳಿದ್ದು, ಅವುಗಳಲ್ಲಿ ಪಾಂಡುರಂಗಶಾಸ್ತ್ರಿ ಆಠವಳೆ ಅವರು ಆರಂಭಿಸಿದ 'ಸ್ವಾಧ್ಯಾಯ ಆಂದೋಲನ'ವು ಗಮನ ಸೆಳೆಯುತ್ತದೆ. ಸಾಫಲ್ಯದಂತೆ ಪ್ರಯತ್ನದಲ್ಲಿಯೇ ಧನ್ಯತೆಯನ್ನು ಅನುಭವಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳುವ ಮನೋಪ್ರವೃತ್ತಿಗಳನ್ನು ಈ ಲೇಖನದಲ್ಲಿ ಸೋದಾಹರಣವಾಗಿ, ಪರಿಣಾಮಕಾರಿಯಾಗಿ ನಿರೂಪಿಸಿದೆ. ಸೇವಾಪ್ರಯತ್ನದಿಂದ ಜನಸಮುದಾಯದ ಮೇಲೆ ಆಗುವ ಸತ್ಪರಿಣಾಮಗಳ ವಿವಿಧ ಪ್ರಯೋಗಗಳ ಚಿತ್ರಣವು ರಾಮಸ್ವಾಮಿಯವರ ಎರಡು ಲೇಖನಗಳಲ್ಲೂ ಇದೆ. ಹಿಂದು ಸೇವಾ ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳನ್ನು ಚಂದ್ರಶೇಖರ ಭಂಡಾರಿ ಅವರು 'ಸಮಾಜ ಪರಿವಾರದ ನಿರ್ಮಾಣಕ್ಕಾಗಿ ಒಂದು ಪ್ರಯೋಗ' ಎನ್ನುವ ಲೇಖನದಲ್ಲಿ ವಿವರಿಸಿರುವರು. ಅವರ ದೃಷ್ಟಿಯಲ್ಲಿ, ಪ್ರತಿಷ್ಠಾನವು ಇಂದು ಪ್ರಯೋಗವಷ್ಟೆ ಆಗಿರದೆ ಒಂದು ಅನುಭವಸಿದ್ಧ ಯಶಸ್ವೀ ಜನಾಂದೋಲನದ ಸ್ವರೂಪ ತಾಳುತ್ತಿದೆ.

ಭಾಗ ನಾಲ್ಕರಲ್ಲಿರುವ ಏಕೈಕ ದೀರ್ಘ ಲೇಖನ 'ಸಮೀಕ್ಷೆ, ಮುನ್ನೋಟ' ವು ಉಪೇಂದ್ರ ಶೆಣೈ ಅವರದು. ಇದು ಇಡೀ ಗ್ರಂಥದ ವಿಷಯದ ಹರಹಿನ ಸಮೀಕ್ಷೆಯೊಡನೆ, ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿ ಆದ್ಯತೆಯನ್ನು ಬೇಡುತ್ತಿರುವ ಅಂಶಗಳ ಮುನ್ನೋಟ ಸಹಿತವಾದುದು. ಭಾರತದಲ್ಲಿ ಸಮಾಜ ಕಾರ್ಯದ ಹಿನ್ನೆಲೆಯಲ್ಲಿ, ನಮ್ಮ ಸಾಮಾಜಿಕ ನವನಿರ್ಮಾಣಕಾರ್ಯದ ಭವಿಷ್ಯಗತಿಯ ಕಲ್ಪನೆಯು ಈ ಲೇಖನದಲ್ಲಿ ಮೂಡಿಬಂದಿದೆ. ಇದೊಂದು ಚಿಂತನೆಗೆ ಸಹಾಯಕವಾಗುವ ಲೇಖನ.

'ಭಾರತದಲ್ಲಿ ಸಮಾಜಕಾರ್ಯ: ಹಿನ್ನೆಲೆ, ಮುನ್ನೋಟ' ಪುಸ್ತಕವು ಭಾರತೀಯ ದೃಷ್ಟಿಯ ಮತ್ತು ಆದರ್ಶದ ಧ್ಯೇಯೋದ್ದೇಶ ಹಾಗೂ ಅಗತ್ಯಗಳನ್ನು ಒತ್ತಿ ಹೇಳುತ್ತದೆ.

ವೈಚಾರಿಕ ಚಿಂತನೆಯ ಫಲವಾಗಿ ಮೂಡಿಬಂದ 'ಸಮಾಜಸಮ್ಮುಖ' ಕೃತಿಯು ಈ ವರುಷದ ಗಮನಾರ್ಹ ಕೃತಿಗಳಲ್ಲೊಂದು. ಸಾಮಾಜಿಕ ಚಿಂತನೆ, ಜಾನಪದ, ಸಮಾಜಕಲ್ಯಾಣ, ಗ್ರಾಮೀಣ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಾಹಿತ್ಯಕ ಮೌಲ್ಯದಿಂದ ಕೂಡಿರುವ ಸಮಾಜವಿಜ್ಞಾನ ಪ್ರಬಂಧ ಸಂಕಲನವಿದು. ಕನ್ನಡ ಭಾಷಾ ಬರಹದಲ್ಲಿ ಸಿದ್ಧಹಸ್ತರಾದ ಪ್ರೊ. ಎಚ್.ವಿ. ನಾಗೇಶ್ ಇದರ ಲೇಖಕರು. ಸಮಾಜ ವಿಜ್ಞಾನಿಯೋರ್ವನ ಒಟ್ಟು ನೋಟ ಇಲ್ಲಿ ಪ್ರತಿಫಲಿತವಾಗಿದೆ.

ಈ ಸಂಕಲನದಲ್ಲಿ ಒಟ್ಟು ೧೨ ಲೇಖನಗಳಿದ್ದು, ಎರಡು ಭಾಗಗಳಲ್ಲಿ ಹಂಚಿಹೋಗಿವೆ. ಆರು ಚಿಕ್ಕ ಲೇಖನಗಳ ಗುಚ್ಛವೇ 'ಲಘು' ; ಆರು ಲೇಖನಗಳ ಇನ್ನೊಂದು ಗುಚ್ಛವೇ 'ಗುರು'.

ಕನ್ನಡದ ಪ್ರಪ್ರಥಮ ಸಾಮಾಜಿಕ ನಾಟಕವೆಂಬ ಹೆಗ್ಗಳಿಕೆಗೆ ಪಾತ್ರವಾದ ಕರ್ಕಿಯ ಸೂರಿ ವೆಂಕಟರಮಣಶಾಸ್ತ್ರಿ ಕೃತ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' (೧೮೮೭) ನಾಟಕವು ಈಗ್ಗೆ ಸುಮಾರು ೧೧೬ ವರುಷಗಳ ಹಿಂದೆ ಪ್ರಕಟವಾದದ್ದು. ಕೃತಿಕಾರ 'ಹವ್ಯಕ ಹಿತೇಚ್ಛು' ವೆಂಕಟರಮಣಶಾಸ್ತ್ರಿಯು ಉತ್ತರಕನ್ನಡ ಜಿಲ್ಲೆಯಲ್ಲಿ ತನ್ನ ಹವ್ಯಕ ಬಂಧುಗಳ ಸಂಕಷ್ಟ-ದೌರ್ಬಲ್ಯಗಳನ್ನು ಗೇಲಿಮಾಡಿ ಈ ನಾಟಕವನ್ನು ರಚಿಸಿದ. ಇದನ್ನು ಪುನರ್ವಿಮರ್ಶಿಸಿರುವ ನಾಗೇಶ್, ಈ ನಾಟಕದ ವಸ್ತುವನ್ನು ಪ್ರಸ್ತುತ ಹವ್ಯಕ ಸಮಾಜದೊಡನೆ ಹೋಲಿಸುವುದರೊಡನೆ, ಶಾಸ್ತ್ರಿಯು ಪ್ರತಿನಿಧಿಸಿದ ಸಮಾಜ ಈಗ ಹಿಂದಿನಂತಿಲ್ಲ: ಸಮಸ್ಯಾ ಪರಿಹಾರ ಅವನ ಉದ್ದೇಶವಾಗಿದ್ದು, ಅದೀಗ ಸಾಧಿಸಿದೆ ; ಅಂತಹ ಅನೇಕ ಸಮಸ್ಯೆಗಳು ಇಂದು ಮಾಯವಾಗಿವೆ ಅಥವಾ ತಮ್ಮ ತೀವ್ರತೆಯನ್ನು ಕಳೆದುಕೊಂಡಿವೆಯೆನ್ನುತ್ತಾರೆ. ಸಮಾಜ ವಿಮರ್ಶೆಯ ಸಾಧನವನ್ನಾಗಿ ಬಳಸಿಕೊಳ್ಳಲಾದ ನಾಟಕವನ್ನು ಸಮಾಜ ಅಧ್ಯಯನದ ವಸ್ತುವನ್ನಾಗಿ ಬಳಸಿಕೊಂಡಿದ್ದಾರೆ ಲೇಖಕರು.

ಆಲ್ಡಸ್ ಹಕ್ಸಲೆ ಬರೆದ 'ದಿಟ್ಟ ಹೊಸ ಜಗತ್ತು' ಎಂಬ ಕಾದಂಬರಿಯ ಹಿನ್ನೆಲೆಯಲ್ಲಿ ಲೇಖಕರು, ಆದಿವಾಸಿ ಜಗತ್ತಿಗೆ ಸೇರಿದ ಸ್ಯಾವೇಜ್ ಎಂಬ ಯುವಕನ ದುರದೃಷ್ಟವನ್ನು ವಿವರಿಸುತ್ತಲೆ, ಒಂದಲ್ಲ ಒಂದು ದಿನ ನಾವೆಲ್ಲರೂ ಇಂತಹ ಜಗತ್ತಿನಲ್ಲಿ ಬದುಕಬೇಕಾದಿತೇನೋ ಎಂಬ ಊಹೆಯೇ ಮೈನಡುಕ ತರುತ್ತದೆನ್ನುತ್ತಾರೆ. ಹಾಗೆಯೇ, ದ್ವಯ ಮತ್ತು ತ್ರಯಾಗಳೆಂಬ ಎರಡು ಪ್ರಕಾರದ ಸಾಮಾಜಿಕ ಸಮೂಹಗಳನ್ನು ಕುರಿತು ದಿವ್ಯ ನಿರ್ಲಕ್ಷ್ಯ ತೋರಿರುವೆವಾದ್ದರಿಂದ ನಮ್ಮ ಬದುಕು, ವಿಚಾರ, ಇತ್ಯಾದಿಗಳು ಹೇಗೆ ಶ್ರೀಮಂತವಾದವೆಂಬ ಬಗೆಗೆ ವಿಷಾದಿಸುತ್ತಾರೆ. 'ಆಧುನಿಕ ಅಲೆಮಾರಿಗಳ ಚಲಿಸುವ ಮನೆಗಳು' ಲೇಖನದಲ್ಲಿ, ಅಮೇರಿಕೆಯ ಇತಿಹಾಸವನ್ನೂ ವರ್ತಮಾನವನ್ನೂ ತಿಳಿದವರಿಗೆ ಚಲಿಸುವ ಮನೆಗಳು ಆಶ್ಚರ್ಯವನ್ನೇನೂ ತರಲಾರವೆನ್ನುತ್ತಾರೆ. ಅಮೇರಿಕೆಯಲ್ಲಿ ಬದುಕನ್ನು ಸುಗಮಗೊಳಿಸುವ ಎಲ್ಲ ಉಪಕರಣಗಳು ಇದ್ದರೂ ಅದನ್ನು ಸಮೃದ್ಧಗೊಳಿಸುವ ಮಾನವ ಸಂಬಂಧಗಳು ಅಪರೂಪವಾಗುತ್ತ ನಡೆದಿರುವುದು ಹೌದಾದರೆ ಇಂತಹ ಆಟಿಕೆಗಳಂತಹ ಮನೆಗಳು (ಆಮೆಚಿಪ್ಪುಗಳು) ಚಲಿಸುತ್ತಲೇ ಇರಲೆನ್ನುತ್ತಾರೆ, ಕಟುವಾಗಿ.

ಈ ಶತಮಾನದ ಮೊದಲರ್ಧದಲ್ಲಿ ಮಹಾರಾಷ್ಟ್ರದಲ್ಲಿ ಸಾಮಾಜಿಕ, ಶೈಕ್ಷಣಿಕ ಕ್ರಾಂತಿಯನ್ನು ಮಾಡಿದ 'ಕರ್ಮವೀರ' ಭಾವೂರಾವ ಪಾಟೀಲರ 'ಬಹುಜನಹಿತ' ತತ್ವಜ್ಞಾನವನ್ನು ನಾಗೇಶ್ ಅವರು ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಭಾವೂರವರ ವಿಚಾರಗಳನ್ನೂ ಬದುಕಿನ ಹಿನ್ನೆಲೆಯನ್ನೂ ಸಂಗ್ರಹಿಸಿಕೊಟ್ಟಿದ್ದಾರೆ.

ಮುಖ್ಯವಾಗಿ, ಭಾವೂರವರ ಸಾಮಾಜಿಕ ತತ್ವಜ್ಞಾನವನ್ನು ಹನ್ನೊಂದು ಸರಳ ಸೂತ್ರಗಳಲ್ಲಿ ಹೇಳಿರುವುದು ಇಲ್ಲಿಯ ವೈಶಿಷ್ಟ್ಯ. ಜೈನ ಮತೀಯರಾದ ಭಾವೂರವರು ಸಮಾಜಧರ್ಮವನ್ನು ಸ್ವೀಕರಿಸಿದುದು, ಪಶ್ಚಿಮ ಮಹಾರಾಷ್ಟ್ರದ ಸಮಾಜ ಜೀವನವನ್ನು ಶ್ರೀಮಂತಗೊಳಿಸಿದ ಅವರು ಗಾಂಧೀಜಿಯಂತೆ ಬಡವರಲ್ಲಿ ಬಡವರಾಗಿ ಬಾಳಿದುದು ಮುಂತಾದವು ಮನನೀಯವಾಗಿವೆ.

ಭಾರತೀಯ ಸಮಾಜದ ಈ ಬಗೆಯ ದರ್ಶನ ಮಾಡಿಸುತ್ತಲೆ, ತಮ್ಮ ಮುಂದಿನ ಲೇಖನದಲ್ಲಿ, ಪಾಶ್ಚಿಮಾತ್ಯ ಜಗತ್ತಿನ ಭಿನ್ನವಾದ ಸಮಾಜದ ಪರಿಚಯವನ್ನು ನಾಗೇಶ್ ಮಾಡಿಕೊಡುತ್ತಾರೆ. ಇಲ್ಲಿ ಅವರು ಹರಿಸಿರುವ ವಿಚಾರ ಲಹರಿಯು ಪಾಶ್ಚಿಮಾತ್ಯ ಜಗತ್ತು ಕಟ್ಟಬಯಸಿದ ಹಾಗೂ ವಾಸ್ತವದಲ್ಲಿ ಕಟ್ಟಿದ ಕೆಲವು ಕಮ್ಯೂನ್ ಅಥವಾ ಸಮುದಾಯಗಳಲ್ಲಿ 'ಹರನ್' ಎಂಬ ಕಮ್ಯೂನ್ ಕುರಿತದ್ದು. ಅಮೇರಿಕೆಯ ಬಹ್ವಾಯೋ ನದಿಯ ಕಣಿವೆಯಲ್ಲಿ ದೂರದ ಮೂಲೆಯೊಂದರಲ್ಲಿ ಕಟ್ಟಿದ ಒಂದು ಚಿಕ್ಕ ಉಟೋಪಿಯಾ ಸಮುದಾಯವೇ ಈ 'ಹರನ್'; ೧೯೮೫ ರಲ್ಲಿ ಅಸ್ತಿತ್ವಕ್ಕೆ ಬಂದುದು. ಈ ಕುರಿತು ಸ್ವತಂತ್ರವಾಗಿ, ವಿಶದವಾಗಿ ವಿವರಿಸುವ ಲೇಖಕರು, ಕೆಲವು ವಿವರಗಳನ್ನು ಮರೆಯುವುದು ಸಾಧ್ಯವಾದರೆ 'ಹರನ್' ಸಮುದಾಯವನ್ನು ನಮ್ಮ ಹಳೆಯ ಹಿಂದೂ ಅವಿಭಕ್ತ ಕುಟುಂಬಕ್ಕೆ ಹೋಲಿಸಬಹುದೆನ್ನುತ್ತಾರೆ. ಅವರು ಗುರುತಿಸುವಂತೆ, 'ಹರನ್' ಪುರುಷ ಪ್ರತಾಪಿ ಉಟೋಪಿಯಾ ಆಗಿದ್ದು, ಇತರ ಅನೇಕ ಉಟೋಪಿಯಾಗಳಿಗಿಂತ ಹಲವು ರೀತಿಗಳಲ್ಲಿ ಭಿನ್ನವಾಗಿದೆ. ಸ್ತ್ರೀ-ಪುರುಷ ಸಮಾನತೆಯನ್ನು ಇದು ಒಪ್ಪದಿರುವುದರಿಂದ, ಈ ಸಮುದಾಯವನ್ನು 'ಸ್ತ್ರೀ-ದ್ವೇಷಿ ಉಟೋಪಿಯಾ'ಎಂದು ಗುರುತಿಸಬಹುದು. ಈ ಮೊದಲು ಪ್ರಚಲಿತವಿದ್ದ ದಾಂಪತ್ಯ ಕುಟುಂಬವನ್ನು ಕೈಬಿಟ್ಟು ಬದಲಿ ವ್ಯವಸ್ಥೆಗಳನ್ನು ತರುವ ಪ್ರಯೋಗಗಳನ್ನು ಅಮೇರಿಕನ್ನರು ನಡೆಸಿದ್ದು, ಹರನ್ ನಿವಾಸಿಗಳ ಪ್ರಯತ್ನವು ಸಹಾ ಇಂತಹ ಒಂದು ಪ್ರಯೋಗವೆಂತಲೇ ಅವರು ಅಭಿಪ್ರಾಯಪಡುತ್ತಾರೆ.

ಭಾಗ-ಎರಡು 'ಗುರು' ವಿಭಾಗದಲ್ಲಿರುವ ಆರು ಪ್ರಬಂಧಗಳು ದೀರ್ಘವಾದ, ಕ್ಷೇತ್ರಕಾರ್ಯ ಮತ್ತು ಸಂಶೋಧನೆಯ ಬೆಂಬಲ ಪಡೆದಂತಹವು. ಈ ಭಾಗದಲ್ಲಿ ನ್ಯಾಯದಾನ ಪದ್ಧತಿ ಕುರಿತು ಮಾತ್ರವಲ್ಲದೆ, ದೇಶದ ಬೆನ್ನೆಲುಬೆನ್ನಲಾದ ರೈತವರ್ಗದ ಸಮಸ್ಯೆಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ ನಾಗೇಶ್. ಇದರೊಡನೆ ಹಿಂದೊಂದು ಕಾಲಕ್ಕೆ ಬಹಳ ವ್ಯಾಪಕವಾಗಿ ಪ್ರಚಲಿತವಿದ್ದ ಮತ್ತು ಈಗ ಕಣ್ಮರೆಯಾಗುತ್ತಿರುವ 'ದೇವರನ್ಯಾಯ' ಪದ್ಧತಿಯ ಕೆಲವು ನಮೂನೆಗಳ ಬಗೆಗೆ ಮೊದಲನೆಯ ಪ್ರಬಂಧದಲ್ಲಿ ಚರ್ಚಿಸಿದ್ದಾರೆ. ದೇವರನ್ಯಾಯವೆಂದರೆ ಕಾಡುಜನರ ನ್ಯಾಯದಾನ ಪದ್ಧತಿಯೆಂದು ಭಾವಿಸುವುದು ತಪ್ಪು; ಈ ನ್ಯಾಯದಾನ ಪದ್ಧತಿಯು ಅತಿ ಪ್ರಾಚೀನ ಸಮಾಜಗಳಿಂದ ಮೊದಲ್ಗೊಂಡು ಅತ್ಯಾಧುನಿಕ ಸಮಾಜಗಳವರೆಗೂ, ಕಂಡುಬರುತ್ತದೆಯೆನ್ನುತ್ತಾರವರು. 'ಕಾಂಕ್ರೀಟ್ ಕಾಡಿನಲ್ಲಿ ಕುಟುಂಬಗಳು' ಎಂಬ ತಮ್ಮ ಇನ್ನೊಂದು ಲೇಖನದಲ್ಲಿ, ಕುಟುಂಬವು ಸಮಾಜದೃಷ್ಟಿಯ ಅತಿ ಮಹತ್ವದ

ಅಂಗವಾಗಿದ್ದು, ನಗರೀಕರಣದ ಪ್ರಭಾವದಿಂದಾಗಿ ಕುಟುಂಬ ಜೀವನವು ಹಾಳಾಗದಂತೆ ಕಾಪಾಡುವ ಅಗತ್ಯವನ್ನು ನಾಗೇಶ್ ಪ್ರತಿಪಾದಿಸುವರು. ಅವರು ವಿವರಿಸುವ ಸಂಗತಿಗಳು ನಗರೀಕರಣದ ಮಿತಿಗಳನ್ನೂ ಸಮಸ್ಯೆಗಳನ್ನೂ ಚೆನ್ನಾಗಿ ಮನದಟ್ಟು ಮಾಡಿಕೊಡುವಂತಹವು. ಈ ಸಮಸ್ಯೆಯನ್ನು ಗಂಭೀರವಾಗಿ ವಿಚಾರಿಸಿ ಮಾರ್ಗದರ್ಶನ ಮಾಡುವಲ್ಲಿ ಸಮಾಜವಿಜ್ಞಾನಿಗಳು ಮುಂದಾಗಬೇಕೆಂದು ಕರೆಕೊಡುವ ಲೇಖಕರು, ಕಾಂಕ್ರೀಟ್ ಕಾಡಿನಲ್ಲಿಯೂ ಕುಟುಂಬಗಳು ಹೂವಿನಂತೆ ಅರಳಿಯಾವೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಕೇವಲ ಶಾಸನಗಳನ್ನು ರೂಪಿಸಿ ಭೂಸುಧಾರಣೆಯನ್ನು ಯಶಸ್ವಿಗೊಳಿಸಲು ಸಾಧ್ಯವಾಗದು; ಅವುಗಳಿಗೆ ಅನುಗುಣವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕೆನ್ನುತ್ತಾರೆ, 'ಭೂ ಸುಧಾರಣೆಗಳು: ಒಂದು ಸ್ಥೂಲ ಸಮೀಕ್ಷೆ' ಎಂಬ ತಮ್ಮ ಇನ್ನೊಂದು ಪ್ರಬಂಧದಲ್ಲಿ. ಬಡರೈತರು ಸಂಘಟಿತರಾಗಿ ಕ್ರಮಬದ್ಧವಾಗಿ ಶಾಂತಿಯುತವಾಗಿ ಹೋರಾಡುವಂತೆಯೂ ಇದೇ ಸುಧಾರಣೆಯ ಉತ್ತಮ ಹಾದಿಯೆಂತಲೂ ಕರೆಕೊಡುತ್ತಾರೆ. 'ಗ್ರಾಮೀಣ ಅಶಾಂತಿ: ರೈತ ಹೋರಾಟಗಳು' ಪ್ರಬಂಧದಲ್ಲಿ ರೈತ ಸಮಸ್ಯೆಗಳು ವಿವಿಧ ಮುಖಗಳು ಪರಿಚಯವಾಗುತ್ತದೆ. ಹಲವಾರು ಸಂದರ್ಭಗಳ ರೈತ ಹೋರಾಟದ ಸ್ವರೂಪವನ್ನು ದಾಖಲೆಗಳ ಸಹಿತ ಇಲ್ಲಿ ವಿವರಿಸಲಾಗಿದೆ. ಅಲ್ಲದೆ, ರೈತ ಹೋರಾಟಗಳು ಕ್ರಮೇಣ ರಾಜಕೀಯ ಸ್ವರೂಪದವಾಗಿ ಮಾರ್ಪಾಟು ಹೊಂದಿ ಆ ನಂತರ ಅವು ಕೇವಲ ರೈತ ಹೋರಾಟಗಳಾಗಿ ಉಳಿದಿರುವ ಚಿತ್ರಣವೂ ಈ ಪ್ರಬಂಧದಲ್ಲಿ ಮೂಡಿದೆ.

ಇಂದಿಗೂ ಜೀವಂತವಿರುವ ಜೀತಪದ್ಧತಿಯ ಪಿಡುಗನ್ನು ಕುರಿತು ನಾಗೇಶ್ ಬರೆಯುತ್ತಾರೆ. ಅದರ ಇತಿಹಾಸವನ್ನೂ ವಿಧವನ್ನೂ ನಿವಾರಣೋಪಾಯವನ್ನೂ ವಿವರವಾಗಿ ನಿರೂಪಿಸುತ್ತಾರೆ. ಅವರು ಗುರುತಿಸುವಂತೆ, ಜೀತದಾಳುಗಳು ಗ್ರಾಮೀಣ ಬಡವರಲ್ಲಿ ಕಡುಬಡವರು; ಎಲ್ಲರಿಗಿಂತ ದೊಡ್ಡ ಪ್ರಮಾಣದ ಶೋಷಣೆಗೆ ಒಳಗಾದವರು. 'ನಮ್ಮ ರೈತರ ಸಾಲದ ಜೋಳಿಗೆ' ಎಂಬ ಪ್ರಬಂಧವು ರೈತರ ಸಂಕಷ್ಟಗಳನ್ನು ಕುರಿತದ್ದು. ಸತತವಾಗಿ ಸುತ್ತುತ್ತಲೇ ಇರುವ ವಿಷವರ್ತುಲದಂತಿರುವ ಸಾಲದ ಋಣಗ್ರಸ್ತತೆಯಲ್ಲಿ ಸಿಕ್ಕಿಕೊಂಡಿರುವ ನಮ್ಮ ರೈತರ ಪರಿಸ್ಥಿತಿಯನ್ನು ನಿಖರವಾಗಿ ವರ್ಣಿಸುತ್ತದೆ. ಸರ್ಕಾರವು ಹಿಂದಿನಿಂದಲೂ ಈ ಸಮಸ್ಯೆಯನ್ನು ಪರಿಹರಿಸುವ ದಿಸೆಯಲ್ಲಿ ನಡೆಸಿದ ಪ್ರಯತ್ನಗಳ ಸಮೀಕ್ಷೆಯೂ ಇಲ್ಲಿದೆ. ರೈತರ ಸಾಲಮನ್ನಾ ಸೌಕರ್ಯ ಕುರಿತ ೧೯೯೦ರ ಯೋಜನೆಯ ವರೆಗೆ ಇಲ್ಲಿಯ ಮಾಹಿತಿಯು ಮುಂದುವರೆದಿದೆ. ಇಷ್ಟೆಲ್ಲಾ ಆದರೂ ನಾಗೇಶ್ ಅವರು ಪ್ರಸ್ತಾಪಿಸುವಂತೆ ಹಾಗೂ 'ಕಠೋರಸತ್ಯ' ವನ್ನು ಮನಗಾಣಿಸಿಕೊಡುವಂತೆ, ರೈತರ ಸಾಲದ ಜೋಳಿಗೆ ದೊಡ್ಡದು; ಅದನ್ನು ತುಂಬಲು ಕುಬೇರನಿಗೂ ಸಾಧ್ಯವಿಲ್ಲ. ರೈತರ ಬೆಳೆಯ ಉಗ್ರಾಣ ಖಾಲಿಯಿರುವ ತನಕ ಜೋಳಿಗೆ ಒಡಿಯುವುದು ತಪ್ಪದು. ಆದ್ದರಿಂದ ಉಗ್ರಾಣ ತುಂಬಿಸುವ ಕೆಲಸ ಮೊದಲು ಆಗಬೇಕು.

ಎಚ್.ವಿ. ನಾಗೇಶ್ ಅವರದು ಬರವಣಿಗೆಯಲ್ಲಿ ಪಳಗಿದ ಕೈ. ಭಾರತೀಯ ಗ್ರಾಮಗಳು, ಗ್ರಾಮೀಣರು ಹಾಗೂ ಸಮಸ್ಯೆಗಳನ್ನು ಕುರಿತು ಇವರು ಈವರೆಗೆ ನಡೆಸಿರುವ ಅಧ್ಯಯನಗಳು ಹಾಗೂ ಪ್ರಕಟಿಸಿರುವ ಗ್ರಂಥಗಳು ಅದನ್ನು ಸಮರ್ಥಿಸುತ್ತವೆ. 'ಸಮಾಜ ಸಮ್ಮುಖಿ' ಸಹಾ ಅಂತಹದೇ ಕಾಳಜಿಯ ಹಿನ್ನೆಲೆಯಲ್ಲಿ ಹೊರಬಂದಿರುವ ಕೃತಿ. ಪಾಂಡಿತ್ಯದ ಹೊಳಪು ಕೃತಿಯುದ್ದಕ್ಕೂ ಕಾಣಿಸುತ್ತದೆ. ನಾಗೇಶ್ ಅವರು ವಿಚಾರ ಪ್ರಚೋದಕ ವಸ್ತುವನ್ನು ಆಯ್ದು ಅದನ್ನು ತೀಕ್ಷ್ಣವಾಗಿಯೂ ಸುಂದರವಾಗಿಯೂ ಬರೆಯಬಲ್ಲರೆಂಬುದಕ್ಕೆ ಈ ಕೃತಿಯು ಇನ್ನೊಂದು ಉದಾಹರಣೆಯಾಗಿದೆ.

ಜೀತದಾಳುಗಳನ್ನು ಕುರಿತು ವಿಶೇಷ ಅಧ್ಯಯನ ಕೈಗೊಂಡವರು ಡಾ. ಜೆ.ಎಲ್. ಹಮೀಲಪೂರಕರ್. ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿರುವ ಕೃಷಿ ಸಾಮಾಜಿಕ ರಚನೆ ಕುರಿತ ಜೀತದಾಳುಗಳ ಅಧ್ಯಯನ ನಡೆಸಿರುವ ಲೇಖಕರು, ಅದರ ಸಂಕ್ಷಿಪ್ತರೂಪವಾಗಿ'ಭಾರತದಲ್ಲಿ ಜೀತಪದ್ಧತಿ'ಎಂಬ ಕೃತಿಯನ್ನು ಪ್ರಕಟಿಸಿರುವರು. ಇವರು ತಮ್ಮ ಅಧ್ಯಯನದಲ್ಲಿ ಖಚಿತ ಅಂಕಿ-ಅಂಶಗಳೊಡನೆ ಸರ್ಕಾರದ ಯಶಸ್ಸು-ವಿಫಲತೆಗಳನ್ನು ಸಮರ್ಥವಾಗಿ ಪ್ರಸ್ತಾಪಿಸಿದ್ದಾರೆ. ಇವರು ಸಂಗ್ರಹಿಸಿಕೊಟ್ಟಿರುವ ಸಾಕ್ಷ್ಯಾಧಾರಗಳು ಜೀತಪದ್ಧತಿಯು ಇಂದಿಗೂ ಜೀವಂತವಿರುವ ವಿಚಾರದಲ್ಲಿ ಬೆಳಕು ಚೆಲ್ಲುತ್ತವೆ. ಜೀತದಾಳುಗಳನ್ನು ಗುರುತಿಸಿ ಪುನರ್ವಸತಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಸರಕಾರವು ಅಷ್ಟಾಗಿ ಯಶಸ್ವಿಯಾಗಿಲ್ಲವೆಂಬುದನ್ನು ಈ ಕೃತಿಯು ಹೇಳುತ್ತದೆ. ಶೋಷಣೆಯ ಚಕ್ರವು ಜೀತದಾಳುಗಳ ಬಾಳಿನ ಗತಿಯನ್ನು ಹೇಗೆ ನಿರ್ಧರಿಸುತ್ತದೆಂಬುದನ್ನು ಈ ಕೃತಿಯು ವಿವರಿಸುತ್ತದೆ.

ಹಮೀಲಪೂರಕರ್ ಅವರು ಪ್ರಸ್ತಾಪಿಸುವಂತೆ, ದಲಿತವರ್ಗ, ಪರಿಶಿಷ್ಟಜಾತಿ, ಸಮಾಜದ ಬುಡಕಟ್ಟಿನ ದುಡಿಮೆಗಾರರು ಜೀತಪದ್ಧತಿಯ ಸಂಕೋಲೆಗೆ ಸಿಲುಕಿದವರು; ಮೇಲ್ವರ್ಗದ ಜಾತಿ ಪಂಗಡಗಳವರು ಮೂಢನಂಬಿಕೆಗಳಿಗೆ ಒಳಗಾಗಿ ಈ ಕೆಳಜಾತಿಗಳವರನ್ನು ಹಿಂಸಾತ್ಮಕವಾಗಿ ನಡೆಸಿಕೊಳ್ಳುವರು. ಯಾವುದೇ ಪ್ರಾಂತ್ಯದಲ್ಲಿ ಜೀತಪದ್ಧತಿ ಪ್ರಚಲಿತವಿದ್ದರೂ ಬಡತನ, ಸಾಲ, ಅವಿದ್ಯೆ, ದೊಡ್ಡ ಕುಟುಂಬ, ಸ್ವಂತ ಭೂಮಿಯಿಂದ ಸಾಕಷ್ಟು ಉತ್ಪಾದನೆ ಇಲ್ಲದಿರುವುದು, ಜಾತೀಯತೆ ಮತ್ತು ಸಂಪ್ರದಾಯ - ಈ ಏಳು ಕಾರಣಗಳು ಜೀತಪದ್ಧತಿಯ ಮೂಲಕಾರಣಗಳೆನಿಸಿವೆ.

ಲೇಖಕರು ಕಂಡುಕೊಂಡಿರುವಂತೆ, ಜೀತಪದ್ಧತಿಯು ಕನಿಷ್ಠವಾದುದಾದರೂ ಜೀತದಾಳುಗಳ ಅಸಂತೋಷ ಮತ್ತು ಸಮಾಧಾನಗಳು ಅವರವರ ವಯೋಮಾನ ಹಾಗೂ ಸ್ವಜಾತಿ ಮತ್ತು ಬಾಂಧವ್ಯಗಳನ್ನು ಅವಲಂಬಿಸಿವೆ. ಅವರು ಸಂಗ್ರಹಿಸಿರುವ ಮಾಹಿತಿಯ ಪ್ರಕಾರ, ಜೀತಸೇವೆಯಲ್ಲಿ ಸಿಲುಕಿರುವ ಬಹುಪಾಲು ಜೀತದಾಳುಗಳು ಅಸಂತೃಪ್ತರಾಗಿರುವುದು ಕಂಡುಬರುತ್ತದೆ. ಸ್ವತಃ ತಾವೇ ಈ ಪದ್ಧತಿಯನ್ನು ಸಂಪೂರ್ಣವಾಗಿ ನೀಗುವಷ್ಟು ಧೈರ್ಯ ಸಾಲದೆ ನರಳುತ್ತಿದ್ದ ಜೀತದಾಳುಗಳಿಗೆ

ವರವಾಗಿ ಪರಿಣಮಿಸಿದುದು ೧೯೭೬ರಲ್ಲಿ ಸರ್ಕಾರವು ಜಾರಿಗೆ ತಂದ ಮಹತ್ವದ ಹಾಗೂ ಕ್ರಾಂತಿಯುತವಾದ ಜೀತಪದ್ಧತಿ ರದ್ಧತಿ ಕಾಯಿದೆ. ಇಷ್ಟಾದರೂ ಪ್ರಸ್ತುತ ರಾಜಕೀಯ ಜಟಿಲತೆ-ಕುಟಿಲತೆಗಳ ಪರಿಣಾಮವಾಗಿ ಜೀತವಿಮೋಚಿತನು ಈ ಪದ್ಧತಿಯ ಮುಷ್ಟಿಯಿಂದ ಸಂಪೂರ್ಣ ವಿಮುಕ್ತನಾಗಲು ಸಾಧ್ಯವಾಗದೆ ಇನ್ನೂ ನರಳುತ್ತಲೇ ಇರುವುದು ಸ್ಪಷ್ಟವಾಗಿದೆ.

ಜೀತಪದ್ಧತಿಯೆಂಬ ಸಾಮಾಜಿಕ ಕಳಂಕದ ಬಗೆಗೆ ಕಳಕಳಿಯಿಂದ ಪುಸ್ತಕ ರಚಿಸಿ, ಸಮಾಜದ ಕಣ್ಣು ತೆರೆಸುವ ಹಾಗೂ ಸಮಕಾಲೀನರಲ್ಲಿ ಜಾಗೃತಿಯನ್ನುಂಟುಮಾಡುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ, ಹಮೀಲಪೂರಕರ್. 'ಭಾರತದಲ್ಲಿ ಜೀತಪದ್ಧತಿ ' ಯಂತಹ ಪುಸ್ತಕಗಳ ಅಗತ್ಯವು ಇಂದು ತೀವ್ರವಾಗಿದೆಯೆನ್ನಬಹುದು.

'ರಾಷ್ಟ್ರೀಯ ಚಳವಳಿಯ ವಿಶ್ವರೂಪ'ದರ್ಶನ ಮಾಡಿಸುವುದೆಂಬ ಹೆಗ್ಗಳಿಕೆಗೆ ಪಾತ್ರವಾದ'ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು' ಗ್ರಂಥವನ್ನು ರಚಿಸಿ ಕನ್ನಡದ ವಿಚಾರವಂತರ ಗಮನ ಸೆಳೆದವರು ಎನ್.ಪಿ. ಶಂಕರನಾರಾಯಣರಾವ್. ರಾಷ್ಟ್ರೀಯ ಚಳವಳಿಯನ್ನು ಸಮಗ್ರವಾಗಿ ಪರಿಚಯಿಸುವ ವಿರಳ ಸ್ವರೂಪದ ಇವರ ಈ ಗ್ರಂಥವು, ಚರಿತ್ರೆಯ ಪ್ರಮುಖ ಕಾಲಘಟ್ಟವೊಂದನ್ನು ಜೀವಂತವಾಗಿ, ಚೈತನ್ಯಶಾಲಿಯಾಗಿ ದಾಖಲಿಸಿಕೊಟ್ಟಿದೆ. ಮಾನವ ಆಶೋತ್ತರಗಳ ಸ್ಪಂದನವಾಗಿ ಹೊರಹೊಮ್ಮಿರುವ ಈ ಕೃತಿಯ ಸಂಗ್ರಹರೂಪವಾಗಿ ಇದೀಗ ಪ್ರಕಟಗೊಂಡಿರುವುದೇ 'ಸ್ವಾತಂತ್ರ್ಯದ ಗುರಿ ಭಾರತದ ದಾರಿ' ; ಕಿರಿಯರಿಗಾಗಿ ಸ್ವಾತಂತ್ರ್ಯ ಚಳವಳಿಯ ಪರಿಚಯ ಪುಸ್ತಕ. ಇದನ್ನು ಸಹಾ ನವಕರ್ನಾಟಕ ಪ್ರಕಾಶನದವರೆ ಹೊರತಂದಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸ್ವತಃ ಭಾಗವಹಿಸಿ ಅನುಭವ ಪಡೆದ ಎನ್.ಪಿ. ಶಂಕರನಾರಾಯಣರಾಯರು, ಸ್ವಾತಂತ್ರ್ಯ ಹೋರಾಟದ ಸಮಗ್ರ ಚಿತ್ರವನ್ನು ಕಿರಿಯರ ಹಾಗೂ ತರುಣರ ಮನದಲ್ಲಿ ಮೂಡಿಸುವ ಪ್ರಯತ್ನ ಕೈಗೊಂಡಿದ್ದಾರೆ ಈ ಕೃತಿಯ ಮೂಲಕ. ಭಾರತದ ಚರಿತ್ರೆಯೇ ಇಲ್ಲಿಯ ಪುಟಗಳಲ್ಲಿ ಹರಿದಿದ್ದರೂ ಕರಾರುವಾಕ್ಕಾದ ಅಂಕಿ-ಅಂಶ, ತೇದಿ, ಕ್ರಮಬದ್ಧ ಘಟನೆಗಳಿಂದ ಕೂಡಿದ್ದರೂ ಇತರ ಚರಿತ್ರೆಯ ಪುಸ್ತಕಗಳಿಗಿಂತ ಇದು ಕೊಂಚ ಭಿನ್ನವಾಗಿ ನಿಲ್ಲುವಂತಹದು. ಚಾರಿತ್ರಿಕ ವಸ್ತುನಿಷ್ಠತೆ, ಸಮಗ್ರತೆ ಇತ್ಯಾದಿಗಳು ಈ ಪುಸ್ತಕದ ವಿಶೇಷತೆಗಳು. ಉತ್ತಮ ಭಾಷೆ, ನುಡಿಗಟ್ಟು ಹಾಗೂ ಉಚಿತ ಗಾದೆಗಳಿಂದ ಈ ಪುಸ್ತಕವು ಕೂಡಿದ್ದರೂ ನಿರೂಪಣೆಯಲ್ಲಿಯ ಬಿಗಿತನವು ಎಳೆಯರನ್ನು ಸೆಳೆಯುವಲ್ಲಿ ಅಷ್ಟಾಗಿ ಸಫಲಗೊಂಡಿಲ್ಲವೆನ್ನಬಹುದು.

ಬ್ರಿಟಿಷ್ ಆಳರಸರ ಆಕ್ರಮಣಶೀಲ ನೀತಿ, ದಬ್ಬಾಳಿಕೆ, ಇತ್ಯಾದಿಗಳ ಬಗೆಗೆ ಪ್ರಸ್ತಾಪಿಸುತ್ತಲೇ ಅವರ ವಿರುದ್ಧ ಸಂಘಟಿತವಾದ ಜನಸಮುದಾಯದ ವಿರೋಧ, ಹೋರಾಟಗಳನ್ನು ಸಮರ್ಪಕವಾಗಿ ಚಿತ್ರಿಸಿಕೊಡುತ್ತಾರೆ ಲೇಖಕರು. ಚರಿತ್ರೆಯಲ್ಲಿ

ಅಷ್ಟಾಗಿ ಪರಿಚಿತರಲ್ಲದ ಸಾಮಾನ್ಯ ನಾಯಕರು, ವೀರರು ಶಂಕರನಾರಾಯಣರಾಯರ ಕೃತಿಯಲ್ಲಿ ತಲೆಯೆತ್ತಿ ನಿಲ್ಲುತ್ತಾರೆ. ಜನಪರ ಹೋರಾಟಗಳ ಸೂಕ್ಷ್ಮ ಚಿತ್ರಣ ಇಲ್ಲಿದೆ. ಒಂದೇ ಉಸಿರಿಗೆ ಓದಿಸಿಕೊಳ್ಳಬಲ್ಲ ಈ ಕೃತಿಯು ಪುಟ್ಟದಾದರೂ ಅತ್ಯಂತ ಉಪಯುಕ್ತವಾದುದು.

ಕಡಲನ್ನು ಕೊಡದಲ್ಲಿ ತೋರಿಸುವ ನಮ್ರ ಪ್ರಯತ್ನವಾಗಿ ಹೊರತರಲಾದ ಕಿರುಹೊತ್ತಗೆಯೇ 'ಸಂಸ್ಕೃತದಲ್ಲಿ ವೀರಶೈವ ಸಾಹಿತ್ಯ'. ಷಣ್ಮುಖಯ್ಯ ಅಕ್ಕೂರಮಠ ಅವರಿಂದ ರಚಿತವಾಗಿ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದಿಂದ ಪ್ರಕಟಿಸಲ್ಪಟ್ಟಿದೆ. ಒಂದು ಮಹಾಪ್ರಬಂಧದ ವಸ್ತುವಾಗಬಲ್ಲ ವಿಷಯವನ್ನು ಕಿರುಪುಸ್ತಕದಲ್ಲಿ ಅಳವಡಿಸಿರುವ ಲೇಖಕರ ಸಾಹಸವನ್ನು ಮೆಚ್ಚಲೇಬೇಕು. ಶಾಸ್ತ್ರ ಮತ್ತು ವಿಚಾರಸಾಹಿತ್ಯ ಕ್ಷೇತ್ರಗಳಲ್ಲಿ ಈಗಾಗಲೇ ಹೆಸರು ಮಾಡಿರುವ ಅಕ್ಕೂರಮಠರು, ಈ ಕೃತಿಯ ಮೂಲಕ ವೀರಶೈವ ಸಾಹಿತ್ಯ ಸಂಪತ್ತಿನೆಡೆಗೆ ಬೆರಳು ಮಾಡಿ ತೋರಿಸುವ ಮಹದ್ಕಾರ್ಯಕ್ಕೂ ಸತ್ಕಾರ್ಯಕ್ಕೂ ಪ್ರಯತ್ನಪಟ್ಟಿದ್ದಾರೆ.

ತಮ್ಮ ಕೃತಿಯಲ್ಲಿ ಅಕ್ಕೂರಮಠರು ವೀರಶೈವ ಸಾಹಿತ್ಯವನ್ನು ಸಂಸ್ಕೃತ ವಾಙ್ಮಯದಲ್ಲಿ ವೀರಶೈವ ತತ್ವ ಮತ್ತು ಸಂಸ್ಕೃತದಲ್ಲಿ ವೀರಶೈವ ಸ್ವತಂತ್ರ ಗ್ರಂಥಗಳು-ಎಂದು ಎರಡು ರೀತಿಯಲ್ಲಿ ಗುರುತಿಸಲೆತ್ನಿಸಿದ್ದಾರೆ. ವೀರಶೈವ ಧರ್ಮ-ಸಂಸ್ಕೃತ ಭಾಷೆ-ಸಾಹಿತ್ಯಗಳಿಗಿರುವ ಅವಿನಾಭಾವ ಸಂಬಂಧ, ಇತ್ಯಾದಿಗಳನ್ನು ಕುರಿತು ಮೊದಲನೆಯ ಭಾಗದಲ್ಲೂ ಪ್ರಾಚೀನ ಕಾಲದಿಂದ ಇಂದಿನ ವರೆಗಿನ ಪ್ರಮುಖ ಧಾರ್ಮಿಕ ಸಾಹಿತ್ಯಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಎರಡನೆಯ ಭಾಗದಲ್ಲೂ ಬರೆದಿದ್ದಾರೆ. ಹಾಗೆಯೇ, ಉಪಲಬ್ಧ ಮತ್ತು ಅನುಪಲಬ್ಧ ವೀರಶೈವ ಸಂಸ್ಕೃತದ ಪ್ರಕಾರಗಳನ್ನು ಕುರಿತು ಸಂಸ್ಕೃತ ವೀರಶೈವ ಸಾಹಿತ್ಯದ ಒಂದು ನೋಟವನ್ನು ನೀಡಿದ್ದಾರೆ. ಸಮಕಾಲೀನ ವೀರಶೈವ ಸಾಹಿತ್ಯ ಪರಂಪರೆ ಮತ್ತು ವಿದ್ವಾಂಸರ ಪರಂಪರೆಗಳನ್ನು ಇಲ್ಲಿ ಗುರುತಿಸಿರುವುದು ಉಚಿತವಾಗಿದೆ.

ಸಂಸ್ಕೃತ ಭಾಷೆಯಲ್ಲಿಯ ವೀರಶೈವ ಸಾಹಿತ್ಯ ಕುರಿತು ವಿವಿಧ ವಿದ್ವಾಂಸರು ಬರೆದಿದ್ದರೂ ಅಕ್ಕೂರಮಠರ ಈ ಕೃತಿಯು ತಕ್ಕಮಟ್ಟಿಗೆ ಸಮಗ್ರವಾಗಿದೆ; ಅಭ್ಯಾಸಿಗಳಿಗೆ ಅನುಕೂಲಕರವಾಗಿದೆ. ಇನ್ನೂ ಕತ್ತಲಲ್ಲಿರುವ ನೂರಾರು ಅಪ್ರಕಟಿತ ಕೃತಿಗಳನ್ನು ಬೆಳಕಿಗೆ ತರುವ ಜರೂರಾದ ಕೆಲಸದತ್ತ ಗಮನ ಸೆಳೆಯುವ ದಾಖಲೆಯಂತಿದೆ. ಪಂಡಿತರಿಗೂ ಪಾಮರರಿಗೂ ಉಪಯೋಗಕ್ಕೆ ಬರುವ ವೀರಶೈವ ಸಾಹಿತ್ಯದ ವಿರಾಟ್‌ಸ್ವರೂಪದ ಪರಿಚಯ ಪುಸ್ತಕವನ್ನು ರಚಿಸಿ ಕೊಡುವುದರೊಡನೆ ಅಭಿನಂದನೀಯ ಕಾರ್ಯವೆಸಗಿದ್ದಾರೆ ಷಣ್ಮುಖಯ್ಯ ಅಕ್ಕೂರಮಠ.

* * *

ಮೇಲ್ಕಂಡ ಪ್ರಕಟಣೆಗಳಲ್ಲಿ ಕೆಲವಾದರೂ ೧೯೯೨ ರ ವರುಷದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿವೆಯೆಂದರೆ ಅತಿಶಯೋಕ್ತಿಯೆನಿಸದು.

ಭಾಗ - ೩

"ಸಂಕೀರ್ಣ"

* ಹೊರನಾಡ ಕನ್ನಡ ಚಟುವಟಿಕೆಗಳು

  ಮುಂಬಯಿ, ಪೂನಾ, ಮದರಾಸು,
  ಮಧುರೈ, ಕಾಸರಗೋಡು

* ಅಗಲಿದ ಮಹನೀಯರು

ಹೊರನಾಡ ಕನ್ನಡ ಚಟುವಟಿಕೆಗಳು

— ಸುಬ್ಬಣ್ಣ ರೈ ಏವುಂಜೆ

ನಾಡೊಂದರ ಭೌಗೋಳಿಕ ವ್ಯಾಪ್ತಿಯ ಒಳಗಿರುವಷ್ಟು ಪ್ರದೇಶವು ಒಳನಾಡೆನಿಸುವುದು. ಅದರ ಹೊರಗಡೆಗಿರುವ ಭಾಗವೆಲ್ಲಾ ಹೊರನಾಡೆನಿಸುವುದು. ಈ ಒಳನಾಡು-ಹೊರನಾಡುಗಳ ಗಡಿ ಪ್ರದೇಶಗಳಲ್ಲಿದ್ದು, ಅನ್ಯ ರಾಜ್ಯಗಳಿಗೆ ಸೇರಿ ಹೋಗಿರುವ ಗಡಿನಾಡುಗಳೂ ಒಂದರ್ಥದಲ್ಲಿ ಹೊರನಾಡುಗಳೇ ಆಗುತ್ತವೆ. ಈ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹೊರನಾಡ ಕನ್ನಡ ಸಂಘ -ಸಂಸ್ಥೆಗಳ ೧೯೯೨ ರ ಮಹತ್ವದ ಚಟುವಟಿಕೆಗಳನ್ನು, ಅವುಗಳ ಸಾಂಸ್ಕೃತಿಕ ಮಹತ್ವವನ್ನು ನಾವು ಅವಲೋಕಿಸಬೇಕಾಗುತ್ತದೆ.

ಮುಂಬಯಿ

ಮಹಾರಾಷ್ಟ್ರದ ಪ್ರಮುಖ ನಗರಗಳಲ್ಲೆಲ್ಲಾ ಕನ್ನಡಿಗರ ಒಂದಲ್ಲ ಒಂದು ಬಗೆಯ ಸಂಘಟನೆಗಳು ಇದ್ದೇ ಇರುತ್ತವೆ. ಮುಂಬಯಿ ನಗರವೊಂದರಲ್ಲೇ ಇಂತಹ ನೂರಕ್ಕೂ ಅಧಿಕ ಸಂಘ -ಸಂಸ್ಥೆಗಳಿವೆ. ಮಹಾನಗರದ ಗಜಿಬಿಜಿಯ, ಗಡಿಬಿಡಿಯ ವಾತಾವರಣದ ನಡುವೆಯೂ ಅವುಗಳೆಲ್ಲಾ ಸಾಹಿತ್ಯಗೋಷ್ಠಿ -ಸಂವಾದ, (ವಿಚಾರ) ಸಂಕಿರಣ-ಸಮ್ಮೇಳನ-ಕವಿಗೋಷ್ಠಿ, ಸಂಗೀತೋತ್ಸವ, ನಾಟಕೋತ್ಸವ ಇತ್ಯಾದಿ ಚಟುವಟಿಕೆಗಳನ್ನು ನಡುಸುತ್ತಿವೆ.

೧೯೯೨ರಲ್ಲಿ ತನ್ನ 'ಮಂಗಳೋತ್ಸವ'ವನ್ನು ಆಚರಿಸಿದ ಮುಂಬಯಿ ಕನ್ನಡಿಗರ ಅತ್ಯಂತ ಹಳೆಯ ಸಂಸ್ಥೆಯಾದ ಶ್ರೀಮದ್ಭಾರತ ಮಂಡಳಿಗೆ ೧೧೫ ವರ್ಷಗಳ ಇತಿಹಾಸವಿದೆ. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ವರ್ಷಪೂರ್ತಿ ಚಟುವಟಿಕೆಯಿಂದಿರುತ್ತದೆ. ಸ್ವತಂತ್ರವಾಗಿ ಅಥವಾ ಇತರ ಸಂಸ್ಥೆಗಳ ಸಹಯೋಗದಿಂದ ಹತ್ತು ಹಲವು ಸಾಹಿತ್ಯಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತದೆ. ಡಾ.ಕೆ. ಮರುಳಸಿದ್ದಪ್ಪನವರಿಂದ 'ಕನ್ನಡ ನಾಟಕ ಪರಂಪರೆ

-ಪ್ರಯೋಗ' ಕುರಿತು ವಿಶೇಷೋಪನ್ಯಾಸ ; ಡಾ.ಕೆ. ಕುಶಾಲಪ್ಪ ಗೌಡರಿಂದ 'ಕನ್ನಡ ಭಾಷೆಯ ಚರಿತ್ರೆ'ಯ ಕುರಿತಂತೆ ವಿಶೇಷೋಪನ್ಯಾಸ; ಜ್ಞಾನಪೀಠ ಪ್ರಶಸ್ತಿ ವಿಜೇತ ವಿ.ಕೃ. ಗೋಕಾಕರ ಸಹಭಾಗಿತ್ವದಲ್ಲಿ ಡಾ . ಆರ್.ಸಿ. ಹಿರೇಮಠ, ಡಾ. ಹಂಪ ನಾಗರಾಜಯ್ಯ, ಶಾಂತಿನಾಥ ದೇಸಾಯಿ, ಸಂಗಮೇಶ ಸವದತ್ತಿ ಮಠ, ಪಿ.ಜಿ. ಪೂಜಾರ, ಪ್ರೊ. ಸುನೀತಾ ಶೆಟ್ಟಿ, ವಸಂತ ಕುಷ್ಟಗಿ, ರಾಜಶೇಖರ ಬಡಿಗೇರ - ಮುಂತಾದವರು ಪಾಲ್ಗೊಂಡ 'ವಿನಾಯಕ ವಾಙ್ಮಯ ' ವಿಚಾರ ಸಂಕಿರಣ; ಕರ್ನಾಟಕ ಸಾಹಿತ್ಯ ಅಕಾಡೆಮಿ ನೆರವಿನಿಂದ ಶ್ರೀ ಬರಗೂರು ರಾಮಚಂದ್ರಪ್ಪ, ಶ್ರೀ ಪುರುಷೋತ್ತಮ ಬಿಳಿಮಲೆ, ಶ್ರೀ ಚಂದ್ರಶೇಖರ ಪಾಟೀಲ, ಶ್ರೀ ಆರ್.ವಿ.ಭಂಡಾರಿ-ಮೊದಲಾದವರಿದ್ದು ನಡೆದ 'ಬಂಡಾಯ ಸಾಹಿತ್ಯ' ವಿಚಾರ ಸಂಕಿರಣ ಮತ್ತು ಬಹುಭಾಷಾ ಕವಿಗೋಷ್ಠಿ ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ನೆರವಿನಿಂದ ಡಾ. ಜೀ.ಶಂ. ಪರಮಶಿವಯ್ಯ, ಡಾ. ಬಿ.ಎ. ವಿವೇಕ ರೈ, ಡಾ. ಕಾಳೇಗೌಡ ನಾಗವಾರ, ಶ್ರೀ ಹ.ಕ. ರಾಜೇಗೌಡ, ಶ್ರೀ ಜ್ಯೋತಿ ಹೊಸೂರ-ಮುಂತಾದವರ ಪಾಲ್ಗೊಳ್ಳುವಿಕೆಯಿಂದ ನಡೆದ "ಕರ್ನಾಟಕದಲ್ಲಿ ಜಾನಪದ ಅಧ್ಯಯನ: ನೂತನ ಆಯಾಮಗಳು"ಎಂಬ ವಿಚಾರ ಸಂಕಿರಣ; ಸ್ಥಳೀಯ ಗೋರೇಗಾಂವ್ ಕರ್ನಾಟಕ ಸಂಘದ ಸಹಯೋಗದೊಂದಿಗೆ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಮುಖ್ಯ ಅತಿಥಿಯಾಗಿದ್ದು ನಡೆದ ಮಾಸ್ತಿ ಶತಮಾನೋತ್ಸವ -ಅವರ ಕೃತಿಗಳ ಕುರಿತ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿ ; ಕರ್ನಾಟಕದ ವಿಶ್ವವಿದ್ಯಾಲಯ ಪ್ರಸಾರಾಂಗ ಸಲಹಾ ಸಮಿತಿಯ ಕಾರ್ಯ ಯೋಜನೆಯನ್ವಯ ಸಮಿತಿ ಅಧ್ಯಕ್ಷರಾದ ಹಂಪ. ನಾಗರಾಜಯ್ಯ, ಮೈಸೂರು, ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗಗಳ ನಿರ್ದೇಶಕರು, ಕನ್ನಡದ ಹಿರಿಯ ಕಾದಂಬರಿಕಾರ ವ್ಯಾಸರಾಯ ಬಲ್ಲಾಳ ಮುಂತಾದವರು ಪಾಲ್ಗೊಂಡು ಸ್ಥಳೀಯ (ಮಾಟುಂಗಾ ಪಶ್ಚಿಮದಲ್ಲಿರುವ) ಕರ್ನಾಟಕ ಸಂಘದ ಸಹಯೋಗದಿಂದ ಏರ್ಪಡಿಸಲಾದ ಪುಸ್ತಕ ಪ್ರದರ್ಶನ, ಮಾರಾಟ ಹಾಗೂ ಸಾಹಿತ್ಯ ಸಂವಾದ -ಹೀಗೆ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ೧೯೯೨ನೆಯ ಸಾಲಿನಲ್ಲಿ ನಡೆಸಿದ ಮಹತ್ವದ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಪಟ್ಟಿ ಮಾಡಬಹುದು. ಪುಸ್ತಕ ಪ್ರದರ್ಶನ -ಮಾರಾಟದಲ್ಲಂತೂ ೨೦,೦೦೦.೦೦ ರೂಪಾಯಿ ಬೆಲೆಯ ಪುಸ್ತಕಗಳು ಮಾರಾಟಗೊಂಡು ಒಂದು ದಾಖಲೆಯನ್ನೇ ನಿರ್ಮಿಸಿದೆ. ಇವೆಲ್ಲವುಗಳ ಜೊತೆಗೆ ಶೈಕ್ಷಣಿಕ ಚಟುವಟಿಕೆ, ಗ್ರಂಥ ಪ್ರಕಟಣ ಕಾರ್ಯಗಳು ಒತ್ತಟ್ಟಿಗೆ ನಡೆಯುತ್ತಿವೆ.

ಮುಂಬಯಿಯ ಮಾಟುಂಗಾ ರೋಡ್ ಪಶ್ಚಿಮದಲ್ಲಿರುವ ಕರ್ನಾಟಕ ಸಂಘವು 'ವಿಶ್ವೇಶ್ವರಯ್ಯ ಸ್ಮಾರಕ ಮಂದಿರ'ವೆಂಬ ಸ್ವಂತ ಕಟ್ಟಡ, ಕೇಂದ್ರ ಗ್ರಂಥಾಲಯ, ಕರ್ನಾಟಕ ಮಾಹಿತಿ ಕೇಂದ್ರ-ಇತ್ಯಾದಿಗಳನ್ನು ಹೊಂದಿದ್ದು ನಿತ್ಯ ಕ್ರಿಯಾಶೀಲ ವಾಗಿರುತ್ತದೆ. ಪ್ರತಿ ವರ್ಷ ಸಾಹಿತ್ಯಗೋಷ್ಠಿ, ಕವಿಗೋಷ್ಠಿ, ಕಾವ್ಯಗಾಯನ, ನಾಟಕ ಪ್ರದರ್ಶನ, ಪುಸ್ತಕ ಪ್ರದರ್ಶನ -ಮುಂತಾದ ಕಾರ್ಯಕ್ರಮಗಳನ್ನೊಳಗೊಂಡ ಐದು ದಿನಗಳ ಸಾಂಸ್ಕೃತಿಕ ಉತ್ಸವವನ್ನು ನಡೆಸುತ್ತಾ ಬಂದಿದೆ. ೧೯೯೨ರ ಪ್ರಸ್ತುತ

ಉತ್ಸವ ಮಾರ್ಚ್ ತಿಂಗಳಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಮಾಸ್ತಿ ಜನ್ಮಶತಾಬ್ದಿಯ ಅಂಗವಾಗಿ ಅವರ ಸಾಹಿತ್ಯ ಕೃತಿಗಳನ್ನು ಕುರಿತು ವಿಚಾರಸಂಕಿರಣ, ವಿವಿಧ ಗ್ರಂಥಾಲಯ ತಜ್ಞರ ಕೂಡುವಿಕೆಯಿಂದ ಗ್ರಂಥಾಲಯಕ್ಕೆ ಸಂಬಂಧಪಟ್ಟ ವಿಚಾರಸಂಕಿರಣ - ಇತ್ಯಾದಿ ಮೌಲಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರೊ. ಸುನೀತಾ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಂಘ (ಯುವ ವಿಭಾಗ)ವು'ಶ್ರಾವಣ ಕವಿಗೋಷ್ಠಿ'ಯನ್ನು ವ್ಯವಸ್ಥೆಗೊಳಿಸಿತ್ತು. 'ಭಾರತವನ್ನು ಬಿಟ್ಟು ತೊಲಗಿ' ಚಳುವಳಿಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಇದರ ಆಚರಣೆಯ ಪ್ರಸ್ತುತತೆಯನ್ನು ಕುರಿತು ಶ್ರೀಯುತ ವ್ಯಾಸರಾಯ ಬಲ್ಲಾಳರ ನೇತೃತ್ವದಲ್ಲಿ ಸಂವಾದವೊಂದನ್ನು ಏರ್ಪಡಿಸಲಾಯಿತು. ಇದರ ಅಂಗವಾಗಿಯೇ ಬಿಜಾಪುರದ ಕಲಾ ಮಾಧ್ಯಮ ತಂಡದವರಿಂದ ಕೃಷ್ಣಕುಮಾರ ಕಲ್ಲೂರರ 'ತಿರುಗುಪ್ಪ' ಅಥವಾ 'ಜಾಗೃತರಾಷ್ಟ್ರ' ನಾಟಕ ಪ್ರದರ್ಶನವನ್ನೂ ಸ್ವಾತಂತ್ರ್ಯ ಸಂಗ್ರಾಮ ಮತ್ತು ರಾಷ್ಟ್ರಪ್ರೇಮವು ವಸ್ತುವಾಗುಳ್ಳ ಕನ್ನಡ ಕೃತಿಗಳ ಪ್ರದರ್ಶನವನ್ನೂ ಆಯೋಜಿಸಲಾಗಿತ್ತು. ಸಂಘದ ಮಹಿಳಾ ವಿಭಾಗವು ಶ್ರೀಮತಿ ಉಷಾ ಜಯರಾಮರ ಅಧ್ಯಕ್ಷತೆಯಲ್ಲಿ 'ದಸರಾ ಸ್ನೇಹ ಸಮ್ಮೇಳನ 'ವನ್ನು ನಡೆಸಿತು.

ಕನ್ನಡ ರಾಜ್ಯೋತ್ಸವ ದಿನವಾದ ನವೆಂಬರ್ ೧ರಿಂದ ಪ್ರಾರಂಭಿಸಿ ೭ರವರೆಗೆ ಕರ್ನಾಟಕ ಸಂಘವು ಏರ್ಪಡಿಸಿದ ನಾಟಕೋತ್ಸವದಲ್ಲಿ ಏಳು ಉತ್ಕೃಷ್ಟ ಕನ್ನಡ ನಾಟಕಗಳು ಪ್ರದರ್ಶನಗೊಂಡವು. ಇದೇ ಸಂದರ್ಭದಲ್ಲಿ ಮರಾಠಿಯ ಹೆಸರಾಂತ ಕ್ಯಾಲೆಂಡರಾದ 'ಕಾಲನಿರ್ಣಯ'ದ ಕನ್ನಡ ಆವೃತ್ತಿಯನ್ನು ಅರುಣ್ ಆಠಳೆಯವರು ಬಿಡುಗಡೆಗೊಳಿಸಿದರು. ಹೊರನಾಡ ಕನ್ನಡಿಗರಿಗೆ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಳ್ಳುವುದು ಎಷ್ಟು ಮುಖ್ಯವಾಗುತ್ತದೋ ತಾವು ನೆಲೆಸಿರುವ ನಾಡಿನ ಪ್ರಮುಖ ಸಂಸ್ಕೃತಿಯೊಂದಿಗೆ ಸ್ಪಂದಿಸುವುದೂ ಅಷ್ಟೇ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸಂಘವು ಕನ್ನಡ-ಮರಾಠಿ ಬಾಂಧವ್ಯಕ್ಕಾಗಿ ಹಮ್ಮಿಕೊಂಡಿರುವ ಕೆಲವು ಕಾರ್ಯಯೋಜನೆಗಳ ಬಗೆಗೂ ಇಲ್ಲಿ ಪ್ರಸ್ತಾವಿಸಬೇಕಾಗುತ್ತದೆ. ಕನ್ನಡ -ಮರಾಠಿ ಭಾಷಿಕರ ನಡುವೆ ಬಾಂಧವ್ಯ ಬೆಳೆಸುವಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿ ಅಥವಾ ಸಂಸ್ಥೆಗಳಿಗೆ, ನೀಡುತ್ತಿರುವ ೧೦ ಸಾವಿರ ರೂಪಾಯಿಗಳನ್ನೊಳಗೊಂಡ 'ವರದರಾಜ ಆದ್ಯ ಸ್ಮಾರಕ ಪ್ರಶಸ್ತಿ'ಯೂ ಇಂಥವುಗಳಲ್ಲಿ ಒಂದು. ೧೯೯೨ ರ ಈ ಪ್ರಶಸ್ತಿ 'ಕನ್ನಡ -ಮರಾಠಿ ಬಾಂಧವ್ಯ' ಕೃತಿಯ ಕರ್ತೃ ಡಾ. ಗುರುಲಿಂಗ ಕಾಪಸೆಯವರಿಗೆ ಲಭಿಸಿತು. ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ಕಾರ್ಯನಿರ್ವಹಿಸುತ್ತಿರುವ 'ಕರ್ನಾಟಕ ಮಾಹಿತಿ ಕೇಂದ್ರ'ದಲ್ಲಿ ಸಂಘವು ಕಂಪ್ಯೂಟರ್ ಸೌಲಭ್ಯವನ್ನೂ ಹೊಂದಿದ್ದು ಅದರ ಮೂಲಕ ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯಗಳಿಗೆ ಸಂಬಂಧಪಟ್ಟ ವಿವರ-ಮಾಹಿತಿಗಳನ್ನು ಸ್ಥಳೀಯ ಆಸಕ್ತರಿಗೆ ಒದಗಿಸಿ ಕೊಡಲಾಗುತ್ತಿದೆ. ಇವಲ್ಲದೆ ಕರ್ನಾಟಕ ಸಂಘವು 'ಸಂಬಂಧ' ಎಂಬ ಕನ್ನಡ ದ್ವೈಮಾಸಿಕವನ್ನೂ 'KANNOTATION' ಎಂಬ ಆಂಗ್ಲ ಮಾಸಿಕವನ್ನೂ ಹೊರ ತರುತ್ತಲಿದೆ.

ಮುಂಬಯಿ ಮಹಾನಗರದ ಮಾಟುಂಗಾ (ಪೂರ್ವ)ದಲ್ಲಿರುವ 'ಮೈಸೂರು ಅಸೋಸಿಯೇಶನ್' ಸಾಹಿತ್ಯಿಕ-ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ತನ್ನ ಚಿನ್ನದ ಹಬ್ಬದ ಸವಿನೆನಪಿಗಾಗಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ದತ್ತಿನಿಧಿಯೊಂದನ್ನು ಇರಿಸಿದ್ದು ಅದರನ್ವಯ ವರ್ಷಂಪ್ರತಿ ದತ್ತಿ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸುತ್ತ ಬಂದಿದೆ. ಇದರಂತೆ ವಿಶ್ವವಿದ್ಯಾಲಯದ ಕನ್ನಡ-ವಿಭಾಗದ ಜತೆ ಸೇರಿ ೧೯೯೨ರಲ್ಲಿ ಡಾ. ಕೆ. ಕೃಷ್ಣಮೂರ್ತಿಯವರಿಂದ 'ಕನ್ನಡ-ಸಂಸ್ಕೃತ ಸಂಬಂಧ' ಕುರಿತು ಮೂರು ಮೌಲಿಕ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಗೋರೆಗಾಂವ್ ಕರ್ನಾಟಕ ಸಂಘವು ಮುಂಬಯಿ ಕನ್ನಡಿಗರ ಒಂದು ಸಂಘಟನೆಯಾಗಿದೆ. ತನ್ನ ಗ್ರಂಥಾಲಯವನ್ನು ಊರ್ಜಿತಗೊಳಿಸಿಕೊಂಡು ಸಾಹಿತ್ಯ ಸಂವಾದ, ಕವಿಗೋಷ್ಠಿ, ಪ್ರತಿಭಾ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಈ ವರ್ಷ 'ಮುಂಬೆಳಕು'ಎಂಬ ವಾರ್ಷಿಕ ಸಂಚಿಕೆಯೊಂದನ್ನು ಪ್ರಕಟಿಸಿದೆ. ತಾನು ಬರೆದ ಕಥೆಯನ್ನು ಸ್ವತಃ ಕಥೆಗಾರನೇ ಓದಿ ನಂತರದಲ್ಲಿ ಸಾಹಿತ್ಯಾಸಕ್ತರೆಲ್ಲಾ ಸೇರಿ ಅದರ ಬಗೆಗೆ ಚರ್ಚಿಸುವ 'ಕಥಾ ಕಥನ'ಎಂಬ ವಿಶಿಷ್ಟ ಕಾರ್ಯಕ್ರಮವು ಸಂಘದ ತಿಂಗಳ ಸಾಹಿತ್ಯಿಕ ಚಟುವಟಿಕೆಗಳಲ್ಲೊಂದು. ೧೯೯೨ರಲ್ಲಿ 'ಕಾವ್ಯಸುಧಾ' ಎಂಬ ಇನ್ನೊಂದು ಮಾಸಿಕ ಚಟುವಟಿಕೆಯನ್ನು ಪ್ರಾರಂಭಿಸಿದ್ದು, ಇದರ ಮೊದಲ ಕಾರ್ಯಕ್ರಮವಾಗಿ ಮುಂಬಯಿ ಕವಿ ಬಿ.ಎಸ್. ಕುರ್ಕಾಲರು, ಡಿ.ವಿ.ಜಿ.ಯವರ ಕಾವ್ಯದ ಬಗೆಗೆ ಮಾತನಾಡಿದರು. ಹೀಗೆ, ಪ್ರಸ್ತುತ ಸಂಸ್ಥೆಯು ಮುಂಬಯಿಯ ಕನ್ನಡ ಸಾಂಸ್ಕೃತಿಕ ರಂಗಕ್ಕೆ ತನ್ನ ಪಾಲಿನ ದೇಣಿಗೆಯನ್ನಿತ್ತಿದೆ.

ಡೊಂಬಿವಲಿಯಲ್ಲಿರುವ ಕರ್ನಾಟಕ ಸಂಘವು ೧೯೯೨ರಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ತನ್ನ ಬೆಳ್ಳಿಹಬ್ಬವನ್ನು ಆಚರಿಸಿತು. ಮುಂಬಯಿ ಹಾಗೂ ಕರ್ನಾಟಕದಿಂದ ಗಣ್ಯ ಸಾಹಿತಿ-ವಿದ್ವಾಂಸರುಗಳನ್ನು ಆಮಂತ್ರಿಸಿ, ಮಾಸ್ತಿಯವರ ಜನ್ಮಶತಾಬ್ದಿಯ ಅಂಗವಾಗಿ ಅವರ ಕೃತಿಗಳ ಸಮೀಕ್ಷೆ, ಕವಿಗೋಷ್ಠಿ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿತು.

ಮುಂಬಯಿಯಲ್ಲಿರುವ ಕನ್ನಡಿಗರ ಕಲಾ ಸಂಘಗಳೂ ಕಡಿಮೆಯೇನಲ್ಲ. ಕನ್ನಡ ಕಲಾಕೇಂದ್ರ, ವೀರಕೇಸರಿ ಕಲಾ ವೃಂದ, ಜಗಜ್ಯೋತಿ ಕನ್ನಡ ಕಲಾವೃಂದ, ಧ್ವನಿ, ಪಲ್ಲವಿ, ವಿಜಯಾನಂದ ಆರ್ಟ್ಸ್, ಕಲಾಜಗತ್ತು, ಅಭಿನಯ ಸಾಮ್ರಾಜ್ಯ, ಪದವೀಧರ ಯಕ್ಷಗಾನ ಸಮಿತಿ, ಶ್ರೀ ರಾಘವೇಂದ್ರ ಸ್ವಾಮಿ ಯಕ್ಷಗಾನ ಸಭಾ, ಮೈಸೂರು ಸಂಗೀತ ವಿದ್ಯಾಲಯ -ಹೀಗೆ ಹತ್ತು ಹಲವು ಕಲಾ ಸಂಘಗಳು ಇಂದಿಗೂ ಕ್ರಿಯಾಶೀಲವಾಗಿವೆ.

ಸ್ಥಳೀಯ ಶಾಲಾ-ಕಾಲೇಜುಗಳ ಕನ್ನಡ ಸಂಘಗಳು, ಕನ್ನಡಿಗರ ವಿವಿಧ ಜಾತಿ ಸಂಸ್ಥೆಗಳು, ಪುಸ್ತಕ ಪ್ರಕಾಶನ ಹಾಗೂ ಮಾರಾಟ ಸಂಸ್ಥೆಗಳು, ಪತ್ರಿಕಾ ಸಂಸ್ಥೆಗಳು - ಇವುಗಳೂ ಮುಂಬಯಿಯಲ್ಲಿ ಕನ್ನಡದ ಚಟುವಟಿಕೆಗಳಲ್ಲಿ ಸದಾ ತೊಡಗಿರುತ್ತವೆ.

ಸೋಮಯ್ಯ ಕಾಲೇಜು, ಆರ್.ಜೆ. ಕಾಲೇಜು, ಖಾಲ್ಸಾ ಕಾಲೇಜು, ಎಂ.ಡಿ. ಕಾಲೇಜು, ಚಿನಾಯಿ ಕಾಲೇಜು, ಎನ್.ಕೆ.ಇ.ಎಸ್.ಕಿರಿಯ ಕಾಲೇಜು, ಬಿ.ಇ.ಎಸ್. ಕಾಲೇಜು, ಕನ್ನಡ ಭವನ ಸೊಸೈಟಿಯ ಕಿರಿಯ ಕಾಲೇಜು, ವಿದ್ಯಾ ಪ್ರಸಾರಕ ಮಂಡಲದ ಕಿರಿಯ ಕಾಲೇಜು, ಕನ್ನಡ ವೆಲ್‌ಫೇರ್ ಸೊಸೈಟಿ ಪ್ರೌಢ ಶಾಲೆ, ಸರಸ್ವತಿ ಧರ್ಮಾರ್ಥ ರಾತ್ರಿ ಕಿರಿಯ ಕಾಲೇಜು, ಗುರುನಾರಾಯಣ ರಾತ್ರಿ ಶಾಲೆ, ಮದರ್ ಇಂಡಿಯಾ ಧರ್ಮಾರ್ಥ ರಾತ್ರಿ ಶಾಲೆ, ಯಂಗ್ ಮೆನ್ಸ್ ಎಸೋಸಿಯೇಶನ್‌ನ ರಾತ್ರಿ ಶಾಲೆ ಮುಂತಾದ ಶಿಕ್ಷಣ ಸಂಸ್ಥೆಗಳ ಕನ್ನಡ ಸಂಘಗಳೂ ಹಳೆ ವಿದ್ಯಾರ್ಥಿ ಸಂಘಗಳೂ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಸ್ಪರ್ಧೆ ಹಾಗೂ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುತ್ತವೆ. ಗುರುನಾರಾಯಣ ರಾತ್ರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘವು ಈ ಬಾರಿ ತನ್ನ ರಜತೋತ್ಸವವನ್ನು ಆಚರಿಸಿತು. ಮದರ್ ಇಂಡಿಯಾ ರಾತ್ರಿ ಶಾಲೆಯ ಹಳೆ ವಿದ್ಯಾರ್ಥಿ ವೃಂದವು ಇದೇ ವರ್ಷ ತನ್ನ ದಶಮಾನೋತ್ಸವವನ್ನು ಆಚರಿಸಿತು. ಮೊಗವೀರ ವ್ಯವಸ್ಥಾಪಕ ಮಂಡಲಿ, ಮೊಗವೀರ ಯುವಕ ಸಂಘ, ಬಿಲ್ಲವರ ಎಸೋಸಿಯೇಷನ್, ಬಂಟರ ಸಂಘ, ಬಂಟ್ಸ್ ಎಸೋಸಿಯೇಶನ್, ಬಾಂಬೆ ಸೌತ್ ಕೆನರಾ ಬ್ರಾಹ್ಮಿನ್ಸ್ ಎಸೋಸಿಯೇಶನ್, ಹವ್ಯಕ, ಯಂಗ್‌ಮೆನ್ಸ್ ಬೋವೀಸ್ ಎಸೋಸಿಯೇಶನ್, ಕುಲಾಲ ಸುಧಾರಕ ಸಂಘ, ಪದ್ಮಶಾಲಿ ಸಮಾಜ ಸೇವಾ ಸಂಘ ಮುಂತಾದ ಜಾತಿ ಸಂಘಟನೆಗಳೂ ಶ್ರೀಮದ್ಭಾರತ ಮಂಡಳಿ, ಶ್ರೀಶನಿಮಹಾತ್ಮ ತ್ರಿಭುವನೇಶ್ವರಿ ಸೇವಾ ಸಮಿತಿ, ಶ್ರೀ ಶನಿಮಹಾತ್ಮ ಪೂಜಾ ಸಮಿತಿ - ಮುಂತಾದ ಧಾರ್ಮಿಕ ಸಂಸ್ಥೆಗಳೂ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುತ್ತವೆ. ಬಂಟ್ಸ್ ಎಸೋಸಿಯೇಶನ್ ೧೯೯೨ರ ಜನವರಿಯಲ್ಲಿ ಕನ್ನಡ - ತುಳು ಸಾಹಿತ್ಯಗೋಷ್ಠಿ, ಕವಿಗೋಷ್ಠಿ, ನಾಟಕ ಪ್ರದರ್ಶನಗಳೊಂದಿಗೆ ತನ್ನ ಹಾಗೂ ತನ್ನ ಮುಖವಾಣಿಯಾದ "ಪತ್ರಪುಷ್ಪ" ಮಾಸಿಕದ ದಶಮಾನೋತ್ಸವವನ್ನು ಆಚರಿಸಿತು. ಅರವತ್ತು ತುಂಬಿದ 'ಬಿಲ್ಲವರ ಎಸೋಸಿಯೇಶನ್' ಈ ಸಂದರ್ಭದಲ್ಲಿ ತಾನು ನಡೆಸುತ್ತಿರುವ 'ಅಕ್ಷಯ' ಮಾಸಪತ್ರಿಕೆಯ ಮೂಲಕ ಕನ್ನಡ ಕಥೆ, ಕವನ, ಹಾಗೂ ನಗೆಬರಹಗಳ ಸ್ಪರ್ಧೆಯನ್ನು ಏರ್ಪಡಿಸಿತ್ತು. ೧೩೮ನೇ ನಾರಾಯಣ ಗುರು ಜಯಂತಿಯ ಅಂಗವಾಗಿ ಕವಿಗೋಷ್ಠಿಯೊಂದನ್ನು ವ್ಯವಸ್ಥೆಗೊಳಿಸಿತ್ತು.

ಮುಂಬಯಿಯಿಂದ ಪ್ರಕಟವಾಗುತ್ತಿರುವ ಕನ್ನಡ ಪತ್ರಿಕೆ (ದೈನಿಕ, ನಿಯತಕಾಲಿಕ) ಗಳ ಬಗಗೂ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಮೇಲೆ ಉಲ್ಲೇಖಿಸಿದ ಸಂಘ ಸಂಸ್ಥೆಗಳ ಮುಖವಾಣಿಗಳ ಜೊತೆಗೆ ಕ್ರಮವಾಗಿ ಬಂಟರ ಸಂಘ, ಮೊಗವೀರ ವ್ಯವಸ್ಥಾಪಕ ಮಂಡಲಿ, ಬಾಂಬೆ ಸೌತ್ ಕೆನರಾ ಬ್ರಾಹ್ಮಿನ್ಸ್ ಅಸೋಸಿಯೇಶನ್‌ಗಳು ಹೊರತರುತ್ತಿರುವ 'ಬಂಟರವಾಣಿ' 'ಮೊಗವೀರ' ಹಾಗೂ 'ಗೋಕುಲ ವಾಣಿ' ಮಾಸಿಕಗಳನ್ನು ಹೆಸರಿಸಬೇಕಾಗುತ್ತದೆ. ಬಿ.ಎ.ಆರ್.ಸಿ ಕನ್ನಡ ಸಂಘವು ಪ್ರಕಟಿಸುತ್ತಿರುವ 'ಬೆಳಗು' ಪತ್ರಿಕೆಯು ಕನ್ನಡದ ವಿಜ್ಞಾನ ಪತ್ರಿಕೆಗಳಲ್ಲಿ ಗಮನಾರ್ಹವಾದುದು. ಪ್ರಸ್ತುತ ವರ್ಷ ಎರಡು ಕನ್ನಡ ದೈನಿಕಗಳು ('ಉದಯರಾಗ'

ಮತ್ತು 'ಕರ್ನಾಟಕ ಮಲ್ಲ') ಮುಂಬಯಿಯಲ್ಲಿ ಪ್ರಾರಂಭಗೊಂಡವು. ಅವುಗಳಲ್ಲಿ 'ಉದಯರಾಗ' ವರ್ಷಪೂರ್ತಿ ಮುಂದುವರಿಯಲಿಲ್ಲ. 'ಕರ್ನಾಟಕ ಮಲ್ಲ' ಈಗಾಗಲೇ ಒಂದು ವರ್ಷವನ್ನು ಪೂರೈಸಿ ಸ್ಥಳೀಯ ಹಾಗೂ ತಾಯ್ನಾಡ ಕನ್ನಡಿಗರ ಪ್ರೀತ್ಯಾದರಗಳಿಗೆ ಪಾತ್ರವಾಗಿದೆ.

ಕನ್ನಡ ಮಹಿಳೆಯರ ಒಕ್ಕೂಟಗಳೂ ಮುಂಬಯಿಯಲ್ಲಿ ಕ್ರಿಯಾಶೀಲವಾಗಿವೆ. ಕನ್ನಡ ವನಿತಾ ಸಮಾಜ, ಅನುಜಾ ಮಹಿಳಾ ಮಂಡಳ -ಮುಂತಾದ ಸಂಘಟನೆಗಳು ಸಾಮಾಜಿಕ-ಸಾಂಸ್ಕೃತಿಕ-ಕಲಾತ್ಮಕ ಚಟುವಟಿಕೆಗಳಲ್ಲಿ ನಿರತವಾಗಿರುತ್ತವೆ. ಈ ಎಲ್ಲಾ ಚಟುವಟಿಕೆಗಳನ್ನು ಗಮನಿಸಿದರೆ ಮುಂಬಯಿಯು ಕನ್ನಡಿಗರ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯುತ್ತಿದೆ ಎಂಬ ಅಂಶ ನಮಗೆ ವೇದ್ಯವಾಗುತ್ತದೆ.

ಪೂನಾ

ಮಹಾರಾಷ್ಟ್ರದ ಇನ್ನೊಂದು ಪ್ರಮುಖ ನಗರವಾದ ಪೂನಾದಲ್ಲಿ ಕನ್ನಡ ಚಟುವಟಿಕೆಗಳು ನಡೆಯುತ್ತಿರುತ್ತವೆ. ಅಲ್ಲಿನ ಕರ್ನಾಟಕದ ಸಂಘ-ಕರ್ನಾಟಕ ಶಾಲೆ, ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರ, ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ಮತ್ತು ಸಂಶೋಧನಾ ಮಂಡಲದ ಕನ್ನಡ ವಿಭಾಗ, ಇವುಗಳೆಲ್ಲಾ ವಿವಿಧ ಬಗೆಯ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿವೆ. ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರವು ಕನ್ನಡದಿಂದ ಮರಾಠಿಗೆ , ಮರಾಠಿಯಿಂದ ಕನ್ನಡಕ್ಕೆ ಸಾಹಿತ್ಯ ಕೃತಿಗಳನ್ನು ಅನುವಾದಿಸಿ, ಪ್ರಕಟಿಸುವ ಕಾರ್ಯದಲ್ಲಿ ನಿರತವಾಗಿದೆ. ೧೯೯೨ ರ ಜುಲೈ ೧೮ ರಂದು ಸ್ಥಳೀಯ ಕರ್ನಾಟಕ ಪ್ರೌಢ ಶಾಲೆಯಲ್ಲಿ ಕನ್ನಡೇತರರಿಗಾಗಿಯೂ, ಕನ್ನಡ ಓದಲು ಬರೆಯಲು ಬಾರದ ಕನ್ನಡಿಗರಿಗಾಗಿಯೂ ಕನ್ನಡ ತರಗತಿಗಳನ್ನು ಪ್ರಾರಂಭಿಸಿತು. ತಿಂಗಳಿಗೊಮ್ಮೆ ಹೀಗೆ ತರಬೇತಿ ಹೊಂದಿದವರ, ಹೊಂದುತ್ತಿರುವವರ ಸ್ನೇಹಕೂಟ ವನ್ನೇರ್ಪಡಿಸುತ್ತಿದ್ದು ಆ ಸಂದರ್ಭದಲ್ಲಿ ಪ್ರಸಿದ್ಧ ಕನ್ನಡ ಗ್ರಂಥಗಳ ಕುರಿತು ಪರಿಚಯ ಚರ್ಚೆ ನಡೆಯತ್ತದೆ. ವರ್ಷಕ್ಕೊಮ್ಮೆ ಕನ್ನಡ ಕಲಿತ-ಕಲಿಯುತ್ತಿರುವ ವಿದ್ಯಾರ್ಥಿಗಳನ್ನು ಒಡಗೂಡಿಕೊಂಡು ಕರ್ನಾಟಕದ ಮಹತ್ವದ ಸ್ಥಳಗಳಿಗೆ ಪ್ರವಾಸ ಏರ್ಪಡಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ನೆರವಿನಿಂದ ಬೆಂಗಳೂರಿನಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಮರಾಠಿ ಕೃತಿಗಳ ಕುರಿತು ಡಾ: ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ವಿಚಾರಸಂಕಿರಣವೊಂದನ್ನು ವ್ಯವಸ್ಥೆಗೊಳಿಸಿತ್ತು. ಹೀಗೆ ಮರಾಠಿಗರು ಮತ್ತು ಕನ್ನಡಿಗರು ಪರಸ್ಪರ ಸ್ನೇಹಶೀಲರಾಗಿ ಬಾಳಲು ಪ್ರೇರಕವಾಗಬಲ್ಲಂತಹ ಮೌಲಿಕ ಆದಾನ - ಪ್ರದಾನ ಕಾರ್ಯಕ್ರಮಗಳನ್ನು ನಡೆಸುತ್ತಾ ಸ್ನೇಹವರ್ಧನ ಕೇಂದ್ರವು ಪುಣೆಯಲ್ಲಿ ಕ್ರಿಯಾಶೀಲವಾಗಿದೆ.

ದೆಹಲಿ

ದೆಹಲಿ ವಿಶ್ವವಿದ್ಯಾಲಯದ ಆಧುನಿಕ ಭಾರತೀಯ ಭಾಷಾ ವಿಭಾಗದ ಕನ್ನಡ ಶಾಖೆ, ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡಿಗ ಪತ್ರಿಕಾ ಸಂಸ್ಥೆ ಇವು ದೆಹಲಿಯಲ್ಲಿ

ಆಗಾಗ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತವೆ. ಕರ್ನಾಟಕ ಸಂಘವು ೧೯೯೨ರಲ್ಲಿ ನಾಟಕೋತ್ಸವ, ಸಂಗೀತೋತ್ಸವ, ಸಾಹಿತ್ಯಗೋಷ್ಠಿ, ಕಿರು ನಾಟಕ ಸ್ಪರ್ಧೆ -ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದೆ. 'ದೆಹಲಿ ಕನ್ನಡಿಗ' ಪತ್ರಿಕೆ ಸದಾ ಸುದ್ದಿಯಲ್ಲಿರುತ್ತದೆ. ದೆಹಲಿಯಲ್ಲಿ ಮಾತ್ರವಲ್ಲದೆ ದೇಶದ ಇತರೆಡೆಗಳಲ್ಲೂ ಕನ್ನಡ ನಾಡು- ನುಡಿ-ಸಾಹಿತ್ಯಕ್ಕೆ ಸಂಬಂಧಪಟ್ಟ ಗೋಷ್ಠಿ, ಸಮ್ಮೇಳನಗಳನ್ನು ಏರ್ಪಡಿಸುತ್ತಾ ಬಂದಿದೆ. ಬಸವರಾಜ ಕಟ್ಟೀಮನಿಯವರ ಬದುಕು-ಬರೆಹಗಳ ಕುರಿತು ವಿಚಾರ ಸಂಕಿರಣ ; ನಿರಂಜನ ಸಾಹಿತ್ಯ ವಿಚಾರ ಸಂಕಿರಣ ; ಆರ್. ಕಲ್ಯಾಣಮ್ಮ ಜನ್ಮ ದಿನೋತ್ಸವ, ಕನ್ನಡ ಅಭಿವೃದ್ಧಿ ಪ್ರಾಧಿಕಾರ , ಪಾಟೀಲ ಪುಟ್ಟಪ್ಪ ಮತ್ತು ಕನ್ನಡ '- ಇತ್ಯಾದಿ ವಿಷಯಗಳ ಕುರಿತ ವಿಚಾರ ಸಂಕಿರಣ; ಜಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ರಾಷ್ಟ್ರಮಟ್ಟದ ೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ 'ಹೊರನಾಡಿನ ಹೋಟೆಲಿಗರು ಮತ್ತು ಕನ್ನಡ ' (ಸಾಂಗ್ಲಿಯಲ್ಲಿ) 'ಹೊರನಾಡಿನ ಬ್ಯಾಂಕು ಉದ್ಯೋಗಿಗಳು ಮತ್ತು ಕನ್ನಡ ' ಎಂಬ ವಿಷಯಗಳ ಕುರಿತ ವಿಚಾರ ಸಂಕಿರಣಗಳು ಇವೆಲ್ಲಾ ಪತ್ರಿಕೆಯ ೧೯೯೨ರ ಮಹತ್ವದ ಚಟುವಟಿಕೆಗಳಾಗಿವೆ. ದೆಹಲಿಯಿಂದ ಪ್ರಕಟವಾಗುತ್ತಿರುವ ಕನ್ನಡ ಪತ್ರಿಕೆಗಳ ಸಾಲಿನಲ್ಲಿ 'ದೆಹಲಿ ಕನ್ನಡಿಗ' ದ ಜೊತೆಗೆ ಕರ್ನಾಟಕ ಸಂಘದ 'ಅಭಿಮತ' ವನ್ನೂ ಹೆಸರಿಸಬೇಕಾಗುತ್ತದೆ.

ಮದರಾಸು

ಕಾವೇರಿ ವಿವಾದವು ಮದರಾಸಿನ ಕನ್ನಡ ಚಟುವಟಿಕೆಗಳಿಗೆ ಸ್ವಲ್ಪ ಬಾಧಕವಾಗಿ ಪರಿಣಮಿಸಿದೆಯಾದರೂ 1992ರಲ್ಲಿ ತಕ್ಕಮಟ್ಟಿನ ಕನ್ನಡ ಕಾರ್ಯಕ್ರಮಗಳು ಅಲ್ಲೂ ನಡೆದಿವೆ. ಮದರಾಸಿನ ಕನ್ನಡ ಸಂಘ-ಸಂಸ್ಥೆಗಳಲ್ಲಿ ಅಲ್ಲಿನ ವಿಶ್ವವಿದ್ಯಾಲಯದ ಕನ್ನಡ ವಿಭಾಗ, ಟಿ. ನಗರದಲ್ಲಿರುವ ಕರ್ನಾಟಕ ಸಂಘ, ಕನ್ನಡ ಬಳಗ, ಐ.ಟಿ.ಐ. ಕನ್ನಡ ಸಾಂಸ್ಕೃತಿಕ ಸಂಘ, ಅಯನಾವರಂ ಕನ್ನಡ ಸಂಘ, ಕನ್ನಡಿಗರ ಕೂಟ -ಇತ್ಯಾದಿಗಳನ್ನು ಹೆಸರಿಸಬಹುದು. ವಿಶ್ವವಿದ್ಯಾಲಯದ ಕನ್ನಡ ವಿಭಾಗವು ತನ್ನ ಶೈಕ್ಷಣಿಕ ಚಟುವಟಿಕೆಗಳ ಜೊತೆ ಜೊತೆಗೆ ಹಲವು ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತದೆ. ಆರೂರು ಶ್ರೀನಿವಾಸರಾವ್ ದತ್ತಿ ಉಪನ್ಯಾಸ ಮಾಲಿಕೆಯಲ್ಲಿ ಡಾ.ಕೆ. ಕುಶಾಲಪ್ಪ ಗೌಡರಿಂದ 'ಕನ್ನಡ ಬಾಷೆ- ವ್ಯಾಕರಣ'ಗಳ ಕುರಿತು ಉಪನ್ಯಾಸ ;' ಇತ್ತೀಚಿನ ಕನ್ನಡ ಸಣ್ಣಕಥೆಗಳು', ಎಂಬ ವಿಷಯದ ಕುರಿತು ಎಸ್.ದಿವಾಕರ್ ಅವರಿಂದ ಉಪನ್ಯಾಸ ;ಕೆ.ಎಸ್. ರಮಾನಂದರಿಂದ: 'ಕನ್ನಡ ಮತ್ತು ಹಿಂದಿ ಸಾಹಿತ್ಯ: ಒಂದು ತೌಲನಿಕ ನೋಟ' ಎಂಬ ಉಪನ್ಯಾಸ; ಮುಂದೆ ನವಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಸಿದ್ಧ ವಿನೋದ ಸಾಹಿತಿ ಕೇಫ ಹಾಗೂ ಕಥೆಗಾರ ಎಸ್. ದಿವಾಕರರ ಸಹಭಾಗಿತ್ವದಲ್ಲಿ ವಿಭಾಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪ್ರದರ್ಶನ-ಇತ್ಯಾದಿ ಕಾರ್ಯಚಟುವಟಿಕೆಗಳನ್ನು ೧೯೯೨ರಲ್ಲಿ ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗವು ನಡೆಸಿದೆ.

ಟಿ.ನಗರದ ಕರ್ನಾಟಕ ಸಂಘವು ತನ್ನದೇ ಆದ ಭವ್ಯ ಭವನವೊಂದನ್ನು ಹೊಂದಿದ್ದು ಶಾಲೆ, ಗ್ರಂಥಾಲಯಗಳನ್ನು ನಡೆಸುತ್ತಾ ಬಂದಿದೆ. ೧೯೯೨ರ ಜನವರಿ ತಿಂಗಳಲ್ಲಿ ಪುರಂದರದಾಸರ ಆರಾಧನ ಮಹೋತ್ಸವದ ಭಾಗವಾಗಿ ಕೀರ್ತನ ಸ್ಪರ್ಧೆಯನ್ನು ಜೂನ್ ತಿಂಗಳಲ್ಲಿ ಕಲ್ಯಾಣಕುಮಾರ್ ಮತ್ತು ಬಳಗದವರಿಂದ 'ಮಂಗಳೂರು ಮಾವ', 'ಮಮತೆಯ ಬಂಧನ 'ಎಂಬ ನಾಟಕಗಳ ಪ್ರದರ್ಶನಗಳನ್ನೂ ವ್ಯವಸ್ಥೆಗೊಳಿಸಿತ್ತು. ಸೆಪ್ಟಂಬರ್ ೧೧ರಂದು ಚಿಂದೋಡಿ ಲೀಲಾರಿಂದ ಉದ್ಘಾಟನೆಗೊಂಡ 'ಕನ್ನಡ ನಾಟಕೋತ್ಸವ' ನಾಲ್ಕು ದಿನಗಳ ಪರಿಯಂತ ನಡೆಯಿತು. ಅದರ ಬೆನ್ನಲ್ಲೇ ಡಾ:ಶ್ರೀಕೃಷ್ಣಭಟ್ ಅರ್ತಿಕಜೆ, ಶ್ರೀನಿವಾಸ-ಕಪ್ಪಣ್ಣ, ಕಲ್ಯಾಣಕುಮಾರ್, ರೇವತಿ ಕಲ್ಯಾಣಕುಮಾರ್-ಮೊದಲಾದ ಗಣ್ಯರ ಪಾಲ್ಗೊಳ್ಳುವಿಕೆಯಿಂದ ನಾಟಕದ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಇದೇ ತಿಂಗಳ ಕೊನೆಯ ಭಾಗದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ತನ್ನ ರಜತೋತ್ಸವವನ್ನೂ ಅಕ್ಟೋಬರ್‌ನಲ್ಲಿ ನವರಾತ್ರಿ ಮಹೋತ್ಸವವನ್ನೂ ಆಚರಿಸಿತು. ಮುಂದೆ ನವಂಬರ್‌ನಲ್ಲಿ ಮದರಾಸಿನಲ್ಲಿರುವ ಎಲ್ಲ ಕನ್ನಡ ಸಂಘ-ಸಂಸ್ಥೆಗಳ ಕೂಡುವಿಕೆಯಿಂದ 'ಕನ್ನಡ ರಾಜ್ಯೋತ್ಸವವನ್ನು' ಆಚರಿಸಿದುದು ಒಂದು ವೈಶಿಷ್ಟ್ಯವೆನ್ನಬೇಕು.

ಕನ್ನಡ ಬಳಗವು ಕ್ರಿಕೆಟ್ ಪಂದ್ಯ, ಜನಪದ ಗೀತ ಸ್ಪರ್ಧೆ, ಉಲ್ಲಾಸ ಪಯಣ, ನಾಟಕೋತ್ಸವ, ರಾಜ್ಯೋತ್ಸವ-ಮುಂತಾದ ಸಾಂಸ್ಕೃತಿಕ ಹಾಗೂ ಕ್ರೀಡಾಚಟುವಟಿಕೆಗಳನ್ನೂ, ಮಹಿಳೆಯರಿಗೆ ಮತ್ತು ಯುವಕರಿಗಾಗಿ ಸಂಮಿಶ್ರ ಕಾರ್ಯಕ್ರಮಗಳನ್ನೂ ನಡೆಸಿ, ೧೯೯೨ರಲ್ಲಿ ಚಟುವಟಿಕೆಯಿಂದಿತ್ತು. ಉಳಿದ ಸಂಘ-ಸಂಸ್ಥೆಗಳು ತಮ್ಮ ಮಾಮೂಲಿ ಕಾರ್ಯಚಟುವಟಿಕೆಗಳ ಜೊತೆಗೆ ವಿಶಿಷ್ಟ ಕಾರ್ಯಕ್ರಮಗಳನ್ನು ನಡೆಸುತ್ತ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಪ್ರಕಟಪಡಿಸುತ್ತಿದ್ದವು.

ಮದುರೈ

ತಮಿಳುನಾಡಿನ ಮದುರೈಯಲ್ಲೂ ಕರ್ನಾಟಕ ಸಂಘವು ಕ್ರಿಯಾಶೀಲವಾಗಿವೆ. ಎಚ್.ಎಸ್. ರಮೇಶ್‌ರವರ ವೀಣಾವಾದನ; ವಿಡಿಯೋದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನ;ತೇಕ್ಕಡಿ, ವೈಗೈ ಅಣೆಕಟ್ಟು ಪ್ರದೇಶಗಳಿಗೆ ಪ್ರವಾಸ ;ಮಕ್ಕಳ ದಿನಾಚರಣೆಯ ಅಂಗವಾಗಿ ಸದಸ್ಯರ ಮಕ್ಕಳಿಗೆ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ;ಕನ್ನಡ ರಾಜ್ಯೋತ್ಸವ-ಕು. ಅರ್ಚನಾ ರಾಜಗೋಪಾಲರಿಂದ ಭರತನಾಟ್ಯ ಪ್ರದರ್ಶನ-ಇತ್ಯಾದಿ ಕಾರ್ಯಕ್ರಮಗಳನ್ನು ೧೯೯೨ರಲ್ಲಿ ಏರ್ಪಡಿಸಿತ್ತು.

ಕಾಸರಗೋಡು

ಗಡಿನಾಡುಗಳ ಪೈಕಿ ಕಾಸರಗೋಡು ಉಲ್ಲೇಖನೀಯ. ರಾಜಕೀಯವಾಗಿ ಇಲ್ಲವೆ ಆಡಳಿತಾತ್ಮಕವಾಗಿ ಈ ಪ್ರದೇಶ ಕೇರಳದಲ್ಲಿದ್ದರೂ ಸಾಂಸ್ಕೃತಿಕವಾಗಿ ಇಲ್ಲಿಯ ಬಹುಪಾಲು ಜನ ಕನ್ನಡಿಗರಾಗಿದ್ದಾರೆ. ಕನ್ನಡದ ಚಟುವಟಿಕೆಗಳು ಇಲ್ಲಿ ನಿತ್ಯ

ನಡೆಯುತ್ತಿರುತ್ತವೆ. ಕಾಸರಗೋಡು ನಗರಪ್ರದೇಶದಲ್ಲಿ ಮಾತ್ರವಲ್ಲದೆ ಕುಂಬಳೆ, ಉಪ್ಪಳ, ಮಂಜೇಶ್ವರ, ನೀರ್ಚಾಲು, ಬದಿಯಡ್ಕ, ಪೆರ್ಲ, ಏತಡ್ಕ, ಮುಳ್ಳೇರಿಯಾ, ದೇಲಂಪಾಡಿ-ಮುಂತಾದ ಕಡೆಗಳಲ್ಲಿ ಕನ್ನಡಿಗರ ಕಲಾ ಸಂಘ, ಸಾಂಸ್ಕೃತಿಕ ಸಂಘ ಅದೇ ರೀತಿ ಕ್ರೀಡಾ ಸಂಘಗಳಿವೆ. ಅವುಗಳೆಲ್ಲಾ ವಾರ್ಷಿಕೋತ್ಸವ, ನಾಟಕ ಪ್ರದರ್ಶನ, ಯಕ್ಷಗಾನ ಪ್ರದರ್ಶನ, ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮ, ಸಮಾಜ ಸೇವೆಗಳಂತಹ ಚಟುವಟಿಕೆಗಳಲ್ಲಿ ತೊಡಗಿರುತ್ತವೆ. ಇವಲ್ಲದೆ ಕನ್ನಡ ಮಾಧ್ಯಮ ಶಾಲೆಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳೆಲ್ಲಾ ಕನ್ನಡದಲ್ಲೇ ನಡೆಯುತ್ತಿರುತ್ತವೆ.

ಕಾಸರಗೋಡು ನಗರ ಪರಿಸರದಲ್ಲಿ ಸರಕಾರೀ ಮಹಾವಿದ್ಯಾಲಯದ ಕನ್ನಡ ವಿಭಾಗ (ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ) ಯವನಿಕಾ, ಲಲಿತಕಲಾ ಸದನ, ನಟನಾ, ಗಡಿನಾಡ ಕಲಾವಿದರು, ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ-ಹೀಗೆ ಕನ್ನಡಿಗರ ಹಲವು ಕ್ರಿಯಾಶೀಲ ಸಂಘಟನೆಗಳಿವೆ. ಇವುಗಳಲ್ಲಿ ಬಹುಪಾಲು ಸಂಘ-ಸಂಸ್ಥೆಗಳೂ ೧೯೯೨ರ ಅವಧಿಯಲ್ಲಿ ಚಟುವಟಿಕೆಯಿಂದಿದ್ದುವು.

ಸರಕಾರೀ ಮಹಾವಿದ್ಯಾಲಯದ ಕನ್ನಡ ವಿಭಾಗವು ಎಸ್. ಅನಂತನಾರಾಯಣ ಮತ್ತು ಅ.ರಾ. ಮಿತ್ರರ ಸಹಭಾಗಿತ್ವದಲ್ಲಿ ಮಾಸ್ತಿ ಶತಮಾನೋತ್ಸವವನ್ನು ಆಚರಿಸಿತು. ವರ್ಷಂಪ್ರತಿ ನಡೆಸಿಕೊಂಡು ಬರುವ 'ಬಿ.ಕೆ. ತಿಮ್ಮಪ್ಪ ಮತ್ತು ಪಿ. ಸುಬ್ರಾಯ ಭಟ್ಟರ ಸ್ಮರಣೆ'ಯ ಸಂದರ್ಭದಲ್ಲಿ ವಿಶೇಷೋಪನ್ಯಾಸವನ್ನು ಏರ್ಪಡಿಸಿತು. ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘವು ಪ್ರೊ. ಅಮೃತ ಸೋಮೇಶ್ವರರ ಅಧ್ಯಕ್ಷತೆಯಲ್ಲಿ ತನ್ನ ದಶಮಾನೋತ್ಸವವನ್ನು ಆಚರಿಸಿ, ಆ ಸಂದರ್ಭದಲ್ಲಿ ಯಕ್ಷಗಾನಕ್ಕೆ ಸಂಬಂಧಪಟ್ಟ ವಿಚಾರ ಸಂಕಿರಣ, ಹಿರಿಯ ಕಲಾವಿದರಿಗೆ ಸನ್ಮಾನ, ಬೊಂಬೆಯಾಟ-ತೊಗಲು ಬೊಂಬೆಯಾಟಗಳ ಪ್ರದರ್ಶನ-ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದುದು ಮಾತ್ರವಲ್ಲದೆ 'ಬೊಂಬೆಯಾಟವಯ್ಯಾ' ಎಂಬ ಜಾನಪದಕ್ಕೆ ಸಂಬಂಧಿಸಿದ ಕೃತಿಯನ್ನೂ ಪ್ರಕಟಿಸಿತು.


ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನವು ತನ್ನ ವಾರ್ಷಿಕೋತ್ಸವದ ಅಂಗವಾಗಿ 'ಕಾಸರಗೋಡು ಸಮಸ್ಯೆಗಳು' 'ಲಲಿತಕಲೆ ಮತ್ತು ಗಡಿನಾಡು' -ಮುಂತಾದ ವಿಚಾರಸಂಕಿರಣಗಳನ್ನೂ ಐವರು ಸ್ಥಳೀಯ ಗಣ್ಯರಿಗೆ ಸನ್ಮಾನವನ್ನೂ, ಐವತ್ತಕ್ಕಿಂತಲೂ ಹೆಚ್ಚು ಮಂದಿ ಕವಿಗಳು ಪಾಲ್ಗೊಂಡ ಕವಿಗೋಷ್ಠಿಯನ್ನೂ, ಪುಸ್ತಕ ಪ್ರದರ್ಶನ, ನಾಟಕ ಪ್ರದರ್ಶನ, ಚಿತ್ರಕಲಾ ಪ್ರದರ್ಶನಗಳನ್ನೂ ಕರ್ನಾಟಕ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ ಹಾಗೂ ಲಲಿತಕಲಾ ಅಕಾಡೆಮಿಗಳ ನೆರವಿನಿಂದ ಏರ್ಪಡಿಸಿತು. ಮುಂದೆ ಬೇಕಲ ರಾಮನಾಯಕರ ಬದುಕು -ಬರಹಗಳ ಕುರಿತು ಒಂದು ವಿಚಾರ ಸಂಕಿರಣವನ್ನು ನಡೆಸಿತು.

'ನಟನಾ'ಮತ್ತು 'ಗಡಿನಾಡ ಕಲಾವಿದರು'ನಾಟಕ ತಂಡಗಳು ೧೯೯೨ ರುದ್ದಕ್ಕೂ ಚಟುವಟಿಕೆಯಿಂದಿದ್ದುವು. 'ನಟನಾ'ವು ಸಾಕಷ್ಟು ನಾಟಕ ಪ್ರದರ್ಶನಗಳನ್ನು ನೀಡುವುದರೊಂದಿಗೆ ವಿದ್ಯಾರ್ಥಿಗಳಿಗಾಗಿ ರಂಗ ತರಬೇತಿಯನ್ನು ನಡೆಸಿತು. 'ಕಬ್ಬದಂಗನೆ'ಎಂಬ ಕವನ ಸಂಕಲನವನ್ನೂ ಪ್ರಕಟಿಸಿತು. 'ಗಡಿನಾಡ ಕಲಾವಿದರು' ವೇಣುಗೋಪಾಲ ಕಾಸರಗೋಡು ಅವರ 'ದೃಷ್ಟಿ'ನಾಟಕವನ್ನು ಕಾಸರಗೋಡು ಚಿನ್ನಾರ ನಿರ್ದೇಶನದಲ್ಲಿ ರಂಗಕ್ಕೇರಿಸಿದರು. ಈ ನಾಟಕವು ಉಡುಪಿಯ 'ರಂಗಭೂಮಿ'ಯವರು ನಡೆಸಿದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುದಲ್ಲದೆ ಮುಂದೆ ಹಲವಾರು ಪ್ರದರ್ಶನಗಳನ್ನು ಕಂಡಿತು.

ಕೇರಳ ಸರಕಾರ ಮತ್ತು ಸ್ಥಳೀಯ ಗೋವಿಂದ ಪೈ ಸ್ಮಾರಕ ಟ್ರಸ್ಟ್ ಜೊತೆ ಸೇರಿ ಗೋವಿಂದ ಪೈಗಳ ೧೦೯ನೇ ಜನ್ಮ ದಿನದಂದು ಅವರ ಮನೆಯಲ್ಲಿ (ಮಂಜೇಶ್ವರ) ಕೇರಳ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ. ಶ್ರೀಧರನ್ ಅವರ ಸಹಭಾಗಿತ್ವದಲ್ಲಿ ಸಾಹಿತಿಗಳ-ಸಾಹಿತ್ಯಾಸಕ್ತರ ಕೂಟವೊಂದನ್ನೇರ್ಪಡಿಸಿ, ಸಂವಾದ, ವಿಚಾರಗೋಷ್ಠಿ ಬಹುಭಾಷಾ ಕವಿಗೋಷ್ಠಿ - ಮುಂತಾದ ವಿಶಿಷ್ಟವೂ ಅನುಕರಣೀಯವೂ ಆದ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

ಇವಲ್ಲದೆ ಕರಾವಳಿ ಪ್ರಕಾಶನವು ಸ್ಥಳೀಯ ಬಿ.ಇ.ಎಂ. ಪ್ರೌಢ ಶಾಲೆಯಲ್ಲಿ ಕೆಲಕಾಲ ತಿಂಗಳ ಸಾಹಿತ್ಯಕೂಟವನ್ನೇರ್ಪಡಿಸುತ್ತಿತ್ತು. 'ತಪಸ್ಯ' ಸಾಹಿತ್ಯ ವೇದಿಕೆಯ ಅಧ್ಯಕ್ಷ ಮಲೆಯಾಳಂ ಮಹಾಕವಿ ಅಕ್ಕಿತ್ತಂ ನಗರಕ್ಕಾಮಿಸಿದಾಗ ಕನ್ನಡ-ಮಲೆಯಾಳಂ ಸಾಹಿತಿಗಳ ಸ್ನೇಹಕೂಟವೊಂದನ್ನು ವ್ಯವಸ್ಥೆಗೊಳಿಸಲಾಗಿತ್ತು. ಪ್ರಸಿದ್ಧ ಯಕ್ಷಗಾನ ಕಲಾವಿದ ಶೇಣಿ ಗೋಪಾಲಕೃಷ್ಣ ಭಟ್ಟರ ಮನೆಯಲ್ಲಿ ಸಾಹಿತ್ಯಾಸಕ್ತರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಕಾಸರಗೋಡು ತಾಲೂಕು ಕನ್ನಡ ಲೇಖಕರ ಸಂಘ ಇದೇ ವರ್ಷ ಅಸ್ತಿತ್ವಕ್ಕೆ ಬಂತು. ಹೀಗೆ ಹೊರನಾಡ ಕನ್ನಡ ಸಂಘಸಂಸ್ಥೆಗಳು ಕನ್ನಡಕ್ಕಾಗಿ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸುತ್ತಾ ಬಂದಿವೆ. ಮುಂಬಯಿ, ಕಾಸರಗೋಡುಗಳಂತಹ ಹೊರನಾಡು-ಗಡಿನಾಡುಗಳ ಕನ್ನಡ ಚಟುವಟಿಕೆಗಳನ್ನು ಗಮನಿಸಿದರೆ ಅವು ಮಹತ್ವದ ಸೇವೆಗಳೆಂದೇ ಹೇಳಬೇಕಾಗುತ್ತದೆ. ಇದುವರೆಗೆ ಕನ್ನಡಕ್ಕೆ ಸಂದ ಗೌರವ -ಪುರಸ್ಕಾರಗಳಲ್ಲಿ ಈ ಹೊರನಾಡಿಗರ ಪಾತ್ರವೂ ಬಹಳಷ್ಟಿದೆಯೆನ್ನುವುದು ನಿರ್ವಿವಾದ ಅಂಶವಾಗಿದೆ. ಕೆಲವೊಮ್ಮೆ ಹೊರನಾಡ ಕನ್ನಡಿಗರ ಚಟುವಟಿಕೆಗಳನ್ನು ಗಮನಿಸಿದರೆ ಅಲ್ಲಿ ಮೌಲ್ಯಕ್ಕಿಂತಲೂ ಚಟುವಟಿಕೆಯೇ ಪ್ರಧಾನವೆನಿಸುವುದುಂಟು. ಆದರೆ, ಮೌಲಿಕ ಕಾರ್ಯಕ್ರಮಗಳೂ ಅಲ್ಲಿ ನಡೆಯುತ್ತವೆಯೆಂಬುದನ್ನು ಮರೆಯಬಾರದು. ಒಳನಾಡ ಗಣ್ಯರನ್ನು ಹೊರನಾಡ ಕನ್ನಡಿಗರು ಸಭೆ ಸಮಾರಂಭಗಳಿಗೆ, ಸಂಕಿರಣ-ಉಪನ್ಯಾಸಗಳಿಗೆ ಬರಮಾಡಿಕೊಳ್ಳುತ್ತಾರೆ. ಅವರುಗಳಿಗೆ ಮನ್ನಣೆಗಳನ್ನು ಕಲ್ಪಿಸಿ ಕೊಡುತ್ತಾರೆ. ಒಳನಾಡಿನ ವಿಶೇಷ ಸಾಹಿತ್ಯಿಕ-ಸಾಂಸ್ಕೃತಿಕ ಘಟನೆಗಳಿಗೆ ಹೊರನಾಡ ಕನ್ನಡಿಗರು ಸ್ಪಂದಿಸುತ್ತಿದ್ದಾರೆ.

ಅಗಲಿದ ಮಹನೀಯರು



ಕಡಿದಾಳ್ ಮಂಜಪ್ಪ

— *ಹೊ.ಶ್ರೀನಿವಾಸಯ್ಯ*

ಕಡಿದಾಳ್ ಮಂಜಪ್ಪನವರು ೧೯೧೦ ನೇ ಇಸವಿಯ ಜುಲೈ ತಿಂಗಳು ೧೦ನೇ ತಾರೀಖು 'ಹರೋಳ್ಳಿ'ಯಲ್ಲಿ ಮಧ್ಯಮ ರೈತ ಕುಟುಂಬದಲ್ಲಿ ಹುಟ್ಟಿದರು. ಶ್ರೀ ದುಗ್ಗಪ್ಪ ಗೌಡರು ಮತ್ತು ಶ್ರೀಮತಿ ಗಂಗಮ್ಮನವರೇ ಇವರ ತಂದೆ ತಾಯಿ. ತೀರ್ಥಹಳ್ಳಿ, ಶಿವಮೊಗ್ಗ, ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾರ್ಥಿಯಾಗಿ ತಮ್ಮ ಬಿ.ಎ. ಡಿಗ್ರಿಯನ್ನು ಪಡೆದರು. ಅನಂತರ ಬಿ.ಎಲ್.ಪದವಿಗಾಗಿ ಪೂನಾಕ್ಕೆ ಹೋಗಿ ಬಂದರು. ವಿದ್ಯಾರ್ಥಿದೆಸೆಯಿಂದಲೇ ಗಾಂಧೀಜಿಯವರ ಗಾಢವಾದ ಪ್ರಭಾವಕ್ಕೆ ಅವರು ಒಳಗಾದರು.

೧೯೩೫-೩೬ರಲ್ಲಿ ಶಿವಮೊಗ್ಗದಲ್ಲಿ ನೆಲಸಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ೧೯೨೭ರಲ್ಲಿ ಮಹಾತ್ಮಗಾಂಧಿಯವರ ದರ್ಶನ ಪಡೆದು, ಅವರಿಂದ ಪ್ರಭಾವಿತರಾದರು. ಆದಕಾರಣ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಸದಸ್ಯರೂ ಕೂಡ ಆದರು.

೧೯೪೨ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ೧೯೪೧ರಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ಮೈಸೂರು ಪ್ರಜಾ ಪ್ರತಿನಿಧಿ ಸಭೆಗೆ ಚುನಾಯಿತರಾದರು. ೧೯೪೫ರಲ್ಲಿ ಅವರು ನ್ಯಾಯ ವಿಧಾಯಕದ ಸಭೆಗೆ ಅವಿರೋಧವಾಗಿ ಆಯ್ಕೆಗೊಂಡರು.


೧೯೫೨ರಲ್ಲಿ ತೀರ್ಥಹಳ್ಳಿಯಿಂದ ವಿಧಾನಸಭೆಗೆ ಚುನಾಯಿತರಾಗಿ ಕೆಂಗಲ್ ಹನುಮಂತಯ್ಯನವರ ಸಂಪುಟದಲ್ಲಿ ಕಂದಾಯ ಮತ್ತು ಲೋಕೋಪಯೋಗಿ ಇಲಾಖೆ ಮಂತ್ರಿಗಳಾದರು. ೧೯೫೬ರಲ್ಲಿ ಕೆಲವು ದಿನಗಳ ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ೧೯೬೭ರಲ್ಲಿ ಸಕ್ರಿಯ ರಾಜಕಾರಣದಿಂದ ನಿವೃತ್ತಿ ಹೊಂದಿದರು.

ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಕಂದಾಯ ಮಂತ್ರಿಗಳಾಗಿ 'ಮೈಸೂರು ಗೇಣಿ ಶಾಸನ'ಜಾರಿಗೆ ತಂದರು. 'ಮೈಸೂರು ಇನಾಂ ರದ್ಧತಿ'

(ಮಸೂದೆ ೧೯೫೮) ಮತ್ತು ಮೈಸೂರು ಇನಾಂ ರದ್ದತಿ (ಮಸೂದೆ ೧೯೫೪)ಶಾಸನಗಳನ್ನು ರಚಿಸುವುದರಲ್ಲಿ ಯಶಸ್ವಿಯಾದರು. ಈ ಮೂರು ಮಸೂದೆಗಳು ಅಂದಿನ ಕಾಲಕ್ಕೆ ಕ್ರಾಂತಿಕಾರಿ ಶಾಸನಗಳಾಗಿದ್ದವು. ಈ ಶಾಸನವನ್ನು ಅವರು ಜಾರಿಗೆ ತಂದದ್ದರಿಂದ ಶ್ರೀಮಂತ ವರ್ಗದವರ ಟೀಕೆಗೆ ಗುರಿಯಾದರು. ಆದರೂ ಅವರು ಎದೆಗುಂದಲಿಲ್ಲ.

೧೯೬೧ರಲ್ಲಿ ಕರ್ನಾಟಕ ಭೂಸುಧಾರಣಾ ಮಸೂದೆ ಜಾರಿಗೆ ತಂದು ಗ್ರಾಮೀಣ ಪ್ರದೇಶಗಳಲ್ಲಿ ಸಮಾಜವಾದವನ್ನೇ ತರಲು ಪ್ರಯತ್ನಿಸಿ ಸಫಲರಾದವರಲ್ಲಿ ಮೊಟ್ಟಮೊದಲಿಗರು. ಗಾಂಧಿವಾದಿಗಳಾಗಿಯೇ ಕೊನೆಯವರೆಗೂ ಉಳಿದು ಅವರು ಮಾಡಿದ ಕೆಲಸ ಸ್ಮರಣೀಯವಾದುದು. ಮಾರ್ಚಿ ಎಂಟರಂದು ತಮ್ಮ ಜೀವನ ಯಾತ್ರೆಯನ್ನೂ ಮುಗಿಸಿದರು.

•



ಬಸವಲಿಂಗಪ್ಪ

— *ಮಾಧವ ಪೆರಾಜೆ*

ಅಧಿಕಾರದ ಗದ್ದುಗೆಯೇರಿದಾಗ ದಲಿತರಲ್ಲಿ ಎರಡು ರೀತಿಯ ಬದಲಾವಣೆಯಾಗುತ್ತವೆ. ಮೊದಲನೆಯದು ಅವರು ತಾವು ದಲಿತರಾಗಿ ಹುಟ್ಟಿದುದಕ್ಕೇ ಮುಜುಗರಪಡುವುದು;ಎರಡನೆಯದು ಸುಖದ ಸುಪ್ಪತ್ತಿಗೆಯಲ್ಲಿರುವಾಗಲೂ'ನನಗೆ ಅನ್ಯಾಯವಾಗುತ್ತಿದೆ' ಎಂದು ಒಪ್ಪೊತ್ತಿನ ಊಟಕ್ಕೆ ಗತಿ ಇಲ್ಲದ ವ್ಯಕ್ತಿಯಂತೆ ಹಪಹಪಿಸುವುದು. ಶ್ರೀ ಬಸವಲಿಂಗಪ್ಪನವರು ಈ ಎರಡೂ ವರ್ಗಗಳಿಗೆ ಸೇರದೆ ಅವರದೇ ಆದ ಹೊಸ ದಾರಿಯಲ್ಲಿ ಸಾಗಿದವರು.


ಹಾಗೆ ನೋಡುವುದಿದ್ದರೆ ಹೆಸರು ಮಾಡುವುದಕ್ಕೆ ನಮ್ಮ ದಲಿತ ನಾಯಕರಿಗೆ ಬೆಟ್ಟದಷ್ಟು ಅವಕಾಶಗಳಿವೆ. ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ದಲಿತರ ಒಂದು ಸಮಸ್ಯೆಯನ್ನು ಪರಿಹರಿಸಿದರೆ ಸಾಕು, ಮುಂದಿನ ಜನಾಂಗ ಅವನನ್ನು ಹಾಡಿ ಹರಸುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ, ಕರ್ನಾಟಕ ರಾಜಕಾರಣದಲ್ಲಿ ಬಸವಲಿಂಗಪ್ಪನವರು ಮಾಡಿದ ಕೆಲಸ ಮಹತ್ವದ್ದು. ಇದಕ್ಕೊಂದು ಉದಾಹರಣೆ ಅವರು ಪಟ್ಟುಹಿಡಿದು ಮಲ ಹೊರುವ ಪದ್ಧತಿಯನ್ನು ಕಾನೂನುಬಾಹಿರಗೊಳಿಸಿದರು. ಈ ಒಂದು ಕೆಲಸಕ್ಕೆ ದಲಿತ ಜನ ಇನ್ನೆಂದೂ ಅವರನ್ನು ಮರೆಯುವಂತಿಲ್ಲ.

ಬೆಂಗಳೂರು ಪೌರಾಡಳಿತ ಸಚಿವರಾಗಿ ಆಯ್ಕೆಯಾದ ಬಳಿಕ ಅವರು ಮಾಡಿದ ಇನ್ನೊಂದು ಕೆಲಸ 'ಎಂಜಲೆಲೆ' ಗಳನ್ನು ಬೀದಿಗೆ ಎಸೆಯದಂತೆ ಮಾಡಿದ್ದು. ಈ ಮೂಲಕ ಎಂಜಲನ್ನವನ್ನು ತಿನ್ನಿಸುತ್ತಿದ್ದ ಮೇಲ್ಜಾತಿಯವರ ಅಮಾನವೀಯತೆಯನ್ನು ಬಯಲು ಮಾಡಿದರು. ಇದು ಅವರು ದಲಿತ ಸಮಾಜಕ್ಕಾಗಿ ಮಾಡಿದ ಎರಡನೆಯ ದೊಡ್ಡ ಕೆಲಸ.

ಪರಿಸರ ಖಾತೆಯ ಸಚಿವರಾಗಿದ್ದಾಗ 'ಜಲಮಾಲಿನ್ಯ' ಮತ್ತು ಪರಿಸರ ಮಾಲಿನ್ಯಗಳನ್ನು ತೊಡೆಯುವುದರ ಮೂಲಕ ಆ ಖಾತೆಯ ಮರ್ಯಾದೆಯನ್ನು ಉಳಿಸಿದರು. ಬಸವಲಿಂಗಪ್ಪ ಎಂದಾಗ ಅಂಬೇಡ್ಕರ್ ವಾದ ನಮಗೆ ಬರುವುದು ಸಹಜ. ಅಂಬೇಡ್ಕರ್ ಅವರಂತೆ ಬಸವಲಿಂಗಪ್ಪನವರೂ ಬೌದ್ಧಧರ್ಮಕ್ಕೆ ಮತಾಂತರಗೊಂಡಿದ್ದರು. ಅಂಬೇಡ್ಕರ್ ವಾದದ ಬಗೆಗೆ ಅವರ ಖಚಿತ ನಿಲುವಿಗೆ ಇದು ಸಮರ್ಥನೆ.

ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ ದಲಿತರೊಳಗೇ ಇರುವ ಒಳಪಂಗಡದ ಬಲಗೈ ಮನೆತನದಲ್ಲಿ ಬಸವಲಿಂಗಪ್ಪನವರ ಜನನವಾಯಿತು. ಮೈಸೂರು, ಬೆಳಗಾವಿಗಳಲ್ಲಿ ವಕೀಲಿ ವೃತ್ತಿ ನಡೆಸಿದರು. ಶ್ರೀ ಬಿ.ಡಿ. ಜತ್ತಿಯವರ ಸರಕಾರದಲ್ಲಿ ಉಪಸಚಿವರಾಗಿದ್ದರು. ಹೀಗೆ ಸಮಯಾವಕಾಶವಾದಾಗಲೆಲ್ಲ ಮತ್ತೆ ಮತ್ತೆ ಸೂಚಿತ ಸ್ಥಾನದಲ್ಲಿದ್ದು, ಡಿಸೆಂಬರ್ ೨೭, ೧೯೯೨ರಂದು ತೀರಿಕೊಂಡರು.

●



ಕೆ.ಎಚ್. ಪಾಟೀಲ

— *ಬಸವರಾಜ ಸಾದರ*

"ಹುಲಕೋಟಿ ಹುಲಿ" ಎಂದೇ ಖ್ಯಾತರಾದ ಶ್ರೀ ಕೆ.ಎಚ್. ಪಾಟೀಲರ ಅಪ್ರತಿಮ ಸಾಧನೆಗೆ ಅನ್ವರ್ಥಕ ಹೆಸರು. ಬದ್ಧ ಸಹಕಾರಿಯಾಗುವುದರ ಜೊತೆಗೆ ಸಮರ್ಥ ರಾಜಕಾರಣಿಯಾಗಿ, ಸಮಾಜ ಸೇವಕರಾಗಿ, ಮಂತ್ರಿಯಾಗಿ, ರಾಜ್ಯ

ಕಾಂಗ್ರೆಸ್ ಅಧ್ಯಕ್ಷರಾಗಿ, ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿದವರಾಗಿ;ಬೆರಗಾಗುವ ರೀತಿಯಲ್ಲಿ ಅವರು ಪ್ರಗತಿಪರ ಕಾರ್ಯ ಮಾಡಿದ್ದಾರೆ.

ಸಪಕಾರಿ ಕ್ಷೇತ್ರ ಎಂದಾಕ್ಷಣ, ಕೆ.ಎಚ್. ಪಾಟೀಲರ ನೆನಪು ಬರುವುದು ಸಹಜ ಅವರು ಹದಿನೈದು ವರ್ಷದವರಿದ್ದಾಗಲೇ (ಜನನ:ಮಾರ್ಚ್ ೧೪,೧೯೨೫, ಗದಗ) ಸಹಕಾರಿ ಕ್ಷೇತ್ರಕ್ಕೆ ಕಾಲಿಟ್ಟರು. ಮುಂದೆ ಜನಪರ ಕಾರ್ಯಗಳಿಂದ ಅಪಾರ ಜನಾದರಣೆ ಗಳಿಸಿ ೧೯೫೨ ರಿಂದಲೇ ಹುಲಕೋಟಿಯ ಸರಪಂಚರಾಗಿ ೧೯೭೨ ರವರೆಗೆ ವಿಧಾನಸಭೆಗೆ ಆಯ್ಕೆಯಾಗುವ ವರೆಗೆ ಇದ್ದರು. ರಾಜಕೀಯದ ಏರುಪೇರುಗಳನ್ನು ಅನುಭವಿಸುತ್ತ ನಾಲ್ಕು ಬಾರಿ ವಿಧಾನಸಭೆಗೆ ಸ್ವಕ್ಷೇತ್ರದಿಂದಲೇ ಆಯ್ಕೆಯಾದರು.


'ಗದಗ ಸಹಕಾರಿ ಬಟ್ಟೆ ಗಿರಣಿ', 'ಹುಲಕೋಟಿಯ ರೈತರ ಸಹಕಾರಿ ನೂಲಿನ ಗಿರಣಿ', 'ಶೇಂಗಾ ಸಂಸ್ಕರಣ ಸೊಸೈಟಿ', 'ಸಹಕಾರಿ ಡೈರಿ ಉದ್ಯಮ', 'ಭೂತಲ ಜಲೋಪಯೋಗಿ ಸಹಕಾರಿ ಸೊಸೈಟಿ' ಹೀಗೆ ಒಂದೇ, ಎರಡೇ ಅವರ ಸಹಕಾರಿ ಆಂದೋಲನ ಆಜಾನುಬಾಹುವಾಗಿ ಬೆಳೆಯಿತು. ೧೯೮೦-೮೧ ರಲ್ಲಿ ಅವರು "ಬೆಸ್ಟ್ ಕೋ-ಆಪರೇಟಿವ್"ಎಂದು ಗೌರವಿಸಲ್ಪಟ್ಟರೆ, ನವದೆಹಲಿಯ ಇಫ್ಕೋ ಸಂಸ್ಥೆಯು ೧೯೮೭ ರಲ್ಲಿ ನಗದು ಬಹುಮಾನವನ್ನು ಕೊಟ್ಟು ಪಾಟೀಲರನ್ನು ಸನ್ಮಾನಿಸಿತು.

ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೆ ಕಾರಣೀಭೂತರಾದ ಕೆ.ಎಚ್. ಪಾಟೀಲರು ಅರಣ್ಯ ಸಚಿವರಾಗಿ ಮಾಡಿದ ಅತ್ಯಂತ ಮಹತ್ವದ ಕೆಲಸವೆಂದರೆ "ಕರ್ನಾಟಕ ಅರಣ್ಯ ಕೈಗಾರಿಕೆ ಮಂಡಳಿ (೧೯೭೩)" ಯನ್ನು ಸ್ಥಾಪಿಸಿದ್ದು. ಅವರು ಕೃಷಿ ಸಚಿವರಾಗಿ ದುಡಿದರು. ಹಲವಾರು ಮಹತ್ವದ ಯೋಜನೆಗಳನ್ನು ರೂಪಿಸಿದರು.

ಪತ್ರಿಕೋದ್ಯಮದಲ್ಲೂ ಆಸಕ್ತಿಯಿರಿಸಿಕೊಂಡಿದ್ದ ಪಾಟೀಲರು 'ವಿಶಾಲ ಕರ್ನಾಟಕ'ಪತ್ರಿಕೆಯನ್ನು (೧೯೬೪) ಆರಂಭಿಸಿ ಹಲವಾರು ವರ್ಷ ಅದರ ಸಂಪಾದಕರಾಗಿ ದುಡಿದಿದ್ದವರು. ಪಾಟೀಲರ ಮಹತ್ವದ ಮತ್ತೊಂದು ಕ್ಷೇತ್ರ ಶಿಕ್ಷಣ. ಹುಲಕೋಟಿಯಲ್ಲಿ ಶಿಶುವಿಹಾರದಿಂದ ರೂರಲ್ ಎಂಜಿನಿಯರಿಂಗ್ ಕಾಲೇಜ್, ರೂರಲ್ ಪಾಲಿಟೆಕ್ನಿಕನ್ನೂ ಆರಂಭಿಸಿದರು. ಹುಲಕೋಟಿ ಹಾಗೂ ಗದಗಗಳು ಅವರು ಸಹಕಾರಿ ಮತ್ತು ಶೈಕ್ಷಣಿಕ ಆಸಕ್ತಿಗಳನ್ನು ಪ್ರಯೋಗ ಮಾಡಿದ ಕ್ಷೇತ್ರಗಳು.ಅವು ನಿಚ್ಚಳ ಪರಿಣಾಮ ಕಂಡ ಕ್ಷೇತ್ರಗಳಾಗಿವೆ.

ಕೆ.ಎಚ್. ಪಾಟೀಲರು ಫೆಬ್ರವರಿ ೯, ೧೯೯೨ ರಂದು ತೀರಿಕೊಂಡರು. ಶೈಕ್ಷಣಿಕ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಮಾಡಿದ ಕಾರ್ಯ ಮತ್ತು ಸಾಧನೆ ಚಿರಸ್ಮರಣೀಯವಾದುದು.

●



ಎನ್.ಡಿ. ಸುಂದರೇಶ್


— ಬಿ. ಚಂದ್ರೇಗೌಡ

ಕಳೆದ ವರ್ಷಾಂತ್ಯದೊಳಗೆ ನಮ್ಮ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾವಂತರಿಗೆಲ್ಲ ಅಪ್ಪಳಿಸಿದ ಸಾವುಗಳ ಪೈಕಿ ಸುಂದರೇಶರ ಸಾವು ರೈತ ಸಂಘ ತುಂಬಿಕೊಳ್ಳಲಾರದಂತಹುದು.

ಸುಂದರೇಶ ರೈತ ಕುಟುಂಬದಲ್ಲಿ ಹುಟ್ಟಿ ಬಂದವರು. ಮಾವ ಕಡಿದಾಳ್ ಮಂಜಪ್ಪ, ಗೋಪಾಲಗೌಡರ ಪ್ರಭಾವದಿಂದ ಹೋರಾಟಕ್ಕೆ ಅಣಿಯಾದವರು. ಮೈಸೂರಿನಲ್ಲಿ ಓದುತ್ತಿದ್ದಾಗಲೇ ಕುವೆಂಪುರವರ 'ನಿರಂಕುಶಮತಿಗಳಾಗಿ' ಕರೆಗೆ ಓಗೊಟ್ಟ ಯುವಕರಲ್ಲಿ ಮೊದಲಿಗರಾದರು. ಅವರು ಅಸ್ಪೃಶ್ಯತೆಯ ವಿರುದ್ಧವಾಗಿ, ಪ್ರತಿಗಾಮಿ ಚಳವಳಿಗಳ ವಿರುದ್ಧವಾಗಿ ಹೋರಾಡುತ್ತಾ ಬಂದರು. ಸುಂದರೇಶ ಅವರು ಭದ್ರಾವತಿ ತಾಲ್ಲೂಕಿನ ಅಶೋಕ ನಗರದಲ್ಲಿ ಬಂಜರು ಭೂಮಿ ಹಿಡಿದು ವ್ಯವಸಾಯ ಮಾಡತೊಡಗಿದರು. ಸಮಾಜವಾದಿ ಚಳುವಳಿಯ ಯುವಜನ ಸಭಾ ಕಾರ್ಯಕ್ರಮಗಳನ್ನು ರೂಪಿಸುತ್ತಲೆ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಸುಂದರೇಶರ ಎಲ್ಲ ಚಟುವಟಿಕೆಗಳಿಗೆ ತುಂಬ ಅಭಿಮಾನದಿಂದ ಕಡಿದಾಳ್ ಮಂಜಪ್ಪ, ಹೆಚ್.ಎಸ್. ರುದ್ರಪ್ಪ, ಎಂ.ಡಿ. ನಂಜುಂಡಸ್ವಾಮಿ ಇವರೆಲ್ಲ ಪ್ರೋತ್ಸಾಹಿಸುತ್ತಿದ್ದರು. ರೈತ ಸಂಘದಂತಹ ದೊಡ್ಡ ಸಂಘಟನೆಗಳಲ್ಲಿ ತಮ್ಮ ಬದುಕನ್ನು ತೆರೆದ ಪುಸ್ತಕವಾಗಿಸಿಕೊಂಡಿದ್ದ ಅವರು ಯಾರೊಬ್ಬರೂ ಎತ್ತಿ ತೋರಿಸಬಹುದಾದ ತಪ್ಪುಗಳನ್ನೇ ಮಾಡದೆ ಬದುಕಿದ್ದೊಂದು ವಿಶೇಷ. ಶಿವಮೊಗ್ಗ ರೈತಸಂಘದ ಪ್ರತಿಭಟನೆಯ ಧ್ವನಿಯೊಂದು ಮುಳುಗಿತು.

●



ಮಲ್ಲಿಕಾರ್ಜುನ ಮನ್ಸೂರ್

— *ಮಲ್ಲೇಪುರಂ ಜಿ. ವೆಂಕಟೇಶ*

ಮಲ್ಲಿಕಾರ್ಜುನ ಮನ್ಸೂರ್ ಭಾರತದ ಸಂಗೀತ ಕ್ಷೇತ್ರದಲ್ಲಿ ಒಂದು ಮಾಂತ್ರಿಕ ಹೆಸರು. ಕನ್ನಡ ನಾಡಿನ ಹಿರಿಮೆಯನ್ನು ಕಳೆದ ಎಪ್ಪತ್ತು ವರ್ಷಗಳಲ್ಲಿ ಭಾರತದಾದ್ಯಂತ ಪಸರಿಸಿದವರು. ಸಾಮಾನ್ಯನಂತೆ ಜೀವಿಸಿ ತಮ್ಮ ಲೋಕೋತ್ತರ ಪ್ರತಿಭೆಯಿಂದ ಅಗ್ರಮಾನ್ಯರೆನಿಸಿದವರು. ಅಲ್ಲಾದಿಯ ಮತ್ತು ಆಗ್ರಾ ಗರಾಣೆಯ ಶ್ರೇಷ್ಠ ಗಾಯಕರೆನಿಸಿ ಸಂಗೀತ ಪ್ರಿಯರ ಹೃದಯಗಳಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಪಡೆದವರಾಗಿದ್ದರು. ಅವರು ೧೨.೯.೧೯೯೨ರಂದು ಮೃತ್ಯುವಿನ ಮನೆಗೆ ನಡೆದರು.


ಮನ್ಸೂರರು ಮೊದಲಿಗೆ ರಂಗಭೂಮಿಯ ಗಾಯಕ ಕಲಾವಿದರಾಗಿ ರೂಪುಗೊಂಡು ಅನಂತರ ಶಾಸ್ತ್ರೀಯ ಸಂಗೀತಕ್ಕೆ ಒಲಿದವರು. ಭಾರತದ ಪ್ರಖ್ಯಾತ ಹಿಂದೂಸ್ಥಾನಿ ಗಾಯಕರಾದ ಮಂಜೀಖಾನ್, ಬುರ್ಜಿಖಾನ್ ಮುಂತಾದ ಗಾಯಕರ ಶಿಷ್ಯರಾಗಿ ಅಪೂರ್ವ ಸಾಧನೆಯನ್ನು ಮಾಡಿದರು. ಮನ್ಸೂರರ ಪ್ರತಿಭೆ ಅವರ ಎಲ್ಲ ವಯೋಮಾನಗಳಲ್ಲಿಯೂ ಹಂತ ಹಂತವಾಗಿ ವಿಸ್ತಾರವನ್ನು ಪಡೆದುಕೊಂಡಿತು. ಗಾಯನದ ಕಾಯಕದಿಂದ ದೇಶದ ಉನ್ನತ ಪ್ರಶಸ್ತಿಗಳು ಅವರಿಗೆ ದೊರಕಿದವು. ರಾಜ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್, ದೇಶಿಕೋತ್ತಮ, ಕಾಳಿದಾಸ ಸಮ್ಮಾನ ಹೀಗೆ ಅವರ ಪ್ರಶಸ್ತಿಯ ಪಟ್ಟಿ ಬೆಳೆದಿದೆ.

ಹಿಂದೂಸ್ಥಾನಿ ಸಂಗೀತದ ಮೂಲಚೂಲಗಳನ್ನು ಅವರಂತೆ ಒಳಹೊಕ್ಕ ಗಾಯಕರು ತೀರಾ ವಿರಳ. ಮಾಲಕಂಸ ಬೇಹಾಗ್, ಅಮೀರ್‌ದರ್ಬಾರಿ, ಪೂರಿಯ, ಮಾರ್ವ, ಲಲಿತ್ ಮುಂತಾದ ರಾಗಗಳನ್ನು ತಮ್ಮದೇ ಆದ ವಿಶಿಷ್ಟತೆಯಿಂದ ಅದರ ಎಲ್ಲ ಸೂಕ್ಷ್ಮತೆಗಳೊಂದಿಗೆ ಅವರು ಹಾಡಿದ್ದಾರೆ. ಬೇರೆ ಬೇರೆ ಗರಾಣಾಗಳ ಸಾಧ್ಯತೆಗಳನ್ನು ಅವರು ಪ್ರಸ್ತುತ ಪಡಿಸಿದ್ದಾರೆ.

ಮನ್ಸೂರರು ನಾಟ್ಯಸಂಗೀತ, ವಚನಗಾಯನ, ದಾಸರ ಕೀರ್ತನೆಗಳು, ಅನುಭಾವಿಕವಿಗಳ ರಚನೆಗಳನ್ನು ಹಾಡಿ ಜನಮನದ ಪ್ರೀತಿಯನ್ನು ಗಳಿಸಿಕೊಂಡರು. ಮನ್ಸೂರರು ಹಾಡಿದ ಬಸವಣ್ಣ, ಅಕ್ಕಮಹಾದೇವಿ, ಮುಪ್ಪಿನ ಷಡಕ್ಷರಿ, ಶರೀಫರ ರಚನೆಗಳು ಸಂಗೀತದ ಎಲ್ಲ ಸಾಧ್ಯತೆಗಳೊಂದಿಗೆ ಸಾಹಿತ್ಯದ ಸೂಕ್ಷ್ಮತೆಯನ್ನು ಹೊಂದಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿವೆ.

ಹಿಂದೂಸ್ಥಾನಿ ಸಂಗೀತದಲ್ಲಿ ಅತ್ಯಂತ ಸಂಕೀರ್ಣವಾದ ಪ್ರಯೋಗಗಳನ್ನು ನಡೆಸಿದವರಲ್ಲಿ ಮನ್ಸೂರರು ಮುಖ್ಯರು. 'ಜಟ್ ' (Complex Ragas) ಎಂಬ ವಿಭಿನ್ನ ರಾಗಗಳ ಸಂಯೋಜನೆಯ ಪ್ರಯೋಗ ತುಂಬಾ ಮಹತ್ವದ ಸಾಧನೆಯೆನಿಸಿಕೊಂಡಿದೆ. ಭಾರತದ ಬೇರೆ ಬೇರೆ ಭಾಗಗಳಲ್ಲಿ ಹಾಗೂ ಭಾರತದಾಚೆಯ ಸಂಗೀತ ಪ್ರೇಮಿಗಳ ಮನಸ್ಸಿನಲ್ಲಿ ಮನ್ಸೂರರ ಗಾಯನ ಎಲ್ಲ ಕಾಲಗಳಲ್ಲಿಯೂ ನೆಲೆ ನಿಲ್ಲುವ ಸತ್ವವನ್ನು ಪಡೆದುಕೊಂಡಿದೆ.

•



ಹೊನ್ನಪ್ಪ ಭಾಗವತರು

– ವಿಜಯಾ

ನೆಲಮಂಗಲ ತಾಲ್ಲೂಕಿನ ಚೌಡಸಂದ್ರ ಗ್ರಾಮದ ಪುಟ್ಟ ಹಳ್ಳಿಯಲ್ಲಿ ತಾಯಿ ಕಲ್ಲವ್ವ ಸಂಗೀತ ಪ್ರಿಯರಾದರೆ;ತಂದೆ ಚಿಕ್ಕಲಿಂಗಪ್ಪ ಗಮಕಿ. ಇವರ ಎರಡನೆಯ ಮಗನಾಗಿ ದಿನಾಂಕ ೧೧.೧.೧೯೧೫ ರಂದು ಜನಿಸಿದ ಹೊನ್ನಪ್ಪನವರು ಅತ್ಯಂತ ಬಡತನದ ಪರಿಸರದಲ್ಲಿ ಬೆಳೆಯಬೇಕಾಯಿತು. ಐದು ವರ್ಷದ ಬಾಲಕನಾಗಿದ್ದಾಗಲೇ ತಂದೆ ಪ್ಲೇಗ್ ರೋಗಕ್ಕೆ ಬಲಿಯಾದರು. ಸಂಸಾರ ನಿರ್ವಹಣೆಯ ಜವಾಬ್ದಾರಿ ತಾಯಿ ಮತ್ತು ಮಗನ ಮೇಲೆ ಬಿದ್ದಿತು. ಹೊನ್ನಪ್ಪ ಅಮ್ಮನೊಂದಿಗೆ ಬೆಂಗಳೂರಿಗೆ ಬಂದು ಶ್ರೀಮಂತರ ಮನೆಯೊಂದರಲ್ಲಿ ಜೀತಕ್ಕೆ ಸೇರಿ ನೂಲಿಗೆ ಬಣ್ಣ ಹಾಕುತ್ತಾ, ರಾಟೆ ಸುತ್ತುವ ಕೆಲಸ ಮಾಡುವಾಗ ಸಂಗೀತಕ್ಕಾಗಿ ಹಂಬಲಿಸುತ್ತಿದ್ದ ಮನೆಯೊಡತಿ ಈತನ ಗುನುಗು ಆಗಿನ ಆಲಾಪಕ್ಕೆ ಮರುಳಾಗಿ ನಾಲ್ಕಕ್ಷರ ಕಲಿಯಲೆಂದು ದೇವಸ್ಥಾನದಲ್ಲಿ ಮಾಸ್ತರ ಬಳಿ ಹೋಗಲು ಅನುಮತಿ ಕೊಟ್ಟಳು.

ಮದುವೆ ಮನೆ, ಶುಭ ಸಂದರ್ಭಗಳಲ್ಲಿ ಸ್ವತಂತ್ರ ಸಂಗೀತ ಕಛೇರಿ ನಡೆಸುವಷ್ಟು ಪ್ರವೀಣತೆಯನ್ನು-ಸಿಕ್ಕಿರುವ ಸೌಲಭ್ಯಗಳಲ್ಲೇ ಗಳಿಸಿಕೊಂಡರು. ೧೯೫೭ರಲ್ಲಿ ತ್ಯಾಗರಾಜರ ಸಂಗೀತ ಆರಾಧನೆ ಸೇಲಂನಲ್ಲಿ ನಡೆದಾಗ ಇವರಿಗೆ ಅವಕಾಶ ಸಿಕ್ಕಿ ತಮಿಳು ನಾಡಿನ ರಸಿಕರು ಇವರ ಗಾಯನಕ್ಕೆ ಮಾರು ಹೋಗಿ ಬೆಂಗಳೂರಿನ 'ಭಾಗವತರ್'ಎಂದದ್ದೆ ಮುಂದೆ ಹೊನ್ನಪ್ಪ ಭಾಗವತರಾಗಿಯೇ ಕಲೆಯ ಕ್ಷೇತ್ರದಲ್ಲಿ ಪ್ರತಿಭಾ ಪ್ರದರ್ಶನಕ್ಕೆ ನಾಂದಿಯಾಯಿತು.

ಹೊನ್ನಪ್ಪ ಭಾಗವತರ ಬಹುದೊಡ್ಡ ಆಸ್ತಿಯೆಂದರೆ ಅವರ ಶರೀರ-ಶಾರೀರಗಳು. ಸೊಗಸಾಗಿ ಹಾಡುತ್ತಿದ್ದುದಷ್ಟೇ ಅಲ್ಲ. ನೋಡಲು ಅತಿ ಸುಂದರನೂ ಆಗಿದ್ದ ಹೊನ್ನಪ್ಪ ಭಾಗವತರು ಆ ದಿನಗಳಲ್ಲಿ ರಂಗಭೂಮಿ ಚಲನಚಿತ್ರಗಳಿಗೆ ಅನಿವಾರ್ಯವಾಗಿ ಬಿಟ್ಟರು. ಅಭಿನಯವನ್ನು ಪ್ರೀತಿಸಿದರೂ ಸಂಗೀತಕ್ಕೆ ಅವರು ಹೆಚ್ಚಿನ ಆದ್ಯತೆ ಕೊಡುತ್ತಿದ್ದರು.

ಕರ್ನಾಟಕದಲ್ಲಿ ಗುಬ್ಬಿ ಕಂಪನಿಯಲ್ಲಿ ಸೂತ್ರಧಾರನಾಗಿ ಆರಂಭವಾದ ಇವರ ಕಾಯಕ ಮುಂದೆ ಗುಬ್ಬಿ ವೀರಣ್ಣನವರೇ ಕನ್ನಡದಲ್ಲಿ ತಯಾರಿಸಿದ 'ಸುಭದ್ರೆ'ಚಿತ್ರದಲ್ಲಿ ಬಿ.ಜಯಮ್ಮನವರ ಜೊತೆ ಅರ್ಜುನನಾಗಿ ಪಾತ್ರವಹಿಸಿದ್ದರು. ಕನ್ನಡದಲ್ಲಿ ಮಹಾಕವಿ ಕಾಳಿದಾಸ, ಗೋರಕುಂಬಾರ, ಪಂಚರತ್ನ, ಹೇಮರೆಡ್ಡಿ ಮಲ್ಲಮ್ಮ ಚಿತ್ರಗಳಲ್ಲಿ ಅಭಿನಯಿಸಿದಲ್ಲದೆ ಸಂಗೀತ ನಿರ್ದೇಶನ ಮಾಡಿ ಕನ್ನಡ ಚಿತ್ರರಂಗಕ್ಕೆ ಕೊಡುಗೆಯಾದರು. ಇವರು ಸ್ಥಾಪಿಸಿದ ಉಮಾಮಹೇಶ್ವರ ಸಂಗೀತ ನಾಟಕ ಮಂಡಳಿಯು ೧೯೬೧ರಿಂದ ೧೯೬೪ರ ವರೆಗೆ ಅನೇಕ ನಾಟಕ ಪ್ರದರ್ಶನಗಳನ್ನು ನೀಡಿ ಜನಪ್ರಿಯವಾಯಿತು.


ಕನ್ನಡ ತೆಲುಗು ಭಾಷೆಯಲ್ಲಿ ಶಾಸ್ತ್ರೀಯ ಸಂಗೀತ ಶೈಲಿಯಲ್ಲಿ ಅನೇಕ ಸ್ತೋತ್ರಗಳನ್ನು ರಚಿಸಿದ್ದಾರೆ. 'ಓಂಕಾರನಾದ ಸುಧಾ'ಎಂಬುದು ಇವರು ರಚಿಸಿದ ಗ್ರಂಥ. ಇದನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ವಚನಗಳು, ದೇವರನಾಮಗಳು, ತ್ಯಾಗರಾಜರ ಕೀರ್ತನೆಗಳನ್ನು ಹೊನ್ನಪ್ಪ ಭಾಗವತರಿಂದ ಹಾಡಿಸಿ ಕೇಳದ ಜನರೇ ಇಲ್ಲ. ಇವರ ನಾದಕ್ಕೆ ಅವರೆಲ್ಲ ಮಾರು ಹೋಗುತ್ತಿದ್ದರು. ಮದರಾಸಿನ ಸಿನಿಫ್ಯಾನ್ಸ್ ಅಸೋಸಿಯೇಷನ್(೧೯೫೬)ರಲ್ಲಿ ಅತ್ಯುತ್ತಮ ನಟ ಪ್ರಶಸ್ತಿ, ಆಂಧ್ರದ ಶ್ರೀ ಶೈಲದಲ್ಲಿ (೧೯೬೦) ನಾಟ್ಯಾಚಾರ್ಯ ಬಿರುದು, ಮೈಸೂರು ಸರ್ಕಾರ (೧೯೭೯) 'ಗಾನಾಭಿನಯ ಚಂದ್ರ'ಬಿರುದು, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (೧೯೭೨), 'ಗಾನಕಲಾಭೂಷಣ' ಕರ್ನಾಟಕ ಗಾನಕಲಾ ಪರಿಷತ್ತು(೧೯೭೬) 'ಗಾನಕಲಾಗಂಧರ್ವ' ಮೈಸೂರು ಸಂಸ್ಥಾನ ವಿದ್ವಾನ್(೧೯೭೮),ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೮೬) ೧೯೯೦ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ - ಇವು ಅವರ ಕಲಾ ಕೊಡುಗೆಗೆ ಸಂದ ಪ್ರಶಸ್ತಿಗಳಾಗಿವೆ.

ಕಲಾಸೇವೆ ಮಾಡುತ್ತ ತಮ್ಮನ್ನು ಗಾಯನಕ್ಕೆ ಒಪ್ಪಿಸಿಕೊಂಡು ನಿಧನರಾದ ಹೊನ್ನಪ್ಪ ಭಾಗವತರು ನಾಡಿನ ಮುಖ್ಯ ಕಲಾವಿದರಲ್ಲಿ ಒಬ್ಬರು.

●

ಕುಮಾರ ಗಂಧರ್ವ

— *ಸದಾನಂದ ಕನವಳ್ಳಿ*



ನಮ್ಮ ನಾಡಿನ ಹೆಸರಾಂತ ಸಂಗೀತಗಾರರರಲ್ಲಿ ಕುಮಾರ ಗಂಧರ್ವರೂ ಒಬ್ಬರು. ಅವರು, ತಮ್ಮ ಪ್ರಥಮ ಸಾರ್ವಜನಿಕ ಕಚೇರಿಯನ್ನು ದಾವಣಗೆರೆಯಲ್ಲಿ ಐದು ವರ್ಷದವರಿದ್ದಾಗ (ಜನನ ಏಪ್ರಿಲ್ ೨೮, ೧೯೨೪ ಬೆಳಗಾವಿ ಜಿಲ್ಲೆಯ ಸೂಳೆಬಾವಿ) ನೀಡಿದ್ದರು. ಆರು ವರ್ಷದವರಿದ್ದಾಗ ಕಲಬುರ್ಗಿ ಜಿಲ್ಲೆಯ ಗುರುಕಲ್ಮಠದ ಶಾಂತವೀರಸ್ವಾಮಿಗಳು ಶ್ರೀಕ್ಷೇತ್ರ ಉಳವಿಯಲ್ಲಿ ಶಿವಪುತ್ರರ (ಕುಮಾರ ಗಂಧರ್ವರ ಜನ್ಮನಾಮ) ಗಾಯನ ಕೇಳಿ "ಇವನು ಸಾಮಾನ್ಯನಲ್ಲ, ಕುಮಾರ ಗಂಧರ್ವ" ಎಂದು ಉದ್ಗರಿಸಿದರು. ಕುಮಾರ ಗಂಧರ್ವ ಎಂಬುದು ಸ್ಥಿರವಾಗಿ; ಜನ್ಮನಾಮ ಮರೆಯಾಯಿತು.

೧೯೩೫ರಲ್ಲಿ ಅಲಹಾಬಾದಿನಲ್ಲಿ ಅಖಿಲ ಭಾರತ ಸಂಗೀತ ಸಮ್ಮೇಳನ ನಡೆಯಿತು. ಹನ್ನೊಂದು ವರ್ಷದ ಕುಮಾರ ಗಂಧರ್ವ ವೇದಿಕೆಯತ್ತ ನಡೆದಾಗ ಶ್ರೋತೃಗಳ ಹುಬ್ಬುವರಿದವು. ಕುಮಾರ ಗಂಧರ್ವ, ಕಾಪಿರಾಗವನ್ನು ಅರ್ಧಗಂಟೆ ಹಾಡಿ ಮುಗಿಸಿದಾಗ ಹದಿನೈದು ನಿಮಿಷ ಕರತಾಡನ ನಿಲ್ಲಲಿಲ್ಲ. ಮುಂದೆ ಬಿ.ಆರ್. ದೇವಧರ, ಅಂಜನಿಬಾಯಿ ಅವರ ಶಿಷ್ಯರಾಗಿ ಸಂಗೀತ ಶಿಕ್ಷಣ ಪಡೆದರು.

೧೯೪೮ರಲ್ಲಿ ಕುಮಾರ ಗಂಧರ್ವ ಕ್ಷಯರೋಗದಿಂದ ಬಳಲಿದರು. ಒಂದು ಬದಿಯ ಪುಪ್ಪುಸವನ್ನೇ ತೆಗೆದಾಗ ಹಾಡುವುದಲ್ಲ; ಮಾತಾಡಲೂ ಆಗದಾಯಿತು. ಮತ್ತೆ ೧೯೫೪ರಲ್ಲಿ ಚೇತರಿಸಿಕೊಂಡ ನಂತರ ಅಲಹಾಬಾದಿನ ಪ್ಯಾಲೆಸ್ ಥಿಯೇಟರ್ ಕುಮಾರ ಗಂಧರ್ವರ ಮೌನ ಮುರಿಯಲು ಕಚೇರಿ ಅಣಿಯಾಗಿತ್ತು; ಧ್ವನಿ ಬದಲಾಗಿದ್ದರೂ ಸಂಗೀತದ ಗತ್ತು ಬದಲಾಗದೆ ಕಚೇರಿ ಅದ್ಭುತವಾಗಿತ್ತು.


ಅಸ್ತಿತ್ವದಲ್ಲಿರುವ ರಾಗಗಳನ್ನು ಮಾತ್ರ ನಿರೂಪಿಸುವಲ್ಲಿ ತೃಪ್ತಿಪಡದೆ ಅವರು

ಜಾನಪದ ಸಂಗೀತದ ಆದಿಮ ಲೋಕದತ್ತ ತಿರುಗಿದರು. ಅವರ "ಧುನ್ ಉಗಮ" ರಾಗಗಳ ಸೃಷ್ಟಿಯ ಸೆಲೆ ಈ ಜಾನಪದ ಸಂಗೀತವೇ. ಅವರು ಹನ್ನೆರಡು ರಾಗಗಳನ್ನು ಸೃಷ್ಟಿಸಿದರು. ಲಗನ ಗಾಂಧಾರ, ಮಾಲವತಿ, ಭಾವಮತ್, ಭೈರವ್, ಸಾಂಝುರಿ, ಮಘವಾ ಸಹೇಲಿ ತೋಡಿ, ಮಧುಸೂರಜ, ರಾಹಿ, ಅಹಿರಮೋಹಿನಿ, ಸೋಹನಿ ಭಟಿಯಾರ, ನಿಂದಿಯೂರಿ ಮತ್ತು ಗಾಂಧಿ ಮಲ್ಹಾರ ಇವಲ್ಲದೆ ಕುಮಾರ ಗಂಧರ್ವರು ಅಸ್ತಿತ್ವದಲ್ಲಿರುವ ಹಾಗೂ ತಮ್ಮ ಹೊಸ ರಾಗಗಳಲ್ಲಿ ಅನೇಕ ಕೃತಿಗಳನ್ನು ಋತುಮಾನಕ್ಕನುಗುಣವಾಗಿ ವರ್ಗೀಕರಿಸಿ, ಹಾಡಿದರು: ಗೀತ ವರ್ಷಾ (ಮಳೆಗಾಲ) ಗೀತ ಹೇಮಂತ (ಚಳಿಗಾಲ) ಮತ್ತು ಗೀತ ವಸಂತ (ವಸಂತ ಕಾಲ) ಇವುಗಳನ್ನು ಹೆಸರಿಸಬಹುದು.

೧೯೬೫ರಲ್ಲಿ ಕುಮಾರ ಗಂಧರ್ವ ತಮ್ಮ "ಅನೂಪ ರಾಗ ವಿಲಾಸ" ಗ್ರಂಥವನ್ನು ಪ್ರಕಟಿಸಿದರು. ಅದರಲ್ಲಿ ಅವರ ಸ್ವಂತ ರಚನೆಗಳೂ ಅವುಗಳಿಗೆ ಸ್ವರ ಪ್ರಸ್ತಾರಗಳೂ ಇವೆ. ಕರ್ಷನಾದ ಪ್ರಕ್ಷೇಪನಾ, ಆಕ್ರಮಣಕಾರಕತೆ, ಭಾವನಾತ್ಮಕ ತೀವ್ರತೆ, ಶಬ್ದ ಮತ್ತು ನಾದಗಳ ಸಾಮರಸ್ಯ ಕುಮಾರ ಗಂಧರ್ವರ ಗಾಯನದ ವಿಶಿಷ್ಟ ಲಕ್ಷಣಗಳಾಗಿವೆ.

ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೊಶಿಪ್, ವಿಕ್ರಮ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಪದ್ಮವಿಭೂಷಣ ಹಾಗೂ ಪ್ರತಿಷ್ಠಿತ ಕಾಳಿದಾಸ ಸಮ್ಮಾನ ಪ್ರಶಸ್ತಿಗಳನ್ನು ಪಡೆದ ಸಂಗೀತ ಲೋಕದ ದಿಗ್ಗಜ ಕುಮಾರ ಗಂಧರ್ವರು ಜನವರಿ ೧೨. ೧೯೯೨ರಂದು ಇಹಲೋಕವನ್ನು ತ್ಯಜಿಸಿದರು. ಆದರೆ ಸಂಗೀತಲೋಕದಲ್ಲಿ ಅವರ ಹೆಸರು ಶಾಶ್ವತವಾಯಿತು.

•



ಬಾಳಪ್ಪ ಹುಕ್ಕೇರಿ

— ಕಿ.ರಂ. ನಾಗರಾಜ್

ನಾಡಿನ ವಿಖ್ಯಾದ ಕಾವ್ಯಗಾಯಕ ಬಾಳಪ್ಪ ಹುಕ್ಕೇರಿ ೧೫.೧೧.೧೯೯೨ರಂದು ನಿಧನರಾದರು. ೧೯೯೧ರ ಕನ್ನಡ ವಾರ್ಷಿಕದಲ್ಲಿ ಬಾಳಪ್ಪ ಹುಕ್ಕೇರಿಯವರಿಗೆ ಮಧ್ಯಪ್ರದೇಶ ಸರ್ಕಾರ 'ತುಳಸಿ ಸಮ್ಮಾನ' ಪ್ರಶಸ್ತಿಯನ್ನು ಕೊಟ್ಟುದರ ಬಗೆಗೆ ದಾಖಲಿಸಿದ್ದೆವು. ಈಗ ಅವರ ನಿಧನದ ಸುದ್ದಿಯನ್ನು ದಾಖಲಿಸಬೇಕಾಗಿ ಬಂದಿದೆ.

ಎಂಬತ್ತು ವರ್ಷಗಳಿಗೂ ಮೀರಿ ಬದುಕಿ, ಆರವತ್ತು ವರ್ಷಗಳ ಕಾಲ ನಿರಂತರವಾಗಿ ತಮ್ಮ ಗಾಯನದ ಮೂಲಕ ಜನಮನದ ಮೇಲೆ ಪ್ರಭಾವ ಮೂಡಿಸಿದ ಬಾಳಪ್ಪ ಕೇಳುಗರನ್ನು ತುಂಬ ಪ್ರೀತಿಸಿದ ಗಾಯಕ. ಬೆಳಗಾವಿ ಜಿಲ್ಲೆಯ ಹುಕ್ಕೇರಿಯವರಾದ ಬಾಳಪ್ಪ ನಾಡಿನ ಎಲ್ಲೆಡೆ ವ್ಯಾಪಕವಾಗಿ ಸಂಚರಿಸಿದರು. ಹಾಡಬೇಕೆಂಬ ಒತ್ತಾಸೆ ಬಂದ ಕೂಡಲೇ ಹಾಡುವ ಹುರುಪು ಅವರದು. ವಯಸ್ಸು ಮತ್ತು ಅನಾರೋಗ್ಯ ಅವರನ್ನು ಆವರಿಸಿದ್ದರೂ ಗಾಯನದಲ್ಲಿ ತಾರುಣ್ಯವನ್ನು ಪ್ರಕಟಿಸುತ್ತಿದ್ದ ರೀತಿ, ನಿಜಕ್ಕೂ ಚೇತೋಹಾರಿಯಾದುದಾಗಿತ್ತು. ಸಾಮಾನ್ಯವಾಗಿ ಎಲ್ಲರೂ ತಿಳಿದಿರುವಂತೆ ಬಾಳಪ್ಪ ಹುಕ್ಕೇರಿ, ಕೇವಲ ಜನಪದ ಗಾಯಕರಲ್ಲ. ಕನ್ನಡ ಕಾವ್ಯ ಪರಂಪರೆಯ ಅನೇಕ ಕವಿಗಳು ಅವರ ಮೂಲಕ ಪ್ರಸಾರಗೊಂಡಿದ್ದಾರೆ. ವಚನಕಾರರು, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಶಿಶುನಾಳ ಶರೀಫ್, ಬೇಂದ್ರೆ, ಕುವೆಂಪು, ಆನಂದಕಂದ ಹೀಗೆ ಅವರು ಅನೇಕ ಕವಿಗಳ ಕವಿತೆಗಳಿಗೆ ತಮ್ಮದೇ ಆದ ರಾಗ-ಧಾಟಿಗಳನ್ನು ಹಾಕಿ ಹಾಡುತ್ತಿದ್ದವರಾಗಿದ್ದರು. ಅಲ್ಲದೆ ಉತ್ತರ ಕರ್ನಾಟಕದ ಜನಪದ ಗೀತೆ, ಲಾವಣಿಗಳನ್ನು ಕೂಡ ಹಾಡುತ್ತಿದ್ದರು.

ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿಯೂ ಕನ್ನಡ ಕಾವ್ಯ ಗಾಯನ ಇವರ ವಿಶೇಷ ಆಸಕ್ತಿಯಾಗಿತ್ತು. ಎಲ್ಲರು ಸಂಗೀತದ ಗವಾಯಿಗಳೇ ಆದರೆ, ಕನ್ನಡ ಹಾಡುಗಳನ್ನು ಹಾಡುವವರು ಯಾರು? ಎಂಬ ಚಿಂತೆ ಅವರನ್ನು ಕಾಡಿತು. ಇದರಿಂದಾಗಿ ಬಾಳಪ್ಪನವರು ಲಘು ಸಂಗೀತದ ಕಡೆಗೆ ಒಲಿದರು.

೧೯೪೭ರಲ್ಲಿ ವ್ಯವಸಾಯ ಇಲಾಖೆಯಲ್ಲಿ ಕ್ಷೇತ್ರ ಪ್ರಚಾರಕರಾಗಿ ವೃತ್ತಿ ಹಿಡಿದ ಬಾಳಪ್ಪ ಬೇಸಾಯದ ವಿಧಿ-ವಿಧಾನಗಳನ್ನು ಹಾಡುಗಳ ಮೂಲಕ ರೈತರಿಗೆ ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಮುಂಚೆ ತರುಣ ಬಾಳಪ್ಪ ಹುಕ್ಕೇರಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಅಲ್ಲಿ ತಮ್ಮ ಗಾಯನದ ಮೂಲಕ ಸ್ವಾತಂತ್ರ್ಯದ ಮಹತ್ವವನ್ನು ಪ್ರಚೋದಿಸಿದರು. ಬ್ರಿಟಿಷ್ ಆಳ್ವಿಕೆಯ ಅವಕೃಪೆಗೆ ಗುರಿಯಾಗಿ ಜೈಲು ಸೇರಿದರು. ನಾಟಕದ ಕಂಪನಿ ಕಟ್ಟಿ ಅದಕ್ಕೆ ತಮ್ಮ ಗಾಯನ ಪ್ರತಿಭೆಯನ್ನೇ ಬಂಡವಾಳ ಮಾಡಿದರು.

ಸಿನಿಮಾ, ಟಿ.ವಿ., ರೇಡಿಯೋ ಹೀಗೆ ಅನೇಕ ಮಾಧ್ಯಮಗಳ ಮಧ್ಯೆಯೂ ಕನ್ನಡ ಹಾಡುಗಳ ಗಾಯನಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಬಾಳಪ್ಪನವರನ್ನು ಅವರ ಗಾಯನ ಕೇಳಿದವರು ಇನ್ನು ಮುಂದೆ ನೆನಪು ಮಾಡಿಕೊಳ್ಳುತ್ತಾರೆ. ಅಲ್ಪಪ್ರಮಾಣದಲ್ಲಿ ಉಳಿದಿರುವ ಗಾನ ಮುದ್ರಿಕೆಗಳು ಹಾಗೂ ಕ್ಯಾಸೆಟ್‌ಗಳಿಂದ ಮುಂದಿನ ಪೀಳಿಗೆಗೆ ಬಾಳಪ್ಪನವರ ಗಾಯನದ ಸೊಗಸು ಇನ್ನು ಮುಂದೆ ತಿಳಿಯುತ್ತದೆ.

ಕನ್ನಡ ಕಾವ್ಯ ಗಾಯನದ ವಿಭಿನ್ನ ಶೈಲಿಗಳು ಪ್ರಸಾರದಲ್ಲಿರುವ ಈ ಹೊತ್ತಿನಲ್ಲಿ ಬಾಳಪ್ಪ ಹುಕ್ಕೇರಿಯವರಂಥ ಗಾಯಕರ ಪ್ರತಿಭೆ ಈ ಕ್ಷೇತ್ರದಲ್ಲಿ ಹೊಸ ಅನ್ವೇಷಣೆಗಳತ್ತ ಚಲಿಸಲು ಕಾರಣವಾಗಲೆಂದು ಆಶಿಸುವುದೇ ಬಾಳಪ್ಪನವರಿಗೆ ನಾವು ಸಲ್ಲಿಸಬಹುದಾದ ಶ್ರದ್ಧಾಂಜಲಿ.



ಪಿ.ವಿ. ಹಾಸ್ಯಗಾರ


— *ಹಿ.ಚಿ. ಬೋರಲಿಂಗಯ್ಯ*

ಕಡಲ ತೆರೆಯ ಮರ್ಮರ ನಾದದ ಹಿನ್ನೆಲೆಗೆ ಮೈಚಾಚಿಕೊಂಡು ನಿಂತ ಹಸಿರು ಬಯಲಿನ ನಡುವಿನ 'ಕರ್ಕಿ' ಎಂಬ ಊರು ಹೆಸರಾದದ್ದೇ ಹಾಸ್ಯಗಾರರ ಮನೆತನದಿಂದ. ಉತ್ತರ ಕನ್ನಡದ ಹೊನ್ನಾವರ ಪಟ್ಟಣಕ್ಕೆ ತುಂಬ ಸಮೀಪದಲ್ಲಿರುವ ಈ ಗ್ರಾಮದಲ್ಲಿ ದಿ.ಪರಮ ಹಾಸ್ಯಗಾರರೆಂದರೆ ಯಕ್ಷಗಾನ ಕಲೆಯ ಇನ್ನೊಂದು ಹೆಸರು ಎಂದೇ ಜನ ನಂಬುತ್ತಿದ್ದರು. ಯಕ್ಷಗಾನ ಕಲೆಯ ಸರ್ವ ಲಕ್ಷಣಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡಿದ್ದ ಪರಮ ಹಾಸ್ಯಗಾರರ ಮಾರ್ಗದರ್ಶನದಲ್ಲಿ ರೂಪುಗೊಂಡು, ಮುಂದೆ ಅವರಷ್ಟೇ ಪ್ರಸಿದ್ಧನಾದ ಅದೇ ಮನೆತನದ ಮತ್ತೊಬ್ಬ ಪ್ರತಿಭಾವಂತನೇ ೧೯೯೨ರಲ್ಲಿ ನಮ್ಮನ್ನಗಲಿದ ಪಿ.ವಿ. ಹಾಸ್ಯಗಾರ. ಶಾಲಾ ಮಾಸ್ತರರಾಗಿ ಶಿಕ್ಷಣ ಸೇವೆಯನ್ನೂ ಕಲಾ ಸೇವೆಯನ್ನೂ ಒಟ್ಟೊಟ್ಟಿಗೇ ಮಾಡಿಕೊಂಡು ಬಂದ ಪಿ.ವಿ. ಹಾಸ್ಯಗಾರರು ದಿಢೀರ್ ಹೆಸರಿಗಾಗಲೀ, ಅಗ್ಗದ ಪ್ರಸಿದ್ಧಿಗಾಗಲೀ, ಹಣದ ವ್ಯಾಮೋಹಕ್ಕಾಗಲೀ ಬಲಿಯಾದವರಲ್ಲ. ಪ್ರತಿಯೊಂದರಲ್ಲೂ ಕರಾರುವಾಕ್ಕು, ಶಿಸ್ತು, ಸಂಯಮ, ನಿರ್ದಾಕ್ಷಿಣ್ಯತೆ ಮೈಗೂಡಿಸಿಕೊಂಡಿದ್ದ ಹಾಸ್ಯಗಾರರು ಒಬ್ಬ ಸ್ವಾಭಿಮಾನಿ ಕಲಾವಿದ ಕೂಡ. ಹೊಸತನದ ಮುಖವಾಡ ಹೊತ್ತ ಇತ್ತೀಚೆಗಿನ ಹಲವು ಮೇಳಗಳು ಯಕ್ಷಗಾನದ ಮೂಲೋದ್ದೇಶ ಹಾಗೂ ಅದರ ಮೂಲ ರೂಪಕ್ಕೆ ಧಕ್ಕೆಯುಂಟು ಮಾಡುತ್ತಿವೆ ಎಂಬುದು ಅವರ ಕೊರಗಾಗಿತ್ತು. ಹಾಸ್ಯಗಾರ ಮೇಳವನ್ನು ಸದಾ ಈ ಎಚ್ಚರದಿಂದ ಮುನ್ನಡೆಸಿದ ದಿವಂಗತರು ಅವರದೇ ಆದೊಂದು ತತ್ವವನ್ನೇ ಹುಟ್ಟು ಹಾಕಿದ್ದರು. ಇಷ್ಟೆಲ್ಲ ಸಾಂಪ್ರದಾಯಿಕ ಶಿಸ್ತಿನ ನಡುವೆಯೂ ಆ ಮೇಳಕ್ಕೆ ಅಗಾಧ ಜನಪ್ರಿಯತೆ ಇತ್ತು ಎಂಬುದೇ ಇಲ್ಲಿನ ಮುಖ್ಯ ಅಂಶ. ಇದಕ್ಕೆ ಕಾರಣ ಹಾಸ್ಯಗಾರ ಮನೆತನದ ಹಾಗೂ ಹೊರಗಿನ ಪ್ರತಿಭಾವಂತ ಕಲಾವಿದರ ಸಮ್ಮಿಲನ. ಈ ದೃಷ್ಟಿಯಲ್ಲಿ ಪಿ.ವಿ. ಹಾಸ್ಯಗಾರರು ಅತ್ಯುತ್ತಮ ಸಂಘಟಕರೂ ಆಗಿದ್ದರು.

ಪಿ.ವಿ. ಹಾಸ್ಯಗಾರರ ವೇಷಗಳು ಹಲವು. ಬಡಗುತಿಟ್ಟಿನ ಹೆಸರಾಂತ ಪಾತ್ರಧಾರಿಯಾಗಿ ನರ್ತನ ಮತ್ತು ಅಭಿನಯಕ್ಕೆ ಹೊಸ ಸೊಬಗು ನೀಡಿದ ಇವರು ಹಲವು ಶಿಷ್ಯರನ್ನೂ ತಯಾರು ಮಾಡಿದರು. ಕೆರೆಮನೆ ಮಹಾಬಲ ಹೆಗಡೆ, ಮುರೂರು ದೇವರು ಹೆಗಡೆ, ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ, ಗೋಡೆ ನಾರಾಯಣ ಹೆಗಡೆ, ಗೋವಿಂದನಾಯ್ಕ ಮುಂತಾದ ಬಡಗುತಿಟ್ಟಿನ ಹಲವು ಅತಿರಥ ಮಹಾರಥರ ಸಮಕಾಲೀನ ಬೆಳೆದು ಉತ್ತರಕನ್ನಡ ಜಿಲ್ಲೆಯ ಯಕ್ಷಗಾನ ಇತಿಹಾಸಕ್ಕೆ ಒಂದು

ಪ್ರಮುಖ ಪಾತ್ರವಾಗಿ ಸೇರಿಹೋದ ಇವರು ಎಂದಿಗೂ ಸ್ಮರಣೀಯವಾಗಿ ಉಳಿಯಬಲ್ಲ ಕಲಾವಿದ. ಇವರ ಮನೆತನದ ನಾರಾಯಣ ಹಾಸ್ಯಗಾರ ಮತ್ತು ಕೃಷ್ಣ ಹಾಸ್ಯಗಾರರು ಕೂಡ - ಈ ರಂಗದ ಸಾಧಕರೇ. ಹಾಸ್ಯಗಾರ ಮೇಳವನ್ನು ಮುನ್ನಡೆಸುವ ಹೊಣೆ ಈಗ ಇವರದಾಗಿದೆ. ಈ ಮನೆತನದ ಮತ್ತೊಂದು ಹೆಗ್ಗಳಿಕೆ ಎಂದರೆ ಪ್ರಸಿದ್ಧ ಸಿಂಹ ನೃತ್ಯ. ಇವರ ಯಕ್ಷಗಾನ ಹೇಗೋ ಹಾಗೆ ಇವರ ಸಿಂಹ ನೃತ್ಯ ಕೂಡ ರಾಜ್ಯಾದ್ಯಂತ ಪ್ರಸಿದ್ಧ.ಕರ್ನಾಟಕವೇ ಅಲ್ಲದೆ, ದೂರದ ಮಣಿಪುರ ಮೊದಲ್ಗೊಂಡು ದೇಶದ ನಾನಾ ಭಾಗಗಳಲ್ಲಿ ಯಕ್ಷಗಾನ ಪ್ರದರ್ಶಿಸಿದ ಕೀರ್ತಿ ದಿ.ಪಿ.ವಿ. ಹಾಸ್ಯಗಾರರದು.

●



ಕೆರೆಮನೆ ಶಿವರಾಮ ಹೆಗಡೆ

— ಪುರುಷೋತ್ತಮ ಬಿಳಿಮಲೆ

೧೯೯೨ರ ಅಕ್ಟೋಬರ್ ೩ರಂದು ತೀರಿಕೊಂಡ ಕೆರೆಮನೆ ಶಿವರಾಮ ಹೆಗಡೆಯವರು ಜನಿಸಿದ್ದು ಹೊನ್ನಾವರ ತಾಲೂಕಿನ ಗುಣವಂತೆಯಲ್ಲಿ. (ಜನನ ೧೯೦೮) ಅವರ ತಂದೆಯ ಹೆಸರು ಶಂಭು ಹೆಗಡೆ. ತಾಯಿಯ ಹೆಸರು ಸುಬ್ಬಮ್ಮ. ಅಜ್ಜನ ಹೆಸರು ರಾಮ ಹೆಗಡೆ. ಶಿವರಾಮ ಹೆಗಡೆಯವರ ಇಬ್ಬರು ಮಕ್ಕಳೂ ಸುಪ್ರಸಿದ್ಧ ಯಕ್ಷಗಾನ ಕಲಾವಿದರು. ಒಬ್ಬರು'ಯಕ್ಷಲೋಕದ ಸುಂದರಿ'ಯಾಗಿ ಅಕಾಲ ಮರಣವನ್ನಪ್ಪಿದ ಗಜಾನನ ಹೆಗಡೆಯವರು. ಇನ್ನೊಬ್ಬರು ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ಶಂಭು ಹೆಗಡೆಯವರು. ಶಿವರಾಮ ಹೆಗಡೆಯವರ ಅಣ್ಣನ ಮಗ ಮಹಾಬಲ ಹೆಗಡೆಯವರು ರಾಷ್ಟ್ರಪ್ರಶಸ್ತಿ ಗಳಿಸಿದ ಯಕ್ಷಗಾನ ಕಲಾವಿದರು. ಹೀಗೆ ಶಿವರಾಮ ಹೆಗಡೆಯವರ ಇಡೀ ಕುಟುಂಬವೇ ಬಡಗುತಿಟ್ಟು ಯಕ್ಷಗಾನ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದೆ: ಮಾತ್ರವಲ್ಲ ಯಕ್ಷಗಾನದ ಘನತೆ-ಗಾಂಭೀರ್ಯವನ್ನು ಎತ್ತಿ ಹಿಡಿದು, ಅದಕ್ಕೆ ಲೋಕ ಪ್ರಸಿದ್ಧಿಯನ್ನು ತಂದು ಕೊಟ್ಟಿದೆ.

ಶಿವರಾಮ ಹೆಗಡೆಯವರು ಓದಿದ್ದು ಕೇವಲ ನಾಲ್ಕನೆಯ ತರಗತಿಯವರೆಗೆ ಮಾತ್ರ. ಅನಂತರ ಎಲ್ಲ ಕಲಾವಿದರು ಕಲಿಯುವ ಹಾಗೆ ಯಕ್ಷಗಾನವನ್ನು ನೋಡುತ್ತ ಕಲಿತರು. ಯಕ್ಷಗಾನ ನೋಡುವುದಕ್ಕೆ ತಮ್ಮ ಮನೆಯವರ ಪ್ರತಿರೋಧವನ್ನು ಇದಿರಿಸಿದರು. ಹಿರಿಯ ಕಲಾವಿದರಾದ ಸದಾನಂದ ಹೆಗಡೆಯವರನ್ನು ಗುರುವೆಂದು

ಅಂಗೀಕರಿಸಿದರು. ೧೨ನೆಯ ವಯಸ್ಸಿನಲ್ಲಿ ರಂಗಸ್ಥಳ ಪ್ರವೇಶಿಸಿದ ಹೆಗಡೆಯವರು ಆ ಕಾಲವನ್ನು ನೆನಪಿಸಿ ಕೊಳ್ಳುತ್ತ - "ನನ್ನ ಯಕ್ಷಗಾನದ ಕಲಾಜೀವನ ಆಟಕ್ಕೆ ನಾಲ್ಕಾಣೆಯ ಸಂಭಾವನೆಯಿಂದ ಪ್ರಾರಂಭವಾಯಿತು. ಎರಡನೇ ವರ್ಷ ಅದು ಆಟಕ್ಕೆ ಆರಾಣೆಯಾಯಿತು. ಆದರೆ ಮೂರನೆಯ ವರ್ಷ ಹಿಲಾಲು ದೀವಟಿಗೆಗಳಿಂದ ಬೆಳಗುತ್ತಿರುವ ರಂಗಸ್ಥಳಕ್ಕೆ ನಾನು ಪೆಟ್ರೋಮ್ಯಾಕ್ಸ್ ದೀಪಗಳನ್ನು ಕೊಂಡು ಹೋದಾಗ ನನಗೆ ಒಂದೂವರೆ ರೂಪಾಯಿ ಬಾಡಿಗೆ ಹಾಗೂ ಪಾತ್ರಕ್ಕೆ ಹತ್ತಾಣೆ ದೊರೆಯುತ್ತಿತ್ತು" ಎಂದು ಹೇಳಿದ್ದಾರೆ.

ಎಲ್ಲ ಕಲಾವಿದರ ಹಾಗೆ ಶಿವರಾಮ ಹೆಗಡೆಯವರೂ ಬಾಲ ಕಲಾವಿದನಾಗಿ ರಂಗ ಪ್ರವೇಶ ಮಾಡಿದರು. ಅನಂತರ ಕ್ರಮವಾಗಿ ಕೋಡಂಗಿ, ಸ್ತ್ರೀವೇಷ, ಎರಡನೆ ವೇಷ, ನಾಯಕ ವೇಷವನ್ನು ಮಾಡಿದರು. ಇವರ ಜೊತೆಗೆ ಭಾಗವಂತಿಕೆ, ಚಂಡೆ-ಮದ್ದಲೆ ಕಲಿತರು. ಯಕ್ಷಗಾನದ ಎಲ್ಲ ಅಂಗಗಳ ಮೇಲೆ ಅವರಿಗೆ ಅಪಾರ ಹಿಡಿತವಿತ್ತು.

ಶಿವರಾಮ ಹೆಗಡೆಯವರು ನಟರಾಗಿ ಮತ್ತು ಸಂಘಟಕರಾಗಿ ಯಕ್ಷಗಾನಕ್ಕೆ ಮಹತ್ವದ ಕೊಡುಗೆ ನೀಡಿದರು. ೧೯೩೪ರಲ್ಲಿ ಅವರು ಸ್ಥಾಪಿಸಿದ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ' ಮುಂದೆ ಸುಮಾರು ೫ ದಶಕಗಳ ಕಾಲ ನಾಡಿನಾದ್ಯಂತ ದಿಗ್ವಿಜಯ ಸಾಧಿಸಿತು.

ಉತ್ತರ ಕನ್ನಡದ ಯಕ್ಷಗಾನಕ್ಕೆ ವ್ಯವಸಾಯ ರೂಪ ನೀಡಿದ ಶ್ರೇಯಸ್ಸು ಇವರಿಗೆ. ಜೊತೆಗೆ ಈ ಮೇಳವು ಅನೇಕ ಹೊಸ ಪ್ರತಿಭೆಗಳನ್ನು ಬೆಳಕಿಗೆ ತಂದಿತು. ಆಕಾಶವಾಣಿ (೧೯೫೦) ದೂರದರ್ಶನ (೧೯೭೮)ಗಳಲ್ಲಿ ಮೊದಲ ಬಾರಿಗೆ ಯಕ್ಷಗಾನ ಪ್ರಸಾರವಾದದ್ದು ಕೂಡಾ ಹೆಗಡೆಯವರ ಇಡಗುಂಜಿ ಮೇಳದ ಮೂಲಕವೇ.

ಇಂದು ಶಿವರಾಮ ಹೆಗಡೆಯವರ ಹೆಸರು ಉಳಿದಿರುವುದು ಅವರ ನಟನಾ ಸಾಮರ್ಥ್ಯದಿಂದ. ಬಹುಶಃ ಮುಂದೆ ಕೆಲವು ದಶಕಗಳ ವರೆಗೆ ಅದು ಉಳಿದಿರುತ್ತದೆ ಕೂಡ. ಕೌರವ, ಹರಿಶ್ಚಂದ್ರ, ಮಾಗಧ, ಅರ್ಜುನ, ಮಾರ್ತಾಂಡ ತೇಜ, ದುಷ್ಟಬುದ್ಧಿ- ಮೊದಲಾದ ಪಾತ್ರಗಳನ್ನು ಅವರು ನಿರ್ವಹಿಸಿದ ರೀತಿ ಈಗಾಗಲೇ ಬಗೆ ಬಗೆಯ ದಂತ ಕತೆಗಳನ್ನು ಸೃಷ್ಟಿಸಿಬಿಟ್ಟಿದೆ. ಅವರ ರಂಗ ಪ್ರವೇಶ, ರಂಗದಲ್ಲಿ ನಿಲ್ಲುವ ರೀವಿ, ಕುಣಿತದ ಸಂದರ್ಭದಲ್ಲಿ ಅವರು ರಂಗಸ್ಥಳವನ್ನು ಇಡಿಯಾಗಿ ಬಳಸಿಕೊಳ್ಳುವ ಬಗೆ, ಮತ್ತು ಹಿತಮಿತವಾದ ಮಾತುಗಾರಿಕೆಯಿಂದಾಗಿ ಅವರು ಯಾವ ಪಾತ್ರವನ್ನಾದರೂ ಮೇಲೆ ಬೀಳಿಸಬಲ್ಲವರಾಗಿದ್ದರು, ಗದಾಯುದ್ಧದಲ್ಲಿನ ಅವರ ಕೌರವ ಪಾತ್ರವನ್ನು ಯಕ್ಷಗಾನದ 'ಸರ್ವಶ್ರೇಷ್ಠ ಸೃಷ್ಟಿ' ಎಂದು ಕೊಂಡಾಡಲಾಗುತ್ತಿದೆ. ಈ ಪಾತ್ರಕ್ಕಾಗಿ ಅವರು 'ನಟರತ್ನಾಕರ' ಎಂಬ ಬಿರುದನ್ನು ಪಡೆದರು. ಹೆಗಡೆಯವರ ಕೌರವನ ಪಾತ್ರವನ್ನು ಗಮನದಲ್ಲಿರಿಸಿಕೊಂಡೇ ೧೯೭೧ರಲ್ಲಿ ಅವರಿಗೆ ರಾಷ್ಟ್ರಪ್ರಶಸ್ತಿ ನೀಡಲಾಯಿತು.

ಉತ್ತರ ಕನ್ನಡದ ಹಡಿನಬಾಳದಲ್ಲಿ ಟೆಂಟು ಬಿಚ್ಚದೆ ಸತತವಾಗಿ ಏಳು ದಿನಗಳ ಕಾಲ'ಗದಾಪರ್ವ' ನಡೆಸಿದ್ದು, ಶಿರಸಿಯ ಹಾರುಗುರಿನಲ್ಲಿ 'ನೋಡಿರಿ ಧರ್ಮಜ' ಪದ್ಯಕ್ಕೆ ಮೂರುಗಂಟೆ ಅಭಿನಯಿಸಿದ್ದು - ಹೆಗಡೆಯವರ ದಾಖಲೆಗಳು. ಕೈ, ಕಾಲು, ಹುಬ್ಬು ಮತ್ತು ಅಂಗಚಲನೆಗಳಲ್ಲಿ ಹೆಗಡೆಯವರ ಮಾದರಿಯನ್ನು ಅನೇಕರು ಇಂದಿಗೂ ಅನುಸರಿಸುತ್ತಿದ್ದು, ಅದೇ ಒಂದು ಪರಂಪರೆಯಾಗಿ ಚಾಲ್ತಿಯಲ್ಲಿದೆ.

ಶಿವರಾಮ ಹೆಗಡೆಯವರು ಎಲ್ಲ ಬಗೆಯ ವಿಶೇಷಣಗಳನ್ನು ಮೀರಿ ಬೆಳೆದವರು. ಪುರಾಣ ಪಾತ್ರಗಳನ್ನು ರಂಗದಲ್ಲಿ ಅವರ ಹಾಗೆ ಪುನರ್-ಸೃಷ್ಟಿಸಿದ ಇನ್ನೊಬ್ಬ ನಟ ಯಕ್ಷಗಾನದಲ್ಲಿ ಇಲ್ಲ. ಅವರ ಹಾಗೆ ಚೊಕ್ಕವಾಗಿ ಬಣ್ಣ ಹಾಕುವವರಿಲ್ಲ, ವೇಷ ಕಟ್ಟುವವರಿಲ್ಲ. ಮಾತಿಗೂ -ನಟನೆಗೂ ಮಧ್ಯೆ ಬಂಧ ಬೆಸೆದವರಿಲ್ಲ. ಅವರ ಮರಣದಿಂದಾಗಿ ಯಕ್ಷಗಾನದ ವರ್ಣರಂಜಿತ ಇತಿಹಾಸದ ಒಂದು ಅಧ್ಯಾಯ ಕೊನೆಗೊಂಡಿತು.

●



ಎಂ.ಟಿ.ವಿ. ಆಚಾರ್ಯ

— ಅ.ಲ. ನರಸಿಂಹನ್

ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆಧುನಿಕ ಕಲಾ ಪ್ರವಾಹ ಕಾಣಿಸಿಕೊಂಡಾಗ ಹಿಂದಿನ ರಮ್ಯ ಶೈಲಿಯಲ್ಲಿ ಕೃತಿ ರಚಿಸುತ್ತಿದ್ದವರಿಗೆ ನವ್ಯ ಪಂಥ ಕಾಣಿಸಿಕೊಂಡಿದ್ದು ಅಸಮಾಧಾನಕ್ಕಿಂತ ನೋವು-ನಿರಾಶೆಗಳನ್ನೇ ಅಧಿಕವಾಗಿ ತಂದವು. ಅಂತೆಯೇ ರವಿವರ್ಮನ ನಂತರ ಆತನಂತೆಯೇ ತೈಲವರ್ಣದಲ್ಲಿ, ದೊಡ್ಡ ಆಕಾರದಲ್ಲಿ, ಪೌರಾಣಿಕ ದೃಶ್ಯಗಳನ್ನು ರಚಿಸಿ ಆತನಷ್ಟೇ ಜನಪ್ರಿಯರಾಗಿದ್ದ ಮಡಯಂ ತೊಣ್ಣೂರು ವೆಂಕಟಾಚಾರ್ಯರೂ ಹೊಸಪದ್ಧತಿಗೆ ಹೊಂದಿಕೊಳ್ಳಲಾರದೆ ಹಳೆಯದನ್ನು ಬಿಡಲಾರದೆ ಸಂಕಟಕ್ಕೆ ಒಳಗಾಗುವಂತೆ ಮಾಡಿತು.


ಅವರು ಮೈಸೂರಿನಲ್ಲಿ ೨೮.೭.೧೯೨೦ರಂದು ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದರು. ಅವರು ಬಾಲ್ಯದಿಂದಲೇ ಕಲೆಯಲ್ಲಿ ಆಸಕ್ತಿ ವಹಿಸಿ, ಚಾಮರಾಜೇಂದ್ರ ಕಲಾಶಾಲೆಯಲ್ಲಿ ವ್ಯಾಸಂಗ ಮಾಡಿ, ಹಲವಾರು ವಿಭಿನ್ನ ಕಾರ್ಯಗಳನ್ನು ಕೈಗೊಂಡರು.

ಅವರು ಸುಮಾರು ಹತ್ತು ವರ್ಷಗಳ ಕಾಲ 'ಚಂದಮಾಮ'ಕ್ಕೆ ಮುಖಪುಟ ರಚನೆ ಮಾಡಿ, ಕೊನೆಗೆ ಕರ್ನಾಟಕಕ್ಕೆ ಏಕೈಕವಾದ ಅಂಚೆಯ ಮೂಲಕ ಕಲಾಶಿಕ್ಷಣ ನೀಡುವ ಸಂಸ್ಥೆಯೊಂದನ್ನು ೨೫ ವರ್ಷಗಳ ಕಾಲ ನಡೆಸಿದರು. ೬.೯.೧೯೯೨ರಂದು ನಿಧನರಾದ ಎಂ.ಟಿ.ವಿ. ಆಚಾರ್ಯರು 'ಕಲೆ ಮತ್ತು ನಾನು' ಎಂಬ ಪುಸ್ತಕವನ್ನು ರಚಿಸಿದ್ದಾರೆ. ಅದರಲ್ಲಿ ತಮ್ಮ ಅನುಭವ, ನಿಲುವು ಹಾಗೂ ನೋವುಗಳನ್ನು ವ್ಯಕ್ತಪಡಿಸಿದ್ದಾರೆ.

ತೈಲವರ್ಣದಲ್ಲಿ ಹೆಚ್ಚಾಗಿ ಪುರಾಣಗಳ ಸಾಂದರ್ಭಿಕ ದೃಶ್ಯಗಳನ್ನೇ ರಚಿಸಿದ ಆಚಾರ್ಯರು ಚಿಕ್ಕ ಅಳತೆಯಲ್ಲಿ ಜಲವರ್ಣದಲ್ಲಿ ಸಾಮಾಜಿಕ ದುರಂತ ವ್ಯಂಗ್ಯಗಳನ್ನು ಚಿತ್ರಿಸಿರುವುದು ಗಮನಾರ್ಹ. ಬಡತನವೇ ಮೂರ್ತಿವೆತ್ತಂತೆ ದುಃಖ ದುಮ್ಮಾನಗಳನ್ನು ತುಂಬಿಕೊಂಡು ಶೂನ್ಯದಲ್ಲಿ ದೃಷ್ಟಿನೆಟ್ಟು ನಿಸ್ಸಹಾಯಕನಾಗಿ ಕಾಲಳೆಯುತ್ತಾ ಹೋಗುತ್ತಿರುವ ಹಳ್ಳಿಯ ಉಪಾಧ್ಯಾಯನ ಸುತ್ತ, ಆತನನ್ನು ಅಣಕಿಸುತ್ತ ಗೇಲಿಮಾಡುತ್ತಾ ಕುಣಿದಾಡುತ್ತಿರುವ ಚಿಕ್ಕಮಕ್ಕಳಾಗಲೀ, ಹರಿದ ಚಿಂದಿಯನ್ನು ಉಟ್ಟು 'ಅಂದಿನ ಕೂಳು' ಅರಸುತ್ತಿರುವ ಭಿಕ್ಷುಕನಾಗಲಿ, ಹಣ್ಣು ಮಾರುವವನಿಗೆ, ಕಾಸು ಕೊಡಲು ಜೇಬೆಲ್ಲಾ ತಡಕಾಡುತ್ತಿರುವ ಛತ್ರಿ, ರುಮಾಲುಧಾರಿಯ ಗೃಹಸ್ಥನಾಗಲೀ ಅಥವಾ ಮಕ್ಕಳ ರೈಲು ಆಟ, ಹಳ್ಳಿಗರ ಮುಗ್ಧ ಪ್ರೇಮ ಇತ್ಯಾದಿಗಳನ್ನು ರಚಿಸಬಲ್ಲವರಾಗಿದ್ದ ಆಚಾರ್ಯರಿಗೆ ಮಾನವೀಯ ಕಳಕಳಿ, ಸಮಾಜವಾದದ ಬಗ್ಗೆ ಒಲವು ಇದ್ದುದೇ ಅವರನ್ನು ಒಮ್ಮೆ ರಷ್ಯಾಕ್ಕೂ ಹೋಗಿ ಬರುವಂತೆ ಮಾಡಿತೆನ್ನಬೇಕು.

ಭಾರತಾದ್ಯಂತ ಓಡಾಡಿ, ಮದ್ರಾಸಿನಲ್ಲಿ ಹಲವಾರು ವರ್ಷಗಳು ಇದ್ದು ಆಧುನಿಕ ಕಲಾಪ್ರವಾಹದ ದಿಕ್ಕನ್ನು ಹತ್ತಿರದಿಂದ ನೋಡಿದವರಾದರೂ ಅದಕ್ಕೆ ಸ್ಪಂದಿಸಲು ಅಥವಾ ತಮ್ಮನ್ನು ಒಗ್ಗಿಸಿಕೊಳ್ಳಲು ಆಚಾರ್ಯರಿಗೆ ಸಾಧ್ಯವಾಗದೇ ಹೋದುದು ಒಂದು ದುರ್ದೈವ. ಹಾಗೂ ಆಚಾರ್ಯರ ಅನಾರೋಗ್ಯ ಮತ್ತು ಹಣ, ಪೋಷಣೆಗಳ ಅಭಾವಗಳಿಗಿಂತ ರಮ್ಯಶೈಲಿಯ ಚಿತ್ರಗಳು ತಂದುಕೊಡುತ್ತಿದ್ದ ಆತ್ಮ ಸಂತೋಷ ಮತ್ತು ಜನಪ್ರಿಯತೆಗಳು ಆಚಾರ್ಯರನ್ನು ಮಿತಿಯಲ್ಲಿರಿಸುವಂತೆ ಮಾಡಿತು. ಆಚಾರ್ಯರಿಗೆ ರಾಜ್ಯ ಅಕಾಡೆಮಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳು ಸಂದಾಯವಾಗಿದ್ದವು.

●



ಎನ್.ಪಿ. ಶ್ರೀನಿವಾಸಾಚಾರ್ಯ

— ಅ.ಲ. ನರಸಿಂಹನ್

ಸಂಪ್ರದಾಯದಲ್ಲಿ ಬದಲಾವಣೆ ಅಗೋಚರವಾಗುವಷ್ಟು ನಿಧಾನ. ಚಿತ್ರ, ಶಿಲ್ಪಗಳಿಗೂ ಆರೋಪಿಸಬಹುದಾದ ಈ ಮಾತು, ಸಂಪ್ರದಾಯ ಕಲಾವಿದನ ಅನ್ವೇಷಣಾ ಮನೋಭಾವ, ಇರುವ ಮಿತಿಯೊಳಗೆ ಬದಲಿಸಿಕೊಳ್ಳಬಹುದಾದ ಸಾಧ್ಯಾಸಾಧ್ಯತೆಯನ್ನು ಅವಲಂಬಿಸಿರುತ್ತದೆ.ಅಂತೆಯೇ ನಾಗಮಂಗಲ ಪುಟ್ಟಾಚಾರ್ಯ ಶ್ರೀನಿವಾಸಾಚಾರ್ಯರು (ಜನನ: 1913 ಮರಣ: ೨.೧೧.೯೨) ಪರಂಪರಾನುಗತ ಶಿಲ್ಪಗಳಿಗೆ ಹೊಂದಿಸಿದ ಮಹತ್ತರವಾದ ಬದಲಾವಣೆಗಳು ಎರಡು ರೀತಿಯವು. ವಿಭಿನ್ನ ಲೋಹಗಳನ್ನು ಕೂಡಿಸಿ ಒಂದೇ ಪ್ರತಿಮೆಯನ್ನು ರೂಪಿಸುವುದು ಒಂದಾದರೆ, ಹೊಯ್ಸಳ ಶೈಲಿಯಲ್ಲಿ ಲೋಹದ ಶಿಲ್ಪಗಳನ್ನು ತಯಾರಿಸಿದ್ದು ಇನ್ನೊಂದು ಸಾಧನೆ. ಶಿವಶಕ್ತಿಗಳ ಸಂಕೇತವಾಗಿ ಶಿವನ ಅರ್ಧ ಭಾಗವನ್ನು ತಾಮ್ರದಲ್ಲಿಯೂ, ಶಿವೆಯ ಭಾಗವನ್ನು ಕಂಚಿನಲ್ಲಿಯೂ ಬರುವಂತೆ, ವಿಭಿನ್ನ ತಾಪಮಾನದಲ್ಲಿ ಕರಗುವ ಲೋಹಗಳನ್ನು ಒಮ್ಮೆಗೆ ಬೆಸೆಯುವಂತೆ ಎರಕ ಹೊಯ್ಯಬಹುದಾದ ಸಾಧ್ಯತೆಗಳನ್ನು ತೋರಿಸಿ ಕೊಟ್ಟಿರಲ್ಲದೆ ಹಲವಾರು ಪ್ರಯೋಗಗಳನ್ನೂ ಮಾಡಿದರು. ಅಂತೆಯೇ ಹೊಯ್ಸಳ ಶಿಲ್ಪಗಳು ಅತಿಯಾದ ಕುಸುರಿ ಕೆಲಸಗಳಿಂದ ಕೂಡಿದ್ದು ಲೋಹದಲ್ಲಿ ರೂಪಿಸಲು ಸಾಧ್ಯವಾಗದೆ ಅವು ಅಶಾಸ್ತ್ರೀಯ ಎಂಬ ಅಪವಾದಕ್ಕೆ ಗುರಿಯಾಗಿದ್ದು ಆಚಾರ್ಯರು ಹೊಯ್ಸಳ ಶೈಲಿಯಲ್ಲಿ ಸಾಕಷ್ಟು ಶಿಲ್ಪಗಳನ್ನು ಬೆಳ್ಳಿಯೂ ಸೇರಿದಂತೆ ವಿವಿಧ ಲೋಹಗಳಲ್ಲಿ ಯಶಸ್ವಿಯಾಗಿ ರೂಪಿಸಿದರಲ್ಲದೆ; ಮೂಲ ಹೊಯ್ಸಳ ಶಿಲ್ಪಗಳಲ್ಲಿ ಕಂಡುಬರುವ 'ಮೊದ್ದುತನ'ವನ್ನು ನಿವಾರಿಸಿ ಇನ್ನಷ್ಟು ಪರಿಪೂರ್ಣವಾಗಿಸಿದರು. ಈ ಎರಡು ಸಾಧನೆಗಳಿಂದಾಗಿ ಅಖಿಲ ಭಾರತ ಮಟ್ಟದಲ್ಲಿ ಎರಡು ಬಾರಿ ಪುರಸ್ಕೃತರಾದರು.

ರಾಜ್ಯ ಅಕಾಡೆಮಿಯಿಂದ ಸನ್ಮಾನಿತರೂ ಆಗಿದ್ದ ಆಚಾರ್ಯರು, ಕೆಲಕಾಲ ಡಿಸೈನ್ ಸೆಂಟರಿನಲ್ಲಿ ಕುಶಲಕರ್ಮಿಯಾಗಿಯೂ ಕೆಲಸ ಮಾಡಿದರು. ಆಚಾರ್ಯರಿಗಿದ್ದ ಶಾಸ್ತ್ರಜ್ಞಾನ, ಆಗಮಗಳ ಬಗ್ಗೆ,ಮೂರ್ತಿ ಶಿಲ್ಪಗಳ ಬಗ್ಗೆ ಇದ್ದ ಪಾಂಡಿತ್ಯ ಅವರನ್ನು ಆ ಕ್ಷೇತ್ರದಲ್ಲಿ ಅಧಿಕಾರಯುತವಾಗಿ ಮಾತಾಡುವಂತೆ ಮಾಡಿತ್ತು. ಎಳವೆಯಿಂದ ನಿರಂತರವಾಗಿ ಶಿಲ್ಪ ರಚಿಸಿ ಸುಮಾರು ಅರುವತ್ತು ವರ್ಷಗಳಷ್ಟು ದೀರ್ಘಾನುಭವ ಹೊಂದಿ ಸಾಂಪ್ರದಾಯಿಕ ಶಿಲ್ಪಕಲೆಯನ್ನು ಉಳಿಸಿ, ಬೆಳೆಸಿದರು. ಅದನ್ನು ಮುಂದುವರಿಯುವಂತೆ ಮಾಡಿದರು.

•



ಎಂ. ಗೋಪಾಲಕೃಷ್ಣ ಅಡಿಗ

— ಸುಜ್ಞಾನ ಮೂರ್ತಿ

ಕನ್ನಡ ನವ್ಯಕಾವ್ಯವನ್ನು ಶ್ರೀಮಂತಗೊಳಿಸಿದ ಶ್ರೇಷ್ಠಕವಿ ಹಾಗೂ ವಿಮರ್ಶಕರಾದ ಶ್ರೀ ಗೋಪಾಲಕೃಷ್ಣ ಅಡಿಗರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿಯಲ್ಲಿ ಫೆಬ್ರವರಿ ೧೮.೧೯೧೮ರಂದು. ತಮ್ಮ ಪ್ರಾರಂಭದ ವಿದ್ಯಾಭ್ಯಾಸವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಗಿಸಿ ನಂತರ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. (ಆನರ್ಸ್) ಮತ್ತು ಎಂ.ಎ (ಇಂಗ್ಲಿಷ್) ಪದವಿಗಳನ್ನು ಪಡೆದು ಮೈಸೂರಿನ ಶಾರದಾ ವಿಲಾಸ ಕಾಲೇಜು, ಸೈಂಟ್ ಫಿಲೋಮಿನ ಕಾಲೇಜು ಮತ್ತು ಕುಮಟ ಕೆನರಾ ಕಾಲೇಜುಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿದರು. ಸಾಗರದ ಲಾಲ್ ಬಹದ್ದೂರ್ ಕಾಲೇಜು ಮತ್ತು ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡಿದ ಅಡಿಗರು ನ್ಯಾಷನಲ್ ಬುಕ್‌ಟ್ರಸ್ಟಿನ ನಿರ್ದೇಶಕರಾಗಿ ಸ್ವಲ್ಪ ಕಾಲ ಸೇವೆ ಸಲ್ಲಿಸಿದ್ದರು. ೧೯೭೧ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಬೆಂಗಳೂರು ಕ್ಷೇತ್ರದಿಂದ ಲೋಕ ಸಭಾ ಚುನಾವಣೆಗೂ ಸ್ಪರ್ಧಿಸಿದ್ದರು. ೧೯೭೪ರಲ್ಲಿ ಅಮೆರಿಕ ವಿಶ್ವವಿದ್ಯಾಲಯಗಳಿಗೆ ವಿಶೇಷ ಉಪನ್ಯಾಸಕರಾಗಿ ಹೋಗಿ ಬಂದ ಇವರು ಸಿಮ್ಲಾದ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ರಿಸರ್ಚ್‌ಫೆಲೋ ಆಗಿ ಕೆಲಸ ನಿರ್ವಹಿಸಿದರು.'ಸಾಕ್ಷಿ'ಎಂಬ ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿ ಹೊಸ ಸಂವೇದನೆ ಹಾಗೂ ಹೊಸ ಅಭಿವ್ಯಕ್ತಿ ವಿಧಾನಗಳಿಗೆ ಮಾರ್ಗದರ್ಶಕರಾದ ಅಡಿಗರು ತಮ್ಮ ಕಿರಿಯ ತಲೆಮಾರಿನ ಮೇಲೆ ಬೀರಿದ ಪ್ರಭಾವ ಅಪಾರವಾದುದು.

ನವ್ಯಸಾಹಿತ್ಯದ 'ಯುಗ ಪ್ರವರ್ತಕ'ರೆಂಬ ಗೌರವವನ್ನು ಪಡೆದ ಅಡಿಗರು ಕನ್ನಡ ನವೋದಯ ಸಾಹಿತ್ಯದ ಭಾವಾವೇಶದಲ್ಲಿ ಸಾಹಿತ್ಯಾಸಕ್ತರು ಆನಂದಿಸುತ್ತಿದ್ದ ಕಾಲದಲ್ಲಿ ವೈಚಾರಿಕತೆ ಮತ್ತು ನಾಟಕೀಯ ಗುಣಗಳ, ಆಡುಮಾತಿನ ಲಯಕ್ಕೆ ಹತ್ತಿರವಾದ ಸ್ವಚ್ಛಂದ ಛಂದಸ್ಸು, ನಾಗರಿಕ ಪ್ರತಿಮೆಗಳು, ಸಮಷ್ಟಿದೃಷ್ಟಿಯ ಕವಿತೆಗಳನ್ನು ಬರೆದು ನವ್ಯಕಾವ್ಯದ ಮಹತ್ವದ ಬರೆಹಗಾರರಾದರು.

'ಮೋಹನ ಮುರಳಿ'ಯ ಆಧ್ಯಾತ್ಮಿಕ ತುಡಿತ, 'ಧೂಮಲೀಲೆ'ಯ ವಿಡಂಬನೆ, 'ಕಟ್ಟುವೆವು ನಾವು'ವಿನ ರಾಷ್ಟ್ರನಿರ್ಮಾಣದ ಛಲವನ್ನು ತಮ್ಮ ಆರಂಭದ ಕವಿತೆಗಳಲ್ಲಿ ತೋರಿದ ಅಡಿಗರು ಸ್ವಾತಂತ್ರ್ಯ ಭಾರತದ ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ವಾಸ್ತವದ ಗತಿಶೀಲತೆಯ ಕುರುಹುಗಳನ್ನು ಭೂಮಿಗೀತ, ಭೂತ, ಪ್ರಾರ್ಥನೆ, ಕೂಪಮಂಡೂಕ, ಮೂಲಕ ಮಹಾಶಯರು, ಗೊಂದಲಪುರ, ಹಿಮಗಿರಿಯ ಕಂದರ - ಮೊದಲಾದ ಕವನಗಳಲ್ಲಿ ನಿರೂಪಿಸಿದ್ದಾರೆ.

ಭಾವತರಂಗ (೧೯೪೬), ಕಟ್ಟುವೆವು ನಾವು (೧೯೪೮), ನಡೆದು ಬಂದ ದಾರಿ (೧೯೫೨), ಚಂಡಮದ್ದಳೆ (೧೯೫೪), ಭೂಮಿಗೀತ (೧೯೫೯), ವರ್ಧಮಾನ (೧೯೭೨), ಇದನ್ನು ಬಯಸಿರಲಿಲ್ಲ(೧೯೭೫), ಮೂಲಕ ಮಹಾಶಯರು(೧೯೮೧), ಬತ್ತಲಾರದ ಗಂಗೆ (೧೯೮೩), ಚಿಂತಾಮಣಿಯಲ್ಲಿ ಕಂಡಮುಖ (೧೯೯೦), ಸುವರ್ಣಪುತ್ಥಳಿ (೧೯೯೦) ಬಾ ಇತ್ತ ಇತ್ತ (೧೯೯೩) ಇವು ಅಡಿಗರ ಕವನ ಸಂಕಲನಗಳು. ಸಾಹಿತ್ಯ, ಸಂಸ್ಕೃತಿ, ರಾಜಕೀಯ ಹೀಗೆ ವಿವಿಧ ವಿಷಯಗಳ ಬಗ್ಗೆ ಅಡಿಗರು ಅನೇಕ ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ಕಾವ್ಯದಲ್ಲಿ ವಾಸ್ತವವಾದವನ್ನು ತಂದ ಹಾಗೆ, ವಿಮರ್ಶೆಯಲ್ಲಿ ಕೃತಿನಿಷ್ಠ ವಿಶ್ಲೇಷಣೆಯನ್ನು ತಂದರು. ಮಣ್ಣಿನವಾಸನೆ, ಕನ್ನಡದ ಅಭಿಮಾನ, ವಿಚಾರಪಥ, ನಮ್ಮ ಶಿಕ್ಷಣ ಕ್ಷೇತ್ರ ಇವು ಇವರ ಗದ್ಯಬರಹಗಳ ಸಂಗ್ರಹಗಳು.

ಐವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗೌರವಿಸಲ್ಪಟ್ಟ ಅಡಿಗರು ರಾಜ್ಯಸಾಹಿತ್ಯ ಅಕಾಡೆಮಿ, ಕೇಂದ್ರಸಾಹಿತ್ಯ ಅಕಾಡೆಮಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ ಹಾಗೂ ಕಬೀರ್ ಸಂಮಾನ್ ಪ್ರಶಸ್ತಿಗಳನ್ನು ಪಡೆದಿದ್ದರು. ಅವರು ೧೪-೧೧-೯೨ರಂದು ಮರಣ ಹೊಂದಿದರು. ಅಡಿಗರು ನಮ್ಮ ಕಾಲದ ಅತ್ಯುತ್ತಮ ಸಂವೇದನಾ ಪ್ರಜ್ಞೆಯುಳ್ಳ ಕವಿ.

•

ಪಾ. ವೆಂ. ಆಚಾರ್ಯ

— ಮೋಹನ್ ಕುಂಟಾರ್



ಪಾ.ವೆಂ. ಆಚಾರ್ಯ, ಲಾಂಗೂಲಾಚಾರ್ಯ ಎಂದೇ ಪ್ರಸಿದ್ಧರಾದ ಪಾಡಿಗಾರು ವೆಂಕಟರಮಣ ಆಚಾರ್ಯ ಅವರು ನಮ್ಮ ನಾಡಿನ ವಿರಳ ಬಹುಮುಖ ಪ್ರತಿಭಾವಂತರಲ್ಲಿ ಒಬ್ಬರು. ಬಡತನದಿಂದಲೇ ಜೀವನ ನಡೆಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮೇಧಾವಿಗಳು. ಇವರು ಶ್ರೀ ಪಾಡಿಗಾರು ಲಕ್ಷ್ಮಿನಾರಾಯಣಾಚಾರ್ಯ ಮತ್ತು ಸೀತಮ್ಮನವರ ಮಗನಾಗಿ ೧೯೧೫ ರಲ್ಲಿ ಉಡುಪಿಯಲ್ಲಿ ಜನಿಸಿದರು. ಬಡತನದಿಂದ ವಿದ್ಯಾಭ್ಯಾಸ ಮುಂದುವರಿಸಲಾಗದೆ ಶಾಲಾ ಮಾಸ್ತರರಾಗಿ, ಅಂಗಡಿ ಗುಮಾಸ್ತರಾಗಿ, ಕಂಪನಿಯಲ್ಲಿ ಸೆಕ್ರೆಟರಿಯಾಗಿ, ಪ್ರೆಸ್

ಮ್ಯಾನೇಜರ್ ಆಗಿ ಹೋಟೆಲ್ ಬಿಲ್ ರೈಟರ್‌ರಾಗಿ ಕೆಲಸ ನಿರ್ವಹಿಸಿದರು. ೧೯೪೨ರಿಂದ ಹುಬ್ಬಳ್ಳಿಗೆ ಬಂದು ಕರ್ಮವೀರದ ಉಪಸಂಪಾದಕ ಹಾಗೂ ಕಸ್ತೂರಿಯ ಸಂಪಾದಕರಾಗಿ ೧೯೭೫ರವರೆಗೂ ದುಡಿದರು.

ತಮ್ಮ ಹನ್ನೊಂದನೆಯ ವಯಸ್ಸಿನಿಂದಲೇ ಕವನಗಳನ್ನು ಬರೆಯ ಹೊರಟ ಆಚಾರ್ಯರು, ಹರಟೆ, ವ್ಯಂಗ್ಯ ವಿಡಂಬನಾತ್ಮಕ ಪ್ರಬಂಧಗಳು, ಕನ್ನಡ ತುಳು ಭಾಷೆಗಳ ಕವನ ಸಂಕಲನಗಳು, ಕನ್ನಡ ಸಾಹಿತ್ಯಕ್ಕೆ ಅವರಿಂದ ದತ್ತವಾದುವು. 'ಪ್ರಹಾರ' 'ವಕ್ರದೃಷ್ಟಿ' ಕೃತಿಗಳು ಅವರಿಗೆ ತಂದುಕೊಟ್ಟ ಜನಪ್ರಿಯತೆ, ಇದಕ್ಕೆ ಸಾಕ್ಷಿ. 'ಪದಾರ್ಥ ಚಿಂತಾಮಣಿ' ಆಚಾರ್ಯರ ಅಪೂರ್ವ ಕೊಡುಗೆ. ಇಲ್ಲಿ ಶಬ್ದ ಜಿಜ್ಞಾಸುವಿನ ಸೃಜನಶೀಲಗುಣ, ಸಾಹಿತ್ಯ, ಸಾಹಿತ್ಯೇತರ ವಲಯಗಳಲ್ಲಿನ ಅಪಾರವಾದ ಜ್ಞಾನ, ಊಹೆ ಹಾಗೂ ತಾರ್ಕಿಕ ಸಾಮರ್ಥ್ಯಗಳ ವೈಭವವಿದೆ. ಪದವೊಂದಕ್ಕೆ ಹಿನ್ನೆಲೆಯಿದೆ, ಇತಿಹಾಸವಿದೆ, ಪುರಾಣವಿದೆ. ಅದನ್ನು ದುರ್ಬೀನು ಹಿಡಿದು ನೋಡುವ ಸಹಜ ಗುಣ ಇವರದು. ಪದದ ಬೆನ್ನು ಹತ್ತಿ ತಲಸ್ಪರ್ಶಿಯಾಗಿ ಪರಾಮರ್ಶಿಸುವ, ಹೇಳುವುದನ್ನ ನಿಖರವಾಗಿ ಹೃದ್ಯವಾಗಿ ಹೇಳುವ ಮಾರ್ದವ ಬರವಣಿಗೆ ಆಚಾರ್ಯರಿಗೆ ವಿಶಿಷ್ಟವಾದದು. ಈ ನಿಟ್ಟಿನಲ್ಲಿ ಅವರು ತಮ್ಮದೇ ಆದ ಹೊಸ ಮಾರ್ಗದಲ್ಲಿ ನಡೆದರು. ಕನ್ನಡದಲ್ಲಿ ಪದ ಪರಂಪರೆಯ ಹುಟ್ಟಿಗೆ ಕಾರಣರಾದರು.

ಮುಂಬಯಿ ಸರಕಾರದ ಬಹುಮಾನ, ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪದಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಮೈಸೂರಿನಲ್ಲಿ ಸಾರ್ವಜನಿಕ ಸನ್ಮಾನ ಮತ್ತು ನಿಧಿ ದಾನ ಇವೆಲ್ಲ ಇವರ ಪ್ರತಿಭೆಗೆ ಸಂದ ಗೌರವಗಳು. ರಾಮಯ್ಯ ಪ್ರಶಸ್ತಿ, ಗೋಯೆಂಕಾ ಪ್ರಶಸ್ತಿ, ಪತ್ರಿಕೋದ್ಯಮದಲ್ಲಿನ ಇವರ ಸಾಧನೆಗೆ ನಿದರ್ಶನ. ಮೂಲ್ಕಿಯಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದ ಈ ಮಹನೀಯರು ಸರಳ, ಸಜ್ಜನಿಕೆಯ ನಿಗರ್ವಿ. ಕೃಶಕಾಯದ ಪ್ರತಿಭಾ ರಾಕ್ಷಸ. ಮಾತಿನಲ್ಲಿ ವಿನೋದ, ವಿಡಂಬನೆಗಳ ಲಘು ಪ್ರಹಾರಗಳನ್ನಿರಿಸಿಕೊಂಡ ಮಾತುಗಾರ. ಅಪೂರ್ವವಾದದ್ದನ್ನು ಸಾಧಿಸುವ ಛಲತೊಟ್ಟವರು. ಆರೀತಿ ನಡೆದು ಸಾಧಿಸಿ ತೋರಿಸಿದವರು.

●



ವಿನಾಯಕ ಕೃಷ್ಣ ಗೋಕಾಕ

— ಮಲ್ಲೇಪುರಂ ಜಿ. ವೆಂಕಟೇಶ

ನವ್ಯಕಾವ್ಯದ ಪ್ರವರ್ತಕರಲ್ಲಿ ವಿ.ಕೃ. ಗೋಕಾಕರು ಒಬ್ಬರು. ಅವರು ೧೯೨೫ರ ಹೊತ್ತಿಗೆ ಇಂಗ್ಲಿಷ್‌ನಲ್ಲಿ ಕಾವ್ಯ ರಚನೆ ಮಾಡಿದರು. ಅವರು ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ. ಇಂಗ್ಲಿಷ್‌ನಲ್ಲಿ ಪ್ರಥಮ ಸ್ಥಾನ ಪಡೆದು ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪನ ಶುರುಮಾಡಿದರು. ಅವರ ಮೊದಲ ಕವನ ಸಂಕಲನ 'ಕಲೋಪಾಸಕ', ಬಂದದ್ದು ಆ ಸುಮಾರಿನಲ್ಲೇ. ಅವರ 'ಇಜ್ಜೋಡು' ಬೃಹತ್ ಕಾದಂಬರಿಯ ಮೊದಲ ಭಾಗ ಹೊರಬಂದಿದ್ದು ೧೯೩೪ರಲ್ಲಿ. ೧೯೩೬ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಮುಖ್ಯ ವಿಷಯವಾಗಿಟ್ಟುಕೊಂಡು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

೧೯೩೮ ರಲ್ಲಿ ಇಂಗ್ಲೆಂಡಿನಿಂದ ಬಂದೊಡನೆ ಸಾಂಗ್ಲಿ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಉಪಪ್ರಾಚಾರ್ಯ ಪದವಿ ಪಡೆದರು. ಈ ಸಂದರ್ಭದಲ್ಲಿ 'ಸಮುದ್ರ ಗೀತೆಗಳು' ಕಾವ್ಯ ಸಂಕಲನ ಪ್ರಕಟವಾಯಿತು. ಅವರು ಮುಂದೆ ೧೯೪೫ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ೧೯೪೬ರಲ್ಲಿ ಗುಜರಾತದ ವೀಸನಗರ ಕಾಲೇಜಿನ ಸಂಸ್ಥಾಪಕ ಪ್ರಿನ್ಸಿಪಾಲರಾಗಿ ದುಡಿದರು. ೧೯೫೨ರಲ್ಲಿ ಧಾರವಾಡಕ್ಕೆ ಬಂದು ಕರ್ನಾಟಕ ಕಾಲೇಜಿನಲ್ಲಿ ಪ್ರಿನ್ಸಿಪಾಲರಾದರು. ವಿದೇಶ ಪ್ರವಾಸಗಳು ೧೯೫೦ರಿಂದ ೧೯೬೫ರವರೆಗೆ ಒಂದಲ್ಲ ಒಂದು ಕಾರಣವಾಗಿ ನಡೆದವು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ತಮ್ಮ ವಿದ್ವತ್ತು, ಆಡಳಿತ ಸಾಮರ್ಥ್ಯವನ್ನು ಬೆಳಕಿಗೆ ತಂದುಕೊಂಡರು.

ಅವರ ಶ್ರೇಷ್ಠ ಕಾದಂಬರಿ 'ಸಮರಸವೇ ಜೀವನ'. ಅದು ಅವರ ಮಹತ್ವಾಕಾಂಕ್ಷೆಯ ಕೃತಿ. ಇಲ್ಲಿ ಚಿತ್ರಿತವಾಗಿರುವ ಜೀವನ ಸಂಕೀರ್ಣತೆ, ಪಾತ್ರ ವೈವಿಧ್ಯ, ಅನುಭವ ವೈಪುಲ್ಯ, ಕ್ರಿಯಾ ಬಾಹುಲ್ಯ ಮತ್ತು ಪ್ರಪಂಚ ವಿಸ್ತಾರ ಇವುಗಳು ಗೋಕಾಕರ ಪ್ರತಿಭೆಯ ಅನನ್ಯತೆಯನ್ನು ರುಜುವಾತು ಪಡಿಸುತ್ತವೆ.

'ಭಾರತಸಿಂಧುರಶ್ಮಿ', ಪೂರ್ವ-ಪಶ್ಚಿಮಗಳ ಮಹಾಕಾವ್ಯ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು ಅರಳಿ ನಿಂತಿರುವ ವಿಶಿಷ್ಟಕಾವ್ಯ. ಅದರಲ್ಲಿ ಒಂದು ಜನಾಂಗ, ಸಂಸ್ಕೃತಿ, ಇತಿಹಾಸ, ಯುಗಧರ್ಮ, ಜಗದ ಪ್ರಜ್ಞೆ ಹಾಸು ಹೊಕ್ಕಾಗಿ ನಿಂತಿದೆ. ವ್ಯಕ್ತಿ

ವಿಕಸನದ ಚಿರಂತನ ಕಥೆ ಹಾಗೂ ಮನುಕುಲದ ಹೃದಯಾಂತರಾಳದಲ್ಲಿ ನಡೆದ ಒಳಿತು ಕೆಡುಕಿನ ಸಂಗ್ರಾಮವನ್ನು ಸಾರುವ ಕೃತಿಯಾಗಿದೆ.

ಗೋಕಾಕರು ೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೬೦ರಲ್ಲಿ ಇವರ 'ದ್ಯಾವಾ ಪೃಥಿವಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು. ಅದೇ ವರ್ಷ ಪದ್ಮಶ್ರೀ ಮಾಲೆ ಕೊರಳಿಗೆ ಬಿತ್ತು. ೧೯೮೦ರಲ್ಲಿ ಕೆಲಿಫೋರ್ನಿಯಾದ ಪೆಸಿಫಿಕ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ; ೧೯೮೩ ರಲ್ಲಿ, ಭಾರತ ಸಿಂಧುರಶ್ಮಿಗೆ ಅಕಾಡೆಮಿ ಪುರಸ್ಕಾರ; ೧೯೮೭ರಲ್ಲಿ ಐ.ಬಿ.ಎಚ್. ಟ್ರಸ್ಟ್‌ನ ಪ್ರಶಸ್ತಿ; ೧೯೯೧ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು ಬಂದವು ಅವರು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಸಮಾನ ಪ್ರಭುತ್ವ ಪಡೆದಿದ್ದ ಸೃಜನಶೀಲ ವಿದ್ವಾಂಸರಾಗಿದ್ದರು. ಇವರು ೨೮.೦೪.೯೨ರಂದು ನಿಧನರಾದರು.

•



ನಿರಂಜನ

— *ಟಿ.ಶ್ರೀನಿವಾಸರಾಜು*

ಕನ್ನಡದ ಪ್ರತಿಭಾವಂತ ಲೇಖಕರಲ್ಲಿ ನಿರಂಜನರು ಅಗ್ರಗಣ್ಯರು. ಅವರ ಪೂರ್ಣ ಹೆಸರು ಕುಳಕುಂದ ಶಿವರಾಮ. ಒಂದು ವರ್ಷದ ಹಿಂದೆ ಅನುಪಮ ಅವರನ್ನು ಕಳೆದುಕೊಂಡ 'ಕಥೆ' (ಅವರ ಮನೆ ಹೆಸರು) ಮಾರ್ಚ್ ೧೩ರಂದು ನಿರಂಜನರನ್ನು ಕಳೆದುಕೊಂಡು ಅನಾಥವಾಯಿತು.

೧೫ ಜೂನ್ ೧೯೨೪ರಲ್ಲಿ ಜನಿಸಿದ ಕುಳಕುಂದ ಶಿವರಾಯರ ಜೀವನಯಾತ್ರೆ ಒಂದು ದೊಡ್ಡ ಕಥೆ. ೧೯೩೫ರಲ್ಲಿ ಶ್ರೀ ಶಿವರಾಮಕಾರಂತರ 'ಬಾಲವನ'ದ ಮಕ್ಕಳ ಕೂಟದಲ್ಲಿ ಸ್ವಯಂಸೇವಕರಾಗಿ ೧೯೪೩ರಲ್ಲಿ ಕಮ್ಯೂನಿಷ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿ, ೧೯೪೮ ರಿಂದ ೧೯೫೦ ರ ವರೆಗೆ ಭೂಗತರಾಗಿ, ತಲೆತಪ್ಪಿಸಿಕೊಂಡು ಕರ್ನಾಟಕವನ್ನು ಸುತ್ತಿದರು. ೧೯೫೩ರಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ವಿಮೋಚನೆಯನ್ನು ಪಡೆದು ೧೯೫೬ರಲ್ಲಿ ಅನುಪಮಾ ಅವರನ್ನು ವಿವಾಹವಾದರು. ನಾಡಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಿರುಗಾಳಿಯಂತೆ ಅಡ್ಡಾಡುತ್ತಿದ್ದ ನಿರಂಜನರಿಗೆ ಮೈಸೂರಿನಲ್ಲಿ ೧೯೮೧ರಂದು ಪಾರ್ಶ್ವವಾಯು ಪೀಡೆ ಬಡಿಯಿತು. ಅಂದಿನಿಂದ ಬದುಕಿನ ಕೊನೆಯ ವರೆಗೂ ಅವರ ಮನೆಯೇ ಅವರ ಜಗತ್ತಾಯಿತು.

ನಿರಂಜನರು (೧೯೭೦-೭೪) ಕರ್ನಾಟಕ ಸಹಕಾರೀ ಪ್ರಕಾಶನದ ಬೃಹತ್ ಯೋಜನೆಗಾಗಿ ಮಕ್ಕಳ ವಿಶ್ವಕೋಶದ ಕಲ್ಪನೆ ಯೋಜನೆಯನ್ನು ಸಿದ್ಧಪಡಿಸಿದರು. ಏಳು ಸಂಪುಟಗಳಲ್ಲಿ ರೂಪುಗೊಂಡ ಈ 'ಜ್ಞಾನಗಂಗೋತ್ರಿ', ಕನ್ನಡದ ಕಿರಿಯರಿಗೆ ಆಕರದ ಉಗ್ರಾಣವಾಯಿತು. ನಿರಂಜನರೇ ಹೇಳುವಂತೆ 'ಜ್ಞಾನಗಂಗೋತ್ರಿ' ಎಂದರೆ ಉಸಿರು, ರಕ್ತ, ಮಾಂಸ ತುಂಬಿಕೊಂಡಿರುವ ಜೀವರೂಪ.

ಜಗತ್ತಿನ ಶ್ರೇಷ್ಠ ಕಲೆಗಳ ಮಾಲಿಕೆಯಲ್ಲಿ 'ವಿಶ್ವಕಥಾಲೋಕ' (೧೯೭೯-೮೩) ೨೫ ಸಂಪುಟಗಳಲ್ಲಿ ಸಿದ್ಧಪಡಿಸಿದರು. ಈ ಎಲ್ಲ ಕಥೆಗಳ ಆಯ್ಕೆಯಲ್ಲಿ ಅವರು ಮುಖ್ಯವಾಗಿ ಗಮನಿಸಿದ್ದು ಮಾನವೀಯ ತುಡಿತ ಮಾತ್ರ. ಒಟ್ಟು ಜಗತ್ತಿನ ೩೨೦ ಕಥೆಗಳನ್ನು ಸಂಗ್ರಹಿಸಿ, ಅಸಂಖ್ಯಾಕ ಸಂಸ್ಕೃತಿಗಳಲ್ಲಿ ಹರಿಯುವ ಜೀವಧಾರೆ ಒಂದೇ ಎಂದು ಹೇಳಿದರು.

ವಿಮೋಚನೆ (೧೯೫೩) ನಿರಂಜನರ ಮೊದಲ ಕಾದಂಬರಿ. ಆಗ ಅವರಿಗೆ ೩೦ ವರ್ಷ. ಅವರ ಬಹುಪಾಲು ಕೃತಿಗಳು ಸಿದ್ಧಾಂತದ ಚೌಕಟ್ಟಿನಲ್ಲಿ ಅರಳಿದವು. ಹೊಸಗನ್ನಡದ ಮೊದಮೊದಲ ನಾಸ್ತಿಕ ಲೇಖಕರಲ್ಲಿ ನಿರಂಜನರು ಮುಖ್ಯರು. ಅವರಿಗೆ ಕೀರ್ತಿಯನ್ನು ತಂದು ಕೊಟ್ಟ ಕಾದಂಬರಿ 'ಚಿರಸ್ಮರಣೆ' (೧೯೫೫) ಅನನ್ಯ ದೇಶಭಕ್ತಿ ಉತ್ಕಟ ಆದರ್ಶ ಹಾಗೂ ವರ್ಗಪ್ರಜ್ಞೆಯಿಂದ ರೂಪುಗೊಂಡದ್ದು. ಇದು ಪುಟ್ಟಿ ಕಯ್ಯೂರಿನ ರೈತರು ನಡೆಸಿದ ಹೋರಾಟವೇ ಇದರ ಕಥಾವಸ್ತು.

ಕಲ್ಯಾಣಸ್ವಾಮಿ (೧೯೫೬) ಮತ್ತು 'ಸ್ವಾಮಿ ಅಪರಂಪಾರ (೧೯೭೫) ಬ್ರಿಟಿಷರು ಭಾರತಕ್ಕೆ ಬಂದ ಹಿನ್ನೆಲೆಯಲ್ಲಿ ಮೂಡಿ ಬಂದ ಕೃತಿಗಳು. ಅವರ ಮುಖ್ಯ ಕಾದಂಬರಿಗಳಲ್ಲಿ ಒಂದಾದ'ಮೃತ್ಯುಂಜಯ' (೧೯೭೬) ಕಾಲಾಂತರದಿಂದ ಸಂಸ್ಕೃತಿಯ ದೂರದಿಂದ ರಚನೆಗೊಂಡ ಕುತೂಹಲಕಾರಿಯಾದ ಕೃತಿ. ಮೂರು ಸಾವಿರ ವರ್ಷಗಳ ಹಿಂದಿನ ಈಜಿಪ್ಟ್ ಗತಜೀವನದ ಪುನರ್‌ಸೃಷ್ಟಿಯನ್ನು ನಿರಂಜನರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.


ಇವರ ಕಾದಂಬರಿಗಳ ಮಧ್ಯಬಿಂದು ವಾಸ್ತವವಾದವನ್ನು ಸಮರ್ಥಿಸುವುದು. ಅವರು ತಮ್ಮ ೨೫ ಕಾದಂಬರಿಗಳಲ್ಲಿ ಮನುಷ್ಯನ ಘನತೆಯನ್ನು ಎತ್ತಿ ಹಿಡಿಯುವ ಶೋಧಿಸುವ, ಅಭಿವ್ಯಕ್ತಿಯನ್ನು ಸಾಧಿಸಿದರು. ಅವರ ಕೃತಿಗಳಲ್ಲಿ ಅಂತರಂಗದ ಪ್ರತಿಸ್ಪಂದನಕ್ಕಿಂತ ಬಾಹ್ಯಲೋಕದ ಸ್ಪಂದನಕ್ಕೆ ಆದ್ಯತೆ. ಕನ್ನಡ 'ಅಂಕಣ' ಬರಹಕ್ಕೆ ಖಚಿತ ಆಕಾರವನ್ನು ನೀಡಿದವರಲ್ಲಿ ನಿರಂಜನರು ಮೊದಲಿಗರು. ಸುಮಾರು ೨೫ ವರ್ಷಗಳಲ್ಲಿ ಒಂಬತ್ತು ಸಂಪುಟಗಳ 'ಅಂಕಣ' ಬರಹಗಳನ್ನು ಕೊಟ್ಟಿದ್ದಾರೆ. ಇವು ಆಧುನಿಕ ಇತಿಹಾಸಕಾರನಿಗೆ ಸಮೃದ್ಧಿಯ ಆಕರಗಳಾಗಿವೆ.

'ಬುದ್ಧಿಭಾವ ಬದುಕು' ನಿರಂಬನರ ಆಲೋಚನೆಯ ದಾರಿಯನ್ನು ಪ್ರತಿನಿಧಿಸುವ ಕೃತಿ. ಅದು ಸಮಕಾಲೀನ ಸಾಹಿತ್ಯದ ಆಗುಹೋಗುಗಳನ್ನು ಕುರಿತು ಆಲೋಚಿಸುತ್ತದೆ.

ನಿರಂಜರಿಗೆ, ೧೯೭೫ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ: ೧೯೭೮ರಲ್ಲಿ; ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ೧೯೭೪ ರಲ್ಲಿ ಸೋವಿಯತ್‌ಲ್ಯಾಂಡ್: ೧೯೮೫ರಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ : ೧೯೯೦ರಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಬಂದವು.

ನಿರಂಜನರ ಸುಮಾರು ಹತ್ತು ವರ್ಷಗಳ ಸಿದ್ಧತೆ ಅಧ್ಯಯನ, ಧ್ಯಾನದ ಫಲವಾಗಿ ಬರಬೇಕಾಗಿದ್ದ ಅವರ ಕಾದಂಬರಿ 'ಹೆಜ್ಜೆ' ಕೊನೆಗೂ ಮೂಡಿ ಬರಲಿಲ್ಲ. ಬದುಕಿನ ಕೊನೆಯ ವರೆಗೂ ಜಾತ್ಯತೀತ ಮನಃಸ್ಥಿತಿಯನ್ನು ಉಳಿಸಿಕೊಂಡ 'ನಿರಂಜನ' ತಣ್ಣನೆಯ ಕೆಂಡದಂಥ ವ್ಯಕ್ತಿತ್ವ, ಕನ್ನಡ ಸಾಂಸ್ಕೃತಿಕ ಪ್ರಪಂಚದಲ್ಲಿ ಚಿರಸ್ಮರಣೆಗೆ ಪಾತ್ರ 'ಛಲದಂಕ ಮಲ್ಲ'.

•



ಪೋಲಂಕಿ ರಾಮಮೂರ್ತಿ

— ಮಲ್ಲಿಕಾರ್ಜುನ ಗೌಡ


ದಿನಾಂಕ: ೯.೧೧.೯೨ರಂದು ನಿಧನರಾದ ಶ್ರೀ ಪೋಲಂಕಿ ರಾಮಮೂರ್ತಿಯವರು ತೆಲುಗು ಭಾಷಿಕರು. ಪೋಲಂಕಿಯವರ ತಂದೆತಾಯಿಗಳು ಕೆಲಕಾಲ ಹೊಸಪೇಟೆಯಲ್ಲಿದ್ದು ಹರಿಹರಕ್ಕೆ ಹೋಗಿ ನೆಲೆಸಿದ್ದರು. ದಾವಣಗೆರೆ, ಮೈಸೂರು ಮೊದಲಾದೆಡೆಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ ಪೋಲಂಕಿಯವರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದರು.

ಇಂಗ್ಲಿಷ್ ಸಾಹಿತ್ಯದ ಬಗ್ಗೆ ಅಪೂರ್ವ ಒಲವುಳ್ಳ ಪೋಲಂಕಿಯವರು ಡಿ. ಹೆಚ್. ಲಾರೆನ್ಸ್‌ರ ಕಾದಂಬರಿಗಳ ಕುರಿತಂತೆ ಮಹಾಪ್ರಬಂಧ ಮಂಡಿಸಿ ಪಿಎಚ್.ಡಿ. ಪದವಿ ಪಡೆದಿದ್ದರು. ಪಾಶ್ಚಾತ್ಯ ಚಿಂತನೆಯ ನೆರಳಲ್ಲೇ ಭಾರತೀಯ ಮೂಲದ ಚಿಂತನೆಗಳನ್ನು ಅರ್ಥೈಸುವ, ವೈದಿಕೇತರ ಚಿಂತನೆಗಳನ್ನು ಗುರುತಿಸುವ ಪ್ರಯತ್ನ ಮಾಡಿದರು. ರಾಮಾಯಣವನ್ನು ಆಧುನಿಕ ಚಿಂತನೆಯ ಹೊಸ ಬಗೆಯ ನೆಲೆಗಳಿಂದ ಪರಿಭಾವಿಸಲು, ಅರ್ಥೈಸಲು ತೊಡಗಿದುದರ ಪರಿಣಾಮ 'ಸೀತಾಯಣ'

ಪ್ರಕಟವಾಯಿತು. ಸೀತಾಯಣದ ಮುಖಾಂತರ ನಾಡಿನಲ್ಲಿ ವೈಚಾರಿಕ ಚಿಂತನೆಯ ಅಲೆಗೆ ಕಾರಣರಾದರು. ರಾಮಾಯಣವನ್ನು ಸೀತೆಯ ಪರವಾಗಿ ನೋಡಿದ ಕನ್ನಡ ಚಿಂತಕರಲ್ಲಿ ಮೊದಲಿಗರು

ನೇಕಾರಿಕೆ ಕುಟುಂಬದಿಂದ ಬಂದ ಪೋಲಂಕಿಯವರು ದಲಿತರ ಬಗೆಗೆ ಪ್ರಾಮಾಣಿಕ ಕಾಳಜಿ ಹೊಂದಿದ್ದರು. ದೇವನೂರರ "ಕುಸುಮ ಬಾಲೆ" ಯನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದರಲ್ಲದೆ'ರಂಗವಲ್ಲಿ' ಎನ್ನುವ ಕವನ ಸಂಕಲನವನ್ನು ಇಂಗ್ಲಿಷ್ ನಲ್ಲಿ ಪ್ರಕಟಿಸಿದ್ದರು. ಕೆಳ ಮತ್ತು ಮೇಲುವರ್ಗದ ಸಂಘರ್ಷ. ಆ ಮೂಲಕ ಹುಟ್ಟಿಕೊಳ್ಳಬಹುದಾದ ಸ್ಥಿತಿ ವಿಶೇಷಗಳ ಬಗೆಗೆ ಅಪೂರ್ವ ಒಳನೋಟಗಳನ್ನು ಪಡೆದುಕೊಂಡಿದ್ದರು. ತಮ್ಮ ವಿದ್ಯಾರ್ಥಿನಿಯೂ ಆಗಿದ್ದ ಮಲೆಯಾಳ ಕ್ರೈಸ್ತ ಹೆಣ್ಣು ಮಗಳನ್ನು ಮದುವೆಯಾದರು. ಬದುಕಿನ ಎಲ್ಲ ವೈರುಧ್ಯಗಳನ್ನು ಬಿಡುಗಣ್ಣಿಂದ ಗಮನಿಸುತ್ತಾ, ಒಪ್ಪಿಕೊಳ್ಳುತ್ತಾ ಕ್ರಿಯಾಶೀಲವಾಗಿರಲು ಹೆಣಗಿದರು. ಪ್ರೀತಿ ಮತ್ತು ಸಾವಿನ ಕುರಿತಂತೆ ಪ್ರಗಾಢವಾಗಿ ಯೋಚಿಸುತ್ತಿದ್ದ ಪೋಲಂಕಿಯವರು, ಸಾವಿನ ಬಗ್ಗೆ ಮಾತಾಡುತ್ತಾ ಕಣ್ಣು ಮುಚ್ಚಿದರು.

•



ಎಂ.ಎಸ್. ಸುಂಕಾಪುರ

– ವಿಠಲರಾವ್ ಟಿ. ಗಾಯಕ್ವಾಡ್

ಕನ್ನಡ ಜಾನಪದ ಕ್ಷೇತ್ರದಲ್ಲಿ ಸುಂಕಾಪುರರ ಹೆಸರು ಮುಖ್ಯವಾದುದು. ತಮ್ಮ ಚಿಕ್ಕ ವಯಸ್ಸಿನಿಂದಲೇ ಯಕ್ಷಗಾನ, ಬಯಲಾಟಗಳನ್ನು ನೋಡಿ, ಆಸಕ್ತಿ ಬೆಳೆಸಿಕೊಂಡ ಅವರು, ಮುಂದೆ ಆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದರು. ಅವರ ಕಾಲದಲ್ಲಿ ಜನಪದ ಸಾಹಿತ್ಯಕ್ಕೆ ಅಷ್ಟೊಂದು ಪ್ರಾಮುಖ್ಯವಿರಲಿಲ್ಲ. ಆದರೂ ಆ ಬಗ್ಗೆ ಕುತೂಹಲ ಪ್ರೇರಿತರಾಗಿ ಸಂಗ್ರಹ ಕಾರ್ಯಕ್ಕೆ ತೊಡಗಿ, ಹಲವು ಕೃತಿಗಳನ್ನು ಸಂಪಾದಿಸಿಕೊಟ್ಟರು. ಶ್ರೀ ಕೃಷ್ಣಪಾರಿಜಾತ, ಕೃಷ್ಣ ಸಂಧಾನ, ಕನ್ನಡ ಬಯಲಾಟಗಳು, ಅಲ್ಲಮ ಪ್ರಭು, ತಿರುನೀಲಕಂಠ (ಸಣ್ಣಾಟಗಳು), ಪ್ರಮೀಳೆ (ದೊಡ್ಡಾಟ) ಮತ್ತು ಬಭ್ರುವಾಹನ ವಿಜಯ ಎಂಬ ಯಕ್ಷಗಾನ ಮತ್ತು ಬಯಲಾಟದ ಕೃತಿಗಳನ್ನು ಸಂಪಾದಿಸಿಕೊಟ್ಟು, ಕನ್ನಡ ಜಾನಪದ ಕ್ಷೇತ್ರದ ಅಧ್ಯಯನಕ್ಕೆ ತಳಹದಿ ಹಾಕಿಕೊಟ್ಟರು.

ಜಾನಪದ ತಜ್ಞರೂ ಮತ್ತು ವಿದ್ವಾಂಸರೂ ಆಗಿದ್ದ ಸುಂಕಾಪುರರು ಧಾರವಾಡ,

ಗುಲಬರ್ಗಾ, ಗದಗ್, ಅಂಕೋಲಾ, ಇಳಕಲ್ ಮುಂತಾದ ಕಡೆಗಳಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನಗಳನ್ನು ನಡೆಸಿಕೊಟ್ಟಿದ್ದರು. ಆ ಸಮ್ಮೇಳನಗಳಲ್ಲಿ ಬೇರೆ ಬೇರೆ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನು ಕರ್ನಾಟಕ ವಿಶ್ವವಿದ್ಯಾನಿಲಯವು ಹೊರತಂದ 'ಜಾನಪದ ಸಾಹಿತ್ಯ ದರ್ಶನ' ಎಂಬ ಮಾಲಿಕೆಯಲ್ಲಿ ಐದು ಸಂಪುಟಗಳಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಅವರು ಸಂಗ್ರಹಿಸಿ ಪ್ರಕಟಿಸಿದ 'ಜೀವನ ಜೋಕಾಲಿ' ಎಂಬ ಮಾಲಿಕೆಯಲ್ಲಿ ಜಾನಪದಗಳು, ಸರಸ-ವಿರಸ, ಗರತಿಯರ ಗರಿಮೆ, ಹೋಳಿ ಹಾಡು, ದುಂದುಮೆ ಪದ, ಡೊಳ್ಳಿನ ಹಾಡು, ಗಂಗೆ ಗೌರಿಯ ಸಂವಾದ, ಕೋಲು ಪದ ಮತ್ತು ಜೋಗತಿ ಹಾಡುಗಳು - ಹೊರ ಬಂದುವು. ಇದಲ್ಲದೆ ಜಾನಪದ ಸಾಹಿತ್ಯದ ಮೇಲೆ ಹಲವಾರು ಪ್ರಬಂಧಗಳನ್ನು ಬರೆದದ್ದುಂಟು. ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಬಯಲಾಟದ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಅಧ್ಯಯನವನ್ನು ನಡೆಸಿದ್ದರು.

'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎಂಬ ವಿಷಯವನ್ನು ಆರಿಸಿಕೊಂಡು ಪಿಎಚ್.ಡಿ. ಅಧ್ಯಯನ ನಡೆಸಿದ ಅವರು, ಹಾಸ್ಯವೂ, ಸಂಶೋಧನ ಯೋಗ್ಯ ವಸ್ತುವೆಂಬುದನ್ನು ತೋರಿಸಿಕೊಟ್ಟರು. ಇವರು ಹಾಸ್ಯ, ಲಲಿತ ಪ್ರಬಂಧಕಾರರೂ ಹೌದು ; ಇವರ 'ಮಾವ ಕೊಡಿಸಿದ ಕೋಟು' ಪ್ರಬಂಧ ನಗೆಯ ಬುಗ್ಗೆಯನ್ನು ಚಿಮ್ಮಿಸುತ್ತದೆ.

ಡಾ: ಸುಂಕಾಪುರರು ತಮ್ಮ ಆಸಕ್ತಿ ಹಾಗೂ ದೃಷ್ಟಿಕೋನಗಳಿಂದ ಜಾನಪದ ಸಾಹಿತ್ಯ ಕ್ಷೇತ್ರವನ್ನು ಬೆಳೆಸಿದ ಅವರು 30ನೇ ಜೂನ್ 1992 ರಂದು ನಿಧನ ಹೊಂದಿದ್ದರು.

•



ಎಸ್.ಅನಂತನಾರಾಯಣ

— ಎಚ್.ಎಸ್. ಗೋಪಾಲರಾವ್

೩೦.೧೧.೧೯೨೭ರಂದು ಜನಿಸಿದ ಎಸ್. ಅನಂತನಾರಾಯಣ ಮೈಸೂರಿನಲ್ಲೇ ವಿದ್ಯಾಭ್ಯಾಸ ಮುಗಿಸಿದರು. ಅನಂತರ ಅಲ್ಲೇ ಯುವರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದರು.

ಇಂಗ್ಲಿಷ್ ಪಾಠ ಹೇಳಿದರೂ ಶ್ರೀ ಎಸ್. ಅನಂತನಾರಾಯಣರು ಪ್ರಗತಿಶೀಲ ಪಂಥದ ಅನುಯಾಯಿಗಳಾಗಿಯೇ ಉಳಿದರು. ನವ್ಯ ನವೋದಯ ಬಂಡಾಯ ಇತ್ಯಾದಿ

ಪಂಥಗಳಿಂದ ಅವರು ದೂರವೇ ಉಳಿದರು. ಈ ಪಂಥಗಳು ಪ್ರಬಲವಾಗುವ ವೇಳೆಗೆ ಅವರು ಒಂದು ಅರ್ಥದಲ್ಲಿ ಸಾಹಿತ್ಯ ರಚನೆಯನ್ನು ಕಡಿಮೆ ಮಾಡಿದ್ದರೆಂದು ಹೇಳಬಹುದು.


ಪ್ರೊ.ಎಸ್. ಅನಂತನಾರಾಯಣರು ಬರೆದಿರುವ ಕಾದಂಬರಿಗಳನ್ನು ಓದುವಾಗ ಪ್ರಗತಿಶೀಲ ಪಂಥದ ಹಲವಾರು ಕಾದಂಬರಿಕಾರರು ನೆನಪಾಗುತ್ತಾರೆ. 'ಪಯಣದ ಹಾದಿಯಲ್ಲಿ' 'ಅತ್ತಿಗೆ'ಇತ್ಯಾದಿ ಕಾದಂಬರಿಗಳು ಅವು ಪ್ರಕಟವಾದ ದಿನಗಳಲ್ಲಿ ಜನಪ್ರಿಯವಾಗಿದ್ದವು.

ಕನ್ನಡಸಾಹಿತ್ಯಕ್ಕಾಗಿ ತಮ್ಮನ್ನು ತೆತ್ತುಕೊಂಡ ಪ್ರೊ. ಎಸ್. ಅನಂತನಾರಾಯಣರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ಸೆರೆಮನೆ ವಾಸವನ್ನು ಅನುಭವಿಸಿದ್ದರು. ತಮ್ಮ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದ ಕೆಲವು ಘಟನೆಗಳನ್ನು ವಾಸ್ತವಿಕ ಎಂಬಂತೆ ಚಿತ್ರಿಸಲು ಸಾಧ್ಯವಾದದ್ದು ಇದೇ ಕಾರಣದಿಂದಾಗಿಯೇ. ತಮ್ಮ ತಲೆಮಾರಿನ ಎಲ್ಲ ಸಾಹಿತಿಗಳೊಂದಿಗೆ ಸ್ನೇಹ-ವಿಶ್ವಾಸಗಳನ್ನು ರೂಢಿಸಿಕೊಂಡಿದ್ದ ಪ್ರೊ. ಅನಂತನಾರಾಯಣರು ಹೆಚ್ಚಾಗಿ ಹಚ್ಚಿಕೊಂಡಿದ್ದು ಶಿವರಾಮ ಕಾರಂತರನ್ನು. ಮೊದಲಿನಿಂದಲೂ ಕಾರಂತರೊಡನೆ ನಿಕಟ ಸಂಪರ್ಕವಿರಿಸಿಕೊಂಡಿದ್ದ ಅನಂತ ನಾರಾಯಣರು, ಕಾರಂತರ ಸಾಹಿತ್ಯ ಸಾಧನೆಗಳ ಬಗ್ಗೆ ವಿಶೇಷವಾದ ಅಧ್ಯಯನ ನಡೆಸಿದ್ದರು. ಅಧ್ಯಯನ, ಅಧ್ಯಾಪನಗಳನ್ನು ತಮ್ಮ ಜೀವನದ ಭಾಗವೆಂಬಂತೆ ಸ್ವೀಕರಿಸಿದ್ದ ಅನಂತ ನಾರಾಯಣರು ಬದುಕನ್ನು ಆಳವಾಗಿ ಪ್ರೀತಿಸಿದರು. ಅವರು ಸರಳತೆಯಿಂದ ಸಜ್ಜನರಾಗಿ ಬಾಳನ್ನು ನಡೆಸಿದರು. ಕನ್ನಡದ ಬಗೆಗೆ ಅಪಾರ ಕಳಕಳಿಯಿದ್ದ ಇಂಗ್ಲಿಷ್ ಮತ್ತು ಕನ್ನಡ ಕಾವ್ಯಗಳ ಸಂಪರ್ಕ ಸ್ಥಾನವಾಗಿದ್ದ ಪ್ರೊ. ಎಸ್. ಅನಂತನಾರಾಯಣ ಅವರು ಆಗಸ್ಟ್ ೨೫ ರಂದು ನಮ್ಮನ್ನು ಅಗಲಿದರು.

●

ಶಿವಕುಮಾರ ಸ್ವಾಮಿ

– ಬಿ.ವಿ. ವೀರಭದ್ರಪ್ಪ



ಸೆಪ್ಟೆಂಬರ್ ೨೪ ರಂದು ಲಿಂಗೈಕ್ಯರಾದ ಶಿವಕುಮಾರ ಸ್ವಾಮೀಜಿಯವರು ೧೯೪೦ ರಲ್ಲಿ 'ತರಳಬಾಳು ಮಠ'ದ ಅಧಿಕಾರವನ್ನು ಸ್ವೀಕರಿಸಿದರು. ೧೯೪೭ ರಲ್ಲಿ ಸಿರಿಗೆರೆಯಲ್ಲಿ ಒಂದು ಪ್ರೌಢ ಶಾಲೆಯನ್ನು ಕಟ್ಟಲು

ತೊಡಗಿದ್ದ ಕಾಲ. ಅದಕ್ಕಾಗಿ ಅವರು ಧನಿಕರ ಮನೆ ಬಾಗಿಲಿಗೆ ಹೋಗಲಿಲ್ಲ. ಶಾಲೆಯ ಮಕ್ಕಳನ್ನೇ ಮುಂದಿಟ್ಟು ಕೊಂಡು ಸ್ವತಃ ತಾವೂ ಪಂಚೆಯನ್ನು ಎತ್ತಿಕಟ್ಟಿ ಕಟ್ಟಡ ನಿರ್ಮಾಣದಲ್ಲಿ ತೊಡಗಿದರು. ಅಕ್ಕಪಕ್ಕದ ರೈತರಿಗೆ ಆರ್ಥಿಕವಾಗಿ ನೆರವಾದರು. ಶ್ರಮದಾನ ಮಾಡಿದರು. ತರಳಬಾಳು ಸಂಸ್ಥೆಯ ಮೊದಲ ಶಾಲೆ ಹೀಗೆ ನಿರ್ಮಾಣವಾಯಿತು.

ಅವರು ಸ್ಥಾಪಿಸಿದ ಶಾಲೆಗಳಲ್ಲಿ ಎಲ್ಲ ಹಿಂದುಳಿದವರಿಗೆ ಮುಕ್ತ ಅವಕಾಶವಿತ್ತು. ಸಿರಿಗೆರೆಯ ಮೊಟ್ಟ ಮೊದಲ ಪದವೀಧರ - ಮಠದ ಸೇವಕನೊಬ್ಬನ ಮಗ ಓಬಾನಾಯ್ಕ -ಪರಿಶಿಷ್ಟ ವರ್ಗಕ್ಕೆ ಸೇರಿದವನು. ಸಿರಿಗೆರೆ ಪ್ರೌಢಶಾಲೆಯ ಮೊಟ್ಟಮೊದಲ ಮುಖ್ಯೋಪಾಧ್ಯಾಯ ರಾಮಣ್ಣ, ಗಂಗಾಮತ ಜನಾಂಗದವನು. ಸಾರ್ವಜನಿಕ ಆಯೋಗದ ಅಧ್ಯಕ್ಷರಾಗಿದ್ದ ದುಗ್ಗಪ್ಪನವರು ಸಿರಿಗೆರೆ ಶಾಲೆಯ ಶಿಕ್ಷಕರಾಗಿದ್ದರು. ತರಳಬಾಳು ವಿದ್ಯಾಸಂಸ್ಥೆಯು, ಅತ್ಯಂತ ಹೆಮ್ಮೆಯ ಶಾಲೆ, ಅನುಭವ ಮಂಟಪ ಪ್ರೌಢ ಶಾಲೆ, ಅದರ ಮುಖ್ಯೋಪಾಧ್ಯಾಯ ಲಿಂಗಪ್ಪನವರು ಪರಿಶಿಷ್ಟ ವರ್ಗಕ್ಕೆ ಸೇರಿದವರು. ತರಳಬಾಳು ವಿದ್ಯಾ ಸಂಸ್ಥೆಯ ಸಾಂಸ್ಕೃತಿಕ ವಲಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಎಸ್.ಬಿ. ರಂಗನಾಥ್ ಮತ್ತು ಲೋಕೇಶ್ ಒಡೆಯರ ಅವರು ಹಿಂದುಳಿದ ವರ್ಗಕ್ಕೆ ಸೇರಿದವರು. ಮುಕ್ತ ಅವಕಾಶ ದೊರಕಿದರೆ ಹಿಂದುಳಿದವರೂ ಅತ್ಯುನ್ನತವಾದುದನ್ನು ಸಾಧಿಸಬಲ್ಲರು ಎಂಬುದಕ್ಕೆ ಮೇಲಿನವರು ಸಾಕ್ಷಿಗಳಾಗಿದ್ದಾರೆ.

ಪ್ರಗತಿಪರರೂ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮನಸಾರೆ ಒಪ್ಪಿ ಕೊಂಡವರೂ ಆದ ಶ್ರೀಗಳು ತಮ್ಮ ಅರುವತ್ತನೆಯ ವಯಸ್ಸಿನಲ್ಲಿ ಅಧಿಕಾರದಿಂದ ನಿವೃತ್ತಿ ಹೊಂದುವ ಸಂಕಲ್ಪ ಮಾಡಿ ತ್ಯಾಗ ಪತ್ರವನ್ನು ಸಮರ್ಪಿಸಿದ ರೀತಿ ಮಠಗಳ ಇತಿಹಾಸದಲ್ಲಿ ವಿನೂತನವಾದುದು. ಅವರೇ ತಮ್ಮ ಜೀವನ ಪರ್ಯಂತ ಮುಂದುವರೆಯಬೇಕೆಂದು ಶಿಷ್ಯ ಸಮುದಾಯ ಬಯಸಿದರೂ ಅವರು ಹಠ ಹಿಡಿದು ಸೂಕ್ತ ಉತ್ತರಾಧಿಕಾದಿಗಳನ್ನು ಆಯ್ಕೆಯಾಗುವಂತೆ ಮಾಡಿ ಆಡಿದಂತೆ ನಿವೃತ್ತಿ ಹೊಂದಿದರು. ತಮ್ಮ ಉತ್ತರಾಧಿಕಾರಿಯಾಗುವವರು ಕೇವಲ ಭಾರತೀಯ ಸಾಂಪ್ರಾದಾಯಿಕ ಶಿಕ್ಷಣವನ್ನಷ್ಟೇ ಹೊಂದಿದರೆ ಸಾಲದು ಎಂದು ಭಾವಿಸಿದರು. ಅದಕ್ಕಾಗಿ ಡಾ. ಶಿವಮೂರ್ತಿಯವರನ್ನು ಉನ್ನತ ಶಿಕ್ಷಣಕ್ಕಾಗಿ ವಿಯನ್ನಾಕ್ಕೆ ಕಳಿಸಿದರು. ಅಲ್ಲಿಂದ ಅವರು ಹಿಂದಿರುಗಿದ ಕೂಡಲೇ ಅವರಿಗೆ ಅಧಿಕಾರ ವಹಿಸಿ ಪದವಿ ತ್ಯಾಗ ಮಾಡಿದರು. ೧೯೯೨ರ ಸೆಪ್ಟೆಂಬರ್ ೨೪ ರಂದು ಅವರು ನಿಧನರಾದಾಗ, ಅವರ ಅಂತ್ಯ ಯಾತ್ರೆಗೆ ನೆರೆದಿದ್ದ ಅಪಾರ ಜನಸ್ತೋಮವು ಅವರ ಬಗ್ಗೆ ಜನರಿಗಿದ್ದ ಗೌರವಾದರಗಳ ದ್ಯೋತಕವೂ ಆಗಿತ್ತು.

•

ಹಿ. ಮ. ನಾಗಯ್ಯ

— ಕಲವೀರ ಮನ್ವಾಚಾರ್



"ಬಾಗಿಲವರೆಗೂ
ಬಂದದ್ದಾಯಿತು ಒಳಗೇತಕೆ ನೀ ಬರಲಿಲ್ಲ" ಎಂದು ಕವಿತೆಯೊಂದು ಶುರುವಾಗುತ್ತದೆ. ಹೀಗೆಂದು ಹೇಳಿದವರು ಕವಿ, ಸಾಹಿತಿ ಹಿ.ಮ.ನಾಗಯ್ಯ ಅವರು. ಈ ಮಾತು ಅವರ 'ಜೀವನ ದರ್ಶನ'ವನ್ನೂ ಸಾಂಕೇತಿಕವಾಗಿ ಧ್ವನಿಸುತ್ತದೆ. 'ಭವ್ಯಭಾರತ ಭಾಗ್ಯೋದಯ'ವೆಂಬ ಮಹಾಕಾವ್ಯವನ್ನು ಸೃಜಿಸಿದ ಮನಸ್ಸು ಮೊದಲು ಕವಿತೆಗಳನ್ನು ಸೃಜಿಸುತ್ತಿತ್ತು.

ಕವಿ ಹಿ.ಮ.ನಾ. ಅವರು ೧-೦೭-೧೯೨೫ ಬಳ್ಳಾರಿ ಜಿಲ್ಲೆಯ ಬಡ ರೈತ ಕುಟುಂಬದಲ್ಲಿ ಜನಿಸಿದರು. ಬದುಕಿನ ಉದ್ದಕ್ಕೂ ಹೋರಾಟ ಮಾಡುತ್ತ ಬದುಕಿದವರು. ಪ್ರಾಥಮಿಕವಾಗಿ ಹಿ.ಮ.ನಾ. ಸಾಹಿತಿಯಾಗಿದ್ದುದು ಮಾತ್ರವಲ್ಲದೆ, ಸಕ್ರಿಯ ರಾಜಕಾರಣದಲ್ಲೂತಮ್ಮನ್ನು ತೊಡಗಿಸಿಕೊಂಡಿದ್ದರು. ಸಾಹಿತ್ಯಕ ನೆಲೆಯಲ್ಲಿ ಎಷ್ಟು ಪ್ರಾಮಾಣಿಕವಾಗಿ ಅವರ ಮನಸ್ಸು ದುಡಿಯುತ್ತಿತ್ತೋ ಅದೇ ಪ್ರಾಮಾಣಿಕತೆಯನ್ನು ರಾಜಕಾರಣದಲ್ಲೂ ತೆತ್ತುಕೊಂಡಿದ್ದು ಅವರ ವ್ಯಕ್ತಿತ್ವದ ಹಿರಿಮೆಗಳಲ್ಲಿ ಒಂದು. ನಗರಪಾಲಿಕೆಯಲ್ಲಿ ತೆರಿಗೆ ವಿಭಾಗದ ಅಧ್ಯಕ್ಷರಾಗಿದ್ದು, ತುಂಬ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದನ್ನು ಬೆಂಗಳೂರಿನ ಜನತೆ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಹಿ.ಮ.ನಾ.ಅವರ ವ್ಯಕ್ತಿತ್ವ ಸರಳ ಮತ್ತು ನಿರಾಡಂಬರ. "ಸಂಭಾಷಣೆಯಲ್ಲಿ ಚಾತುರ್ಯವನ್ನು, ಹೃದಯವಂತಿಕೆಯಲ್ಲಿ ಔದಾರ್ಯವನ್ನು, ಸ್ನೇಹ –ಸಂಬಂಧದಲ್ಲಿ ಆತ್ಮೀಯತೆಯನ್ನು, ಸಾಮಾಜಿಕ ಸಮಸ್ಯಾ ಪರಿಹಾರದಲ್ಲಿ ಕಳಕಳಿಯನ್ನು, ಕಾವ್ಯಾಂತರಂಗದಲ್ಲಿ ಮಾಧುರ್ಯವನ್ನು ಮೆರೆದವರು" ಹೀಗೆಂದು ಅವರನ್ನು ಬಲ್ಲವರೆಲ್ಲರೂ ತಿಳಿದಿದ್ದರು. ಹಿ.ಮ.ನಾ. ತಮ್ಮ ಸಾಹಿತ್ಯ ಕೃಷಿಯನ್ನು ಶುರುಮಾಡಿದ್ದು 'ಬಳ್ಳಾರಿಯ ಬೆಳಗು' (೧೯೪೮) 'ಕಾಣಿಕೆ' (೧೯೪೯) 'ಒಲಿದು ಬಂದ ಸರಸ್ವತಿ' (೧೯೭೩) 'ವಿದ್ಯಾರ್ಥಿ ರತ್ನಗಳು' (೧೯೫೪) 'ಅಮೃತಧಾರೆ' (೧೯೭೩) 'ಚಂದನ'(೧೯೭೩) 'ಚಂಪಕ' (೧೯೭೩) 'ನೀವೆಲ್ಲ ನಮ್ಮವರೇ' (೧೯೭೬) 'ತುಂಬು ಅರಳಿದ ಬೇವು' (೧೯೮೧) 'ನಿನಗೊಂದು ತಿಳಿಮಾತು' (೧೯೯೧) 'ಶಾಂತವೇರಿ ಗೋಪಾಲಗೌಡ '(೧೯೮೧) ಇವು ಹಿಮನಾ ಪ್ರಕಟಿಸಿರುವ ಕೃತಿಗಳು. ಇವರ ಕೆಲವು ಕೃತಿಗಳು ಇಂಗ್ಲಿಷ್ ಹಾಗೂ ಚೀನೀ ಭಾಷೆಯಲ್ಲಿ ಅನುವಾದಗೊಂಡಿವೆ.

ಹಿ.ಮ.ನಾ. ಅವರು ಹಲವಾರು ವರ್ಷಗಳ ಕಾಲ ಮಹಾಕಾವ್ಯ ರಚನೆಯಲ್ಲಿ

ಮಗ್ನರಾಗಿದ್ದರು. ಅವರ 'ಭವ್ಯಭಾರತ ಭಾಗ್ಯೋದಯ' (೧೯೯೩)ವೆಂಬ ಬೃಹತ್ ಕಾವ್ಯ ೨೮೭೬ ಸಾಲುಗಳಿಂದ ಕೂಡಿರುವ 'ಮಹಾಕಾವ್ಯ'. ಆಧುನಿಕ ಭಾರತದ ಸ್ವಾತಂತ್ರ್ಯಪೂರ್ವ ಬದುಕನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ.

ಹಿ.ಮ.ನಾ.ಅವರು ತಮ್ಮ ಜೀವಿತದ ಉದ್ದಕ್ಕೂ ಸಮಾಜ ಸೇವೆ, ನಾನಾ ಸಂಘಸಂಸ್ಥೆಗಳೊಂದಿಗೆ ಸಂಪರ್ಕ, ನಿಷ್ಕ್ರರಾಜಕಾರಣದಲ್ಲಿ ಆಸಕ್ತಿ, ಹಲವು ಬಗೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರು ಕೆಲಕಾಲ 'ಲೋಕವಾಣಿ' ದಿನಪತ್ರಿಕೆಯಲ್ಲಿ ಕೆಲಕಾಲ ಸಂಪಾದಕರಾಗಿ ದುಡಿದಿದ್ದರು. ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಪತ್ರಿಕೆಗೆ ಸಂಪಾದಕರಾಗಿ ಹಲವಾರು ವರ್ಷ ಸೇವೆ ಮಾಡಿದ್ದರು. ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಅವರ ಸೇವೆಯೂ ಸಂದಿತ್ತು. ಶ್ರೀ ಹಿ.ಮ.ನಾ. ಅವರು ದಿನಾಂಕ ೨೫.೦೭.೧೯೯೨ ರಂದು ನಿಧನಹೊಂದಿದರು.

●

ಲೇಖಕರ ವಿಳಾಸ

೧ ಎಂ.ಎಂ. ಶಿವಪ್ರಕಾಶ್
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨ ಕೆ. ಪುಟ್ಟಸ್ವಾಮಿ
೫೧೭, ೧೭ನೆಯ ಅಡ್ಡರಸ್ತೆ, ಆರನೇ ಹಂತ
ಜೆ.ಪಿ. ನಗರ,
ಬೆಂಗಳೂರು - ೫೬೦ ೦೭೮

೩ ಕೆ.ಜಿ. ವಾಸುಕಿ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೪ ಎಚ್.ಎಸ್. ನಿರಂಜನಾರಾಧ್ಯ
ನಂ. ೩೪೭/೨೦, 'ಶುಭಾಲಯ'
೫ನೇ ಮುಖ್ಯರಸ್ತೆ, ವಿಜಯನಗರ
ಬೆಂಗಳೂರು - ೫೬೦ ೦೪೦

೫ ಸಿ.ವಿ. ರಾಜಗೋಪಾಲ
ನಂ. ೨೮, ೫ನೇ ಕ್ರಾಸ್
ಹನುಮಂತ ನಗರ,
ಬೆಂಗಳೂರು - ೫೬೦ ೦೧೯

೬ ಮೀನಾಮೈಸೂರು
ಕ್ಷೇತ್ರ ಪ್ರಚಾರಾಧಿಕಾರಿಣಿ
ಭಾರತ ಸರ್ಕಾರ (ಮಿಷನ್ ಆಸ್ಪತ್ರೆಯ ಮುಂಭಾಗ)
ಹಾಸನ -೫೭೩ ೨೦೧

೭ ಕೆ.ವಿ. ನಾರಾಯಣ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೮ ಲಿಂಗರಾಜು
'ಶಿವದರ್ಶನ'
ಫರ್‌ಫೆಕ್ಟ್ ಆಪರೆಲ್ಸ್ ಹಿಂಭಾಗ, ಬಿಳೇಕನ ಹಳ್ಳಿ
ದೇವರ ಚಿಕ್ಕನಹಳ್ಳಿ ರಸ್ತೆ, ಬನ್ನೇರುಘಟ್ಟ ರೋಡ್
ಬೆಂಗಳೂರು - ೫೬೦ ೦೭೬

೯ ಡಾ. ಬಸವರಾಜ ಕಲ್ಗುಡಿ
ರೀಡರ್, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦ ೦೫೬

೧೦ ಪ್ರತಿಭಾ ನಂದಕುಮಾರ್
ನಂ. ೭೮, ೮ನೇ ಬ್ಲಾಕ್ ಪಶ್ಚಿಮ
ಜಯನಗರ
ಬೆಂಗಳೂರು - ೫೬೦ ೦೧೧

೧೧ ಪ್ರೊ. ಸದಾನಂದ ಕನವಳ್ಳಿ
ನಂ. ೫೧, ೩ನೆಯ ತಿರುವು
ಜಯನಗರ, ಧಾರವಾಡ - ೫೮೦ ೦೦೧

೧೨ ಜಿ. ಜಯಕುಮಾರ್
ಕನ್ನಡ ವಿಶ್ವವಿದ್ಯಾಲಯ
ಹಂಪಿ

೧೩ ಡಾ. ಎಂ. ಸೂರ್ಯಪ್ರಸಾದ್
'ಮುನಿಕೋಟ ' ಗಣೇಶ ದೇವಸ್ಥಾನದ ಸಮೀಪ
ಜಂಗಮಮೇಸ್ತ್ರಿಗಲ್ಲಿ, ಬಳೇಪೇಟೆ
ಬೆಂಗಳೂರು - ೫೬೦ ೦೫೩

೧೪ ಹಾ.ಸಾ.ಕೃ
ನಂ. ೧೨/೪ 'ಲಕ್ಷ್ಮಿ ನಿಲಯ'
ಆಂಜನೇಯ ದೇವಸ್ಥಾನದ ಎರಡನೆಯ ರಸ್ತೆ
ಶೇಷಾದ್ರಿಪುರಂ
ಬೆಂಗಳೂರು - ೫೬೦ ೦೨೦

೧೫ ಪಿ. ಸೀತಾರಾಂ
ನಂ. ೮ (೧೧೬) ೪ 'ಶ್ರೀ ಲಕ್ಷ್ಮಿ'
೯ ನೆಯ ತಿರುವು, ೪ನೇ ಮುಖ್ಯರಸ್ತೆ
ಬೆಂಗಳೂರು - ೫೬೦ ೦೦೩

೧೬ ಡಾ. ಕೆ. ಎಂ. ಶ್ರೀನಿವಾಸ ಗೌಡ
ನಂ. ೩, ಟಿ.ಎಂ. ಸಿ. ಲೇಔಟ್
ಸಾರಕ್ಕಿ ಮುಖ್ಯರಸ್ತೆ ಜೆ.ಪಿ. ನಗರ
ಬೆಂಗಳೂರು - ೫೬೦ ೦೭೮

೧೭ ಪ್ರೊ. ಕಿ.ರಂ. ನಾಗರಾಜ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦ ೦೫೬

೧೮ ಡಾ. ಕರೀಗೌಡ ಬೀಚನಹಳ್ಳಿ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೧೯ ಟಿ.ಪಿ. ಅಶೋಕ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦ ಡಾ. ಎಚ್.ಎಸ್. ರಾಘವೇಂದ್ರ ರಾವ್
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೧ ಹಿ.ಚಿ. ಬೋರಲಿಂಗಯ್ಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೨ ಎಂ.ಕೆ. ಅನಿಲ್
ಉಪ ಸಂಪಾದಕರು
'ಹಿಂದೂ' ಪತ್ರಿಕೆ
ತಮಿಳುನಾಡು

೨೩ ಡಾ. ಪುರುಷೋತ್ತಮ ಬಿಳಿಮಲೆ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೧೪ ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೧೫ ಡಾ. ರಹಮತ್ ತರೀಕೆರೆ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೬ ಆರ್. ಚಲಪತಿ
c/o ಜಯರಾಮ ಎ.
ನಂ. ೨ ತೆಂಗಿನ ತೋಟ, ನಾಗರ ಬಾವಿ
ಬೆಂಗಳೂರು - ೫೬೦ ೦೪೦

೨೭ ಪ್ರಕಾಶ ಗರುಡ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೮ ಅಮರೇಶ ನುಗಡೋಣಿ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೯ ಲಕ್ಷ್ಮಣ್ ತೆಲಗಾವಿ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೩೦ ಡಾ. ಸುಬ್ಬಣ್ಣ ರೈ ಏವುಂಜೆ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೩೧ ಡಾ. ಹೊ. ಶ್ರೀನಿವಾಸಯ್ಯ
ನಂ. ೧೦೨, ೬ ನೆಯ ತಿರುವು
ಮಲ್ಲೇಶ್ವರಂ
ಬೆಂಗಳೂರು - ೫೬೦ ೦೦೩

೩೨ ಮಾಧವ ಪೆರಾಜೆ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೩೩ ಡಾ. ಬಸವರಾಜ ಸಾದರ
ಕಾರ್ಯಕ್ರಮ ನಿರ್ವಾಹಕರು
ಆಕಾಶವಾಣಿ, ರಾಜಭವನ ರಸ್ತೆ
ಬೆಂಗಳೂರು - ೫೬೦ ೦೦೧

೩೪ ಬಿ. ಚಂದ್ರೇಗೌಡ
ಜಿಲ್ಲಾ ಕೇಂದ್ರ ಗ್ರಂಥಾಲಯ
ಶಿವಮೊಗ್ಗ

೩೫ ಡಾ. ವಿಜಯಾ
ನಂ. ೧೫೩, ೪ನೇ ಮುಖ್ಯರಸ್ತೆ
೮ನೇ ಅಡ್ಡರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

೩೬ ಅ.ಲ. ನರಸಿಂಹನ್
ನಂ. ೧೩, ೧೫ನೆಯ ತಿರುವು
ಹೊಸದೇವಸ್ಥಾನದ ರಸ್ತೆ,
ಮಲ್ಲೇಶ್ವರಂ
ಬೆಂಗಳೂರು - ೫೬೦ ೦೦೩

೩೭ ಡಾ. ಮೋಹನ ಕುಂಟಾರ್
ಕನ್ನಡ ವಿಶ್ವವಿದ್ಯಾಲಯ
ಹಂಪಿ

೩೮ ಪ್ರೊ. ಟಿ. ಶ್ರೀನಿವಾಸರಾಜು
ಪ್ರಾಧ್ಯಪಕರು, ಕ್ರೈಸ್ಟ್ ಕಾಲೇಜ್, ಹೊಸೂರು ರಸ್ತೆ,
ಬೆಂಗಳೂರು

೩೯ ಮಲ್ಲಿಕಾರ್ಜುನ ಗೌಡ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೪೦ ವಿಠಲರಾವ್ ಟಿ. ಗಾಯಕ್ವಾಡ್
ಕನ್ನಡ ವಿಶ್ವವಿದ್ಯಾಲಯ
ಹಂಪಿ

೪೧ ಡಾ. ಎಚ್.ಎಸ್. ಗೋಪಾಲರಾವ್
'ಸ್ವಸ್ತಿಶ್ರೀಸ್ಕಂಧ'
ಅರಿಶಿನ ಕುಂಟೆ
ನೆಲಮಂಗಲ - ೫೬೨ ೧೨೩

೪೨ ಪ್ರೊ. ಬಿ.ವಿ. ವೀರಭದ್ರಪ್ಪ
ಬಿ. ೧೮, ಬಾಪೂಜಿ ವಿದ್ಯಾನಗರ
ದಾವಣಗೆರೆ - ೫೭೭ ೦೦೪

೪೩ ಕಲವೀರ ಮನ್ವಾಚಾರ್
ಕನ್ನಡ ವಿಶ್ವವಿದ್ಯಾಲಯ
ಹಂಪಿ

'ಕನ್ನಡ ವಾರ್ಷಿಕ' ಕರ್ನಾಟಕದ ಆಯಾವರ್ಷದ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಸಾಧನೆಯನ್ನು ಕುರಿತ ಸಮೀಕ್ಷೆ. ಇದು ಕೇವಲ ವಿವರಗಳ ಪಟ್ಟಿ ಮಾತ್ರವಾಗದೇ ಸಾಂಸ್ಕೃತಿಕ ಮೌಲ್ಯಗ್ರಹಿಕೆ ಹಾಗೂ ಸಮೀಕ್ಷೆಗಳನ್ನು ಒಳಗೊಂಡಿರುವುದರಿಂದ ವಿಶಿಷ್ಟ ಮೂಲಕೃತಿಯೊಂದರ ಸ್ವರೂಪ ಅದಕ್ಕೆ ತಾನಾಗಿಯೇ ಒದಗಿದೆ. ಕನ್ನಡ ವಾರ್ಷಿಕದ ಅನ್ವೇಷಣೆಯ ಸ್ವರೂಪ ಮುಖ್ಯವಾಗಿ ಮೂರು ಭಾಗಗಳಲ್ಲಿ ಹರಡಿಕೊಂಡಿದೆ.

ಕರ್ನಾಟಕದ ಪ್ರಜ್ಞಾವಂತರು ಇಟ್ಟ ಹೆಜ್ಜೆಯನ್ನು, ಸಾಧಿಸಿದ ಸಾಧನೆಯನ್ನು ಲೋಕವು ಸಾಂಕೇತಿಕವಾಗಿ ಗೌರವಿಸಿದಾಗ ಅವುಗಳ ಸತ್ವ ಹಾಗೂ ಅರ್ಥವನ್ನು ಅರಸಿ ವಿವರಿಸುವುದು 'ವಾರ್ಷಿಕ'ದ ಒಂದು ಅಂಶ.

ಕರ್ನಾಟಕದಲ್ಲಿ ಆಯಾ ವರ್ಷ ಸಂಭವಿಸಿದ ಪ್ರಮುಖವಾದ ಸಾಮಾಜಿಕ, ಸಾಂಸ್ಕೃತಿಕ ಘಟನೆಗಳ ವಿವರಣೆ ಹಾಗೂ ವಿಶ್ಲೇಷಣೆ ಕನ್ನಡ ವಾರ್ಷಿಕದ ಇನ್ನೊಂದು ಮುಖ್ಯ ಅಂಗವಾಗಿದೆ.

ವಾರ್ಷಿಕದ ಇನ್ನೊಂದು ಬಹುಮುಖ್ಯವಾದ ಭಾಗವು, ಆಯಾ ವರ್ಷದಲ್ಲಿ ಅಭಿವ್ಯಕ್ತಿಗೊಂಡ ಸಂಸ್ಕೃತಿಯ ಹಲವು ವಿನ್ಯಾಸಗಳ ಸ್ವರೂಪವನ್ನು ಗುರುತಿಸಿ ಸಮೀಕ್ಷಿಸುವುದು. ಈ ಭಾಗದಲ್ಲಿ ಸಾಹಿತ್ಯಕ ಪ್ರಕಾರಗಳಾದ ಕಾವ್ಯ, ಕಾದಂಬರಿ, ಕಥೆ, ನಾಟಕ, ಸಂಶೋಧನೆ ಮುಂತಾದ ಅಭಿವ್ಯಕ್ತಿಗಳ ಪರಿಶೀಲನೆಯ ಜೊತೆಗೆ, ಸಾಹಿತ್ಯೇತರ ಅಭಿವ್ಯಕ್ತಿಗಳಾದ ಸಂಗೀತ, ಕಲೆ, ರಂಗ ಚಟುವಟಿಕೆ, ಕ್ರೀಡೆ, ರಾಜಕಾರಣ, ಸಿನಿಮಾ, ವೈಜ್ಞಾನಿಕ ಚಟುವಟಿಕೆ ಮೊದಲಾದವುಗಳ ಸಮೀಕ್ಷೆಗಳನ್ನೊಳಗೊಂಡಿದೆ.

ಕನ್ನಡ ಸಂಸ್ಕೃತಿಯ ವಿವಿಧ ಸ್ವರೂಪಗಳನ್ನು ಅರಿಯಲು ಯತ್ನಿಸುವ ಕನ್ನಡ ವಿಶ್ವವಿದ್ಯಾಲಯದ ವಿಶಿಷ್ಟ ಯೋಜನೆಯಾಗಿ 'ಕನ್ನಡ ವಾರ್ಷಿಕ'ವು ಒಂದು ಮುಖ್ಯವಾದ ಸಾಧ್ಯತೆಯ ಕಡೆಗೆ ತನ್ನ ಹೆಜ್ಜೆಯನ್ನು ಇಟ್ಟಿದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧